ಕೆ.ವಿ.ಎನ್. ಈವರೆಗಿನ ಬರೆಹಗಳು

ಕಂತೆ ಏಳು

ತೊಂಡು ಮೇವು



ಡಾ. ಕೆ.ವಿ. ನಾರಾಯಣ

ಹುಟ್ಟಿದ್ದು 1948ರಲ್ಲಿ. ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು ಕಂಪಲಾಪುರದಲ್ಲಿ. ಅಮ್ಮ-ಅಪ್ಪನ ಕೆಂಚಮ್ಮ ಮತ್ತು ವೀರಣ್ಣ. ಮೊದಲ ಹಂತದ ಓದು ಹುಟ್ಟೂರು ಮತ್ತು ತಾಲೂಕು ಕೇಂದ್ರ ಪಿರಿಯಾಪಟ್ಟಣದಲ್ಲಿ. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ವಿಜ್ಞಾನವನ್ನು ತೆಗೆದುಕೊಂಡು ಪಿ.ಯು.ಸಿ. ಓದಿದರು. ಇಂಜಿನಿಯರಿಂಗ್ ಮಾಡಲು ಅವಕಾಶವಿದ್ದರೂ ಇಂಜಿನಿಯರ್ ಆಗಕೂಡದೆಂದು ತೀರ್ಮಾನಿಸಿದ ಕೆ.ವಿ.ಎನ್ ಮತ್ತೆ ಮೈಸೂರಿನ ಯುವರಾಜಾಸ್ ಕಾಲೇಜಿನಲ್ಲಿ ವಿಜ್ಞಾನದ ಅಭ್ಯಾಸವನ್ನು ಮುಗಿಸಿದರು. ಆನಂತರದಲ್ಲಿ ಬಿಎಡ್ ಮುಗಿಸಿ ಆರಂಭಿಸಿದ್ದು ಹೈಸ್ಕೂಲಿನಲ್ಲಿ ಅಧ್ಯಾಪನ. ಮುಂದಿನ ಓದಿಗಾಗಿ ಮತ್ತೆ ಬೆಂಗಳೂರಿನತ್ತ ಪಯಣ. ಆ ಹೊತ್ತಿಗೇನೆ ಸಾಹಿತ್ಯದ ಓದಿಗೂ ಬಿದ್ದು, ಬರವಣಿಗೆಯಲ್ಲೂ ತೊಡಗಿಸಿಕೊಂಡಿದ್ದ ಕೆ.ವಿ.ಎನ್ ಮುಂದಿನ ಓದಿಗೆ ಆರಿಸಿಕೊಂಡಿದ್ದು ಸಾಹಿತ್ಯವನ್ನು. ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಎಂ.ಎ. ತಮ್ಮ ಜೊತೆ ಓದುಗರಾಗಿದ್ದ, ಕನ್ನಡದಲ್ಲಿ ಮಹತ್ವದ ಸ್ತ್ರೀವಾದಿ ಚಿಂತಕಿಯಾಗಿರುವ ಶ್ರೀಮತಿಯವರೊಡನೆ ಒಲುಮೆ ಸಂಭವಿಸಿದ್ದು ಇಲ್ಲೆ. ಗೆಳೆಯರ ಸಮ್ಮುಖದಲ್ಲಿ ಮದುವೆ. ಅಧ್ಯಾಪನ ಕೆಲಸ ಆರಂಭಿಸಿದ್ದು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ. ಬೆಂಗಳೂರು ವಿಶ್ವವಿದ್ಯಾಲಯದ ಜಿ.ಎಸ್.ಎಸ್ ನೇತೃತ್ತ್ವದಲ್ಲಿದ್ದ ಕನ್ನಡ ಅಧ್ಯಯನ ಕೇಂದ್ರಕ್ಕೆ ಆಗಮನ. ಜಿ.ಎಸ್.ಎಸ್ ಮಾರ್ಗದರ್ಶನದಲ್ಲಿ ಆನಂದವರ್ಧನನ 'ಧ್ವನ್ಯಾಲೋಕ'ವನ್ನು ಅಧ್ಯಯನ ಮಾಡಿ ಪಿಎಚ್‌ಡಿ ಪದವಿ ಪಡೆದರು. ಬೋಧಿಸಿದ್ದು ಸಾಹಿತ್ಯ, ಸಾಹಿತ್ಯ ಮೀಮಾಂಸೆ ಮತ್ತು ಭಾಷಾವಿಜ್ಞಾನವನ್ನು. ವಿಜ್ಞಾನದ ತಾತ್ವಿಕತೆಯನ್ನಿರಿಸಿಕೊಂಡೇ ಕೆ.ವಿ.ಎನ್ ಬೆಳೆದದ್ದು ಸಾಹಿತ್ಯ ವಿಮರ್ಶಕರಾಗಿ, ಭಾಷಾವಿಜ್ಞಾನಿಯಾಗಿ, ಕನ್ನಡ ಸಂಸ್ಕೃತಿ ಚಿಂತಕರಾಗಿ.

ತಿಳುವಳಿಕೆ ಮತ್ತು ನಡುವಳಿಕೆ ಎರಡರಲ್ಲೂ ಸರಳವಾಗಿರುವ ಕೆ.ವಿ.ಎನ್ 1993ರಲ್ಲಿ, ಕನ್ನಡಿಗರ ಕನಸಿನ ಸಂಸ್ಥೆಯಾಗಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದ ಶುರುವಿನಲ್ಲೇ ರಿಜಿಸ್ಟ್ರಾರ್ ಆಗಿ ಅಲ್ಲಿನ ಆಡಳಿತ ನಿರ್ವಹಣೆಯೊಳಗೂ ಪ್ರವೇಶ ಪಡೆದರು. ಅಲ್ಲಿಂದ ನಿವೃತ್ತಿಯಾಗಿ ಹೊರಗೆ ಬರುವವರೆಗೆ ಹಲವುಜನ ಕುಲಪತಿಗಳ ಅವಧಿಯಲ್ಲಿ ಆಡಳಿತ ಮತ್ತು ಅಧ್ಯಯನಗಳ ಮೂಲಕ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ತಮ್ಮ ಅಧ್ಯಾಪನ ಸಂದರ್ಭದಲ್ಲೇ ಶುರುಮಾಡಿದ್ದ ಕನ್ನಡಭಾಷೆ ಮತ್ತು ಕನ್ನಡಸಂಸ್ಕೃತಿಯ ಚಿಂತನೆಗಳನ್ನು ಕನ್ನಡಸಮಾಜದ ಬೇರುಗಳ ಮೂಲಕ ಅರಸುವ ಕೆಲಸವನ್ನು ಮತ್ತಷ್ಟು ಸ್ಪಷ್ಟವಾಗಿ ಮಂಡಿಸುತ್ತಾ ಬಂದರು. ಈಗಲೂ, ಭಾಷೆ, ಸಾಹಿತ್ಯ, ಶಿಕ್ಷಣ ಮತ್ತು ವಿಜ್ಞಾನ ಮೊದಲಾಗಿ ಕನ್ನಡಸಮಾಜಕ್ಕೆ ಸಂಬಂಧಿಸಿದ ಯಾವುದರಲ್ಲೂ ಜರೂರಾಗಿ ನಡೆಯಬೇಕಿರುವ ಕೆಲಸ ಇದೇ ಎಂದು ತೊಡಗಿಸಿಕೊಂಡು ಈ ಕಾಲದ ಕನ್ನಡದ ಮಹತ್ವದ ಚಿಂತಕರಾಗಿದ್ದಾರೆ.

ಪ್ರಗತಿ ಪುಸ್ತಕಮಾಲೆ–181

ಕೆ.ವಿ.ಎನ್ ಈವರೆಗಿನ ಬರೆಹಗಳು

ಹೊಂದುಮೇವು

ಕಂತೆ ಏಳು

ಪ್ರಗತಿ ಗ್ರಾಫಿಕ್ಸ್ ಬೆಂಗಳೂರು

KVN eevaregina barahagalu - **TONDUMEVU- Kante Elu by K.V. NARAYANA**, 329, `Gouri', Duo Marvel Colony, Ananthapura Road, Yelahanka, Bangalore-560064 e-mail:narayana48@gmail.com

Publisher: **M. Byregowda** for **PRAGATI GRAPHICS**, Bengaluru, # 119a, 3red cross, 8th main, Hampi nagara(RPC Layout-Vijayanagara), Bengaluru-560104, Ph: 080-2340 9512.

e-mail: byregowda.m1@gmail.com

ISBN	:	978-93-81441-93-0
pages	:	22+312
First Impression	:	2010
Revised Impression	:	2020
paper	:	NS Maplitho 80 GSM
price	:	Rs. 300/-
size	:	1/8 Demy

ಪುಟಗಳು	:	22+312
ಮೊದಲ ಆವೃತ್ತಿ	:	2010
ಪರಿಷ್ಕೃತ ಆವೃತ್ತಿ	:	2020
ಕಾಗದ	:	ಎನ್.ಎಸ್. ಮ್ಯಾಪ್ಲಿಥೊ 80 ಜಿಎಸ್ಎಂ
ಬೆಲೆ	:	ರೂ 300/-
©	:	ಡಾ. ಕೆ.ವಿ. ನಾರಾಯಣ
ಸೈಜ್	:	1/8 ಡೆಮಿ
ಪ್ರತಿಗಳು	:	1000

ರಕ್ಷಾಪುಟ ವಿನ್ಯಾಸ	:	ಸುಧಾಕರ ದರ್ಬೆ
ಪ್ರಕಾಶಕರು	:	ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್ - ಬೆಂಗಳೂರು ನಂ. 119, 3ನೇ ತಿರುವು, 8ನೇ ಮುಖ್ಯ ರಸ್ತೆ, ಹಂಪಿನಗರ ಬೆಂಗಳೂರು-104. ದೂರವಾಣಿ: 080-23409512

ಅರ್ಪಣೆ

ಓದುವ ದಾರಿಗಳನ್ನು ತೆರೆದು
ಹೊತ್ತಗೆಗಳನ್ನು ಬೆನ್ನೇರಿಸಿದ
ಲೈಬ್ರರಿಗಳಿಗೆ

ಮನ್ನಿಸಲು ಕೋರುತ್ತ ಈ ಹಿನ್ನೋಟದ ಮಾತುಗಳು

ಬರೆಯುವುದೇಕೇ? ಇನ್ನೊಬ್ಬರೊಡನೆ ಮಾತನಾಡುವ ಒಂದು ದಾರಿಯಾಗಿ ಬರಹವನ್ನು ಹುಡುಕಿಕೊಳ್ಳುತ್ತೇವೆಂದು ತೋರುತ್ತದೆ. ಆದರೆ ಅದು ನಮ್ಮನ್ನೇ ನಮಗೆ ತೋರಿಸುವ ದಾರಿಯೂ ಆಗಿರುತ್ತದೆ ಎಂಬುದು ಗೊತ್ತಾಗಬೇಕು. ದೀಪವೆಂದರೆ ಬೆಳಕೂ ಹೌದು ದಾರಿಯೂ ಹೌದು ಅಲ್ಲವೇ? ಹೀಗೆ ಬರೆದದ್ದೆಲ್ಲಾ ಬರೆದವರ ಅಪರಾಧ ಖಾತೆಗಳಲ್ಲಿ ಜಮೆಯಾಗತೊಡಗುತ್ತದೆ ಎನ್ನುವುದು ನನಗೆ ಗೊತ್ತಾದದ್ದು ತೀರಾ ಈಚೆಗೆ. ಬರೆದದ್ದನ್ನೆಲ್ಲಾ ಒಂದು ಕಡೆ ಕೂಡಿಸಿ ಅಚ್ಚು ಮಾಡುವ ಇರಾದೆಯನ್ನು ನನ್ನೆದುರಿಗಿಟ್ಟು ನನ್ನ ಒಪ್ಪಿಗೆಯನ್ನು ಗೆಳೆಯರು ಪಡೆದುಕೊಂಡಮೇಲೆ ಈ ದಿಟ ನನಗೆ ತಿಳಿಯಿತು. ಬರೆದಾದ ಮೇಲೆ ಬರಹದ ಮೇಲೆ ನನ್ನ ಹಕ್ಕುಗಳು ಇಲ್ಲ ಎಂದು ತಿಳಿದ ನನಗೆ ಈ ಬರಹಗಳನ್ನು ಒಗ್ಗೂಡಿಸಿ ಅಚ್ಚುಮಾಡಿಸುವ ಕೆಲಸಕ್ಕೆ ಅಡ್ಡಿತರಲು ಯಾವ ಹಕ್ಕುಗಳೂ ಇರಲಿಲ್ಲ. ಆದರೆ ಒಂದೊಂದಾಗಿ ಹಳೆಯ ಬರಹಗಳನ್ನು ಒಗ್ಗೂಡಿಸುತ್ತಿರುವಾಗ ಅನಿಸಿದ್ದೇ ಬೇರೆ.

ಬರೆಯುವುದು ಒಂದು ಅಪರಾಧವಿರಬೇಕು. ಬರೆದು ಮೊದಲು ಅಚ್ಚು ಮಾಡಿಸಿದ ಮೇಲೆ ಆ ಅಪರಾಧಕ್ಕೆ ಬಿ ರಿಪೋರ್ಟ್ ಸಿಕ್ಕಿಬಿಟ್ಟಿರುತ್ತದೆ. ಎಷ್ಟೋ ವರುಷಗಳಾದ ಮೇಲೆ ಅದೇ ಬರಹವನ್ನು ಮರಳಿ ಅಚ್ಚು ಮಾಡಲು ನೋಡಿದರೆ ಯಾರೋ ಹಳೆಯ ಕೇಸಿಗೆ ನೀಡಿದ್ದ ಬಿ ರಿಪೋರ್ಟ್‌ನ್ನು ಹಿಂದಕ್ಕೆ ಪಡೆದು ಕೇಸನ್ನು ಮರಳಿ ತೆರೆದು ಕೂರಿಸಿದಂತೆ ತೋರುತ್ತದೆ. ನನಗಂತೂ ಹಾಗೇ ಅನ್ನಿಸಿದೆ. ಆದರೂ ಇದೊಂದು ತಪ್ಪೊಪ್ಪಿಗೆಯ ಗಳಿಗೆ. ಬರೆದು ಏನು ಮಾಡಿದ್ದೇನೋ ಗೊತ್ತಿಲ್ಲ. ಹೀಗೆ ಬರೆಯುವುದು ಅಗತ್ಯವಾಗಿತ್ತೇ? ಅದೂ ಗೊತ್ತಿಲ್ಲ. ಬರೆಯುವುದು ಕಷ್ಟವಲ್ಲ; ಬರೆಯದಿರುವುದೇ ಕಷ್ಟ ಎಂಬ ಮಾತನ್ನು ನಂಬಿ ಈ ಹಾದಿ ಹಿಡಿದಿದ್ದರೂ ಅಚ್ಚರಿಯಿಲ್ಲ.

ಇದೆಲ್ಲ ಹೇಗೆ ಮೊದಲಾಯಿತು? ಆಗ ಬರೆಯುವುದು ಒಂದು ಹೊಸ ಹೊಣೆ ಎಂಬ ನಂಬಿಕೆ ಗಟ್ಟಿಯಾಗಿತ್ತು. ಅದನ್ನು ಹೊರುವವರಿಗೆ ಹೆಚ್ಚಿನ ಸಿದ್ಧತೆ ಬೇಕೆಂದು ನಂಬಿದ್ದೆವು. ಹಾಗೆಯೇ ಸುಮ್ಮನೆ ಬೇಕಾದ್ದಕ್ಕಿಂತ ಹೆಚ್ಚನ್ನು ಬರೆಯುವ ಬಗೆಯನ್ನೂ ನಗೆಗೀಡು ಮಾಡುತ್ತಿದ್ದೆವು. ನನ್ನ ಎಷ್ಟೋ ಒಡನಾಡಿಗಳು ಇದಕ್ಕಿಂತ ಹೆಚ್ಚು ಬರೆಯಬಹುದಾಗಿದ್ದರೂ ಹಾಗೆ ಬರೆಯದೇ ಈಗಲೂ ನನ್ನಂತಹವರನ್ನು ನೋಡಿ ನಗುತ್ತಿದ್ದಾರೆ. ಇದು ನನಗೂ ಗೊತ್ತಿದೆ.

ಮೊದಮೊದಲು ಮಾತಿನ ಮುಂದುವರಿಕೆಯಾಗಿ ಈ ಬರಹಗಳು ಮೈತಳೆದವೆಂದು ತೋರುತ್ತದೆ. ಮಾತಿನ ಹರಹನ್ನು ಕಡಿಮೆ ಮಾಡಿಕೊಂಡು, ನುಡಿದದ್ದಕ್ಕೆ ಹೊಣೆಗಾರರಾಗುವ ಬಯಕೆಯಿಂದಾಗಿ ಈ ಬರಹಗಳು ಹುಟ್ಟಿಕೊಂಡವು. ಅಂದಂದಿನ ದಂದುಗಕ್ಕೆ ಹೆಣೆದ, ಹೊಸೆದ ಬರಹಗಳೆಂದು ತೋರಿದರೂ ಎಲ್ಲರೊಡನೆ ಆಡುತ್ತಿದ್ದ ಮಾತುಗಳ ಜಾಲದಲ್ಲಿ ಇದ್ದ ನಂಟು ಈ ಬರಹಗಳಲ್ಲೂ ಸೇರಿಕೊಂಡಿದೆ. ಇದು ಸ್ಪಷ್ಟತೆಯೂ ಆಗಿರಬಹುದು; ಕೆಲವೊಮ್ಮೆ ಗೊಂದಲವೂ ಆಗಿದ್ದಿರಬಹುದು. ಆದರೆ ಸುಳ್ಳು ಆಗಿಲಾರದು. ಸಾಹಿತ್ಯದ ಓದುಗರೂ ಮೇಸ್ಟ್ರೂ ಆಗಿದ್ದ ನನ್ನಂತಹವರಿಗೆ ಏಳು ಎಂಟನೆಯ ದಶಕಗಳು ಹೊಸ ಸವಾಲನ್ನು ಎಸೆದಿದ್ದವು. ಸರ್ವರ ಸಮ್ಮತಿಯ ಸಂತೆಯ ದಾರಿಯನ್ನು ಹಿಡಿಯಬಾರದೆಂಬ ಹಟವಿದ್ದರೂ ಆ ಸಮ್ಮತಿಯ ದಾರಿಗೆ ಇದ್ದ ಮನ್ನಣೆಯ ಸೆಳೆತದಿಂದ ತಪ್ಪಿಸಿಕೊಳ್ಳುವುದು ಕಡುಕಷ್ಟವಾಗಿತ್ತು. ಇದು ಎಲ್ಲದರಲ್ಲೂ ಸ್ವಂತಿಕೆ ಇರಬೇಕೆಂಬ ಅಹಂಕಾರದ ಮಾತಲ್ಲ. ಆದರೆ ನಮ್ಮ ಹುಡುಕಾಟದಿಂದ ಹೊಸ ದಾರಿ ಸಿಗಬೇಕು. ಕೊನೆಯ ಪಕ್ಷ ನಮ್ಮ ದಾರಿಯನ್ನು ನಾವೇ ಕಂಡುಕೊಂಡೆವೆಂಬ ಸಂತಸವಾದರೂ ಸಿಗಬೇಕಿತ್ತು. ಆವರೆಗೆ ಕೈಹಿಡಿದು ನಡೆಸುತ್ತಿದ್ದ ಮಾದರಿಗಳು ದಾರಿ ತಪ್ಪಿಸುತ್ತಿರಲಿಲ್ಲವಾದರೂ ಕರೆದುಕೊಂಡು ಹೋಗುತ್ತಿದ್ದ ಹಾದಿಯಲ್ಲಿ ನಮ್ಮತನಕ್ಕೆ ಎರವಾಗಬೇಕೆಂಬ ಅನಿಸಿಕೆ ಮಾತ್ರ ಗಟ್ಟಿಗೊಳ್ಳುತ್ತಿತ್ತು. ಈಗಲೂ ಅದು ಹುಚ್ಚಾಟವಾಗಿರಲಿಲ್ಲ ಎನ್ನುವ ನಂಬಿಕೆ ಇದೆ.

ನೆನಪಿದೆ. 1971ರಲ್ಲಿ ನಡೆದ ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು ಎಂಬ ವಿಷಯದ ವಿಚಾರ ಸಂಕಿರಣವೊಂದರಲ್ಲಿ ಬೇಂದ್ರೆ, ಶಂಕರ ಮೊಕಾಶಿ ಪುಣೇಕರ್ ಮತ್ತು ಲಂಕೇಶ್ ಅವರ ನಡುವೆ ನಡೆದ ಮಾತಿನ ಮಾರಾಮಾರಿಯನ್ನು ಕಂಡು, ಕೇಳಿ ನಾವೆಲ್ಲ ಹುಡುಗರು ದಿಕ್ಕುತಪ್ಪಿದಂತಾಗಿದ್ದ ಗಳಿಗೆ ಈಗಲೂ ನೆನಪಿದೆ. ದಿಕ್ಕುತಪ್ಪಿದಂತೆ ಅನಿಸಿದ್ದಕ್ಕೆ ಆ ಜಗಳ ಮತ್ತು ಅದರ ತಿರುಳು ಮಾತ್ರ ಕಾರಣವಾಗಿರಲಿಲ್ಲ. ಮೊದಲ ಬಾರಿಗೆ ನಾವು ಕಟ್ಟಿಕೊಂಡಿದ್ದ ಗೌರವದ ವಿಗ್ರಹಗಳು ಪುಡಿಪುಡಿಯಾಗುತ್ತಿದ್ದನ್ನು ಕಾಣುತ್ತಿದ್ದ ಅನುಭವವೂ ಕಾರಣವಾಗಿದ್ದಿರಬೇಕು. ಮಾತಿಗೆ ಇರುವ ಬಲವನ್ನು ನಂಬಿದ್ದವರು ಬೇಂದ್ರೆ, ವಾಕ್ ಸ್ವಾತಂತ್ರ್ಯದ ಹೆಚ್ಚಳವನ್ನು ಜವಾಹರ್ ಲಾಲ್ ನೆಹರೂ ಅವರಿಗೆ ತಾವು ಮನವರಿಕೆ ಮಾಡಿಕೊಟ್ಟದ್ದನ್ನು ಹೇಳುತ್ತಿದ್ದರು. ಆದರೆ ನಾಡಿನ ಚರಿತ್ರೆಯ ಆ ಹಂತವನ್ನು ಬಲ್ಲವರಿಗೆ ಅಂದಿನ ಪರಿಸ್ಥಿತಿಯ ಅರಿವಿತ್ತು. ಎಲ್ಲರಿಗೂ ಮಾತಾಡಲು ಅವಕಾಶವಿದ್ದರೂ ಆ ಮಾತನ್ನು ಕೇಳಿಸಿಕೊಳ್ಳುವವರೇ ಇಲ್ಲದಂತಾದರೆ ಆಗ ಮಾತಿಗೇನು ಬಲವೆಂಬುದು ಲಂಕೇಶರ ಪ್ರಶ್ನೆಯಾಗಿತ್ತು. ಇದೆಲ್ಲ ಮುಂದಿನ ನಾಲ್ಕೈದು ವರ್ಷಗಳಲ್ಲಿ ಹರಳುಗಟ್ಟುತ್ತ ನಾಡಿನಲ್ಲಿ ಅನುಶಾಸನ ಪರ್ವ ಮೊದಲಾದಾಗ ಲಂಕೇಶ್ ಹೇಳಿದ್ದರ ತಿರುಳು ಮನವರಿಕೆಯಾಗತೊಡಗಿತ್ತು. ಮಾತುಗಳನ್ನು ಗೋಡೆಯ ಎದುರು ಆಡಬೇಕಾಗಿ ಬಂದರೆ ಏನಾಗುವುದೆಂಬ ಅಂಜಿಕೆಯೇ ಬರಹಕ್ಕೆ ಕೋಡು ಮೂಡಿಸಿದ್ದಿರಲೂಬಹುದು. ಬರಹಕ್ಕೆ ಈಗ ಮತ್ತು ಇಲ್ಲಿ ಎಂಬ ಕಟ್ಟು ಇರುವುದಿಲ್ಲ. ಹಾಗಾಗಿ ಎಲ್ಲಿಯೋ ಯಾರೋ ಅದನ್ನು ಓದಬಹುದಾಗಿದೆ. ಹಾಗಾಗಿ ಬರಹಕ್ಕೆ ಬಲ ಉಳಿದೇ ತೀರುತ್ತದೆ ಎನ್ನುವ ಒತ್ತಾಸೆ ಆಗ ಬಲಗೊಂಡಿದ್ದಿರಬಹುದು. ಮುಂದಿನ ದಶಕಗಳಲ್ಲಿ ಅಕ್ಷರ

ಕಲಿತವರಲ್ಲಿ ಹಲವರು ಏಕೆ ಬರಹದ ಮೊರೆ ಹೊಕ್ಕರು ಎಂಬುದಕ್ಕೆ ಇಲ್ಲಿ ಸೂಚನೆಗಳು ಸಿಕ್ಕಿಯಾವು.

ಹೊಸ ದಾರಿಯನ್ನು, ಇಲ್ಲವೇ ದಾರಿಯನ್ನು ಹೊಸದಾಗಿ ಕಂಡುಕೊಳ್ಳುವ ಮಾತನ್ನು ಮೇಲೆ ಆಡಿದ್ದೇನೆ. ಸಾಹಿತ್ಯವನ್ನು ಅರಿಯಲು ನಮಗೆ ಒದಗಿಸಿಕೊಟ್ಟಿದ್ದ ಮಾದರಿಗಳು ನಮ್ಮ ಕೃತಿಗಳನ್ನು ಹೊರಗಿನಿಂದ ನೋಡಲು ಒತ್ತಾಯಿಸುತ್ತಿವೆ ಎಂಬ ಅನಿಸಿಕೆ ಮೂಡಿತ್ತು. ನಾವು ತೆರೆದುಕೊಂಡ ಹಾಗಾಗಿಯೇ ಬಳಸುತ್ತಿದ್ದ ಸಾಹಿತ್ಯತತ್ತ್ವ ಮತ್ತು ಪರಿಕರಗಳು ಕನ್ನಡದ ಪರಂಪರೆಯಿಂದ ಹುಟ್ಟಿಕೊಂಡಿರಲಿಲ್ಲ. ಇದಕ್ಕೆ ಚರಿತ್ರೆಯಲ್ಲಿ ಕಾರಣಗಳೇನೇ ಇರಲಿ. ಆದರೆ ಅದೇ ದಾರಿಯನ್ನು ಹಿಡಿದು ನಡೆಯಬೇಕೆಂಬ ಒತ್ತಾಯಕ್ಕೆ ಮಾತ್ರ ಕಾರಣಗಳಿರಲಿಲ್ಲ. ಅರಿಯುವುದು ಮತ್ತು ಬೆಲೆಕಟ್ಟುವುದು ಈ ಎರಡೂ ಕೆಲಸಗಳಲ್ಲಿ ಎರಡನೆಯದಕ್ಕೆ ಮನ್ನಣೆ ಹೆಚ್ಚಾದಾಗ ಕೃತಿಗಳಲ್ಲಿ, ಕೃತಿಕಾರರಲ್ಲಿ ಆಯ್ಕೆಗಳನ್ನು ಮಾಡಿಕೊಳ್ಳುವ ಹಾಗೂ ನಿರಾಕರಣೆ ಮಾಡುವ ನೆಲೆಗಳು ಬೇರೂರತೊಡಗುತ್ತವೆ. ನಮ್ಮ ಸಾಹಿತ್ಯ ಚರಿತ್ರೆಯೆಂಬ ಬರೆವಣಿಗೆಯಲ್ಲಿ ಇದೇ ಕೆಲಸವನ್ನು ಮಾಡಿದ್ದೇವೆ ತಾನೆ. ಇದರಿಂದ ಕೃತಿಗಳ ಲೋಕವನ್ನು ಒಳಹೊಗುವ ದಾರಿಗಳೇ ಮುಚ್ಚಿಹೋಗುತ್ತವೆ. ಹಾಗಿದ್ದರೆ ಬೆಲೆ ಕಟ್ಟುವುದಕ್ಕಿಂತ ಅರಿಯುವ ನೆಲೆಗೆ ಮನ್ನಣೆ ಸಿಗಬೇಕೆಂಬ ಇರಾದೆ ಮುಂಚೂಣಿಗೆ ಬಂತು. ಇದರಿಂದ ನಾನು ಬರೆದದ್ದನ್ನು ಓದಿದವರು ನನ್ನನ್ನು ಸತ್ಯಣಾಭ್ಯವಹಾರಿ ಎಂದು ಬೆರಳುಮಾಡಿ ತೋರಿಸತೊಡಗಿದರು. ಅಂದರೆ ಸಾಹಿತ್ಯಕ ಅಭಿರುಚಿ ಇಲ್ಲದ , ಏನೂ ಸಿಕ್ಕರೂ ಅದೆಲ್ಲವನ್ನೂ ಮೇಯುವವನು ಎಂದಾಯಿತು. ಈ ಬಿರುದಿನಿಂದ ನನಗೇನೂ ಬೇಸರವಾಗಿಲ್ಲ. ಆದರೆ ಹಲವು ಒತ್ತಡಗಳಿಗೆ ಒಳಗಾಗಿ ತನ್ನ ಚಹರೆಗಳಿಗೆ ಎರವಾಗಬೇಕಾಗಿ ಬಂದಿರುವ ಕನ್ನಡ ಬರೆವಣಿಗೆಯನ್ನು ನೋಡಲು ನಮಗೆ ಬೇರೆ ಯಾವುದಾದರೂ ದಾರಿಗಳಿದ್ದವೋ ಇಲ್ಲವೋ ನನಗೆ ತಿಳಿಯದು.

ನಮ್ಮ ಕೃತಿಗಳ ಒಡಲಿನಿಂದಲೇ ನಮಗೆ ಬೇಕಾದ ಅರಿಯುವ ಮಾಪುಗೋಲುಗಳನ್ನು, ಪರಿಕರಗಳನ್ನು ಹುಡಕಿಕೊಳ್ಳಬೇಕೆಂದು ಹೇಳಿದಾಗ ಎರಡು ಬಗೆಯಲ್ಲಿ ಬದಲುಗಳು ಬಂದವು. ಒಂದು ನೆಲೆಯಲ್ಲಿ ನಿಂತವರು ಹೀಗೆ ನಮ್ಮದೇ ಮಾಪುಗೋಲು ಮತ್ತು ಪರಿಕರಗಳನ್ನು ಹುಡುಕುವುದೆಂದರೆ ಹಳೆಯದಕ್ಕೆ ಮರಳುವ, ಮರುಗಳಿಕೆಯ ದಾರಿಯಾಗಿದೆ.ಇದು ಹಳಹಳಿಕೆಯ ದಾರಿ. ಹಾಗಾಗಿಯೇ ಇದು ಮುನ್ನೋಟಕ್ಕೆ ಎರವಾಗುವ ದಾರಿ ಎಂದರು. ಮತ್ತೆ ಕೆಲವರು ಹೀಗೆ 'ಬೇರೆ' ಎಂದು 'ಹೊರಗಿನದು' ಎಂದು ತಿಳಿಯಲಾದ ಪರಿಕರಗಳನ್ನು ತೊರೆದರೆ ನಾವೇ ಬಡವಾಗಿಬಿಡುತ್ತೇವೆ; ಆಗ ನಮಗೆ ದಿಕ್ಕೇ ತೋಚದಂತೆ ಆಗಿಬಿಡಬಹುದು ಎಂದರು. ಆದರೆ ಈ ಎರಡೂ ಬದಲುಗಳ ಬೇರುಗಳು ಗಟ್ಟಿಯಾಗಿರಲಿಲ್ಲ. ಏಕೆಂದು ನೋಡೋಣ.

ಬರೆವಣಿಗೆ ಇಲ್ಲವೇ ಜನರ ನೆನಪಿನಲ್ಲಿರುವ ರಚನೆಗಳನ್ನು ಅರಿಯುವ ಪರಿಕರಗಳು ಒಳಗಿನಿಂದಲೇ ಬರಬೇಕು ಎನ್ನುವ ಮಾತನ್ನು ಸರಿಯಾಗಿ ತಿಳಿದರೆ ಅದು

ಕೃತಿಗಳ ಒಡಲು ಮತ್ತು ಪರಿಸರ ಇವೆರಡಕ್ಕೂ ಸಂಬಂಧಿಸಿದ ಸಂಗತಿ ಎನ್ನುವುದು ಗೊತ್ತಾಗುತ್ತದೆ. ಒಂದು ಉದಾಹರಣೆಯನ್ನು ನೋಡೋಣ. ಇಪ್ಪತ್ತನೆಯ ಶತಮಾನದ ಮೊದಮೊದಲ ಮೂರ್‍ನಾಲ್ಕು ದಶಕಗಳಲ್ಲಿ ನಡೆದ ಸಂಗತಿ ಇದು. ಜನರಲ್ಲಿ ಬಾಯ್ದರೆಯಾಗಿ ಇದ್ದ ಜನಪದ ಸಾಹಿತ್ಯವನ್ನು ಆಗ ಕೂಡಿಹಾಕಲು ಹೊರಟವರು ತಳೆದ ನಿಲುವನ್ನು ನೋಡಿ. ಎಲ್ಲ ಬರೆವಣಿಗೆಗೂ ತಾಯಿಬೇರು ಈ ಜನಪದಸಾಹಿತ್ಯ ಎನ್ನುವ ನಿಲುವನ್ನು ತಳೆದರಷ್ಟೆ. ಹಲಸಂಗಿಯ ಗೆಳೆಯರು ಕೂಡಿ ಹಾಕಿದ ಇಂತಹ ಬರೆವಣಿಗೆಯನ್ನು ಅವರು ನೋಡಿದ ಬಗೆಯನ್ನು ನೋಡಿ. ಹಾಗೆಯೇ ತೆಂಕಣಸೀಮೆಯಲ್ಲಿ ಮಾಸ್ತಿಯವರೇ ಮೊದಲಾಗಿ ಜಿಎಂಶ್ರೀ,ಗೊರೂರು ಮುಂತಾದವರು ಜನಪದಗೀತೆಗಳನ್ನು ಇಂದಿನ ಬರೆವಣಿಗೆಯ ಬೇರು ಎಂತಲೇ ತಿಳಿದಿದ್ದರು. (ಹಲಸಂಗಿಯ ಗೆಳೆಯರು ಕೊಂಚ ಮುಂದೆ ಹೋಗಿ ತಮ್ಮವೇ ಕೆಲವು ರಚನೆಗಳನ್ನು 'ಗರತಿಯ ಹಾಡು' ಕೃತಿಯಲ್ಲಿ ಜನರ ಹೆಸರಿನಲ್ಲಿ ಬಳಕೆ ತಂದಿದ್ದಾರೆಂದು ನನಗೆ ತೋರುತ್ತದೆ. ಇದು ಆಪಾದನೆಯಲ್ಲ. ಜನರ ನೆನಪಿನ ರಚನೆ ಮತ್ತು ನಮ್ಮ ಇಂದಿನ ರಚನೆಗಳ ನಡುವೆ ಇರುವ ಕರುಳುಬಳ್ಳಿಯ ನಂಟನ್ನು ತಿಳಿಸಿ ಹೇಳುವ ಬಗೆಯೂ ಇದಾಗಿತ್ತು.) ಚರಿತ್ರೆ ಮತ್ತು ಸಂವೇದನೆಗಳು ಕಡಿದುಹೋಗದೆ ಮುಂದುವರೆದುಕೊಂಡು ಬಂದಿವೆ ಎಂಬುದನ್ನು ತೋರಿಸುವುದು ಅಂದಿನ ಪರಿಸರದ ಒತ್ತಾಯವಾಗಿತ್ತಷ್ಟೆ ಹೀಗಾಗಿ ಜನಪದ ರಚನೆಗಳನ್ನು ನೊಡುವ ಈ ಬಗೆಯ ಪರಿಕರ ಹುಟ್ಟಿ ಕೊಂಡದ್ದು ಸರಿಯಾಗಿಯೇ ಇದೆ. ಕೆಲವರು ಇದರ ಹಿನ್ನೆಲೆಯಲ್ಲಿ ಐರ್ಲೆಂಡ್ ನಾಡು ಬಿಡುಗಡೆಗಾಗಿ ಹೋರಾಡುತ್ತಿರುವಾಗ ಅಲ್ಲಿನ ಸಾಂಸ್ಕೃತಿಕ ನಾಯಕರು ಅಲ್ಲಿನ ಜನಪದರಚನೆಗಳನ್ನು ನೋಡಿದ ಬಗೆಯ ಪ್ರಭಾವವಿದೆ ಎನ್ನಬಹುದು. ಆದರೆ ಇದನ್ನು ಗಟ್ಟಿಯಾಗಿ ಹೇಳಲು ಆಗುತ್ತಿಲ್ಲ. ಏಕೆಂದರೆ ಬೇಂದ್ರೆಯವರನ್ನು ಐರ್ಲೆಂಡಿನ ಏಈ ಕವಿಯ ಹಾಗೆ ಉಳಿದವರು– ಅಂದರೆ ಡಬ್ಲ್ಯೂ.ಬಿ. ಯೇಟ್ಸ್, ಲೇಡಿ ಗ್ರೆಗೊರಿ, ನಾಟಕಕಾರ ಜೆ.ಎಂ. ಸಿಂಜ್(ಅಥವಾ ಸಿಂಗ್?) ಸೆಳೆದಂತೆ ತೋರುತ್ತಿಲ್ಲ. ತೆಂಕಣನಾಡಿನಲ್ಲಿ ಕುವೆಂಪು ಅವರಿಗೆ ಕನ್ನಡದಲ್ಲಿ ಬರೆಯಲು ಹೇಳಿದ ಜೆ.ಎಚ್.ಕಸಿನ್ಸ್ ಆ ನಾಡಿನವನೇ ಆಗಿದ್ದರೂ ಇಲ್ಲಿಯ ಬರಹಗಾರರ ಮೇಲೆ ಐರಿಶ್ ಕವಿಗಳ ನೆರಳೂ ಬಿದ್ದಂತೆ ತೋರುತ್ತಿಲ್ಲ. ಹಾಗಾಗಿ ಜನಪದರಚನೆಗಳನ್ನು ನೋಡಲು ಆಯ್ದುಕೊಂಡ ಮಾದರಿ ನಮ್ಮ ಒಳಗಿನ ಒತ್ತಡದಿಂದಲೇ ಹುಟ್ಟಿದ್ದೆಂದು ತೋರುತ್ತದೆ.

ಆದರೆ ಮುಂದೆ ಕನ್ನಡದ ಗುರುತುಗಳನ್ನು ಹುಡುಕಿಕೊಳ್ಳುವ ಕೆಲಸ ಮೊದಲಾದಾಗ ನಾವು ಹಿಡಿದ ದಾರಿಯೇ ಬೇರೆಯಾಯಿತು. ಕನ್ನಡವನ್ನು ದ್ರಾವಿಡ ಸಂಸ್ಕೃತಿಯ ನೆಲೆಯಲ್ಲಿ ನೋಡುವ ಬಗೆ ನೆಲೆಯೂರಿತಷ್ಟೆ. ಆಗ ಜನಪದಸಾಹಿತ್ಯ ನಮಗೆ ಶಿಷ್ಟಸಾಹಿತ್ಯಕ್ಕೆ ವಿರುದ್ಧವಾದ ನೆಲೆಯಲ್ಲಿ ಕಾಣತೊಡಗಿತು. ಶಿಷ್ಟವೆಂದು ನಾವು ಗುರುತಿಸಿಕೊಂಡ ಸಾಹಿತ್ಯವು ವೈದಿಕ ಮತ್ತು ಧಾರ್ಮಿಕ ನೆಲೆಗಳಿಂದ ಒತ್ತಾಸೆ ಪಡೆದುಕೊಂಡಿದ್ದರೆ ಜನಪದಸಾಹಿತ್ಯವನ್ನು ಅವೈದಿಕ ನೆಲೆಯಲ್ಲಿ ಇರಿಸಿ ನೋಡತೊಡಗಿದೆವು. ಇದೂ ಕೂಡ ಅಂದಿನ ನಮ್ಮ ಕನ್ನಡ ಗುರುತುಗಳ

ಹುಡುಕಾಟದ ಕಾರಣದಿಂದ ಹುಟ್ಟಿಕೊಂಡ ಚಿಂತನೆ. ಒಂದೆರಡು ದಶಕಗಳು ಕಳೆದಮೇಲೆ ನಾವು ಜನಪದಸಾಹಿತ್ಯಕ್ಕೆ ಕೊಟ್ಟುಕೊಂಡಿದ್ದ ಕೃಷಿ ಮೂಲವನ್ನು ಬಿಟ್ಟುಕೊಟ್ಟು ದಲಿತ ನೆಲೆಗಳನ್ನು ಕಂಡುಕೊಳ್ಳಬೇಕಾದ ಅಗತ್ಯ ಉಂಟಾಯಿತು. ಅವರೆಗೆ ಕಡೆಗಣನೆಗೆ ಒಳಗಾಗಿದ್ದ ಹತ್ತಾರು ಒಳಹೊಳೆಗಳು ಈಗ ಮೈದುಂಬಿಕೊಂಡಂತೆ ತೋರತೊಡಗಿದವು. ಇದೆಲ್ಲವನ್ನೂ ಹೇಳಿದ್ದರ ಉದ್ದೇಶವಿಷ್ಟೆ ನಮ್ಮ ಸಾಹಿತ್ಯವನ್ನು ಅರಿಯುವ ಮಾಪುಗೋಲುಗಳನ್ನು ಪರಿಕರಗಳನ್ನು ನಮ್ಮ ಬೇಕು ಬೇಡಗಳಿಗೆ ತಕ್ಕಂತೆ ಹುಡುಕಿಕೊಳ್ಳಬೇಕು ಎನ್ನುವುದು ಅಷ್ಟೇನೂ ಗಾಬರಿ ಹುಟ್ಟಿಸಬೇಕಾದ ಸಂಗತಿಯಲ್ಲ ಎನ್ನುವುದನ್ನು ಇಲ್ಲಿ ಹೇಳಬೇಕಾಗಿದೆ. ನಮಗೇ ಗೊತ್ತಿಲ್ಲದಂತೆ ನಾವು ಆ ಮಾದರಿಯನ್ನು ನಂಬಿಯೇ ಹೆಜ್ಜೆ ಇಡುತ್ತಿದ್ದೇವೆ. ನಾವು ಹುಡುಕಿಕೊಂಡ ದಾರಿ ಸರಿಯೋ ತಪ್ಪೋ ಎನ್ನುವುದನ್ನು ನೋಡಿಕೊಳ್ಳುವ ಅವಕಾಶವನ್ನು ನಾವು ಕಾಯ್ದುಕೊಂಡಿದ್ದೇವೆಯಷ್ಟೆ

ಸಾಹಿತ್ಯ ಕೃತಿಯ ದಿಟವಾದ ಇರವು ಎಲ್ಲಿದೆ ಎನ್ನುವುದು ನಮ್ಮನ್ನೆಲ್ಲ ಕಾಡಿಸುತ್ತಿದ್ದ ಇನ್ನೊಂದು ಪ್ರಶ್ನೆ. ಭಾಷೆಯೇ ಅದರ ಮೈ ಆಗಿದ್ದರಿಂದ ಅದರ ಭಾಷಿಕ ಶರೀರವನ್ನೇ ನೆಮ್ಮಿ ಅದನ್ನು ಅರಿಯಲು ಮುಂದಾಗಬೇಕೆಂಬುದು ಆಗ ಹೊಳೆದ ದಾರಿ. ಆ ಭಾಷಿಕ ಮೈಯನ್ನು ಬಿಟ್ಟು ನಾವು ಕಟ್ಟಿಕೊಟ್ಟ ಯಾವ ಹೊರ ಪ್ರಭಾವಳಿಯೂ ಕೂಡ ಕೃತಿಯನ್ನು ಅರಿಯಲು ನೇರವಾಗಿ ನೆರವಾಗಲಾರದು ಮತ್ತು ಅಂತಹ ನೆರವನ್ನು ಪಡೆದರೆ ದಾರಿ ತಪ್ಪುವುದಂತೂ ದಿಟ ಎನ್ನುವುದು ಆಗ ಅನಿಸಿತ್ತು. ಹಾಗಾಗಿಯೇ ಕೃತಿಗಳಿಗೆ ನಿನ್ನೆಗಳಿಲ್ಲ ಎಂದು ನಂಬಬೇಕಾಯಿತು. ಅದನ್ನೇ ಪಾಠಗಳನ್ನು ಕೇಳುತ್ತಿದ್ದ ವಿದ್ಯಾರ್ಥಿಗಳಿಗೂ ಹೇಳಬೇಕಾಯ್ತು. ವಿಕ್ರಮಾರ್ಜುನ ವಿಜಯವಿರಲಿ, ಕುಮಾರವ್ಯಾಸ ಭಾರತವಿರಲಿ, ಬಸವರಾಜದೇವರ ರಗಳೆಯಿರಲಿ, ಮಲೆಗಳಲ್ಲಿ ಮದುಮಗಳು ಇರಲಿ, ಜೋಗಿಯಿರಲಿ ಈ ಎಲ್ಲವೂ ಒಂದೇ ಸಾಲಿನಲ್ಲಿ ನಿಂತಂತೆ ತೋರತೊಡಗಿದವು. ಯಾವುದೂ ಒಂದಾದ ಮೇಲೊಂದರಂತೆ ಹುಟ್ಟಿಕೊಂಡಂತೆ ತೋರಲೇ ಇಲ್ಲ. ದಿಟ. ಒಂದು ಹತ್ತನೆಯ ಶತಮಾನದ್ದು, ಇನ್ನಾವುದೋ ಹದಿನೈದರದ್ದು, ಮತ್ತೊಂದು ನಿನ್ನೆ ಮೊನ್ನೆ ಹುಟ್ಟಿದ್ದು ಸರಿ. ಆದರೆ ಓದುವವರಿಗೆ ಅವೆಲ್ಲವೂ ಈಗ ಮತ್ತು ಇಲ್ಲಿ ಮಾತ್ರ ದಿಟ.

ಈ ನೆಲೆಯನ್ನು ಒಪ್ಪಿದಾಗ ಕೃತಿಯೊಳಗೇ ಇರುವ ಅದು ಹುಟ್ಟಿದಕಾಲದ ನೆನಪನ್ನು ಕೈಬಿಡುವುದು ತಪ್ಪಲ್ಲವೇ ಎಂದು ಕೇಳುವುದುಂಟು. ಅದು ಸರಿಯೇ. ಇಲ್ಲಿಯೂ ಯಾವ ನೆನಪೇ ಆದರೂ ಕೂಡ ಅದು ನಮ್ಮ ಕಾಲದೊಡನೆ ನಂಟನ್ನು ಬೆಳೆಸಿಕೊಳ್ಳದಿದ್ದರೆ ಅದು ಕೆಲಸಕ್ಕೆ ಬಾರದಂತೆಯೇ ಸರಿ ಎನ್ನುವುದು ನನ್ನ ತಿಳುವಳಿಕೆ. ನಾವು ನಮಗೆ ಬೇಡದ ನೆನಪುಗಳನ್ನು ಹೊತ್ತು ನಡೆಯುತ್ತಿರುವವರಲ್ಲ. ಹಾಗೆ ಹೊತ್ತು ನಡೆಯಬೇಕೆಂಬ ಒತ್ತಾಯಗಳನ್ನು ನಿರಾಕರಿಸುವವರು. ಹಾಗಾಗಿ ಕೃತಿಯಲ್ಲಿ ಅದು ಹುಟ್ಟಿದಕಾಲಕ್ಕೆ ಮಾತ್ರ ಸಲ್ಲುವ ನೆನಪಿನ ನಂಟುಗಳಿರುತ್ತವೆ ಎನ್ನುವುದನ್ನು ಒಪ್ಪಿ ಅದರಿಂದಾಗಿ ಅದನ್ನು ಅರಿಯುವ ಬಗೆಯಲ್ಲೇ ಬದಲಾವಣೆಯನ್ನು ಮಾಡಿಕೊಳ್ಳಬೇಕು ಎನ್ನುವುದನ್ನು ನಾನು ಒಪ್ಪಲಾರೆ.

ನಾನು ಮತ್ತು ನನ್ನ ಸರೀಕ ಕನ್ನಡ ಮೇಸ್ಟ್ರುಗಳು ಇನ್ನೊಂದು ಇಕ್ಕಟ್ಟನ್ನು ಎದುರಿಸುತ್ತಿದ್ದೆವೆಂದು ತೋರುತ್ತದೆ. ಪಶ್ಚಿಮದ ಸಾಹಿತ್ಯ ಮತ್ತು ಸಾಹಿತ್ಯತತ್ವಗಳ ಚೌಕಟ್ಟನ್ನು ಪರಾಮರ್ಶನ ಬಿಂದುವನ್ನಾಗಿ ಮಾಡಿಕೊಳ್ಳಬೇಕೆಂಬ ಒತ್ತಾಯವನ್ನು ಹೂಡುತ್ತಿದ್ದ ವಿಮರ್ಶಕರ ಒತ್ತಡಗಳಿಗೆ ಹೇಗೆ ಪ್ರತಿಕ್ರಿಯಿಸುವುದು ಎನ್ನುವುದೇ ಆ ಇಕ್ಕಟ್ಟು. ಶರಣಾಗತಿಯ ಹಾದಿಯೊಂದು ತೆರೆದೇ ಇತ್ತು. ಈ ಹಾದಿಯಲ್ಲಿ ಹೋಲಿಕೆಗಳಿಗೆ ಒತ್ತು ತುಂಬಾ ಇತ್ತು. ಆದರೆ ಹೋಲಿಕೆಗಳು ಯಾವಾಗಲೂ ಒಂದು ನಿಟ್ಟಿನಲ್ಲೇ ಸಾಗುತ್ತಿದ್ದವು. ಬೀಜಚಿಂತನೆಗಳು ಯಾವಾಗಲೂ ಪಶ್ಚಿಮದ ಕಡೆಯಿಂದಲೇ ಹರಿದು ಬಂದಿವೆ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಿತ್ತು. ಹಾಗಲ್ಲದೆ ಕನ್ನಡದ್ದೇ ಆದ ಸಾಧನೆಗಳಿದ್ದರೂ ಅವುಗಳನ್ನು ವಿನಾಯತಿಗಳಂತೆ ಆಕಸ್ಮಿಕಗಳಂತೆ ನೋಡಬೇಕಿತ್ತು. ಇಂದಿಗೂ ವಚನಗಳನ್ನು ಹೇಗೆ ಚರ್ಚಿಸಬೇಕು, ಚರ್ಚಿಸುವುದಿರಲಿ ಹೇಗೆ ಓದಬೇಕು ಎಂಬ ಬಗ್ಗೆ ಗೊಂದಲವಿರುವುದು ಇದೇ ಕಾರಣದಿಂದಾಗಿ ಎಂದುಕೊಂಡಿದ್ದೇನೆ. ಈ ದಾರಿಯನ್ನು ಬಿಟ್ಟು ಹೊರಳಲು, ಇಲ್ಲವೇ ನಮ್ಮದೇ ಹಾದಿಗಳನ್ನು ಕಟ್ಟಿಕೊಳ್ಳಲು ಅವಕಾಶಗಳಿದ್ದರೂ ಅದಕ್ಕೆ ಬೇಕಾದ ಕಸುವನ್ನು ಕಟ್ಟಿಕೊಳ್ಳುವುದು ಒಂದು ಸವಾಲಾಗಿಯೇ ಕಾಣುತ್ತಿತ್ತು. ನನ್ನ ಕೆಲವು ಜೊತೆಗಾರರರಾದರೂ ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಗಳನ್ನು ಇಟ್ಟು ಸಾಗಿದವರಾಗಿದ್ದಾರೆ. ಈಗಲೂ ಕನ್ನಡದ ಮೇಸ್ಟ್ರುಗಳನ್ನು ಈ ದೆವ್ವ ಕಾಡುವುದನ್ನು ನಿಲ್ಲಿಸಿಲ್ಲ.

ಭಾಷೆಯ ಮೈಯನ್ನು, ಕೃತಿಯನ್ನು ತಿಳಿಯುವ ಮೊದಲ ಮತ್ತು ಕೊನೆಯ ಪರಿಕರವನ್ನಾಗಿ ಬಳಸುವ ಹಾದಿಯಲ್ಲಿ ಸಾಗಿದ ಮೇಲೆ ಭಾಷೆಯೇ ಇಲ್ಲಿನ ಬರಹಗಳ ಮುಖ್ಯ ಭಿತ್ತಿಯಾಗುವುದನ್ನು ಕಾಣಬಹುದು. ಇಲ್ಲಿಂದ ಬರಹಗಳ ಮುಖ್ಯ ನೆಲೆ ಕೇವಲ ಭಾಷೆಯೇ ಆಗಿಬಿಟ್ಟಿವೆ. ಇದಕ್ಕೆ ನಾನು ಕೆಲಸ ಮಾಡತೊಡಗಿದ್ದ ಕನ್ನಡ ವಿಶ್ವವಿದ್ಯಾಲಯದ ವಾತಾವರಣ, ಹೊಣೆ ಮತ್ತು ಅಲ್ಲಿನ ಬೇಡಿಕೆಗಳೂ ಕಾರಣವಾಗಿರಬಹುದು. ಜೊತೆಗೆ ಕಳೆದ ಶತಮಾನದ ಕೊನೆಯ ದಶಕದಿಂದ ಮೊದಲಾಗಿ ಕನ್ನಡ ಭಾಷೆಯನ್ನು ಆತಂಕದಲ್ಲಿರುವ ನುಡಿಯೆಂದು ತಿಳಿದು ಚಿಂತಿಸುವ ಬಗೆ ಬಲವಾಗಿ ಬೇರೂರಿತು. ಅದನ್ನು ಹೀಗೆ ಹೇಳೋಣ. ಕನ್ನಡದಂತಹ ನುಡಿಗಳು ಮತ್ತು ಅದನ್ನು ಅವಲಂಬಿಸಿದ ಸಂಸ್ಕೃತಿಗಳು ಜಾಗತೀಕರಣದ ಉರುಬಿನಲ್ಲಿ ಎದುರಿಸುತ್ತಿರುವ ಬಿಕ್ಕಟ್ಟುಗಳು ಎಲ್ಲರ ಎದುರು ಸವಾಲಾಗಿ ನಿಂತಿವೆ. ಇವು ಕಲ್ಪಿಸಿಕೊಂಡ ಹೋರಾಟದ ನೆಲೆಗಳಲ್ಲ. ದಿಟವಾಗಿಯೂ ಎದುರಿಸುತ್ತಿರುವ ಬಿಕ್ಕಟ್ಟುಗಳು. ಈ ಬಿಕ್ಕಟ್ಟುಗಳಿಗೆ ಚಾರಿತ್ರಿಕ ಒತ್ತಡಗಳಿರುವಂತೆ ಜಾಗತಿಕವಾದ ಒತ್ತಡಗಳೂ ಕಾರಣವಾಗಿವೆ. ಇವೆಲ್ಲವನ್ನೂ ಅರಿಯುವುದು . ಅರಿಯಲು ಬೇಕಾದ ಪರಿಕರಗಳನ್ನು ಹುಡುಕಿಕೊಳ್ಳುವುದು ಇಂದಿನ ಅಗತ್ಯವಾಗಿದೆ.

ಎಲ್ಲಕ್ಕಿಂತ ಮೊದಲು ಅರಿಯಬೇಕಾದ ಸಂಗತಿಯೆಂದರೆ ದೂರದಿಂದ ಬಿರುಕುಗಳಿಲ್ಲದಂತೆ ಕಾಣುತ್ತಿದ್ದ ನೆಲೆಗಳು ಹತ್ತಿರ ಹತ್ತಿರ ಹೋಗುತ್ತಿದ್ದಂತೆ ಹಲವಾರು ಬಿರುಕುಗಳಿರುವ ರಚನೆಗಳೆಂದು ತೋರತೊಡಗಿದ್ದು. ಇದನ್ನು ಇಡೀ ಕನ್ನಡ

ಸಂಸ್ಕೃತಿಗೆ ಹೊಂದಿಸಿಕೊಂಡು ನೋಡಬೇಕಾಗಿದೆ. ನಾವು ಹಕ್ಕುದಾರರೂ ಹೊಣೆಗಾರರೂ ಆಗಿರುವ ಚರಿತ್ರೆ ಮತ್ತು ಸಂಸ್ಕೃತಿಗಳು ವಾಸ್ತವವಾಗಿ ನಮ್ಮೆಲ್ಲರದ್ದೂ ಆಗಿರದೆ ಕೆಲವರ ಹೊಣೆ ಮತ್ತು ಹೊರೆಗಳನ್ನು ಎಲ್ಲರೂ ತಮ್ಮದೆಂದು ಹೊರುತ್ತಿರುವ ಬಗೆ ಢಾಳಾಗಿ ಕಾಣತೊಡಗಿತು. ಇದೆಲ್ಲವೂ ಮೊದಲಾದದ್ದು ಸಚಿವ ಬಿ.ಬಸವಲಿಂಗಪ್ಪನವರು ರಾಜ್ಯದಲ್ಲಿ ಮಲಹೊರುವ ಪದ್ಧತಿಯನ್ನು ಕಾನೂನಿನ ಮೂಲಕ ಬಹಿಷ್ಕರಿಸುವ ಯೋಜನೆಯನ್ನು ಕೈಗೊಂಡಾಗ. ಹಾಗೆ ಮಲಹೊರುವ ಪದ್ಧತಿಯನ್ನು ಮುಂದುವರೆಸುವುದು ಅಪರಾಧವೆಂದು ಹೇಳುವ ಕಾನೂನು ಜಾರಿಗೆ ಬಂತಷ್ಟೆ ಈ ಕಾನೂನಿನ ಪರಿಣಾಮವಾಗಿ ಸಾಮಾಜಿಕ ಪಲ್ಲಟಗಳು ಮೊದಲಾದವು. ಈ ಪಲ್ಲಟಗಳು ನೇರವಾಗಿ ಈ ಕಾನೂನಿನ ಗುರಿಯಾಗಿದ್ದ ಅನಿಷ್ಟ ಪದ್ಧತಿಯೊಂದಕ್ಕೆ ಮಾತ್ರ ತಳುಕು ಹಾಕಿಕೊಂಡಿರಲಿಲ್ಲ. ದಲಿತರು ಹೊರುತ್ತಿದ್ದುದು ಸಮಾಜದ ತ್ಯಾಜ್ಯವನ್ನು. ಈ ಕಾನೂನು ಬದಲು ದಾರಿಯಿಂದ ಹೇಳಿದ್ದೇನು? ದಲಿತರು ತಮ್ಮದಲ್ಲದ ಹಾಗೂ ಇತರರು ತ್ಯಾಜ್ಯವೆಂದು ತಿಳಿದ ಪಾರಂಪರಿಕ ನೆಲೆಗಳಿಗೆ, ಹೊರೆಗಳಿಗೆ ಹಕ್ಕುದಾರರೂ ಅಲ್ಲ; ಹೊಣೆಗಾರರೂ ಅಲ್ಲವೆಂದು ಹೇಳಿದಂತಾಯ್ತು. ಅಲ್ಲವೆ? ಇದರ ಪರಿಣಾಮದಿಂದಾಗಿ ಕನ್ನಡ ಸಮಾಜದಲ್ಲಿ ಉಂಟಾದ ತಿಕ್ಕಾಟಗಳನ್ನು ನೋಡಿ. ಈ ಕಾನೂನು ಜಾರಿಯಾಗಿದ್ದು ಒಂದು ಸಂದರ್ಭವನ್ನು ಹುಟ್ಟುಹಾಕಿತು. ಆದರೆ ಒಳಗಿದ್ದ ಒಡಕುಗಳು ಆಗಲೇ ಹೇಳಿದಂತೆ ಹೊರಗೆ ಕಾಣತೊಡಗಿದ್ದರಿಂದ ತಿಕ್ಕಾಟಗಳು ಮೊದಲಾದವು. ಸಾಮಾಜಿಕವಾಗಿ ನಾವು ಕಲ್ಪಿಸಿಕೊಂಡಿದ್ದ ನಂಟಿನ ಜಾಲ ಹುಸಿಯಾಗಿತ್ತು. ಒಳಗಿನ ಹುನ್ನಾರಗಳು ಎದ್ದು ಕಾಣತೊಡಗಿದವು. ಕೆರೆ ಮೈದೆರೆದಾಗ ಏನೆಲ್ಲ ಕಾಣುವುದೋ ಅದು ಮೊದಲೇ ಅಲ್ಲಿ ಇದ್ದುದು ತಾನೆ. ಈ ಮಾತು ನಮಗಿಲ್ಲಿ ಮುಖ್ಯ. ಏಕೆಂದರೆ ಕನ್ನಡ ನುಡಿಯೂ ಕೂಡ ನಾವು ಅವರೆಗೆ ತಿಳಿದಂತೆ ಎಲ್ಲರ ಕನ್ನಡವಾಗಿರುವ ಬದಲು ಕೆಲವರ ಕನ್ನಡವೇ ಎಲ್ಲರ ಕನ್ನಡವೆಂದು ಸೋಗು ತೊಟ್ಟಿತ್ತೆಂಬುದು ಈಗ ಕಣ್ಣಿಗೆ ರಾಚತೊಡಗಿತ್ತು. ಇದೆಲ್ಲದರ ಹಿಂದಿನ ಸಾಂಸ್ಕೃತಿಕ ರಾಜಕಾರಣವನ್ನು ಸರಿಯಾದ ನಿಟ್ಟಿನಲ್ಲಿ ಅರಿಯುವುದು ಇಂದಿನ ಅಗತ್ಯವಾಗಿದೆ. ಕಳೆದ ಇಪ್ಪತ್ತು ವರುಷಗಳಿಂದ ಬರೆದದ್ದರಲ್ಲಿ ನಾನು ಈ ನೆಲೆಯಲ್ಲಿ ಹೆಜ್ಜೆಗಳನ್ನು ಇಡಲು ಬಯಸಿದ್ದೇನೆಂದು ತೋರುತ್ತಿದೆ.

ಕನ್ನಡ ಬದುಕು ವ್ಯಕ್ತಿಗಳನ್ನು ಅತಿಯಾಗಿ ಹಚ್ಚಿಕೊಳ್ಳುತ್ತದೆ. ಏನನ್ನೇ ಆಗಲಿ ಅದನ್ನು ಯಾರು ಹೇಳಿದರು ಎಂಬುದು ಮುಖ್ಯವಾಗುತ್ತದೆಯೇ ಹೊರತು ಹೇಳಿದ್ದು ಏನು ಎಂಬುದು ಹಿಂದಕ್ಕೆ ಸರಿಯುತ್ತದೆ. ಇದನ್ನು ಕರ್ತೃವನ್ನು ಕಟ್ಟಿಕೊಳ್ಳುವುದು ಎಂದು ಬೇರೆಲ್ಲೋ ಕರೆದಿದ್ದೇನೆ. ಮಾಡಿದ ಕೆಲಸಗಳು ಹಿಂದಕ್ಕೆ ಸರಿದು, ಅದನ್ನು ಮಾಡಿದವರು ಕರ್ತೃಗಳಾಗಿ ಬಿಡುತ್ತಾರೆ. ಇದರಲ್ಲಿ ತಪ್ಪೇನೂ ಇಲ್ಲವಾದರೂ ಕೆಲವೊಮ್ಮೆ ಹೀಗೆ ಕರ್ತೃತ್ವ ದೊರಕಿದ ಮೇಲೆ ವ್ಯಕ್ತಿಗಳ ಎಲ್ಲ ಕೆಲಸಗಳಿಗೂ ಕನ್ನಡ ಬದುಕು ಹೆಚ್ಚಿನ ಮನ್ನಣೆಯನ್ನು ನೀಡ ತೊಡಗುತ್ತದೆ. ಇದೊಂದು ಅಪಾಯಕಾರಿ ಸ್ಥಿತಿ ಎಂದೇ ನನ್ನ ತಿಳುವಳಿಕೆ. ಈ ಅಪಾಯಗಳಿಗೆ ತುತ್ತಾದ

ಜೀವನಕ್ರಮಗಳು ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ನಾವು ಕಂಡಿದ್ದೇವೆ. ಪ್ರಜಾಪ್ರಭುತ್ವವನ್ನು ಒಪ್ಪಿ ಆಚರಿಸಹೊರಡುವವರು ಇದರಿಂದ ಕಲಿಯಬೇಕಾದ ಪಾಠ ಇದೆ. ಈ ಮಾತನ್ನು ಇಲ್ಲಿ ಹೇಳಿದ್ದಕ್ಕೆ ಕಾರಣಗಳಿವೆ. ಏಕೆಂದರೆ ಈಗ ನಮ್ಮ ತಿಳಿವಿನ ಬದುಕು ಒಂದು ಬಿಕ್ಕಟ್ಟಿನಲ್ಲಿದೆ. ಕರ್ತೃತ್ವ ಪಡೆದವರು–ಅವರು ಸಾಹಿತಿಗಳಾಗಿರಲಿ, ರಾಜಕಾರಣಿಗಳಾಗಿರಲಿ, ಸಂಸ್ಕೃತಿ ಚಿಂತಕರಾಗಿರಲಿ, ಉದ್ಯಮಿಗಳಾಗಿರಲಿ, ದರೋಡೆಕೋರರಿರಲಿ, ಮಾಫಿಯಾ ದೊರೆಗಳಿರಲಿ ಮತ್ತೇನೋ ಆಗಿರಲಿ ಅವರು ನುಡಿದದ್ದು ಮತ್ತು ಬರೆದದ್ದು ಮನ್ನಣೆಯನ್ನು ಪಡೆದುಬಿಡುತ್ತದೆ. ಆದರೆ ಅಪಾಯದ ಮೊಳಗು ಬೇರೆಲ್ಲೋ ಇದೆ. ಏಕೆಂದರೆ ಈಗ ಮಾತಾಡುವವರ ಎದುರು ಜನರಿಲ್ಲ; ಕನ್ನಡಿಗಳಿವೆ. ಬರೆಯುವವರು ಈಗ ಏಕಾಂತ ಮತ್ತು ಮೌನದ ಸಾಹಚರ್ಯವನ್ನು ಪಡೆದಿಲ್ಲ; ಅವರ ಕಣ್ಣು ಕಿವಿಗಳಿಗೆ ಜನರ ಸಂದಣಿ ಮತ್ತು ಮೊಳಗುಗಳು ಕೇಳುತ್ತಿವೆ. ಇದನ್ನೇ ನಾನು ಅಪಾಯಕಾರಿ ಅವಸ್ಥೆ ಎಂದು ನಾನು ತಿಳಿದಿರುವೆ. ಈಗ ನುಡಿದದ್ದು ಬರೆದದ್ದು ಚಲಾವಣೆಯ ನಾಣ್ಯಗಳಾಗದೆ ತಿಜೋರಿಯಲ್ಲಿ ಭದ್ರವಾಗ ತೊಡಗುತ್ತವೆ. ಕನ್ನಡ ಬದುಕು ಎದುರಿಸುತ್ತಿರುವ ಈ ಬಿಕ್ಕಟ್ಟನ್ನು ಚಿಕ್ಕವರು ತಿಳಿಯತೊಡಗಿದ್ದಾರೆ. ಹೊರಬರಲು ದಾರಿಗಳಿಗಾಗಿ ತಡಕಾಡುತ್ತಿದ್ದಾರೆ. ಇಂತಹ ಹೊತ್ತಿನಲ್ಲಿ ಈ ಬರಹಗಳು ಮತ್ತೊಮ್ಮೆ ಒಗ್ಗೂಡಿ ಅಚ್ಚಾಗುತ್ತಿವೆ. ಇವು ಚಲಾವಣೆಗೆ ಬರುತ್ತವೋ ಇಲ್ಲವೇ ತಿಜೋರಿಯಲ್ಲಿ ಕೊಳೆಯುತ್ತವೋ ಕಾಯ್ದು ನೋಡಬೇಕು.

ಈ ಬರಹಗಳು ಸುಮಾರು ನಲವತ್ತು ವರುಷಗಳ ಹರಹಿನಲ್ಲಿ ಮೈತಳೆದಿವೆ. ಇದೇ ಕಾರಣವಾಗಿ ಬರಹಗಳ ಮಂಡನೆಯ ಬಗೆಯಲ್ಲಿ ಹಲವು ದಾರಿಗಳು ಕಾಣುವುದು ಸಹಜವೇ ಆಗಿದೆ. ಕೆಲವೊಮ್ಮೆ ಯಾವುದೋ ಪೂರ್ವಪಕ್ಷವನ್ನು ಊಹಿಸಿಕೊಂಡು ಉತ್ತರಕೊಡುವ ನೆಲೆ ಕಂಡು ಬಂದರೆ, ಮತ್ತೆ ಕೆಲವೊಮ್ಮೆ ಹೊಸದನ್ನು ಹೇಳಲೇಬೇಕೆಂಬ ಹಂಬಲವೇ ಮೆರೆಯುತ್ತಿರುವಂತೆ ತೋರಬಹುದು. ಮತ್ತೆ ಕೆಲವು ಬರಹಗಳು ಒಮ್ಮೆ ಹೇಳಿದ್ದನ್ನೆ ಬೇರೆ ಮಾತುಗಳಲ್ಲಿ ಮತ್ತೊಮ್ಮೆ ಹೇಳುವಂತೆಯೂ ಇವೆ. ಬಳಸುವ ಭಾಷೆಯೂ ಕೂಡ ಹೀಗೆ ಏರುಪೇರಿನಿಂದ ಕೂಡಿದೆ. ಎಷ್ಟು ಬೇಕೋ ಅಷ್ಟು ಮಾತ್ರ (ಕೆಲವೊಮ್ಮೆ ಬೇಕಾದ್ದಕ್ಕಿಂತಲೂ ಕಡಿಮೆ) ಹೇಳುವ ನೆಲೆ ಕಂಡು ಬಂದರೆ ಮತ್ತೆ ಕೆಲವೊಮ್ಮೆ ಒಪ್ಪಿಸುವ ಹಠದಿಂದ ಹರಡಿಕೊಂಡ ಬಗೆಯ ಮಂಡನೆ ಕಾಣುವುದೂ ಉಂಟು. ಅಲ್ಲಲ್ಲಿ ಪ್ರವಾದಿತನದ ಸೋಗು ಕೂಡ ನುಸುಳಿದ್ದರೆ ಅಚ್ಚರಿಯಿಲ್ಲ. ಅಲ್ಲದೆ ಈ ಬರಹಗಳನ್ನು ಅವುಗಳನ್ನು ಬರೆದ ಕಾಲಕ್ಕೆ ಅನುಗುಣವಾಗಿ ಜೋಡಿಸಿಲ್ಲ. ಇದರಿಂದಲೂ ಇವುಗಳ ನಂಟು ಮತ್ತಷ್ಟು ಜಟಿಲವಾಗಿರಲೂಬಹುದು. ಹೀಗೆ ಮಾಡುವುದಲ್ಲದೆ ನನಗೆ ಬೇರೆ ದಾರಿ ಇರಲಿಲ್ಲ. ಬೇರೆಯವರು ಬರೆದ ಕೆಲವು ಬರಹಗಳನ್ನು ಕನ್ನಡದ ಸಂದರ್ಭದಲ್ಲಿ ಓದುವುದು ಅಗತ್ಯ ಎಂದು ತಿಳಿದದ್ದರಿಂದ ಅಂತಹ ಮೂರ್‍ನಾಲ್ಕರ ಅನುವಾದ ರೂಪಗಳನ್ನು ಇಲ್ಲಿ ಉಳಿಸಿಕೊಂಡಿದ್ದೇನೆ

ಇನ್ನು ಈ ಒಗ್ಗೂಡಿಸಿದ ಹೊತ್ತಗೆಗಳಿಗೆ 'ತೊಂಡುಮೇವು' ಎಂದು ಹೆಸರಿಟ್ಟುದೇಕೆ? ಹೆಸರಿಸುವಾಗ ಹುಬ್ಬುಗಂಟಿಕ್ಕುವಂತೆ ಇರಬಾರದು ಎಂಬುದು ಮೊದಲ ಮಾತು. ಅಲ್ಲದೆ ನಿಡುಗಾಲದಿಂದ ಬೇಂದ್ರೆಯವರ ಕವಿತೆಯ ಸಾಲೊಂದು ನನ್ನ ಬೆನ್ನೇರಿದೆ. ಅವರ ನಭೋವಾಣಿ ಸಂಕಲನದ 'ನವ ವಿಸರ್ಗ' ಕವಿತೆಯ ಸಾಲುಗಳಿವು. **'ನಕ್ಷೆಯನು ಹಿಡಿದು ತಡಕಾಡಬೇಡ ನಕ್ಷತ್ರ ಮಾರ್ಗವನ್ನು/ ತೊಂಡುಮೇವರಿಗೆ ಹಾದಿ ಕೇಳದಿರು, ಹತ್ತು ದುರ್ಗವನ್ನು'**. ಈ ಸಾಲುಗಳಲ್ಲಿದ್ದ ತೊಂಡುಮೇ(ಯು) ಎಂಬ ಕೆಲಸಪದ ನನ್ನನ್ನು ಕಾಡುತ್ತಿದೆ. ಇದರ ತಿರುಳೇನಾದರೂ ಇರಲಿ. ತೊಂಡುಮೇ(ಯು) ಎಂಬ ಈ ಕೆಲಸಪದವನ್ನು ಹೆಸರುಪದವನ್ನಾಗಿ ಇಲ್ಲಿ ಬದಲಿಸಿಕೊಂಡು ತೊಂಡುಮೇವು ಎಂದು ಮಾಡಿಕೊಂಡದ್ದಕ್ಕೂ ಕಾರಣಗಳಿವೆ. ಬೇಂದ್ರೆಯವರು ದುರ್ಗ ಹತ್ತುವವರಿಗೆ ಅವರ ಹಾದಿಯನ್ನು ಅವರೇ ಕಂಡುಕೊಳ್ಳಬೇಕೆಂದೂ, ಅಲ್ಲಲ್ಲಿ ತೊಂಡುಮೇವರು ಇದ್ದರೂ ಅಂತಹವರಲ್ಲಿ ಹಾದಿ ಕೇಳುವುದು ಬೇಡವೆಂದೂ ಹೇಳಿದ್ದಾರೆ. ಮೊದಲ ಸಾಲಿನಲ್ಲಿ ನಕ್ಷತ್ರ ಮಾರ್ಗ ಮತ್ತು ನಕ್ಷೆಗಳಿಗೆ ಇರುವ ನಂಟನ್ನು ಹೇಳಿದ್ದಾರಷ್ಟೆ. ಕವಿ ನೀಡುವ ಎಚ್ಚರಿಕೆಯೇ ನಮ್ಮ ಬದುಕಿನ ಒಂದು ವಿಪರ್ಯಾಸವನ್ನು ಹೇಳುವಂತಿದೆ. ನೀವು ನಕ್ಷೆಯನ್ನೂ ತೊರೆಯಲಾರಿರಿ; ತೊಂಡುಮೇವರನ್ನೂ ಕಡೆಗಣಿಸಲಾರಿರಿ. ಅವು ನಮ್ಮೊಡನೆ ಇರುವಂತಹವೇ ಆಗಿವೆ. ನಮ್ಮೆಲ್ಲರ ಬರಹಗಳು ಹೀಗೆ ನಕ್ಷೆಗಳೋ ತೊಂಡುಮೇವರು ತೋರಿಸುವ ಪರಿಚಿತ ಒಳದಾರಿಗಳೋ ಆಗಿದ್ದರಬಹುದು. ಅಲ್ಲವೇ? ಹಾಗಾಗಿ ಈ ಬರಹಗಳನ್ನು ತೊಂಡುಮೇವು ಎಂದು ಕರೆಯಲು ಮುಂದಾದೆ.

ಇದೂ ಅಲ್ಲದೆ ನನ್ನ ಹಾಗೆ ನನ್ನ ಹಲವು ಸರೀಕರ ಹುಡುಕಾಟವೂ ಒಂದು ಗೊತ್ತಾದ ಕಣ್ಣುಕಟ್ಟಿದ ಹಾದಿಯಲ್ಲಿ ಸಾಗಿಲ್ಲ. ಹೀಗೆ ಸಿಕ್ಕಿದಕಡೆಗೆ ನುಗ್ಗಿ ಸಿಕ್ಕಿದ್ದನ್ನು ತಿಂದು, ಸಿಕ್ಕಿಬಿದ್ದರೆ ಒದೆ ತಿಂದು ಸಾಗಿ ಬಂದಿದ್ದೇವೆ. ಇದು ನಮ್ಮ ಆಯ್ಕೆಯಾಗಿತ್ತೋ ಅಥವಾ ಇದನ್ನು ನಮ್ಮ ಆಯ್ಕೆಯನ್ನಾಗಿ ಮಾಡಿಕೊಳ್ಳುವ ಒತ್ತಾಯವಿತ್ತೋ ಎಂಬುದನ್ನು ಕಡ್ಡಿ ಮುರಿದಂತೆ ಹೇಳಲಾರೆ. ಆದರೆ ಈ ಹಾದಿಯ ಏರುಪೇರುಗಳೇನೇ ಇರಲಿ, ಸಾಗಿಬಂದಾಗ ದೊರಕಿದ ಉಲ್ಲಾಸವನ್ನು ನಿರಾಕರಿಸುವುದು ಆಗದ ಮಾತು. ಈ ಕಾರಣದಿಂದಲೂ ಈ ಎಲ್ಲ ಬರಹಗಳ ಕಟ್ಟಿಗೆ **ತೊಂಡುಮೇವು** ಎಂದು ಹೆಸರಿಸಲು ಹಿಂಜರಿಕೆ ಉಂಟಾಗಿಲ್ಲ.

ಕೈಮುಗಿವೆ

ಎಷ್ಟುಜನರಿಗೆ ಕೈಮುಗಿಯುವುದು? ಯಾರನ್ನು ಬಿಟ್ಟರೂ ಈ ಬೈರೇಗೌಡರನ್ನು ಮಾತ್ರ ಬಿಡುವಂತಿಲ್ಲ. ಇವರು ಅದು ಹೇಗೆ ನನಗೆ ಬಲ್ಲವರಾದರೋ ತಿಳಿಯದು. ಮುಗಿಬಿದ್ದು ಮೈದುಂಬಿದಂತೆ ಈ ಕೆಲಸ ಮಾಡಿದ್ದಾರೆ. ಈ ಬರಹಗಳನ್ನು ನಾನು ಒಗ್ಗೂಡಿಸಿ ಕೊಡಲಿಲ್ಲ. ಎಲ್ಲೆಲ್ಲಿಂದಲೋ, ಯಾರು ಯಾರಿಂದಲೋ ತಾವೇ ಹುಡುಕಿ ಜೋಡಿಸಿಕೊಂಡಿದ್ದಾರೆ. ಕೆಲವನ್ನು ಕಸದ ಬುಟ್ಟಿಯಿಂದಲೂ

ತೆಗೆದಿರಬೇಕು.(ಅಂತಹವು ಅಲ್ಲೇ ಇರಬೇಕಿತ್ತು ಎಂದು ಓದುವ ನಿಮ್ಮಲ್ಲಿ ಕೆಲವರಿಗಾದರೂ ಅನ್ನಿಸೀತು) ಈ ಒತ್ತಾಸೆ ಯಾರಿಗೆ ದೊರಕುತ್ತದೆ? ಅವರಿಗೆ ಶರಣು ಎಂದು ಕೈಮುಗಿಯುತ್ತೇನೆ. ಇನ್ನು ತಂಪು ಹೊತ್ತಿನಲ್ಲಿ ನೆನೆಯಬೇಕಾದವರ ಪಟ್ಟಿ ಬಲು ದೊಡ್ಡದು. ಅವರನ್ನು ಹೆಸರಿಸಿದರೆ ಕೆಲವರಿಗೆ ಮುಜುಗರ, ಕೆಲವರಿಗೆ ಕೋಪ, ಕೆಲವರಿಗೆ ನಗು ಮತ್ತು ಕೆಲವರು ನನ್ನೊಡನೆ ಮಾತು ಬಿಟ್ಟರೂ ಬಿಟ್ಟರೆ. ಹೀಗೆ ಬಗೆಬಗೆಯಲ್ಲಿ ಅವರು ಪ್ರತಿಕ್ರಿಯೆ ತೋರುತ್ತಾರೆ. ಅವರೆಲ್ಲರೂ ನನ್ನೊಳಗೆ ಇದ್ದಾರಾಗಿ ಬೇರೆಯಾಗಿ ಅವರನ್ನು ಹೆಸರಿಸುವುದನ್ನೇ ಕೈಬಿಟ್ಟಿದ್ದೇನೆ.

ಆದರೆ ಎರಡು ಸಂಸ್ಥೆಗಳನ್ನು ಹೆಸರಿಸಲೇ ಬೇಕು. ನಾನು ಬರೆಯಲು ಕಾರಣವಾದದ್ದು ಬೆಂಗಳೂರು ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರ ಮತ್ತು ಕನ್ನಡ ವಿಶ್ವವಿದ್ಯಾಲಯ. ಇವೆರಡೂ ಸಂಸ್ಥೆಗಳು ಬರೆಯಲು ಒತ್ತಾಸೆ ನೀಡಿದ್ದು ಮಾತ್ರವಲ್ಲದೆ ಬರಹಕ್ಕೆ ಯಾವ ಕಡಿವಾಣವನ್ನೂ ಹಾಕಲಿಲ್ಲ ಎಂಬುದನ್ನು ನೆನೆದುಕೊಳ್ಳಬೇಕು. ಪ್ರಜಾವಾಣಿ, ಉದಯವಾಣಿ, ವಿಜಯ ಕರ್ನಾಟಕ, ಸುಧಾ, ತರಂಗ, ವಿಕ್ರಾಂತ ಕರ್ನಾಟಕ, ಮಯೂರ, ಸಾಕ್ಷಿ, ಅಂಕಣ, ಸಂಚಯ, ಶೂದ್ರ, (ಈ ಪತ್ರಿಕೆಯ ಸಂಪಾದಕರಾದ ಹೆಸರಾಂತ ಗೆಳೆಯ ಶ್ರೀನಿವಾಸ್ ಅವರನ್ನು ಹೆಚ್ಚಾಗಿ ನೆನೆಯಬೇಕು. ಕುತ್ತಿಗೆಯ ಮೇಲೆ ಕುಳಿತು ಬರೆಸಿದ್ದು ಮಾತ್ರವಲ್ಲದೆ ಅವುಗಳನ್ನು ತಮ್ಮದೇ ಆದ ಬಗೆಯಲ್ಲಿ ಅಚ್ಚು ಮಾಡಿ ಹಲವು ಬಾರಿ ನನಗೇ ಗಾಬರಿಯಾಗುವಂತೆ ಮಾಡಿದ್ದಾರೆ. ಆ ಪುರಾಣ ಬೇರೊಮ್ಮೆ ಹೇಳುವೆ.) ರುಜುವಾತು, ಸಮುದಾಯ ವಾರ್ತಾಪತ್ರ, ಮುಕ್ತ ಹೀಗೆ ಹಲವು ಪತ್ರಿಕೆಗಳ ಗೆಳೆಯರು ಇಲ್ಲಿನ ಹಲವು ಬರಹಗಳಿಗೆ ಮತ್ತು ಅವು ಬೆಳಕು ಕಾಣುವುದಕ್ಕೆ ಕಾರಣರಾಗಿದ್ದಾರೆ.

ಬಿ ರಿಪೋರ್ಟ್ನ ಹಿಂದಕ್ಕೆ ಪಡೆದ ಈ ಹಳೆಯ ಕೇಸುಗಳನ್ನು ನೀವೀಗ ಮರುಪರಿಶೀಲನೆಗೆ ಗುರಿಪಡಿಸಿರಿ. ಈ ಬರಹಗಳಲ್ಲಿ ಕೆಲವಾದರೂ ಚಿಕ್ಕವರಲ್ಲಿ ಚರ್ಚೆಗೆ ಕಾರಣವಾದರೆ ಅದಕ್ಕಿಂತ ಸಂತಸ ನನಗೆ ಬೇರೊಂದಿಲ್ಲ. ಮೆಚ್ಚುಗೆ, ಹೊಗಳಿಕೆ ನಾನು ಅಷ್ಟು ಪಡುವುದಿಲ್ಲ. ಯಾರೋ ಎಲ್ಲೋ ಹೇಳಿದ ಮಾತನ್ನು ನೆನೆಯುವುದಾದರೆ ಹೊಗಳಿಕೆ ಪೂಸಿಕೊಳ್ಳುವ ಡಿಯೋಡರೆಂಟ್ ಇದ್ದಹಾಗೆ. ಈ ಪೂಸಿಕೊಂಡದ್ದು ದಿಟವನ್ನು ಮರೆ ಮಾಡಿಹುಸಿಯನ್ನು ಮುಂಚೂಣಿಗೆ ತಂದು ಬಿಡುತ್ತದೆ ಅಲ್ಲವೇ? ಇನ್ನು ಎಲ್ಲವೂ ನಿಮಗೆ ಸೇರಿದ್ದು.

ಕೆ.ವಿ. ನಾರಾಯಣ

ತೊಂಡುಮೇವು ಕಂತೆಗಳ ಹೊರೆಹೊತ್ತು...

ಮೂರು ವರ್ಷಗಳ ಹಿಂದಿನ ಮಾತು. ಕೆ.ವಿ.ಎನ್. ಮೇಷ್ಟ್ರು ಮೈಸೂರಿನಲ್ಲಿದ್ದರು. ಸಕಲ ಪುರಾತನರೆಂದು ನಾವೆಲ್ಲ ಪ್ರೀತಿಯಿಂದ ಕರೆಯುವ ಪ್ರೊ. ಶಿವರಾಮಯ್ಯ, ಯಂಗ್‌ರುದ್ರ ಎಂದೇ ಖ್ಯಾತಿ ಪಡೆದ ಕೆ.ವೈ.ಎನ್. ಮತ್ತು ನಾನು ಮೂವರೂ ಕೂಡಿ ಡಾ. ಎಲ್. ಬಸವರಾಜು ಅವರನ್ನು ಪಂಪನ ಆದಿಪುರಾಣ ಪುಸ್ತಕ ಬಿಡುಗಡೆಗೆ ಆಮಂತ್ರಿಸಲು ಹೋಗಿದ್ದಾಗ ಕೆ.ವಿ.ಎನ್. ಮೇಷ್ಟ್ರ ಮನೆಗೂ ಭೇಟಿ ನೀಡಿದೆವು. ಕೆ.ವಿ.ಎನ್. ಬರವಣಿಗೆಯನ್ನು ಒಂದು ಕಡೆ ತಂದರೆ! ಬಯಕೆಯನ್ನು ಹತ್ತಿಕ್ಕಲಾರದೆ ಕೇಳಿಯೇಬಿಟ್ಟೆ. ನೋಡುವ ಎಂದಷ್ಟೇ ಕೆ.ವಿ.ಎನ್. ಹೇಳಿದರು. ಮೈಸೂರಿಗೆ ಹೋದಾಗಲೆಲ್ಲ ಸಿ.ಐ.ಐ.ಎಲ್.ನಲ್ಲಿ ಮೇಷ್ಟ್ರನ್ನ ಭೇಟಿಯಾಗುತ್ತಿದ್ದೆ. ಅಲ್ಲಿಯೂ ಪ್ರಕಟಣೆಯ ವಿಷಯ ಮಾತನಾಡಲು ಸಾಧ್ಯವಾಗಲೇ ಇಲ್ಲ. ಮತ್ತೊಮ್ಮೆ ಮೇಷ್ಟ್ರ ಮನೆಗೆ ಡಾ. ಶಿವಪ್ಪ ಅವರೊಡನೆ ಹೋದಾಗ ಪಟ್ಟುಬಿಡದೆ, ಸರ್ ನಿಮ್ಮೆಲ್ಲ ಬರವಣಿಗೆಯನ್ನು ಒಂದೆಡೆ ಕಲೆಹಾಕಿ ತರೋಣ, ಒಪ್ಪಿಗೆ ಕೊಡಿ ಎಂದು ದುಂಬಾಲು ಬಿದ್ದೆ. ಹಸಿರು ನಿಶಾನೆ ತೋರಿದರು. ಈ ಕಾರ್ಯಕ್ಕೆ ಒತ್ತಾಸೆಯಾಗಿ ನಿಂತವರು ಶ್ರೀಮತಿ ಮೇಡಂ. ಕೆ.ವಿ.ಎನ್. ಮೇಷ್ಟ್ರು, ಶ್ರೀಮತಿ ಮೇಡಂ ಇಬ್ಬರಿಗೂ ಅನಂತಾನಂತ ನಮನಗಳು.

ಡಾ. ಕೆ.ವೈ.ಎನ್., ಪ್ರೊ. ಶಿವಪ್ಪ ಮುಂತಾದವರು ಸೇರಿ ವಿವೇಕ ಬಳಗದ ಮೂಲಕ ಪ್ರಕಟಿಸಿದ್ದ ಬೇರು ಕಾಂಡ ಚಿಗುರು ಪುಸ್ತಕದ ಅಕ್ಷರ ಜೋಡಣೆಯಾಯ್ತು. ಸಂಚಯದ ಡಿ.ವಿ. ಪ್ರಹ್ಲಾದ್, ಪುಸ್ತಕ ಮನೆ ಖ್ಯಾತಿಯ ಚಿಂತಕ ಹರಿಹರಪ್ರಿಯ, ಶೂದ್ರ ಪತ್ರಿಕೆಯ ಶ್ರೀನಿವಾಸ್, ಅನ್ವೇಷಣ ಪತ್ರಿಕೆಯ ಆರ್.ಜಿ. ಹಳ್ಳಿ ನಾಗರಾಜ್ ಅವರ ಮನೆಗಳಲ್ಲಿದ್ದ ಅಂಕಣ, ಶೂದ್ರ, ಸಂಚಯ, ಮುಕ್ತ, ಸಮುದಾಯ ವಾರ್ತಾಪತ್ರ ಹೀಗೆ ಹಲವು ಮೂಲಗಳಿಂದ ಕೆ.ವಿ.ಎನ್. ಬರೆಹಗಳನ್ನು ಕಲೆಹಾಕಿದ್ದಾಯ್ತು. ಮೇಲೆ ಹೆಸರಿಸಿರುವ ಎಲ್ಲ ಮಹನೀಯರಿಗೂ ನಮಸ್ಕಾರಗಳು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ. ಅಶೋಕ ಕುಮಾರ್ ರಂಜರೆ, ಡಾ. ಪಿ. ಮಹಾದೇವಯ್ಯ, ಡಾ. ಸುಜ್ಞಾನಮೂರ್ತಿ, ರವೀಂದ್ರ, ರಾಜಶೇಖರ್, ಶಿವಮೊಗ್ಗದ ಡಿ.ಎಸ್. ನಾಗಭೂಷಣ, ಬೆಂಗಳೂರಿನ

ಡಾ. ಬಸವರಾಜ ಕಲ್ಗುಡಿ, ಎಂ.ಎಸ್. ಆಶಾದೇವಿ, –ಹೀಗೆ ತೊಂಡುಮೇವು ಸಂಪುಟಗಳು ರೂಪಗೊಳ್ಳುವಲ್ಲಿ ನೆರವಾದವರು ಅನೇಕರು. ಅಭಿನವ ರವಿಕುಮಾರ್ ಧ್ವನ್ಯಾಲೋಕ ಮತ್ತು ಅಂಕೆ ತಪ್ಪಿದ ಆರ್ಥರೋ ಊಯಿ ಕೃತಿಗಳ ಸಾಫ್ಟ್ ಮತ್ತು ಹಾರ್ಡ್ ಕಾಪಿ ನೀಡಿ ಸಹಕರಿಸಿದರು. ಎಲ್ಲರನ್ನೂ ಗೌರವದಿಂದ ಸ್ಮರಿಸುವೆ.

ಡಾ. ಸಿ.ಪಿ. ನಾಗರಾಜ್, ಡಾ. ರಾಮಲಿಂಗಪ್ಪ ಟಿ. ಬೇಗೂರು, ಡಾ. ರಂಗನಾಥ ಕಂಟನಕುಂಟೆ, ಶ್ರೀ ಜಯಶಂಕರ್, ಪ್ರದೀಪ್ ಮಾಲ್ಗುಡಿ, ಬ್ರಹ್ಮಾನಂದ್ ಇವರೆಲ್ಲರೂ ಕರಡು ತಿದ್ದುವಲ್ಲಿ ನೆರವಾಗಿದ್ದಾರೆ. ಅವರ ಸೇವೆಯನ್ನು ಕೃತಜ್ಞತಾಪೂರ್ವಕ ಸ್ಮರಿಸುತ್ತೇನೆ.

ಕಳೆದ ಎರಡು ತಿಂಗಳುಗಳಿಂದ ಬೇರೆಲ್ಲಾ ಕೆಲಸಗಳನ್ನೂ ಬದಿಗಿಟ್ಟು ಒಂದು ವ್ರತದಂತೆ ನನ್ನೊಡನೆ ತೊಡಗಿಸಿಕೊಂಡಿರುವ ಡಾ. ಆರ್. ಚಲಪತಿ ಅವರಿಗೆ ಹೇಗೆ ಕೃತಜ್ಞತೆ ಸಲ್ಲಿಸಲಿ?

ಕೆ.ವಿ.ಎನ್. ಅವರ ತೊಂಡುಮೇವು ಸರಣಿಗೆ ಮುಖಪುಟ ಬರೆದ ಸುಧಾಕರ ದರ್ಬೆ, ಡಿ.ಟಿ.ಪಿ. ಮಾಡಿದ ಬಿ.ಕೆ. ಶೋಭಾರಾಣಿ, ಮಂಗಲಾ ಗಣೇಶ್, ಸವಿತಾ, ಜೋಸ್ಪಿನ್, ಸಿಸಿಲಿಯಾ ಎಲ್ಲರನ್ನು ನೆನೆವೆ. ಮುದ್ರಣ ಕಾರ್ಯದ ಜವಾಬ್ದಾರಿ ಹೊತ್ತ ವಿಶ್ವಾಸ್ ಪ್ರಿಂಟ್ಸ್ ಮತ್ತು ಸ್ನೇಹ ಪ್ರಿಂಟ್ಸ್ ಮಾಲೀಕರಾದ ಟಿ.ಎಲ್. ವೆಂಕಟೇಶ ಮತ್ತು ಮಂಜುನಾಥ್. ಡಿ.ಟಿ.ಪಿ. ವಿಭಾಗದ ಪೂರ್ಣಿಮಾ, ಎ. ರಾಜ್ ಇವರುಗಳ ಸಹಕಾರವನ್ನು ಸ್ಮರಿಸದಿರಲಾರೆ.

ಕೆ.ವಿ.ಎನ್. ಅವರ ಈವರೆಗಿನ ಬರೆಹಗಳನ್ನು ಒಂದೆಡೆ ಕಲೆಹಾಕಿ ತೊಂಡುಮೇವು ಹೆಸರಿನಲ್ಲಿ ಒಂಬತ್ತು ಕಂತೆಗಳನ್ನು ಕಟ್ಟಿಕೊಟ್ಟಿದ್ದೇನೆಂಬ ಹೆಮ್ಮೆ ನನ್ನದು. ನನ್ನ ಸಂತೋಷಕ್ಕೆ ಕಾರಣರಾದ ಎಲ್ಲರಿಗೂ ಕೃತಜ್ಞನಾಗಿದ್ದೇನೆ.

ಎಂ. ಬೈರೇಗೌಡ

ಪರಿಷ್ಕೃತ ಮುದ್ರಣ ಕುರಿತು

ತೊಂಡು ಮೇವು ಎಂಬ ಹೆಸರಿನಲ್ಲಿ ಬರಹಗಳ ಒಂಬತ್ತು ಸಂಪುಟಗಳನ್ನು 2010ರಲ್ಲಿ ಹೊರತರಲಾಗಿತ್ತು. ಈಗ ಹತ್ತನೆಯ ಸಂಪುಟವನ್ನು ನಿಮ್ಮ ಮುಂದೆ ಇಡಲಾಗುತ್ತಿದೆ. ಜೊತೆಗೆ ಹಿಂದಿನ ಒಂಬತ್ತು ಸಂಪುಟಗಳನ್ನು ಕೊಂಚ ಬದಲಾವಣೆಗಳೊಂದಿಗೆ ಮತ್ತೆ ಅಚ್ಚು ಮಾಡಿ ಪ್ರಕಟಿಸಲಾಗುತ್ತಿದೆ. ಈ ಹತ್ತು ವರುಶಗಳಲ್ಲಿ ಆಗಿರುವ ಬದಲಾವಣೆಯೊಂದಿದೆ. ಆಗ ಅಲ್ಲಿಯವರೆಗೆ ಬರೆದಿದ್ದರ ಬಗೆಗೆ ನಂಬಿಕೆ ಕಡಿಮೆಯಾಗಿತ್ತು. ಈಗ ಬರೆಯುವುದರ ಬಗೆಗೇ ನಂಬಿಕೆ ಕಡಿಮೆಯಾಗಿದೆ. ಇದು ಸಿನಿಕತನವೆಂದು ಅನಿಸಲೂಬಹುದು. ಆದರೆ ನನಗೆ ಹಾಗನ್ನಿಸುತ್ತಿಲ್ಲ. ಬರವಣಿಗೆಯನ್ನು ಅದರ ತಾಳಿಕೆಯ ಗುಣಕ್ಕಾಗಿಯೇ ಒಪ್ಪಿಕೊಳ್ಳುವ ಕಾಲವೊಂದಿತ್ತು. ಈಗ ಹಾಗಿಲ್ಲ. ಬರೆದದ್ದು ಮಾತಿನಂತೆಯೇ ಹುಟ್ಟಿದ ಕೂಡಲೇ ಸಾಯುತ್ತಿದೆ. ಎಷ್ಟೋ ವೇಳೆಯಲ್ಲಿ ಯಾರಿಗಾಗಿ ಬರೆದದ್ದೋ ಅವರಿಗೆ ತಲುಪುವ ಹೊತ್ತಿಗೆ ಅದರ ಚಹರೆಗಳು ಬದಲಾಗಿಬಿಡುತ್ತಿವೆ. ಇದೆಲ್ಲವನ್ನೂ ಕಂಡರೆ ಬರವಣಿಗೆಗೆ ಒಂದು ಹೆಚ್ಚಿನ ಮನ್ನಣೆ ಇದೆಯೆಂದು ಈಗ ನನಗೆ ತೋರುತ್ತಿಲ್ಲ.

ಅಲ್ಲದೆ ಬರೆಯುವುದರ ಗುರಿಯೇ ಮಾತಿಗೆಳೆಯುವುದು; ಸಂವಾದವನ್ನು ಹುಟ್ಟಿಹಾಕುವುದು. ಈ ನಂಬಿಕೆ ಕೂಡ ಈಗ ಇಲ್ಲವಾಗುತ್ತಿದೆ. ಎದುರು ನಿಲುವುಗಳಿಗೆ ಮಾತುಕತೆಗಳಲ್ಲಿ ಜಾಗವಿರುತ್ತದೆ. ಅವು ಒಪ್ಪದಿರುವ, ಮೆಚ್ಚದ ಮಾತುಗಳನ್ನೂ ಕೇಳಲು ಹಿಂಜರಿಯುವುದಿಲ್ಲ. ಹಾಗೆಯೇ ಎಲ್ಲರೂ ಒಪ್ಪುವ ಇಲ್ಲವೇ ಮೆಚ್ಚುಮಾತುಗಳನ್ನೇ ಆಡಬೇಕೆಂಬ ಹಪಾಹಪಿ ಇರುವುದಿಲ್ಲ. ಈಗ ಹಾಗಿದೆ ಎಂದು ನನಗೆ ಅನ್ನಿಸುತ್ತಿಲ್ಲ. ಎಲ್ಲರೂ ಒಪ್ಪುವುದನ್ನೆ, ಮೆಚ್ಚುವುದನ್ನೇ ಬರೆಯುವ ತವಕವಿದೆ. ಹಾಗೆಯೇ ಓದುವವರೂ ತಮಗೆ ಒಪ್ಪಿಗೆ ಆಗುವುದನ್ನೇ ಓದಲು ಮುಂದಾಗುತ್ತಿದ್ದಾರೆ. ನನ್ನ ಈ ಮಾತುಗಳಿಗೆ ಬುಡವಿಲ್ಲವೆಂದು ಕೆಲವರಿಗೆ ಅನ್ನಿಸಲೂಬಹುದು. ಸರಿಯೇ ಸರಿ. ಆದರೆ ಈ ಬಿಕ್ಕಟ್ಟು ನನ್ನ ತಿಳಿವಿನ ನೆಲೆಗೆ ಬಂದಿದ್ದರಲ್ಲಿ ಸಟೆಯಿಲ್ಲ.

ಇಂತಹ ಹೊತ್ತಿನಲ್ಲಿ ತೊಂಡುಮೇವು ಬರಹಗಳು ಮತ್ತೆ ಅಚ್ಚಾಗುತ್ತಿರುವುದು, ಹತ್ತು ವರುಶಗಳಿಂದ ಈಚೆಗೆ ಬರೆದದ್ದು ಇನ್ನೊಂದು ಕಂತೆಯಾಗಿ ಮೈದಳೆಯುತ್ತಿರುವುದು ಮುಜುಗರದ ಸಂಗತಿಯೇ ಸರಿ. ಆದರೆ ಗೆಳೆಯ ಡಾ. ಬೈರೇಗೌಡರು ಈ ಕೆಲಸಕ್ಕೆ ಮುಂದಾಗಿದ್ದಾರೆ. ಅವರಿಗೆ ಒಳಿತಾಗಲಿ ಎಂದು ಕೋರುವುದಷ್ಟೇ ನನ್ನ ಕೆಲಸ.

ಕೆ.ವಿ. ನಾರಾಯಣ

ಪರಿವಿಡಿ

ಕಂತೆ ಏಳು

ಏಕೀಕರಣದ ಹೊತ್ತಿನಲ್ಲಿ ಕನ್ನಡದ ಸ್ವರೂಪ

1

ಹಿನ್ನೆಲೆ

1947ರಲ್ಲಿ ಬ್ರಿಟಿಶರು ತಮ್ಮ ಆಳ್ವಿಕೆಯನ್ನು ಕೊನೆಗೊಳಿಸಿ ಸ್ಥಳೀಯ ಆಡಳಿತ ವರ್ಗಕ್ಕೆ ಅಧಿಕಾರವನ್ನು ಹಸ್ತಾಂತರಿಸಿದರು. ಈ ದೇಶೀಯ ಆಡಳಿತ ವರ್ಗವು ಈಗಾಗಲೇ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಕೆಲವು ಮಿತಿಗಳಲ್ಲಿ ಆಡಳಿತವನ್ನು ನಡೆಸುತ್ತಿತ್ತು. ಆದರೆ ಆಗ ಬ್ರಿಟಿಶ್ ಸಂವಿಧಾನ ಮತ್ತು ಪಾರ್ಲಿಮೆಂಟ್‌ಗಳು ಆಡಳಿತಾತ್ಮಕ ನಿರ್ಧಾರಗಳನ್ನು ನಿರ್ವಹಿಸುತ್ತಿದ್ದವು. ಆದರೆ ಸ್ವತಂತ್ರವಾಗಿ ತಾವೇ ಆಡಳಿತ ಮಾಡಬೇಕಾಗಿ ಬಂದ ಈ ದೇಶೀಯ ಆಡಳಿತ ವರ್ಗದ ಎದುರು ಹಲವು ಮುಖ್ಯ ಪ್ರಶ್ನೆಗಳು ನಿಂತವು. ಅವುಗಳಲ್ಲಿ ಸ್ವತಂತ್ರ ಸಂವಿಧಾನವನ್ನು ರೂಪಿಸುವುದು ಒಂದು ಪ್ರಶ್ನೆಯಾದರೆ, ಭಾರತವನ್ನು ಆಡಳಿತದ ದೃಷ್ಟಿಯಿಂದ ಹಲವು ಘಟಕಗಳನ್ನಾಗಿ ಹೇಗೆ ವಿಂಗಡಿಸುವುದು ಎಂಬುದು ಇನ್ನೊಂದು ಪ್ರಶ್ನೆ. ಮೊದಲನೆಯ ಪ್ರಶ್ನೆಯನ್ನು ನಿವಾರಿಸಿಕೊಳ್ಳಲು ಸಂವಿಧಾನ ರಚನೆಗಾಗಿ ಒಂದು ಸಮಿತಿಯನ್ನು ರೂಪಿಸಿದವು. ಎರಡನೆಯ ಪ್ರಶ್ನೆ ಸರಳವಾಗಿರಲಿಲ್ಲ. ಭಾರತವನ್ನು ಏಕಘಟಕೀಯ ರಾಷ್ಟ್ರವನ್ನಾಗಿ ಕಲ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಹಾಗಾಗಿ ಅದನ್ನು ಆಡಳಿತಾತ್ಮಕವಾಗಿ ಹಲವು ಘಟಕಗಳನ್ನಾಗಿ ವಿಭಜಿಸುವುದು ಅಗತ್ಯವಾಗಿತ್ತು. ಈ ದೇಶವು ಚರಿತ್ರೆಯ ನೆಲೆಯಲ್ಲಿ, ಭಾಷೆಯ ನೆಲೆಯಲ್ಲಿ, ಸಂಸ್ಕೃತಿಯ ನೆಲೆಯಲ್ಲಿ, ಸಂಪನ್ಮೂಲಗಳ ನೆಲೆಯಲ್ಲಿ ವೈವಿಧ್ಯವನ್ನು, ಬಹುಳತೆಯನ್ನು ಪಡೆದಿತ್ತು. ಅದನ್ನು ಒಂದೇ ಕೇಂದ್ರದ ಆಡಳಿತಕ್ಕೆ ಒಳಪಡಿಸುವುದು ಅಸಾಧ್ಯವಾಗಿತ್ತು. ಅದನ್ನು ಸೂಕ್ತವಾದ ರೀತಿಯಲ್ಲಿ ವಿಂಗಡಿಸಿಕೊಳ್ಳುವುದು ಅವಶ್ಯಕವಾಗಿತ್ತು. ಅಲ್ಲದೆ ಬ್ರಿಟಿಶರು ಅಧಿಕಾರ ಹಸ್ತಾಂತರ ಮಾಡಿದ ಸಂದರ್ಭದಲ್ಲಿ ಈ ಭೂಪ್ರದೇಶವು ರಾಜಕೀಯವಾಗಿ ಈಗಾಗಲೇ ಹಲವು ರೀತಿಗಳಲ್ಲಿ ವಿಭಜನೆಯಾಗಿತ್ತು. ಬ್ರಿಟಿಶರು ಕೆಲವೆಡೆ ನೇರ ಆಡಳಿತ ನಡೆಸುತ್ತಿದ್ದರು. ಆ ಪ್ರದೇಶಗಳು ಅವರ ಪ್ರೆಸಿಡೆನ್ಸಿಗಳಾಗಿದ್ದವು. ಒಂದು ಕಡೆ ಸ್ಥಾನಿಕ ರಾಜರುಗಳ ಮೂಲಕ ಬ್ರಿಟಿಶರು ತಮ್ಮ ರೆಸಿಡೆಂಟ್‌ಗಳನ್ನು ಇರಿಸಿ ಆಡಳಿತ ನಡೆಸುತ್ತಿದ್ದ ಪ್ರದೇಶಗಳು ಇದ್ದವು. ಅಲ್ಲದೆ ಸ್ವತಂತ್ರವಾಗಿ ಆಡಳಿತ ನಡೆಸುತ್ತಿದ್ದರೂ ಬ್ರಿಟಿಶರಿಗೆ ಅಧೀನರಾಗಿದ್ದ ಪ್ರದೇಶಗಳು ಮತ್ತೊಂದು ಕಡೆ ಇದ್ದವು. ಇದಲ್ಲದೆ ಫ್ರೆಂಚ್ ಮತ್ತು ಪೋರ್ಚುಗೀಸ್ ವಸಾಹತುಗಳು ಅಷ್ಟಿಷ್ಟು ಪ್ರಮಾಣದಲ್ಲಿ ಇದ್ದವು. ಈ ಬಗೆಯಲ್ಲಿ ವಿಭಜನೆಗೊಂಡಿದ್ದ

ಭಾರತವನ್ನು ಈಗಿರುವಂತೆ ಆಳುವುದು ಕೂಡಾ ಅಸಾಧ್ಯವಾಗಿತ್ತು. ಏಕೆಂದರೆ ಈ ಆಡಳಿತ ವಲಯಗಳ ವಿಸ್ತಾರದಲ್ಲಿ ಹಲವು ಅತಿರೇಕಗಳಿದ್ದವು. ಕೆಲವು ಸಾವಿರ ಮಂದಿಗಳಿಗೆ ಸೀಮಿತವಾಗಿದ್ದ ರಾಜ್ಯಗಳಿಂದ ಹಿಡಿದು ಹಲವು ಕೋಟಿ ಜನರಿದ್ದ ರಾಜ್ಯಗಳು ಇದ್ದವು. ಅಲ್ಲದೆ ಹೀಗೆ ವಿಭಜನೆಗೊಳ್ಳಲು ಆಯಾಕಾಲದ ಹಲವು ರಾಜಕೀಯ ಪರಿಸ್ಥಿತಿಗಳು ಕಾರಣವಾಗಿದ್ದವು. ಹೊಸ ಪರಿಸ್ಥಿತಿಯಲ್ಲಿ ಅಂದಂದಿನ ಆ ಪ್ರದೇಶಗಳನ್ನು ಒಂದೇ ಘಟಕಗಳನ್ನಾಗಿ ಉಳಿಸಲು ಕಾರಣಗಳಿರಲಿಲ್ಲ.

ಇದರೊಡನೆ ಇನ್ನೊಂದು ಮುಖ್ಯ ಸಂಗತಿಯು ಗಮನಿಸಲು ತಕ್ಕುದಾಗಿದೆ. ಬ್ರಿಟಿಶರ ಆಳ್ವಿಕೆಯಿಂದ ಹೊರಬರಬೇಕೆಂದು ಹೋರಾಟ ನಡೆಸುತ್ತಿದ್ದ ಜನರಲ್ಲಿ ಹಲವು ಬಗೆಯವರಿದ್ದರು. ಭಾರತದ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವ ಮತ್ತು ಅದಕ್ಕಾಗಿ ಸಾಧನೆ ಮಾಡುತ್ತಿದ್ದ ಜನರು ಒಂದು ಕಡೆ; ಭಾರತದ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಪ್ರಾಂತೀಯವಾದ ಸಾಂಸ್ಕೃತಿಕ ಘಟಕಗಳ ನಿರ್ಮಾಣಕ್ಕೆ ಒತ್ತಾಯ ಮಾಡುತ್ತಿದ್ದ ಜನರು ಇನ್ನೊಂದು ಕಡೆ; ಇವರಲ್ಲದೆ ಬ್ರಿಟಿಶ್ ಆಡಳಿತದಿಂದ ಹೊರಬಂದು ತಾವೇ ಸ್ವತಂತ್ರ ಆಡಳಿತಾಧಿಕಾರಿಗಳಾಗಬೇಕೆಂದು ಕನಸು ಕಾಣುತ್ತಿದ್ದ ಸ್ಥಾನೀಯ ರಾಜರುಗಳು ಮತ್ತೊಂದು ಕಡೆ ಇದ್ದರು. ಇವರಲ್ಲಿ ಮೊದಲನೆಯವರ ಆಸೆ ಪರಿಪೂರ್ಣಗೊಳ್ಳುವಂತಿರಲಿಲ್ಲ. ಭಾರತ ಸಾರ್ವಭೌಮವಾದರೂ ಒಂದು ಏಕ ಘಟಕವಾಗಿ ಆಡಳಿತ ನಿರ್ವಹಿಸುವುದು ಅಸಾಧ್ಯವಾಗಿತ್ತು. ಮೂರನೇ ಗುಂಪಿನ ಆಶೋತ್ತರಗಳು ನುಚ್ಚುನೂರಾದವು. ಭಾರತ ಸರ್ಕಾರ ಕೈಗೊಂಡ ಆಡಳಿತಾತ್ಮಕ ಕ್ರಮಗಳಿಂದಾಗಿ ಸ್ವಾಯತ್ತಗೊಳ್ಳಬೇಕೆಂದು ಬಯಸಿದ ಸಾಂಸ್ಥಿಕ ರಾಜರುಗಳು ಈ ಆಡಳಿತಾತ್ಮಕ ಘಟಕದೊಳಗೆ ಸೇರುವುದು ಅನಿವಾರ್ಯವಾಗಿತ್ತು. ಇನ್ನು ಎರಡನೇ ಗುಂಪಿನವರ ಆಶೋತ್ತರಗಳು ಆಡಳಿತ ವರ್ಗದ ಅಪೇಕ್ಷೆಗಳಿಗೆ ಅನುಕೂಲವಾಗಿಯೇ ಇದ್ದವು. ಅಂದರೆ ಭಾರತವನ್ನು ಒಂದು ರಾಷ್ಟ್ರವನ್ನಾಗಿ ಉಳಿಸಿಕೊಂಡು ಅದರೊಳಗೆ ಹಲವು ರಾಜ್ಯಗಳನ್ನು ನಿರ್ಮಿಸಿಕೊಳ್ಳಬೇಕು ಎಂಬುದು ಆಡಳಿತವರ್ಗದ ಆಸಕ್ತಿಯಾಗಿದ್ದಂತೆ ಈ ಎರಡನೇ ಗುಂಪಿನ ಜನರ ಬಯಕೆಯೂ ಆಗಿತ್ತು. ಹೀಗೆ ಆಳುವ ವರ್ಗ ಮತ್ತು ಜನರ ಒಂದು ಗುಂಪಿನ ಅಪೇಕ್ಷೆಗಳು ಒಂದಾಗಿ ಭಾರತವನ್ನು ಹಲವು ರಾಜ್ಯಗಳ ಒಕ್ಕೂಟವನ್ನಾಗಿ ರೂಪಿಸುವ ಯತ್ನ ಮೊದಲಾಯಿತು. ಈ ಪ್ರಯತ್ನವು ಅಧಿಕಾರ ಹಸ್ತಾಂತರದ ಅನಂತರವೇ ಮೊದಲಾಯಿತು ಎಂದು ತಿಳಿಯುವಂತಿಲ್ಲ. ಅದಕ್ಕೂ ಮೊದಲಿಂದಲೇ ಕಾಂಗ್ರೆಸ್ ಅಧಿವೇಶನಗಳಲ್ಲಿ ಈ ಬಗೆಗೆ ಅನೌಪಚಾರಿಕವಾಗಿ ಚರ್ಚಿಸಿದ್ದರೆ, ಮತ್ತೆ ಕೆಲವು ಬಾರಿ ಅಧಿಕೃತ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿತ್ತು.

ಹೀಗೆ ಭಾರತವನ್ನು ಆಡಳಿತಾತ್ಮಕ ಘಟಕಗಳನ್ನಾಗಿ ವಿಭಜಿಸುವಾಗ ಯಾವ ಮಾನದಂಡವನ್ನು ಇರಿಸಿಕೊಳ್ಳಬೇಕು ಎಂಬುದು ಮುಂದಿನ ಪ್ರಶ್ನೆಯಾಗಿತ್ತು. ಇಲ್ಲಿ ಹಲವು ಸಾಧ್ಯತೆಗಳಿದ್ದವು. ಚಾರಿತ್ರಿಕವಾಗಿ ಕೆಲವು ಸೂಚನೆಗಳನ್ನು ಪಡೆಯುವುದು ಸಾಧ್ಯವಿತ್ತು. ನೈಸರ್ಗಿಕವಾಗಿ ಬೃಹತ್ ಪರ್ವತಶ್ರೇಣಿಗಳು, ನದಿಗಳು ಈ ರಾಷ್ಟ್ರವನ್ನು ಹಲವು ಬಗೆಗಳಲ್ಲಿ ವಿಭಜಿಸಿದ್ದವು. ಸಂಪನ್ಮೂಲಗಳ ಹಂಚಿಕೆಯನ್ನು ಮತ್ತು ಅಭಿವೃದ್ಧಿಯ

ಗತಿಶೀಲತೆಯನ್ನು ಆಧರಿಸಿ ವಿಭಜಿಸುವ ಅವಕಾಶಗಳಿದ್ದವು. ಅಲ್ಲದೆ ಸಾಂಸ್ಕೃತಿಕ ನೆಲೆಯನ್ನು ಆಧರಿಸಿ ವಿಭಜಿಸುವ ಸಾಧ್ಯತೆಯೂ ಒಂದಿತ್ತು. ಇವೆಲ್ಲದರ ಜೊತೆಗೆ ಭಾಷೆಗಳನ್ನು ಆಧರಿಸಿ ಭಾರತವನ್ನು ಹಲವು ರಾಜ್ಯಗಳ ಒಕ್ಕೂಟವನ್ನಾಗಿ ರೂಪಿಸುವುದು ಮತ್ತೊಂದು ಸಾಧ್ಯತೆಯಾಗಿತ್ತು. ಮೇಲೆ ಹೇಳಿದ ಬಿಡುಗಡೆಯ ಹೋರಾಟದ ಎರಡನೆಯ ಗುಂಪಿನ ಜನರು ತಮ್ಮ ಒಂದು ಕಾರ್ಯಸೂಚಿಯನ್ನಾಗಿ ಭಾಷಾಧಾರಿತ ರಾಜ್ಯಗಳ ನಿರ್ಮಾಣವನ್ನು ಕಾರ್ಯಕ್ರಮವನ್ನಾಗಿ ಇರಿಸಿಕೊಂಡಿದ್ದರು. ರಾಜ್ಯನಿರ್ಮಾಣ ಪ್ರಕ್ರಿಯೆ ಆಳುವ ವರ್ಗದಿಂದ ಮೊದಲಾದ ಕೂಡಲೇ ಇವರೆಲ್ಲರೂ ಭಾಷೆಗಳನ್ನು ನೆಲೆಯಾಗಿ ಇರಿಸಿಕೊಂಡೇ ರಾಜ್ಯಗಳನ್ನು ನಿರ್ಮಿಸಬೇಕೆಂದು ಒತ್ತಾಯ ಮಾಡತೊಡಗಿದರು. ಹೀಗೆ ಹಲವು ಆಯ್ಕೆಗಳು ತನ್ನ ಮುಂದಿದ್ದರೂ ಆಗ ಆಡಳಿತ ನಡೆಸುತ್ತಿದ್ದ ಸರ್ಕಾರ ಭಾಷೆಯನ್ನು ರಾಜ್ಯವಿಂಗಡಣೆಯ ಒಂದು ಪರಾಮರ್ಶನ ನೆಲೆಯನ್ನಾಗಿ ಇರಿಸಿಕೊಳ್ಳಲು ಸಮ್ಮತಿಯನ್ನು ನೀಡಿತು. ಆ ಹೊತ್ತಿಗೆ ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್ ಪಕ್ಷವು ತಾನೇ ಒಂದು ಸಮಿತಿಯನ್ನು ರಚಿಸಿ ಇಂತಹ ವಿಭಜನೆಯ ಸಾಧಕ ಬಾಧಕಗಳನ್ನು ವರದಿ ಮಾಡಲು ನಿಯುಕ್ತಗೊಳಿಸಿತು. ಈ ವರದಿಯ ಶಿಫಾರಸ್ಸುಗಳನ್ನು ಸರ್ಕಾರದ ಹಂತದಲ್ಲಿ ಚರ್ಚಿಸಿ ರಾಜ್ಯ ಪುನರ್‌ವಿಂಗಡನಾಆಯೋಗವನ್ನು ರಚಿಸುವುದು ಸರ್ಕಾರಕ್ಕೆ ಅನಿವಾರ್ಯವಾಗಿತ್ತು. ಭಾಷಾವಾರು ಪ್ರಾಂತ್ಯಗಳ ರಚನೆಗೆ ಒತ್ತಾಯಿಸುತ್ತಿದ್ದ ಚಳುವಳಿಗಳು ಬಹುಮಟ್ಟಿಗೆ ದಕ್ಷಿಣ ಭಾರತದಲ್ಲಿ ಇದ್ದವು ಎಂಬುದು ಗಮನಿಸಬೇಕಾದ ವಿಷಯ. ವಿಶಾಲಾಂಧ್ರ ನಿರ್ಮಾಣಕ್ಕೆ ನಡೆಯುತ್ತಿದ್ದ ಅಂತಹ ಒಂದು ಚಳುವಳಿಯ ಕಾರ್ಯಕ್ರಮದಲ್ಲಿ ಆಮರಣಾಂತ ಉಪವಾಸ ಕುಳಿತಿದ್ದ ಪೊಟ್ಟಿ ಶ್ರೀರಾಮುಲು ಅವರು ಜೀವತ್ಯಾಗ ಮಾಡಬೇಕಾಗಿ ಬಂದಿತ್ತು. ಇದು ದೆಹಲಿಯ ಆಡಳಿತದ ಮೇಲೆ ಪರಿಣಾಮ ಬೀರಿ, ಶೀಘ್ರ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸಿತು.

ಏಕೀಕರಣ : ಒಂದು ರಾಜಕೀಯ ನಿರ್ಧಾರ

ಭಾಷೆಗಳನ್ನು ಆಧರಿಸಿ ರಾಜ್ಯಗಳನ್ನು ನಿರ್ಮಿಸುವುದು ತಿಳಿದಷ್ಟು ಸರಳವಾಗಿರಲಿಲ್ಲ. ಮುಖ್ಯವಾಗಿ ಭಾರತದಲ್ಲಿ ಯಾವುದು ಸ್ವತಂತ್ರ ಭಾಷೆ. ಯಾವುದು ಅದರ ಪ್ರಭೇದ ಎಂಬುದನ್ನು ನಿರ್ಧರಿಸುವುದೇ ಕಷ್ಟವಾಗಿತ್ತು. ಭಾಷೆಗಳು ಎಷ್ಟಿವೆ ಎಂಬುದು ಗೊತ್ತಿರಲಿಲ್ಲ. ಆ ಹೊತ್ತಿಗೆ ಲಿಪಿ ಇದ್ದು ಬರೆವಣಿಗೆಯಲ್ಲಿ ಬಳಕೆಯಾಗುತ್ತಿದ್ದ ಮತ್ತು ಬೇರೆ ಬೇರೆ ಚಾರಿತ್ರಿಕ ಸಂದರ್ಭಗಳಲ್ಲಿ ಕೆಲವು ಆಡಳಿತ ಪ್ರದೇಶಗಳಲ್ಲಿ ಆಡಳಿತಭಾಷೆಯಾಗಿ ಬಳಕೆಯಾಗುತ್ತಿದ್ದ ಭಾಷೆಗಳು ಕೆಲವು ಇದ್ದವು. 1950ರ ಭಾರತ ಸಂವಿಧಾನವು ತನ್ನ 8ನೇ ಅನುಚ್ಛೇದದಲ್ಲಿ ಇಂತಹ ಕೆಲವು ಭಾಷೆಗಳನ್ನು ಪಟ್ಟಿ ಮಾಡಿ ಅವುಗಳನ್ನು ಅನುಸೂಚಿತ ಭಾಷೆಗಳೆಂದು ತೀರ್ಮಾನಿಸಿತು. ಭಾಷೆಗಳನ್ನು ಆಧರಿಸಿ ಪ್ರಾಂತಗಳನ್ನು ರಚಿಸಲು ಇದ್ದ ಇನ್ನೊಂದು ಸಮಸ್ಯೆಯೆಂದರೆ ಕೆಲವು ಭಾಷೆಗಳನ್ನು ಆಡುತ್ತಿದ್ದ ಜನರು ನಿರ್ದಿಷ್ಟ ಪ್ರಾಂತಗಳಿಗೆ ಸೀಮಿತಗೊಳ್ಳದೆ ದೇಶದ ಉದ್ದಗಲಕ್ಕೂ ಹರಡಿದ್ದರು. ಉದಾ.ಗೆ ಉರ್ದು ಭಾಷಿಕರು ಹಾಗೂ ಇನ್ನಿತರ ಕೆಲವು ಭಾಷೆಗಳನ್ನಾಡುವವರು

ಭಾರತದಲ್ಲಿ ಎಷ್ಟು ವಿಸ್ತಾರವಾದ ಪ್ರದೇಶಗಳಲ್ಲಿ ಹರಡಿ ಕೊಂಡಿದ್ದರೆಂದರೆ ಅವರನ್ನೆಲ್ಲಾ ಒಂದೇ ರಾಜ್ಯದಲ್ಲಿ ಇರಿಸುವುದು ಆಗದ ಮಾತಾಗಿತ್ತು. ಉದಾ.ಗೆ ಹಿಂದಿ ಭಾಷಿಕರು. ಏನೇ ಇರಲಿ. ಹೀಗೆ ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ಕಲ್ಪಿಸಿಕೊಂಡು ಅದನ್ನು ಒಂದು ಮುಖ್ಯ ಮಾನದಂಡವನ್ನಾಗಿ ಇರಿಸಿಕೊಳ್ಳಲು ರಾಜ್ಯ ಪುನರ್‌ವಿಂಗಡನಾ ಆಯೋಗಕ್ಕೆ ಸೂಚನೆ ನೀಡಲಾಗಿತ್ತು.

ಕರ್ನಾಟಕದ ನಿರ್ಮಾಣದ ಹಿಂದೆ ಈ ಎಲ್ಲಾ ಘಟನಾವಳಿಗಳೂ ಇವೆ ಎಂಬುದನ್ನು ಗಮನಿಸಬೇಕು. ಕನ್ನಡ ಮಾತನಾಡುವ ಜನರೆಲ್ಲರೂ ಒಂದೇ ಆಡಳಿತ ಪ್ರದೇಶಕ್ಕೆ ಒಳಪಡಬೇಕೆಂಬ ಅಪೇಕ್ಷೆ 19ನೇ ಶತಮಾನದ ಕೊನೆಕೊನೆಗೆ ತಲೆ ಎತ್ತಿತ್ತು. ಅದು 20ನೇ ಶತಮಾನದಲ್ಲಿ ಒಂದು ಚಳುವಳಿಯಾಗಿಯೂ ರೂಪು ಗೊಂಡಿತು. ಏಕೀಕರಣ ಚಳುವಳಿಯೆಂದು ಅದನ್ನು ಸಾಮಾನ್ಯವಾಗಿ ಗುರುತಿಸಲಾಗುತ್ತಿದೆ. ಬ್ರಿಟಿಶರು ಬಿಟ್ಟು ಹೋದ ಭಾರತದಲ್ಲಿ ಕನ್ನಡ ಮಾತನಾಡುವ ಜನರು ಹಲವು ಆಡಳಿತ ಪ್ರದೇಶಗಳಲ್ಲಿ ಹಂಚಿ ಹೋಗಿದ್ದರು. ಹಳೆಯ ಮೈಸೂರು ಎಂದು ಈಗ ಕರೆಯಲಾಗುತ್ತಿರುವ ಪ್ರದೇಶವು ರಾಜರ ಆಳ್ವಿಕೆಗೆ ಮತ್ತು ಬ್ರಿಟಿಶರ ಪರೋಕ್ಷ ಹಿಡಿತಕ್ಕೆ ಸಿಕ್ಕಿತ್ತು. ಬ್ರಿಟಿಶರ ಎರಡು ಪ್ರೆಸಿಡೆನ್ಸಿಗಳಲ್ಲಿ ಕೆಲವು ಪ್ರದೇಶಗಳಿದ್ದವು. ಹೈದರಾಬಾದ್‌ನ ನಿಜಾಮರ ಆಡಳಿತಕ್ಕೆ ಮತ್ತೆ ಕೆಲವು ಪ್ರದೇಶಗಳು ಸೇರಿದ್ದವು. ಇವಲ್ಲದೆ ಪಾಳೇಗಾರರು, ಸಂಸ್ಥಾನಿಕರು ಆಳುತ್ತಿದ್ದ ಚಿಕ್ಕಪುಟ್ಟ ರಾಜ್ಯಗಳು ಇದ್ದವು. ಕನ್ನಡ ಮಾತನಾಡುವ ಜನರನ್ನೆಲ್ಲ ಒಗ್ಗೂಡಿಸಿ ಒಂದು ರಾಜ್ಯವನ್ನು ನಿರ್ಮಿಸಬೇಕೆಂಬ ಚಳುವಳಿಯ ಅಪೇಕ್ಷೆ, ಮತ್ತು ಆಡಳಿತ ಭಾಗಗಳನ್ನು ರಚಿಸಬೇಕೆಂಬ ಭಾರತ ಸರ್ಕಾರದ ಕಾರ್ಯಯೋಜನೆ ಇವೆರಡೂ ಒಗ್ಗೂಡಿ 1956ರ ನವೆಂಬರ್ ಒಂದರಂದು ಈ ರಾಜ್ಯ ರಚನೆಯಾಗಿ ಅಧಿಕೃತವಾಗಿ ಮನ್ನಣೆ ಪಡೆಯಿತು. ಮೇಲು ನೋಟಕ್ಕೆ ಕನ್ನಡಿಗರ ಬಹು ದಶಕಗಳ ಅಪೇಕ್ಷೆಗಳು ಈ ಮೂಲಕ ಪೂರ್ಣಗೊಂಡಂತೆ ಅನಿಸಿದರೂ ವಾಸ್ತವವಾಗಿ ಇದೊಂದು ರಾಜಕೀಯ ನಿರ್ಧಾರವಾಗಿತ್ತು ಎಂಬುದನ್ನು ಮರೆಯುವಂತಿಲ್ಲ.

ಕನ್ನಡ ಮಾತನಾಡುವ ಜನರು ಒಂದು ಘಟಕವಾದರೆ, ಕನ್ನಡ ಮಾತಾಡುವ ಜನರು ಇರುವ ಭೂಪ್ರದೇಶ ಇನ್ನೊಂದು ಘಟಕ. ಇದಲ್ಲದೆ ಚಾರಿತ್ರಿಕವಾಗಿ ಕನ್ನಡ ಮಾತಾಡುತ್ತಿದ್ದ ಜನರು ಇದ್ದ ಪ್ರದೇಶ, ಮತ್ತು ಕನ್ನಡದ ಅರಸರು ಆಳ್ವಿಕೆ ನಡೆಸುತ್ತಿದ್ದ ಭೂಪ್ರದೇಶ ಎಂಬ ಘಟಕಗಳು ಸೇರಿಕೊಳ್ಳುತ್ತಿವೆ. ಏಕೀಕರಣದ ತಾತ್ವಿಕತೆಯಲ್ಲಿ ಕನ್ನಡಿಗರ ಒಗ್ಗೂಡುವಿಕೆಯ ಜೊತೆಗೆ ಭೂಪ್ರದೇಶದ ಕಲ್ಪನೆಯೂ ಸೇರಿಕೊಂಡಿತ್ತು. ಹಳೆಯ ಕಾವ್ಯಗಳನ್ನು ಚಾರಿತ್ರಿಕ ದಾಖಲೆಗಳನ್ನು ಉಲ್ಲೇಖಿಸಿ ಕನ್ನಡ ನಾಡಿನ ವ್ಯಾಪ್ತಿ ಎಷ್ಟಿತ್ತು ಎಂಬುದನ್ನು ಮೇಲಿಂದ ಮೇಲೆ ಜನರ ಗಮನಕ್ಕೆ ತರುವ ಯತ್ನಗಳು ನಡೆದಿವೆ. ಈ ಭೂಪ್ರದೇಶ ಮತ್ತು ಚಾರಿತ್ರಿಕವಾಗಿ ಕನ್ನಡದ ವ್ಯಾಪ್ತಿಯ ಪ್ರದೇಶ ಎಂದು ಹೇಳಿದರೂ, ವಾಸ್ತವವಾಗಿ ಅದು ಕನ್ನಡದ ಅರಸರ ಆಳ್ವಿಕೆಯ ಪ್ರದೇಶಗಳಾಗಿದ್ದವು. ಅಂದರೆ ಅಲ್ಲಿ ಕನ್ನಡ ಮತ್ತು ಇತರ ಭಾಷೆಗಳನ್ನಾಡುವ ಜನರು ವಾಸಿಸುತ್ತಿದ್ದರು. ಕೇವಲ ಕನ್ನಡವನ್ನಷ್ಟೇ ಮಾತನಾಡುವ ಸಮಾಜಗಳನ್ನಾಗಲೀ ಅವುಗಳು ನೆಲೆಸಿರುವ ನಿರ್ದಿಷ್ಟ

ಭೂಪ್ರದೇಶವನ್ನಾಗಲೀ ಕಲ್ಪಿಸುವುದು ಕಷ್ಟ. 20ನೇ ಶತಮಾನದ ನಡುಭಾಗದಲ್ಲಂತೂ ಇದು ಇನ್ನಷ್ಟು ಇಕ್ಕಟ್ಟುಗಳನ್ನು ರೂಪಿಸುವಂತಿತ್ತು. ಹೀಗಾಗಿ ಒಂದು ಹೊಸ ರಾಜ್ಯದ ನಿರ್ಮಿತಿಯಲ್ಲಿ ಕನ್ನಡ ಮಾತನಾಡುವವರು ನಿರ್ಮಿತವಾಗಿ, ಅವರ ಚಾರಿತ್ರಿಕ ವಿಸ್ತಾರಗಳು ಭೌಗೋಳಿಕವಾಗಿ ನೆಲೆಗೊಂಡ ಪ್ರದೇಶಗಳನ್ನು ಒಗ್ಗೂಡಿಸಬೇಕೆಂಬ ಆಸೆಯೇ ಏಕೀಕರಣದ ಹಿಂದಿನ ಒತ್ತಡವಾಗಿತ್ತು. ಇದು ಅಸಹಜವೇನೂ ಅಲ್ಲ. ಅದಕ್ಕಾಗಿ ಆ ಕಾಲದ ನಾಡಗೀತೆಗಳು ಭಾಷಾಭಿಮಾನವನ್ನು ಉಕ್ಕಿಸುವ ರಚನೆಯಾಗಿದ್ದವು. ಅವುಗಳಲ್ಲಿ ಮೇಲಿಂದ ಮೇಲೆ ಕನ್ನಡಿಗರ ಶೌರ್ಯ, ಹಿರಿಮೆ, ನಾಡಿನ ವಿಸ್ತಾರಗಳ ಉಲ್ಲೇಖ ಬರುತ್ತದೆ. ಅನಿವಾರ್ಯವೆಂಬಂತೆ ಮತ್ತೆ ಮತ್ತೆ ಕರ್ನಾಟಕದ ರಾಜಮನೆತನಗಳ ಹೆಸರುಗಳನ್ನು ಹೇಳಲಾಗುತ್ತದೆ. ಇವೆಲ್ಲವೂ ಕರ್ನಾಟಕದ ರಚನೆಯ ಹಿಂದೆ ಇದ್ದ ಒತ್ತಡಗಳನ್ನು ಹೊರಗಿಡುತ್ತವೆ. ಮೊದಲ ಕನ್ನಡ ರಾಜನೆಂದು ಕದಂಬ ವಂಶದ ಮಯೂರವರ್ಮನನ್ನು ಗುರುತಿಸುವುದು, ನಿಜವಾದ ಕರ್ನಾಟಕ ಸಾಮ್ರಾಜ್ಯ ಸ್ಥಾಪಕರು ವಿಜಯನಗರದ ಅರಸರುಗಳು ಆಗಿದ್ದರೆಂದು ಘೋಷಿಸುವುದು ಮೇಲೆ ಹೇಳಿದ ದೃಷ್ಟಿಕೋನಕ್ಕೆ ನಿದರ್ಶನಗಳು. 1936ರಲ್ಲಿ ವಿಜಯನಗರ ಸಂಸ್ಥಾಪನೆಯ ಆರನೇ ಶತಮಾನೋತ್ಸವ ಆಚರಣೆ ಸಂದರ್ಭದ ದಾಖಲೆಗಳನ್ನು ನೋಡಿದರೆ ಈ ಸಂಗತಿ ಮತ್ತಷ್ಟು ಸ್ಪಷ್ಟವಾಗುತ್ತದೆ. ಎಂದರೆ ಏಕೀಕರಣದ ಪರವಾಗಿದ್ದ ಜನರ ಮನಸ್ಸಿನಲ್ಲಿ ಚಾರಿತ್ರಿಕ ಮರುಗಳಿಕೆಯ ಉದ್ದೇಶ ಸ್ಪಷ್ಟವಾಗಿದೆ. ಮತ್ತು ಈ ಮರುಗಳಿಕೆಯೂ ಒಂದು ಪ್ರದೇಶದ ನೆಲೆಯಲ್ಲಿಯೇ ಕೆಲಸ ಮಾಡುತ್ತದೆ.

ಈ ಮಾತು ಇನ್ನಷ್ಟು ಚರ್ಚಿತವಾಗುವುದು ಅಗತ್ಯ. ಕನ್ನಡ ಮಾತಾಡುವವರೆಲ್ಲ ಒಂದು ಆಡಳಿತಕ್ಕೆ ಒಳಪಡುವುದು ಹಿಂದೆಯೂ ಆಗಿಲ್ಲ, ಈಗಲೂ ಆಗಿಲ್ಲ. ಮುಂದೆಯೂ ಆಗುವುದಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಮುಖ್ಯವಾಗಿ ಆರ್ಥಿಕ ಹಾಗೂ ಸಾಮಾಜಿಕ ಕಾರಣಗಳಿಂದ ಚಲನಶೀಲತೆಯನ್ನು ಪಡೆದ ಭಾಷಾಸಮುದಾಯಗಳು ಅಗತ್ಯ ಮತ್ತು ಅವಕಾಶಗಳನ್ನು ಅನುಸರಿಸಿ ಬೇರೆ ಬೇರೆ ಕಡೆಗಳಲ್ಲಿ ಹೋಗಿ ನೆಲೆಸುತ್ತವೆ. ಅವರು ಹೀಗೆ ನೆಲೆಸಿದ ಪ್ರದೇಶಗಳಲ್ಲಿ ತಮ್ಮ ಭಾಷಾಗುರುತುಗಳನ್ನು ಕಾಯ್ದುಕೊಳ್ಳಬಹುದು, ಇಲ್ಲವೇ ಕಳೆದುಕೊಳ್ಳಬಹುದು. ಹಲವು ಶತಮಾನಗಳ ಹಿಂದೆ ತಮಿಳುನಾಡಿನ ಮಧುರೆಗೆ ಹೋಗಿ ತಮಿಳು ಭಾಷಿಕರ ನಡುವೆ ನೆಲೆಸಿದ ಕನ್ನಡ ಭಾಷೆಯನ್ನಾಡುತ್ತಿದ್ದ ಚಿಕ್ಕ ವೃತ್ತಿಪರ ಸಮುದಾಯವೊಂದು ಹೇಗೆ ತನ್ನ ಭಾಷಾಗುರುತನ್ನು ಉಳಿಸಿಕೊಂಡಿದೆ ಎಂಬುದನ್ನು ಹಲವು ಅಧ್ಯಯನಗಳು ತೋರಿಸಿಕೊಟ್ಟಿವೆ. ಹೀಗೆ ನೆಲೆಸುವವರು ಈ ದೇಶದಲ್ಲಿ ಇರುವಂತೆ ಹಲವು ದೇಶಗಳಲ್ಲೂ ಹರಡಿ ಹೋಗಿದ್ದಾರೆ. ಆದ್ದರಿಂದ ಭಾಷಿಕ ಸಮುದಾಯ ಒಂದು ಭೌಗೋಳಿಕ ಪ್ರದೇಶದಲ್ಲಿ ಒಗ್ಗೂಡಿ ನೆಲೆಸುವುದು ಪೌರಸಮಾಜಗಳ ರಚನೆಯ ಈ ಕಾಲದಲ್ಲಿ ಊಹಿಸುವುದು ಸಾಧ್ಯವಿಲ್ಲ. ಉಳಿದಿರುವ ಮಾರ್ಗವೆಂದರೆ ಹೀಗೆ ರಚನೆಗೊಂಡ ರಾಜ್ಯಗಳಲ್ಲಿ ಬಹುಸಂಖ್ಯಾತರು ಕನ್ನಡ ಭಾಷಿಕರೇ ಆಗಿರಬೇಕು ಎಂದು ಕಲ್ಪಿಸುವುದು. ಬಹುಮಟ್ಟಿಗೆ ಈ ಲೆಕ್ಕಾಚಾರವನ್ನೇ ಆಧರಿಸಿ ಈ

ರಾಜ್ಯವನ್ನು ರಚಿಸಲಾಗಿದೆ. ಇಲ್ಲಿ ಕನ್ನಡವನ್ನು ಆಡುವವರ ಜೊತೆಗೆ ತಮಿಳು, ತೆಲುಗು, ಮಲೆಯಾಳಂ, ಉರ್ದು, ಮರಾಠಿ, ಕೊಂಕಣಿ, ತುಳು, ಕೊಡವ, ಕೊರಗ, ಲಂಬಾಣಿ ಹೀಗೆ ಹಲವು ಹತ್ತು ಭಾಷೆಗಳನ್ನಾಡುವ ಜನರು ವಾಸಿಸುತ್ತಿದ್ದಾರೆ. ಒಂದು ಭೂಪ್ರದೇಶವನ್ನು ಆಡಳಿತಾತ್ಮಕ ಘಟಕವನ್ನಾಗಿ ರಚಿಸುವಾಗ ಅಲ್ಲಿನ ಬಹುಸಂಖ್ಯಾತರ ಭಾಷೆಯನ್ನು ಆಧಾರವಾಗಿ ತೆಗೆದುಕೊಳ್ಳಬೇಕೆಂಬ ರಾಜಕೀಯ ನಿರ್ಧಾರವೊಂದು ಇಲ್ಲಿ ಕೆಲಸ ಮಾಡಿದೆ.

ಭಾಷಾವಾರು ಪ್ರಾಂತರಚನೆ ಆಗಿನ ಸರಕಾರದ ತಾತ್ಪೂರ್ವಿಕ ನಿರ್ಧಾರವಾಗಿತ್ತು ಎಂಬುದಕ್ಕೆ ಹಲವು ಪುರಾವೆಗಳು ಅನಂತರದ ಬೆಳವಣಿಗೆಗಳಲ್ಲಿ ಗೋಚರಿಸುತ್ತವೆ. 1956ರ ಅನಂತರದಲ್ಲಿ ಭಾರತ ಸರಕಾರವು ಮತ್ತೆ ರಾಜ್ಯಗಳನ್ನು ಮರುವಿಂಗಡಣೆ ಮಾಡಿದೆ. ಹೊಸರಾಜ್ಯಗಳು ರೂಪುಗೊಂಡಿವೆ. ಇವು ಹೊಸದಾಗಿ ಸೇರ್ಪಡೆಯಾದ ಭೂಭಾಗಗಳಲ್ಲ.(ಸಿಕ್ಕಿಂ ರಾಜ್ಯವನ್ನು ಹೊರತುಪಡಿಸಿ). ಹಿಂದೆ ಇದ್ದ ರಾಜ್ಯಗಳನ್ನೇ ಮರುರೂಪಿಸಿದ್ದರಿಂದ ನಿರ್ಮಾಣವಾದವು. ಈಶಾನ್ಯ ರಾಜ್ಯಗಳ ನಿರ್ಮಿತಿಯಲ್ಲಿ ಎಲ್ಲ ಕಡೆಯೂ ಭಾಷಾನೆಲೆಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಹಾಗೆ ತೆಗೆದುಕೊಳ್ಳುವುದು ಸಾಧ್ಯವೂ ಇರಲಿಲ್ಲ. ತೀರಾ ಈಚೆಗೆ ನಿರ್ಮಾಣವಾದ ಚತ್ತೀಸ್‌ಘಡ್ ಹಲವು ಬುಡಕಟ್ಟುಗಳ ಸಮೂಹವಾಗಿದ್ದು ಅಲ್ಲಿನ ರಾಜ್ಯಭಾಷೆ ಯಾವುದು ಎಂಬುದನ್ನು ನಿರ್ಧರಿಸುವುದು ಸುಲಭದ ಮಾತಾಗಿಲ್ಲ. ಈಶಾನ್ಯ ರಾಜ್ಯಗಳಲ್ಲಿ ಕೆಲವು (ಅರುಣಾಚಲ, ನಾಗಾಲ್ಯಾಂಡ್) ಇಂಗ್ಲಿಶ್ ಭಾಷೆಯನ್ನು ರಾಜ್ಯಭಾಷೆಯನ್ನಾಗಿ ಮಾಡಿಕೊಂಡಿವೆ. ಇಂಗ್ಲಿಶ್ ಅಲ್ಲಿನ ಜನರ ಮೊದಲ ಭಾಷೆಯಲ್ಲದಿದ್ದರೂ ಈ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ.

ಕನ್ನಡ, ಕರ್ನಾಟಕ ಮತ್ತು ಕನ್ನಡಿಗರು ಎಂಬ ಈ ಮೂರು ಪರಿಕಲ್ಪನೆಗಳು ಪರಸ್ಪರ ಬೆರೆತುಕೊಳ್ಳುವುದು ಕಷ್ಟವೇ. ಕನ್ನಡಿಗರು ಕನ್ನಡವಲ್ಲದೆ ಇತರ ಭಾಷೆಯನ್ನು ಕಲಿತು ಮಾತಾಡಬಹುದು. ಅಲ್ಲದೆ ಬೇರೆ ದೇಶದಲ್ಲಿ, ಪ್ರದೇಶದಲ್ಲಿ ವಾಸಮಾಡಬಹುದು. ಕನ್ನಡ ಮಾತ್ರ ಕರ್ನಾಟಕದ ಭಾಷೆಯಾಗಿ ಪರಿಗಣಿತವಾಗಲಾರದು. ಈಗಾಗಲೇ ಗಮನಿಸಿದಂತೆ ಆ ಭೂಪ್ರದೇಶದಲ್ಲಿ ಹಲವು ಭಾಷೆಗಳನ್ನು ಮಾತಾಡುವ ಜನರು ಇರುತ್ತಾರೆ. ಸದ್ಯ ಮೇಲೆ ಹೇಳಿದ ರಾಜಕೀಯ ನಿರ್ಧಾರದಂತೆ ಹೆಚ್ಚು ಸ್ಥಿರವಾಗಿರುವುದು ಭೌಗೋಳಿಕವಾದ ಪರಿಕಲ್ಪನೆ. ಅದು ಕರ್ನಾಟಕ. ಉಳಿದೆರಡು ಪರಿಕಲ್ಪನೆಗಳು ಸದಾ ಚಲನಶೀಲ. ಅವುಗಳು ದೇಶಬದ್ಧವಲ್ಲ.

ಈ ಹಿನ್ನೆಲೆಯಲ್ಲಿ 1956ರ ನವೆಂಬರ್ 1ರಂದು ರೂಪುಗೊಂಡ ಕರ್ನಾಟಕವನ್ನು ನಾವು ಪರಿಗಣಿಸಬೇಕು. ಈ ರಾಜ್ಯದ ಅಧಿಕೃತ ಭಾಷೆಯಾಗಿ ಕನ್ನಡವು ಸ್ಥಾನ ಪಡೆದಿದ್ದು ಸುಮಾರು ಏಳು ವರ್ಷಗಳ ಅನಂತರದಲ್ಲಿ. ಆದರೆ ಭಾವನಾತ್ಮಕವಾಗಿ ಈ ರಾಜ್ಯದ ನಿರ್ಮಾಣದ ಹಿಂದೆ ಕನ್ನಡ ಎಂಬ ಗುರುತು ಕೆಲಸ ಮಾಡಿದೆ ಎನ್ನುವುದು ಖಚಿತ. ಅದು ಬಹುಜನರ ನಂಬಿಕೆಯೂ ಆಗಿತ್ತು.

ಹೀಗೆ ಭೌಗೋಳಿಕವಾಗಿ ರೂಪುಗೊಂಡ ಕರ್ನಾಟಕದಲ್ಲಿ ಕನ್ನಡ ಭಾಷೆಯು ಕಳೆದ ಐವತ್ತು ವರ್ಷಗಳ ಅವಧಿಯಲ್ಲಿ ಏನೆಲ್ಲಾ ಪರಿವರ್ತನೆಗಳನ್ನು ಕಂಡಿದೆ ಎಂಬುದನ್ನು ಅಧ್ಯಯನ ಮಾಡುವುದು ಅಗತ್ಯ. ಯಾವುದೇ ಭಾಷೆಗೆ ಸಂಬಂಧಿಸಿದಂತೆ ಐವತ್ತು ವರ್ಷಗಳ ಅವಧಿ ತುಂಬಾ ಕಿರಿದಾದದ್ದು. ಕನ್ನಡ ನಮಗೆಲ್ಲಾ ತಿಳಿದಂತೆ ಸರಿಸುಮಾರು 20 ಶತಮಾನಗಳ ಬಳಕೆಯನ್ನು ಕಂಡಿರುವ ಭಾಷೆ. ಈ ಭಾಷೆಯಲ್ಲಿ ನಡೆದಿರುವ ಪರಿವರ್ತನೆಗಳು ಅಪಾರ. ಬಳಕೆ ಮತ್ತು ರಚನೆ ಈ ಎರಡು ನೆಲೆಗಳಲ್ಲಿಯೂ ಈ ಪರಿವರ್ತನೆಗಳು ನಡೆದಿವೆ. ಈ ದೀರ್ಘಾವಧಿಯ ಪರಿವರ್ತನೆಗಳ ಅಧ್ಯಯನ ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ನಡೆದಿದೆ. ಈ ಹಿನ್ನೆಲೆಯಲ್ಲಿ ಐವತ್ತು ವರ್ಷಗಳ ಕಿರು ಅವಧಿಯ ಪರಿವರ್ತನೆಗಳನ್ನು ಅಧ್ಯಯನ ಮಾಡಲು ಸಾಕಷ್ಟು ಬಲವಾದ ಸಮರ್ಥನೆಗಳು ಅಗತ್ಯ. ಅಂತಹ ಎರಡು ಸಮರ್ಥನೆಗಳನ್ನು ಮೊದಲು ಮಂಡಿಸುತ್ತೇನೆ.

1. ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಮತ್ತು ಆಧುನಿಕ ಜಗತ್ತಿನ ಒತ್ತಡಗಳಿಂದಾಗಿ ಈ ಭಾಷೆಯಲ್ಲಿ ಹಿಂದೆಂದೂ ಇಲ್ಲದಷ್ಟು ಪ್ರಮಾಣ ಮತ್ತು ವೇಗದಲ್ಲಿ ಬದಲಾವಣೆಗಳು ನಡೆಯುತ್ತಿವೆ. ಕಳೆದ ಐವತ್ತು ವರ್ಷಗಳು ಈ ಬಗೆಯ ಬದಲಾವಣೆಗಳಿಗೆ ಸಾಕ್ಷಿಯಾಗಿದೆ.

2. ಎರಡನೆಯ ಕಾರಣ ಇನ್ನೂ ಮುಖ್ಯವಾದದ್ದು. ಕಳೆದ 20 ಶತಮಾನಗಳಲ್ಲಿ ಕನ್ನಡ ಭಾಷೆಯಲ್ಲಿ ಆಗಿರುವ ಪರಿಣಾಮಗಳನ್ನು ಯೋಜಿತ ನೆಲೆಯ ಬದಲಾವಣೆಗಳು ಎಂದು ಹೇಳಲಾಗುವುದಿಲ್ಲ. ರಾಜಕೀಯ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಈ ಬದಲಾವಣೆಗಳು ಆ ಭಾಷೆಯಲ್ಲಿ ತಂತಾನೇ ಸಂಭವಿಸಿವೆ. ಅವುಗಳ ಮೇಲೆ ಭಾಷಿಕರಿಗೆ ಯಾವುದೇ ನಿಯಂತ್ರಣ ಇರಲಿಲ್ಲ. ಆದರೆ ಕರ್ನಾಟಕ ರಾಜ್ಯ ನಿರ್ಮಾಣಗೊಂಡ ಮೇಲೆ ಈ ಭಾಷೆಯಲ್ಲಿ ಯಾವ ಬಗೆಯ ಬೆಳವಣಿಗೆಗಳು ಆಗಬೇಕು ಎಂಬುದನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ವ್ಯವಸ್ಥೆಯೊಂದು ಇದೆ. ಸಾಮಾನ್ಯವಾಗಿ ಈ ವ್ಯವಸ್ಥೆಯನ್ನು ಸರಕಾರ ಎನ್ನಬಹುದಾದರೂ ಸರ್ಕಾರವೇ ನೇರವಾಗಿ ಬೆಳವಣಿಗೆಗಳಿಗೆ ತಕ್ಕ ನಿರೂಪಗಳನ್ನು ಸಿದ್ಧ ಮಾಡುತ್ತದೆ ಎಂದಲ್ಲ. ಆದರೆ ತನ್ನ ಭಾಷಾನೀತಿಯಿಂದಾಗಿ ಮತ್ತು ಆ ನೀತಿಯನ್ನು ಜಾರಿಗೊಳಿಸಲು ಸರಕಾರವೇ ರೂಪಿಸಿದ ಸಾಂಸ್ಥಿಕ ವ್ಯವಸ್ಥೆಗಳಿಂದಾಗಿ, ಈ ಬದಲಾವಣೆಗಳು ಜಾರಿಗೆ ಬರುತ್ತಿರುತ್ತವೆ. ಈ ಐವತ್ತು ವರ್ಷಗಳಲ್ಲಿ ಹೀಗೆ ಯೋಜಿತ ರೀತಿಯಲ್ಲಿ ಬದಲಾವಣೆ ನಡೆದಿದೆ. ಆದ್ದರಿಂದ ಈ ಬದಲಾವಣೆಗಳನ್ನು ಈ ಹಿಂದಿನ ಬದಲಾವಣೆಗಳಿಗಿಂತ ಬೇರೆಯಾಗಿಯೇ ನೋಡಬೇಕಾಗುತ್ತದೆ. ಈ ಎರಡು ಸಮರ್ಥನೆಗಳ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕಟ್ಟಲಾಗಿದೆ.

2

ಈ ಹಿಂದೆ ಹೇಳಿದಂತೆ ಕನ್ನಡ ಹಲವು ಆಡಳಿತ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿತ್ತು. ಈ ಪರಿಸ್ಥಿತಿಯಿಂದಾಗಿ ಕನ್ನಡ ಭಾಷಿಕರ ನಡುವೆ ವ್ಯಾವಹಾರಿಕ ಸಂಬಂಧ ಕನಿಷ್ಠ ಪ್ರಮಾಣದಲ್ಲಿ ನಡೆಯುತ್ತಿತ್ತು. ಭಾಷಿಕ ಕೊಡುಗೆಗಳು ಹೆಚ್ಚಿನ ಪ್ರಮಾಣದಲ್ಲಿ ದೈನಂದಿನ ವ್ಯವಹಾರಗಳಲ್ಲಿ ನಡೆಯುತ್ತಿದ್ದುದು ಕಡಿಮೆ. ಇಡೀ ಕನ್ನಡ ಪ್ರದೇಶವನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸಲು ಕನ್ನಡ ಸಾಹಿತ್ಯ ಪರಿಷತ್ ಪ್ರಯತ್ನಿಸಿತ್ತು. (ಈ ಸಂಸ್ಥೆಯ ಮೊದಲ ಹೆಸರು ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದಿತ್ತು. ಅನಂತರದಲ್ಲಿ ಅದು ಕರ್ಣಾಟಕವೋ ಕರ್ನಾಟಕವೋ ಎಂಬ ವಿವಾದ ಮೊದಲಾಗಿ ಕೊನೆಗೆ ಅದರ ಹೆಸರು ಕನ್ನಡ ಸಾಹಿತ್ಯ ಪರಿಷತ್ತು ಎಂದಾಯಿತು. ದೇಶವಾಚಿಯಾಗಿದ್ದ ಹೆಸರು ಭಾಷಾವಾಚಿಯಾಗಿ ಬದಲಾದದ್ದು ಆಕಸ್ಮಿಕವಿರಲಾರದು.) ತನ್ನ ವಾರ್ಷಿಕ ಸಾಹಿತ್ಯ ಸಮ್ಮೇಳನಗಳ ಮೂಲಕ ಜನರು ಒಂದೆಡೆ ಸೇರುವಂತೆ ಏರ್ಪಾಡು ಮಾಡುತ್ತಿತ್ತು. ಭಾಷಿಕ ಕೊಡುಗೆಗಳ ದೃಷ್ಟಿಯಿಂದ ಈ ಸಮ್ಮೇಳನಗಳ ಪ್ರಭಾವ ಹೆಚ್ಚೇನೂ ಇದ್ದಿರಲಾರದು. ಅಭಿಮಾನವನ್ನು ಹುಟ್ಟಿಸುವ ಕೆಲಸಕ್ಕೆ ಮಾತ್ರ ಅವು ಸೀಮಿತವಾಗಿರಬಹುದು. ಈ ಸಮ್ಮೇಳನಗಳ ಅಧ್ಯಕ್ಷರು ಮಾಡಿದ ಭಾಷಣಗಳು ಮುಖ್ಯ ಸಾಂಸ್ಕೃತಿಕ ದಾಖಲೆಗಳಾಗಿವೆ.

ಇದಲ್ಲದೆ ಶೈಕ್ಷಣಿಕ, ವಾಣಿಜ್ಯ ಮತ್ತು ಆಡಳಿತ–ಈ ನೆಲೆಗಳಲ್ಲಿಯೂ ವಿವಿಧ ಕನ್ನಡ ಪ್ರದೇಶಗಳ ನಡುವೆ ಸಂವಾದ ಸಾಧ್ಯವಿರಲಿಲ್ಲ. ಸಾಹಿತ್ಯ ಕೃತಿಗಳು ಒಂದು ನೆಲೆಯಲ್ಲಿ ಈ ಎಲ್ಲಾ ಕಟ್ಟುಪಾಡುಗಳನ್ನು ಮೀರಲು ಯತ್ನಿಸಿದವು. ಆದರೂ ಕನ್ನಡದ ವಿವಿಧ ಪ್ರಭೇದಗಳನ್ನು ಎಲ್ಲಾ ಪ್ರದೇಶಗಳ ಜನರೂ ಪರಿಗಣಿಸುವಂತೆ ಮಾಡುವ ವ್ಯಾಪಕ ನೆಲೆಗಳು ರೂಪುಗೊಳ್ಳಲಿಲ್ಲ. ಎಲ್ಲ ಕನ್ನಡ ಪ್ರದೇಶಗಳನ್ನು ವ್ಯಾಪಿಸುವ ಸಮೂಹ ಮಾಧ್ಯಮಗಳು ಇರಲಿಲ್ಲ. ಇದಕ್ಕೆ ಚಲನಚಿತ್ರ ಮತ್ತು ವೃತ್ತಿರಂಗಭೂಮಿಯ ನಾಟಕಗಳು ವಿನಾಯಿತಿಯಾಗಿವೆ. ಅಖಿಲ ಕರ್ನಾಟಕ ವ್ಯಾಪ್ತಿಯ ಪತ್ರಿಕೆಗಳಾಗಲೀ, ಬಾನುಲಿಯಾಗಲೀ ಆಗ ಇರಲಿಲ್ಲ. ವಾಕ್‌ಚಿತ್ರಗಳು ಸಾಕಷ್ಟು ಪ್ರಮಾಣದಲ್ಲಿ ಏಕೀಕರಣದ ಹೊತ್ತಿಗೆ ಕರ್ನಾಟಕದ ಬಹುಪಾಲು ಪ್ರದೇಶಗಳಿಗೂ ವ್ಯಾಪಿಸಿದ್ದವು. ಹಾಗೆ ನೋಡಿದರೆ ಕರ್ನಾಟಕವು ಏಕೀಕರಣಗೊಂಡ ಮೇಲೆ ಅದರ ಭೌಗೋಳಿಕ ಚಹರೆಯನ್ನು ಸೂಚಿಸುವ ಭೂಪಟವೊಂದು ಮೊದಲು ಕನ್ನಡಿಗರಿಗೆ ಕಾಣಿಸಿದ್ದು ಒಂದು ಚಲನಚಿತ್ರದಲ್ಲಿ ಎಂಬುದನ್ನು ಗಮನಿಸಬೇಕು. 1958ರ ಸ್ಕೂಲ್ ಮಾಸ್ಟರ್ ಚಲನಚಿತ್ರದಲ್ಲಿ ಹಳ್ಳಿಯ ಶಾಲೆಯ ಗೋಡೆಯ ಮೇಲೆ ಒಂದು ಕರ್ನಾಟಕದ ಭೂಪಟ ಕಾಣಿಸುತ್ತದೆ. ಹೀಗಿದ್ದರೂ ಚಲನಚಿತ್ರಗಳು ಬಳಸುತ್ತಿದ್ದ ಭಾಷೆ ಒಂದು ಬಗೆಯಲ್ಲಿ ಕನ್ನಡ ಮಾತಾಡುವ ಜನರೆಲ್ಲರಿಗೂ ಬಹುಮಟ್ಟಿಗೆ ಒಪ್ಪಿತವಾದ ಪ್ರಮಾಣ ಭಾಷೆಯಾಗಿತ್ತು. ಅದರಲ್ಲೂ ಹಲವು ಬಗೆಗಳಿದ್ದವು. ಕಲಿತ, ನಗರದ ಜನ ಬಳಸುವ ಕನ್ನಡ ಒಂದು ಬಗೆಯದ್ದಾದರೆ, ಕಲಿಯದ ಹಳ್ಳಿಯ ಜನರು ಬಳಸುವ ಕನ್ನಡ ಇನ್ನೊಂದು ಬಗೆಯದು. ಈ ಮಾದರಿಗಳನ್ನು ಚಿತ್ರಗಳು ಅಚ್ಚುಕಟ್ಟಾಗಿ ಬಳಸುತ್ತಾ ಬಂದವು.

ವೃತ್ತಿರಂಗಭೂಮಿಯ ನಾಟಕಗಳು ಒಂದು ರೀತಿಯಲ್ಲಿ ಅಖಿಲ ಕರ್ನಾಟಕ ವ್ಯಾಪ್ತಿಯನ್ನು ಪಡೆಯಲು ಆರಂಭಿಸಿದವು. ದಕ್ಷಿಣದ ಕಂಪನಿಗಳು ತುಂಗಭದ್ರೆಯನ್ನು ದಾಟಿ ಉತ್ತರಕ್ಕೆ ಹೋಗುವುದು, ಉತ್ತರದ ಕಂಪನಿಗಳು ಆಗಾಗ ದಕ್ಷಿಣಕ್ಕೆ ಬರುವುದು ನಡೆದಿತ್ತು. ಇದು ಹೆಚ್ಚು ವ್ಯಾಪಕವಾಗಿ ನಡೆಯುತ್ತಿರಲಿಲ್ಲ. ಇದಕ್ಕೆ ಆರ್ಥಿಕ ಕಾರಣಗಳು ಇರುವಂತೆ ತೋರುತ್ತದೆ. ಹೊರತಾಗಿ ಆಯಾ ಕಂಪನಿಗಳು ತಮ್ಮ ನಾಟಕಗಳಲ್ಲಿ ಬಳಸುತ್ತಿದ್ದ ಭಾಷೆಯಲ್ಲಿ ಅಷ್ಟೇನೂ ವ್ಯತ್ಯಾಸಗಳು ಆಗ ಕಾಣಿಸುತ್ತಿರಲಿಲ್ಲ. ಶಿರಹಟ್ಟಿ ಕಂಪನಿ, ಕೊಣ್ಣೂರು ಕಂಪನಿ, ಗರುಡ ಸದಾಶಿವರಾವ್ ಕಂಪನಿಗಳಲ್ಲಿ ನಟಿಸುತ್ತಿದ್ದ ನಾಟಕಗಳ ಭಾಷೆಗಳು, ದಕ್ಷಿಣದ ರತ್ನಾವಳಿ ಕಂಪನಿ ಮಹಮದ್ ಪೀರ್ ಅವರ ಕಂಪನಿ, ಹಿರಣ್ಣಯ್ಯನವರ ಕಂಪನಿ, ಗುಬ್ಬಿ ವೀರಣ್ಣನವರ ಕಂಪನಿಯ ನಾಟಕಗಳ ಭಾಷೆಗಳಲ್ಲಿ ಅಗಾಧ ವ್ಯತ್ಯಾಸಗಳೇನೂ ಇರಲಿಲ್ಲ. ಅಂದರೆ ಈ ನಾಟಕಗಳೆಲ್ಲ ನಾಟಕದ ಒಂದು ಮನ್ನಣೆ ಪಡೆದ ಶೈಲಿಯನ್ನೇ ಒಟ್ಟಾರೆಯಾಗಿ ಬಳಸುತ್ತಿದ್ದವು.

ಕರ್ನಾಟಕದ ಜನತೆಗೆ ಕೇಳಲು ಸಿಗುತ್ತಿದ್ದ ಈ ಪ್ರಮಾಣಕನ್ನಡ, ಮಾಧ್ಯಮಗಳಾದ ಚಲನಚಿತ್ರ ಮತ್ತು ವೃತ್ತಿರಂಗಭೂಮಿಗಳಲ್ಲಿ ಬಹುಮಟ್ಟಿಗೆ ಬಳಕೆಯಾಗುತ್ತಿದೆ. ಉಳಿದಂತೆ ಈ ಭಾಷಾಪ್ರದೇಶಗಳು ಪರಸ್ಪರ ಭಾಷಿಕ ಸಂಪರ್ಕ ಇಲ್ಲದೆ ವ್ಯವಹರಿಸುತ್ತಿದ್ದವು. ಈ ಮೇಲಿನ ವಿವರಣೆಯಲ್ಲಿ ಕರಾವಳಿ ಪ್ರದೇಶಕ್ಕೆ ಮತ್ತು ನಿಜಾಮರ ಆಡಳಿತಕ್ಕೆ ಒಳಪಟ್ಟ ಪ್ರದೇಶಕ್ಕೆ ಹೆಚ್ಚು ಅನ್ವಯಿಸುವುದಿಲ್ಲ. ಆ ಪ್ರದೇಶಗಳಂತೂ ಇನ್ನೂ ಈ ಪ್ರಮಾಣ ಕನ್ನಡದ ತೆಕ್ಕೆಗೆ ಬಂದಿರಲಿಲ್ಲ.

ಏಕೀಕರಣದ ಸಂದರ್ಭದಲ್ಲಿ ಹೀಗೆ ಇದ್ದ ಹಲವು ಕನ್ನಡಗಳ ಪರಿಸ್ಥಿತಿಯು ಬೀಚಿಯವರು ಏಕೀಕರಣ ಕುರಿತು ಬರೆದ ನಾಟಕದಲ್ಲಿ ಗೇಲಿಗೆ ಒಳಗಾಗಿದೆ. ವಿವಿಧ ಪ್ರದೇಶದ ಉಪಭಾಷೆಗಳನ್ನು ಆಡುವ ಜನರು ಕನ್ನಡ ಮಾತೆಯ ಪೂಜೆಗೆ ಬಂದಾಗ ಆಗುವ ಅವಾಂತರವನ್ನು ಆ ನಾಟಕ ಚಿತ್ರಿಸುತ್ತದೆ. ಹೀಗೆ ಕನ್ನಡದ ವಿವಿಧ ಪ್ರಭೇದಗಳು ಆಯಾ ಪ್ರದೇಶದ ಜನರ ಓರೆಕೋರೆಗಳನ್ನು ತಿಳಿಸಲು ಬಳಕೆಯಾದಂತೆ ಕಾಣುತ್ತದೆ. ಹಾಸ್ಯ ಪ್ರಸಂಗಗಳನ್ನು ರೂಪಿಸಲು ಭಾಷೆಯ ವಿವಿಧ ಬಗೆಯಲ್ಲಿ ಇರುವ ವ್ಯತ್ಯಾಸಗಳನ್ನು ಆ ಹೊತ್ತಿನ ಬರಹಗಾರರು ಬಳಸಿಕೊಂಡರು. ಈ ಪರಿಸ್ಥಿತಿಯಿಂದ ಇನ್ನೂ ನಾವು ಹೊರಬಂದಿಲ್ಲ.

ಕರ್ನಾಟಕ ರಾಜ್ಯ ನಿರ್ಮಿತಿಯ ಸಂದರ್ಭದಲ್ಲಿ ಅಂದಿನ ಆಡಳಿತ ವರ್ಗದ ಎದುರಿನ ಮುಖ್ಯ ಸವಾಲೆಂದರೆ, ಹೀಗೆ ಭಿನ್ನ ಹಿನ್ನೆಲೆಯ ಭಾಷಾಪ್ರದೇಶದ ಜನರನ್ನು ಒಂದು ಚೌಕಟ್ಟಿಗೆ ಹೇಗೆ ತರುವುದು ಎಂಬ ಪ್ರಶ್ನೆ. ರಾಜ್ಯಾಂಗದಲ್ಲಿ ಆಗ ಲಭ್ಯವಿದ್ದ ಅವಕಾಶವನ್ನು ಬಳಸಿಕೊಂಡು ಆ ಹೊತ್ತಿಗೆ ಇಂಗ್ಲಿಶನ್ನು ಆಡಳಿತ ಭಾಷೆಯೆಂದು ಬಳಸಲು ಒಪ್ಪಿಗೆ ನೀಡಿದರು. ಆದರೆ ಭಾಷಾವಾರು ಪ್ರಾಂತ್ಯ ರಚನೆಯ ಮೂಲತರ್ಕವೇ ಆಯಾ ಪ್ರಾಂತ್ಯದ ಭಾಷೆಗಳ ಬೆಳವಣಿಗೆ ಆಗಬೇಕು ಎಂದಿತ್ತು. ಆದ್ದರಿಂದ ಇಂಗ್ಲಿಶನ್ನೇ ಎಂದೆಂದೂ ಹೀಗೆ ಸಂಪರ್ಕಭಾಷೆಯಾಗಿ ರಾಜ್ಯದೊಳಗೆ ಬಳಸುವುದು ಸಾಧ್ಯವಿರಲಿಲ್ಲ.

ಹಾಗೆಂದು ಕನ್ನಡವನ್ನು ತಟ್ಟನೆ ರಾಜ್ಯದ ಸಂಪರ್ಕಭಾಷೆಯಾಗಿ ಉನ್ನತೀಕರಿಸುವುದು ಕೂಡ ಸಾಧ್ಯವಿರಲಿಲ್ಲ. ಅದಕ್ಕೆ ಸಾಂದರ್ಭಿಕ ಕಾರಣಗಳು ಹಲವಿವೆ. ಮುಖ್ಯವಾಗಿ ಮದ್ರಾಸ್ ಪ್ರೆಸಿಡೆನ್ಸಿಯಿಂದ ಈ ರಾಜ್ಯಕ್ಕೆ ಸೇರ್ಪಡೆಯಾದ ಮಂಗಳೂರು ಪ್ರದೇಶ ತುಳು ಪ್ರಧಾನವಾದ ನಾಡಾಗಿತ್ತು. ಅಲ್ಲಿ ಹಿಂದಿನಿಂದಲೂ ಕನ್ನಡ ಎರಡನೇ ಪ್ರಧಾನ ಭಾಷೆಯಾಗಿ ಬಳಕೆಯಾಗಿತ್ತು. ಆದರೂ ಕಲಿಕೆಯ ಪ್ರಮಾಣ ಕಡಿಮೆ ಇದ್ದ ಆ ಹೊತ್ತಿನಲ್ಲಿ ಕನ್ನಡವನ್ನು ಅಧಿಕೃತವಾಗಿ ಬರಹದಲ್ಲಿ ಬಳಸುವವರ ಸಂಖ್ಯೆ ಅಲ್ಲಿ ಹೆಚ್ಚಿರಲಿಲ್ಲ. 'ಸಿ' ರಾಜ್ಯವೆಂದು ಮನ್ನಣೆ ಪಡೆದಿದ್ದ ಕೊಡಗನ್ನು ಅದರ ಪ್ರತ್ಯೇಕತೆಯಿಂದ ಪಲ್ಲಟಗೊಳಿಸಿ ಕರ್ನಾಟಕದ ಭಾಗವನ್ನಾಗಿ ಮಾಡಲಾಯಿತು. ಇಲ್ಲಿ 1952ರ ಅನಂತರದಲ್ಲಿ ಸ್ವತಂತ್ರ ಅಸೆಂಬ್ಲಿ ಇದ್ದು ಪ್ರತ್ಯೇಕ ಮಂತ್ರಿಮಂಡಲ ಆಡಳಿತ ನಡೆಸುತ್ತಿತ್ತು ಎಂಬುದನ್ನು ಇಲ್ಲಿ ಗಮನಿಸಬೇಕು. ಕರ್ನಾಟಕ ಕೊಡವರ ಆಯ್ಕೆಯಾಗಿದೆಯೇ ಎಂಬುದು ಇಂದಿಗೂ ಬಿಡಿಸಲಾಗದ ಪ್ರಶ್ನೆ. ಈಗಲೂ ಕೊಡವರಲ್ಲಿ ಒಂದು ಸಮುದಾಯ ಕರ್ನಾಟಕದಿಂದ ಬೇರೆಯಾಗಿ ರಾಜ್ಯವೊಂದನ್ನು ಕಟ್ಟಿಕೊಳ್ಳಲು, ಇಲ್ಲವೇ ಈ ರಾಜ್ಯದೊಳಗೇ ಸ್ವಾಯತ್ತ ಪ್ರದೇಶವಾಗಲು ಕೇಂದ್ರ ಸರ್ಕಾರದಮೇಲೆ ಒತ್ತಡವನ್ನು ತರುತ್ತಿದೆ. ಇನ್ನು ಮುಂಬೈ ಪ್ರೆಸಿಡೆನ್ಸಿಗೆ ಸೇರಿದ ವಾಯುವ್ಯ ಕರ್ನಾಟಕ ಭಾಗಗಳಲ್ಲಿ ಮರಾಠಿಯ ಪ್ರಾಬಲ್ಯವಿತ್ತು. ಜೊತೆಗೆ ಕೊಂಕಣಿ ಮತ್ತಿತರ ಭಾಷೆಗಳನ್ನಾಡುವ ಜನರು ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಈ ಪ್ರದೇಶದಲ್ಲಿ ಕನ್ನಡದ ಬಳಕೆ ಶಿಕ್ಷಣ ಕ್ಷೇತ್ರದಲ್ಲಿ ನೆಲೆಗೊಂಡಿತ್ತು. ಆದರೆ ಆಡಳಿತಾತ್ಮಕವಾಗಿ ಅದು ಇನ್ನೂ ಮರಾಠಿಯ ಗುಂಗಿನಲ್ಲಿತ್ತು. ನಿಜಾಮರ ಆಳ್ವಿಕೆಯಲ್ಲಿದ್ದ ಪ್ರದೇಶಗಳಲ್ಲಿ ಉರ್ದು ಎಷ್ಟು ಪ್ರಬಲವಾಗಿತ್ತೆಂದರೆ ಅಲ್ಲಿ ಕಲಿಯುವವರೆಲ್ಲ ಉರ್ದುವಿನ ಮೂಲಕವೇ ಕಲಿಯಬೇಕಿತ್ತು. ಅಂದರೆ ಅಕ್ಷರಸ್ಥರೂ ಕೂಡ ಕನ್ನಡವನ್ನು ಬರೆದು ಓದುವ ಕೌಶಲಗಳನ್ನು ಪಡೆಯುವುದು ಸಾಧ್ಯವಿರಲಿಲ್ಲ. ಇನ್ನು ಕಲಿಯದ ಅಸಂಖ್ಯಾತ ಕನ್ನಡಿಗರು ದ್ವಿಭಾಷಿಕರಾಗಿ ತಮ್ಮ ದೈನಂದಿನ ವ್ಯವಹಾರವನ್ನು ನಡೆಸುತ್ತಿದ್ದವರು. ಅವರಲ್ಲಿದ್ದ ಕನ್ನಡದ ಕೌಶಲಗಳು ಕನಿಷ್ಠ ಪ್ರಮಾಣದಲ್ಲಿ ಇದ್ದಂತೆ ತೋರುತ್ತದೆ.

ಇದಲ್ಲದೆ, ಇಡೀ ಕರ್ನಾಟಕ ಹಲವಾರು ದ್ವಿಭಾಷಿಕ ಸಮುದಾಯಗಳನ್ನು ಹೊಂದಿತ್ತು. ಈ ಸಮುದಾಯಗಳಲ್ಲಿ ಹೆಚ್ಚಿನವಕ್ಕೆ ಕನ್ನಡ ಎರಡನೇ ಭಾಷೆ. ಪೂರ್ವ ಗಡಿಭಾಗದುದ್ದಕ್ಕೂ ತೆಲುಗು- ಕನ್ನಡ, ವಾಯುವ್ಯ ಗಡಿಭಾಗದಲ್ಲಿ ಮರಾಠಿ-ಕನ್ನಡ, ಕೊಂಕಣಿ-ಕನ್ನಡ, ಕರಾವಳಿಯಲ್ಲಿ ತುಳು-ಕನ್ನಡ ಮಾತಾಡುವವರು ಇದ್ದರು. ನಾಡಿನ ಒಳಗೆ ಕೂಡಾ ಈ ದ್ವಿಭಾಷಿಕ ಸಮುದಾಯಗಳು ಬೇರೆ ಬೇರೆ ರೀತಿ ವ್ಯಾಪಿಸಿದ್ದವು. ಮಧ್ಯಕರ್ನಾಟಕದಲ್ಲಿ ಮತ್ತು ದಕ್ಷಿಣದ ಕೆಲವು ಭಾಗಗಳಲ್ಲಿ ಉರ್ದು-ಕನ್ನಡ ಸಮುದಾಯವು ನೆಲೆಸಿತ್ತು. ಈ ಎಲ್ಲಾ ಸಂಗತಿಗಳಿಂದ ಕರ್ನಾಟಕದ ಚಿತ್ರ ಸ್ಪಷ್ಟಗೊಳ್ಳುತ್ತದೆ. ರಾಜಕೀಯ ನಿರ್ಧಾರದಿಂದ ಒಗ್ಗೂಡಿದ ಈ ಭೂಪ್ರದೇಶದ ಜನ ಸಮುದಾಯ: 1) ಹಲವು ಭಾಷೆಗಳ ನಡುವೆ ಹಂಚಿ ಹೋಗಿತ್ತು. ಮತ್ತು 2) ಕನ್ನಡ ಮಾತಾಡುವವರೂ ಕೂಡಾ ಪರಸ್ಪರ ಸಂಪರ್ಕವಿಲ್ಲದೆ ಹಲವು ಉಪಭಾಷೆಗಳಲ್ಲಿ ತಮ್ಮ ವ್ಯವಹಾರವನ್ನು ನಡೆಸುತ್ತಿದ್ದರು.

ಇದು ಅಲ್ಲಿಯವರೆಗಿನ ಆಡಳಿತಗಳಿಗೆ ದೊಡ್ಡ ಸಮಸ್ಯೆಯಾಗಿಯೇ ತೋರಲಿಲ್ಲ. ಏಕೆಂದರೆ ಆ ಆಡಳಿತ ವರ್ಗದ ತಾತ್ವಿಕತೆಯೂ ಜನಪರವಾಗಿರಲಿಲ್ಲ. ಆಡಳಿತದ ವಿವಿಧ ಅಂಗಗಳು ಜನರಿಗೆ ಉತ್ತರದಾಯಿಯಾಗಿರಲಿಲ್ಲ. ಜನರ ಕೆಲವು ಪ್ರತಿನಿಧಿಗಳು ಅಥವಾ ಜನರನ್ನು ಪ್ರತಿನಿಧಿಸುತ್ತೇವೆ ಎಂದು ಹೇಳುವವರು ಆಡಳಿತದೊಡನೆ ಸಂಪರ್ಕ ಹೊಂದಿದ್ದರೆ ಸಾಕಾಗಿತ್ತು. ಅಂತಹವರು ಕೂಡ ಇಂಗ್ಲಿಶ್ ಮೂಲಕ ಈ ಕೆಲಸವನ್ನು ಮಾಡುತ್ತಿದ್ದರು. ಆದರೆ 1950ರ ಭಾರತ ಸಂವಿಧಾನ, ಪ್ರಜಾಪ್ರಭುತ್ವವನ್ನು ತನ್ನ ಆಯ್ಕೆಯ ಆಡಳಿತ ಮಾದರಿಯನ್ನಾಗಿ ಪ್ರತಿಪಾದಿಸಿತ್ತು. 1952ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆಗಳು ನಡೆದಿದ್ದವು. ಕೃಷಿಗೆ ಒತ್ತುಕೊಟ್ಟ ಮೊದಲ ಪಂಚವಾರ್ಷಿಕ ಯೋಜನೆ ಜಾರಿಗೆ ಬಂದಿತು. ಗ್ರಾಮೀಣ ನೆಲೆಯ ಆಡಳಿತ ಕೇಂದ್ರಗಳಾಗಿ ಪಂಚಾಯಿತಿಗಳು, ಜಿಲ್ಲಾ ಬೋರ್ಡುಗಳು ನೆಲೆಗೊಂಡಿದ್ದವು. ಅಂದರೆ ತಾತ್ವಿಕವಾಗಿಯಾದರೂ ಆಡಳಿತವು ಜನರಿಗೂ ಉತ್ತರದಾಯಿಯಾಗಿತ್ತು. ರಾಜ್ಯಾಂಗವು ರಾಜ್ಯಗಳಿಗೆ ನೀಡಿದ ನಿರ್ದೇಶಕ ಸೂತ್ರಗಳಲ್ಲಿ ಶಿಕ್ಷಣ ಕೂಡಾ ಸೇರಿತು. ಅಂದರೆ ಎಲ್ಲಾ ರಾಜ್ಯಗಳೂ ತಮ್ಮ ವ್ಯಾಪ್ತಿಯ ಮಕ್ಕಳಿಗೆ ಗೊತ್ತಾದ ಅವಧಿಯವರೆಗೆ ಶಿಕ್ಷಣ ನೀಡುವುದು ಕಡ್ಡಾಯವೆಂದು ಸೂಚಿಸಲಾಗಿತ್ತು. ಈ ಎಲ್ಲಾ ಕಾರಣಗಳಿಂದ ಜನರ ಭಾಷೆ ಮತ್ತು ಸರ್ಕಾರದ ಭಾಷೆ ಬೇರೆ ಬೇರೆಯಾಗಿ ಉಳಿಯುವುದು ಸಾಧ್ಯವಿರಲಿಲ್ಲ. ಕರ್ನಾಟಕದಲ್ಲೂ ಕನ್ನಡವನ್ನು, ಅದು ಯಾವ ಸ್ಥಿತಿಯಲ್ಲೇ ಇರಲಿ, ಆ ಸ್ಥಿತಿಯಿಂದ ಬೇರ್ಪಡಿಸಿ ಅದಕ್ಕೆ ಅಖಿಲ ಕರ್ನಾಟಕ ವ್ಯಾಪ್ತಿ ಮತ್ತು ಬಳಕೆಯ ಮನ್ನಣೆಯನ್ನು ತಂದು ಕೊಡುವುದು ಸರ್ಕಾರದ ಜವಾಬ್ದಾರಿಯಾಯಿತು.

ಶಿಕ್ಷಣವು ಸರಕಾರದ ಒಂದು ಕಾರ್ಯಕ್ರಮವಾಗಿ ರೂಪುಗೊಂಡಿದ್ದರಿಂದ ಮೊದಲ ಹಂತದಲ್ಲಿ ಇಡೀ ಕರ್ನಾಟಕದ ಪ್ರಾಥಮಿಕ ಶಾಲೆಗಳ ಪಠ್ಯದಲ್ಲಿ ಬಳಕೆಯಾಗುವ ಕನ್ನಡದಲ್ಲಿ ಒಂದು ಸಾಮಾನ್ಯ ರೂಪವನ್ನು ತರುವುದು ಸರಕಾರದ ನೀತಿಯಾಯಿತು. ಕನ್ನಡದ ಮಟ್ಟಿಗೆ ಏಕೀಕರಣದ ಅನಂತರದ ಸರಕಾರ ತೆಗೆದುಕೊಂಡ ಮೊದಲ ಪ್ರಮುಖ ನಿರ್ಧಾರವಿದು. ಇಡೀ ಕರ್ನಾಟಕದ ಎಲ್ಲಾ ಶಾಲೆಗಳಿಗೂ ಒಂದೇ ಬಗೆಯ ಪಠ್ಯಕ್ರಮವನ್ನು ಮತ್ತು ಪಠ್ಯವಸ್ತುವನ್ನು ರೂಪಿಸಬೇಕೆಂದು ಸರಕಾರ ನಿರ್ಣಯಿಸಿತು. ಈ ನೀತಿಯ ಸರಿ ತಪ್ಪುಗಳೇನು; ಅದನ್ನು ಜಾರಿಗೆ ಕೊಡುವಾಗ ಆದ ಪರಿಣಾಮಗಳೇನು ಎಂಬುದು ಸದ್ಯ ನಮ್ಮ ಚರ್ಚೆಯ ವಿಷಯವಲ್ಲ. ಆದರೆ ಹೀಗೆ ತೆಗೆದುಕೊಂಡ ನಿರ್ಣಯ ದೂರಗಾಮಿಯಾದ ಪರಿಣಾಮಗಳಿಗೆ ಕಾರಣವಾಯಿತು ಎಂಬುದನ್ನು ಮರೆಯುವಂತಿಲ್ಲ. ದಕ್ಷಿಣದ ತುದಿಯ ಕೊಳ್ಳೇಗಾಲದ ಶಾಲೆಯ ಮಗು ಓದುವ ಕನ್ನಡ ಪಠ್ಯವನ್ನೇ ಉತ್ತರದ ತುದಿಯ ಔರಾದ್‌ನ ಶಾಲೆಯ ಮಗು ಕೂಡಾ ಓದಬೇಕಾದ ಪ್ರಸಂಗ ಎದುರಾಯಿತು.

ಕರ್ನಾಟಕ ಎಂಬ ಈ ರಾಜ್ಯ ನಿರ್ಮಾಣವಾದಾಗ ಇದ್ದ ಈ ಭಾಷಿಕ ಸ್ಥಿತಿಯನ್ನು ಬದಲಾಯಿಸುವುದು ಅತ್ಯಂತ ಮುಖ್ಯವಾದ ಹೊಣೆಯಾಗಿ ಸರಕಾರಕ್ಕೆ ಕಂಡಿತು. ಈ ಮೊದಲೇ ಹೇಳಿದಂತೆ ಭಾಷೆಯಲ್ಲಿ ನಡೆದ ಪರಿವರ್ತನೆಗಳು ಈ ಹಿಂದೆ ನಿರ್ದಿಷ್ಟ ಗುರಿಗಳನ್ನಾಗಲೀ, ಯೋಜಿತ ಕಾರ್ಯಕ್ರಮಗಳನ್ನಾಗಲಿ ಅನುಸರಿಸಿರಲಿಲ್ಲ. ಆದರೆ ಈಗ ಚುನಾಯಿತ ಸರಕಾರ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸುವ ದೃಷ್ಟಿಯಿಂದ ಭಾಷಾ ಪರಿವರ್ತನೆಗಾಗಿ ತಕ್ಕ ಗುರಿಯುಳ್ಳ ಯೋಜನೆಗಳನ್ನು ರೂಪಿಸುವುದು ಅಗತ್ಯವಾಗಿತ್ತು.

ಭಾಷಾನೀತಿ

ಭಾಷೆಯ ಅಧ್ಯಯನ ಮಾಡುವವರಿಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಪರಿಚಿತವಾಗುತ್ತಿರುವ ಪಾರಿಭಾಷಿಕ ಪದಗಳಲ್ಲಿ ಭಾಷಾನೀತಿಯೆಂಬುದು ಒಂದಾಗಿದೆ. ಭಾಷೆಯನ್ನು ದಿನವೂ ಬಳಸುವ ವ್ಯಕ್ತಿಗಳಿಗೆ ಅವರದ್ದೇ ಆದ ಭಾಷಾನೀತಿಯೆಂಬುದು ಇರುವುದಿಲ್ಲ. ಹಾಗೆಯೇ ವ್ಯಕ್ತಿಗೆ ಭಾಷೆಯ ಆಯ್ಕೆ ಮತ್ತು ದೃಷ್ಟಿಕೋನಗಳು ಇರುವುದು ಸಾಧ್ಯ ಉದಾ.ಗೆ ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳನ್ನು ಬಳಸುವ ವ್ಯಕ್ತಿಗೆ ತಾನು ಕನ್ನಡವನ್ನು ಎಲ್ಲಿ ಬಳಸಬೇಕು ಅಥವಾ ಎಲ್ಲಿ ಬಳಸಬಾರದು, ಹಾಗೆಯೇ ತೆಲುಗನ್ನು ಎಲ್ಲಿ ಬಳಸಬೇಕು ಮತ್ತು ಎಲ್ಲಿ ಬಳಸಬಾರದು ಎಂಬ ಬಗೆಗೆ ಒಂದು ನಿರ್ಧಾರವಿರುತ್ತದೆ. ಆ ನಿರ್ಧಾರಕ್ಕೆ ಆ ವ್ಯಕ್ತಿಯದೇ ಆದ ತಾರ್ಕಿಕ ಸಮರ್ಥನೆಗಳು ಇರುತ್ತವೆ. ಇದನ್ನು ಭಾಷಾಆಯ್ಕೆ ಎನ್ನುತ್ತೇವೆ. ಹಾಗೆಯೇ ಅದೇ ವ್ಯಕ್ತಿಗೆ ಕನ್ನಡಕ್ಕಿಂತ ತೆಲುಗು ಇಂಪಾದ ಭಾಷೆ ಎಂಬ ಅಭಿಪ್ರಾಯ ಮನಸ್ಸಿನಲ್ಲಿ ಇರಬಹುದು. ಹಾಗೆಯೇ ಕೆಲವರು ಸಂಸ್ಕೃತವನ್ನು ದೇವಭಾಷೆಯೆಂದು ಭಾವಿಸಿ, ಅದನ್ನು ಪ್ರಾರ್ಥನೆ ಪೂಜೆಗಳಲ್ಲಿ ಬಳಸುತ್ತಾರೆ. ಇದು ಭಾಷಾದೃಷ್ಟಿಕೋನ. ಈ ದೃಷ್ಟಿಕೋನಗಳಿಗೆ ಸಾಂಸ್ಕೃತಿಕವಾದ ಸಂದರ್ಭಗಳು ಪ್ರೇರಣೆ ನೀಡಿರಬಹುದು. ಭಾಷಾಆಯ್ಕೆಯಾಗಲೀ, ಭಾಷಾದೃಷ್ಟಿಕೋನವಾಗಲೀ ವ್ಯಕ್ತಿಯ ನೆಲೆಯಲ್ಲಿ ಇರುವಂತೆ ಸಾಮುದಾಯಿಕ ನೆಲೆಯಲ್ಲೂ ಇರಲು ಸಾಧ್ಯ.

ಆದರೆ ಭಾಷಾನೀತಿಯೆನ್ನುವುದು ಸಾಂಸ್ಥಿಕ ನೆಲೆಯ ಪರಿಕಲ್ಪನೆ. ಈ ಸಾಂಸ್ಥಿಕ ನೆಲೆಗಳಲ್ಲಿ ಸರಕಾರ ಪ್ರಧಾನವಾದದ್ದು. ಹಾಗೆಯೇ ಭಾಷೆಯ ಹಿತಾಸಕ್ತಿಗಳನ್ನು ರೂಪಿಸಲು ನಿರ್ಮಾಣಗೊಂಡು ಕೆಲಸ ಮಾಡುತ್ತಿರುವ ಸಂಸ್ಥೆಗಳು ಕೂಡ ತಮ್ಮದೇ ಆದ ಭಾಷಾನೀತಿಯನ್ನು ಹೊಂದಿರುತ್ತವೆ. ಉದಾ.ಗೆ ಕನ್ನಡದ ವಿಷಯವನ್ನು ತೆಗೆದುಕೊಂಡರೆ ಕನ್ನಡ ಸಾಹಿತ್ಯ ಪರಿಷತ್ತು, ಹೀಗೆ ಕನ್ನಡ ಭಾಷೆಯ ನೆಲೆಗಳನ್ನು ನಿರ್ದೇಶಿಸಲು ಉದ್ದೇಶಿತವಾದ ಸಂಸ್ಥೆ. ಅದರ ಹಲವಾರು ಕಾರ್ಯಕ್ರಮಗಳಲ್ಲಿ ಈ ಉದ್ದೇಶವನ್ನು ಪೂರೈಸಲು ಅನುಕೂಲಕರವಾದ ಕಾರ್ಯಕ್ರಮಗಳನ್ನು ಅದು ಕಾಲದಿಂದ ಕಾಲಕ್ಕೆ ರೂಪಿಸುತ್ತಾ ಬಂದಿದೆ. ಹೀಗಾಗಿ ಅದಕ್ಕೂ ಒಂದು ಭಾಷಾನೀತಿಯಿದೆ ಎಂದು ಹೇಳಲಡ್ಡಿಯಿಲ್ಲ. ಸರಕಾರದ ಭಾಷಾನೀತಿಗೂ ಇತರ ಸಾಮಾಜಿಕ ಸಂಸ್ಥೆಗಳ ಭಾಷಾನೀತಿಗೂ ಇರುವ ಸಂಬಂಧ ಕಾಲದಿಂದ ಕಾಲಕ್ಕೆ ಬೇರೆಯಾಗುತ್ತಾ ಹೋಗಬಹುದು. ಕೆಲವೊಮ್ಮೆ ಪೂರಕ ಸಂಬಂಧಗಳು ಇದ್ದರೆ ಮತ್ತೆ ಕೆಲವೊಮ್ಮೆ

ವಿರೋಧ ನೆಲೆಯ ಸಂಬಂಧಗಳು ನಿರ್ಮಾಣಗೊಳ್ಳುತ್ತವೆ. ನಾವು ಈ ಅಧ್ಯಯನದಲ್ಲಿ ಈ ಭಾಷಾನೀತಿಗಳು ಹೇಗೆ ಕರ್ನಾಟಕದಲ್ಲಿ ರೂಪಗೊಂಡಿವೆ ಎಂಬುದನ್ನು ಪ್ರಾಸಂಗಿಕವಾಗಿ ಗಮನಿಸಲಿದ್ದೇವೆ.

ಕರ್ನಾಟಕ ಸರಕಾರದ ಭಾಷಾನೀತಿಗೆ ಎರಡು ನೆಲೆಯ ಒತ್ತಾಯಗಳು ಪ್ರೇರಕಗಳಾಗಿವೆ. ೧. ಸಂವಿಧಾನವು ನಿರೂಪಿಸಿದ ಭಾಷಾನೀತಿಯನ್ನು ಕರ್ನಾಟಕದ ಸಂದರ್ಭದಲ್ಲಿ ಯಥಾವತ್ತಾಗಿ ಆಚರಿಸುವುದು. ೨. ಜನತೆಯ ಆಶೋತ್ತರಗಳನ್ನು, ಅಪೇಕ್ಷೆಗಳನ್ನು ಗಮನಿಸಿ ಅದಕ್ಕನುಗುಣವಾದ ಭಾಷಾನೀತಿಯನ್ನು ರೂಪಿಸುವುದು. ಕರ್ನಾಟಕದಲ್ಲಿ ಈ ಎರಡೂ ಪ್ರೇರಣಾಮೂಲಗಳು ಯಾವಾಗಲೂ ಒಂದೇ ದಿಕ್ಕಿನಲ್ಲಿ ಕೆಲಸ ಮಾಡಿಲ್ಲ. ಸಂವಿಧಾನದ ಅಪೇಕ್ಷೆಗಳು ಜನರ ಅಗತ್ಯಗಳಿಗೆ ಪೂರಕವಾಗಿದ್ದಾಗ ಸರಕಾರದ ಭಾಷಾನೀತಿ ಉಪಯುಕ್ತ ಮತ್ತು ಅನುಕರಣೆಗೆ ಅರ್ಹವಾಗಿವೆ ಎನಿಸಿದೆ. ಆದರೆ ಈ ಪ್ರೇರಣೆಗಳಲ್ಲಿ ಯಾವಾಗ ಪರಸ್ಪರ ವಿರೋಧ ಉಂಟಾಗಿದೆಯೋ ಅಂತಹ ಸಂದರ್ಭದಲ್ಲಿ ಸರಕಾರ ತನ್ನ ಮೊದಲ ಕರ್ತವ್ಯವೆಂದು ಸಂವಿಧಾನ ಪರವಾದ ನೀತಿಯನ್ನೇ ತೋರಿಸಿದೆ. ಆಗ ಅದು ಜನರ ಅಪೇಕ್ಷೆಗಳನ್ನು ನಿರಾಕರಿಸಬೇಕಾದ ಪ್ರಸಂಗಗಳು ಉಂಟಾಗಿವೆ. ಅಂತಹ ಸಂದರ್ಭಗಳಲ್ಲಿ ಸರಕಾರದ ಭಾಷಾನೀತಿಯ ವಿರುದ್ಧ ಜನರು ವಿರೋಧವನ್ನು ವ್ಯಕ್ತಪಡಿಸುತ್ತಾ ಹೋರಾಟಕ್ಕೆ ಇಳಿದಿರುವುದು ಉಂಟು.

ಇಂತಹ ವಿರೋಧಗಳು ಉಂಟಾದಾಗ ಒಂದೋ ಸಂವಿಧಾನದ ಆಶೋತ್ತರಗಳನ್ನು ಜನರು ಒಪ್ಪುವಂತೆ ಅವರಿಗೆ ತಿಳಿಸಿಹೇಳುವ ಕೆಲಸಗಳನ್ನು ಮಾಡಿರಬಹುದು. ಇಲ್ಲವೇ ಅವರ ಅಪೇಕ್ಷೆಗಳನ್ನು ಹತ್ತಿಕ್ಕಿ ಸರಕಾರದ ಕಾರ್ಯಕ್ರಮವಾಗಿ ತಾನು ನಿರೂಪಿಸುವ ಭಾಷಾನೀತಿಯನ್ನು ಜಾರಿಗೆ ಕೊಟ್ಟಿರಬಹುದು. ಎರಡನೇ ಸಂದರ್ಭದಲ್ಲಿ ಜನರು ತೋರಿಕೆಗೆ ಒಪ್ಪಿದಂತೆ ಭಾಸವಾದರೂ ಅತೃಪ್ತಿಯೆಂಬುದು ಮಡುಗಟ್ಟಿದ್ದು ಅದು ಯಾವಾಗಲಾದರೂ ಸಿಡಿದಿರುವ ಉದಾಹರಣೆಗಳು ಇವೆ.

ಈಗ ಹೇಳಿದಂತೆ ಸರಕಾರವು ಸಂವಿಧಾನದ ಅನುಸರಣೆ ಮಾಡುತ್ತಾ ಅದಕ್ಕೆ ಅನುಗುಣವಾದ ಭಾಷಾನೀತಿಯನ್ನು ರೂಪಿಸುತ್ತದೆ. ಆದರೆ ಹೀಗೆ ನೀತಿಯೊಂದು ಆಕಾರ ಪಡೆಯುವಾಗ ಕೇವಲ ಸಂವಿಧಾನದ ಭಾಷಾ ಸಂಬಂಧಿತ ನಿಲುವುಗಳು ಮಾತ್ರ ಪ್ರೇರಕಗಳಾಗಿ ಕೆಲಸ ಮಾಡುತ್ತವೆ ಎನ್ನುವಂತಿಲ್ಲ. ಸಂವಿಧಾನದಲ್ಲೇ ಅಡಕವಾಗಿರುವ ಇನ್ನಿತರ ಸಾಮಾಜಿಕ, ಸಾಂಸ್ಕೃತಿಕ ನೆಲೆಯ ನಿರೂಪಣೆಗಳು ಪರೋಕ್ಷವಾಗಿ ಭಾಷಾನೀತಿಯನ್ನು ನಿರ್ಧರಿಸುವ ಕೆಲಸ ಮಾಡುತ್ತವೆ. ಉದಾ.ಗೆ ಸಂವಿಧಾನವು ವ್ಯಕ್ತಿಗೆ ನೀಡಿರುವ ಮೂಲಭೂತ ಹಕ್ಕುಗಳಿವೆ. ಈ ಹಕ್ಕುಗಳ ವ್ಯಾಪ್ತಿಯು ಕೇವಲ ಭಾಷೆಗೆ ಮಾತ್ರ ಸಂಬಂಧಿಸಿಲ್ಲ. ಆದರೆ ಭಾಷಾನೀತಿಯ ನಿರ್ಧಾರದ ಸಂದರ್ಭದಲ್ಲಿ ಈ ಮೂಲಭೂತ ಹಕ್ಕುಗಳು ನಿರ್ದೇಶಕ ನೆಲೆಯಲ್ಲಿ ಕೆಲಸ ಮಾಡುತ್ತಿವೆ. ಇದಕ್ಕೆ ಹಲವು ನಿದರ್ಶನಗಳು ಸಾಧ್ಯ. ಉದಾ.ಗೆ ಶಾಲೆಯಲ್ಲಿ ಮಕ್ಕಳು ಯಾವ ಭಾಷೆಯ ಮೂಲಕ ವಿಷಯ ಗ್ರಹಣ ಮಾಡಬೇಕು ಎಂಬುದು ಒಂದು ಪ್ರಶ್ನೆ. ಭಾಷಿಕ ನೆಲೆಯಲ್ಲಿ ಇದಕ್ಕಿರುವ ಉತ್ತರ, ಮತ್ತು ಮೂಲಭೂತ ಹಕ್ಕುಗಳ ನೆಲೆಯಲ್ಲಿ ಇರುವ ಉತ್ತರ

ಬೇರೆ ಬೇರೆಯಾಗಿವೆ. ಮಗುವಿನ ಮನೆಯ ಮಾತನ್ನೇ ಕಲಿಕೆಯ ಮಾಧ್ಯಮವನ್ನಾಗಿ ಬಳಸಬೇಕೆಂಬ ನಿಲುವು ಕೆಲವೊಮ್ಮೆ ವ್ಯಕ್ತಿಯ ಮೂಲಭೂತ ಹಕ್ಕಿನ ಮಿತಿಯನ್ನು ಒಪ್ಪದೆಯೇ, ಅದರ ಉಲ್ಲಂಘನೆಯಾಗಿದೆ ಎಂದು ಸಮಾಜದ ಕೆಲವು ವರ್ಗಗಳಿಗೆ ಅನಿಸಿದೆ. ಆದ್ದರಿಂದ ಈ ಎರಡು ಪರಸ್ಪರ ಮುಖಾಮುಖಿಯಾಗಿರುವ ನಿಲುವುಗಳಲ್ಲಿ ಸರಕಾರ ಯಾವುದನ್ನು ಆಯ್ಕೆಯನ್ನು ಮಾಡಿಕೊಳ್ಳಬೇಕು ಎಂಬುದು ಬಿಡಿಸಲಾಗದ ಪ್ರಶ್ನೆಯಾಗಿದೆ. ಕರ್ನಾಟಕದ ಸಂದರ್ಭದಲ್ಲಿ ಇಂತಹ ಪ್ರಶ್ನೆಗಳು ಮೇಲಿಂದ ಮೇಲೆ ಮುಂಚೂಣಿಗೆ ಬಂದು ವಾಗ್ವಾದಗಳನ್ನು ಸೃಷ್ಟಿಸಿರುವುದನ್ನು ನಾವು ಗಮನಿಸಬಹುದು. ಈ ಅಧ್ಯಯನದಲ್ಲಿ ಈ ಕುರಿತು ಚರ್ಚೆಯನ್ನು ಮುಂದೆ ಬೆಳೆಸಲಾಗುವುದು. ಸರ್ಕಾರದ ಭಾಷಾನೀತಿಯು ಕೆಲವೊಮ್ಮೆ ಖಚಿತ ಮಾತುಗಳಲ್ಲಿ ನಿರೂಪಿತವಾಗದೆಯೂ ಇರಬಹುದು. ಅದರ ಭಾಷಾಸಂಬಂಧಿತ ಕಾರ್ಯಕ್ರಮಗಳಲ್ಲಿ ಈ ನೀತಿಯು ಕಾರ್ಯಪ್ರವೃತ್ತವಾಗಿರುವುದನ್ನು ಗಮನಿಸಿ ಆ ಮೂಲಕ ಭಾಷಾನೆಲೆಯನ್ನು ನಾವು ಪುನಾರಚಿಸ ಬೇಕಾಗಿದೆ. ಕೆಲವೊಮ್ಮೆ ಇಂತಹ ಭಾಷಾನೀತಿಗಳು ಅಂಶಿಕವಾಗಿ ನಿರೂಪಿತವಾಗಿ ಕಾರ್ಯಕ್ರಮಗಳ ಮೂಲಕ ಪೂರ್ಣ ಆಕಾರವನ್ನು ಪಡೆದುಕೊಳ್ಳುತ್ತಿರುತ್ತವೆ.

ಭಾಷಾನೀತಿಯು ಜಾರಿಗೆ ಬರುವ ನೆಲೆಯೆಂದರೆ, ಭಾಷಾಯೋಜನೆ. ಭಾಷಾಯೋಜನೆ ಎಂದರೇನು; ಇಲ್ಲಿ ಯೋಜನೆ ಎಂಬ ಮಾತು ಏಕೆ ಬಂದಿದೆ ಎಂಬುದು ಗಮನಿಸಬೇಕಾದ ಸಂಗತಿ. ಪ್ರಗತಿಯ ಸಾಧನೆಗೆ ಅನುಕೂಲಕರವಾದ ಕಾರ್ಯಕ್ರಮಗಳನ್ನು ಮುಂಚೆಯೇ ಯೋಚಿಸಿ ಅದಕ್ಕೆ ಅನುಗುಣವಾದ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಇದು ಸಮಾಜದ ಪ್ರಗತಿಯಲ್ಲಿ ನಂಬಿಕೆಯುಳ್ಳ ಪ್ರತಿಯೊಬ್ಬರೂ ಅನುಸರಿಸುವ ವಿಧಾನ. ಯೋಜನೆಯಿಂದ ಸಂಪನ್ಮೂಲಗಳ ಸರಿಯಾದ ವಿತರಣೆ, ನಿರ್ವಹಣೆ ಸಾಧ್ಯವಾಗಿರುತ್ತದೆ. ಸಂಪನ್ಮೂಲಗಳು ಹಾಳಾಗುವುದು, ಅನುಪಯುಕ್ತವಾಗುವುದು, ಅನಗತ್ಯವಾಗಿ ಹೆಚ್ಚು ಬಳಕೆಯಾಗುವುದು, ಅಗತ್ಯವಿದ್ದರೂ ಬಳಕೆಗೆ ಲಭ್ಯವಿಲ್ಲದಿರುವುದು ಇಂತಹವನ್ನೆಲ್ಲ ಯೋಜನೆಗಳ ನಿರೂಪಣೆಗಳ ಮುಖಾಂತರ ನಿರ್ವಹಿಸಲು ಸಾಧ್ಯವಾಗುತ್ತದೆ. ಯೋಜನೆಯ ಈ ಸಾಮಾನ್ಯ ವ್ಯಾಖ್ಯಾನ. ಭಾಷೆಗೂ ಅನ್ವಯಿಸುವಂತಿದೆ. ಈ ಬಗೆಗೆ ಭಾಷಾಶಾಸ್ತ್ರಜ್ಞರಲ್ಲಿ ಒಮ್ಮತ ಇಲ್ಲದಿದ್ದರೂ, ಈಗ ಚಾಲ್ತಿಯಲ್ಲಿರುವ ಕ್ರಮದಂತೆಯೇ ಯೋಜನೆಗಳ ನಿರೂಪಣೆ ಮತ್ತು ನಿರ್ವಹಣೆಗಳ ಬಗೆಗೆ ಒಂದು ಸರ್ವಸಮ್ಮತ ಒಲವು ಇದೆ ಎಂದು ತೋರುತ್ತದೆ. ಅದರಲ್ಲೂ ಸರಿಸುಮಾರು ಹತ್ತೊಂಬನೇ ಶತಮಾನದ ಅನಂತರದಲ್ಲಿ ಹೀಗೆ ಯೋಜನೆಗಳನ್ನು ಭಾಷೆಗಳ ನೆಲೆಯಲ್ಲಿ ರೂಪಿಸುವ ಪ್ರವೃತ್ತಿ ಬೆಳೆದು ಬಂದಿದೆ. ಭಾಷೆಯ ಬೆಳವಣಿಗೆಯ ಬಗೆಗೆ ಹೀಗೆ ಯೋಜನೆಗಳನ್ನು ರೂಪಿಸುವ ಪ್ರವೃತ್ತಿ ಬಹು ಹಿಂದಿನಿಂದಲೂ ಇದ್ದಿತೆಂದು ಹೇಳಲು ನಿದರ್ಶನಗಳಿವೆ. ಭಾಷೆಗಳಿಗೆ ಲಿಪಿವ್ಯವಸ್ಥೆ ರೂಪಿಸಿದ್ದು, ವ್ಯಾಕರಣಗಳನ್ನು ಬರೆದದ್ದು, ಕಲಿಕೆಯ ವಿಧಾನಗಳನ್ನು ನಿರೂಪಿಸಿದ್ದು, ನಿಘಂಟುಗಳನ್ನು ರಚಿಸಿದ್ದು, ಇವೆಲ್ಲವೂ ಒಂದಲ್ಲ ಒಂದು ವಿಧದಲ್ಲಿ ಭಾಷಾಯೋಜನೆಗಳೇ. ಇವುಗಳನ್ನೆಲ್ಲಾ ವ್ಯಕ್ತಿಗಳು ಕಾರ್ಯಪ್ರವೃತ್ತಿಸಿದಂತೆ ತೋರಿದರೂ, ಎಷ್ಟೋ ವೇಳೆ ಆಯಾ ಕಾಲದ ಆಳುವ ವರ್ಗದ ಒತ್ತಾಸೆಗಳು ಇಂತಹ ಯೋಜನೆಗಳ ಹಿಂದೆ ಇವೆ ಎನ್ನುವುದಕ್ಕೂ ನಿದರ್ಶನಗಳಿವೆ.

ಕರ್ನಾಟಕ ಸರಕಾರದ ಭಾಷಾನೀತಿಯು ಹೀಗೆ ಎಲ್ಲಿಯೂ ನಿರ್ದಿಷ್ಟ ದಾಖಲೆಯಾಗಿ ಲಭಿಸುವುದಿಲ್ಲ. ಕಾಲದಿಂದ ಕಾಲಕ್ಕೆ ಸರಕಾರ ತನ್ನ ನಿರ್ಣಯ ಸ್ವರೂಪ, ಕಾರ್ಯಕ್ರಮಗಳ ಮೂಲಕ ತನ್ನ ಭಾಷಾನೀತಿಯನ್ನು ತಾನೇ ಕಂಡುಕೊಳ್ಳುತ್ತಾ ಹೋದಂತೆ ಕಾಣುತ್ತದೆ. ಕಳೆದ ಐವತ್ತು ವರ್ಷಗಳಲ್ಲಿ ಈ ಭಾಷಾ ನೀತಿ ಶೋಧದ ಹೆಜ್ಜೆಗಳನ್ನು ನಾವು ಗುರುತಿಸಲು ಬರುತ್ತದೆ. ಈ ಪ್ರಮಾಣದಲ್ಲಿ ಸರಕಾರವು ಪ್ರಾಂತೀಯ, ದೇಶೀಯ ಮತ್ತು ಜಾಗತಿಕ ನೆಲೆಯ ಪ್ರಭಾವ ಪ್ರೇರಣೆಗಳಿಗೆ ಒಳಗಾಗಿದೆ.

ಎಷ್ಟೋ ಸಂದರ್ಭಗಳಲ್ಲಿ ತನ್ನ ಆಚರಿತ ಭಾಷಾನೀತಿಯನ್ನು ಬಿಟ್ಟುಕೊಟ್ಟು ಹೊಸ ಭಾಷಾನೀತಿಯ ಕಡೆಗೆ ಸರಕಾರ ಪಲ್ಲಟಗೊಂಡಿರುವುದು ಉಂಟು. ಇದರಿಂದಾಗಿ ಸರಕಾರದ ಭಾಷಾಯೋಜನೆಯು ಕೂಡ ನಿರ್ದಿಷ್ಟ ಚೌಕಟ್ಟಿನಲ್ಲಿ ನಿಗದಿಗೊಂಡಿಲ್ಲ. ಅದರಲ್ಲಾಗಿರುವ ಬದಲಾವಣೆಗಳನ್ನು ಗಮನಿಸಿಯೇ ಕೆಲವೊಮ್ಮೆ ಸರಕಾರಕ್ಕೆ ಭಾಷಾಯೋಜನೆಯೇ ಇಲ್ಲ ಎಂದು ಕೆಲವರು ಹೇಳಿರುವುದುಂಟು ಇದೊಂದು ಅತಿರೇಕದ ಪ್ರತಿಕ್ರಿಯೆ. ಆದರೆ ಭಾಷಾಯೋಜನೆಯಲ್ಲಿ ಗೊಂದಲಗಳಿಲ್ಲವೆಂದಲ್ಲ. ಈ ಗೊಂದಲಗಳಿಗೆ ಕಾರಣಗಳು ಸಾಮಾಜಿಕ ನೆಲೆಯಲ್ಲಿವೆ. ಅಥವಾ ಸಾಮಾಜಿಕ ನೆಲೆಯ ಗೋಜಲುಗಳೇ ಭಾಷಾಯೋಜನೆಯಲ್ಲೂ ಪ್ರತಿನಿಧಿತವಾಗಿವೆ ಎನ್ನಲು ಅಡ್ಡಿಯಿಲ್ಲ.

ಭಾಷಾಯೋಜನೆ

ಸಾಮಾನ್ಯವಾಗಿ ಭಾಷಾಯೋಜನೆಗಳನ್ನು ಮೂರು ನೆಲೆಗಳಲ್ಲಿ ಭಾಷಾ ಅಧ್ಯಯನಕಾರರು ನಿರೂಪಿಸುತ್ತಾರೆ. ೧. ಸ್ಥಾನಮಾನ ನಿರ್ಧಾರ ೨. ಪರಿಕರಗಳ ನಿರ್ಮಾಣ ಮತ್ತು ೩. ಕಲಿಕೆಯ ವಿಧಾನಗಳ ನಿರೂಪಣೆ. ಇವುಗಳಲ್ಲಿ ಮೂರನೆಯದನ್ನು ಪ್ರತ್ಯೇಕವಾಗಿ ಪರಿಗಣಿಸುವ ಅಗತ್ಯವಿಲ್ಲವೆಂದು ಕೆಲವರು ವಾದಿಸುವುದುಂಟು. ಆದರೆ ಕನ್ನಡದಂತಹ ಭಾಷೆಗಳ ಸಂದರ್ಭದಲ್ಲಿ ಈ ನೆಲೆಯ ಪರಿಶೀಲನೆ ಅಗತ್ಯವೆಂದು ತೋರಿದ್ದರಿಂದ ಮೂರನೇ ಅಂಶವನ್ನೂ ಇಲ್ಲಿ ಚರ್ಚೆಗೆ ಗುರಿಪಡಿಸಲಾಗುವುದು.

೧. ಸ್ಥಾನಮಾನಗಳ ನಿರ್ಧಾರ: ಭಾಷೆಗೆ ಸಮಾಜದ ಸಂರಚನೆಯಲ್ಲಿ ಯಾವ ಸ್ಥಾನಮಾನ ಇರಬೇಕು ಎನ್ನುವುದು ಈ ನೆಲೆಯ ಮುಖ್ಯ ನಿರ್ಧಾರ; ಮತ್ತು ಈ ಸ್ಥಾನಮಾನವನ್ನು ಭಾಷೆಗೆ ಸಾಧಿಸಿಕೊಡಲು ಯಾವ ಕಾರ್ಯಕ್ರಮವನ್ನು ರೂಪಿಸಬೇಕು ಎಂಬುದು ಕೂಡ ಭಾಷಾ ಯೋಜನೆಯ ಈ ಹಂತದಲ್ಲಿ ನಿರೂಪಿತವಾಗುತ್ತದೆ.

ಒಂದು ಆಡಳಿತ ವಲಯದಲ್ಲಿ ಇರುವ ಜನರೆಲ್ಲ ಒಂದೇ ಭಾಷೆಯನ್ನು ಆಡುತ್ತಿದ್ದರೆ ಆಗ ಸ್ಥಾನಮಾನದ ನಿರ್ಧಾರದ ಸಮಸ್ಯೆ ಮುಖ್ಯವಾಗುವುದಿಲ್ಲ. ಇಂತಹ ಸಮುದಾಯಗಳು ಕೂಡ ಇನ್ನೊಂದು ಸಮುದಾಯದೊಡನೆ ವ್ಯವಹರಿಸಬೇಕಾಗಿ ಬರುತ್ತದೆ. ಆ ಇನ್ನೊಂದು ಭಾಷೆ ಬೇರೆ ಆಡಳಿತ ಪ್ರದೇಶಕ್ಕೆ ಸೇರಿದ್ದರೆ, ಆಗ ಈ ಎರಡು ಭಾಷೆಗಳ ನಡುವೆ ಸ್ಥಾನಮಾನದ ಸಮಸ್ಯೆ ಮುಂಚೂಣಿಗೆ ಬರುತ್ತದೆ. ಇನ್ನು, ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಬಳಸುವ ಜನರು ಒಂದೇ ಆಡಳಿತ ವಲಯದಲ್ಲಿ ಇದ್ದಾಗಲಂತೂ ಈ ಸ್ಥಾನಮಾನದ ನಿರ್ಧಾರ ಅತ್ಯಗತ್ಯ. ಈ ನಿರ್ಧಾರ ಕೇವಲ ಭಾಷಿಕ ಆಯ್ಕೆಯಲ್ಲ. ಅದನ್ನು ನಿರ್ಣಯಿಸುವ ಒತ್ತಡಗಳು ಬೇರೆ ಕಡೆ ಇರುತ್ತವೆ. ಉದಾ.ಗೆ ಕನ್ನಡ ಮತ್ತು ತೆಲುಗು. ಈ ಭಾಷೆಗಳ ಸ್ಥಾನ ಕರ್ನಾಟಕದಲ್ಲಿ ಏನು ಎಂಬ ಪ್ರಶ್ನೆಯು ಕನ್ನಡ ಮತ್ತು ಇಂಗ್ಲಿಶ್ ಇವುಗಳ ಸಂಬಂಧ ಏನು ಎಂಬುದಕ್ಕಿಂತ ಬೇರೆ ಉತ್ತರವನ್ನು ಬಯಸುತ್ತದೆ. ಇದಕ್ಕೆ ಆಯಾ ಭಾಷೆಗಳಿಗೆ ಮತ್ತು ಭಾಷಾ ಸಮುದಾಯಗಳಿಗೆ ಇರುವ ಹಿನ್ನೆಲೆಗಳು ಮುಖ್ಯವಾಗಿವೆ.

ಸ್ಥಾನಮಾನದ ನಿರ್ಧಾರ ಮಾಡುವಾಗ ಅದು ಏಕಘಟಕೀಯ ನೆಲೆಯಲ್ಲಿ ಇರಬೇಕೆಂದು ಹೇಳುವುದು ಯಾವಾಗಲೂ ಸಾಧ್ಯವಾಗದು. ಉದಾ.ಗೆ ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಎಂಬಂತಹ ಮಾತು ಒಂದು ಹೇಳಿಕೆಯಾಗಿ ತೋರುವುದೇ

ಹೊರತು ವಾಸ್ತವವಾಗಿ ಒಂದು ನಿರ್ಧರಿತ ಕಾರ್ಯಕ್ರಮವಾಗಲಾರದು. ಹಾಗೆ ಆಗಿಲ್ಲ ಎಂಬುದಕ್ಕೆ ಹತ್ತಾರು ನಿದರ್ಶನಗಳನ್ನು ಕೊಡಬಹುದು. ಅಂದರೆ ಒಂದು ಭಾಷೆಯ ಸ್ಥಾನಮಾನದ ನಿರ್ಧಾರ ಆ ಭಾಷೆಯನ್ನು ಯಾವ ಯಾವ ವಲಯದಲ್ಲಿ ಯಾವ ಯಾವ ಬಗೆಯಲ್ಲಿ ಬಳಸುತ್ತೇವೆ ಎಂಬುದನ್ನು ಅವಲಂಬಿಸಿರುತ್ತದೆ. ಹೀಗಾಗಿ ಬೇರೆ ಬೇರೆ ಬಳಕೆಯ ವಲಯಗಳಿಗೆ ಅನುಗುಣವಾಗಿ ಬೇರೆ ಬೇರೆ ಸ್ಥಾನಮಾನದ ಯೋಜನೆಗಳು ರೂಪಿಸಬೇಕಾಗುತ್ತದೆ. ಇದು ಒಂದು ವಾಸ್ತವ ನೆಲೆಯ ಸಂಗತಿ. ಇದರಲ್ಲಿ ತಾತ್ವಿಕ ಗೊಂದಲಗಳು ಇವೆ ಎಂದು ಭಾಸವಾದರೂ ಪರಿಸ್ಥಿತಿಯ ವಿನ್ಯಾಸಗಳು ಹೀಗೆ ಬೇರೆ ಬೇರೆ ನಿರ್ಣಯಗಳನ್ನು ಮಾಡಲು ಒತ್ತಾಯಿಸುತ್ತವೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಸರಕಾರವು ಕನ್ನಡದ ಸ್ಥಾನಮಾನವನ್ನು ಆಡಳಿತ, ಶಿಕ್ಷಣ, ವಾಣಿಜ್ಯ, ಸಂವಹನ ಮಾಧ್ಯಮಗಳು ಹೀಗೆ ಬೇರೆ ಬೇರೆ ವಲಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಸ್ಥಾನಮಾನ ನಿರ್ದೇಶನವನ್ನು ಮಾಡಿದೆ. ಅದಕ್ಕನುಗುಣವಾದ ಕಾರ್ಯಕ್ರಮವನ್ನು ಕೂಡ ರೂಪಿಸಿಕೊಂಡಿದೆ.

೨. **ಪರಿಕರಗಳ ನೆಲೆಯ ಭಾಷಾಯೋಜನೆ** ಎಂದರೇನು ಎಂಬುದನ್ನು ತಿಳಿಯುವುದು ಅಗತ್ಯ. ಒಂದು ಭಾಷೆಯನ್ನು ವಿವಿಧ ಉದ್ದೇಶಗಳಿಗೆ ಮತ್ತು ವಿವಿಧ ವಲಯಗಳಲ್ಲಿ ಬಳಸುವುದು ಅಗತ್ಯವಾದಾಗ ಇಂತಹ ಬಳಕೆಗಳಿಗೆ ಅನುಕೂಲಕರವಾದ ಭಾಷಾ ಪರಿಕರಗಳನ್ನು ಸಿದ್ಧಪಡಿಸುವುದು ಈ ಯೋಜನೆಯ ವ್ಯಾಪ್ತಿಗೆ ಬರುತ್ತದೆ. ಕೆಲವು ಪ್ರಾಸಂಗಿಕ ನಿದರ್ಶನಗಳನ್ನು ಇಲ್ಲಿ ನೀಡುವುದು ಅಗತ್ಯ. ಲಿಪಿ ಇಲ್ಲದ ಭಾಷೆಗೆ ಒಂದು ಲಿಪಿಯನ್ನು ರೂಪಿಸುವುದು, ಈಗಾಗಲೇ ಲಿಪಿವ್ಯವಸ್ಥೆ ಇದ್ದರೆ ಅದನ್ನು ಹೊಸ ಅಗತ್ಯಗಳಿಗೆ ಅನುಗುಣವಾಗಿ ಸಜ್ಜುಗೊಳಿಸುವುದು ಇಂತಹ ಯೋಜನೆಗಳು. ಲಿಪಿ ಇರುವ ಮತ್ತು ಬಹು ದೀರ್ಘ ಕಾಲದ ಬರವಣಿಗೆಯ ಚರಿತ್ರೆ ಇರುವ ಕನ್ನಡದಂತಹ ಭಾಷೆಗೆ ಇಂತಹ ಯೋಜನೆಗಳು ಏಕೆ ಬೇಕು ಎಂಬ ಪ್ರಶ್ನೆ ಸಾಧ್ಯ. ಆದರೆ ಕನ್ನಡದ ಲಿಪಿವ್ಯವಸ್ಥೆಯಲ್ಲಿ ಕಳೆದ ಹದಿನಾರನೇ ಶತಮಾನದಲ್ಲಿ ಎಷ್ಟು ಬದಲಾವಣೆ ಆಗಿದೆ ಎಂಬುದನ್ನು ಲಿಪಿವಿಕಾಸವನ್ನು ಅಭ್ಯಾಸ ಮಾಡಿದವರು ಬಲ್ಲರು. ಯಾವ ಭಿತ್ತಿಯ ಮೇಲೆ ಮತ್ತು ಯಾವ ಉಪಕರಣ ಬಳಸಿ ಬರೆಯುತ್ತೇವೆ ಎಂಬುದನ್ನು ಅವಲಂಬಿಸಿ ಲಿಪಿವ್ಯವಸ್ಥೆಯಲ್ಲಿ ಬದಲಾವಣೆಗಳು ಆಗುತ್ತಲೇ ಬಂದಿವೆ. ಬರೆಯುವ ಭಿತ್ತಿಗಳು ಕಲ್ಲು, ಮಣ್ಣಿನ ಹಲಗೆ, ಲೋಹದ ತಗಡು ಇವುಗಳಿಂದ ತಾಳೆಯ ಎಲೆಗೆ ಬದಲಾದಾಗ, ಅಲ್ಲಿಂದ ವಿವಿಧ ಬಗೆಯ ಕಾಗದಗಳ ಮೇಲೆ ಬರೆಯಬೇಕಾಗಿ ಬಂದಾಗ ಕನ್ನಡ ಲಿಪಿಯಲ್ಲಿ ಬದಲಾವಣೆಗಳು ಆಗುತ್ತಾ ಬಂದಿವೆ. ಹೀಗೆಯೇ ಭಿತ್ತಿಗಳಂತೆಯೇ ಬರವಣಿಗೆಗೆ ಬಳಸುತ್ತಿದ್ದ ಸಾಮಗ್ರಿಗಳೂ ಬೇರೆಯಾಗಿವೆ. ತೀರ ಇತ್ತೀಚಿನವರೆಗೂ ಲಿಪಿ ಮೂಡಿಸಲು ಒಂದಿಲ್ಲೊಂದು ಬಗೆಯಲ್ಲಿ ಕೈಬೆರಳುಗಳನ್ನು ಬಳಸುತ್ತಾ ಬಂದಿದ್ದೇವೆ. ಕಳೆದ ಐವತ್ತು ವರ್ಷಗಳಲ್ಲಿ ಮೂರು ಮುಖ್ಯ ಪಲ್ಲಟಗಳು ನಡೆದಿವೆ. ೧. ಬೆರಳಚ್ಚು ಯಂತ್ರ ೨. ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರ ಮತ್ತು ೩. ಗಣಕ ಯಂತ್ರ. ಈ ಬದಲಾವಣೆಗಳಿಂದಾಗಿ ಕನ್ನಡ ಲಿಪಿವ್ಯವಸ್ಥೆಯಲ್ಲಿ ಹಲವು ಪರಿವರ್ತನೆಗಳು ಅಗತ್ಯವಾಗಿವೆ. ಈ ಮಾತು ಇಲ್ಲಿ ಹೇಳಿದ್ದರ ಉದ್ದೇಶವಿಷ್ಟೇ. ಬರವಣಿಗೆಗೆ

ದೀರ್ಘ ಚರಿತ್ರೆ ಇದೆ ಎಂದ ಮಾತ್ರಕ್ಕೆ ಕನ್ನಡಕ್ಕೆ ಲಿಪಿನೆಲೆಯ ಭಾಷಾಯೋಜನೆಯ ಅಗತ್ಯವಿಲ್ಲ ಎಂದು ವಾದಿಸಲು ಬರುವುದಿಲ್ಲ ಎಂಬುದನ್ನು ಖಚಿತಪಡಿಸಬೇಕಾಗಿದೆ.

ಇದಲ್ಲದೆ ಭಾಷೆಯ ಬಳಕೆಗೆ ಇನ್ನೂ ಹತ್ತಾರು ಪರಿಕರಗಳು ಅಗತ್ಯವಾಗುತ್ತವೆ. ಹಿಂದೆ ಭಾಷೆಯನ್ನು ಸೀಮಿತ ವಲಯಗಳಲ್ಲಿ ಮತ್ತು ಸೀಮಿತ ಉದ್ದೇಶಗಳಿಗಾಗಿ ಬಳಸುತ್ತಿದ್ದಾಗ ಎದುರಾಗದ ಸಮಸ್ಯೆಗಳು ಈಗ ಮತ್ತೆ ಮತ್ತೆ ಎದುರು ನಿಲ್ಲುತ್ತವೆ. ಅಲ್ಲದೇ ಹಿಂದೊಮ್ಮೆ ಇಂತಹ ಸಮಸ್ಯೆಗಳು ಬಂದಾಗ ಅವುಗಳ ಸ್ವರೂಪ ಮತ್ತು ಪ್ರಮಾಣಗಳನ್ನು ಗಮನಿಸಿ ಪರಿಹಾರ ನೀಡಲು ಭಾಷಿಕ ಸಮುದಾಯಗಳಲ್ಲಿ ತಿಳಿದವರು ಇರುತ್ತಿದ್ದರು. ಈ ಸಂಬಂಧದ ತಿಳುವಳಿಕೆ ಅವರಲ್ಲಿ ಇರುತ್ತಿತ್ತು. ಅವರನ್ನು ಆಶ್ರಯಿಸಿ ಪರಿಹಾರಗಳನ್ನು ಪಡೆಯಬಹುದಾಗಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಅಂದರೆ ತಿಳಿದವರು ಇಲ್ಲವಾಗಿದ್ದಾರೆ ಎಂದಲ್ಲ. ಪ್ರಜಾಪ್ರಭುತ್ವದ ಮೂಲತತ್ವಗಳಲ್ಲಿ, ತಿಳುವಳಿಕೆಯು ಹೀಗೆ ಯಾರೋ ಕೆಲವರ ಸ್ವತ್ತಾಗುವುದು ಸಮರ್ಥನೀಯವಾದ ವಿಷಯವಲ್ಲ, ಮಾಹಿತಿ ಮತ್ತು ಅರಿವು ಯಾರಿಗೆ ಬೇಕಾದರೂ ಯಾವಾಗ ಬೇಕಾದರೂ ಸಿಗುವಂತೆ ವ್ಯವಸ್ಥೆ ರೂಪಗೊಳ್ಳಬೇಕಾದುದು ಅಗತ್ಯ. ಈ ದೃಷ್ಟಿಯಿಂದ ಭಾಷೆಯ ಬಳಕೆಯ ವಿಷಯಗಳು ಹೆಚ್ಚಾದಂತೆ, ಬಳಕೆಯ ಉದ್ದೇಶಗಳು ಹೆಚ್ಚಾದಂತೆ, ಉಂಟಾಗುವ ಸಮಸ್ಯೆಗಳನ್ನು ಹಾಗೆ ಬಳಸು ವವರೇ ಪರಿಹರಿಸಿಕೊಳ್ಳಲು ಅನುಕೂಲವಾಗುವ ಸನ್ನಿವೇಶ ನಿರ್ಮಾಣವಾಗಬೇಕು. ಉದಾ.ಗೆ ನಾವು ಓದುತ್ತಿರುವ ಯಾವುದೋ ಭಾಷಿಕ ದಾಖಲೆಯಲ್ಲಿ ನಮಗೆ ಅರ್ಥಗೊತ್ತಿಲ್ಲದ ಪದವೊಂದಿದೆ ಎಂದುಕೊಳ್ಳಿ, ಆ ಪದದ ಅರ್ಥವನ್ನು ನಾವು ತಿಳಿಯುವುದು ಹೇಗೆ? ಕೆಲವೊಮ್ಮೆ ಆ ಪದ ಬಳಕೆಯಾದ ಸಂದರ್ಭವನ್ನು ಗಮನಿಸಿ ಅರ್ಥವನ್ನು ಹೇಗೋ ಊಹಿಸಿ ಸಮಸ್ಯೆಯಿಂದ ಪಾರಾಗಿಬಿಡಬಹುದು. ಆದರೆ ಇದು ಸರಿಯಾದ ಪರಿಹಾರವಲ್ಲ. ತಿಳಿಯದ ಪದಗಳಿಗೆ ಅರ್ಥವನ್ನು ಕಂಡುಕೊಳ್ಳಲು ನೆರವಾಗುವ ಸರಿಯಾದ ಪರಿಕರಗಳು ಭಾಷೆಯ ಬಳಕೆದಾರರಿಗೆ ಸುಲಭವಾಗಿ ಸಿಗುವಂತಿರಬೇಕು. ಅಂತಹ ಪರಿಕರಗಳೇ ಅರ್ಥಕೋಶಗಳು. ಬೇರೆ ಬೇರೆ ಉದ್ದೇಶಗಳಿಗೆ ಅನುಕೂಲವಾಗುವ ಬೇರೆ ಬೇರೆ ಅರ್ಥಕೋಶಗಳು ಸಿದ್ಧವಾಗುವುದು ಇದೇ ಉದ್ದೇಶಕ್ಕೆ.

ಹೀಗೆಯೇ ಭಾಷೆಯ ರಚನೆಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ವ್ಯಾಕರಣಗಳು ಅಗತ್ಯವಾಗುತ್ತವೆ. ವಿವಿಧ ಸಂದರ್ಭಗಳಿಗೆ ಅನುಗುಣವಾಗಿ ಭಾಷೆಯನ್ನು ನಿರೂಪಿಸಬೇಕಾಗಿ ಬಂದಾಗ ಆಯಾ ಸಂದರ್ಭದ ಅಗತ್ಯಗಳನ್ನು ತಿಳಿಸಿಕೊಡುವ, ಮತ್ತು ಮಾದರಿಗಳ ಮೂಲಕ ದಾರಿ ತೋರಿಸುವ ಕೈಪಿಡಿಗಳು ಕೂಡಾ ಈ ಪರಿಕರಗಳ ವ್ಯಾಪ್ತಿಯಲ್ಲೇ ಬರುತ್ತವೆ.

೩. ಕಲಿಕೆಯ ವಿಧಾನಗಳ ನಿರೂಪಣೆ: ಈ ಮೊದಲೇ ಹೇಳಿದಂತೆ ಈ ನೆಲೆಯ ಭಾಷಾಯೋಜನೆಯನ್ನು ಅಗತ್ಯವೆಂದು ಕೆಲವರು ಒಪ್ಪುವುದಿಲ್ಲ. ಆದರೆ ಮೊದಲ ಯೋಜನೆಯಲ್ಲಿ ಆದ ಸ್ಥಾನಮಾನದ ನಿರ್ಣಯ ಮಾತ್ರವೇ ಕೆಲವೊಮ್ಮೆ ಸಾಲುವುದಿಲ್ಲ. ಏಕೆಂದರೆ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಆಡುವ ಸಮುದಾಯಗಳು ಹೆಚ್ಚಾಗುತ್ತಿರುವ

ಸಂದರ್ಭಗಳು ಇವೆ. ಇದರಿಂದಾಗಿ ಯಾವ ಯಾವ ಭಾಷೆಗಳನ್ನು ಕಲಿಯಬೇಕು, ಹಾಗೆ ಕಲಿಯಲು ಅನುಕೂಲವಾದ ದಾರಿಗಳು ಯಾವುವು ಎಂಬುದನ್ನು ತಿಳಿಸುವ ಯೋಜನೆಗಳು ಅಗತ್ಯ. ಅಲ್ಲದೆ, ಹಲವು ಭಾಷೆಗಳಲ್ಲಿ ಯಾವ ಭಾಷೆಯನ್ನು ಎಲ್ಲಿ ಹೇಗೆ ಬಳಸಬೇಕು ಎಂಬುದನ್ನು ತೋರಿಸಿಕೊಡುವ ಅಗತ್ಯವಿದೆ. ಕನ್ನಡದಂತಹ ಭಾಷೆಗೆ ಈ ನೆಲೆಯ ಯೋಜನೆಗಳು ಅಗತ್ಯವೆಂದು ಈ ಹಿಂದೆ ಹೇಳಿದೆ. ಕನ್ನಡಕ್ಕೆ ಎಲ್ಲಾ ವಲಯಗಳಲ್ಲೂ ಮನ್ನಣೆ ನೀಡುವ ನಿರ್ಧಾರವನ್ನು ಸರ್ಕಾರ ಮಾಡಿದರೆ ಸಾಲದು. ಅದನ್ನು ಎಲ್ಲಾ ವಲಯದಲ್ಲೂ ಬೆಳೆಸಲು ಅನುಕೂಲವಾದ ಸಾಧ್ಯತೆಗಳನ್ನು ಸೃಷ್ಟಿಸಬೇಕಾಗುತ್ತದೆ. ಆಗ ಮಾತ್ರ ಕನ್ನಡದ ಬಳಕೆ ನಿರ್ದಿಷ್ಟ ಗುರಿಯತ್ತ ಸಾಗುವುದು ಸಾಧ್ಯವಾಗುತ್ತದೆ.

ಕಳೆದ ಐವತ್ತು ವರ್ಷಗಳಲ್ಲಿ ಈ ಮೂರು ನೆಲೆಗಳಲ್ಲಿ ನಡೆದಿರುವ ಕರ್ನಾಟಕದ ಭಾಷಾಯೋಜನೆಗಳ ವಿವರವಾದ ಸಮೀಕ್ಷೆ ಅಗತ್ಯವಾಗಿದೆ. ಕರ್ನಾಟಕ ಸರ್ಕಾರವು ತನ್ನ ಭಾಷಾನೀತಿಯನ್ನು ಸರಳ ನೆಲೆಯಲ್ಲಿ ನಿರೂಪಿಸಿದೆ. ಆದರೂ ಅದರ ಕೆಲವು ಪರಿಣಾಮಗಳನ್ನು ಕಾಲದಿಂದ ಕಾಲಕ್ಕೆ ನಾವು ನೋಡುತ್ತಾ ಬಂದಿದ್ದೇವೆ. ಭಾರತದ ಸಂವಿಧಾನವು ರಾಷ್ಟ್ರದ ಅಧಿಕೃತ ಸಂಪರ್ಕಭಾಷೆಯಾಗಿ ಹಿಂದಿಯನ್ನು ಆಯ್ಕೆ ಮಾಡಿದೆ. ಆ ಹೊತ್ತಿನಲ್ಲಿ ಹೀಗೆ ಸಂಪರ್ಕಭಾಷೆಯಾಗಬೇಕಾದದ್ದು ಹಿಂದಿಯಲ್ಲ, ಹಿಂದೂಸ್ತಾನಿ; ಇದನ್ನು ದೇವನಾಗರಿ ಲಿಪಿಯಲ್ಲಿ ಬರೆಯಬಹುದಾಗಿದೆ ಎಂಬುದು ಗಾಂಧೀಜಿಯವರ ನಿಲುವಾಗಿತ್ತು. ಆದರೆ ಹಿಂದುಸ್ತಾನಿಗೆ ಆ ಸ್ಥಾನವನ್ನು ನೀಡಲು ಆ ಹೊತ್ತಿನ ಆಳುವ ವರ್ಗದ ಒಂದು ಗುಂಪು ಸಿದ್ಧವಿರಲಿಲ್ಲ. ಇವರು ಪ್ರಬಲರಾಗಿ ತಮ್ಮ ವಾದವನ್ನು ಮಂಡಿಸಿದರು. ಸಂವಿಧಾನ ರಚನೆಯ ಸಂದರ್ಭದಲ್ಲಿ ಈ ಗುಂಪಿನ ವಾದಕ್ಕೆ ಮನ್ನಣೆ ಸಿಕ್ಕು ದೇವನಾಗರಿ ಲಿಪಿಯಲ್ಲಿ ಬರೆಯುವ ಹಿಂದಿಗೆ ರಾಷ್ಟ್ರದ ಸಂಪರ್ಕಭಾಷೆಯಾಗುವ ಅವಕಾಶ ದೊರಕಿತ್ತು. ಇದರಿಂದ ಉಂಟಾದ ಪರಿಣಾಮಗಳ ಚರ್ಚೆಗೆ ಇಲ್ಲಿ ಅವಕಾಶವಿಲ್ಲ. ಜೊತೆಗೆ ಅಲ್ಲಿಯವರೆಗೆ ಆಡಳಿತ ಭಾಷೆಯಾಗಿದ್ದ ಇಂಗ್ಲಿಶನ್ನು ಕೂಡ ಅಧಿಕೃತ ಸಂಪರ್ಕಭಾಷೆಯನ್ನಾಗಿ ಪರಿಗಣಿಸಲಾಯಿತು. ರಾಷ್ಟ್ರದ ಮಟ್ಟದಲ್ಲಿ ಇದರ ಪರಿಣಾಮಗಳೇನೇ ಇರಲಿ ರಾಜ್ಯಮಟ್ಟದಲ್ಲಿ ಈ ನೀತಿಯ ಪರಿಣಾಮ ಏನಾಯಿತೆಂಬುದನ್ನು ಗಮನಿಸಬೇಕು.

ಸಂಪರ್ಕಭಾಷೆಯಾಗಿ ಅವಕಾಶ ಪಡೆದ ಇಂಗ್ಲಿಶ್ ರಾಜ್ಯಮಟ್ಟದಲ್ಲಿ ಎರಡನೆಯ ಆಡಳಿತ ಭಾಷೆಯಾಗಿಯೂ ಜಾಗ ಪಡೆದುಕೊಂಡಿತು. ರಾಜ್ಯಗಳ ನಡುವಣ ಮತ್ತು ರಾಜ್ಯ ಕೇಂದ್ರಗಳ ನಡುವಣ ವ್ಯವಹಾರಕ್ಕೆ ಇಂಗ್ಲಿಶ್ ಅಗತ್ಯವೆಂಬ ವಾದ ಮಂಡನೆಯಾಗಿ ಅದರ ಪರಿಣಾಮದಿಂದ ಇಂಗ್ಲಿಶ್‌ಗೆ ಸಂಪರ್ಕಭಾಷೆಯ ಅವಕಾಶ ಸಿಕ್ಕಿದ್ದೇನೋ ಸರಿ. ಆದರೆ ರಾಜ್ಯ ಮಟ್ಟದಲ್ಲಿ ಇಂಗ್ಲಿಶ್ ಆಡಳಿತ ಭಾಷೆಯಾಗಿಯೇ ಮುಂದುವರೆಯಿತು. ರಾಜ್ಯಗಳು ತಂತಮ್ಮ ಪ್ರಾಂತೀಯ ಭಾಷೆಗಳನ್ನು ತಂತಮ್ಮ ರಾಜ್ಯಗಳ ಆಡಳಿತ ಭಾಷೆಯಾಗಿ ಬಳಸಬಹುದು ಎಂಬ ಅವಕಾಶ ರಾಜ್ಯಾಂಗದಲ್ಲಿದೆ. ಹೀಗಿದ್ದರೂ ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸುವ ಅವಕಾಶ ನೀಡುವ ಕಾನೂನು ಜಾರಿಗೆ

ಬರಲು ಏಳು ವರ್ಷ ಹಿಡಿಯಿತು. ೧೯೭೩ರಲ್ಲಿ ಈ ಅವಕಾಶ ನೀಡುವ ಮಸೂದೆಯನ್ನು ಕರ್ನಾಟಕ ವಿಧಾನ ಮಂಡಲ ಅಂಗೀಕರಿಸಿತು. ಇದರಿಂದ ಇಂಗ್ಲಿಶ್‌ನ **ಬದಲು** ಕನ್ನಡ ಎಂದಾಗಲಿಲ್ಲ. ಬದಲಿಗೆ ಇಂಗ್ಲಿಶ್‌ನ **ಜೊತೆಯಲ್ಲಿ** ಕನ್ನಡ ಎಂಬ ಪರಿಸ್ಥಿತಿ ನಿರ್ಮಾಣವಾಯಿತು.

ಭಾರತ ಸಂವಿಧಾನದ ಭಾಷಾನೀತಿಯಲ್ಲಿ ಇಂಗ್ಲಿಶ್‌ಗೆ ಸಂಪರ್ಕಭಾಷೆಯಾಗಿ ಅವಕಾಶ ನೀಡಿದ್ದು ಸಂವಿಧಾನ ಅಂಗೀಕೃತವಾದ ವೇಳೆಯಿಂದ ಮುಂದಿನ ಹದಿನೈದು ವರ್ಷಗಳವರೆಗೆ ಮಾತ್ರ. ಅಂದರೆ ೧೯೬೫ರ ಜನವರಿ ೨೬ರ ನಂತರ ಇಂಗ್ಲಿಶನ್ನು ಸಂಪರ್ಕ ಭಾಷೆಯಾಗಿ ಬಳಸುವ ಅವಕಾಶ ಇಲ್ಲವೆಂದೇ ಸ್ಪಷ್ಟಪಡಿಸಲಾಗಿತ್ತು. ಆದರೆ ಈ ಹೊತ್ತಿಗೆ ಎಲ್ಲ ರಾಜ್ಯಗಳೂ ಹಿಂದಿಯನ್ನು ಸಂಪರ್ಕ ಭಾಷೆಯಾಗಿ ಬಳಸಲು ಸಿದ್ಧಗೊಳ್ಳಬೇಕಿತ್ತು. ಜೊತೆಗೆ ತಮ್ಮ ಪ್ರಾಂತೀಯ ಆಡಳಿತವನ್ನು ಪ್ರಾಂತೀಯ ಭಾಷೆಗಳಲ್ಲಿ ನಡೆಸಲು ಸನ್ನದ್ಧಗೊಳ್ಳಬೇಕಿತ್ತು. ೧೯೬೫ರಲ್ಲಿ ಆಗಬೇಕಾಗಿದ್ದ ಪರಿವರ್ತನೆ ಆಗಲಿಲ್ಲ. ಸಂವಿಧಾನಕ್ಕೆ ಮತ್ತೊಂದು ತಿದ್ದುಪಡಿಯನ್ನು ತಂದು ಇಂಗ್ಲಿಶನ್ನು ಸಂಪರ್ಕ ಭಾಷೆಯನ್ನಾಗಿ ಮತ್ತೆ ಮುಂದುವರೆಸುವ ಅವಕಾಶವನ್ನು ಕಲ್ಪಿಸಲಾಯಿತು. ಈ ತಿದ್ದುಪಡಿಯಲ್ಲಿ ಬಹು ಎಚ್ಚರಿಕೆಯಿಂದ ಕಾಲಮಿತಿಯ ಶರತ್ತನ್ನು ವಿಧಿಸಿರಲಿಲ್ಲ. ಮೊದಲ ಹದಿನೈದು ವರ್ಷಗಳಲ್ಲಿ ಆಗದೇ ಹೋದದ್ದು ಮುಂದಿನ ನಲವತ್ತು ವರ್ಷಗಳಲ್ಲಾದರೂ ಆಗುವುದು ಹೇಗೆ ಸಾಧ್ಯ? ಇಂಗ್ಲಿಶ್ ತನ್ನ ಸ್ಥಾನದಲ್ಲಿ ಭದ್ರವಾಗಿ ಉಳಿದಿದೆ.

ಕರ್ನಾಟಕದಂತಹ ರಾಜ್ಯಗಳು ೧೯೬೫ರಲ್ಲಿ ಹಿಂದಿಯ ಜೊತೆಗೆ ಇಂಗ್ಲಿಶನ್ನು ಸಂಪರ್ಕಭಾಷೆಯನ್ನಾಗಿ ಮುಂದುವರಿಸುವ ಚಳುವಳಿಯ ಪರವಾಗಿ ಇದ್ದುದಕ್ಕೆ ಎರಡು ಕಾರಣಗಳಿವೆ. ೧. ಹಿಂದಿಯು ಒತ್ತಾಯದಿಂದ ಹೇರಲಾದ ಭಾಷೆಯೆಂಬ, ಜನರಲ್ಲಿ ಪ್ರಚಲಿತವಿದ್ದ ಭಾವನೆಗಳ ಪರವಾಗಿ ನಿಂತದ್ದು. ಹೀಗೆ ಹಿಂದಿಯನ್ನು ಜನರ ಮೇಲೆ ಹೇರುವುದರಿಂದ ದೇಶ ಒಡೆದು ಛಿದ್ರವಾಗುತ್ತದೆ ಎಂಬ ನಿಲುವನ್ನು ರಾಜ್ಯ ಸರ್ಕಾರವು ಸದ್ದಿಲ್ಲದೆ ಸಮರ್ಥಿಸಿದಂತಿದೆ. ೨. ಈ ಕಾರಣ ಇದಕ್ಕಿಂತ ಮುಖ್ಯವಾದದ್ದು. ಅದೆಂದರೆ ಏಕೀಕರಣವಾದ ಒಂಬತ್ತು ವರ್ಷಗಳ ನಂತರವೂ ಕನ್ನಡವನ್ನು ಇಂಗ್ಲಿಶಿನ ಸ್ಥಾನದಲ್ಲಿ ರಾಜ್ಯದ ಆಡಳಿತ ಭಾಷೆಯನ್ನಾಗಿ ಬಳಸಲು ರಾಜ್ಯಸರ್ಕಾರ ಸನ್ನದ್ಧಗೊಂಡಿರಲಿಲ್ಲ. ಇದಕ್ಕೆ ಬೇಕಾದ ಯೋಜನೆಗಳನ್ನು ರೂಪಿಸಿರಲಿಲ್ಲ. ತನ್ನ ಈ ಇಬ್ಬಂದಿ ಸ್ಥಿತಿಯಿಂದ ಹೊರಬರಲು ಪ್ರಾಂತೀಯ ಸರಕಾರಗಳಿಗೆ ಇದ್ದ ದಾರಿ ಎಂದರೆ ಹಿಂದಿಯನ್ನು ವಿರೋಧಿಸುವ ನೆಪದಲ್ಲಿ ಇಂಗ್ಲಿಶನ್ನು ಸಮರ್ಥಿಸುವುದು. ಸಂಪರ್ಕಭಾಷೆಯಾಗಿ ಇಂಗ್ಲಿಶ್ ಮುಂದುವರೆಯಿತೆಂದರೆ, ಬಳಸು ಮಾರ್ಗದಿಂದ ರಾಜ್ಯಮಟ್ಟದಲ್ಲಿ ಆಡಳಿತ ಭಾಷೆಯಾಗಿ ಇಂಗ್ಲಿಶನ್ನೇ ಉಳಿಸಿಕೊಳ್ಳುವ ಅವಕಾಶ ಸಿಗುತ್ತದೆ. ಈ ಸಂಧಿಕಾಲದಲ್ಲಿ ಕನ್ನಡದ ನೀತಿ ಹಿಂದೆ ಸರಿದು, ಆ ಸಂದರ್ಭದ ಆಡಳಿತಾತ್ಮಕ ಬಿಕ್ಕಟ್ಟಿನಿಂದಾಗಿ ಪಾರಾಗಲು ಸರಕಾರಗಳು ನಿರ್ಧರಿಸಿದ್ದವು. ಹೀಗಾಗಿ ಆಡಳಿತ ಭಾಷೆಯಾಗಿ ಕನ್ನಡ ಮಾನ್ಯವಾದರೂ ಅದು

ಇಂಗ್ಲಿಶಿನೊಡನೆ ಸೆಣಸುವ ಸಂದರ್ಭ ಮಾತ್ರ ಹಾಗೆಯೇ ಮುಂದುವರೆದಿತ್ತು. ಇನ್ನೂ ಪರಿಸ್ಥಿತಿ ಹಾಗೆಯೇ ಉಳಿದಿದೆ.

ಭಾಷಾನೀತಿಯ ಇನ್ನೊಂದು ನೆಲೆ ಎಂದರೆ ಸಾಮಾಜೀಕರಣದ ಸಾಧನವಾದ ಶಿಕ್ಷಣ ಕ್ಷೇತ್ರದಲ್ಲಿ ಕಲಿಕೆಯ ಭಾಷೆಯಾಗಿ ಯಾವುದನ್ನು ಬಳಸಬೇಕು ಎಂಬ ಬಗೆಗೆ ನಿರ್ಧಾರ ಮಾಡುವುದು. ಏಕೀಕರಣಕ್ಕೂ ಹಿಂದೆಯೇ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಸಾರ್ವತ್ರಿಕ ಶಿಕ್ಷಣ ಜಾರಿಯಲ್ಲಿತ್ತು. ಇದರ ಸ್ವರೂಪ ಮತ್ತು ಪ್ರಮಾಣ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಇದ್ದವು. ಹೈದ್ರಾಬಾದ್ ನಿಜಾಮರ ಆಳ್ವಿಕೆಯಲ್ಲಿನ ಪ್ರದೇಶಗಳನ್ನು ಬಿಟ್ಟರೆ ಉಳಿದ ಕಡೆ ಸಾರ್ವತ್ರಿಕ ಶಿಕ್ಷಣದ ಕಲಿಕೆಯ ಭಾಷೆಯಾಗಿ ಕನ್ನಡಕ್ಕೆ ಮನ್ನಣೆ ದೊರೆತಂತೆ ತೋರುತ್ತಿತ್ತು. ಸರಿಸುಮಾರು ಏಳು-ಎಂಟರ ದಶಕದವರೆಗೆ ಹೀಗೆ ಕನ್ನಡವನ್ನು ಕಲಿಕೆಯ ಮಾಧ್ಯಮವನ್ನಾಗಿ ಬಳಸಿದ ಪರಿಣಾಮವಾಗಿ ಏಕೀಕರಣದ ಹೊತ್ತಿನಲ್ಲಿ ಆಡಳಿತ ಭಾಷೆಯ ಸಂಬಂಧದಲ್ಲಿ ಇದ್ದ ಸಮಸ್ಯೆಗಳು ಇಲ್ಲಿ ಇರಲಿಲ್ಲ. ಹೆಚ್ಚೆಂದರೆ ಈಗಾಗಲೇ ಬಳಕೆಯಲ್ಲಿದ್ದ ಈ ನೀತಿಯನ್ನು ಅಧಿಕೃತಗೊಳಿಸುವುದು ಮತ್ತು ವ್ಯಾಪಕಗೊಳಿಸುವುದು ಮಾತ್ರ ಸರ್ಕಾರದ ಗುರಿ ಆಗಬೇಕಿತ್ತು. ಇದನ್ನು ಸರ್ಕಾರ ನಿರಾಕರಿಸಲಿಲ್ಲ. ಕನ್ನಡವನ್ನು ಸಾರ್ವತ್ರಿಕ ಶಿಕ್ಷಣದ ಕಲಿಕೆಯ ಮಾಧ್ಯಮವನ್ನಾಗಿ ಒಪ್ಪಿಕೊಳ್ಳುವ ನೀತಿಯನ್ನು ಸರ್ಕಾರ ಮುಂದುವರೆಸಿತ್ತು.

ಆದರೆ ಮುಂದಿನ ದಿನಗಳು ಅಷ್ಟು ಸರಳವಾಗಲಿಲ್ಲ. ಅದಕ್ಕೆ ಶೈಕ್ಷಣಿಕವಲ್ಲದ ಹಲವು ಕಾರಣಗಳಿವೆ. ಮೊದಲನೆಯದಾಗಿ ಕಲಿಕೆಯ ವ್ಯಾಪ್ತಿಗೆ ಬಂದವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ಹೋಯಿತು. ಕಡ್ಡಾಯಶಿಕ್ಷಣದ ಹೊಣೆ ಹೊತ್ತ ಸರ್ಕಾರ ತನ್ನ ಸಂಪನ್ಮೂಲಗಳನ್ನು ಬಳಸಿ ನಾಡಿನ ಎಲ್ಲಾ ಕಡೆಯೂ ಪ್ರತಿ ಮಗುವಿಗೂ ಹತ್ತು ವರ್ಷಗಳ ಶಿಕ್ಷಣವನ್ನು ನೀಡುವುದು ಅಗತ್ಯವಾಗಿತ್ತು. ಆದರೆ ರಾಜ್ಯ ಸರ್ಕಾರದ ಇತರ ಯೋಜನಾಪ್ರಕ್ರಿಯೆಗಳು ಈ ಗುರಿಯನ್ನು ಮುಂಚೂಣಿಯಲ್ಲಿ ಇರಿಸಿಕೊಳ್ಳಲಿಲ್ಲ. ಸರಕಾರ ತಾನು ಮಾಡಬೇಕಾದ ಕೆಲಸವನ್ನು ಪೂರೈಸಲು ಖಾಸಗಿ ವಲಯಕ್ಕೆ ಅವಕಾಶ ನೀಡಿತು. ಶಿಕ್ಷಣ ಪ್ರಸಾರವೂ ತಮ್ಮ ಹಲವು ಗುರಿಗಳಲ್ಲಿ ಒಂದೆಂದು ತಿಳಿದಿದ್ದ ಕೆಲವು ಸಾಮಾಜಿಕ ಸಂಸ್ಥೆಗಳು ಈ ಮೊದಲು ಸಾರ್ವತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದವು. ಕ್ರೈಸ್ತ ಮಿಶನರಿಗಳು, ವೀರಶೈವ ಮಠಗಳು, ದೇಶೀಯ ಆಡಳಿತ ಸ್ಥಾಪನೆಯ ಗುರಿ ಹೊಂದಿದ ಸೇವಾಸಂಸ್ಥೆಗಳು, ಹೀಗೆ ತೊಡಗಿಕೊಂಡು ತಂತಮ್ಮ ಶಾಲೆಗಳಲ್ಲಿ ಸಾರ್ವತ್ರಿಕಶಿಕ್ಷಣವನ್ನು ನೀಡುತ್ತಿದ್ದವು. ಇವುಗಳಲ್ಲಿ ಶ್ರೀಮಂತ ವರ್ಗದ ವಿದ್ಯಾರ್ಥಿಗಳಿಗಾಗಿಯೇ ಮೀಸಲಾಗಿದ್ದ ಕೆಲವು ಬೆರಳೆಣಿಕೆಯ ಶಾಲೆಗಳನ್ನು ಬಿಟ್ಟರೆ ಉಳಿದ ಕಡೆ ಸರ್ಕಾರದ ನೀತಿಯನ್ನು ಯಥಾವತ್ತಾಗಿ ಅನುಷ್ಠಾನಗೊಳಿಸುವ ಕೆಲಸವೇ ನಡೆಯುತ್ತಿತ್ತು. ಹಾಗಾಗಿ ಕನ್ನಡದ ಕಲಿಕೆ ಬಳಕೆಗಳಿಗೆ ಆಘಾತಕಾರಿಯಾದ ಸಂದರ್ಭಗಳು ಇರಲಿಲ್ಲ. ಆದರೆ ಏಕೀಕರಣದ ಅನಂತರದ ಎರಡು ದಶಕಗಳು ಕಳೆಯುವ ಹೊತ್ತಿಗೆ ಖಾಸಗಿಯವರು ಅಧಿಕ ಪ್ರಮಾಣದಲ್ಲಿ ಈ ವಲಯವನ್ನು ಪ್ರವೇಶಿಸಿದರು. ಮೇಲು

ನೋಟಕ್ಕೆ ಶಿಕ್ಷಣಪ್ರಸಾರ ಇವರ ಉದ್ದೇಶವೆಂದು ತೋರಿದರೂ ಸರ್ಕಾರ ತನ್ನ ಹೊಣೆ ನಿರ್ವಹಿಸದೇ ಇದ್ದುದರಿಂದ ಉಂಟಾದ ನಿರ್ವಾತ ಪ್ರದೇಶವನ್ನು ತುಂಬಲೆಂದು ಇವರು ಬಂದಂತೆ ತೋರುತ್ತದೆ. ಹೀಗೆ ಪ್ರವೇಶಿಸಿದ ಖಾಸಗಿ ಶಾಲೆಗಳು ಕನ್ನಡವನ್ನು ಕಲಿಕೆಯ ಭಾಷೆಯನ್ನಾಗಿ ಬಳಸಬೇಕು ಎಂಬ ನೀತಿಯನ್ನು ಇರುವಂತೆಯೇ ಪಾಲಿಸಲಿಲ್ಲ. ಇದು ದೂರಗಾಮಿಯಾದ ಹಲವು ಪರಿಣಾಮಗಳನ್ನುಂಟು ಮಾಡಿತ್ತು. ಹೀಗೆ ಖಾಸಗಿ ಶಾಲೆಗಳು ಇಂಗ್ಲಿಶ್ ಮಾಧ್ಯಮದ ಪರವಾಗಿ ನಿಂತುದಕ್ಕೆ ಹಲವು ಕಾರಣಗಳನ್ನು ಗುರುತಿಸಲಾಗಿದೆ.

೧. ಇಂಗ್ಲಿಶ್‌ಗೆ ಇದ್ದ ಹೆಚ್ಚಿನ ಮಾನ್ಯತೆಯಿಂದಾಗಿ ಆ ಭಾಷೆಯ ಮೂಲಕ ಕಲಿಯಲು ಅಪೇಕ್ಷೆ ಹೆಚ್ಚಿದೆ. ೨. ವೃತ್ತಿ ಅವಕಾಶಗಳಿಗಾಗಿ ಹೆಚ್ಚು ಚಲನಶೀಲರಾಗಿ ಜನರು ರಾಜ್ಯದ ಹೊರಗೆ ಹೋಗಬೇಕಾಗಿ ಬಂದುದರಿಂದಾಗಿ ಅವರು ಕನ್ನಡ ಮಾಧ್ಯಮದ ಮೂಲಕ ಕಲಿತರೆ ಅವಕಾಶಗಳಿಂದ ವಂಚಿತರಾಗುತ್ತಾರೆ. ೩. ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲಿಶ್ ಮೂಲಕ ಕಲಿಸಲು ಅಪೇಕ್ಷೆಪಡುತ್ತಾರೆ. ೪. ಸರಕಾರಿ ಶಾಲೆಗಳಿಗಿಂತ ತಾವು ಭಿನ್ನ ಎಂದು ತೋರಿಸುವ ಮೂಲಕ ಮಕ್ಕಳನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಖಾಸಗಿಯವರು ಹೀಗೆ ಇಂಗ್ಲಿಶ್ ಮಾಧ್ಯಮವನ್ನು ಆಯ್ದುಕೊಂಡರು.

ಈ ಎಲ್ಲಾ ಕಾರಣಗಳು ಪೂರ್ಣ ಸತ್ಯವೂ ಅಲ್ಲ. ಹಾಗೆಂದು ಇವುಗಳನ್ನು ಹುಸಿಯೆಂದು ನಿರಾಕರಿಸುವಂತೆಯೂ ಇಲ್ಲ. ಖಾಸಗೀ ವಲಯದ ಶಾಲೆಗಳಲ್ಲಿ ಇಂಗ್ಲಿಶ್ ಕಲಿಕೆಯ ಮಾಧ್ಯಮವಾಗಿ ಮನ್ನಣೆ ಪಡೆಯಲು ಇರುವ ಅನ್ಯಕಾರಣಗಳನ್ನು ನಾವು ಪರಿಶೀಲಿಸಬೇಕಾಗಿದೆ. ಕರ್ನಾಟಕ ಸರಕಾರದ ಶಿಕ್ಷಣ ಭಾಷಾನೀತಿಯನ್ನು ಬೇರೊಂದು ಅಧ್ಯಾಯದಲ್ಲಿ ಗಮನಿಸಲಾಗುತ್ತದೆ. ಆದರೆ ೧೯೫೬ರ ಪರಿಸ್ಥಿತಿ ಮತ್ತು ಅನಂತರದ ಬೆಳವಣಿಗೆಗಳು ಹೇಗೆ ಇಂಗ್ಲಿಶ್ ಮಾಧ್ಯಮದ ಪರವಾಗಿವೆ ಎಂಬುದನ್ನು ಇಲ್ಲಿ ಸ್ಥೂಲವಾಗಿ ಪ್ರಸ್ತಾಪಿಸಲಾಗುತ್ತದೆ. ಏಕೀಕರಣದ ಸಂದರ್ಭದಲ್ಲಿ ನಿಜಾಮರ ಆಡಳಿತದ ಪ್ರದೇಶಗಳನ್ನು ಹೊರತುಪಡಿಸಿದರೆ ಬಹುಮಟ್ಟಿಗೆ ಕನ್ನಡಮಾಧ್ಯಮವೇ ಸಾರ್ವತ್ರಿಕ ಶಿಕ್ಷಣದಲ್ಲಿ ಅಧಿಕೃತವಾಗಿ ಮತ್ತು ಆಚರಣೆಯಲ್ಲಿ ಜಾರಿಯಲ್ಲಿತ್ತು. ಆದರೆ ಇದೇ ಮಾತನ್ನು ಉನ್ನತ ಶಿಕ್ಷಣ ಮತ್ತು ತಾಂತ್ರಿಕ, ವೈದ್ಯಕೀಯ ಶಿಕ್ಷಣಗಳಿಗೆ ಅನ್ವಯಿಸಲು ಬರುವುದಿಲ್ಲ. ಅಲ್ಲಿ ಇಂಗ್ಲಿಶ್ ಮಾಧ್ಯಮವೇ ಜಾರಿಯಲ್ಲಿತ್ತು. ಕೇಂದ್ರ ಸರ್ಕಾರದ ಕಾರ್ಯಕ್ರಮ ಒಂದರ ಅನ್ವಯ ರಾಜ್ಯದ ಆಗಿನ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣದ ಹಂತದಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಅಳವಡಿಸಲು ಆರಂಭಿಸಲಾಯಿತು. ಇದಕ್ಕಾಗಿ ವಿಶೇಷ ಅನುದಾನ ಪಡೆದ ವಿಶ್ವವಿದ್ಯಾಲಯಗಳು, ಕನ್ನಡ ಭಾಷೆಯಲ್ಲಿ ವಿಜ್ಞಾನ ಮತ್ತು ಮಾನವಿಕ ವಿಷಯಗಳಲ್ಲಿ ಹೊಸ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದು ಮತ್ತು ಇಂಗ್ಲಿಶ್‌ನಿಂದ ಅನುವಾದಿಸುವ ಯೋಜನೆಯನ್ನು ಕೈಗೆತ್ತಿಕೊಂಡವು. ಆದರೆ ಈ ಯೋಜನೆ ವ್ಯಾಪಕ ಯಶಸ್ಸನ್ನು ಪಡೆಯಲಿಲ್ಲ. ಈ ಕನ್ನಡ ಮಾಧ್ಯಮ ಅಳವಡಿಕೆ ಪದವಿಪೂರ್ವ ಮತ್ತು ಪದವಿ ತರಗತಿಗಳಲ್ಲಿ ಜಾರಿಗೆ ಬಂದಂತೆ ಸ್ನಾತಕೋತ್ತರ

ವೈದ್ಯಕೀಯ, ತಾಂತ್ರಿಕ ಮುಂತಾದ ಪದವಿಗಳಲ್ಲಿ ಮತ್ತು ವೃತ್ತಿತರಬೇತಿ ನೀಡುತ್ತಿದ್ದ ತರಗತಿಗಳಲ್ಲಿ ಜಾರಿಗೆ ಬರಲಿಲ್ಲ. ಅಂದರೆ ಕನ್ನಡ ಭಾಷೆಯು ಸಾಮಾನ್ಯ ಶಿಕ್ಷಣದ ಅವಧಿಯ ಆಚೆಗೆ ಶಿಕ್ಷಣ ಮಾಧ್ಯಮವಾಗಿ ಮನ್ನಣೆ ಪಡೆಯಲಿಲ್ಲ.

ಈ ಹಂತದ ಶಿಕ್ಷಣ ಮಾತ್ರವೇ ಹೊಸ ಬಗೆಯ ವೃತ್ತಿಗಳಿಗೆ ಅವಕಾಶವನ್ನು ಕಲ್ಪಿಸುತ್ತಿತ್ತು. ಅಂದರೆ ಸಾರ್ವತ್ರಿಕ ಶಿಕ್ಷಣ ಪಡೆದವರು ಉನ್ನತ ಶಿಕ್ಷಣ ಪಡೆಯುವ ಮೂಲಕ ತಮ್ಮ ಜೀವನ ನಿರ್ವಹಣೆಗೆ ಹೊಸ ವೃತ್ತಿಗಳನ್ನು ಪಡೆಯುವ ಅವಕಾಶಗಳಿದ್ದವು. ಇದು ಸಹಜವಾಗಿಯೇ ಇಂಗ್ಲಿಶ್ ಮಾಧ್ಯಮದ ಕಡೆಗೆ ಒಲವನ್ನು ರೂಪಿಸಿತ್ತು. ಪ್ರಾಥಮಿಕ ಹಂತದಲ್ಲೇ ಉನ್ನತ ಶಿಕ್ಷಣ ಪಡೆಯಲು ಬೇಕಾದ ಅರ್ಹತೆಗಳನ್ನು ಗಳಿಸಿಕೊಳ್ಳುವತ್ತ ಸಾಮಾಜಿಕ ಒಲವು ಮೂಡಿತು. ಕೆಳಹಂತದ ಶಿಕ್ಷಣ ಕ್ಷೇತ್ರದ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳು ಹೀಗೆ ಉನ್ನತ ಶಿಕ್ಷಣ ವಲಯಕ್ಕೆ ದಾಟಲು ಅರ್ಹರಾಗಿದ್ದಾರೆ ಎಂಬುದನ್ನು ತೋರಿಸಿಕೊಡಬೇಕಾಗಿತ್ತು.

ಶಿಕ್ಷಣ ಕ್ಷೇತ್ರವೇ ಆಯ್ಕೆ ಮತ್ತು ನಿರಾಕರಣೆಗಳ ನೆಲೆಯಲ್ಲಿ ಕೆಲಸಮಾಡುತ್ತದೆ. ಸಾರ್ವತ್ರಿಕ ಶಿಕ್ಷಣಕ್ಕಾಗಿ ಬರುವ ಎಲ್ಲಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡರೂ ಅವರಲ್ಲಿ ಬಹುಪಾಲನ್ನು ನಿರಾಕರಿಸಿ ಕೆಲವರನ್ನು ಮಾತ್ರ ಉನ್ನತ ಶಿಕ್ಷಣಕ್ಕೆ ಸಿದ್ಧಪಡಿಸುವ ವ್ಯವಸ್ಥೆ ಇಲ್ಲಿ ಕೆಲಸ ಮಾಡುತ್ತಿದೆ. ಇದರಿಂದಾಗಿ ಇಂಗ್ಲಿಶ್ ಮಾಧ್ಯಮವು ಇಂತಹ ಆಯ್ಕೆಯ ಮತ್ತು ಅವಕಾಶ ನಿರಾಕರಣೆಯ ಕಾರ್ಯಕ್ರಮವಾಗಿ ಜಾರಿಗೆ ಬರಲು ನೆರವಾಯಿತು ಎಂದರೆ ಇದು ಕೇವಲ ಶೈಕ್ಷಣಿಕ ನೆಲೆಯ ಆಯ್ಕೆಯಾಗದೆ ಸಾಮಾಜಿಕ ಚಲನಶೀಲತೆಯ ನಿರ್ಧಾರದಂತೆ ತೋರುತ್ತದೆ.

ಉನ್ನತ ಶಿಕ್ಷಣದಲ್ಲಿ ಮತ್ತು ವೃತ್ತಿತರಬೇತಿ ಶಿಕ್ಷಣದಲ್ಲಿ ಕನ್ನಡವನ್ನು ಕಲಿಕೆಯ ಮಾಧ್ಯಮವನ್ನಾಗಿ ನಿಗದಿಪಡಿಸಲು ಕರ್ನಾಟಕ ಸರ್ಕಾರ ತಾನೇ ಒಂದು ಯೋಜನೆಯನ್ನು ರೂಪಿಸಲಿಲ್ಲ. ಅದಕ್ಕಾಗಿ ಸಾಮಾಜಿಕ ಒತ್ತಾಯಗಳು ಆಗಾಗ ಇದ್ದರೂ ಅವುಗಳನ್ನು ಹತ್ತಿಕ್ಕಿ ಬೇರೆ ಬೇರೆ ಕಾರಣಗಳನ್ನು ಮುಂದೂಡಿ ಇಂತಹ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ. ತನ್ನ ಭಾಷಾನೀತಿಯ ಚೌಕಟ್ಟಿನಲ್ಲಿ ಕನ್ನಡವನ್ನು ಇಂಗ್ಲಿಶಿನ ಸಹಭಾಷೆಯನ್ನಾಗಿ ಇರಿಸುವ ಪ್ರಯತ್ನವನ್ನಷ್ಟೇ ಅದು ಮಾಡಿತ್ತು.

ಸರ್ಕಾರದ ಭಾಷಾನೀತಿಯು ಆಡಳಿತ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಲ್ಲದೆ ನ್ಯಾಯಾಂಗ ಕ್ಷೇತ್ರದಲ್ಲೂ ಪ್ರವೃತ್ತವಾಗುವ ಅವಕಾಶವಿದೆ. ಆದರೆ ನ್ಯಾಯಾಂಗವು ಸಂವಿಧಾನದ ಪ್ರಕಾರ ಪೂರ್ಣವಾಗಿ ರಾಜ್ಯವ್ಯಾಪ್ತಿಯ ವಿಷಯವಲ್ಲ. ಅದಕ್ಕೆ ಕೇಂದ್ರಸರ್ಕಾರದ ಅಧಿಕಾರ ವ್ಯಾಪ್ತಿಯೂ ಇದೆ. ಅಂದರೆ ನ್ಯಾಯಾಂಗದಲ್ಲಿ ಯಾವ ಭಾಷೆಯನ್ನು ಬಳಸಬೇಕು ಎಂಬುದನ್ನು ನಿರ್ಧರಿಸುವ ಹೊಣೆ ಪೂರ್ಣವಾಗಿ ರಾಜ್ಯಸರ್ಕಾರಕ್ಕೆ ಸೇರುವುದಿಲ್ಲ. ಕೇಂದ್ರಸರ್ಕಾರ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟುಗಳಲ್ಲಿ ಇಂಗ್ಲಿಶನ್ನು ಮಾತ್ರ, ಅಧಿಕೃತ ಭಾಷೆಯನ್ನಾಗಿ ಇರಿಸಿದೆ. ವ್ಯವಹಾರ, ವಾದಮಂಡನೆ ಮತ್ತು

ತೀರ್ಪುಗಳು ಇಂಗ್ಲಿಶಿನಲ್ಲಿ ಮಾತ್ರ ಇರಲು ಸಾಧ್ಯ. ಇದಕ್ಕೆ ಸಮರ್ಥನೆಗಳನ್ನು ನೀಡಲಾಗಿದೆ. ಅದೆಲ್ಲವನ್ನೂ ನಾವಿಲ್ಲಿ ಚರ್ಚಿಸುವ ಅಗತ್ಯವಿಲ್ಲ. ಆದರೆ ಕೆಳಹಂತದ ಕೋರ್ಟುಗಳಲ್ಲಿ ಪ್ರಾಂತೀಯ ಭಾಷೆಗಳು ಬಳಕೆಯಾಗಲು ಅವಕಾಶಗಳಿವೆ. ವ್ಯವಹಾರದಲ್ಲಿ ಮಾತ್ರವಲ್ಲದೆ ವಾದಮಂಡನೆ ಮತ್ತು ತೀರ್ಪುಗಳಲ್ಲಿಯೂ ಕನ್ನಡವನ್ನು ಬಳಸಲು ಅವಕಾಶಗಳಿವೆ.

ಇದಲ್ಲದೆ ನ್ಯಾಯಾಂಗದ ಸಂಬಂಧದಲ್ಲಿ ರಾಜ್ಯಸರ್ಕಾರ ತಳೆದಿರುವ ಮತ್ತೊಂದು ಕನ್ನಡಪರ ನಿಲುವೆಂದರೆ ಎಲ್ಲಾ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಕಾನೂನುಗಳನ್ನು, ನಿರ್ಣಯಗಳನ್ನು ಅಧಿಕೃತವಾಗಿ ಕನ್ನಡದಲ್ಲಿ ಲಭ್ಯವಾಗುವಂತೆ ಮಾಡುವುದು. ಸಂವಿಧಾನದ ಕನ್ನಡ ಅನುವಾದದ ಜೊತೆಗೆ ಶಿಕ್ಷಾಸಂಹಿತೆಯನ್ನು ಕೂಡ ಅನುವಾದಿಸಿ ಅಧಿಕೃತಗೊಳಿಸಿದೆ.

ಈ ಮೂರು ವಲಯಗಳಲ್ಲದೆ ಭಾಷಾನೀತಿಯು ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಜಾರಿಗೆ ಬರುವ ವಲಯವೆಂದರೆ ಸಮೂಹ ಮಾಧ್ಯಮಗಳು. ಇವುಗಳಿಗೆ ಕನ್ನಡ ಅಧಿಕೃತ ಭಾಷೆಯಾಗಿರುವುದು ಸಾಮಾಜಿಕ ಸಂದರ್ಭದ ಪರಿಣಾಮವೇ ಹೊರತು ಸರ್ಕಾರದ ಭಾಷಾನೀತಿಯ ಪರಿಣಾಮವಲ್ಲ. ಇಲ್ಲಿ ಹೆಚ್ಚೆಂದರೆ ಸರ್ಕಾರ ಸಮೂಹ ಮಾಧ್ಯಮಗಳ ಕನ್ನಡಪರ ನಿಲುವಿಗೆ, ಕಾರ್ಯಕ್ರಮಕ್ಕೆ ಒತ್ತಾಸೆಯಾಗುವಂತೆ ತನ್ನ ನಿರ್ಣಯಗಳನ್ನು ಮಾಡಬಹುದು. ಹೇಗೆ ಇಂತಹ ನಿರ್ಣಯಗಳನ್ನು ಮಾಡಬಹುದು; ಹೇಗೆ ಇಂತಹ ನಿರ್ಣಯಗಳು ಸರ್ಕಾರದ ಮೂಲಕ ನಿರೂಪಿತವಾಗಿವೆ ಮತ್ತು ಅವುಗಳ ಪರಿಣಾಮ ಏನಾಗಿದೆ ಎಂಬುದನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗುತ್ತದೆ.

ಆಡಳಿತ ಕನ್ನಡ

ಈ ಹಿಂದೆಯೇ ಹೇಳಿದಂತೆ ೧೯೬೩ರ ಅಕ್ಟೋಬರ್ ೧೦ರಂದು ಕರ್ನಾಟಕ(ವಾಸ್ತವವಾಗಿ ಆಗ ಮೈಸೂರು) ರಾಜ್ಯ ಭಾಷಾಅಧಿನಿಯಮವನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು. ಅಂದರೆ ಏಕೀಕರಣದ ಅನಂತರದ ಸರಿಸುಮಾರು ಏಳು ವರ್ಷಗಳ ಅನಂತರ ಈ ಅಧಿನಿಯಮ ಜಾರಿಗೆ ಬಂತು. ಈ ಅಧಿನಿಯಮವನ್ನು ಕೊಂಚ ವಿವರವಾಗಿ ಪರಿಶೀಲಿಸುವ ಅಗತ್ಯವಿದೆ.

ಈ ಅಧಿನಿಯಮದ ಪ್ರಕಾರ ಸರ್ಕಾರಿ ಉದ್ದೇಶಗಳಿಗಾಗಿ ಬಳಸಬೇಕಾದ ಭಾಷೆ ಕನ್ನಡವೆಂದೂ, ರಾಜ್ಯ ವಿಧಾನಮಂಡಲದ ವ್ಯವಹಾರದ ನಿರ್ವಹಣೆಗೆ ಬಳಸಬೇಕಾದ ಭಾಷೆ ಇಂಗ್ಲಿಶ್ ಎಂದೂ ಉಪಬಂಧಿಸಲಾಗಿದೆ. ಸರ್ಕಾರಿ ಉದ್ದೇಶಗಳು ಎಂದರೇನು, ಮತ್ತು ಏಕೆ ಇಂಗ್ಲಿಶನ್ನು ಮಾತ್ರ ವಿಧಾನಮಂಡಲದ ವ್ಯವಹಾರಕ್ಕಾಗಿ ಬಳಸಬೇಕು ಎಂಬ ಬಗೆಗೆ ವಿವರಣೆಯೇನೂ ನಮಗೆ ಲಭ್ಯವಾಗುವುದಿಲ್ಲ. ಮುಂದುವರೆದು ಈ ಅಧಿನಿಯಮವು ರಾಜ್ಯ ಮತ್ತು ಕೇಂದ್ರಸರ್ಕಾರಗಳ ಅಧಿನಿಯಮವನ್ನು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಲು ಅವಕಾಶ ಕಲ್ಪಿಸುತ್ತದೆ. ಮತ್ತು ಹೀಗೆ ಪ್ರಕಟಗೊಂಡ ಕನ್ನಡ ಅನುವಾದದ ಪಾಠವನ್ನು ಅಧಿಕೃತವೆಂದು ಸೂಚಿಸುತ್ತದೆ. ಈ ಕನ್ನಡ ಅನುವಾದದ ಪಾಠ ಅಧಿಕೃತಗೊಳಿಸುವ ಮಾತು ಎರಡು ನೆಲೆಯಲ್ಲಿ ವ್ಯಾಖ್ಯಾನಕ್ಕೆ ಒಳಗಾಗಬಹುದು. ೧. ಇಂಗ್ಲಿಶ್ ಮತ್ತು ಕನ್ನಡ ಪಾಠಗಳಲ್ಲಿ ಅರ್ಥವಿವರಣೆಗೆ ಸಂಬಂಧಿಸಿದಂತೆ ಯಾವುದಾದರೂ ಗೊಂದಲಗಳು ಉಂಟಾದರೆ ಆಗ ಕನ್ನಡ ಪಾಠವನ್ನು ಅಧಿಕೃತ ಎಂದು ಭಾವಿಸುವುದು. ೨. ರಾಜ್ಯಪಾಲರ ಅನುಮತಿಯನ್ನು ಪಡೆದು ರಾಜ್ಯಪತ್ರದಲ್ಲಿ ಪ್ರಕಟಗೊಂಡ ಈ ಕನ್ನಡ ಅನುವಾದವು ಮಾತ್ರ ಅಧಿಕೃತವೇ ಹೊರತು ಹೀಗೆ ಅನುಮತಿ ಪಡೆಯದ ಇನ್ಯಾವುದೇ ಅನುವಾದವು ಬೇರೆ ಯಾವುದೇ ಕಾರಣದಿಂದ ಸಿದ್ಧಗೊಂಡಿದ್ದರೂ ಅದು ಅಧಿಕೃತವಲ್ಲ ಎಂದು ತಿಳಿಯುವುದು. ಈ ಎರಡು ವ್ಯಾಖ್ಯೆಗಳಲ್ಲಿ ಎರಡನೆಯದು ಮಾತ್ರ ಸರಿಯೆಂದು ತೋರುತ್ತದೆ. ಎಂದರೆ ಮೂಲ ಇಂಗ್ಲಿಶಿನ ಪಾಠಕ್ಕೆ ಕನ್ನಡದಲ್ಲೇ ಹಲವು ಉದ್ದೇಶಿತ ಇಲ್ಲವೇ ಪ್ರಾಸಂಗಿಕ ಅನುವಾದಗಳಿದ್ದರೆ ಅವುಗಳಲ್ಲಿ ಯಾವುದನ್ನು ಅಧಿಕೃತ ಎಂದು ಪರಿಗಣಿಸಬೇಕು ಎಂಬ ಬಗೆಗೆ ಈ ಅಧಿನಿಯಮವು ಸ್ಪಷ್ಟನೆಯನ್ನು ನೀಡುತ್ತದೆ. ನಾವು ಸಾಧ್ಯವೆಂದು ತಿಳಿದ ಮೊದಲನೇ ವ್ಯಾಖ್ಯೆಯ ಚರ್ಚೆ ಬಹುಮಟ್ಟಿಗೆ ವಿಧಾನಮಂಡಲಗಳಲ್ಲಿ ಮತ್ತು ಉಚ್ಚ ಹಾಗೂ

ಉನ್ನತ ನ್ಯಾಯಾಲಯಗಳಲ್ಲಿ ಮಾತ್ರ ಬರುವ ಪ್ರಶ್ನೆ. ಅಲ್ಲೆಲ್ಲಾ ಇಂಗ್ಲಿಶ್ ಮಾತ್ರ ಅಧಿಕೃತ ವ್ಯವಹಾರದ ಭಾಷೆಯೆಂದು ಈಗಾಗಲೇ ಸಿದ್ಧವಾಗಿರುವುದರಿಂದ ಅಲ್ಲಿ ಅಧಿನಿಯಮಗಳ ಕನ್ನಡ ಅನುವಾದ ಪಾಠದ ಬಳಕೆಯಾಗಲೀ ಅದರ ಅಧಿಕೃತತೆಯಾಗಲೀ ಒಂದು ಪ್ರಶ್ನೆಯಾಗಿ ಬರುವುದು ಸಾಧ್ಯವಿಲ್ಲ. ಎಂದರೆ ಈ ಅಧಿನಿಯಮವು ಕನ್ನಡ ಭಾಷೆಗೆ ಅವಕಾಶ ಕಲ್ಪಿಸುತ್ತಲೂ ತನ್ನ ಅಧಿಕಾರ ವ್ಯಾಪ್ತಿಯ ಕನ್ನಡವನ್ನು ಮಾತ್ರ ಅಧಿಕೃತವೆಂದು ಹೇಳುವ ಪ್ರಯತ್ನ ಮಾಡಿದೆ.

ಈ ಅಧಿನಿಯಮಕ್ಕೆ ೧೯೮೨ರಲ್ಲಿ ಎರಡು ತಿದ್ದುಪಡಿಗಳನ್ನು ಮಾಡಲಾಗಿದೆ. ೧೯೬೩ರಿಂದ ೧೯೮೨ರವರೆಗೆ ಸುಮಾರು ಹತ್ತೊಂಬತ್ತು ವರ್ಷಗಳ ಕಾಲ ವಿಧಾನಮಂಡಲದಲ್ಲಿ ಕನ್ನಡವನ್ನು ಬಳಸಬೇಕೇ, ಬಳಸಿದರೆ ಅದಕ್ಕೆ ಮನ್ನಣೆ ನೀಡಬೇಕೇ ಎಂಬ ಪ್ರಶ್ನೆ ಮೇಲಿಂದ ಮೇಲೆ ಉದ್ಭವಿಸುತ್ತಲೇ ಬಂದಿದೆ. ರಾಜ್ಯಪಾಲರ ಜಂಟಿ ಅಧಿವೇಶನ ಭಾಷಣ ಸಂದರ್ಭದಲ್ಲಿ, ರಾಜ್ಯದ ಆಯವ್ಯಯ ಮಂಡನೆಯ ಸಂದರ್ಭದಲ್ಲಿ ಇಂಗ್ಲಿಶ್ ಭಾಷೆಯಲ್ಲಿ ಮಂಡನೆಗಳು ನಡೆಯುತ್ತಿದ್ದುದನ್ನು ವಿರೋಧಿಸಿ ವಿಧಾನಮಂಡಲದಲ್ಲಿ ಸದಸ್ಯರು ಪ್ರತಿಭಟಿಸುತ್ತಲೇ ಇದ್ದರು. ಆದರೂ ಬದಲಾವಣೆಯಾಗಲು ಇಷ್ಟು ದೀರ್ಘಾವಧಿ ಬೇಕಾಯಿತು. ೧೯೮೨ರ ತಿದ್ದುಪಡಿಯಲ್ಲೂ ಮುಖ್ಯವಾಗಿ ಮಾಡಿರುವ ಬದಲಾವಣೆ ಹೀಗಿದೆ: ರಾಜ್ಯ ವಿಧಾನ ಮಂಡಲದ ವ್ಯವಹಾರದ ನಿರ್ವಹಣೆಗಾಗಿ ಕನ್ನಡ ಮತ್ತು ಹಿಂದಿಯ ಜೊತೆಗೆ ಇಂಗ್ಲಿಶ್ ಭಾಷೆಯ ಉಪಯೋಗವನ್ನು ಮುಂದುವರೆಸಬಹುದು. ಈ ಹಿಂದಿನ ಅಧಿನಿಯಮದಲ್ಲಿ ಇಂಗ್ಲಿಶ್ ಭಾಷೆಯನ್ನು ಮಾತ್ರ ಬಳಸಲು ಅವಕಾಶ ಕಲ್ಪಿಸಲಾಗಿತ್ತು. ಈ ತಿದ್ದುಪಡಿಯು ಕನ್ನಡ ಮತ್ತು ಹಿಂದಿಗಳ ಜೊತೆಗೆ ಇಂಗ್ಲಿಶ್ ಭಾಷೆಯನ್ನು ಬಳಸಲು ಅವಕಾಶ ಕಲ್ಪಿಸುತ್ತದೆ. ವಿಚಿತ್ರವೆಂದರೆ ಅಲ್ಲಿಯವರೆಗೂ ಇಂಗ್ಲಿಶ್ ಮಾತ್ರ ಅಧಿಕೃತವಾಗಿ ಬಳಕೆಯಾಗುತ್ತಿತ್ತು. ಆದರೆ ಕನ್ನಡ ಮತ್ತು ಹಿಂದಿಗಳು ಈಗಾಗಲೇ ಬಳಕೆಯಾಗುತ್ತಿವೆ ಎಂಬಂತೆಯೂ, ಈಗ ಮತ್ತೆಯೂ ಇಂಗ್ಲಿಶನ್ನು ಬಳಸುತ್ತಾ ಹೋಗಲು ಅವಕಾಶ ಕಲ್ಪಿಸುವಂತೆಯೂ ತಿದ್ದುಪಡಿಯು ಸೂಚಿಸುತ್ತದೆ.

ರಾಜ್ಯಸರ್ಕಾರಗಳ ಭಾಷಾನೀತಿಯಲ್ಲಿ ಪ್ರಾಂತೀಯ ಭಾಷೆಗಳನ್ನು ನಿರಾಕರಿಸುವ ಧೋರಣೆ ಇರುವುದಿಲ್ಲ. ಆದರೆ ಅದಕ್ಕೆ ತಕ್ಕ ಅವಕಾಶಗಳನ್ನು ಮಾತ್ರ ಕಲ್ಪಿಸುತ್ತಿರುವುದಿಲ್ಲ. ಅಮೂರ್ತ ಅಧಿಕಾರಗಳನ್ನು ಕಲ್ಪಿಸಿಕೊಟ್ಟರೂ ಪ್ರಾಯೋಗಿಕ ನೆಲೆಯಲ್ಲಿ ಸ್ಪಷ್ಟ ಅವಕಾಶಗಳನ್ನು ನಿರ್ಮಿಸುವುದಿಲ್ಲ. ಈ ಮಾತಿಗೆ ಮೇಲಿನ ತಿದ್ದುಪಡಿ ನಿದರ್ಶನವಾಗಿವೆ. ಕನ್ನಡವನ್ನು ಬಳಸಬಾರದು ಎಂದು ಹೇಳುವುದಿಲ್ಲವಾದರೂ ಸದ್ದಿಲ್ಲದೇ ಇಂಗ್ಲಿಶಿನ ಬಳಕೆಯನ್ನು ಮುಂದುವರೆಸುತ್ತಾ ಹೋಗುವ ಮೂಲಕ ಕನ್ನಡಕ್ಕಿರುವ ಅವಕಾಶವನ್ನು ಪರೋಕ್ಷವಾಗಿ ನಿರಾಕರಿಸುವ ಪ್ರಯತ್ನ ಇದಾಗಿದೆ.

೧೯೮೨ರಲ್ಲಿ ಇದೇ ಅಧಿನಿಯಮಕ್ಕೆ ಮತ್ತೊಂದು ತಿದ್ದುಪಡಿಯನ್ನು ತರಲಾಗಿದೆ. ಆ ತಿದ್ದುಪಡಿಯ ಕನ್ನಡ ರೂಪ ಹೀಗಿದೆ. 'ಕನ್ನಡ ಭಾಷೆಯನ್ನು ಅ) ಮಂಡಿಸಬೇಕಾದ ಯಾವುದೇ ವಿಧೇಯಕದಲ್ಲಿ ಅಥವಾ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ

ಅನುಮೋದಿಸಲಾದ ಯಾವುದೇ ಅಧಿನಿಯಮದಲ್ಲಿ ಅಥವಾ ಆ) ಕರ್ನಾಟಕ ರಾಜ್ಯದ ರಾಜ್ಯಪಾಲರಿಂದ ಪ್ರಖ್ಯಾಪಿಸಲಾದ ಯಾವುದೇ ಅಧ್ಯಾದೇಶದಲ್ಲಿ ಅಥವಾ ಇ) ಸಂವಿಧಾನದ ಮೇರೆಗೆ ಅಥವಾ ಸಂಸತ್ತು ಅಥವಾ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಮಾಡಲಾದ ಯಾವುದೇ ಕಾನೂನಿನ ಮೇರೆಗೆ ರಾಜ್ಯಸರ್ಕಾರದಿಂದ ಹೊರಡಿಸಲಾದ ಯಾವುದೇ ಆದೇಶ, ನಿಯಮ, ವಿನಿಯಮ ಅಥವಾ ಉಪವಿಧಿಯಲ್ಲಿ ಸಹ ಬಳಸಬಹುದು.'

ಇಷ್ಟು ದೀರ್ಘವಾದ ಉಲ್ಲೇಖ ನೀಡಲು ಕಾರಣಗಳಿವೆ. ೧. ಈ ಆಡಳಿತ ಕನ್ನಡದಲ್ಲಿ ಬಳಕೆಯಾಗುವ ಕನ್ನಡದ ರೂಪವನ್ನು ಪರಿಚಯಿಸುವುದು. ೨. ಇಷ್ಟು ವಿವರವಾದ ತಿದ್ದುಪಡಿಯಲ್ಲಿ ಕನ್ನಡಕ್ಕೆ ಏನು ಅವಕಾಶ ಕಲ್ಪಿಸಲಾಗಿದೆ ಎಂಬುದನ್ನು ತಿಳಿದುಕೊಳ್ಳುವುದು. ಈ ತಿದ್ದುಪಡಿಯು ಎಲ್ಲಿ ಕನ್ನಡವನ್ನು ಬಳಸಬಹುದು ಎಂದು ಸೂಚಿಸುತ್ತದೆ. ಆ ಸಂಬಂಧದ ವಿವರಗಳನ್ನು ನೀಡುತ್ತದೆ. ಅಧಿನಿಯಮದ ಮೂಲಪಾಠದಲ್ಲೇ ಸರ್ಕಾರದ ಆಡಳಿತದಲ್ಲಿ ಕನ್ನಡವನ್ನು ಬಳಸಲು ಮತ್ತು ಅಧಿನಿಯಮಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಜಾರಿಗೆ ಕೊಡಲು ಅವಕಾಶ ಕಲ್ಪಿಸಲಾಗಿತ್ತು. ಈ ತಿದ್ದುಪಡಿಯೂ ಆಡಳಿತದ ಉದ್ದೇಶಕ್ಕಾಗಿ ಒದಗಿಸುವ ಸರ್ಕಾರದ ತೀರ್ಮಾನಗಳನ್ನು ಕನ್ನಡದಲ್ಲಿ ಸಿದ್ಧಪಡಿಸಲು ಅವಕಾಶ ಕಲ್ಪಿಸುತ್ತದೆ. ಮೊದಲು ಇಂಗ್ಲಿಶಿನಲ್ಲಿ ಸಿದ್ಧಪಡಿಸಿ ಅನಂತರ ಕನ್ನಡದಲ್ಲಿ ಅನುವಾದಿಸುವ ಮತ್ತು ಆ ಅನುವಾದವನ್ನು ಅಧಿಕೃತಗೊಳಿಸುವ ಪರಿಪಾಠವಿತ್ತು. ಈಗ ಮೂಲಪಾಠವನ್ನೇ ಕನ್ನಡದಲ್ಲಿ ಸಿದ್ಧಪಡಿಸುವ ಅವಕಾಶ ಕಲ್ಪಿಸಲಾಗಿದೆ. ಆದರೆ ತಿದ್ದುಪಡಿಯು ಕನ್ನಡವನ್ನು ಸಹ ಬಳಸಬಹುದು ಎಂದು ಹೇಳುತ್ತದೆಯೇ ಹೊರತು ಕನ್ನಡವನ್ನೇ ಬಳಸಬೇಕು ಎಂದು ಹೇಳುವುದಿಲ್ಲ. ಎಂದರೇನಾಯಿತು? ಮೂಲಪಾಠಗಳನ್ನು ಕನ್ನಡದಲ್ಲಿಯೂ ಸಿದ್ಧಪಡಿಸಬಹುದು ಅಥವಾ ಇಂಗ್ಲಿಶಿನಲ್ಲಿಯೂ ಸಿದ್ಧಪಡಿಸಿ ಅನಂತರ ಅದನ್ನು ಕನ್ನಡಕ್ಕೆ ಅನುವಾದಿಸಬಹುದು ಎಂಬ ಎರಡು ಸಾಧ್ಯತೆಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಇದು ಕನ್ನಡಬಳಕೆಯ ಅನಿವಾರ್ಯತೆಯನ್ನು ನಿರೂಪಿಸುವುದಿಲ್ಲ. ಇಂಗ್ಲಿಶನ್ನು ಮೂಲಪಾಠ ರಚನೆಗೆ ಬಳಸುವ ಅವಕಾಶವಿರುವುದರಿಂದ ಅದು ಬಳಕೆಯಾಗುತ್ತಲೇ ಹೋಗುತ್ತದೆ. ಕನ್ನಡವನ್ನು ಸಹ ಬಳಸಬಹುದು. ಈ ತಿದ್ದುಪಡಿ ಕನ್ನಡಕ್ಕೆ ಅವಕಾಶ ಕಲ್ಪಿಸುತ್ತದೆ. ಆದರೆ ಕನ್ನಡವನ್ನೇ ಬಳಸಬೇಕೆಂಬ ಒತ್ತಾಯವನ್ನು ಮಾಡುವುದಿಲ್ಲ. ಈ ಹಿಂದೆ ಹೇಳಿದಂತೆ ಅಧಿಕಾರ ಅಮೂರ್ತವಾಗಿದ್ದಾಗ ಪ್ರಾಯೋಗಿಕ ಅವಕಾಶ ನಿರಾಕರಣೆಯಾಗುವುದಕ್ಕೆ ಇದು ಇನ್ನೊಂದು ನಿದರ್ಶನ.

೧೯೮೨ರ ಈ ತಿದ್ದುಪಡಿಯ ಅನಂತರ ರಾಜ್ಯದ ಆಡಳಿತ ಭಾಷಾಅಧಿನಿಯಮಕ್ಕೆ ಯಾವುದೇ ಬದಲಾವಣೆಗಳು ಆಗಿಲ್ಲ. ಎಂದರೆ ಕನ್ನಡವನ್ನು ವಿಧಾನಮಂಡಲದ ಅಧಿಕೃತ ಭಾಷೆಯನ್ನಾಗಿ ಮಾಡುವ ಪ್ರಯತ್ನಗಳು ನಡೆದಿಲ್ಲ. ಇಂಗ್ಲಿಶಿನ ಸಹಭಾಷೆಯಾಗಿ ಮಾತ್ರ ಕನ್ನಡಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಪರಿಸ್ಥಿತಿಯು ಇನ್ನೊಂದು ದಿಕ್ಕಿನತ್ತ ನಾವು ಯೋಚಿಸುವಂತೆ ಮಾಡುತ್ತದೆ. ಕರ್ನಾಟಕ ರಾಜ್ಯ ನಿರ್ಮಾಣಗೊಂಡ

ಸಂದರ್ಭದಲ್ಲಿ ವಿಧಾನಮಂಡಲಕ್ಕೆ ಸದಸ್ಯರಾಗಿ ಬಂದವರು, ಆವರೆಗೆ ಬೇರೆ ಬೇರೆ ಆಡಳಿತ ಪ್ರದೇಶಗಳ ವಿಧಾನಮಂಡಲಗಳಲ್ಲಿ ಆಡಳಿತ ಮಂಡಳಿಗಳಲ್ಲಿ ಸದಸ್ಯರಾಗಿದ್ದವರು. ೧೯೫೭-೧೯೬೨ ಮತ್ತು ೧೯೬೭ರ ಚುನಾವಣೆಗಳ ನಂತರದಲ್ಲಿ ಈ ವಿಧಾನಮಂಡಲಕ್ಕೆ ಕರ್ನಾಟಕ ರಾಜ್ಯದ ಜನಸಮುದಾಯದ ಸದಸ್ಯರು ಸೇರಿಕೊಂಡರು. ಈ ತಲೆಮಾರಿನ ಸದಸ್ಯರಲ್ಲಿ ಕನ್ನಡದ ಜೊತೆಗೆ ಇತರ ಭಾರತೀಯ ಭಾಷೆಗಳನ್ನು ಬಲ್ಲವರು ಮತ್ತು ಇಂಗ್ಲಿಶ್‌ನಲ್ಲಿ ವ್ಯವಹರಿಸಲು ಶಕ್ತರಾದ ಸದಸ್ಯರು ಇರುವುದು ಸಾಮಾನ್ಯವಾಗಿತ್ತು. ಇದಕ್ಕೆ ಆ ಹೊತ್ತಿನ ಸಾಮಾಜಿಕ ರಚನೆಯೂ ಕೂಡ ಮುಖ್ಯ ಕಾರಣವಾಗಿದೆ. ಈ ಸದಸ್ಯರು ಶೈಕ್ಷಣಿಕವಾಗಿ ಮಾತ್ರವಲ್ಲದೇ ಸಾಮಾಜಿಕವಾಗಿಯೂ ಮೇಲುಜಾತಿ ಮತ್ತು ವರ್ಗಗಳಿಗೆ ಸೇರಿದವರಾಗಿದ್ದರು. ಇದರಿಂದಾಗಿ ಇವರ ರಾಜಕೀಯ ಹಿತಾಸಕ್ತಿಗಳು ಯಾವಾಗಲೂ ಜನಪರ ಆಗಿರಲೇಬೇಕೆಂಬ ಒತ್ತಾಯವಿರಲಿಲ್ಲ. ಸಮಾಜದ ಕೆಳಮಧ್ಯಮ ಜಾತಿ ಮತ್ತು ವರ್ಗಗಳಿಂದ ಸದಸ್ಯರು ಆಯ್ಕೆಯಾಗುವ ಸಾಧ್ಯತೆಗಳು ಹೆಚ್ಚಾದದ್ದು ಈಗಾಗಲೇ ಖಚಿತವಾಗಿರುವಂತೆ ಹಾವನೂರ ಆಯೋಗದ ವರದಿಯನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದನಂತರವೇ. ಏಕೆ ೧೯೮೨ರಲ್ಲಿ ರಾಜ್ಯಭಾಷಾ ಅಧಿನಿಯಮಕ್ಕೆ ತಿದ್ದುಪಡಿ ಮಾಡಬೇಕಾಯಿತು ಎಂಬುದಕ್ಕೆ ಇಲ್ಲಿ ಕಾರಣಗಳಿವೆ. ಸಾಮಾಜಿಕವಾಗಿ ಹೊಸ ಸ್ವರೂಪದ ಸದಸ್ಯರುಗಳು ಇದ್ದ ವಿಧಾನಮಂಡಲವು ಸಹಜವಾಗಿಯೇ ಕನ್ನಡದಲ್ಲಿ ಆಡಳಿತ ವ್ಯವಹಾರವನ್ನು ನಡೆಸಬೇಕೆಂದು ಒತ್ತಾಯಿಸಿದೆ.

ಈ ಹಿಂದೆಯೂ ಸದಸ್ಯರುಗಳು ವಿಧಾನಮಂಡಲದಲ್ಲಿ ಕನ್ನಡದಲ್ಲಿ ವ್ಯವಹರಿಸುತ್ತಿರಲಿಲ್ಲವೆಂದಲ್ಲ. ಆದರೆ ಅಧಿಕೃತ ವ್ಯವಹಾರದ ದಾಖಲೆಗಳು ಇಂಗ್ಲಿಶಿನಲ್ಲಿದ್ದರೆ ಅದಕ್ಕೆ ಸದಸ್ಯರ ಆಕ್ಷೇಪಗಳು ಇರುತ್ತಿದ್ದುದು ಕಡಿಮೆ. ಲೋಹಿಯಾವಾದದ ಹಿನ್ನೆಲೆಯಿಂದ ಬಂದ ಸಮಾಜವಾದಿ ತಾತ್ವಿಕತೆಯ ಸದಸ್ಯರು ಮಾತ್ರ ಅಧಿಕೃತ ಲಿಖಿತ ದಾಖಲೆಗಳು ಕನ್ನಡದಲ್ಲಿ ಇರಬೇಕೆಂದು ಒತ್ತಾಯಿಸುತ್ತಿದ್ದರು. ಉಳಿದಂತೆ ಎಲ್ಲಾ ಸದಸ್ಯರಿಗೂ ಕನ್ನಡ ಇಲ್ಲವೇ ಇಂಗ್ಲಿಶಿನ ಮಾತಿನ ರೂಪಗಳು ಒಪ್ಪಿತವಾದರೂ ಬರೆಹ ರೂಪ ಮಾತ್ರ ಇಂಗ್ಲಿಶಿನಲ್ಲೇ ಇರಬೇಕಿತ್ತು. ಈ ಅಂಶವನ್ನು ಎಚ್ಚರಿಕೆಯಿಂದ ಗಮನಿಸಬೇಕಾಗುತ್ತದೆ. ಏಕೆಂದರೆ ವಿಧಾನಮಂಡಲದ ವ್ಯವಹಾರದ ಈ ಎರಡು ನೆಲೆಯ ನೀತಿ ಇನ್ನೂ ಕೂಡ ಬೇರೆ ಬೇರೆ ಪ್ರಮಾಣದಲ್ಲಿ ಮುಂದುವರೆದಿದೆ. ಮಾತಿನ ನೆಲೆಯಲ್ಲಿ ಅವಕಾಶ ಪಡೆಯುವ ಕನ್ನಡ ಬರೆಹದ ಅಧಿಕೃತ ನೆಲೆಗೆ ದಾಟುವಾಗ ಮಾತ್ರ ಈಗಲೂ ಇಂಗ್ಲಿಶಿನ ಸಾಹಚರ್ಯದಲ್ಲಿ ಇರಬೇಕಾಗುತ್ತದೆ.

೧೯೮೦ರ ಅನಂತರದಲ್ಲಿ ಕರ್ನಾಟಕ ವಿಧಾನಮಂಡಲದ ಸದಸ್ಯರ ಸಾಮಾಜಿಕ ರಚನೆಯಲ್ಲಿ ಆಗಿದ್ದ ವ್ಯತ್ಯಾಸಗಳು ಏಕೆ ಹೆಚ್ಚು ಕನ್ನಡ ಪರವಾದವು ಎಂಬುದು ಗಮನಿಸಬೇಕಾದ ವಿಷಯ. ಕನ್ನಡದಲ್ಲಿ ಮಾತನಾಡಲು ಸದಸ್ಯರಿಗೆ ಅವಕಾಶವಿದ್ದರೂ ಅವರಿಗೆ ದೊರೆಯುತ್ತಿದ್ದ ಲಿಖಿತ ದಾಖಲೆಗಳು ಇಂಗ್ಲಿಶಿನಲ್ಲಿರುತ್ತಿದ್ದವು. ಈ ದಾಖಲೆಗಳು ಕನ್ನಡದಲ್ಲಿ ದೊರಕಬೇಕೆಂದು ಸದಸ್ಯರು ಒತ್ತಾಯ ಮಾಡಿದ್ದು ಸಹಜವಾಗಿದೆ.

ಇದೇ ಆಸುಪಾಸಿನಲ್ಲಿ ಕರ್ನಾಟಕ ವಿಧಾನಮಂಡಲವು ಆಡಳಿತ ಭಾಷೆಯಾಗಿ

ಕನ್ನಡದ ಅನುಷ್ಠಾನ ಹೇಗೆ ನಡೆದಿದೆ, ಅದಕ್ಕಿರುವ ಅಡ್ಡಿ ಆತಂಕಗಳೇನು ಎಂಬುದನ್ನು ಪರಿಶೀಲಿಸಲು ಒಂದು ಉನ್ನತ ಅಧಿಕಾರದ ಸಮಿತಿಯನ್ನು ರಚಿಸಿತ್ತು. ಇದನ್ನೇ 'ಕನ್ನಡ ಕಾವಲು ಸಮಿತಿ' ಎಂದು ಕರೆದರು. ಅನಂತರ ಇದು ಕನ್ನಡ 'ಅಭಿವೃದ್ಧಿ ಪ್ರಾಧಿಕಾರ'ವೆಂದು ಹೆಸರು ಪಡೆಯಿತು. ಈ ಸುಮಾರಿನಲ್ಲೇ ಈ ಸಮಿತಿಯನ್ನು ರಚಿಸಿದ್ದು ಕುತೂಹಲಕಾರಿಯಾಗಿದೆ. ಕರ್ನಾಟಕ ಸರ್ಕಾರದ ಭಾಷಾನೀತಿಯೂ, ಕನ್ನಡ ಭಾಷೆಗೆ ಕಲ್ಪಿಸಿದ ಸ್ಥಾನಮಾನಗಳೂ, ಸರಕಾರದ ನೆಲೆಯಿಂದ ಹುಟ್ಟಿಬಂದದ್ದು ಆಗಿರದೆ ಜನರ ಅಪೇಕ್ಷೆಗಳ ಒತ್ತಾಯದಿಂದ ರೂಪಗೊಂಡಿದ್ದು ಎಂಬುದನ್ನು ತಿಳಿಯಬೇಕಾಗುತ್ತದೆ.

ಇದೇ ಸುಮಾರಿನಲ್ಲಿ (೧೯೮೧) ಕರ್ನಾಟಕ ಏಕೀಕರಣದ ೨೫ ವರ್ಷಗಳ ಆಚರಣೆಯೂ ನಡೆದಿತ್ತು. ಈ ೨೫ ವರ್ಷಗಳಲ್ಲಿ ಕನ್ನಡ ಪರವಾಗಿ ಏನು ಸಾಧನೆಯಾಗಿದೆ ಎಂಬುದನ್ನು ಅವಲೋಕನ ಮಾಡುವ ಅವಕಾಶವು ಆ ಸಂದರ್ಭದಲ್ಲಿ ಒದಗಿತ್ತು. ಆದರೆ ಆಡಳಿತಾತ್ಮಕವಾಗಿ ಅಂತಹ ಯೋಜನೆಯನ್ನು ಸರಕಾರ ರೂಪಿಸಿದಂತೆ ತೋರುವುದಿಲ್ಲ. ಬದಲಿಗೆ, ಆ ಹೊತ್ತಿಗೆ ಬದಲಾಗುತ್ತಿದ್ದ ಆಳುವ ವರ್ಗದ ಸಾಮಾಜಿಕ ಸಂರಚನೆಯು ಜನಭಾಷೆಯ ಪರವಾಗಿ ಕ್ರಿಯಾಶೀಲವಾಗಿದೆ. ಈ ಕ್ರಿಯಾಶೀಲತೆಯ ಪ್ರಭಾವ ಪರಿಣಾಮಗಳು ತಾತ್ಕಾಲಿಕವೇ ಅಥವಾ ನಿರಂತರವೇ ಎಂಬುದನ್ನು ವಿವರವಾಗಿ ಪರಿಶೀಲಿಸಬೇಕಾದ ಅಗತ್ಯವಿದೆ.

ಕನ್ನಡವು ವಿಧಾನಮಂಡಲದಲ್ಲಿ ಮಾತಿನ ರೂಪದಲ್ಲಿ ಮನ್ನಣೆ ಪಡೆದರೂ ಅದಕ್ಕೆ ಲಿಖಿತ ನೆಲೆಯ ಅಧಿಕೃತತೆ ದೊರೆಯದೇ ಹೋದುದಕ್ಕೆ ಹಲವು ಕಾರಣಗಳನ್ನು ನೀಡಲಾಗಿದೆ. ಅಂತಹ ಕಾರಣಗಳು ತಾಂತ್ರಿಕ ನೆಲೆಯಲ್ಲಿ ಇರುವಂತೆ ತೋರುತ್ತವೆ. ಮುಖ್ಯವಾಗಿ ಕನ್ನಡಪರ ಅಧಿಕಾರಿಗಳು ಇಲ್ಲವೆಂಬ ಕೊರತೆ; ಕನ್ನಡದಲ್ಲಿ ದಾಖಲೆಗಳನ್ನು ಸಿದ್ಧಪಡಿಸಲು ಅಗತ್ಯವಾದ ಬೆರಳಚ್ಚುಗಾರರು, ಶೀಘ್ರಲಿಪಿಗಾರರು ಇಲ್ಲವೆಂಬ ಪರಿಸ್ಥಿತಿ; ಬೆರಳಚ್ಚು ಯಂತ್ರಗಳು ಇಲ್ಲದಿರುವ ತಗಾದೆ; ದಾಖಲೆಗಳನ್ನು ಸಿದ್ಧಪಡಿಸಲು ಅಗತ್ಯವಾದ ನಮೂನೆಗಳು, ಮಾದರಿಗಳು ಕನ್ನಡದಲ್ಲಿ ಲಭ್ಯವಿಲ್ಲ ಎಂಬ ನೆಪ ಇವೆಲ್ಲವೂ ಅಲ್ಲಲ್ಲಿ ಕೇಳಿ ಬಂದ ಸಂಗತಿಗಳು. ಇವೆಲ್ಲವನ್ನೂ ಸರಕಾರವು ಕೂಡ ಬೇರೆ ಬೇರೆ ಸಂದರ್ಭದಲ್ಲಿ ಒಪ್ಪಿಕೊಂಡು ಪರಿಹರಿಸಲು ಕ್ರಮ ಕೈಗೊಂಡಿದೆ. ಅಧಿಕಾರಿಗಳಿಗೆ ಕನ್ನಡ ಭಾಷೆ ಕಲಿಯಲು ತರಬೇತಿ ನೀಡುವುದು; ಇಂಗ್ಲಿಶ್ ಬೆರಳಚ್ಚುಗಾರರು, ಶೀಘ್ರ ಲಿಪಿಗಾರರು ಕನ್ನಡದಲ್ಲಿ ವಿಶೇಷ ನೈಪುಣ್ಯ ಪಡೆಯಲು ಅವಕಾಶ ಕಲ್ಪಿಸಿ ಅದಕ್ಕಾಗಿ ಅವರಿಗೆ ಆರ್ಥಿಕ ನೆರವು ನೀಡುವುದು; ಕನ್ನಡದಲ್ಲಿ ಆಡಳಿತ ನಡೆಸಲು ಅಗತ್ಯವಾದ ಸಾಮಗ್ರಿಗಳನ್ನು ಸಿದ್ಧಪಡಿಸುವುದು ಇತ್ಯಾದಿ ಕಾರ್ಯಕ್ರಮಗಳು ಅನೂಚಾನವಾಗಿ ನಡೆದು ಬಂದಿವೆ. ಸಮಸ್ಯೆ ಮತ್ತು ಪರಿಹಾರಗಳಿಗೆ ಇರುವ ಸಂಬಂಧವನ್ನು ಸರಿಯಾದ ಚೌಕಟ್ಟಿನಲ್ಲಿ ಪರಿಶೀಲಿಸಬೇಕಾಗುತ್ತದೆ. ಕನ್ನಡದ ಅನುಷ್ಠಾನಕ್ಕೆ ಮೇಲೆ ಹೇಳಲಾದ ಕೊರತೆಗಳು ಎಷ್ಟು ಪರಿಣಾಮಕಾರಿ ಆಗಿದ್ದವು ಎಂಬುದನ್ನು ಪರಿಶೀಲಿಸುವ ಯತ್ನಗಳು ಆಗ ನಡೆದಂತೆ ಕಾಣುತ್ತಿಲ್ಲ.

ಈ ಸಂದರ್ಭದಲ್ಲಿ ೧೯೬೩ರ ರಾಜ್ಯ ಭಾಷಾ ಅಧಿನಿಯಮ ಜಾರಿಗೆ ಬಂದ

ಆಸುಪಾಸಿನಲ್ಲಿ ಸರಕಾರ ಒಂದು ಸುತ್ತೋಲೆಯನ್ನು ಹೊರಡಿಸಿದೆ. ತುಂಬಾ ಚಿಕ್ಕ ಸುತ್ತೋಲೆ; ಜೂನ್ ೧೨, ೧೯೬೩ರಲ್ಲಿ ರಾಜ್ಯಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹೊರಡಿಸಿರುವ ಸುತ್ತೋಲೆ ಇದು. ಈ ಸುತ್ತೋಲೆಯಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ರಾಜ್ಯದ ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತಿರುವಾಗ ಆ ಇಲಾಖೆಗಳಿಗೆ ಜನರು ಅಹವಾಲನ್ನು ಯಾವ ಭಾಷೆಯಲ್ಲಿ ಬರೆದುಕೊಡಬೇಕು ಅಥವಾ ಯಾವ ಭಾಷೆಯಲ್ಲಿ ಬರೆದರೆ ಅವುಗಳನ್ನು ಸ್ವೀಕರಿಸಬೇಕು ಎಂಬ ಬಗೆಗೆ ನಿರ್ದೇಶನಗಳಿವೆ. ಅದರಂತೆ ಒಂದು ಪ್ರದೇಶದಲ್ಲಿ ಶೇಕಡಾ ಹದಿನೈದಕ್ಕಿಂತ ಹೆಚ್ಚು ಸಂಖ್ಯೆಯ ಜನರು ಯಾವ ಭಾಷೆಯನ್ನು ಮಾತನಾಡುತ್ತಾರೋ ಆ ಭಾಷೆಯಲ್ಲಿ ತಮ್ಮ ಅಹವಾಲುಗಳನ್ನೂ ಪತ್ರಗಳನ್ನೂ ಸರಕಾರಕ್ಕೆ ನೀಡಬಹುದೆಂದೂ ಅದನ್ನು ಸರಕಾರದ ಕಛೇರಿಗಳು ನಿರಾಕರಿಸಬಾರದೆಂದೂ ಸೂಚಿಸಲಾಗಿದೆ.

ರಾಜ್ಯದ ಭಾಷಾಅಲ್ಪಸಂಖ್ಯಾತರ ಸಂವಿಧಾನದತ್ತ ಹಕ್ಕನ್ನು ಸಂರಕ್ಷಿಸಲು ಇಂತಹ ಸೂಚನೆಯೊಂದನ್ನು ನೀಡಿದ್ದರಲ್ಲಿ ಅಸಹಜವಾದುದು ಏನೂ ಇಲ್ಲ. ಆದರೆ ಈ ಸುತ್ತೋಲೆಯನ್ನು ಹೇಗೆ ಅನ್ವಯಿಸಬೇಕು ಎಂಬುದು ಒಂದು ಪ್ರಶ್ನೆಯಾಗುತ್ತದೆ. ಸ್ಥಳೀಯ ಜನಸಂಖ್ಯೆಯಲ್ಲಿ ಪ್ರತಿಶತ ಹದಿನೈದಕ್ಕಿಂತ ಹೆಚ್ಚು ಜನರು ಮಾತಾಡುವ ಭಾಷೆ ಯಾವುದು ಎಂಬುದನ್ನು ಹೇಗೆ ನಿರ್ಧರಿಸಬೇಕು; ಯಾವ ಭೌಗೋಳಿಕ ವ್ಯಾಪ್ತಿಯನ್ನು ಸ್ಥಳೀಯ ಎಂದು ತಿಳಿಯಬೇಕು; ಹೋಬಳಿ ಹಂತವೋ, ತಾಲೂಕು ಹಂತವೋ ಅಥವಾ ಜಿಲ್ಲಾ ಹಂತವೋ ಎಂಬುದು ಈ ಸುತ್ತೋಲೆಯಿಂದ ಗೊತ್ತಾಗುವುದಿಲ್ಲ. ಅಲ್ಲದೆ ರಾಜ್ಯದ ಜನರಲ್ಲಿ ಭಾಷಾವಾರು ಹಂಚಿಕೆ ಹೇಗಿದೆ; ಯಾವ ಯಾವ ಪ್ರದೇಶಗಳಲ್ಲಿ ಯಾವ ಯಾವ ಭಾಷಿಕರು ಯಾವ ಪ್ರಮಾಣದಲ್ಲಿ ನೆಲೆಸಿ ಹರಡಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿ ತಿಳಿದಿರಲಿಲ್ಲ. ಅಂತಹ ಮಾಹಿತಿಯನ್ನು ಪಡೆದುಕೊಳ್ಳಲು ಸರಕಾರ ಕೂಡ ಪ್ರಯತ್ನ ಮಾಡಿದಂತೆ ತೋರುತ್ತಿಲ್ಲ. ೧೯೬೧ರ ರಾಷ್ಟ್ರ ಜನಗಣತಿಯ ಆಧಾರದ ಮೇಲೆ ಇಂತಹ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಲು ಕಾರಣಗಳಿಲ್ಲ. ರಾಜ್ಯದಲ್ಲಿ ಬೇರೆ ಬೇರೆ ಭಾಷಿಕರು ಯಾವ ರೀತಿಯಲ್ಲಿ ಹರಡಿಕೊಂಡಿದ್ದಾರೆ ಮತ್ತು ಯಾವ ಯಾವ ತಾಲ್ಲೂಕುಗಳಲ್ಲಿ ಅವರ ಪ್ರಮಾಣ ಎಷ್ಟಿದೆ ಎಂಬುದನ್ನು ಖಚಿತವಾಗಿ ತಿಳಿದು ಈ ಸುತ್ತೋಲೆಯನ್ನು ಜಾರಿಗೆ ಕೊಡುವುದು ಸಾಧ್ಯವಾಗದು. ಏಕೆಂದರೆ ಆಗ ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಬಳಸಬೇಕು ಎಂಬ ನೀತಿಯನ್ನು ಜಾರಿಗೆ ನೀಡುವುದು ಕಷ್ಟವಾಗುತ್ತದೆ. ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿಯೂ ಒಂದು ಅಂದಾಜಿನಂತೆ ೧೯೮೧ ರ ಸುಮಾರಿನಲ್ಲಿ ಮೂರನೇ ಒಂದು ಭಾಗಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ, ಕನ್ನಡದ ಜೊತೆಗೆ ಇತರ ಭಾಷೆಗಳನ್ನು ಬಳಸುವವರು ಹೆಚ್ಚಿನ ಪ್ರಮಾಣದಲ್ಲಿದ್ದರು. ರಾಜ್ಯದ ಸರಾಸರಿಯೇ ಶೇಕಡಾ ೬೬ ಕನ್ನಡಿಗರ ಜನಸಂಖ್ಯೆಯಾದರೆ ಉಳಿದವರು ಮೂರನೇ ಒಂದು ಭಾಗಕ್ಕೂ ಮಿಕ್ಕಿ ಇರುವುದು ಸ್ಪಷ್ಟವಾಗಿದೆ. ತಾಲ್ಲೂಕು ಹಂತದಲ್ಲಿ ಇಂತಹ ಸುತ್ತೋಲೆಯ ಪರಿಣಾಮ ಏನಾಗುತ್ತದೆ ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ.

ಆದರೆ ಮೇಲೆ ಹೇಳಿದ ಸಮಸ್ಯೆಗಳು ಉದ್ಭವಿಸಲಿಲ್ಲ. ಏಕೆಂದರೆ ಕರ್ನಾಟಕದ ಭಾಷಾಅಲ್ಪಸಂಖ್ಯಾತರಲ್ಲಿ ಹಲವು ಗುಂಪಿನ ಜನರಿಗೆ ತಾವಾಡುವ ಭಾಷೆಯ ಮೂಲಕ ಸರಕಾರದೊಡನೆ ವ್ಯವಹರಿಸುವುದು ಸಾಧ್ಯವಿಲ್ಲ. ಏಕೆಂದರೆ ಆ ಭಾಷೆಗಳಿಗೆ ಬರೆಯಲು ಅಧಿಕೃತ ಲಿಪಿಗಳೇ ಇಲ್ಲ. ತುಳು, ಕೊಡವ, ಕೊಂಕಣಿ, ಲಂಬಾಣಿ ಮುಂತಾದವು ಇಂತಹ ಭಾಷೆಗಳು. ಲಿಪಿಬದ್ಧ ಭಾಷೆಯನ್ನಾಡುತ್ತಿದ್ದ ಭಾಷಾ ಅಲ್ಪಸಂಖ್ಯಾತರು ಇದ್ದಾರೆಯಾದರೂ, ಅವರು ಕೂಡ ತಮ್ಮ ಭಾಷೆಯ ಮೂಲಕ ಅಹವಾಲನ್ನು ಸಲ್ಲಿಸಲು ಸಾಧ್ಯವಿರಲಿಲ್ಲ. ಉರ್ದು, ತಮಿಳು, ತೆಲುಗು, ಮುಂತಾದ ಭಾಷೆಗಳಾಡುವವರು ಈ ಗುಂಪಿನಲ್ಲಿ ಬರುತ್ತಾರೆ. ಇವರಿಗೆ ತಮ್ಮ ಭಾಷೆಯನ್ನು ಮಾತಿನಲ್ಲಿ ಬಳಸಲು ತಿಳಿದಿತ್ತೇ ಹೊರತು ಇವರು ಆ ಭಾಷೆಗಳಲ್ಲಿ ಅಹವಾಲುಗಳನ್ನು ಬರೆಯುವಂತಹ ಅಕ್ಷರಸ್ಥರಾಗಿರಲಿಲ್ಲ. ಹೀಗಾಗಿ ಭಾಷಾಅಲ್ಪಸಂಖ್ಯಾತರ ಹಿತಕಾಯಲು ೧೯೬೩ರಲ್ಲಿ ಹೊರಟ ಸುತ್ತೋಲೆ ಕನ್ನಡದ ಪರಿಸ್ಥಿತಿಗೆ ಹೆಚ್ಚಿನ ಆತಂಕಗಳನ್ನು ಉಂಟುಮಾಡಲಿಲ್ಲ. ಜೊತೆಗೆ ಭಾಷಾ ಅಲ್ಪಸಂಖ್ಯಾತರ ಹಿತಕಾಯುವಲ್ಲಿಯೂ ಸಫಲವಾಗಲಿಲ್ಲ.

ಈ ಪರಿಸ್ಥಿತಿಯ ಪರಿಶೀಲನೆ ಏಕೆ ಅಗತ್ಯವಾಯಿತು ಎಂದರೆ ಭಾರತದ ಇತರ ಪ್ರದೇಶಗಳಲ್ಲಿ ಹೀಗೆ ಅಲ್ಪಸಂಖ್ಯಾತರ ಭಾಷೆಯ ಸಂರಕ್ಷಣೆಯ ಕಾರ್ಯಯೋಜನೆ ಯಿಂದಾಗಿ ಆಯಾ ರಾಜ್ಯಗಳಲ್ಲಿ ಎರಡನೆಯ(ಅಥವಾ ಮೂರನೆಯ) ಅಧಿಕೃತ ಭಾಷೆಯಾಗಿ ಪ್ರಾಂತೀಯ ಭಾಷೆಯ ಜೊತೆಗೆ ಅಲ್ಪಸಂಖ್ಯಾತರ ಭಾಷೆಯನ್ನು ಬಳಸುವ ನಿರ್ಣಯವನ್ನು ಕೈಗೊಳ್ಳಬೇಕಾಗಿ ಬಂತು. ಕರ್ನಾಟಕದಲ್ಲೂ ಅಂತಹ ಒತ್ತಾಯಗಳು ಆಗಾಗ ಬಂದಿವೆ. ಆದರೆ ಅವುಗಳು ಯಶಸ್ವಿಯಾಗಿಲ್ಲ. ಈ ವಿವರಣೆ ನೀಡುವಾಗ ಇದನ್ನು ಅಲ್ಪಸಂಖ್ಯಾತರ ಭಾಷೆಯ ಹಿತಾಸಕ್ತಿಗೆ ವಿರುದ್ಧವಾದ ವ್ಯಾಖ್ಯೆಯೆಂದು ತಿಳಿಯಬೇಕಾಗಿಲ್ಲ. ಕರ್ನಾಟಕದಲ್ಲಿ ಕನ್ನಡ ಮಾತಾಡುವ ಜನರಂತೆಯೇ ಇತರ ಭಾಷೆಗಳನ್ನಾಡುವ ಜನರೂ ಯಾವ ಇಕ್ಕಟ್ಟಿನಲ್ಲಿದ್ದಾರೆ ಎಂಬುದನ್ನು ಮಂಡಿಸಲು ಈ ವಿವರಣೆಯನ್ನು ನೀಡಿದೆ. ಮೇಲೆ ಹೇಳಿದಂತೆ ವಿವಿಧ ರಾಜ್ಯಗಳಲ್ಲಿ ಅಲ್ಪಸಂಖ್ಯಾತ ಭಾಷಿಕರು ತಮ್ಮ ಭಾಷೆಗೂ ಸಹ ಆಡಳಿತ ಭಾಷೆಯಾಗಿ ರಾಜ್ಯದಲ್ಲಿ ಮನ್ನಣೆ ನೀಡಬೇಕೆಂದು ಬೇಡಿಕೆ ಮಂಡಿಸಿ ಅನಂತರ ಅದನ್ನೊಂದು ಚಳುವಳಿಯನ್ನಾಗಿಯೂ ಪರಿವರ್ತಿಸಿದ್ದಾರೆ. ಇದರ ಪರಿಣಾಮವಾಗಿಯೇ ಭಾರತ ಒಕ್ಕೂಟದಲ್ಲಿ ಕೆಲವು ಹೊಸ ರಾಜ್ಯಗಳನ್ನು ಅಥವಾ ರಾಜ್ಯದಲ್ಲೇ ಪ್ರತ್ಯೇಕ ಆಡಳಿತವುಳ್ಳ ಪ್ರದೇಶಗಳನ್ನು ನಿರ್ಮಿಸಬೇಕಾಗಿ ಬಂದಿದೆ. ಮತ್ತೆ ಕೆಲವೆಡೆ ಮನ್ನಣೆ ಪಡೆದ ಭಾಷೆಗಳು ತಮ್ಮದೇ ರಾಜ್ಯವಿಲ್ಲದ ಪರಿಸ್ಥಿತಿಯಲ್ಲಿವೆ. ಕೆಲವು ಕಡೆ ಈ ಗೊಂದಲ ದಿನೇದಿನೇ ಹಲವು ಗೋಜಲುಗಳಿಗೆ ಕಾರಣವಾಗುತ್ತಿದೆ. ಆದರೆ ಈ ಬಗೆಯ ಚಲನಶೀಲತೆಗೆ ಕರ್ನಾಟಕ ಒಳಗಾಗಲಿಲ್ಲ.

ಕನ್ನಡವನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿ ಜಾರಿಗೆ ತರುವ ಹೊಣೆ ಹೊತ್ತ ಸರಕಾರ ಈವರೆಗೂ ಅದನ್ನು ಪೂರ್ಣಪ್ರಮಾಣದಲ್ಲಿ ನಿರ್ವಹಿಸಿಲ್ಲವೆಂಬ ಮಾತನ್ನು ನಾವು ಮೇಲೆ ಮೇಲೆ ಆಗಾಗ ಕೇಳುತ್ತಿರುತ್ತೇವೆ. ಸರಕಾರ ನೂರಾರು ಆದೇಶಗಳನ್ನು ಈ ಉದ್ದೇಶಕ್ಕಾಗಿಯೇ ಹೊರಡಿಸಿದರೂ ಅದರ ಪರಿಣಾಮ ಏನೂ ಆಗಿಲ್ಲ; ಇದು

ಸರಕಾರದಲ್ಲಿ ಇರುವ ಇಚ್ಛಾಶಕ್ತಿಯ ಕೊರತೆ ಎಂಬ ಟೀಕೆಯನ್ನು ಕೇಳುತ್ತೇವೆ. ಆದರೆ ಏಕೆ ಹೀಗೆ ಕನ್ನಡದ ಅನುಷ್ಠಾನ ಪೂರ್ಣಪ್ರಮಾಣದಲ್ಲಿ ಆಗಿಲ್ಲ ಎಂಬುದನ್ನು ಸರಿಯಾದ ಚೌಕಟ್ಟಿನಲ್ಲಿ ವಿಶ್ಲೇಷಿಸಿ ತಿಳಿಯಬೇಕಾಗಿದೆ.

ಹಾಗೆ ನೋಡಿದರೆ ಕನ್ನಡದ ಬಳಕೆ ಆಡಳಿತದಲ್ಲಿ ಕಳೆದ ಐವತ್ತು ವರ್ಷಗಳಲ್ಲಿ ಹೆಚ್ಚಾಗುತ್ತಿದೆ ಎಂಬುದನ್ನು ಸಮರ್ಥಿಸಲು ಸರಕಾರ ಪ್ರಯತ್ನಿಸಿದೆ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ, ವಿಭಾಗಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಶೇಕಡಾ ಎಷ್ಟು ಪ್ರಮಾಣದಲ್ಲಿ ಕನ್ನಡ ಬಳಕೆಯಾಗುತ್ತಿದೆ ಎಂಬುದನ್ನು ವಿವರಿಸಲು ಶೇಕಡಾವಾರು ಅಂಕಿ ಅಂಶಗಳನ್ನು ಕೂಡ ಒದಗಿಸಲಾಗುತ್ತಿದೆ. ಆ ಪ್ರಕಾರ ಒಂದು ಪಿರಮಿಡ್‌ನ ಚಿತ್ರ ನಮಗೆ ಗೋಚರವಾಗುತ್ತದೆ. ಅದರಂತೆ ಕೆಳಹಂತದಲ್ಲಿ ಕನ್ನಡ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಆಡಳಿತದ ಮೇಲುಮೇಲಿನ ಹಂತಕ್ಕೆ ಹೋದಂತೆ ಕನ್ನಡ ಬಳಕೆಯ ಪ್ರಮಾಣವು ಕಡಿಮೆಯಾಗುತ್ತಾ ಹೋಗಿದೆ. ಅಂದರೆ ರಾಜ್ಯಮಟ್ಟದಲ್ಲಿ ಅದಿನ್ನೂ ವಿಸ್ತಾರವನ್ನು ಪಡೆದುಕೊಳ್ಳಬೇಕಾಗಿದೆ. ಈ ಪರಿಸ್ಥಿತಿಯನ್ನು ಸರಿಪಡಿಸಲು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವುದಾಗಿ ಮತ್ತು ಅದನ್ನು ಜಾರಿಗೆ ಕೊಡುವುದಾಗಿ ಸರ್ಕಾರ ಹೇಳುತ್ತಲೇ ಇದೆ. ಆದರೆ ಯಶಸ್ಸು ದೊರಕಿಲ್ಲವೆಂಬುದೇ ಕನ್ನಡಪರವಾದ ಹಲವರ ಅಳಲು.

ಈ ಅಪಯಶಸ್ಸನ್ನು ಎರಡು ದಿಕ್ಕಿನಿಂದ ವಿಶ್ಲೇಷಿಸಬೇಕಾದ ಅಗತ್ಯವಿದೆ. ಕಾರ್ಯಕ್ರಮವು ಯಶಸ್ಸು ಪಡೆಯದಿರಲು ಅದರ ಹಿಂದಿನ ಯೋಜನಾತಂತ್ರಗಳಲ್ಲಿ ಕೊರತೆ ಇರುತ್ತವೆ. ಅಥವಾ/ಮತ್ತು ಅನುಷ್ಠಾನದ ಹಂತದಲ್ಲಿ ಹಲವು ಎಡರುತೊಡರುಗಳಿರಬೇಕು. ಈ ದಿಕ್ಕಿನಿಂದ ನೋಡಿದಾಗ ಕನ್ನಡ ಅನುಷ್ಠಾನಕ್ಕೆ ಬೇಕಾದ ಭಾಷಾನೀತಿ ಮತ್ತು ಯೋಜನೆಗಳು ರಾಜ್ಯಸರ್ಕಾರಕ್ಕೆ ಇಲ್ಲವೆಂಬ ನಿರ್ಣಯಕ್ಕೆ ಬರುವುದು ಸಾಧ್ಯ. ಆದರೆ ಇನ್ನೊಂದು ದಿಕ್ಕಿನಲ್ಲಿ ನೋಡಿದಾಗ ಬೇರೆಯ ಸಾಧ್ಯತೆ ಗೋಚರಿಸುತ್ತದೆ.

ಏಕೆ ಕನ್ನಡ ಆಡಳಿತ ಭಾಷೆಯಾಗಬೇಕು, ಹಾಗೆ ಆಗದಿದ್ದರೆ ಆಗುವ ತೊಂದರೆಗಳೇನು, ಕನ್ನಡ ಬಳಕೆಯಾಗದಿದ್ದಲ್ಲಿ ಅದರ ಪ್ರಯೋಜನಗಳು ಪೂರ್ವನಿರ್ಧಾರಿತವಾಗಿ ಯಾರಿಗಾದರೂ ಇರುವುದು ಸಾಧ್ಯವೇ ಎಂಬ ಪ್ರಶ್ನೆಗಳು ಮುಖ್ಯ. ಜನರ ಭಾಷೆ, ಆಡಳಿತ ಭಾಷೆ ಆಗಬೇಕು ಎಂದು ಒಪ್ಪಿಕೊಂಡ ನೆಲೆಯಲ್ಲಿ ನಾವು ಮಾತನಾಡುತ್ತಿರುತ್ತೇವೆ. ಆದರೆ ಆಡಳಿತ ಯಂತ್ರದಲ್ಲಿ ಜನಸಾಮಾನ್ಯರ ಪಾತ್ರವೇನು ಎಂಬ ಬಗೆಗೆ ಯೋಚಿಸುವುದಿಲ್ಲ. ಜನರು ಆಡಳಿತದಲ್ಲಿ ಭಾಗಿಯಾಗಬೇಕಾದರೆ ಅಥವಾ ಆಡಳಿತದ ನಿರ್ಧಾರಗಳಲ್ಲಿ ತಮ್ಮ ಪಾಲು ಇದೆ ಎಂದು ತಿಳಿಯಬೇಕಾದರೆ ಮುಖ್ಯವಾಗಿ ಎರಡು ಸಂಗತಿಗಳು ಅಗತ್ಯ. ಒಂದು: ಆಡಳಿತಯಂತ್ರದ ಉತ್ತರ ದಾಯಿತ್ವ; ಎರಡು: ಆಡಳಿತ ಯಂತ್ರದ ಪಾರದರ್ಶಕತೆ. ಕಳೆದ ಐವತ್ತು ವರ್ಷಗಳ ಚರಿತ್ರೆಯಲ್ಲಿ ಈ ಎರಡು ಸಂಗತಿಗಳು ದೃಢಗೊಳ್ಳುತ್ತಾ ಹೋಗುವ ಬದಲು ಸಡಿಲವಾಗುತ್ತಾ ಬಂದಿವೆ. ಈ ಕಾರಣದಿಂದ ಜನರು ಆಡಳಿತ ಯಂತ್ರದೊಡನೆ ಹೊಂದಿರುವ ಸಂಬಂಧ ಅತ್ಯಂತ ಕನಿಷ್ಠ ಪ್ರಮಾಣದ್ದಾಗಿದೆ. ಹಾಗೆ ಉಳಿದಿರುವ ಸಂಬಂಧದಲ್ಲೂ ಅವರ ಅಪೇಕ್ಷೆಗಳು, ದೃಷ್ಟಿಕೋನಗಳು ಮಾನ್ಯವಾಗುವುದಿಲ್ಲ. ಹೀಗಾಗಿ ಜನಭಾಷೆಯು ಆಡಳಿತದ ಭಾಷೆಯಾಗಿ

ನೆಲೆಗೊಳ್ಳುವ ಅವಕಾಶಗಳು ಕಡಿಮೆಯಾಗುತ್ತಿವೆ.

ಈ ವಿವರಣೆಯನ್ನು ಮತ್ತಷ್ಟು ಪುಷ್ಟಿಗೊಳಿಸುವ ಅಗತ್ಯವಿದೆ. ಆಡಳಿತವು ಒಪ್ಪಿಕೊಂಡ ಕಲ್ಯಾಣರಾಜ್ಯದ ಕಲ್ಪನೆಯಲ್ಲಿ ಆಳುವವರು ಕೊಡುವವರಾಗಿದ್ದರೆ ಜನರು ಪಡೆಯುವವರಾಗಿರುತ್ತಾರೆ. ಈ ಅಸಮ ಸಂಬಂಧದಲ್ಲಿ ಕೊಡುವವರ ಕೈ ಮೇಲಾಗುತ್ತದೆ. ಅವರ ಮಾತಿಗೆ ಹೆಚ್ಚು ಬೆಲೆ ಬರುತ್ತದೆ. ಭಾಷಾ ಅಧ್ಯಯನಕಾರರು ಇಂತಹ ಸಂದರ್ಭಗಳನ್ನು ಗಮನಿಸಿದ್ದಾರೆ. ಇಂಥಲ್ಲಿ ಯಾವಾಗಲೂ ಮೇಲುಗೈ ಪಡೆದವರ ಭಾಷೆಯನ್ನೇ ಪಡೆಯುವವರು ಒಪ್ಪಿಕೊಳ್ಳಬೇಕಾಗುತ್ತದೆ ಅಥವಾ ಪಡೆಯುವವರಿಗಿಂತ ತಾವು ಭಿನ್ನ ಎಂದು ಸ್ಥಾಪಿಸಲು ಆಳುವವರು ಬೇರೆಯ ಭಾಷೆಯನ್ನೇ ಆಡುತ್ತಿರುತ್ತಾರೆ; ಬಳಸುತ್ತಿರುತ್ತಾರೆ. ಕೊಂಚ ಸಂಕೀರ್ಣವಾದ ಈ ಸಂಬಂಧದಲ್ಲಿ ಕನ್ನಡದ ಸ್ಥಿತಿ ಏನಾಗಿದೆ ಎನ್ನುವುದನ್ನು ಪರಿಶೀಲಿಸಬೇಕು. ಮೇಲುನೋಟಕ್ಕೆ ಜನಪ್ರತಿನಿಧಿಗಳು ಮತ್ತು ನೌಕರಶಾಹಿಯೂ ಜನ ಸಮುದಾಯದಿಂದಲೇ ರೂಪುಗೊಂಡು ಬಂದವರೆಂದು ಅನಿಸುತ್ತದೆ. ಆದರೆ ಅಧಿಕಾರದ ಚೌಕಟ್ಟಿನಲ್ಲಿ ಅವರು ಜನರ ಜೊತೆಗಿನ ಸಂಪರ್ಕದ ಬದಲು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲಸಂಪರ್ಕದಲ್ಲಿ ಸೇರುತ್ತಾರೆ. ಇದರಿಂದ ಅಸಮ ನೆಲೆಯ ಸಂಬಂಧ ಏರ್ಪಡುತ್ತದೆ. ತಾವು ಗುರುತಿಸಿಕೊಂಡ ಜಾಲದ ಅಧಿಕೃತ ಭಾಷೆಯನ್ನೇ ತಮ್ಮ ಭಾಷೆಯನ್ನಾಗಿ ಆಡಳಿತಗಾರರು ಬಳಸುತ್ತಾರೆ. ನಮ್ಮ ರಾಜಕೀಯ, ಆರ್ಥಿಕ ಪರಿಸ್ಥಿತಿಯ ಈ ವಿನ್ಯಾಸಗಳು ಕನ್ನಡಕ್ಕೆ ಈ ಹೊತ್ತಿಗೆ ಯಾವ ಸ್ಥಾನಮಾನಗಳು ದೊರಕಬೇಕಿತ್ತೋ ಅದು ಲಭ್ಯವಾಗದಂತೆ ಮಾಡಿ ಬಿಟ್ಟಿವೆ.

ಸರಕಾರ ತನ್ನ ಸಮುದಾಯ ಕಲ್ಯಾಣ ಕಾರ್ಯಕ್ರಮಗಳು ಜನಮುಖಿಯಾಗಬೇಕೆಂದು ಬಯಸುತ್ತದೆ. ಆದರೆ ಇದು ಕೊಡುವ, ನೀಡುವ ನೆಲೆಯಲ್ಲಿರುತ್ತದೆ. ಜನರು ಪಡೆಯುವವರಾಗುತ್ತಾರೆ. ಈ ಕಾರ್ಯಕ್ರಮಗಳ ಮಾಹಿತಿಗಳನ್ನು ಜನರಿಗೆ ತಿಳಿಸಲು ಸರಕಾರ ಯತ್ನಿಸಬೇಕು. ಆದರೆ ಅದು ಯಶಸ್ಸು ಪಡೆಯಲು ಜನ ಓದುಬರೆಹ ಬಲ್ಲವರಾಗಬೇಕು. ತಡವಾದ ಅಕ್ಷರ ಕಲಿಕೆಯ ಕಾರ್ಯಕ್ರಮಗಳನ್ನು ಸರಕಾರ ರೂಪಿಸಿದೆ. ಆದರೂ ಜನ ಮೌಖಿಕ ನೆಲೆಯ ಸಂಪರ್ಕವನ್ನು ಅವಲಂಬಿಸಿದಷ್ಟು ಲಿಖಿತ ನೆಲೆಯ ವ್ಯವಹಾರವನ್ನು ಅವಲಂಬಿಸುವುದಿಲ್ಲ. ಇದರಿಂದಾಗಿ ಕನ್ನಡವನ್ನು ಜನಸಂಪರ್ಕಕ್ಕಾಗಿ ಸರಕಾರ ಬಳಸಿದರೂ ಸದ್ಯದ ಪರಿಸ್ಥಿತಿಯಲ್ಲಿ ಅದರ ಉದ್ದೇಶ ಪೂರ್ಣವಾಗಿ ಯಶಸ್ಸು ಪಡೆಯಲಾರದು.

ಈ ಹಿನ್ನೆಲೆಯಲ್ಲಿ ೧೯೮೦ರ ಅನಂತರದಲ್ಲಿ ಮಂಡಿತವಾದ ಒಂದು ಮುಖ್ಯ ದಾಖಲೆಯನ್ನು ಪರಿಶೀಲಿಸಬೇಕಾಗಿದೆ. ಇದು ಆಡಳಿತಭಾಷೆಯಾಗಿ ಕನ್ನಡ ಸ್ವಾತಂತ್ರ್ಯಪೂರ್ವದಲ್ಲೇ ಬಳಕೆಯಾಗುತ್ತಿತ್ತು, ಆಂಗ್ಲರೇ ತಮ್ಮ ಆಡಳಿತದಲ್ಲಿ ಕನ್ನಡವನ್ನು ಯಶಸ್ವಿಯಾಗಿ ಬಳಸುತ್ತಿದ್ದರು ಎಂಬುದನ್ನು ಮಂಡಿಸುವ ದಾಖಲೆ. ಲಭ್ಯವಿರುವ ಮಾಹಿತಿಯನ್ನು ಆಧರಿಸಿ ಶ್ರೀ ಮಹಾದೇವ ಬಣಕಾರ ಅವರು ಆಂಗ್ಲರ ಆಡಳಿತ ಕಾಲದಲ್ಲಿ ಕನ್ನಡ ಹೇಗೆ ಬಳಕೆಯಾಗುತ್ತಿತ್ತು ಎಂಬುದನ್ನು ಒಂದು ಗ್ರಂಥ ಮುಖೇನ ಪ್ರಕಟಿಸಿದ್ದಾರೆ. ಕರ್ನಾಟಕ ಸರ್ಕಾರದ ನೆರವಿನಿಂದ ಪ್ರಕಟಿಸಿರುವ ಈ ಕೃತಿಯನ್ನು

ಉಲ್ಲೇಖಿಸಿ ಕನ್ನಡಪರ ಚಿಂತಕರು ಈ ಹಿಂದೆಯೇ ಕನ್ನಡ ಕರ್ನಾಟಕದ ಸಾರ್ವಭೌಮ ಭಾಷೆಯಾಗಿತ್ತೆಂದೂ ಈಗ ಆ ಸ್ಥಾನವನ್ನು ಕನ್ನಡ ಕಳೆದುಕೊಂಡಿದೆ ಎಂದೂ ವಾದಿಸುತ್ತಾರೆ. ಈ ದಾಖಲೆ ಮತ್ತು ಅದನ್ನು ಆಧರಿಸಿದ ವಾದಗಳನ್ನು ಪರಿಶೀಲಿಸುವುದು ಅಗತ್ಯ.

ಆಂಗ್ಲರು ಕರ್ನಾಟಕವನ್ನು ನೇರವಾಗಿ ಹಲವು ಕಡೆ, ಪರೋಕ್ಷವಾಗಿ ಕೆಲವು ಕಡೆ ಆಳುತ್ತಿದ್ದರು. ಅವರ ಅಧಿಕಾರವ್ಯಾಪ್ತಿಗೆ ಬಾರದಿದ್ದ ಪ್ರದೇಶಗಳೂ ಇದ್ದವು. ಅಂಥ ಪ್ರದೇಶಗಳಲ್ಲಿ ಕನ್ನಡವಾಗಲೀ ಇಂಗ್ಲಿಶಾಗಲೀ ಮುಂಚೂಣಿಗೆ ಬರುತ್ತಿಲ್ಲ. ಉಳಿದ ಕಡೆಗಳಲ್ಲಿ ಜನರಿಗೆ ನೇರ ಸಂಬಂಧವಿರುವ ದಾಖಲೆಗಳನ್ನು ಕನ್ನಡದಲ್ಲಿ ಸಿದ್ಧಪಡಿಸಿರುವ ನಿದರ್ಶನಗಳನ್ನೇ ಶ್ರೀ ಬಣಕಾರರ ಗ್ರಂಥ ಸಂಗ್ರಹಿಸಿದೆ. ಎಂದರೆ ಜನರು ತಮ್ಮ ಅಹವಾಲುಗಳನ್ನು ಮಂಡಿಸುವುದು ಅದಕ್ಕೆ ಸರ್ಕಾರ ಪ್ರತಿಕ್ರಿಯಿಸುವುದು ಆಡಳಿತದ ಒಂದು ಕನಿಷ್ಠ ಭಾಗ. ಇದರಲ್ಲಿ ಜನರಿಗೆ ತಿಳಿಯಬೇಕಾದ ಆಡಳಿತದ ನಿರ್ಧಾರಗಳು ಸೇರುತ್ತವೆ. ಆಂಗ್ಲರು ಆಡಳಿತ ನಡೆಸುವಾಗ ಅನುಸರಿಸುತ್ತಿದ್ದ ವ್ಯವಸ್ಥೆಯಲ್ಲಿ ತಮ್ಮ ಮತ್ತು ಜನರ ನಡುವೆ ಮಧ್ಯವರ್ತಿಗಳಿಗೆ ತಮ್ಮ ಭಾಷೆಯನ್ನು ಕಲಿಯುವ ಅವಕಾಶವನ್ನು ಕಲ್ಪಿಸಿದರು. ಅವರ ಮೂಲಕ ಜನರಿಗೆ ಅಗತ್ಯವಾದ ಮಾಹಿತಿಯನ್ನು ರವಾನಿಸುತ್ತಿದ್ದರು. ಈ ಕಿರುವಲಯದಲ್ಲಿ ಕಂಡುಬರುವ ಕನ್ನಡದ ಬಳಕೆಯನ್ನು ಗಮನಿಸಿ ಇಡೀ ಆಡಳಿತದಲ್ಲೇ ಕನ್ನಡಕ್ಕೆ ಮಾನ್ಯತೆ ಇತ್ತು ಎಂದು ಬಿಂಬಿಸುವುದು ಸರಿಯಾದ ವ್ಯಾಖ್ಯಾನವಾಗಲಾರದು.

ಅಲ್ಲದೆ ಆ ಆಡಳಿತದ ಹಿಂದಿನ ತಾತ್ತ್ವಿಕತೆಯೇ ಇಂದಿನ ಪ್ರಜಾಪ್ರಭುತ್ವದ ತಾತ್ತ್ವಿಕತೆಗಿಂತ ಬೇರೆಯಾದುದು. ಇಲ್ಲಿ ಜನರು ತಮ್ಮ ದೈನಂದಿನ ಬದುಕಿನಲ್ಲಿ ಆಡಳಿತದೊಂದಿಗೆ ಯಾವ ಸಂಪರ್ಕವನ್ನೂ ಇರಿಸಿಕೊಳ್ಳದೆ ಕೇವಲ ತೆರಿಗೆದಾರರಾಗಿ ಅಥವಾ ಸರಕಾರಕ್ಕೆ ಬೇಕಾದ ಸೇವಾವಲಯದಲ್ಲಿ ಸೇವೆಗಳನ್ನು ಸಲ್ಲಿಸುವವರಾಗಿ ಇರುತ್ತಿದ್ದರು. ಆಡಳಿತದ ಸಾರ್ವಭೌಮತ್ವವೆಲ್ಲಾ ಜನರ ಪ್ರಜ್ಞೆಯ ಆಚೆಗಿನ ಮಾತಾಗಿತ್ತು. ಎಲ್ಲಾ ಸಾಮಂತಶಾಹಿ ವ್ಯವಸ್ಥೆಗಳಲ್ಲೂ ಕಂಡುಬರುವ ಈ ಸ್ಥಿತಿಯು ಇಲ್ಲಿಯೂ ಮುಂದುವರೆದಿತ್ತು. ಹೀಗಿರುವಾಗ ಆಗಿನ ಆಡಳಿತದಲ್ಲಿ ಕನ್ನಡಕ್ಕೆ ಸಾರ್ವಭೌಮ ಸ್ಥಾನ ದೊರಕುವುದು ಖಂಡಿತ ಸಾಧ್ಯವಿರಲಿಲ್ಲ. ಜನರಿಗೆ ಅಗತ್ಯ ವಾದ ಮಾಹಿತಿಗಳನ್ನು ಮಾತು ಇಲ್ಲವೇ ಬರಹಗಳ ಮೂಲಕ ಒದಗಿಸುವ ಸರ್ಕಾರ ಯಾವಾಗಲೂ ಜನರ ಭಾಷೆಯನ್ನೇ ಬಳಸಿಕೊಳ್ಳುತ್ತಿರುತ್ತದೆ. ಇಂತಹ ಬಳಕೆಗಳನ್ನು ನಾವು ಎಲ್ಲಾ ಕಾಲದಲ್ಲೂ ಕಾಣುತ್ತೇವೆ. ನಮ್ಮ ಪ್ರಾಚೀನ ಶಾಸನಗಳು ಕನ್ನಡದಲ್ಲಿ ಇರುವುದಕ್ಕೆ ಇದೇ ಕಾರಣ. ಜನರೊಡನೆ ಅಧಿಕಾರವುಳ್ಳವರು ಮಾತಾಡುವಾಗ ಬಳಸುವ ಭಾಷೆಗೂ, ಜನರು ಅಧಿಕಾರವುಳ್ಳವರೊಡನೆ ಮಾತಾಡುವಾಗ ಬಳಸುವ ಭಾಷೆಗೂ, ಅಧಿಕಾರವುಳ್ಳವರು ತಮ್ಮತಮ್ಮಲ್ಲೇ ವ್ಯವಹರಿಸುವಾಗ ಬಳಸುವ ಭಾಷೆಗೂ ಅಗಾಧ ವ್ಯತ್ಯಾಸವಿರುತ್ತದೆ. ಈ ಸಂಕೀರ್ಣತೆಯಲ್ಲಿ ನಾವು ಕನ್ನಡದ ಸ್ಥಾನಮಾನಗಳ ಸ್ವರೂಪವನ್ನು ಗ್ರಹಿಸಬೇಕಾಗುತ್ತದೆ.

ಶಿಕ್ಷಣದಲ್ಲಿ ಕನ್ನಡ

ಕರ್ನಾಟಕ ಸರ್ಕಾರದ ಭಾಷಾನೀತಿಯನ್ನು ಚರ್ಚಿಸುವಾಗ ಪ್ರಾಸಂಗಿಕವಾಗಿ ಶಿಕ್ಷಣ ಮತ್ತು ಕನ್ನಡಗಳ ಸಂಬಂಧವನ್ನು ಗಮನಿಸಿದ್ದೇವೆ. ಈ ಬಗೆಗೆ ವಿವರವಾದ ಚರ್ಚೆ ಈ ಅಧ್ಯಾಯದಲ್ಲಿದೆ. ರಾಜ್ಯಾಂಗದ ನಿರ್ದೇಶಕತತ್ವಗಳ ಪ್ರಕಾರ ಶಿಕ್ಷಣವು ನಿರ್ದಿಷ್ಟ ವಯೋಮಾನದ ಎಲ್ಲಾ ಮಕ್ಕಳಿಗೂ ದೊರಕಬೇಕಾದ್ದು ಅಗತ್ಯ. ಈ ಕಾರಣದಿಂದ ರಾಜ್ಯಸರ್ಕಾರಗಳು ಈ ಹೊಣೆಯನ್ನು ಹೊರಬೇಕೆಂದು ಸೂಚಿಸಲಾಗಿದೆ. ಈ ಶಿಕ್ಷಣಕ್ರಮದಲ್ಲಿ ಏನನ್ನು ಕಲಿಯಬೇಕು ಮತ್ತು ಹೇಗೆ ಕಲಿಯಬೇಕು ಎಂಬುದು ಶೈಕ್ಷಣಿಕ ತತ್ತ್ವದ ವಿಚಾರ. ಕೆಲವು ಚಾರಿತ್ರಿಕ ಕಾರಣಗಳಿಂದ ನೆಲೆನಿಂತಿರುವ ಸರಳ ಗ್ರಹಿಕೆಯಂತೆ ಶಿಕ್ಷಣದ ಮುಖ್ಯ ಗುರಿಗಳಲ್ಲಿ ಭಾಷೆಯನ್ನು ಕಲಿಯುವುದೂ ಒಂದಾಗಿದೆ. ಭಾಷೆಯ ಕಲಿಕೆಯೆಂದರೇನು? ಸಾಮಾನ್ಯವಾಗಿ ಮಕ್ಕಳು ತಮ್ಮ ಎಳವೆಯಲ್ಲೇ ಕನಿಷ್ಠ ಒಂದು ಭಾಷೆಯನ್ನು ಪಡೆದುಕೊಳ್ಳುವುದು ತೀರಾ ಸಹಜವಾದ ಕ್ರಿಯೆ. ಆರೋಗ್ಯವಂತ ಮಕ್ಕಳೆಲ್ಲರೂ ಅವರು ಹೆಣ್ಣಿರಲಿ–ಗಂಡಿರಲಿ, ಸಮಾಜದ ಯಾವ ವರ್ಗಕ್ಕೇ ಸೇರಿರಲಿ ಒಂದು ಭಾಷೆಯನ್ನು ಪಡೆದುಕೊಳ್ಳುವುದು ಖಂಡಿತ. ಈ ಭಾಷೆಯ ಎರಡು ಕೌಶಲಗಳು ಅವರಿಗೆ ದೊರಕಿರುತ್ತದೆ. ಒಂದು: ಮಾತನಾಡುವುದು. ಎರಡು: ಕೇಳಿ ಅರ್ಥಮಾಡಿಕೊಳ್ಳುವುದು. ಶಾಲೆಯ ಶಿಕ್ಷಣ ಆರಂಭವಾಗುವ ಹೊತ್ತಿಗೆ ಎಲ್ಲ ಮಕ್ಕಳೂ ಈ ಎರಡು ಕೌಶಲಗಳನ್ನು ಪಡೆದೇ ಇರುತ್ತಾರೆ. ಹೀಗಿರುವಾಗ ಶಾಲೆಯಲ್ಲಿ ಅವರು ಭಾಷೆಯನ್ನು ಕಲಿಯುವುದು ಎಂದರೇನು? ಇದಕ್ಕೆ ಎರಡು ನೆಲೆಯ ಉತ್ತರಗಳಿವೆ. ಒಂದು: ಭಾಷೆಯ ಇನ್ನೆರಡು ಕೌಶಲಗಳಾದ ಓದುವುದು ಮತ್ತು ಬರೆಯುವುದು, ಈ ಎರಡನ್ನು ಮಕ್ಕಳಲ್ಲಿ ರೂಢಿಸುವುದು. ಎರಡನೆಯ ನೆಲೆಯೆಂದರೆ ಶಾಲೆಗೆ ಬರುವಾಗ ಮಕ್ಕಳು ಪಡೆದುಕೊಂಡಿರುವ ಭಾಷೆಯ ಸ್ವರೂಪವನ್ನು ಹೆಚ್ಚು ಪ್ರಮಾಣಬದ್ಧ ಭಾಷೆಗೆ ಪರಿವರ್ತಿಸುವುದು. ಅಂದರೆ ಅವರು ಪ್ರಮಾಣಭಾಷೆಯನ್ನು ಕೇಳಿ ಅರಿಯಲು ಮತ್ತು ಮಾತನಾಡಲು ಕಲಿಯುವಂತೆ ಮಾಡುವುದು. ಈ ಎಲ್ಲಾ ಕೌಶಲಗಳನ್ನು ಹಂತಹಂತವಾಗಿ ನೆಲೆಗೊಳಿಸಿ ಸುಮಾರು ಹತ್ತು ವರ್ಷಗಳ ಕಾಲ ಅದು ವೃದ್ಧಿಯಾಗುವಂತೆ ಮಾಡಬೇಕು. ಈ ಗುರಿಯನ್ನು ಶಿಕ್ಷಣಕ್ರಮದಲ್ಲಿ ಇರಿಸಿಕೊಂಡಂತೆ ತೋರುತ್ತದೆ.

ಇದಲ್ಲದೆ ಮಕ್ಕಳು ಎಷ್ಟು ಭಾಷೆಗಳನ್ನು ಕಲಿಯಬೇಕು ಎಂಬ ಪ್ರಶ್ನೆ ಇದೆ. ಈ ಪ್ರಶ್ನೆಗೆ ಕಲಿಯುವ ಮಗುವಿನ ಅಪೇಕ್ಷೆ, ಅಗತ್ಯ, ಸಾಮರ್ಥ್ಯ ಇವುಗಳನ್ನು ಅಥವಾ ಆ ಮಗುವಿನ ಪೋಷಕರು ಏನನ್ನು ಬಯಸುತ್ತಾರೆ ಎಂಬುದನ್ನು ಗಮನಿಸಿ ಉತ್ತರ

ವನ್ನು ನಿರ್ಧರಿಸುವಂತಿಲ್ಲ. ಇಲ್ಲಿ ಸರ್ಕಾರದ ಭಾಷಾನೀತಿಯ ಪಾತ್ರ ದೊಡ್ಡದು. ಕರ್ನಾಟಕ ಸರ್ಕಾರ, ಕೇಂದ್ರ ಸರ್ಕಾರ ನಿರೂಪಿಸಿದ ತ್ರಿಭಾಷಾ ಸೂತ್ರ ಎಂಬ ನಿರ್ದೇಶಕ ಮಾದರಿಯನ್ನು ಅನುಸರಿಸುತ್ತಿದೆ. ಈ ಸೂತ್ರ ನಿರ್ದೇಶಕ. ಏಕೆಂದರೆ ಇದಕ್ಕೆ ನೇರವಿಧಾನಗಳಲ್ಲಿ ವಿನಾಯಿತಿ ಇಲ್ಲ. ತ್ರಿಭಾಷಾ ಸೂತ್ರ ಎಂದರೆ ಸಾಮಾನ್ಯ ಶಿಕ್ಷಣ ಅವಧಿಯಲ್ಲಿ, ಅಂದರೆ ಹತ್ತು ವರ್ಷಗಳಲ್ಲಿ, ಮಗು ಕನಿಷ್ಠ ಮೂರು ಭಾಷೆಗಳಲ್ಲಿ ಭಾಷಾಕೌಶಲಗಳನ್ನು ಅಭಿವೃದ್ಧಿ ಮಾಡಿಕೊಳ್ಳಬೇಕು ಎಂಬುದಾಗಿದೆ. ಈ ಮೂರು ಭಾಷೆಗಳು ಯಾವುವು? ಒಂದು: ಪ್ರಾದೇಶಿಕ ಭಾಷೆ. ಎರಡು: ರಾಷ್ಟ್ರಭಾಷೆ. ಮೂರು: ಅಂತಾರಾಷ್ಟ್ರೀಯ ಭಾಷೆ. ಹೀಗಾಗಿ ಕನ್ನಡ, ಹಿಂದಿ ಮತ್ತು ಇಂಗ್ಲಿಶ್ ಹೀಗೆ ಮೂರು ಭಾಷೆಗಳನ್ನು ಮಕ್ಕಳು ಕಲಿಯಬೇಕೆಂಬ ಚೌಕಟ್ಟನ್ನು ವಿಧಿಸಲಾಗಿದೆ. ಆದರೆ ಇದು ಮತ್ತೆ ಕೆಲವು ಪ್ರಶ್ನೆಗಳಿಗೆ ಅವಕಾಶ ಮಾಡಿಕೊಟ್ಟಿದೆ. ಶಾಲೆಗೆ ಬರುವ ಹೊತ್ತಿಗೆ ಮಗು ತಾನು ಸಾಕಷ್ಟು ಕುಶಲಿಯಾಗಿರುವ ಭಾಷೆಗೆ ಈ ಚೌಕಟ್ಟಿನಲ್ಲಿ ಯಾವ ಸ್ಥಾನವಿದೆ? ಉದಾ.ಗೆ ತೆಲುಗು ಭಾಷೆಯನ್ನು ಮನೆಯಲ್ಲಿ ಕಲಿತ ಮಗು ಏನು ಮಾಡಬೇಕು. ಸದ್ಯ ಜಾರಿಯಲ್ಲಿರುವ ನಿಯಮಗಳಂತೆ ಮಗುವಿಗೆ ಆಯ್ಕೆಗಳು ಕಡಿಮೆ. ತಾನು ಕೌಶಲಗಳನ್ನು ಪಡೆದ ಮೊದಲ ಭಾಷೆಯನ್ನು ಶಾಲಾ ಶಿಕ್ಷಣದಿಂದ ಅದು ಹೊರಗಿಡುವುದು ಒಂದು ಆಯ್ಕೆ. ಆದರೆ ಇನ್ನೂ ಕೆಲವು ಸಂದರ್ಭಗಳಲ್ಲಿ ತ್ರಿಭಾಷಾ ಸೂತ್ರವನ್ನು ಮಾತೃಭಾಷೆ, ಪ್ರಾದೇಶಿಕಭಾಷೆ ಮತ್ತು ಅಂತಾರಾಷ್ಟ್ರೀಯ ಭಾಷೆ ಇಲ್ಲವೇ ರಾಷ್ಟ್ರಭಾಷೆ ಎಂದು ವ್ಯಾಖ್ಯಾನಿಸಲಾಗಿದೆ. ಅಂದರೆ ಮಗು ತನ್ನ ಭಾಷೆಯನ್ನಲ್ಲದೆ ಕನ್ನಡವನ್ನು ಕಲಿಯುವುದು ಕಡ್ಡಾಯ ಮತ್ತು ಮೂರನೆಯ ಭಾಷೆಯಾಗಿ ಇಂಗ್ಲಿಶ್ ಇಲ್ಲವೆ ಹಿಂದಿಗಳ ನಡುವೆ ಆಯ್ಕೆ ಮಾಡಿಕೊಳ್ಳಬೇಕು. ಈ ಆಯ್ಕೆಗೂ ಕೆಲವು ಪರ್ಯಾಯಗಳಿವೆ. ಏಕೆಂದರೆ ಮಾತೃಭಾಷೆಯ ಕಲಿಕೆಗೆ ಎಲ್ಲ ಭಾಷೆಗಳಿಗೂ ಅನ್ವಯಿಸುವಂತೆ ಹತ್ತುವರ್ಷಗಳ ಅವಧಿಯನ್ನು ಒದಗಿಸುವುದು ಸಾಧ್ಯ ಇಲ್ಲ. ಮೊದಲ ಕೆಲವು ವರ್ಷಗಳು ಮಾತ್ರ ಮಾತೃಭಾಷೆಯನ್ನು ಓದಿ, ಬರೆಯಲು ಕಲಿತು ಅನಂತರ ಅಧಿಕೃತ ತ್ರಿಭಾಷಾ ಸೂತ್ರಕ್ಕೆ ಮಗು ಪಲ್ಲಟಗೊಳ್ಳುತ್ತದೆ. ಅಂದರೆ ವಾಸ್ತವದಲ್ಲಿ ನಾಲ್ಕು ಭಾಷೆಗಳನ್ನು ಕಲಿಯುತ್ತದೆ.

ಈ ಪರಿಸ್ಥಿತಿ ಇನ್ನೂ ಒಂದು ಮುಖವನ್ನು ಹೊಂದಿದೆ. ಅದರಂತೆ ಕೆಲವು ಭಾಷೆಗಳನ್ನಾಡುವ ಮಕ್ಕಳಿಗೆ ತಮ್ಮ ಭಾಷೆಯನ್ನು ಕರ್ನಾಟಕದಲ್ಲಿ ಶಾಲೆಯಲ್ಲಿ ಕಲಿಯುವ ಅವಕಾಶವಿಲ್ಲ. ಅಂತಹ ಮಕ್ಕಳು ತಮ್ಮ ಮೊದಲಭಾಷೆಯಲ್ಲಿ ಓದಿ ಬರೆಯುವ ಕೌಶಲವನ್ನು ಶಾಲಾಶಿಕ್ಷಣದ ಅವಧಿಯಲ್ಲಿ ಪಡೆಯುವುದಿಲ್ಲ. ಉಳಿದ ಮೂರು ಭಾಷೆಗಳನ್ನು ಯಥಾಕ್ರಮ ಕಲಿಯುತ್ತಾರೆ. ತುಳು ಭಾಷೆಯನ್ನು ಮಾತನಾಡುವ ಮಕ್ಕಳು ಇದಕ್ಕೆ ನಿದರ್ಶನ. ಅವರು ಕನ್ನಡ, ಇಂಗ್ಲಿಶ್, ಹಿಂದಿಗಳನ್ನು ಶಾಲೆಯಲ್ಲಿ ಕಲಿತರೂ ತುಳು, ಮಾತಿನ ಭಾಷೆಯಾಗಿ ಮಾತ್ರ ಉಳಿದುಕೊಳ್ಳುತ್ತದೆ. ಇವರಿಗೂ ನಾಲ್ಕು ಭಾಷೆಗಳಲ್ಲಿ ವಿವಿಧ ಪ್ರಮಾಣದ ಕೌಶಲಗಳು ಲಭಿಸುತ್ತವೆ.

ಮತ್ತೊಂದು ಬಗೆಯ ಪರ್ಯಾಯವಿದೆ. ಇದು ತುಳು ಮಾತಾಡುವ ಮಕ್ಕಳ ಪರಿಸ್ಥಿತಿಗಿಂತ ಕೊಂಚ ಭಿನ್ನ. ಈ ಮಕ್ಕಳು ಆಡುವ ಭಾಷೆ ಶಾಲೆಯಲ್ಲಿ ಬಹುಸಂಖ್ಯಾತ ಮಕ್ಕಳ ಭಾಷೆಯಾಗಿರುವುದಿಲ್ಲ. ಉದಾ.ಗೆ ಲಂಬಾಣಿ ಮಕ್ಕಳು. ಇವರು ಮೂರು ಭಾಷೆಗಳಲ್ಲಿ ಪ್ರಾವೀಣ್ಯ ಪಡೆದರೂ ಲಂಬಾಣಿ ಭಾಷೆ ಅವರ ಮನೆಗಳಲ್ಲಿ, ತಾಂಡಗಳಲ್ಲಿ, ಹೆಚ್ಚೆಂದರೆ ಹೊರಗೆ ಗೆಳೆಯರ ನಡುವೆ ಮಾತ್ರ ಬಳಕೆಯಾಗುವ ಭಾಷೆಯಾಗಿದೆ.

ಕರ್ನಾಟಕದ ಶಿಕ್ಷಣನೀತಿಯ ವೈರುಧ್ಯಗಳಿಂದಾಗಿ ಇನ್ನೂ ಒಂದು ಬಗೆಯ ಸಾಧ್ಯತೆ ಇದೆ. ಇಲ್ಲಿ ತ್ರಿಭಾಷಾ ಸೂತ್ರ ಉಲ್ಲಂಘನೆ ಸ್ಪಷ್ಟವಾಗಿ ನಡೆಯುತ್ತದೆ. ಕರ್ನಾಟಕ ರಾಜ್ಯದ ಶಿಕ್ಷಣ ವ್ಯವಸ್ಥೆಯ ವ್ಯಾಪ್ತಿಯಿಂದ ಹೊರಗುಳಿದ ಎರಡು ಮುಖ್ಯವಾಹಿನಿಗಳು ಈ ರಾಜ್ಯದಲ್ಲಿ ಜಾರಿಯಲ್ಲಿವೆ. ಒಂದು ಕೇಂದ್ರಸರ್ಕಾರದ ನಿಯಂತ್ರಣದಲ್ಲಿ ಬರುವ ಶಿಕ್ಷಣಕ್ರಮ. ಸಾಮಾನ್ಯವಾಗಿ ಕೇಂದ್ರಿಯ ವಿದ್ಯಾ ಶಾಲೆಗಳು ಎಂದು ಕರೆಯಲಾಗುವ ಶಾಲೆಗಳು ರಾಜ್ಯದಲ್ಲಿವೆ. ಆ ಪಠ್ಯಕ್ರಮವನ್ನು ಅನುಸರಿಸುವ ಖಾಸಗಿ ಶಾಲೆಗಳು ಇವೆ. ಇದಲ್ಲದೆ ೧೯೪೭ಕ್ಕಿಂತ ಹಿಂದಿನಿಂದಲೂ ಜಾರಿಯಲ್ಲಿರುವ ಬ್ರಿಟಿಶ್ ಶಿಕ್ಷಣ ವ್ಯವಸ್ಥೆಯ ಚೌಕಟ್ಟನ್ನು ಪಡೆದ ಮತ್ತೊಂದು ವಾಹಿನಿಯು ಇದೆ. ಐಸಿಎಸ್‌ಸಿಎಂದು ಕರೆಯಲಾಗುವ ಈ ಪದ್ಧತಿ ಬಹುಮಟ್ಟಿಗೆ ಕ್ರೈಸ್ತ ಮಿಷನರಿಗಳು ನಡೆಸುವ ಶಾಲೆಗಳಲ್ಲಿ ಇವೆ. ಆದರೆ ಹಲವು ಖಾಸಗಿ ಶಾಲೆಗಳೂ ಈ ವ್ಯವಸ್ಥೆಯನ್ನು ಅನುಸರಿಸುತ್ತವೆ. ಕೇಂದ್ರೀಯ ಶಾಲೆಗಳ ಚೌಕಟ್ಟಿನಲ್ಲಿ ಕನ್ನಡಕ್ಕೆ ಅವಕಾಶವಿಲ್ಲ. ಅಲ್ಲಿರುವುದು ಎರಡೇ ಭಾಷೆ; ಹಿಂದಿ ಮತ್ತು ಇಂಗ್ಲಿಶ್. ಆ ಶಾಲೆಗಳಲ್ಲಿ ಓದುವ ಕನ್ನಡ ಮಾತಾಡುವ ಮಕ್ಕಳು ಕನ್ನಡ ಭಾಷೆಯಲ್ಲಿ ಓದಿ ಬರೆಯುವ ತರಬೇತಿಯನ್ನು ಪಡೆಯುವುದಿಲ್ಲ. ಐಸಿಎಸ್‌ಸಿ ಪದ್ಧತಿಯಲ್ಲಿ ಸ್ಥಳೀಯ ಭಾಷೆಗಳನ್ನು ಅಲ್ಪಪ್ರಮಾಣದಲ್ಲಿ ಕಲಿಸುವ ವ್ಯವಸ್ಥೆ ಇದೆ. ಕೊನೆಯ ಪಕ್ಷ ಅಲ್ಲಿ ಓದುವ ಮಕ್ಕಳು ಕನ್ನಡವನ್ನು ಓದುವ ಮತ್ತು ಬರೆಯುವ ಕನಿಷ್ಠ ಕೌಶಲಗಳನ್ನು ಪಡೆಯಬಲ್ಲರು. ಕೇಂದ್ರೀಯ ಶಾಲೆಗಳ ಶಿಕ್ಷಣಕ್ರಮವನ್ನು ರಾಜ್ಯದಲ್ಲಿ ನವೋದಯ ಶಾಲೆಗಳು ಅನುಸರಿಸುತ್ತವೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಇಷ್ಟು ವಿವರವಾಗಿ ಈ ಮಾಹಿತಿಯನ್ನು ನೀಡಿದ್ದರ ಉದ್ದೇಶವಿಷ್ಟೇ. ಶಾಲಾ ಶಿಕ್ಷಣದಲ್ಲಿ ಭಾಷೆಯನ್ನು ಕಲಿಸಬೇಕು ಎಂಬ ಶೈಕ್ಷಣಿಕತತ್ವ ಜಾರಿಗೆ ಬರುವಾಗ ಎಷ್ಟು ಬಗೆಬಗೆಯ ಸ್ವರೂಪಗಳನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ತಿಳಿಯುವುದು. ಒಟ್ಟು ಚಿತ್ರವನ್ನು ಗಮನಿಸಿದರೆ ಎಲ್ಲಾ ಪರ್ಯಾಯಗಳಲ್ಲೂ ಇಂಗ್ಲಿಶ್ ಭಾಷೆಯ ಸ್ಥಾನ ಗಟ್ಟಿಯಾಗಿದೆ. ಹಿಂದಿಗೂ ಅದರಷ್ಟೇ ಬಲವಾದ ಜಾಗ ದೊರಕಿದೆ. ಹೀಗೆನ್ನುವಾಗ ಕಲಿಯುವ ಅವಕಾಶ ಕುರಿತು ಮಾತ್ರ ಹೇಳಲಾಗುತ್ತಿದೆ. ಇದರಿಂದಲೇ ಈ ಭಾಷೆಗಳಲ್ಲಿ ಸಾಟಿ ಇಲ್ಲದ ಕೌಶಲಗಳು ಮಕ್ಕಳಿಗೆ ದೊರಕಿಬಿಡುತ್ತವೆ ಎಂದೇನೂ ಹೇಳಲಾಗದು. ಆದರೆ ಪ್ರಾದೇಶಿಕ ಭಾಷೆ ಮತ್ತು ಬಹುಸಂಖ್ಯಾತರ ಮನೆಮಾತು, ಇಲ್ಲವೇ ಮೊದಲ ಮಾತು ಆಗಿರುವ ಕನ್ನಡದ ಸ್ಥಾನ ಮಾತ್ರ ಭದ್ರವಾಗಿಲ್ಲ. ಕೆಲವು ಕಡೆ ಪರ್ಯಾಯಗಳಲ್ಲೇ ಕನ್ನಡವನ್ನು ಹೊರಗಿಡುವ ಅವಕಾಶ ಇದೆ. ಇದು ವಿದ್ಯಾರ್ಥಿಗಳ ಇಲ್ಲವೇ ಪೋಷಕರ ಆಯ್ಕೆಯೂ ಆಗಿರುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಶಿಕ್ಷಣನೀತಿಯು ನಿರೂಪಿತವಾಗಿರುವ ಕ್ರಮದಲ್ಲೇ ಈ ಸಾಧ್ಯತೆಗಳು ಅಡಕವಾಗಿವೆ.

ಕರ್ನಾಟಕ ಸರ್ಕಾರದ ಶಿಕ್ಷಣನೀತಿಯ ಸ್ವರೂಪ, ಹಾಗೂ ಭಾರತ ಸರ್ಕಾರದ ಕ್ರಮಗಳು ಇವೆರಡೂ ಒಟ್ಟಾಗಿ ಸೇರಿ ಕರ್ನಾಟಕದಲ್ಲಿ ಸಾರ್ವತ್ರಿಕಶಿಕ್ಷಣ ಪಡೆಯುವ ಮಕ್ಕಳಿಗೆ ಕನ್ನಡವನ್ನು ಔಪಚಾರಿಕವಾಗಿ ಕಲಿಯುವ ಅವಕಾಶವಿದೆಯೇ ಹೊರತು ಹಾಗೆ ಕಲಿಯುವುದೇನೂ ಕಡ್ಡಾಯವಲ್ಲ ಎಂಬ ಪರಿಸ್ಥಿತಿ ಇದೆ. ಇದರೊಡನೆ ರಾಜ್ಯಾಂಗದ ಮೂಲಭೂತ ಹಕ್ಕುಗಳ ವಿಧಿಯ ನೆರವೂ ಸೇರಿ ಸಮಸ್ಯೆ ಇನ್ನಷ್ಟು ಗೋಜಲಾಗಿದೆ. ಕರ್ನಾಟಕ ಸರ್ಕಾರವು ಶಾಲಾಶಿಕ್ಷಣದ ಯಾವುದೇ ಹಂತದಲ್ಲಾದರೂ ಕನಿಷ್ಠ ಕೆಲವು ವರ್ಷಗಳಾದರೂ ಎಲ್ಲಾ ವಿದ್ಯಾರ್ಥಿಗಳೂ ಔಪಚಾರಿಕವಾಗಿ ಕನ್ನಡವನ್ನು ಕಲಿಯಬೇಕೆಂದು ನಿಯಮ ಮಾಡಿದೆ. ಆದರೆ ಈ ನಿಯಮ ಸಿಬಿಎಸ್‌ಸಿ ಮತ್ತು ಐಸಿಎಸ್‌ಸಿ ವಾಹಿನಿಯ ವಿದ್ಯಾರ್ಥಿಗಳಿಗೆ ಅನ್ವಯವಾಗುವುದಿಲ್ಲ. ಆದರೆ ಈ ವಾಹಿನಿಯ ವಿದ್ಯಾರ್ಥಿಗಳು ಶಾಲಾ ಶಿಕ್ಷಣದ ಯಾವುದಾದರೊಂದು ಹಂತದಲ್ಲಿ ಕರ್ನಾಟಕದ ಪಠ್ಯಕ್ರಮ ಬೋಧಿಸುವ ಶಾಲೆಗೆ ದಾಖಲಾದರೆ ಅವರು ಹತ್ತನೇ ತರಗತಿ ಪೂರ್ಣಗೊಳಿಸುವ ವೇಳೆಗೆ ಕನ್ನಡವನ್ನು ಔಪಚಾರಿಕವಾಗಿ ಕಲಿಯಬೇಕಾಗುತ್ತದೆ. ಈ ಶಾಲಾಶಿಕ್ಷಣದ ಪ್ರೌಢಹಂತದಲ್ಲಿ ಅಂದರೆ ೮–೯ ಮತ್ತು ೧೦ನೇ ತರಗತಿಗಳಲ್ಲಿ ಕನ್ನಡ ಕಲಿಯಬೇಕಾಗಿ ಬರುವ ಮಕ್ಕಳ ಅನುಕೂಲಕ್ಕಾಗಿ ಪರೀಕ್ಷೆಯಲ್ಲಿ ಅವರಿಗೆ ಪ್ರತಿಶತ ೧೫ ಕೃಪಾಂಕಗಳನ್ನು ನೀಡುವ ಸವಲತ್ತನ್ನು ಸೃಷ್ಟಿಸಲಾಗಿದೆ. ಆದರೆ ಹೀಗೆ ಈ ಹಂತದಲ್ಲಿ ಕನ್ನಡ ಕಲಿಯಬೇಕೆಂಬುದು ಒಂದು ಒತ್ತಾಯವೆಂದೂ ಮಕ್ಕಳಿಗೆ ಅದರಿಂದ ಮಾನಸಿಕ ಹೊರೆ ಹೆಚ್ಚಾಗುವುದೆಂದೂ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ವಿದ್ಯಾರ್ಥಿಗಳ ಪರವಾಗಿ ಪಾಲಕರು ಫಿರಿಯಾದು ಸಲ್ಲಿಸಿದ್ದಾರೆ. ನ್ಯಾಯಾಲಯವು ಈ ಫಿರಿಯಾದನ್ನು ವಿಚಾರಣೆಗೆ ಸ್ವೀಕರಿಸಿ ಸರ್ಕಾರದ ಆದೇಶಕ್ಕೆ ತಡೆ ಆಜ್ಞೆ ನೀಡಿದೆ. ಅಂದರೆ ಆ ಮಕ್ಕಳು ಕನ್ನಡವನ್ನು ಔಪಚಾರಿಕವಾಗಿ ಕಲಿಯುವುದನ್ನು ಮುಂದೂಡಲಾಗಿದೆ. ಅಂದರೆ ವಾಸ್ತವದಲ್ಲಿ ಅವರು ಕಲಿಯುವ ಅಗತ್ಯ ಬರುವುದಿಲ್ಲ.

ತ್ರಿಭಾಷಾ ಸೂತ್ರದ ಈ ಗೊಂದಲವನ್ನು ಮತ್ತು ಅದು ಉಂಟುಮಾಡುವ ಅಸಮಾನತೆಯ ಸನ್ನಿವೇಶವನ್ನು ಸಾಮಾಜಿಕರು ಮನಗಂಡಂತೆ ವಿವಿಧ ಹಂತಗಳಲ್ಲಿ ಸರ್ಕಾರವು ಕೂಡ ಅರಿತಿದೆ. ಈ ಸಮಸ್ಯೆಯ ಗೋಜಲನ್ನು ಬಿಡಿಸಲು ನಡೆಸುತ್ತಿರುವ ಯತ್ನದಲ್ಲಿ ಮೇಲಿಂದ ಮೇಲೆ ತನ್ನ ಸ್ಥಿತಿಯಲ್ಲಿ ಬದಲಾವಣೆ ಮಾಡಿಕೊಳ್ಳುತ್ತಿದೆ. ಹೀಗೆ ಪ್ರಯತ್ನಿಸಿದರೂ ಪರಿಹಾರ ಕೈಯಳತೆಯಲ್ಲಿ ಇದ್ದಂತಿಲ್ಲ. ಏಕೀಕರಣದ ಐವತ್ತು ವರ್ಷಗಳ ಅನಂತರವೂ ಜನಸಂಖ್ಯೆಯ ಕಾಲುಭಾಗದಷ್ಟು ಮಕ್ಕಳು ಈ ಗೋಜಲಿನ ಪ್ರಯೋಗಗಳಿಗೆ ಒಳಗಾಗುತ್ತಲೇ ಇದ್ದಾರೆ.

ಈ ಸಮಸ್ಯೆಗೆ ಪರಿಹಾರವಾಗಿ ಸುಮಾರು ನಲವತ್ತು ವರ್ಷಗಳಷ್ಟು ಹಿಂದೆಯೇ ಬಹುಭಾಷೆಗಳಲ್ಲ ದ್ವಿಭಾಷೆ ಎಂಬ ಸೂತ್ರವನ್ನು ಕುವೆಂಪು ಅವರು ಸೂಚಿಸಿದರು. ಈ ಸೂತ್ರ ಕಲಿಯುವ ಮಕ್ಕಳಿಗೆ ಕಲಿಕೆಯ ಭಾರವನ್ನು ಕಡಿಮೆ ಮಾಡುತ್ತದೆ; ವ್ಯರ್ಥಕಲಿಕೆಯನ್ನು ನಿವಾರಿಸುತ್ತದೆ ಎಂಬುದು ಅವರ ಉದ್ದೇಶವಾಗಿತ್ತು. ಮಕ್ಕಳಿಗೆ ಅಥವಾ ಅವರ ಪೋಷಕರಿಗೆ ಈ ಸೂತ್ರದಿಂದ ದೊರೆಯುವ ಸವಲತ್ತು ಹೆಚ್ಚಾಗಿದೆ.

ಆದರೆ ಇದರಿಂದ ಕನ್ನಡವನ್ನು ಔಪಚಾರಿಕವಾಗಿ ಕಲಿಯುವ ಸಾಧ್ಯತೆಯು ಕೂಡ ಕಡಿಮೆಯಾಗುತ್ತದೆ. ಏಕೆಂದರೆ ಯಾವುದಾದರೂ ಎರಡು ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ಹೇಳಿದರೆ ಆ ಆಯ್ದ ಭಾಷೆಗಳಲ್ಲಿ ಕನ್ನಡ ಇರಲೇಬೇಕೆಂಬ ಕಡ್ಡಾಯವಿಲ್ಲ. ಅಲ್ಲದೆ ಈ ಸೂತ್ರವು ವಾಸ್ತವದಲ್ಲಿ ಆಯ್ಕೆಗಳನ್ನು ಕುಗ್ಗಿಸುತ್ತದೆ. ಅಧಿಕಾರದ ಮತ್ತು ಅವಕಾಶದ ಒತ್ತಾಸೆಯನ್ನು ಹೆಚ್ಚಾಗಿ ಪಡೆದ ಭಾಷೆಗಳು ಕಲಿಕೆಯಲ್ಲಿ ಉಳಿದು ದುರ್ಬಲ ಸಾಮಾಜಿಕ ಹಿನ್ನೆಲೆಯ ಭಾಷೆಗಳು ಹಿಂದುಳಿಯುತ್ತವೆ. ಒಂದು ವೇಳೆ ಆಯ್ದ ಎರಡು ಭಾಷೆಗಳಲ್ಲಿ ಒಂದು ಕನ್ನಡವಾಗಬೇಕು ಎಂದು ಕಡ್ಡಾಯ ಮಾಡಿದರೆ ಆಗಲೂ ಆಯ್ಕೆಗಳು ಕುಗ್ಗುತ್ತವೆ. ಅದರಿಂದ ನ್ಯಾಯಿಕವಾದ ಹೋರಾಟಗಳು ಮೊದಲಾಗುತ್ತವೆ. ಕುವೆಂಪು ಅವರು ಈ ಸೂತ್ರವನ್ನು ಮಂಡಿಸಿದ ಸಂದರ್ಭದಲ್ಲಿ ಇದರ ಬಗೆಗೆ ಉತ್ಸಾಹದ ಪ್ರತಿಕ್ರಿಯೆಗಳು ಕಂಡುಬಂದವು. ಆದರೆ ಈ ನಾಲ್ಕು ದಶಕಗಳ ಪರಿಸ್ಥಿತಿಯಲ್ಲಿ ಉಂಟಾಗಿರುವ ಪರಿವರ್ತನೆಯಿಂದಾಗಿ ಈ ಸೂತ್ರ ಒಂದು ಪರಿಹಾರವಾಗಿ ತೋರುತ್ತಿಲ್ಲ.

ಶಾಲಾಶಿಕ್ಷಣದಲ್ಲಿ ಯಾವ ಭಾಷೆಗಳನ್ನು ಕಲಿಯಬೇಕು ಎಂಬ ಪ್ರಶ್ನೆ ಒಂದು ಕಡೆಗಾದರೆ ಈ ಎಲ್ಲ ಭಾಷೆಗಳಿಗೂ ಸಮಾನ ಪ್ರಾಶಸ್ತ್ಯ ಇರಬೇಕೇ ಅಥವಾ ಅವುಗಳ ನಡುವೆ ಒಂದು ನಿರ್ದೇಶಿತ ತಾರತಮ್ಯ ಅಗತ್ಯವೇ ಎಂಬ ಇನ್ನೊಂದು ಪ್ರಶ್ನೆ ಮುಂಚೂಣಿಗೆ ಬರುತ್ತದೆ. ಈಗಿರುವಂತೆ ಹಲವಾರು ತಾರತಮ್ಯದ ಮಾದರಿಗಳು ನಮ್ಮ ಶಿಕ್ಷಣಕ್ರಮದಲ್ಲಿ ಜಾರಿಯಲ್ಲಿವೆ. ಈ ತಾರತಮ್ಯ ಭಾಷೆಗಳನ್ನು ಕಲಿಯುವ ಅವಧಿಗೆ ಸಂಬಂಧಿಸಿದ್ದು. ಈಗಿರುವ ಮಾದರಿಗಳಲ್ಲಿ ಕಲಿಯುವ ಎಲ್ಲಾ ಭಾಷೆಗಳನ್ನೂ ಸಮಾನ ಪ್ರಾಶಸ್ತ್ಯದಲ್ಲಿ ಕಾಣುವ ಮಾದರಿ ಇಲ್ಲ. ಈ ಮಾದರಿಗೆ ಹೆಚ್ಚು ಹತ್ತಿರ ಬರುವ ಆಯ್ಕೆ ಎಂದರೆ ಎರಡೇ ಭಾಷೆಗಳನ್ನು (ಹಿಂದಿ ಮತ್ತು ಇಂಗ್ಲಿಶ್) ಕಲಿಯುವ ಕೇಂದ್ರ ಸರ್ಕಾರದ ಪಠ್ಯಕ್ರಮ ಮಾತ್ರ.. ಉಳಿದ ಕಡೆ ಭಾಷೆಗಳನ್ನು ಕಲಿಯುವ ಒಟ್ಟು ಅವಧಿಗಳಲ್ಲಿ ವ್ಯತ್ಯಾಸಗಳಿವೆ. ಕನ್ನಡವನ್ನು ಪ್ರಥಮ ಭಾಷೆಯಾಗಿ ಹತ್ತು ವರ್ಷ ಕಲಿಯುವಂತೆ ಇಂಗ್ಲಿಶನ್ನು ಸುಮಾರು ಆರು ವರ್ಷ ಕಲಿಯುವ ಅವಕಾಶ ವಿದ್ಯಾರ್ಥಿಗಳಿಗೆ ಇದೆ. ಮೂರನೇ ಭಾಷೆಯಾಗಿ ಹಿಂದಿಯನ್ನು ಮೂರರಿಂದ ಐದು ವರ್ಷಕಾಲ ಕೊನೆಯ ಘಟ್ಟದಲ್ಲಿ ಕಲಿಸಲಾಗುತ್ತದೆ. ಇದು ಬಹುಮತ ಇರುವ ಮಾದರಿ. ಸರ್ಕಾರದ ಸಾವಿರಾರು ಶಾಲೆಗಳಲ್ಲಿ ಈ ಮಾದರಿಯೇ ಹೆಚ್ಚು ಮನ್ನಣೆಯನ್ನು ಪಡೆದಿದೆ. ಉಳಿದ ಕಡೆ ಪರಿಸ್ಥಿತಿ ಭಿನ್ನ. ಆದರೂ ಕಲಿಕೆಯ ಎಲ್ಲಾ ಹಂತಗಳಲ್ಲೂ ಒಂದು ಭಾಷೆಯನ್ನು ಇರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿವೆ. ಇಂಗ್ಲಿಶ್ ಈ ಸೌಲಭ್ಯ ಪಡೆದ ಇನ್ನೊಂದು ಭಾಷೆ. ಖಾಸಗಿ ಶಾಲೆಗಳಲ್ಲಿ ಅಧಿಕೃತವಾಗಿ ಅಲ್ಲದಿದ್ದರೂ ಇಂಗ್ಲಿಶನ್ನು ಹತ್ತು ವರ್ಷವೂ ಕಲಿಯಬೇಕಾದ ಭಾಷೆಯನ್ನಾಗಿ ನೆಲೆಗೊಳಿಸಿದ್ದಾರೆ. ಅಲ್ಲಿ ಕನ್ನಡ ಎರಡನೆಯ ಭಾಷೆಯಾಗಿ ಕಲಿಕೆಯ ಹಂತಕ್ಕೆ ಬರುತ್ತದೆ. ಕೆಲವು ಕಡೆ ಅದು ಮೂರನೆಯ ಭಾಷೆಯಾಗಿ ಕೂಡ ನೆಲೆಯಾಗಬಹುದು. ರಾಜ್ಯದ ಅಲ್ಪಸಂಖ್ಯಾತರ ಮತ್ತು ಅನ್ಯಭಾಷಿಕರ ಮನೆಮಾತುಗಳು ಹತ್ತು ವರ್ಷವೂ ಮೊದಲ ಭಾಷೆಯಾಗಿ ಶಾಲೆಗಳಲ್ಲಿ ಉಳಿಯುವ ಪ್ರಸಂಗ ತುಂಬಾ ಕಡಿಮೆ. ಅಂತಹ ಸೌಲಭ್ಯವನ್ನು ನೀಡಬಲ್ಲ ಶಾಲೆಗಳ ಸಂಖ್ಯೆ

ಕಡಿಮೆಯಾಗಿರುವುದೇ ಇದಕ್ಕೆ ಕಾರಣ. ಉರ್ದುವನ್ನು ಪ್ರಥಮ ಭಾಷೆಯಾಗಿ ಇರಿಸಿಕೊಂಡ ಶಾಲೆಗಳು ಕೂಡ ಏಳನೇ ತರಗತಿಯವರೆಗೆ ಮಾತ್ರ ಈ ಸೌಲಭ್ಯವನ್ನು ನೀಡುತ್ತವೆ. ಅಲ್ಲಿಂದ ಮುಂದೆಯೂ ಉರ್ದು ಈ ಸ್ಥಾನವನ್ನು ಕಾಯ್ದುಕೊಳ್ಳುವ ಅವಕಾಶ ಕಡಿಮೆ.

ಶಿಕ್ಷಣಕ್ರಮದಲ್ಲಿ ರೂಪಗೊಂಡಿರುವ ಪ್ರಥಮ, ದ್ವಿತೀಯ ಮತ್ತು ತೃತೀಯ ಎಂಬ ಸ್ಥಾನನಿರ್ದೇಶನ ಪಡೆದ ಭಾಷೆಗಳ ನಡುವೆ ಏನೆಲ್ಲಾ ತಾಕಲಾಟಗಳಿವೆ ಎಂಬುದನ್ನು ಗಮನಿಸಬೇಕಾದ ಅಗತ್ಯವಿದೆ. ವಾಸ್ತವವಾಗಿ ಈ ಮೂರು ಭಾಷೆಗಳು ಶಾಲೆಗಳಲ್ಲಿ ಪಡೆಯುವ ಬೋಧನಾವಧಿಯಲ್ಲಿ ವ್ಯತ್ಯಾಸಗಳಿವೆಯೇ ಹೊರತು ಅವುಗಳ ನಡುವೆ ಗುಣಾತ್ಮಕವಾದ ವ್ಯತ್ಯಾಸಗಳನ್ನೇನೂ ರಾಜ್ಯಸರ್ಕಾರದ ಭಾಷಾ ನೀತಿ ಸೂಚಿಸುತ್ತಿಲ್ಲ. ಎಲ್ಲವನ್ನೂ ಸಮಾನ ಎಂದೇ ಪರಿಗಣಿಸಲಾಗುತ್ತದೆ. ಬಹುಪಾಲು ಶಾಲೆಗಳಲ್ಲಿ ಎರಡು ಮತ್ತು ಮೂರನೇ ಭಾಷೆಗಳ ನಡುವೆ ಕಲಿಯುವ ಅವಧಿಯಲ್ಲಿ ತಾರತಮ್ಯ ಇರದಿದ್ದರೂ ಆ ಭಾಷೆಗಳು ಪಡೆದುಕೊಳ್ಳುವ ಪ್ರಾಮುಖ್ಯದ ನಿಟ್ಟಿನಲ್ಲಿ ತಾರತಮ್ಯ ಇದೆ. ಏಕೆಂದರೆ ಸಾಮಾನ್ಯವಾಗಿ ಬಹುಪಾಲು ವಿದ್ಯಾರ್ಥಿಗಳಿಗೆ ಎರಡನೆಯ ಭಾಷೆ ಇಂಗ್ಲಿಶ್. ಮೂರನೆಯ ಭಾಷೆ ಹಿಂದಿ. ಔಪಚಾರಿಕ ಕಲಿಕೆಯಲ್ಲಿ ಹಿಂದಿಗೆ ಇಂಗ್ಲಿಶಿನಷ್ಟು ಮನ್ನಣೆಯಿಲ್ಲ. ಸಾಮಾಜಿಕ ತಿಳುವಳಿಕೆಯಲ್ಲಿ ಇಂಗ್ಲಿಶ್ ಅಗತ್ಯದ ಭಾಷೆ. ಹಿಂದಿ ಭಾವನಾತ್ಮಕವಾಗಿ ಸ್ಥಾನ ಪಡೆದಿದ್ದರೂ ವ್ಯಾವಹಾರಿಕವಾಗಿ ನಿರುಪಯುಕ್ತ ಎಂಬುದೇ ಜನರ ನಂಬಿಕೆ. ಹೀಗಾಗಿ ಈ ಎರಡು ಭಾಷೆಗಳನ್ನು ಎರಡು ಮತ್ತು ಮೂರನೆಯ ಭಾಷೆಗಳೆಂದು ಕರೆದು ಐದಾರು ವರ್ಷ ಕಲಿಸಿದರೂ ವಿದ್ಯಾರ್ಥಿಗಳು ಇಂಗ್ಲಿಶನ್ನು ತಮ್ಮ ಕಲಿಕೆಯ ಭಾಷೆಯನ್ನಾಗಿ ಮುಂಚೂಣಿಯಲ್ಲಿ ಇರಿಸುತ್ತಾರೆಯೇ ಹೊರತು ಹಿಂದಿ ಭಾಷೆಯನ್ನಲ್ಲ.

ಈ ಮೂರು ಭಾಷೆಗಳ ತರತಮ ನೆಲೆಗಳು ಕನ್ನಡದ ಮಟ್ಟಿಗೆ ಇನ್ನೂ ವಿಶಿಷ್ಟವಾದ ಸಂದರ್ಭವನ್ನು ರೂಪಿಸಿದೆ. ಕನ್ನಡ ಮೊದಲ ಭಾಷೆ ಅಲ್ಲದಿದ್ದರೆ ಅದು ಎರಡನೆಯ ಅಥವಾ ಮೂರನೆಯ ಭಾಷೆಯಾಗಿ ಕಲಿಯುವ ಅವಕಾಶಗಳು ಇವೆ. ಈ ಸೂತ್ರವನ್ನು ಜಾರಿಗೆ ಕೊಡುವ ವಿಧಾನ ಇನ್ನೂ ವಿಚಿತ್ರವಾಗಿದೆ. ಏಕೆಂದರೆ ಪ್ರಾಥಮಿಕ ಹಂತದಿಂದ ಕನ್ನಡವಲ್ಲದ ಬೇರೆ ಭಾಷೆಯನ್ನು ಪ್ರಥಮ ಭಾಷೆಯಾಗಿ ಮಕ್ಕಳು ಕಲಿಯಲು ಆರಂಭಿಸಿದರೆ ಅದೇ ಹಂತದಲ್ಲಿ ಕನ್ನಡವನ್ನು ಕಲಿಯಲು ಮೊದಲು ಮಾಡಬಹುದು. ಆದರೆ ಅಲ್ಲಿ ಓದುವ ಪಠ್ಯಪುಸ್ತಕ ಮಾತ್ರ ಆ ತರಗತಿಯ ಹಂತದ್ದಾಗಿರುವುದಿಲ್ಲ. ಮತ್ತು ಕೂಲಂಕಶವಾಗಿ ಪರಿಶೀಲಿಸಿದರೆ ಕನ್ನಡ, ಎರಡು ಇಲ್ಲವೆ ಮೂರನೆಯ ಭಾಷೆ ಎನ್ನಿಸಿಕೊಂಡಾಗ ವಿದ್ಯಾರ್ಥಿಗಳು ಓದುವ ಪಠ್ಯಪುಸ್ತಕಗಳು ಮಾತ್ರ ಒಂದೇ ಆಗಿರುತ್ತದೆ. ಅಂದರೆ ಎರಡನೆಯ ಭಾಷೆಗಾಗಿ ನಿಗದಿಯಾದ ಪಠ್ಯಪುಸ್ತಕವನ್ನೇ ಮೂರನೆಯ ಭಾಷೆಗೂ ಕೆಲವು ಶರತ್ತುಗಳೊಡನೆ ಬಳಸಲಾಗುತ್ತದೆ.

ಶಾಲಾಶಿಕ್ಷಣದಲ್ಲಿ ಯಾವ ಯಾವ ಭಾಷೆಗಳನ್ನು ಎಷ್ಟೆಷ್ಟು ವರ್ಷ ಕಲಿಸಬೇಕೆಂಬ ನೀತಿಯು ಉಂಟು ಮಾಡಿರುವ ಗೊಂದಲಗಳನ್ನು ಕೊಂಚ ಅರಿತಿದ್ದೇವೆ. ಮುಂದಿನ ಪ್ರಶ್ನೆಯೆಂದರೆ ಭಾಷೆಗಳನ್ನು ಹೇಗೆ ಕಲಿಸುತ್ತೇವೆ ಎಂಬುದು. ಮೇಲುನೋಟಕ್ಕೆ ಇದು

ತೀರಾ ಸರಳವಾದ ನೆಲೆಯ ಪ್ರಶ್ನೆಯೆಂದು ತೋರುತ್ತದೆ. ಕಲಿಕೆಗೆ ಇರುವ ಸಾಮಾನ್ಯ ತತ್ತ್ವಗಳನ್ನೇ ಭಾಷೆಯ ಸಂದರ್ಭಕ್ಕೂ ಅನ್ವಯಿಸಿದರೆ ಸಾಕು ಎಂಬುದು ಬಹುಪಾಲು ಶಿಕ್ಷಣತಜ್ಞರ ಅಭಿಪ್ರಾಯ. ಅಂದರೆ ಬೇರೆ ಸಂಗತಿಗಳನ್ನು ಮಗು ಕಲಿಯುವಾಗ ಅನುಸರಿಸುವ ಕಲಿಕೆಯ ತತ್ವವನ್ನೇ ಇಲ್ಲಿಯೂ ಬಳಸಿದರೆ ಮುಗಿಯಿತು ಎಂದುಕೊಳ್ಳುತ್ತಾರೆ. ಒಂದು ಮುಖ್ಯ ವ್ಯತ್ಯಾಸವನ್ನು ಗಮನಿಸುವುದಿಲ್ಲ. ಶಾಲಾಶಿಕ್ಷಣಕ್ಕೆ ಬರುವ ಹೊತ್ತಿಗಾಗಲೇ ನಾವು ಈಗಾಗಲೇ ಹೇಳಿದಂತೆ ಮಗು ಒಂದು ಭಾಷೆಯ ಕನಿಷ್ಠ ಕೌಶಲಗಳನ್ನು ಪಡೆದುಕೊಂಡಿರುತ್ತದೆ. ಆದರೆ ಇದೇ ಮಾತನ್ನು ಗಣಿತ, ಪರಿಸರಜ್ಞಾನ ಮುಂತಾದವುಗಳಿಗೆ ಅನ್ವಯಿಸಲು ಬರುವುದಿಲ್ಲ. ಅವರಿಗೆ ಶಾಲೆಯಲ್ಲಿ ಕಲಿತದ್ದೆಲ್ಲವೂ ಹೊಸದೇ. ಆದ್ದರಿಂದ ಆ ವಿಷಯಗಳನ್ನು ಕಲಿಯುವಾಗ ತೋರುವ ಉಮೇದನ್ನು ಭಾಷಾಕಲಿಕೆಯಲ್ಲಿ ಬಳಸುವುದು ಸಾಧ್ಯವಾಗದು. ಹಾಗೆಯೇ ಭಾಷೆಯನ್ನು ಕಲಿಯುವಾಗ ಮಕ್ಕಳು ಅನುಸರಿಸುವ ಕಲಿಕೆಯ ತತ್ತ್ವಗಳು, ಗಣಿತ ಮತ್ತಿತರ ವಿಷಯಗಳನ್ನು ಕಲಿಯುವಾಗ ಅನುಸರಿಸುವ ತತ್ತ್ವಗಳಿಗಿಂತ ಬೇರೆ ಎಂಬುದು ಈಗಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಹಾಗಾಗಿ ಹೇಗೆ ಕಲಿಸಬೇಕು ಎಂಬುದು ಸರಳವಾದ ಹಾಗೂ ಈಗಾಗಲೇ ಉತ್ತರ ಗೊತ್ತಿರುವ ಪ್ರಶ್ನೆಯಲ್ಲ.

ಈಗ ಕನ್ನಡವನ್ನು ಕಲಿಸುತ್ತಿರುವ ಬಗೆಯನ್ನು ನೋಡೋಣ. ಮುಖ್ಯವಾಗಿ ಔಪಚಾರಿಕ ಕಲಿಕೆಯಲ್ಲಿ ಭಾಷೆಯನ್ನು ಓದುವ ಮತ್ತು ಬರೆಯುವ ಕೌಶಲಗಳನ್ನು ರೂಢಿಸಲು ಯೋಜಿಸಲಾಗುತ್ತದೆ. ಇದರೊಡನೆ ಈಗಾಗಲೇ ಲಭ್ಯವಿರುವ ಕೌಶಲಗಳಾದ ಮಾತಾಡುವಿಕೆ ಮತ್ತೂ ಆಲಿಸುವಿಕೆಗಳನ್ನು ಹೆಚ್ಚು ಪರಿಷ್ಕರಿಸಿ ಅವು ಪ್ರಮಾಣಮುಖಿಯಾಗುವಂತೆ ಮಾಡುವ ಗುರಿಯು ಇರುತ್ತದೆ. ಆದರೆ ಸರ್ಕಾರದ ಶಿಕ್ಷಣ ಇಲಾಖೆಯು ಭಾಷಾಕಲಿಕೆಗೆ ನಿಯೋಜಿಸಿರುವ ನೀತಿಯಲ್ಲಿ ಈ ಕೌಶಲ ಅಭಿವೃದ್ಧಿಯ ಅಂಶಗಳ ಜೊತೆಗೆ ಮತ್ತು ಕೆಲವು ಗುರಿಗಳು ಬಂದು ಸೇರಿಕೊಂಡಿವೆ. ಅವುಗಳಲ್ಲಿ ಮುಖ್ಯವಾಗಿ ಮಕ್ಕಳಲ್ಲಿ ನೈತಿಕ ಮೌಲ್ಯಗಳು ನೆಲೆಗೊಳ್ಳುವಂತೆ ಮಾಡುವುದು, ರಾಷ್ಟ್ರಭಕ್ತಿಯನ್ನು ಬೆಳೆಸುವುದು, ನಾಗರಿಕರ ಹಕ್ಕುಗಳ ಮತ್ತು ಕರ್ತವ್ಯಗಳ ಪರಿಚಯ ಮಾಡುವುದು ಇಂತಹ ಸದಾಚಾರ ಸಂಹಿತೆಗಳು ಸೇರಿವೆ. ಶಿಕ್ಷಣದ ಮೂಲಗುರಿಗಳಾದ ಇವು ಭಾಷೆಯ ಕಲಿಕೆಯ ಚೌಕಟ್ಟಿನಲ್ಲಿ ಬಂದು ಸೇರಿರುವುದರಿಂದ ಉಂಟಾಗಿರುವ ಸಮಸ್ಯೆ ಪರಿಶೀಲನಾರ್ಹವಾಗಿದೆ. ಇದರಿಂದ ಪಠ್ಯಕ್ರಮದಲ್ಲಿ ಕನ್ನಡ ಭಾಷೆಯ ಕೌಶಲಗಳ ಬೆಳವಣಿಗೆಯ ಜೊತೆಗೆ ಪಠ್ಯವಸ್ತುವಿನ ಆಶಯ ಮತ್ತು ಸಾರ ಕೂಡ ಮುಂಚೂಣಿಗೆ ಬಂದು ನಿಲ್ಲುತ್ತದೆ. ಪಠ್ಯವಸ್ತುವಿನಲ್ಲಿ ಈ ಎರಡೂ ಪರಸ್ಪರ ಸಂಬಂಧವಿಲ್ಲದ ಗುರಿಗಳು ಸೇರ್ಪಡೆಯಾಗುವುದರಿಂದ ಬೋಧನೆಯಲ್ಲಿ ಯಾವುದಕ್ಕೆ ಪ್ರಾಶಸ್ತ್ಯ ನೀಡಬೇಕು ಎಂಬುದು ಒಂದು ಆಯ್ಕೆಯಾಗಿ ಅಧ್ಯಾಪಕರನ್ನು ಕಾಡಿಸುತ್ತದೆ. ಇವರು ಹೆಚ್ಚು ಸುಲಭವಾದ ಮತ್ತು ಅಷ್ಟೇ ಅಮೂರ್ತ ಪರಿಣಾಮದ ಶಿಕ್ಷಣದ ಮೂಲಗುರಿಗಳನ್ನು ಪ್ರಧಾನವಾಗಿಸಿ ಕೌಶಲ ಅಭಿವೃದ್ಧಿಗಳನ್ನು ಗೌಣನೆಲೆಗೆ ಒಯ್ಯುವ ಸಾಧ್ಯತೆಗಳು ಹೆಚ್ಚು.

ಅಷ್ಟಲ್ಲದೇ ಈ ಗೌಣನೆಲೆಗಳಲ್ಲಿ ಕ್ರಿಯಾತ್ಮಕಕೌಶಲಗಳಾದ, ಬರೆಯುವುದು ಮತ್ತು ಮಾತಾಡುವುದು ಹಿಂದೆ ಸರಿದು ಗ್ರಹಿಕೆಯ ಕೌಶಲಗಳಾದ ಓದುವುದು ಮತ್ತು ಆಲಿಸುವುದು ಮುಂಚೂಣಿಗೆ ಬರುತ್ತವೆ. ಕೌಶಲಗಳ ಬೆಳವಣಿಗೆಯಲ್ಲಿ ಎದ್ದು ಕಾಣುವ ಏರುಪೇರು ಉಂಟಾಗುತ್ತದೆ. ಓದಲು ಶಕ್ತರಾದರೂ ಸ್ವತಂತ್ರವಾಗಿ ಬರೆಯಲಾರರು; ಹೇಳಿದ್ದನ್ನು ಕೇಳಿ ಅರಿತರೂ ಸ್ವತಂತ್ರವಾಗಿ ತಾವೇ ಮಾತನಾಡ ಲಾರರು ಎಂಬ ಪರಿಸ್ಥಿತಿಯು ಉಂಟಾಗುತ್ತದೆ.

ಕೌಶಲಗಳ ಅಭಿವೃದ್ಧಿಯೇ ಗುರಿಯಾದರೂ ಅವುಗಳನ್ನು ಹತ್ತು ವರ್ಷಗಳ ಕಾಲ ಹೇಗೆ ನಿಯತವಾಗಿ ಬೆಳೆಸಬೇಕು ಎಂಬುದು ಒಂದು ಪ್ರಮುಖ ಪ್ರಶ್ನೆ. ಈ ಬೆಳವಣಿಗೆಯೂ ಪ್ರಮಾಣಾತ್ಮಕವಾದುದೋ ಅಥವಾ ಗುಣಾತ್ಮಕವಾದುದೋ ಎಂಬುದು ಜೊತೆಗೇ ಬರುವ ಇನ್ನೊಂದು ಪ್ರಶ್ನೆ. ಈಗಿರುವ ಸರಳ ಗ್ರಹಿಕೆಯಂತೆ ಕೌಶಲಗಳನ್ನು ಪ್ರಮಾಣಾತ್ಮಕವಾಗಿ ವೃದ್ಧಿಗೊಳಿಸುವುದು ಒಂದು ಘೋಷಿತ ಉದ್ದೇಶವೆಂದು ಭಾವಿಸಬಹುದು. ಏಕೆಂದರೆ ನಾಲ್ಕನೇ ತರಗತಿಯ ಮಗುವಿನ ಓದಿಗೆ ದಕ್ಕುವ ಪದಕೋಶದ ಪದಗಳ ಸಂಖ್ಯೆಯನ್ನು ಎಂಟನೇ ತರಗತಿಯ ಮಗುವಿನ ಕಲಿಕೆಯ ಹೊತ್ತಿಗೆ ಸಂಖ್ಯಾತ್ಮಕವಾಗಿ ಹೆಚ್ಚಿಸಲು ಉದ್ದೇಶಿಸಲಾಗುತ್ತದೆ. ಅಂದರೆ ಮೊದಲು ಮಗುವಿಗೆ ಐದು ಸಾವಿರ ಪದಗಳು ತಿಳಿದಿದ್ದರೆ ಅದನ್ನು ಹತ್ತು ಸಾವಿರಕ್ಕೆ ಹೆಚ್ಚಿಸುವುದೇ ಉದ್ದೇಶವಾಗಿಬಿಡುತ್ತದೆ. ಈ ಕ್ರಮದಲ್ಲಿ ದೋಷವಿದೆ ಎಂದು ಹೇಳಲಾಗದಿದ್ದರೂ ಒಟ್ಟು ಕಲಿಕೆಯ ಪರಿಣಾಮದಲ್ಲಿ ಕೆಲವು ಸಮಸ್ಯೆಗಳಿವೆ ಎನ್ನುವುದು ಸ್ಪಷ್ಟ.

ನಮ್ಮ ಶಾಲಾಶಿಕ್ಷಣದ ಪೂರೈಕೆಯ ಅನಂತರ ಉತ್ತೀರ್ಣರಾಗಿ ಹೊರಬರುವ ವಿದ್ಯಾರ್ಥಿಗಳ ಭಾಷಾಕೌಶಲದ ಬಗೆಗೆ ಸಾಮಾನ್ಯವಾಗಿ ಅಷ್ಟೇನೂ ಉತ್ಸಾಹದ ಪ್ರತಿಕ್ರಿಯೆ ಇಲ್ಲ. ಅಷ್ಟು ವರ್ಷ ಓದಿದರೂ ಒಂದು ಸಾಲು ಸರಿಯಾಗಿ ಸ್ವತಂತ್ರವಾಗಿ ಬರೆಯಲಾರರು; ವೇದಿಕೆಯಲ್ಲಿ, ಸಾಮಾಜಿಕ ಸಂದರ್ಭಗಳಲ್ಲಿ ದಿಟ್ಟತನದಿಂದ ಎಲ್ಲರಿಗೂ ಅರ್ಥವಾಗುವಂತೆ ಕನ್ನಡದಲ್ಲಿ ಮಾತನಾಡಲಾರರು; ಹೆಚ್ಚು ಓದಲಾರರು ಎನ್ನುವ ಟೀಕೆಗಳನ್ನು ಕೇಳುತ್ತೇವೆ. ತಲೆಮಾರುಗಳ ಅಂತರ ಇರುವಾಗ ಇಂತಹ ಟೀಕೆಗಳು ಸಹಜ ಮತ್ತು ಎಷ್ಟೋ ವೇಳೆ ಉತ್ಪ್ರೇಕ್ಷೆಯಿಂದ ಕೂಡಿರುತ್ತವೆ ಎಂದು ತಿಳಿದರೂ, ನಮ್ಮ ಶಾಲಾಶಿಕ್ಷಣದ ಭಾಷಾ ಕಲಿಕೆಯ ನೆಲೆಯಲ್ಲಿ ಎಲ್ಲವೂ ಸರಿಯಿದೆ ಎಂದು ಎದೆತಟ್ಟಿ ಹೇಳುವಂತಿಲ್ಲ.

ಭಾಷೆಯನ್ನು ಸಾರ್ವತ್ರಿಕ ಶಿಕ್ಷಣದ ಭಾಗವಾಗಿ ಕಲಿಸುವ ಜೊತೆಗೆ ಇನ್ನೊಂದು ನೆಲೆಯಲ್ಲೂ ಕನ್ನಡಕ್ಕೆ ಒಂದು ಪಾತ್ರವಿದೆ. ಎಂದರೆ ಕಲಿಕೆ ಯಾವ ಭಾಷೆಯ ಮೂಲಕ ಆಗಬೇಕು ಎನ್ನುವುದು ಒಂದು ಪ್ರಶ್ನೆ. ಈ ನಿಟ್ಟಿನಲ್ಲಿ ಕರ್ನಾಟಕದ ಭಾಷಾ ನೀತಿ ಕಳೆದ ಎರಡು ದಶಕಗಳಲ್ಲಿ ತೀರ ಇಕ್ಕಟ್ಟಿನ ಪ್ರಸಂಗಗಳನ್ನು ಹಾಯ್ದು ಬಂದಿದೆ. ಭಾಷೆ ಒಂದು ಕಲಿಕೆಯ ವಿಷಯವಾಗಿ ಇರುವುದು, ಮತ್ತು ಭಾಷೆ ಕಲಿಕೆಯ ಮಾಧ್ಯಮವಾಗಿ ಇರುವುದು ಗೊಂದಲಕ್ಕೆ ಕಾರಣವಾಗುವ ಸಂಗತಿಯಲ್ಲ. ಆದರೆ ಆಡಳಿತದ ನೆಲೆಯಲ್ಲಿ, ಪ್ರಸಾರ ಮಾಧ್ಯಮಗಳ ನೆಲೆಯಲ್ಲಿ, ಮತ್ತು ಸಾರ್ವಜನಿಕ

ಅಭಿಪ್ರಾಯಗಳ ನೆಲೆಯಲ್ಲಿ ಈ ಗೊಂದಲ ಉಂಟಾಗಿದೆ. ಈ ವಿವಾದಗಳಲ್ಲಿ ಇರುವ ಪಕ್ಷಗಳನ್ನು ಈ ಕೆಳಗಿನಂತೆ ಸಂಗ್ರಹಿಸಿ ಹೇಳಬಹುದು. ಒಂದು: ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯನ್ನು ಒಂದು ವಿಷಯವಾಗಿ ಕಲಿಯಬೇಕು ಮತ್ತು ಎಲ್ಲ ವಿಷಯಗಳನ್ನು ಆ ಭಾಷೆಯ ಮೂಲಕವೇ ಕಲಿಯಬೇಕು. ಇವರು ಇನ್ನೊಂದು ಭಾಷೆಯನ್ನು ಕಲಿಯಲು ಅಡ್ಡಿಯಿಲ್ಲ. ಎರಡು: ವಿದ್ಯಾರ್ಥಿಗಳು ಯಾವ ಭಾಷೆಯನ್ನು ಬೇಕಾದರೂ ವಿಷಯವಾಗಿ ಕಲಿಯಲಿ. ಆದರೆ ಕಲಿಯುವ ಮಾಧ್ಯಮ ಮಾತ್ರ ಇಂಗ್ಲಿಶ್ ಆಗಿರಬೇಕು. ಈ ಎರಡು ಪಕ್ಷಗಳಲ್ಲದೆ ಇವುಗಳಲ್ಲಿ ಕೆಲವು ಒಳಗುಂಪುಗಳೂ ಇವೆ. ಮಾತೃಭಾಷೆಯ ಮೂಲಕ ಕಲಿಯಬೇಕು ಎನ್ನುವವರು ಅದನ್ನು ಪ್ರಾದೇಶಿಕ ಭಾಷೆ ಎಂದು ವ್ಯಾಖ್ಯಾನಿಸುವುದುಂಟು. ಮತ್ತೆ ಕೆಲವರು ದೇಶದ ಇತರ ಪ್ರಾಂತ್ಯಗಳ ಭಾಷೆಗಳನ್ನು ಗಮನದಲ್ಲಿರಿಸಿಕೊಂಡು ಆ ಭಾಷೆಗಳನ್ನು ವಿದ್ಯಾರ್ಥಿಗಳ ಮಾತೃಭಾಷೆ ಎಂದು ವ್ಯಾಖ್ಯಾನಿಸಿದ್ದಾರೆ.

ಈಗಾಗಲೇ ಬೇರೊಂದೆಡೆ ಈ ಗೊಂದಲದ ವಿವಿಧ ಮುಖಗಳನ್ನು ವಿವರಿಸಲಾಗಿದೆ. ಆದರೆ ಖಚಿತವಾಗಿ ನಿರೂಪಿಸಲಾಗದ ಒಂದು ಸಂಗತಿ ಇದೆ. ಅದನ್ನು ಇಲ್ಲಿ ಸ್ಪಷ್ಟಪಡಿಸಲಾಗುತ್ತದೆ. ವಿದ್ಯಾರ್ಥಿಗಳ ಕಲಿಕೆಯ ವಿಷಯವಾಗುವ ಭಾಷೆಯೇ ಅವರ ಕಲಿಕೆಯ ಮಾಧ್ಯಮವೂ ಆಗಿರಬೇಕು ಎಂಬ ತತ್ತ್ವವನ್ನು ಯಾವ ರೀತಿ ಅರ್ಥಮಾಡಿಕೊಳ್ಳಬೇಕು ಮತ್ತು ವ್ಯಾಖ್ಯಾನಿಸಬೇಕು ಎಂಬುದು ಒಂದು ಸಮಸ್ಯೆ. ಕನ್ನಡಪರವಾಗಿ ವಾದ ಹೂಡುವವರು ಕಳೆದ ಐದು ದಶಕಗಳುದ್ದಕ್ಕೂ ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯೇ ಶಿಕ್ಷಣಮಾಧ್ಯಮವಾಗಬೇಕು, ಅದು ಶೈಕ್ಷಣಿಕತತ್ತ್ವಗಳಿಗೆ ಅನುಗುಣವಾಗಿದೆ ಎಂದು ವಾದಿಸುತ್ತಾ ಬಂದಿದ್ದಾರೆ. ಜೊತೆಗೆ ಮಗುವಿನ ವಾದಕ್ಕೆ ಇನ್ನೆರಡು ಅಂಶಗಳು ಸೇರುತ್ತವೆ. ಒಂದು: ಮಗುವಿಗೆ ತನ್ನದಲ್ಲದ ಭಾಷೆಯ ಮೂಲಕ ಇತರ ವಿಷಯಗಳನ್ನು ಕಲಿಯುವುದು ತ್ರಾಸದಾಯಕ. ಅದು ಅವರ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಎರಡು: ಹೀಗೆ ಮಕ್ಕಳು ಮಾತೃಭಾಷೆಯನ್ನು ಬಿಟ್ಟು ಬೇರೊಂದು ಭಾಷೆಯ ಮೂಲಕ ವಿಷಯ ಗ್ರಹಣ ಮಾಡುತ್ತಾ ಹೋದ ಹಾಗೆ ಅವರು ತಮ್ಮ ಸಾಂಸ್ಕೃತಿಕ ಪರಿಸರಕ್ಕೆ ದೂರವಾಗುತ್ತಾರೆ. ಇದರ ಪರಿಣಾಮವಾಗಿ ಬರಲಿರುವ ಸಮಯದಲ್ಲಿ ಕನ್ನಡ ಸಂಸ್ಕೃತಿಗೆ ಕುತ್ತು ಬಂದೊದಗುತ್ತದೆ; ಅದಕ್ಕೆ ವಾರಸುದಾರರು ಇಲ್ಲವಾಗುತ್ತಾರೆ. ಇದು ಸ್ಥೂಲವಾಗಿ ಕನ್ನಡಪರ ವಾದದ ತಿರುಳು.

ಈ ಕನ್ನಡಪರ ವಾದದ ನೆಲೆಗಳಿಗೆ ಪ್ರತಿಯಾದ ವಾದವನ್ನು ಹೂಡುವವರ ತರ್ಕ ಸರಳವಾಗಿದೆ. ಅವರ ಶಿಕ್ಷಣಮಾಧ್ಯಮದ ಆಯ್ಕೆ ಇಂಗ್ಲಿಶ್. ಇಂಗ್ಲಿಶ್ ಜಾಗತಿಕ ನೆಲೆಯ ಅವಕಾಶಗಳಿಗೆ ಅನುವು ಮಾಡಿಕೊಡುವ ಭಾಷೆಯಾಗಿರುವುದರಿಂದ ನಮ್ಮ ಮಕ್ಕಳು ಅಂತಹ ಅವಕಾಶವನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕು. ಈ ತರ್ಕ ಶೈಕ್ಷಣಿಕ ತತ್ತ್ವವನ್ನು ಆಧರಿಸಿಲ್ಲ. ಜೀವನಮಾರ್ಗವನ್ನು ಮಾತ್ರ ಗಮನಿಸುವಂತಿದೆ.

ಈ ಇಂಗ್ಲಿಶ್ ಮಾಧ್ಯಮದ ಪರವಾಗಿ ವಾದ ಹೂಡುವವರು ನಮ್ಮ ಶಿಕ್ಷಣನೀತಿಯಲ್ಲಿರುವ ಇನ್ನೊಂದು ಅವಕಾಶವನ್ನು ತಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳಲು ನೋಡುತ್ತಾರೆ. ಈಗಿರುವಂತೆ ಉನ್ನತ ಶಿಕ್ಷಣದಲ್ಲಿ ಇಂಗ್ಲಿಶ್ ಮಾತ್ರ ಅಧಿಕೃತ ಶಿಕ್ಷಣಮಾಧ್ಯಮ. ಹೇಗೂ ಮಕ್ಕಳು ಓದುತ್ತಾ ಹೋದಂತೆ ಮುಂದೆ ಇಂಗ್ಲಿಶ್ ಮಾಧ್ಯಮವನ್ನೇ ಅವಲಂಬಿಸಿಬೇಕಾಗುತ್ತದೆ. ಆದ್ದರಿಂದ ಮೊದಲ ಹಂತದಿಂದಲೂ ಅವರು ಆ ಭಾಷೆಯ ಮೂಲಕ ಕಲಿಯುವುದು ಅವರಿಗೆ ಅನುಕೂಲಕರ. ಬೇರೆ ಭಾಷೆಯ ಮೂಲಕ ಕಲಿತು ಅನಂತರ ಇಂಗ್ಲಿಶ್ ಮಾಧ್ಯಮಕ್ಕೆ ಹೊಂದಿಕೊಳ್ಳಲು ಹೋದಾಗ ಅವರಿಗೆ ಕಷ್ಟವಾಗುತ್ತದೆ. ಅಲ್ಲದೆ ಅವರ ಶೈಕ್ಷಣಿಕ ಪ್ರಗತಿ ಸಾಧನೆ, ಗುಣಮಟ್ಟ ಎಲ್ಲವೂ ಕುಗ್ಗುತ್ತದೆ ಎಂಬುದು ಈ ವಾದದ ತಿರುಳು.

ಈ ವಿವಾದಗಳು ಏನೇ ಇರಲಿ. ಕಲಿಕೆಯ ಮಾಧ್ಯಮ ಮತ್ತು ವಿದ್ಯಾರ್ಥಿಗಳ ಮೊದಲಭಾಷೆ ಬೇರೆಬೇರೆಯಾದರೆ ಅದರಿಂದ ಅವರ ಮಾನಸಿಕ ಮತ್ತು ಶೈಕ್ಷಣಿಕ ಪ್ರಗತಿ ಕುಗ್ಗುತ್ತದೆ ಎನ್ನುವುದನ್ನು ಸಮರ್ಥಿಸುವುದು ಕಷ್ಟ. ಇದು ನಿಜವೇ ಎಂಬುದನ್ನು ಈವರೆಗೆ ಯಾರೂ ಪರಿಶೀಲಿಸಿ ನೋಡಿಲ್ಲ. ಆ ಬಗೆಗೆ ಸಂಶೋಧನೆಗಳು ನಡೆದಿಲ್ಲ. ಅನಿಸಿಕೆಗಳ ನೆಲೆಯಲ್ಲಿ ಈ ಅಭಿಪ್ರಾಯಗಳು ಮಂಡನೆಯಾಗಿವೆ. ಎಳವೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದವರು ಉನ್ನತ ಸಾಧನೆಗಳನ್ನು ಮಾಡಿದ್ದಾರೆ ಎಂದು ವಾದಿಸಿದರೆ ಅದರಿಂದ ಇಂಗ್ಲಿಶ್ ಮಾಧ್ಯಮದ ಮೂಲಕ ಓದಿದವರು ಉನ್ನತ ಸಾಧನೆಗಳನ್ನು ಮಾಡಲಾರರು ಎಂದು ಸಾಧಿಸಿದಂತೆ ಆಗಲಿಲ್ಲ. ಅಂದರೆ ಇವು ಪರಸ್ಪರ ಬೇರೆ ಬೇರೆ ಸಂಗತಿಗಳೆಂದು ತೋರುತ್ತಿದೆ.

ಇದಲ್ಲದೆ ಕನ್ನಡವನ್ನು ಕಲಿಕೆಯ ಮಾಧ್ಯಮವಾಗಿ ಮಾಡದಿದ್ದರೆ ಅಂತಹ ವಿದ್ಯಾರ್ಥಿಗಳು ತಮ್ಮ ಸಾಂಸ್ಕೃತಿಕ ಬೇರುಗಳನ್ನು ಕಳೆದುಕೊಳ್ಳುತ್ತಾರೆ ಎಂಬ ವಾದವನ್ನು ತಳ್ಳಿ ಹಾಕಲು ಬರುವುದಿಲ್ಲ. ಇಂತಹ ಪರಿಸ್ಥಿತಿ ಈಗ ನಮ್ಮೆದುರು ಇದೆ. ಆದರೆ ಕನ್ನಡ ಮಾಧ್ಯಮದಲ್ಲಿ ಓದಿದವರು, ಹಾಗೆ ಓದಿದ್ದರಿಂದಲೇ ಸಂಸ್ಕೃತಿಗೆ ನಿಕಟವಾಗುತ್ತಾರೆ ಮತ್ತು ಅದರ ವಾರಸುದಾರಾಗುತ್ತಾರೆ ಎಂದು ಸಾಧಿಸುವುದು ಕಷ್ಟ ಅದಕ್ಕೂ ಪುರಾವೆಗಳಿಲ್ಲ. ಏಕೆಂದರೆ ಇಂಗ್ಲಿಶ್ ಮಾಧ್ಯಮದ ಅವಕಾಶ ಸಿಗದೆ ಕನ್ನಡದಲ್ಲೇ ಕಲಿತ ತಲೆಮಾರೊಂದು ನಮ್ಮೊಡನೆ ಇದೆ. ಅವರಲ್ಲಿಯೂ ಸಾಂಸ್ಕೃತಿಕ ನೆಲೆಯ ಬಂಧ ಬಲವಾಗಿದೆಯೆಂದು ಹೇಳಲು ಸಾಕಷ್ಟು ಕಾರಣಗಳಿಲ್ಲ. ಆದ್ದರಿಂದ ಶಿಕ್ಷಣಮಾಧ್ಯಮಕ್ಕೂ ಸಾಂಸ್ಕೃತಿಕ ಪರಂಪರೆಯ ಮುಂದುವರಿಕೆಗೂ ನೇರವಾದ ಸಂಬಂಧ ಇದ್ದಿರಲಾರದು. ಸಾಮಾಜಿಕವಾದ ಬೇರೆ ಯಾವುದೋ ಕಾರಣಗಳು ಈ ನೆಲೆಯಲ್ಲಿ ಹೆಚ್ಚು ತೀವ್ರವಾಗಿ ಪ್ರಭಾವಶಾಲಿಯಾಗಿ ಇರುವಂತೆ ತೋರುತ್ತದೆ.

ಇಲ್ಲಿ ಭಾಷಾಕಲಿಕೆಯ ಬಗೆಗೆ ಈಗ ಲಭ್ಯವಿರುವ ಹೊಸ ಶೋಧಗಳ ನೆರವನ್ನು ನಾವು ಪಡೆಯಬೇಕಾಗಿದೆ. ಶಾಲೆಗೆ ಬರುವ ಮಗು ಒಂದು ಅಥವಾ ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಕೆಲವು ಕೌಶಲಗಳನ್ನು ಪಡೆದಿರುತ್ತದೆ. ಈ ಕೌಶಲಗಳು

ಮಗುವಿಗೆ ಹೇಗೆ ಲಭಿಸಿದವು? ಇದನ್ನು ನಾವು ಈವರೆಗೆ ಅರ್ಥಮಾಡಿಕೊಳ್ಳುತ್ತಿದ್ದ ಕ್ರಮ ಮತ್ತು ನಿಜವಾಗಿ ಅದು ಸಂಭವಿಸುವ ಕ್ರಮ ಇವೆರಡರ ನಡುವೆ ಅಗಾಧ ಅಂತರವಿದೆ. ಮಕ್ಕಳು ಭಾಷೆಯನ್ನು ಕಲಿಯಲು ಅನುಕರಣೆಯ ತತ್ವವನ್ನು ಅವಲಂಬಿಸುತ್ತಾರೆ ಎನ್ನುವುದು ಹಳೆಯ ತಿಳುವಳಿಕೆ. ಆದರೆ ಈ ಬಗೆಯ ಕಲಿಕೆಯಲ್ಲಿ ಅನುಕರಣೆಗೆ ಗೌಣಸ್ಥಾನ. ಅದಕ್ಕಿಂತಲೂ ಪ್ರಧಾನವಾದ ನೆಲೆಗಳು ಮಗುವಿನ ಮೆದುಳಿನಲ್ಲಿ ಅಂತಸ್ಥವಾಗಿ ಲಭ್ಯವಿರುತ್ತವೆ ಎಂದು ಭಾಷಾಶಾಸ್ತ್ರಜ್ಞರು ಕಳೆದ ಐವತ್ತು ವರ್ಷಗಳಲ್ಲಿ ತೋರಿಸಿಕೊಟ್ಟಿದ್ದಾರೆ.

ಹೆಚ್ಚು ವಿವರಗಳಿಗೆ ಹೋಗದೆ ಸ್ಥೂಲವಾಗಿ ಆ ಪ್ರಕ್ರಿಯೆಯನ್ನು ಹೀಗೆ ವಿವರಿಸಬಹುದು. ಮಗು ಹುಟ್ಟುವಾಗಲೇ ಅದರ ಮೆದುಳಿನಲ್ಲಿ ಜಗತ್ತಿನ ಯಾವುದೇ ಮಾನವ ಸಮುದಾಯದ ಭಾಷೆಯನ್ನಾದರೂ ಕಲಿಯುವ ಅವಕಾಶವನ್ನು ಒದಗಿಸುವ ಒಂದು ವ್ಯವಸ್ಥೆ ಅಡಕವಾಗಿರುತ್ತದೆ. ಆ ಮಗುವಿಗೆ ಕನ್ನಡ ಪರಿಸರ ಲಭಿಸಿದರೆ ಅದು ಕಲಿಯವ ಭಾಷೆ ಕನ್ನಡ ಆಗುತ್ತದೆ. ಹೀಗೆ ಬೇರೆಯ ಭಾಷೆಯ ಪರಿಸರ ದೊರಕಿದರೆ ಆ ಭಾಷೆಯನ್ನೇ ಮಗು ಕಲಿಯುತ್ತದೆ. ಇಲ್ಲಿ ಕಲಿಯುವುದು ಎಂಬ ಮಾತನ್ನು ಕೇವಲ ಔಪಚಾರಿಕವಾಗಿ ಬಳಸಲಾಗಿದೆ. ವಾಸ್ತವವಾಗಿ ಮಗು ಭಾಷೆಯನ್ನು ಕಲಿಯುವುದಿಲ್ಲ. ತನ್ನ ಮೆದುಳಿನಲ್ಲಿ ಅಂತಸ್ಥವಾಗಿರುವ ಸಾಧ್ಯತೆಗಳನ್ನು ಗ್ರಹಿಸಿಕೊಳ್ಳುತ್ತದೆ; ಪಡೆದುಕೊಳ್ಳುತ್ತದೆ. ಸಾಮಾನ್ಯ ಕಲಿಕೆಯ ನಿಯಮಗಳು ಇಲ್ಲಿ ಅನ್ವಯವಾಗುವುದಿಲ್ಲ.

ಮಗುವಿಗೆ ಒಂದೇ ಸಮಯಕ್ಕೆ ಒಂದಕ್ಕಿಂತ ಹೆಚ್ಚು ಭಾಷೆಗಳ ಪರಿಸರ ದೊರೆತರೆ ಏನಾಗುತ್ತದೆ? ನಮ್ಮ ಸಾಂಪ್ರದಾಯಿಕ ತಿಳುವಳಿಕೆ ಪ್ರಕಾರ ಇಂತಹ ಕಡೆ ಮಗುವಿಗೆ ಗೊಂದಲ ಉಂಟಾಗಿ ಅದು ಯಾವ ಭಾಷೆಯನ್ನು ಕೂಡಾ ಸರಿಯಾಗಿ ಕಲಿಯುವುದಿಲ್ಲ. ಅಂತಹ ಮಕ್ಕಳು ಯಾವುದೋ ಒಂದು ಅರೆಬರೆ ಕಲಿತ ಭಾಷೆಯಲ್ಲಿ ಮಾತಾಡುತ್ತವೆ. ಆದರೆ ಈಗ ನಮಗೆ ದೊಕಿರುವ ಮಾಹಿತಿಯಂತೆ ಇದು ಯಾವುದೂ ಸರಿಯಾದ ತಿಳುವಳಿಕೆಯಲ್ಲ. ಮಗು ತನ್ನ ಅಂತಸ್ಥ ಸಾಮರ್ಥ್ಯದಿಂದ ಹಲವು ಭಾಷೆಗಳನ್ನು ಪಡೆದುಕೊಳ್ಳಬಲ್ಲದು. ಹಾಗೆ ಪಡೆದುಕೊಳ್ಳುವಾಗ ನಡೆಯುವ ಪ್ರಕ್ರಿಯೆಯನ್ನೇ ನಾವು ಗಲಿಬಿಲಿ ಎಂದು ತಿಳಿದು ಬಿಡುತ್ತೇವೆ. ಆದರೆ ಹಾಗೇನೂ ಅಲ್ಲಿ ನಡೆಯುತ್ತಿರುವುದಿಲ್ಲ. ಒಟ್ಟಾರೆ ಈ ಪ್ರಕ್ರಿಯೆಯನ್ನು ಸರಳಗೊಳಿಸಿ ಹೇಳುವುದಾದರೆ ಒಂದು ಮಗು ತಾನು ಶೈಶವಾವಸ್ಥೆಯಲ್ಲಿ ಕನ್ನಡವನ್ನು ಕಲಿಯಿತು ಎಂದರೆ ತನಗೆ ಹುಟ್ಟಿನಿಂದಲೇ ದತ್ತವಾಗಿದ್ದ ಕನ್ನಡವನ್ನು ಹೊರತುಪಡಿಸಿ ಇತರ ಮಾನವ ಭಾಷೆಗಳನ್ನು ಆಡುವ ಬಳಸುವ ಸಾಮರ್ಥ್ಯವನ್ನು, ಅವಕಾಶವನ್ನು ಬಿಟ್ಟುಕೊಟ್ಟಿತು ಎಂದೇ ಅರ್ಥ. ಸಾಮಾನ್ಯವಾಗಿ ಹೀಗೆ ಮಾನವಸಹಜ ಭಾಷೆಗಳನ್ನು ಪಡೆದುಕೊಳ್ಳುವ ಸಾಮರ್ಥ್ಯ ಮಗುವಿನ ಮೆದುಳಿನಲ್ಲಿ ಬಹಳ ಕಾಲ ಉಳಿಯುವುದಿಲ್ಲ. ಅದು ಮಕ್ಕಳು ಕೌಮಾರ್ಯಾವಸ್ಥೆಗೆ ದಾಟುವವರೆಗೂ ಕ್ರಿಯಾಶೀಲವಾಗಿದ್ದು ಅನಂತರ ಇಲ್ಲವಾಗುತ್ತದೆ. ಸಂಶೋಧನೆಗಳು ತಾತ್ಪೂರ್ವಿಕವಾಗಿ ಈ ಗರಿಷ್ಠ ಅವಧಿಯನ್ನು ಸದ್ಯ ಒಪ್ಪಿಕೊಂಡಿವೆ. ಅದರ ಬಗೆಗೆ ಇರುವ ಚರ್ಚೆಗಳು ನಮಗೆ ಇಲ್ಲಿ ಬೇಕಿಲ್ಲ.

ಮಗು ಭಾಷೆಯನ್ನು ಪಡೆದುಕೊಳ್ಳುವ ಕ್ರಮದ ಬಗೆಗೆ ಬೆಳಕು ಚೆಲ್ಲುವ ಈ ಶೋಧ ನಮಗೆ ನಮ್ಮ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಅನುಕೂಲಕರ. ಶಾಲಾಶಿಕ್ಷಣದ ಆರಂಭದ ಹಂತವೆಂದರೆ ಈಗಿನ ಆಚರಣೆಯ ಪ್ರಕಾರ ಮೂರನೆಯ ವರ್ಷ. ಅಂದರೆ ಮಗುವಿನ ಮೆದುಳಿನಲ್ಲಿ ಜಗತ್ತಿನ ಯಾವುದೇ ಭಾಷೆಯನ್ನಾದರೂ ಪಡೆದುಕೊಳ್ಳಲು ನೆರವಾಗುವ ಸಾಮರ್ಥ್ಯ ಜಾಗ್ರತವಾಗಿರುವ ಸಮಯ. ಮೂರನೆಯ ವಯಸ್ಸಿನಿಂದ ಕೌಮಾರ್ಯಾವಸ್ಥೆಗೆ ಬರುವವರೆಗೆ ಅಂದರೆ ನಮ್ಮ ಭೌಗೋಳಿಕ ಸಂದರ್ಭದಲ್ಲಿ ಸುಮಾರು ಹನ್ನೆರಡನೆಯ ವರ್ಷದವರೆಗೆ (ಗಂಡು ಮತ್ತು ಹೆಣ್ಣು ಮಕ್ಕಳಲ್ಲಿ ಈ ವಯೋಮಾನ ಬೇರೆಬೇರೆ ಆಗಿರುತ್ತದೆ) ಈ ಸವಲತ್ತು ಮಗುವಿಗೆ ಇರುತ್ತದೆ ಎಂದು ತಿಳಿಯಲು ಅಡ್ಡಿಯಿಲ್ಲ. ಹಾಗಿರುವಾಗ ಇಂಗ್ಲಿಶ್ ಭಾಷೆಯನ್ನು ಅಥವಾ ಇನ್ನಾವುದೋ ಭಾಷೆಯನ್ನು ಕಲಿಯಲು ಮಗುವಿಗೆ ಕಷ್ಟವಾಗುತ್ತದೆ ಎಂದು ವಾದಿಸುವುದು ಎಷ್ಟು ಸರಿ? ಮಗು ತನಗೆ ಈಗಾಗಲೇ ಗೊತ್ತಿರುವ ಭಾಷೆಯಂತೆಯೇ ಮತ್ತೊಂದು ಭಾಷೆಯನ್ನೂ ಸಹಜವಾಗಿಯೇ ಪಡೆದುಕೊಳ್ಳಬಹುದು. ಈ ತರ್ಕವನ್ನು ಮಂಡಿಸುವಾಗ ಮಗು ಇನ್ನೊಂದು ಭಾಷೆಯನ್ನು ಕಲಿಯಲೇಬೇಕು ಎಂದು ವಾದಿಸುವ ಉದ್ದೇಶವಿಲ್ಲ. ಹಾಗೆ ಕಲಿಯಬೇಕಾಗಿ ಬಂದರೆ ಅದು ಒಂದು ಸಹಜ ನೆಲೆಯ ಪ್ರಕ್ರಿಯೆಯಾಗಿರುತ್ತದೆಯೇ ಹೊರತು ನಾವು ತಿಳಿದಂತೆ ಮಾನಸಿಕ ಕ್ಷೋಭೆಗೆ ಕಾರಣವಾಗುವುದಿಲ್ಲ ಎನ್ನುವುದನ್ನು ವಿವರಿಸುವುದಷ್ಟೇ ಇಲ್ಲಿನ ಉದ್ದೇಶ.

ಮಕ್ಕಳು ಲೆಕ್ಕ ಮಾಡುವುದನ್ನು, ಮಗ್ಗಿ ಹೇಳುವುದನ್ನು ಕಲಿಯುವಾಗ ಎದುರಿಸುವ ಕಷ್ಟಗಳು ಹಲವು. ಈ ಕಷ್ಟಗಳು ಗುಣ ಮತ್ತು ಪ್ರಮಾಣದಲ್ಲಿ ಭಾಷೆಯ ಗ್ರಹಿಕೆಯ ವಲಯದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಮುಖ್ಯವಾಗಿ ಗಣಿತದ ಕಲಿಕೆಯಲ್ಲಿ ತಪ್ಪುಗಳನ್ನು ತಿದ್ದುವ, ಆ ಮೂಲಕ ಸರಿಪಡಿಸುವ ಅವಕಾಶ ಇದ್ದೇ ಇರುತ್ತದೆ. ಆದರೆ ಭಾಷಾಗ್ರಹಿಕೆಯಲ್ಲಿ ಮಕ್ಕಳ ಭಾಷಾದೋಷಗಳನ್ನು ತಿದ್ದುವುದು ಹೊರಗಿನ ಪ್ರಯತ್ನಗಳಿಂದ ಸಾಧ್ಯವಿಲ್ಲ. ಈ ಬಗೆಗೆ ನಡೆದಿರುವ ಶೋಧಗಳು ಮಕ್ಕಳು ಹೊರಗಿನಿಂದ ಬಂದ ತಿದ್ದುವಿಕೆಯ ಸೂಚನೆಗಳನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೆಂಬುದನ್ನು ಸೂಚಿಸುತ್ತವೆ. ಆ ದೋಷಗಳನ್ನು ಮಕ್ಕಳೇ ತಮಗೆ ತಾವು ಯಾವುದೋ ಹಂತದಲ್ಲಿ ಸರಿಪಡಿಸಿಕೊಳ್ಳುತ್ತಾರೆ. ತೀರ ಸರಳಗೊಳಿಸಿದಂತೆ ಈ ಮಾತು ತೋರುತ್ತದೆ. ಅದನ್ನು ಇನ್ನಷ್ಟು ವಿವರಗಳಲ್ಲಿ ಪರಿಶೀಲಿಸುವ ಅಗತ್ಯವಿದೆ. ಅಂತಹ ಎರಡು ನೆಲೆಗಳನ್ನು ಮುಂದೆ ಚರ್ಚಿಸಲಾಗುತ್ತಿದೆ. ಒಂದು: ಮಕ್ಕಳು ಭಾಷೆಯನ್ನು ಪಡೆದುಕೊಳ್ಳುವಾಗ ಅವರಿಗೆ ಒಂದು ಭಾಷಾಪರಿಸರ ಅಗತ್ಯ ಎಂದೆವು. ಈ ಭಾಷಾಪರಿಸರ ಮಗುವಿಗೆ ಭಾಷೆಯ ಎಲ್ಲ ಸಾಧ್ಯತೆಗಳನ್ನು ತಾನೇ ತೆರೆದು ತೋರಿಸುವುದಿಲ್ಲ. ಹಾಗೆ ನೋಡಿದರೆ ಮಕ್ಕಳು ತಮ್ಮ ಮೊದಲ ಭಾಷೆಯನ್ನು ಕಲಿಯುವಾಗ ಅದಕ್ಕೆ ನಾವು ಒದಗಿಸುವ ಸಾಮಗ್ರಿ ಅತ್ಯಂತ ಕನಿಷ್ಠವಾಗಿರುತ್ತದೆ. ತುಂಡುತುಂಡಾಗಿರುತ್ತದೆ ಮತ್ತು ಅಸ್ಪಷ್ಟವಾಗಿರುತ್ತದೆ. ಆದರೆ ಅದು ಯಾವುದೂ ಮಗು ಒಂದು ಸುವ್ಯವಸ್ಥಿತ ಭಾಷೆಯನ್ನು ಪಡೆದುಕೊಳ್ಳಲು ಅಡ್ಡಿಮಾಡುವುದಿಲ್ಲ. ಶಾಲೆಯ ಪರಿಸರದಲ್ಲೂ ಮಗುವಿಗೆ ಇನ್ನೊಂದು ಭಾಷೆಯ ಮಾಹಿತಿಯನ್ನು ಸುವ್ಯವಸ್ಥಿತವಾಗಿ ಪಡೆದುಕೊಳ್ಳಲು ಅಡ್ಡಿ ಮಾಡಲಾರದು. ಎರಡು: ಆದರೆ ಶಾಲೆಯ ಕಲಿಕೆಯ ಬೇರೆ ಕೆಲವು ಅಂಶಗಳು ಮಗುವಿಗೆ ಅಡ್ಡಿಗಳನ್ನು

ಉಂಟುಮಾಡಬಹುದು. ಅಲ್ಲಿ ಕಲಿಕೆಗೆಂದು ನಿಯುಕ್ತರಾದವರು ಭಾಷಾಗ್ರಹಿಕೆಯ ಈ ಪ್ರಕ್ರಿಯೆಯ ಪರಿಚಯವನ್ನೇ ಪಡೆದಿರುವುದಿಲ್ಲ. ತಾವೇ ಕಲಿಸುವವರು, ತಮಗೆ ಗೊತ್ತಿರುವುದನ್ನು ಮಗುವಿನ ತಲೆಯ ಖಾಲಿ ಹಲಗೆಯ ಮೇಲೆ ಬರೆಯುತ್ತೇವೆಂದು ತಿಳಿದಿರುತ್ತಾರೆ. ಇದು ಕೆಲವು ತೊಂದರೆಗಳಿಗೆ ಕಾರಣವಾಗುತ್ತದೆ. ಇದರೊಡನೆ ಸೇರಿಕೊಳ್ಳುವ ಅಂಶವೆಂದರೆ ಶಾಲೆಯಲ್ಲಿ ಭಾಷಾಕಲಿಕೆಯಲ್ಲಿ ಗ್ರಹಿಕೆಯ ಕೌಶಲಗಳ ಜೊತೆಗೆ ಅಭಿವ್ಯಕ್ತಿ ಕೌಶಲಗಳು ಸೇರುತ್ತವೆ. ಇದು ಸಹಜ. ಆದರೆ ನಾವು ಇದುವರೆಗೂ ವಿವರಿಸಿಕೊಂಡ ಭಾಷಾಗ್ರಹಿಕೆಯ ಹೊಸ ಸಿದ್ಧಾಂತಗಳು ಭಾಷೆಯ ಮಾತಿನ ಸ್ತರವನ್ನು ಕುರಿತು ಚರ್ಚಿಸುತ್ತವೆಯೇ ಹೊರತು ಬರವಣಿಗೆ ಸ್ತರವನ್ನು ಕುರಿತು ಅಲ್ಲ. ಅಂದರೆ ಮಗುವು ಭಾಷೆಯನ್ನು ಕಲಿಯುವಾಗ ಅದರಲ್ಲೂ ಮೆದುಳಿನ ಅಂತಸ್ಥ ಸಾಮರ್ಥ್ಯವನ್ನು ಬಳಸಿ ಯಾವುದೇ ಭಾಷೆಯನ್ನು ಪಡೆದುಕೊಳ್ಳುವಾಗ ಮಾತಿನ ಸ್ತರದಲ್ಲಿ ತೊಂದರೆಗಳು ಉಂಟಾಗದಿದ್ದರೂ ಬರವಣಿಗೆಯ ಸ್ತರಕ್ಕೆ ಹೋದಾಗ ಬೇರೆಯ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ನಾವು ಈ ಹಂತದ ತೊಂದರೆಗಳನ್ನೇ ಮಗು ಭಾಷಾಕಲಿಕೆಯಲ್ಲಿ ಅನುಭವಿಸುವ ತೊಂದರೆ ಎಂದು ಸರಳೀಕರಿಸಿಬಿಡುತ್ತೇವೆ.

ಹಾಗೆ ನೋಡಿದರೆ ಮಗು ತಾನು ಕಲಿತ ಮೊದಲ ಭಾಷೆಯನ್ನು ಮಾತ್ರ ಇರಿಸಿಕೊಂಡು ಶಾಲೆಯಲ್ಲಿ ಅದೇ ಭಾಷೆಯಲ್ಲಿ ಬರೆಯುವ ಮತ್ತು ಓದುವ ಕೌಶಲಗಳನ್ನು ಕಲಿಯತೊಡಗಿದ್ದಾಗಲೂ ತೊಂದರೆಯನ್ನು ಅನುಭವಿಸುತ್ತದೆ. ಇದು ಎಲ್ಲಾ ಕಲಿಕೆಗಳ ಸಾಮಾನ್ಯ ಸಮಸ್ಯೆ. ಓದುವುದು ಮತ್ತು ಬರೆಯುವುದು ಕಣ್ಣು, ಕಿವಿ, ಕೈ ಬೆರಳುಗಳು ಮತ್ತು ದೇಹದ ಬೇರೆ ಬೇರೆ ಸ್ನಾಯುಗಳು ಒಟ್ಟಾಗಿ ಹೊಸ ತರಬೇತಿಗೆ ಸಿದ್ಧವಾಗುವ ಪ್ರಕ್ರಿಯೆ. ಇದು ಇಂಗ್ಲಿಶ್ ಕಲಿಕೆಗೆ ಎಷ್ಟು ಕಠಿಣವೋ ಕನ್ನಡ ಕಲಿಕೆಗೂ ಅಷ್ಟೇ ಕಠಿಣ.

ಔಪಚಾರಿಕ ಶಿಕ್ಷಣದಲ್ಲಿ ನಾವು ಭಾಷಾಕೌಶಲಗಳನ್ನು ಕಲಿಸುವಾಗ ಓದುವುದು ಮತ್ತು ಬರೆಯುವುದು ಎಂಬ ಕೌಶಲಗಳು ಮೊದಲ ಪ್ರಾಶಸ್ತ್ಯ ಪಡೆಯುತ್ತವೆ. ಮಾತಾಡುವುದು ಮತ್ತು ಆಲಿಸುವುದು ಪ್ರಥಮ ಭಾಷೆಯ ಮಟ್ಟಿಗೆ ಈಗಾಗಲೇ ನೆಲೆಗೊಂಡ ಕೌಶಲಗಳಾಗಿರುತ್ತವೆ. ಈ ಹಂತದಲ್ಲಿ ಅವನ್ನು ಪರಿಷ್ಕರಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಲಾಗುತ್ತದೆ. ಎರಡನೆಯ ಅಥವಾ ಮೂರನೆಯ ಭಾಷೆಯ ವಿಚಾರದಲ್ಲಿ ಈ ನಾಲ್ಕು ಕೌಶಲಗಳನ್ನೂ ಶಾಲೆಯಲ್ಲೇ ಕಲಿಯಬೇಕಾಗುತ್ತದೆ. ಇದು ಸಂಕೀರ್ಣವಾದ ಸನ್ನಿವೇಶ. ಮಕ್ಕಳ ಭಾಷಾಕಲಿಕೆಯಲ್ಲಿ ತೊಂದರೆಗಳು ಯಾವ ಅಂಶದಿಂದ ಉಂಟಾಗಿವೆ ಎಂಬುದನ್ನು ಕಂಡುಕೊಳ್ಳದಿದ್ದರೆ ಆಗ ಪರಿಹಾರಗಳನ್ನು ಸೂಚಿಸುವುದು ಅಸಾಧ್ಯವಾಗುತ್ತದೆ. ಅಥವಾ ನಾವು ಸೂಚಿಸಿದ ಮತ್ತು ಬಳಸಿದ ಪರಿಹಾರಗಳು ಕಾರ್ಯಸಾಧುವಾಗಿ ತೋರುವುದಿಲ್ಲ. ನಮ್ಮ ಶಾಲಾ ಶಿಕ್ಷಣದಲ್ಲಿ ಕನ್ನಡ ಕಲಿಕೆಗೆ ಇರುವ ಸಮಸ್ಯೆಗಳನ್ನು ಈ ನಿಟ್ಟಿನಲ್ಲಿ ನಾವು ಗ್ರಹಿಸಿ ಪರಿಶೀಲಿಸಬೇಕಾಗುತ್ತಿದೆ.

ಮಾತಾಡುವ ಭಾಷೆ ಮಗುವಿಗೆ ಸಹಜವಾಗಿ ಲಭ್ಯವಾಗಿದ್ದು ಅದನ್ನು ಬರೆಯ ಹೊರಟಾಗ ಎರಡು ಸಮಸ್ಯೆಗಳು ಉಂಟಾಗುತ್ತವೆ. ಒಂದು: ಧ್ವನಿಗಳನ್ನು ಸಂಕೇತಿಸುವ

ಲಿಪಿವ್ಯವಸ್ಥೆಯನ್ನು ಮತ್ತು ಅದರ ವಿವಿಧ ಬಗೆಯ ಸಂಯೋಜನೆಯನ್ನು ಕಲಿಯುವುದು. ಎರಡು: ಹೀಗೆ ಕಲಿತು ಬರೆಯ ಹೊರಡುವ ಭಾಷೆಯು, ಮಗು ಈವರೆಗೆ ಮಾತಾಡಲು ಬಳಸಿದ ಭಾಷೆಗಿಂತ ಬೇರೆಯೇ ಆಗಿರುವುದು. ಹೆಚ್ಚು ತರಬೇತಿಯ ಮೂಲಕ ಮಗುವಿಗೆ ಬರೆಹ ವ್ಯವಸ್ಥೆಯ ಪರಿಕರಗಳು ಕೈವಶವಾಗುವಂತೆ ಮಾಡಬಹುದು. ಆದರೆ ಎರಡನೆಯ ಸಮಸ್ಯೆ ಇಷ್ಟು ಸರಳವಾದುದಲ್ಲ. ತಾನು ಬರೆಯುತ್ತಿರುವ ಪದದ ರೂಪ ತಾನು ಉಚ್ಚರಿಸುವ ಪದಕ್ಕಿಂತ ಬೇರೆಯೇ ಆಗಿದೆ ಎಂಬುದು ಮಕ್ಕಳಿಗೆ ಗೊತ್ತಾಗುತ್ತದೆ. ಅಲ್ಲದೆ ತಾನು ಉಚ್ಚರಿಸುವ ರೀತಿಯಲ್ಲೇ ಬರೆದರೆ ಅದಕ್ಕೆ ಮಾನ್ಯತೆ ದೊರಕದು ಎಂಬುದು ಗೊತ್ತಾಗುತ್ತದೆ. ಇದಕ್ಕೆ ಕಾರಣ ಮಕ್ಕಳಿಗೆ ನಾವು ಹೇಳಿಕೊಡುವ ಬರೆಯುವ ರೂಪ ಅವರು ಮಾತಾಡುವ ರೂಪವಾಗಿರುವುದಿಲ್ಲ. ಅದು ನಾವು ಓದುವ ರೂಪವಾಗಿರುತ್ತದೆ ಎಂಬುದನ್ನು ಮಗು ತಿಳಿದುಕೊಳ್ಳಬೇಕಾಗುತ್ತದೆ. ಇದು ಒಂದು ಅಲಿಖಿತ ನಿಯಮ. ಈ ಓದುವ ರೂಪ ಮಕ್ಕಳಿಗೆ ಕೈವಶ ಆಗುವ ತನಕ ಅವರು ಬರೆಯುವ ರೀತಿಯಲ್ಲಿ ದೋಷಗಳು ಉಳಿದೇ ಬಿಡುತ್ತವೆ. ಇದರ ಇನ್ನೊಂದು ಮುಖವೆಂದರೆ ಬರೆಯಲು ಕಲಿಯುತ್ತಿರುವ ಮಗು, ಅದಕ್ಕೆ ಆಧಾರವಾದದ್ದು ತನ್ನ ಓದಿನ ರೂಪ ಎಂದು ಖಚಿತಪಡಿಸಿಕೊಂಡ ಪರಿಣಾಮವಾಗಿ ತನ್ನ ಮಾತಿನ ಭಾಷೆಯನ್ನು ಬದಲಾಯಿಸಿಕೊಳ್ಳುವ ಒತ್ತಾಯಕ್ಕೆ ಒಳಗಾಗುತ್ತದೆ. ಇದಕ್ಕೆ ಮಕ್ಕಳು ಎರಡು ರೀತಿಯಲ್ಲಿ ಪ್ರತಿಕ್ರಿಯಿಸಬಹುದು. ಒಂದು: ತಾವು ಬರೆದ ರೀತಿಯಲ್ಲೇ ಅದೇ ರೂಪವನ್ನು ಬಳಸಿ ಮಾತನಾಡುವುದು. ಎರಡು: ಮಾತನಾಡುವುದನ್ನೇ ಸಾಧ್ಯವಿದ್ದಷ್ಟು ತಪ್ಪಿಸುವುದು. ಇವೆರಡೂ ಅಸಹಜ ಪ್ರತಿಕ್ರಿಯೆಗಳೇ ಆಗಿವೆ. ನಮ್ಮ ಕಲಿಯುವ ಮಕ್ಕಳು ಕನ್ನಡವನ್ನು ಏಕೆ ವಿಚಿತ್ರ ರೀತಿಯಲ್ಲಿ ಮಾತಾಡುತ್ತಾರೆ ಅಥವಾ ಮಾತಾಡುವುದೇ ಇಲ್ಲ ಎಂಬುದಕ್ಕೆ ಈ ನಿಟ್ಟಿನಲ್ಲಿ ಉತ್ತರ ಕಂಡುಕೊಳ್ಳಬೇಕಾಗಿದೆ. ಇದು ಸಮಸ್ಯೆಯ ಒಂದು ಮುಖಮಾತ್ರ. ಬರೆವಣಿಗೆ ಕಲಿತ ಮಕ್ಕಳು ಅದನ್ನು ವ್ಯಾಪಕವಾಗಿ ತಮ್ಮ ವಯಸ್ಕ ಹಂತದಲ್ಲಿ ಬಳಸುವುದಿಲ್ಲ. ಆದ್ದರಿಂದ ಅವರು ಮಾತಾಡುವ ರೀತಿಯು ಆ ವಯಸ್ಸಿನಲ್ಲಿ ಯಾವ ಮಾನದಂಡದಿಂದ ನಿಯಂತ್ರಿತವಾಗಬೇಕು ಎಂಬ ಗೊಂದಲ ಉಳಿಯುತ್ತದೆ. ಇದು ಒಟ್ಟು ಪರಿಸ್ಥಿತಿಯನ್ನು ಎಷ್ಟು ಗೋಜಲು ಮಾಡಿದೆ ಎಂದರೆ ಔಪಚಾರಿಕವಾಗಿ ಮಾತಾಡುವುದು ಶಿಕ್ಷಿತ ಕನ್ನಡಿಗರಿಗೆ ಒಂದು ಹಿಂಸೆಯ ಪ್ರಸಂಗವೆಂದು ತೋರುತ್ತಿದೆ. ನಾವು ನಮ್ಮ ಶಿಕ್ಷಣ ಕ್ರಮದ ಸಮಸ್ಯೆಗಳನ್ನು ಸರಿಯಾದ ಚೌಕಟ್ಟಿನಲ್ಲಿ ಗ್ರಹಿಸಿ ಪರಿಹರಿಸದಿದ್ದರೆ ಔಪಚಾರಿಕ ಆಡುಕನ್ನಡ ಎಂಬುದು ಒಂದು ಗಗನ ಕುಸುಮವಾಗಿಯೇ ಉಳಿಯಬಹುದು.

ನಾವು ಭಾಷಾರಚನೆಯನ್ನು ಕಲಿಸುವ ವಿಧಾನದಲ್ಲೇ ಕೆಲವು ದೋಷಗಳಿವೆ. ಈ ದೋಷಯುಕ್ತ ಕ್ರಮದ ಪರಿಣಾಮವಾಗಿ ಕಲಿತ ಮಕ್ಕಳು ತಮ್ಮ ಭಾಷಾ ಕೌಶಲಗಳಲ್ಲಿ ಕೊರತೆಯನ್ನು ಅನುಭವಿಸುತ್ತಿದ್ದಾರೆ. ಆದರೆ ಸಾರ್ವಜನಿಕ ನೆಲೆಯ ಅಭಿಪ್ರಾಯಗಳಲ್ಲಿ ಈ ಫಲಿತಾಂಶಕ್ಕೆ ಕಾರಣಗಳು ಮಕ್ಕಳ ಅನಾಸಕ್ತಿಯಲ್ಲಿದೆ. ಅಥವಾ ಅದನ್ನೇ ಮುಂದುವರೆಸಿ ಅದನ್ನು ಸಂಸ್ಕೃತಿಯ ಬೇರೆ ಯಾವುದೋ ವಿನ್ಯಾಸಕ್ಕೆ ಗಂಟು ಹಾಕುವುದುಂಟು. ಶಿಕ್ಷಣಕ್ರಮದಲ್ಲೇ ಅಂದರೆ ಕಲಿಸುವ ವಿಧಾನದಲ್ಲೇ ದೋಷಗಳಿರಬಹುದು ಎಂದು

ಯೋಚಿಸುವ ಧೈರ್ಯವನ್ನು ಮಾಡುತ್ತಿಲ್ಲ. ಅಂತಹ ಕೆಲವು ನೆಲೆಗಳನ್ನು ನಾವೀಗ ಗಮನಿಸೋಣ.

ಮಕ್ಕಳಿಗೆ ಭಾಷೆಯನ್ನು ಕಲಿಸುವಾಗ ಈಗ ನಾವು ಬಳಸುತ್ತಿರುವುದು ವಿಶ್ಲೇಷಣೆಯ ನೆಲೆಯನ್ನೇ ಹೊರತು ಸಂಶ್ಲೇಷಣೆಯ ನೆಲೆಯನ್ನಲ್ಲ. ಈ ಹೇಳಿಕೆಯನ್ನು ನಿದರ್ಶನಗಳೊಂದಿಗೆ ಪರಿಶೀಲಿಸಬಹುದು. ಪಠ್ಯಪುಸ್ತಕಗಳಲ್ಲಿ ವ್ಯಾಕರಣಾಂಶಗಳನ್ನು ಹೇಳಿಕೊಡುವ ಭಾಗವೊಂದಿರುತ್ತದೆ. ಮೂರುನಾಲ್ಕು ದಶಕಗಳ ಹಿಂದೆ ವ್ಯಾಕರಣವನ್ನೇ ನೇರವಾಗಿ ಪಠ್ಯವಿಷಯವನ್ನಾಗಿ ಮಾಡಿಕೊಂಡು ಬೋಧಿಸುವ ಪದ್ಧತಿ ಇತ್ತು. ಅನಂತರದ ಅವಧಿಯಲ್ಲಿ ಅದನ್ನು ಪಠ್ಯದ ಅಂಗವನ್ನಾಗಿ ಮಾಡಿ ಕಲಿಸಲಾಗುತ್ತಿದೆ. ಅಂದರೆ ಒಂದು ಪಾಠವನ್ನು ಕಲಿಯುವಾಗ ಅದರಲ್ಲಿ ಇರುವ ವ್ಯಾಕರಣಾಂಶಗಳ ಕಡೆಗೆ ಕಲಿಯುವವರ ಗಮನ ಸೆಳೆಯಲಾಗುತ್ತದೆ. ನಿಯೋಗಾತ್ಮಕ ವ್ಯಾಕರಣ ಕಲಿಕೆ ಎಂದು ಈ ವಿಧಾನವನ್ನು ಕರೆಯಲಾಗಿದೆ. ಹೀಗೆ ಮಾಡುವುದರಿಂದ ಮಕ್ಕಳಿಗೆ ವ್ಯಾಕರಣವೆಂದರೆ ತಲೆನೋವೆಂದು ತೋರುವುದಿಲ್ಲ ಎಂಬ ಸಮರ್ಥನೆಯು ಇದಕ್ಕಿದೆ. ವಿಧಾನ ಬೇರೆಯದಾದರೂ ಎರಡು ಬಗೆಗಳಲ್ಲೂ ಅನಗತ್ಯವಾದ ಸಂಗತಿಗಳು ಮಹತ್ವವನ್ನು ಪಡೆದುಕೊಂಡಿವೆ. ಉದಾ.ಗೆ ಸಂಧಿ ಪ್ರಸಂಗವನ್ನೇ ಗಮನಿಸಬಹುದು. ಕನ್ನಡದ ಸಂಧಿಗಳೆಂದು ಮೂರನ್ನು, ಸಂಸ್ಕೃತ ಸಂಧಿಯೆಂದು ನಾಲ್ಕು-ಐದು ಸಂಧಿಗಳನ್ನು ಮಕ್ಕಳಿಗೆ ಹೇಳಿಕೊಡುವುದುಂಟು. ಹೀಗೆ ಹೇಳಿಕೊಡುವಾಗ ಸೂತ್ರ ಅಥವಾ ಸಂಧಿನಿಯಮ ಮತ್ತು ನಿದರ್ಶನ ಎಂಬ ಮಾದರಿ ಬಳಕೆಯಾಗುತ್ತದೆ. ಜೊತೆಗೆ ಅಂತಹ ನಿಯಮವನ್ನು ಬಳಸಿ ಸಂಧಿವಿಶ್ಲೇಷಣೆ ಮಾಡಲು ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸಲಾಗುತ್ತದೆ. ಸಂಧಿ ಒಂದು ಧ್ವನಿರಚನೆ. ಈ ಧ್ವನಿರಚನೆಯ ನಿಯಮ ಮಕ್ಕಳ ಭಾಷಾ ಸಾಮರ್ಥ್ಯದಲ್ಲಿ ಈಗಾಗಲೇ ಅಂತಸ್ಥವಾಗಿರುತ್ತದೆ. ಅದು ಏನೆಂಬುದು ನಮಗೆ ಗೊತ್ತಿಲ್ಲದಿದ್ದರೂ ಅದರ ಸರಿಯಾದ ಅನ್ವಯಕ್ರಮದಲ್ಲಿ ಭಾಷಿಕರು ತಪ್ಪುಗಳನ್ನು ಮಾಡುವುದಿಲ್ಲ. ಹೀಗಿರುವಾಗ ಈ ನಿಯಮಗಳನ್ನು ವಿಶ್ಲೇಷಣೆಯ ನೆಲೆಯಲ್ಲಿ ಕಲಿಸುವ ಅಗತ್ಯ ಏನಿದೆ? ಮಕ್ಕಳು ಭಾಷೆಯ ಬಳಕೆದಾರರೇ ಹೊರತು ಅದರ ರಚನೆಯನ್ನು ಅಭ್ಯಾಸಮಾಡುವವರಲ್ಲ. ಹೀಗೆ ಅಂತಸ್ಥ ನಿಯಮವೊಂದನ್ನು ತಿಳಿಸುವ ಬದಲು ಆ ನಿಯಮ ಬಳಕೆಯಾಗುವ ಕ್ರಮವನ್ನು ಕಲಿಯುವವರು ಹೇಗೆ ಪ್ರಯುಕ್ತಗೊಳಿಸುತ್ತಾರೆ ಎಂಬುದನ್ನು ಹೊಸ ಹೊಸ ಸನ್ನಿವೇಶಗಳಲ್ಲಿ ಅನ್ವಯಿಸಿ ನೋಡುವ ಸಂಶ್ಲೇಷಣಾತ್ಮಕ ವಿಧಾನವೇ ಹೆಚ್ಚು ಸೂಕ್ತವಾದದ್ದು. ಇಡೀ ವಾದವನ್ನು ಸರಳವಾಗಿ ಹೀಗೆ ವಿವರಿಸಬಹುದು. 'ಮನೆಯಲ್ಲಿ' ಎಂಬ ಪದವನ್ನು ನೀಡಿ ಅದನ್ನು ಒಡೆದು ಹೇಳಬೇಕೆಂದು ಕಲಿಸುವ ಬಗೆ ವಿಶ್ಲೇಷಣಾತ್ಮಕವಾದದ್ದು. ಅದರ ಬದಲು ಮನೆ, ತಲೆ, ಕಿಟಕಿ, ಬಾಗಿಲು, ನೆಲ, ಮತ್ತು ಅಲ್ಲಿ ಎಂಬ ರೂಪಗಳನ್ನು ನೀಡಿ ಅವುಗಳ ಸಂಯೋಜನೆಯಿಂದ ಯಾವ ರೂಪಗಳು ಸಿಗುತ್ತವೆ ಎಂದು ಹೇಳಲು ಅಭ್ಯಾಸ ಮಾಡಿಸುವುದು ಸಂಶ್ಲೇಷಣೆಯ ವಿಧಾನ. ಹೀಗೆ ಮಾಡುವಾಗ ಮಕ್ಕಳು ಭಾಷೆಯನ್ನು ಕಟ್ಟುತ್ತಿರುತ್ತಾರೆ. ಮೊದಲ ವಿಧಾನದಲ್ಲಿ ಭಾಷೆಯನ್ನು ಒಡೆಯುತ್ತಿರುತ್ತಾರೆ. ಕೊನೆಗೂ ಭಾಷಾಬಳಕೆಯೆಂದರೆ ಭಾಷೆಯನ್ನು ಲಭ್ಯ ಅಂತಸ್ಥ ನಿಯಮಗಳಿಂದ ಕಟ್ಟುವುದೇ ಹೊರತು ಅದನ್ನು ಚಿಕ್ಕಚಿಕ್ಕ ಘಟಕಗಳಾಗಿ ಒಡೆಯುವುದಲ್ಲ.

ಈ ವಾದವನ್ನು ನಿರಾಕರಿಸುವವರು, ಹಾಗಿದ್ದರೆ ಭಾಷಿಕರು ಭಾಷೆಯನ್ನು ಓದಿದಾಗ ಅಥವಾ ಕೇಳಿದಾಗ ಕೇಳಿದ ಅಥವಾ ಓದಿದ ಭಾಷಾರೂಪಗಳನ್ನು ಒಡೆದು ಅರ್ಥಮಾಡಿಕೊಳ್ಳುತ್ತಾರಲ್ಲವೇ, ಅದಕ್ಕೆ ಹೀಗೆ ಒಡೆಯುವುದನ್ನು ಕಲಿಸುವುದು ಅಗತ್ಯವಲ್ಲವೇ ಎಂಬ ಪ್ರಶ್ನೆಯನ್ನು ಮುಂದಿಡಬಹುದು. ಆದರೆ ಭಾಷೆಯ ಗ್ರಹಿಕೆಯ ಕೌಶಲಗಳು ನಾವು ತಿಳಿಯುವ ರೀತಿಯಲ್ಲೇ ವಿಶ್ಲೇಷಣಾತ್ಮಕ ನೆಲೆಯಲ್ಲಿ ಇರುತ್ತವೆಂದು ವಾದಿಸಲು ನಿರ್ದಿಷ್ಟ ಕಾರಣಗಳಿಲ್ಲ. ಅದರಲ್ಲೂ ಭಾಷೆಯ ಧ್ವನಿಸ್ವರ ಮತ್ತು ಅರ್ಥಸ್ವರಗಳು ಬೆರೆತುಕೊಂಡ ವಿಧಾನದಲ್ಲಿ ನಮ್ಮ ಗ್ರಹಿಕೆಯ ವಿಧಾನ ಬಿಡಿಯಿಂದ ಇಡಿಯ ಕಡೆಗೆ ಎಂಬ ತರ್ಕವನ್ನು ಅವಲಂಬಿಸುವುದಿಲ್ಲ. ಈ ಮಾತಿಗೆ ಸರಳ ಪುರಾವೆ ಇವೆ. ನಾವು ಕೇಳುವ ಮಾತಿನಲ್ಲಿ ಪ್ರತಿಯೊಂದು ಧ್ವನಿ, ಪದ ಪದರಚನೆಗಳನ್ನು ಬಿಡಿಬಿಡಿಯಾಗಿಯೇ ಗ್ರಹಿಸುವುದಿಲ್ಲ. ಓದುವಾಗಲೂ ನಮ್ಮ ಓದು ಹರಿಯುವ ರೀತಿಯಲ್ಲಿ ಒಂದೊಂದು ಘಟಕವನ್ನು ಅರ್ಥಮಾಡಿಕೊಂಡು ಅನಂತರ ಇಡೀ ಅರ್ಥವನ್ನು ಗ್ರಹಿಸುವುದಿಲ್ಲ. ನಮ್ಮ ಅರ್ಥಗ್ರಹಿಕೆಗೆ ಎಷ್ಟೋ ವೇಳೆ ಬಿಡಿ ಘಟಕಗಳ ಅಗತ್ಯ ಇರುವುದಿಲ್ಲ. ಹಾಗಾಗಿ ನಾವು ಕೇಳಿದಾಗ ಇಲ್ಲವೇ ಓದಿದಾಗ ಸಂಶ್ಲೇಷಣೆಯ ನೆಲೆಯಲ್ಲಿ ಇರುತ್ತವೆಯೇ ಹೊರತು ವಿಶ್ಲೇಷಣೆಯ ನೆಲೆಯಲ್ಲಿ ಇರುವುದಿಲ್ಲ. ಆದ್ದರಿಂದ ನಾವು ಭಾಷೆಯನ್ನು ಕಲಿಸುತ್ತಿರುವ ವಿಧಾನದಲ್ಲೇ ತಪ್ಪುಗಳಿವೆ. ಸಂಧಿಯ ಪ್ರಸಂಗದಂತೆ ಇನ್ನೂ ಬೇರೆಬೇರೆ ವ್ಯಾಕರಣಾಂಗಗಳ ನಿದರ್ಶನವನ್ನು ಉದಾಹರಿಸಿ ಚರ್ಚಿಸಬಹುದು. ಆದರೆ ಅದರ ಅಗತ್ಯವಿಲ್ಲ. ಇಲ್ಲಿ ಅವಕಾಶವೂ ಇಲ್ಲ.

ಇನ್ನೊಂದು ಇಂಥದೇ ದೋಷಪೂರ್ಣ ಕಲಿಕೆಯ ಅಂಶವನ್ನು ನಾವೀಗ ಗಮನಿಸಬಹುದು. ಇದು ನಾವು ಕಲಿಸುತ್ತಿರುವ ನಿಷೇಧ ಪದ ಮತ್ತು ವಿರುದ್ಧ ಪದ ಎಂಬ ಪರಿಕಲ್ಪನೆಗಳಿಗೆ ಸಂಬಂಧಿಸಿದೆ. ಯಾವುದೇ ಶಾಲಾಪಠ್ಯವನ್ನು ತೆಗೆದು ನೋಡಿದರೂ ಅದರಲ್ಲಿ ಭಾಷಾಭ್ಯಾಸ ಸೂಚಿಯಲ್ಲಿ ಈ ನಿಷೇಧ ಪದಗಳನ್ನು ಮತ್ತು ವಿರುದ್ಧ ಪದಗಳನ್ನು ಕಂಡುಹಿಡಿಯಲು, ಹೇಳಲು ಕಲಿಸುವ ಭಾಗಗಳು ಇರುತ್ತವೆ. ಈ ಪದವರ್ಗಗಳ ಕಲ್ಪನೆಯೇ ಅವಾಸ್ತವಿಕ. ಉದಾ.ಗೆ ಯಾವುದೇ ಒಂದು ಪದಕ್ಕೆ ವಿರುದ್ಧಪದ ನೀಡುವುದನ್ನು ಗಮನಿಸಿ. ಅಧ್ಯಾಪಕರು, ಪೋಷಕರು ಈ ಪರಿಕಲ್ಪನೆಯಿಂದ ಎಷ್ಟು ಗೊಂದಲಕ್ಕೆ ಒಳಗಾಗುತ್ತಾರೆ ಎಂಬುದನ್ನು ಊಹಿಸುವುದೂ ಸಾಧ್ಯವಿಲ್ಲ. ಅಂತಹ ಕೆಲವು ಪದಜೋಡಿಗಳನ್ನು ಇಲ್ಲಿ ಗಮನಿಸೋಣ. ರಾತ್ರಿ-ಹಗಲು, ಬೆಳಕು-ಕತ್ತಲು, ತಲೆ-ಕಾಲು, ಭೂಮಿ-ಆಕಾಶ ಹೀಗೆ ವಿರುದ್ಧ ಪದಗಳ ಪಟ್ಟಿ ಮುಂದುವರೆಯುತ್ತದೆ. ಈ ಜೋಡಿಗಳಲ್ಲಿ ಅಸಂಗತವಾದ ಲೋಕವಿಭಜನೆ ಇರುವುದು ಎಷ್ಟೋ ವೇಳೆ ಗಮನಕ್ಕೆ ಬರುತ್ತದೆ. ಮತ್ತು ಕೆಲವೊಮ್ಮೆ ಸಾಮಾಜಿಕ ನೀತಿಗೆ ಹೊಂದದ ವಿಭಜನೆಗಳು ಇರುತ್ತವೆ. ಉದಾ.ಗೆ ಹಿಂದು-ಮುಸ್ಲಿಂ, ಗಂಡ- ಹೆಂಡತಿ, ಬುದ್ಧಿವಂತ-ದಡ್ಡ ಹೀಗೆ. ಈ ವಿರುದ್ಧತೆಯ ಪರಿಕಲ್ಪನೆಯಿಂದ ನಾವು ಕಲಿಯುವವರ ಗ್ರಹಿಕೆಯ ಜಗತ್ತನ್ನು ಪರಸ್ಪರ ವಿರುದ್ಧವುಳ್ಳ ವರ್ಗಗಳನ್ನಾಗಿ ವಿಭಜಿಸಲು ಕಲಿಸುತ್ತಿರುತ್ತೇವೆ. ಹಾಗೆ ನೋಡಿದರೆ ಲೋಕವು ವಾಸ್ತವದಲ್ಲಿ ಗುಣ ಸಂಕುಲದ ನಿರಂತರತೆಯನ್ನು ಕಾಯ್ದುಕೊಂಡಿರುತ್ತದೆ. ಅದರಲ್ಲಿ ವಿರುದ್ಧ ಎಂಬುದು ಯಾವುದೇ ಹಂತದಲ್ಲಿ ಗೋಚರಿಸುವುದಿಲ್ಲ ಅಥವಾ

ಹಾಗೆ ಇದೆ ಎಂದು ಗ್ರಹಿಸುವುದು ನಮ್ಮ ತಿಳುವಳಿಕೆಯಲ್ಲಿರುವ ಕೊರತೆಯನ್ನು ತೋರಿಸುತ್ತದೆ. ಬುದ್ಧಿವಂತ-ದಡ್ಡ ಎಂಬ ವಿಭಜನೆಯನ್ನೇ ಗಮನಿಸಿ. ಬುದ್ಧಿ ಎನ್ನುವುದು ಒಂದು ಸಾಪೇಕ್ಷ ಕಲ್ಪನೆ. ಯಾವ ಚೌಕಟ್ಟಿನಲ್ಲಿ ಪರಿಶೀಲಿಸುತ್ತಿದ್ದೇವೆ ಎನ್ನುವುದನ್ನು ಅವಲಂಬಿಸಿ ನಿರ್ಧಾರವಾಗುವ ಅಂಶ. ಹಾಗಾಗಿ ಅದು ಒಂದು ಶುದ್ಧ ಪರಿಕಲ್ಪನೆಯಲ್ಲ. ಈ ವಿರೋಧ ವಿಭಜನೆಯಲ್ಲಿ ಒಂದು ಭಾವಾತ್ಮಕ ಅಥವಾ ಅಪೇಕ್ಷಣೀಯ ಸಂಗತಿಯೊಂದು ಬಿಂಬಿತವಾಗುತ್ತದೆ. ಈ ಪರಿಕಲ್ಪನೆಯು ದೋಷಪೂರ್ಣವಾದದ್ದು.

ನಿಷೇಧ ಪದಗಳದ್ದೂ ಇದೇ ಕತೆ. ನಿಷೇಧ ಎನ್ನುವುದು ಒಂದು ಭಾಷಿಕ ಅಂಶ. ಅದಕ್ಕೆ ಲೋಕಸಂವಾದಿತ್ವ ಇರುವುದಿಲ್ಲ. ಸಾಮಾನ್ಯವಾಗಿ ನಿಷೇಧ ಪದಗಳನ್ನು ರೂಪಿಸುವಾಗ ಕೆಲವು ಪ್ರತ್ಯಯಗಳನ್ನು ಮೂಲಪದಕ್ಕೆ ಹತ್ತಿಸುವ ಪ್ರವೃತ್ತಿಯುಂಟು. ಇದು ಒಂದೊಂದು ಭಾಷೆಯಲ್ಲಿ ಒಂದೊಂದು ರೀತಿಯಲ್ಲಿ ಇರುತ್ತದೆ. ಸಂಸ್ಕೃತ ಭಾಷೆಯಿಂದ ಪದಗಳನ್ನು ಪಡೆದುಕೊಂಡಿರುವ ಕನ್ನಡ, ಆ ಭಾಷೆಯ ನಿಷೇಧ ರೂಪಗಳನ್ನು ಸ್ವತಂತ್ರ ಪದಗಳೆಂಬಂತೆ ಪಡೆದುಕೊಂಡಿದೆ. 'ಧೈರ್ಯ' ಪದ ಬಂದಿರುವಂತೆ 'ಅಧೈರ್ಯ' ಪದವೂ ಬಂದಿರುತ್ತದೆ. ಅದನ್ನು ಕನ್ನಡಿಗರು ತಾವೇ ರಚಿಸುವುದಿಲ್ಲ. ಇದೇ ರೀತಿ ಸಂಸ್ಕೃತದಿಂದ ಮತ್ತೂ ಕೆಲವು ಪದಗಳನ್ನು ಪಡೆದಿದ್ದೇವೆ. ಅವು ಗುಣದ ಅಸ್ತಿತ್ವವನ್ನು ನಿರಾಕರಿಸುವುದಿಲ್ಲ. ಆ ಗುಣದ ಸದ್ಯ ಪ್ರಯುಕ್ತತೆಯನ್ನು ನಿರಾಕರಿಸುತ್ತವೆ. ಇಂಗ್ಲಿಶಿನಿಂದಲೂ ಹೀಗೆಯೇ ಕೆಲವು ಪದಗಳು ಬಂದಿರುವುದುಂಟು. ಏನೇ ಆದರೂ ಕನ್ನಡದಲ್ಲಿ ನಿಷೇಧ ರೂಪಗಳನ್ನು ರಚಿಸಲು ಪ್ರತ್ಯಯಗಳನ್ನು ಬಳಸುವ ವಿಧಾನ ಇಲ್ಲ. ಮುಖ್ಯವಾಗಿ ಕ್ರಿಯಾಪದದ ಜೊತೆಯಲ್ಲಿ ಬಳಸಲಾಗುವ ಕೆಲವು ಪದ ಮತ್ತು ಪ್ರತ್ಯಯಗಳನ್ನು ಆಧರಿಸಿ ನಿಷೇಧಾರ್ಥವನ್ನು ಪಡೆಯುವ ವಿಧಾನ ಕನ್ನಡದಲ್ಲಿದೆ. 'ಇಲ್ಲ' ಮತ್ತು 'ಅಲ್ಲ' ಎಂಬ ಈ ಪದಗಳನ್ನು ಈ ಉದ್ದೇಶಕ್ಕಾಗಿ ಬಳಸುತ್ತೇವೆ. ಇಲ್ಲಿ ಸ್ಪಷ್ಟಪಡಿಸಬೇಕಾದ ಸಂಗತಿಯೆಂದರೆ ಕನ್ನಡದ ಈ ವಿಶೇಷ ಲಕ್ಷಣಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಕೇವಲ ನಿಷೇಧ ಪ್ರತ್ಯಯಗಳ ಬಳಕೆಯ ಮಾದರಿಯನ್ನೇ ಕಲಿಸುವ ಪಠ್ಯಗಳ ವಿಧಾನ ದೋಷಪೂರ್ಣವಾಗಿದೆ ಎಂಬುದು.

ದ್ವಿತೀಯ ಮತ್ತು ತೃತೀಯ ಭಾಷೆಗಳ ಬೋಧನೆ ಮತ್ತು ಕಲಿಕೆ

ಮೊದಲೇ ಹೇಳಿದಂತೆ ತ್ರಿಭಾಷಾಸೂತ್ರದ ಪರಿಣಾಮವಾಗಿ ಶಾಲಾಶಿಕ್ಷಣದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಡ್ಡಾಯವಾಗಿ ಮತ್ತು ಕ್ರಮಬದ್ಧವಾಗಿ ಕಲಿಯುವ ಒತ್ತಾಯ ಇದೆ. ಸೌಲಭ್ಯಕ್ಕಾಗಿ ದ್ವಿತೀಯ, ತೃತೀಯ ಎಂಬ ಪದಗಳನ್ನು ಬಳಸುತ್ತೇವೆ. ಇವು ಮಕ್ಕಳು ಭಾಷೆಗಳನ್ನು ಕಲಿಯುವ ಅನುಕ್ರಮವನ್ನಾಗಲೀ, ಆ ಭಾಷೆಗಳಲ್ಲಿ ಪಡೆಯುವ ಪ್ರಾವೀಣ್ಯವನ್ನಾಗಲೀ, ಅಥವಾ ಭಾಷೆಗಳು ಶಾಲಾಶಿಕ್ಷಣದಲ್ಲಿ ಪಡೆಯುವ ಪ್ರಾಧಾನ್ಯವನ್ನಾಗಲೀ ಸೂಚಿಸುವುದಿಲ್ಲ. ಪ್ರಸಂಗಾನುಸಾರವಾಗಿ ಈ ಸಂಖ್ಯೆಗಳಿಗೆ ಅರ್ಥವ್ಯತ್ಯಾಸ ಆಗುವುದು ಸಾಧ್ಯ. ಕರ್ನಾಟಕದಲ್ಲೇ ಕನ್ನಡವನ್ನು ಮನೆಯ ಮಾತನ್ನಾಗಿ ಪಡೆದ ಮಕ್ಕಳು ಎಷ್ಟೋ ಪ್ರಸಂಗಗಳಲ್ಲಿ ಔಪಚಾರಿಕವಾಗಿ ಅದನ್ನು ಕಲಿಯಬೇಕಾದ

ಪ್ರಸಂಗಗಳು ಬರುವುದೇ ಇಲ್ಲ. ಹಾಗಿರುವಾಗ ಅದು ಎಷ್ಟನೆಯ ಭಾಷೆ? ಕೆಲವೊಮ್ಮೆ ಕನ್ನಡವನ್ನು ಈ ಮಕ್ಕಳು ಶಾಲಾಶಿಕ್ಷಣದಲ್ಲಿ ಮೊದಲ ಕೆಲವು ವರ್ಷಗಳ ಅನಂತರ ಕಲಿಯಲು ಪ್ರಾರಂಭಿಸುತ್ತಾರೆ. ಆಗ ಕನ್ನಡ ಅವರ ದ್ವಿತೀಯ ಅಥವಾ ತೃತೀಯ ಭಾಷೆ ಆಗಿಬಿಡುತ್ತದೆ. ಮತ್ತೆ ಕೆಲವೊಮ್ಮೆ ಶಾಲೆಗೆ ಬರುವಾಗಲೇ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಅನೌಪಚಾರಿಕವಾಗಿ ಕಲಿತ ಮಕ್ಕಳು ಶಾಲೆಯಲ್ಲಿ ಬೇರೊಂದು ಭಾಷೆಯನ್ನು ಔಪಚಾರಿಕವಾಗಿ ಕಲಿಯಬೇಕಾಗಿ ಬರುತ್ತದೆ. ಈ ಎಲ್ಲಾ ನಿದರ್ಶನಗಳೂ ನಮಗೆ ಭಾಷೆಗಳನ್ನು ಹೀಗೆ ಸಂಖ್ಯೆಗಳಿಂದ ಹೆಸರಿಸುವ ವಿಧಾನ ಅಷ್ಟು ಸಮರ್ಪಕವಲ್ಲವೆಂದು ಸೂಚಿಸುತ್ತದೆ. ಅಲ್ಲದೆ ನಮ್ಮ ಶಿಕ್ಷಣನೀತಿಯು ಈ ಮೂರು ಭಾಷೆಗಳನ್ನು ಕಲಿಯುವ ಅವಧಿಯನ್ನು ವ್ಯತ್ಯಾಸ ಮಾಡಿದೆಯೇ ಹೊರತು ಅವುಗಳಲ್ಲಿ ಪಡೆದುಕೊಳ್ಳಬೇಕಾದ ಪ್ರಾವೀಣ್ಯದ ಮಟ್ಟವನ್ನು ಖಚಿತವಾಗಿ ನಿಗದಿಪಡಿಸಿಲ್ಲ. ಹಾಗೆ ನಿಗದಿಪಡಿಸಿದ್ದರೂ ಪರಿಣಾಮದಲ್ಲಿ ಪ್ರಾವೀಣ್ಯದ ಏರುಪೇರುಗಳು ಇದ್ದೇ ಇರುತ್ತವೆ. ಎಷ್ಟೋ ವೇಳೆ ಈ ಏರುಪೇರುಗಳು ತೀರಾ ಅನಿರೀಕ್ಷಿತವಾದ ಪರಿಣಾಮಗಳನ್ನು ನೀಡಬಹುದು. ಉದಾ.ಗೆ ಕನ್ನಡವನ್ನು ಅನೌಪಚಾರಿಕವಾಗಿ ಕಲಿತ ವಿದ್ಯಾರ್ಥಿಗಳು ಔಪಚಾರಿಕವಾಗಿ ಇಂಗ್ಲಿಶ್ ಕಲಿತು ಆ ಭಾಷೆಯಲ್ಲಿ ತಮ್ಮ ಮೊದಲ ಭಾಷೆ ಆಗಿರುವ ಕನ್ನಡಕ್ಕಿಂತಲೂ ಹೆಚ್ಚಿನ ಸಂವಹನ ಕೌಶಲಗಳನ್ನು ಪಡೆದುಬಿಡಬಹುದು.

ಸಾರ್ವತ್ರಿಕ ಶಿಕ್ಷಣದಲ್ಲಿ ಕನ್ನಡವನ್ನು ಹತ್ತು ವರ್ಷವೂ ಕಲಿಯುವ ವಿದ್ಯಾರ್ಥಿಗಳ ಕನ್ನಡ ಭಾಷಾಕೌಶಲಗಳು ಯಾವ ಪ್ರಮಾಣದಲ್ಲಿ ಬೆಳೆದಿರುತ್ತವೆ ಮತ್ತು ಅದಕ್ಕಿರುವ ಅಡ್ಡಿ ಆತಂಕಗಳು ಏನು ಎಂಬುದನ್ನು ಈವರೆಗೆ ಸ್ವಲ್ಪಮಟ್ಟಿಗೆ ಪರಿಶೀಲಿಸಿದ್ದೇವೆ. ಆದರೆ ಆ ಭಾಷೆಯನ್ನು ಎರಡನೆಯ ಅಥವಾ ಮೂರನೆಯ ಭಾಷೆಯನ್ನಾಗಿ ಓದುವ ಮಕ್ಕಳ ಭಾಷಾಕೌಶಲಗಳು ಯಾವ ಪ್ರಮಾಣದಲ್ಲಿ ಇರಬೇಕು ಎಂಬುದು ಅನಿಶ್ಚಿತವಾಗಿದೆ. ಏಕೆಂದರೆ ಸಾರ್ವತ್ರಿಕ ಶಿಕ್ಷಣದ ಅವಧಿಯ ಅನಂತರ ಅವರ ಕನ್ನಡದ ಸಾಮರ್ಥ್ಯ ಔಪಚಾರಿಕವಾಗಿ ಎಲ್ಲಿಯೂ ಪರಿಶೀಲನೆಗೆ ಒಳಗಾಗುವುದಿಲ್ಲ. ಆದ್ದರಿಂದ ಪರೀಕ್ಷೆಯ ಚೌಕಟ್ಟಿನಲ್ಲಿ ಅವರು ನಿರ್ದಿಷ್ಟ ಯಶಸ್ಸನ್ನು ಪಡೆಯಬೇಕು ಎಂಬುದಷ್ಟೇ ಈ ಹಂತದಲ್ಲಿ ಗುರಿಯಾಗಿ ಇರುವಂತೆ ತೋರುತ್ತದೆ. ಕನ್ನಡವನ್ನು ಓದಿ ಬರೆಯಲು ಕಲಿಸುವ ಪಠ್ಯಗಳು ಅದಕ್ಕಾಗಿ ರೂಪುಗೊಂಡಿವೆ. ಉಳಿದೆರಡು ಕೌಶಲಗಳ ಅಭಿವೃದ್ಧಿಗೆ ಸಹಕಾರಿಯಾಗುವ ಸಂಗತಿಗಳು ಕಡಿಮೆ. ಈ ಮಾತನ್ನು ಅನೌಪಚಾರಿಕವಾಗಿ ಕನ್ನಡವನ್ನು ಕಲಿಯಲು ಅವಕಾಶವಿಲ್ಲದ ವಿದ್ಯಾರ್ಥಿಗಳನ್ನು ಗಮನಿಸಿ ಹೇಳಲಾಗಿದೆ. ಹಾಗಿಲ್ಲದೆ ಅನೌಪಚಾರಿಕ ವಾಗಿ ಕನ್ನಡವನ್ನು, ಅಂದರೆ ಅದರ ಎರಡು ಕೌಶಲಗಳನ್ನು, ಸಾಮಾಜಿಕ ಸನ್ನಿವೇಶದಲ್ಲಿ ಕಲಿತು ಔಪಚಾರಿಕವಾಗಿ ಶಾಲಾಶಿಕ್ಷಣದ ಮುಂದುವರೆದ ಹಂತದಲ್ಲಿ ಕೆಲವು ವರ್ಷ ಕಲಿಯುವ ಮಕ್ಕಳೂ ಇದ್ದಾರೆ. ಅವರ ಕನ್ನಡ ಕೌಶಲಗಳು ಕೂಡ ಮೇಲೆ ಹೇಳಿದ ಇನ್ನೊಂದು ಗುಂಪಿನ ವಿದ್ಯಾರ್ಥಿಗಳ ಕೌಶಲ ಸಾಧನೆಗಿಂತ ಭಿನ್ನವಾಗಿರಲು ಕಾರಣಗಳು ಇಲ್ಲ. ಮುಖ್ಯವಾಗಿ ಏಳನೇ ತರಗತಿಯ ಅನಂತರ ಶಾಲಾಶಿಕ್ಷಣದಲ್ಲಿ ಕನ್ನಡ ತನ್ನ ಸ್ಥಾನವನ್ನು ಗೌಣವಾಗಿಸಿಕೊಳ್ಳುತ್ತಾ ಹೋಗುತ್ತದೆ. ಅಲ್ಲಿ ಮೊದಲ ಏಳು

ವರ್ಷ ಆ ಭಾಷೆಯನ್ನು ಪ್ರಥಮ ಭಾಷೆಯಾಗಿ ಓದಿದ ವಿದ್ಯಾರ್ಥಿಗಳು ಬೇರೊಂದು ಭಾಷೆಯನ್ನು ಆಯ್ಕೆ ಮಾಡಿಕೊಂಡು ಕನ್ನಡವನ್ನು ಮೂರನೆಯ ಭಾಷೆಯನ್ನಾಗಿ ಮಾಡಿಕೊಳ್ಳಬಹುದು. ಅಂದರೆ ನಮ್ಮ ಶಿಕ್ಷಣನೀತಿಯಲ್ಲೇ ಮೊದಲ ಹಂತದಲ್ಲಿ ಕನ್ನಡ ಭಾಷೆಯ ಕಲಿಕೆಗೆ ನೀಡಿರುವ ಒತ್ತನ್ನು ನಿಧಾನವಾಗಿ ಕಡಿಮೆ ಮಾಡಿ ಕೊನೆಗೆ ಅದು ಅನಗತ್ಯ ಎಂಬ ಹಂತಕ್ಕೆ ತಲುಪಿಸುವ ಬಗೆ ಅಡಕವಾಗಿದೆ.

ಪದವಿಪೂರ್ವ ಮತ್ತು ಸಾಮಾನ್ಯ ಪದವಿ ತರಗತಿಗಳಲ್ಲಿ ಕನ್ನಡ ಒಂದು ಭಾಷೆಯಾಗಿ ಕಡ್ಡಾಯವಲ್ಲ. ಅದು ಇಂಗ್ಲಿಶ್‌ನ ಜೊತೆಗೆ ಕಲಿಯುವ ಭಾಷೆಯಾಗಿ ಆಯ್ಕೆಯಾಗಬಹುದು. ಇಲ್ಲವೇ ಬೇರೆಯ ಭಾಷೆಗೆ ತನ್ನ ಸ್ಥಾನವನ್ನು ಬಿಟ್ಟುಕೊಡಬಹುದು. ಈ ಭಾಷಾನೀತಿಯ ಹಿಂದೆ ಒಂದು ತರ್ಕ ಕೆಲಸ ಮಾಡುವಂತಿದೆ. ಅದರ ಪ್ರಕಾರ ವಿದ್ಯಾರ್ಥಿಗಳು ಶಾಲಾಶಿಕ್ಷಣದ ಮೊದಲ ಹಂತದಲ್ಲಿ ಕನ್ನಡದ ಕೌಶಲಗಳನ್ನು ಕಲಿತು ಬಿಟ್ಟರೆ ಮುಂದೆ ಅವು ಅವರ ಜೊತೆಗೆ ಸದಾ ಇರುತ್ತವೆ; ಅವರು ಅವನ್ನು ಬಳಸಲು ಸಮರ್ಥರಾಗಿರುತ್ತಾರೆ ಎಂಬುದೇ ಈ ತರ್ಕ. ಸಾಮಾನ್ಯ ಕಲಿಕೆಯ ನಿಯಮಗಳಿಗೆ ಈ ತರ್ಕ ಅಸಹಜವಾಗಿ ತೋರುವುದಿಲ್ಲ. ಉದಾ.ಗೆ ನೀವು ಎಳವೆಯಲ್ಲಿ ಈಜಿನಂತಹ, ಸೈಕಲ್ ಓಡಿಸುವಂತಹ ಕೌಶಲವನ್ನು ಒಂದು ಪ್ರಮಾಣದಲ್ಲಿ ಪಡೆದುಕೊಂಡರೆ ಮುಂದೆ ಅದನ್ನು ಬೇಕಾದಾಗ ಬಳಸಬಹುದು. ಅದು ಮರೆತು ಹೋಗುವುದಿಲ್ಲ. ಮರಳಿ ಬಳಸುವಾಗ ಸ್ವಲ್ಪ ತೊಂದರೆಯಾದರೂ ಮತ್ತೊಮ್ಮೆ ಕಲಿಯಬೇಕಾದ ಪ್ರಸಂಗ ಬರುವುದಿಲ್ಲ. ಭಾಷಾಕೌಶಲಗಳ ಮಟ್ಟಿಗೂ ಈ ಮಾತು ನಿಜವೇ? ಸದ್ಯದ ಭಾಷಾ ನೀತಿ ಮತ್ತು ಶೈಕ್ಷಣಿಕ ಮಾದರಿಗಳನ್ನು ಗಮನಿಸಿದರೆ ಈ ತರ್ಕವನ್ನೇ ಸರಿಯೆಂದು ನಂಬಿದಂತಿದೆ. ವಾಸ್ತವವಾಗಿ ಇಲ್ಲಿ ಒಂದು ವೈಚಾರಿಕ ಕಂದರ ಇದೆ.

ಭಾಷೆಯ ಬಳಕೆಯ ನಿಯಮಗಳನ್ನು ಕಲಿಯುವುದು ಎಂಬುದಕ್ಕೆ ಎರಡು ನೆಲೆಗಳಿವೆ. ಒಂದು: ಆ ಭಾಷೆಯ ಅಂತಸ್ಥ ನಿಯಮಗಳ ಮೇಲೆ ಪ್ರಭುತ್ವವನ್ನು ಪಡೆದುಕೊಳ್ಳುವುದು. ಎರಡು: ಆ ಭಾಷೆಯಲ್ಲಿ ಸಂವಹನ ಕೌಶಲಗಳನ್ನು ರೂಢಿಸಿಕೊಳ್ಳುವುದು. ಇವೆರಡೂ ಬೇರೆ ಬೇರೆ ಗುರಿಗಳು. ಇವೆರಡನ್ನೂ ಸಾಧಿಸಲು ಬೇರೆ ಬೇರೆ ಮಾರ್ಗಗಳನ್ನು ಹಿಡಿಯಬೇಕು. ಆದರೆ ಎರಡು ಗುರಿಗಳನ್ನೂ ಈ ಬೇರೆ ಬೇರೆ ದಾರಿಗಳಿಂದ ಒಮ್ಮೆಗೇ ಸಾಧಿಸಬಹುದು. ನಮ್ಮ ಭಾಷಾಕಲಿಕೆಯ ವಿಧಾನದಲ್ಲಿ ಒತ್ತು ಹೆಚ್ಚಾಗಿ ದೊರೆಯುವುದು ಮೊದಲನೆಯ ಗುರಿಗೆ. ಎರಡನೆಯ ಗುರಿ ಗೌಣವಾಗಿದೆ. ಮೊದಲನೆಯ ಗುರಿಯಲ್ಲಿ ಭಾಷೆಯ ನಿಯಮಗಳನ್ನು ಕಲಿಯುವ ನೆಲೆ ಅಡಕವಾಗಿದೆ. ಈ ಹಿಂದೆ ವಿವರಿಸಿದಂತೆ ಈ ನಿಯಮಗಳನ್ನು ಅರಿಯುವ ವಿಧಾನ ಯಾವ ವಯೋಮಾನದಲ್ಲಿ ಒಂದು ಭಾಷೆಯನ್ನು ಕಲಿಯಲು ಮೊದಲು ಮಾಡಲಾಯಿತು ಎಂಬುದನ್ನು ಅವಲಂಬಿಸಿದೆ.

ಮಗು ಭಾಷೆಯನ್ನು ಕಲಿಯಲು ಮೊದಲು ಮಾಡಿದ ತನ್ನ ಹದಿನೆಂಟನೇ ತಿಂಗಳಿನಿಂದ ಕೌಮಾರ್ಯಾವಸ್ಥೆಯವರೆಗೆ ಯಾವುದೇ ಭಾಷೆಯನ್ನು ಅಥವಾ ಭಾಷೆಗಳನ್ನು ಕಲಿಯಲು ಆರಂಭಿಸಿದರೆ ಅವುಗಳ ರಚನೆಯ ನಿಯಮಗಳ ಬಗೆಗೆ

ಮಾಹಿತಿ ನೀಡುವ ಜನ್ಮದತ್ತ ವ್ಯವಸ್ಥೆಯೊಂದು ಮಗುವಿನ ಮೆದುಳಿನಲ್ಲಿ ಇದ್ದು ಕಲಿಕೆಗೆ ನೆರವಾಗುತ್ತದೆ. ಸರಾಸರಿ ಅಂದಾಜಿನಂತೆ ಕೌಮಾರ್ಯಾವಸ್ಥೆಯ ಆರಂಭ ನಮ್ಮ ಪರಿಸರದಲ್ಲಿ ೧೨ನೇ ವಯಸ್ಸಿನಲ್ಲಿ ಎಂದು ತಿಳಿದರೆ ಇದು ವಿದ್ಯಾರ್ಥಿಯು ಏಳನೆಯ ತರಗತಿಯಲ್ಲಿ ಇರುವ ಕಾಲವನ್ನು ಸೂಚಿಸುತ್ತದೆ. ಅಂದರೆ ಈ ಹಂತವನ್ನು ದಾಟಿದ ಮೇಲೆ ಯಾವುದೇ ಭಾಷೆಯನ್ನು ಕಲಿಯಲು ಆರಂಭಿಸಿದರೆ ಆಗ ಸಾಮಾನ್ಯ ಕಲಿಕೆಯ ನಿಯಮಗಳನ್ನೇ ಅನುಸರಿಸಬೇಕಾಗುತ್ತದೆ. ಆ ಕಲಿಕೆಗೆ ಅಗತ್ಯವಾದ ಎಲ್ಲ ಸಾಮಗ್ರಿಗಳನ್ನೂ ವಿದ್ಯಾರ್ಥಿಗೆ ಹೊರಗಿನಿಂದ ಒದಗಿಸಬೇಕಾಗುತ್ತದೆ. ಮೆದುಳಿನ ಅಂತಸ್ಥ ಸಾಮರ್ಥ್ಯ ಈಗ ನೆರವಿಗೆ ಬರುವುದಿಲ್ಲ. ಈ ಅಂಶವನ್ನು ಗಮನಿಸಿದರೆ, ಮಕ್ಕಳಿಗೆ ಭಾಷೆಯನ್ನು ಅಂದರೆ ಅವುಗಳ ರಚನೆಯನ್ನು ತಿಳಿಸುವ ಕ್ರಮವು ಯಾವ ವಯೋಮಾನದಲ್ಲಿ ಕಲಿಕೆಯು ಮೊದಲಾಗಿದೆ ಎಂಬುದನ್ನು ಅವಲಂಬಿಸಿ ನಿರ್ಧಾರವಾಗಬೇಕು.

ಈ ರಚನೆಯ ಸ್ವರೂಪವನ್ನು ಅರಿತ ಕೂಡಲೇ ಬಳಕೆಯ ಸಾಮರ್ಥ್ಯಗಳು ತಂತಾನೇ ಒದಗಿಬರುವುದಿಲ್ಲ. ಮಗುವು ಹುಟ್ಟಿನಿಂದ ಪಡೆದ ಭಾಷಾಗಳಿಕೆಯ ಅಂತಸ್ಥ ವ್ಯವಸ್ಥೆಯಿಂದ ಒಂದು ಭಾಷೆಯನ್ನು ಪಡೆದುಕೊಳ್ಳುತ್ತದೆ ಎಂಬ ಸಿದ್ಧಾಂತವನ್ನು ನಿರಾಕರಿಸುವವರು ಮಂಡಿಸುವ ವಾದ ಹೀಗಿದೆ. ಹಾಗಿದ್ದಲ್ಲಿ ಒಂದೇ ಭಾಷೆಯನ್ನು ಪಡೆದುಕೊಂಡ ವ್ಯಕ್ತಿಗಳಲ್ಲಿ ಏಕೆ ಭಾಷಾಬಳಕೆಯ ಸಾಮರ್ಥ್ಯದಲ್ಲಿ ಏರುಪೇರು ಕಾಣುತ್ತದೆ? ಎಲ್ಲರೂ ಒಂದೇ ಪ್ರಮಾಣದ ಪ್ರಭುತ್ವವನ್ನು ಪಡೆಯುವುದಿಲ್ಲ ಏಕೆ? ಈ ಪ್ರಶ್ನೆ ಸರಿ, ಆದರೆ ಅದಕ್ಕೆ ಕಾರಣ ಬೇರೆ ಕಡೆ ಇದೆ. ಅದನ್ನೇ ನಾವು ಸಂವಹನ ಕೌಶಲಗಳ ಗಳಿಕೆ ಎಂದು ಹೇಳುತ್ತಿರುವುದು. ಈ ಕೌಶಲಗಳ ಗಳಿಕೆಗೆ ಸಾಮಾನ್ಯ ಕಲಿಕೆಯ ನಿಯಮಗಳೇ ಅನ್ವಯವಾಗುತ್ತವೆ. ಆದ್ದರಿಂದ ಸಿದ್ಧಿಯಲ್ಲಿಯೂ ತರತಮ ಭಾವಗಳು ಅಸಹಜವಲ್ಲ. ಸಂವಹನ ಕೌಶಲಗಳನ್ನು ಪಡೆದರೆ ಮಾತ್ರ ವ್ಯಕ್ತಿಯು ಭಾಷೆಯನ್ನು ವಿವಿಧ ವಲಯಗಳಲ್ಲಿ ವಿವಿಧ ಉದ್ದೇಶಗಳಿಗಾಗಿ ಬಳಸುವುದು ಸಾಧ್ಯ. ನಿಯಮಗಳ ಮೇಲಿನ ಪ್ರಭುತ್ವ ಬಳಕೆಯ ಮೇಲಿನ ಪ್ರಭುತ್ವವನ್ನು ತಂದುಕೊಡುವುದಿಲ್ಲ. ಅವೆರಡನ್ನೂ ಬೇರೆ ಬೇರೆಯಾಗಿಯೇ ಪಡೆದುಕೊಳ್ಳಬೇಕು.

ನಿಯಮಗಳ ಕಲಿಕೆ ಮೊದಲ ವಯೋ ಅವಧಿಯಲ್ಲಿ ಆರಂಭಗೊಂಡು ಕೊನೆಯಾದರೆ ಆಗ ಆ ಪ್ರಭುತ್ವ ಪರಿಪೂರ್ಣವಾಗಿಬಿಟ್ಟಿರುತ್ತದೆ. ಅಂದರೆ ಒಬ್ಬ ವ್ಯಕ್ತಿ ಕನ್ನಡದ ರಚನೆಯ ನಿಯಮಗಳನ್ನು ಕಲಿತಿದ್ದಾರೆ ಅಥವಾ ಅವುಗಳನ್ನು ಪಡೆದುಕೊಂಡಿದ್ದಾರೆ ಎಂದು ಹೇಳಿದರೆ ಅದು ಎಷ್ಟು ಪ್ರಮಾಣದ ಕಲಿಕೆ ಎಂಬ ಪ್ರಶ್ನೆಯೇ ನಿರರ್ಥಕ. ಅದು ಇಡಿಯಾಗಿ ಒಮ್ಮೆಲೇ ಲಭ್ಯವಾಗಿ ಬಿಡುತ್ತದೆ. ಹೆಚ್ಚೆಂದರೆ ಪದಕೋಶವನ್ನು ಮಾತ್ರ ವಿಸ್ತರಿಸಿಕೊಳ್ಳುತ್ತಾ ಹೋಗಬಹುದು. ವಯಸ್ಸಾದಂತೆ ಧ್ವನಿರಚನೆ, ಪದರಚನೆ, ವಾಕ್ಯರಚನೆಗಳ ಹೊಸ ನಿಯಮಗಳನ್ನು ಕಲಿಯುವ ಅಗತ್ಯ ಬರುವುದಿಲ್ಲ. ಆದರೆ ಸಂವಹನ ಕೌಶಲಗಳ ವಿಷಯ ಹೀಗಲ್ಲ. ಅವುಗಳನ್ನು ಕಲಿತ ಮೇಲೂ ಇನ್ನೂ ಕಲಿಯಬೇಕಾದ್ದು ಉಳಿದೇ ಇರುತ್ತದೆ. ಹೊಸ ಸವಾಲುಗಳು ಎದುರಾಗುತ್ತಲೇ ಇರುತ್ತವೆ.

ಅಗತ್ಯ ಕಂಡಂತೆ ಈ ಕೌಶಲಗಳನ್ನು ವೃದ್ಧಿಗೊಳಿಸಿಕೊಳ್ಳುವ ಕೆಲಸವನ್ನು ಮಾಡುತ್ತಲೇ ಇರಬೇಕು. ರಚನೆಯ ನಿಯಮಗಳನ್ನು ಪಡೆದುಕೊಂಡ ವ್ಯಕ್ತಿ, ಅಭಿವ್ಯಕ್ತಿಯ ನೆಲೆಯಲ್ಲಿ ಅವುಗಳನ್ನು ಪ್ರಯೋಗಿಸದಿದ್ದರೂ ಆ ನಿಯಮಗಳು ಆ ವ್ಯಕ್ತಿಗೆ ತಿಳಿದಿಲ್ಲವೆಂದು ವಾದಿಸಲು ಬರುವುದಿಲ್ಲ. ಉದಾ.ಗೆ ಕನ್ನಡವನ್ನು ಕಲಿತ ವ್ಯಕ್ತಿಯೊಬ್ಬರು ನಿಡುಗಾಲದ ಮೌನದಲ್ಲಿ ಇದ್ದಾರೆ ಎಂದುಕೊಳ್ಳೋಣ. ತೋರಿಕೆಗೆ ಆ ವ್ಯಕ್ತಿ ತಾನು ಕಲಿತ ಕನ್ನಡದ ನಿಯಮಗಳನ್ನು ಬಳಸಿದಂತೆ ತೋರುವುದಿಲ್ಲ. ಆದರೆ ವಾಸ್ತವವಾಗಿ ಹಾಗೆ ಹೇಳಲು ಸಾಧ್ಯವಾಗದು. ಕಾರಣವೆಂದರೆ ಆ ವ್ಯಕ್ತಿ ತಾನು ಮೌನವಾಗಿದ್ದಾಗಲೂ ಬೇರೆಯವರು ಮಾತಾಡುವ ಕನ್ನಡವನ್ನು ಕೇಳಿ ಅರ್ಥ ಮಾಡಿಕೊಳ್ಳುತ್ತಿರುತ್ತಾರೆ. ನಿಯಮಗಳ ತಿಳಿವನ್ನು ಬಳಸಿಕೊಳ್ಳದಿದ್ದರೆ ಆ ವ್ಯಕ್ತಿಗೆ ಆ ಮಾತುಗಳು ಅರ್ಥವಾಗುವುದು ಹೇಗೆ? ಇದೂ ಅಲ್ಲದೆ ಎಷ್ಟೋ ದೀರ್ಘಕಾಲ ಮೌನ ಆಚರಿಸಿ ಆದ ಮೇಲೆ ಅದೇ ವ್ಯಕ್ತಿ ತನ್ನ ಪಾಡಿಗೆ ತಾನು ಎಂದಿನಂತೆ ಕನ್ನಡವನ್ನು ಬಳಸುತ್ತಾ ಹೋಗಬಹುದು. ಆದರೆ ಸಂವಹನ ಕೌಶಲಗಳ ಮಟ್ಟಿಗೆ ಈ ಮಾತು ನಿಜವಲ್ಲ. ಆ ಕೌಶಲದ ನಿಜವಾದ ಪರೀಕ್ಷೆ ಇರುವುದು ಬಳಕೆಯಲ್ಲಿಯೇ. ಆ ಕೌಶಲವಿದೆಯೆಂದು ಹೇಳುತ್ತಾ ಬಳಸದೆ ಜಂಭಕೊಚ್ಚುವುದು ಸಾಧ್ಯವಿಲ್ಲ. ಹೀಗೆಯೇ ಬಳಸಲು ನಿಲ್ಲಿಸಿದರೆ ಮತ್ತೆ ಅವುಗಳನ್ನು ಮೊದಲಿನ ರೀತಿಯಲ್ಲಿಯೇ ಬಳಸುವುದು ಕೂಡ ಸಾಧ್ಯವಾಗುವುದಿಲ್ಲ. ಈ ಎಲ್ಲಾ ವಿವರಣೆಗಳು ಭಾಷಾಸಾಮರ್ಥ್ಯದ ಹಿಂದಿರುವ ಎರಡು ಪ್ರಮುಖ ನೆಲೆಗಳನ್ನು ಪರಿಚಯಿಸುತ್ತದೆ.

ಕನ್ನಡ ಭಾಷೆಯ ಕಲಿಕೆ ಮೊದಲ ವರ್ಷಗಳಲ್ಲಿ ನಡೆದು ಬಿಟ್ಟರೆ ಸಾಕು ಮುಂದೆ ಅವುಗಳನ್ನು ಬಳಸುವುದು ಸುಲಭ ಎಂಬ ತಿಳುವಳಿಕೆಯಲ್ಲಿ ಲೋಪವಿದೆ. ನಮ್ಮ ಶಾಲೆಗಳಲ್ಲಿ ಸಂವಹನ ಕೌಶಲಗಳ ಕಲಿಕೆ ಕನಿಷ್ಠ ಪ್ರಮಾಣದಲ್ಲಿ ಇದೆ. ಭಾಷೆಯ ರಚನೆಗಳನ್ನು ಅರಿತ ವಿದ್ಯಾರ್ಥಿ ಈ ಸಂವಹನ ಕೌಶಲಗಳ ನೆರವಿಲ್ಲದಿದ್ದರೆ ಆ ಭಾಷೆಯನ್ನು ಬಳಸುವುದು ಕಷ್ಟ. ಅಂತಹ ಬಳಕೆಗಳು ಅತಿ ಸೀಮಿತ ನೆಲೆಯಲ್ಲಿ ಮಾತ್ರ ಕಂಡುಬರುತ್ತವೆ. ಸಂವಹನ ಕೌಶಲಗಳನ್ನು ಕಲಿಸಬೇಕು ಎಂಬ ಕಡೆಗೆ ಒಂದೂವರೆ ದಶಕದಿಂದ ಹೆಚ್ಚಿನ ಪ್ರಯತ್ನಗಳು ನಡೆಯುತ್ತಿವೆ. ಆ ಮೂಲಕ ವಿದ್ಯಾರ್ಥಿಯ ಭಾಷಾಸಾಮರ್ಥ್ಯವನ್ನು ಪ್ರಸ್ತುತಗೊಳಿಸಲು ಯತ್ನಿಸಲಾಗುತ್ತಿದೆ. ಆದರೂ ಇಲ್ಲೂ ಕೆಲವು ಕೊರತೆಗಳಿವೆ. ತರಗತಿಗಳಲ್ಲಿ ತರಬೇತು ನೀಡುವ ಸಂವಹನಕೌಶಲಗಳು ಅತಿ ಕನಿಷ್ಠ ನೆಲೆಯವು. ಅವುಗಳ ಪ್ರಯೋಜನ ಸಾರ್ವತ್ರಿಕವಾಗಿ ಆಗುವುದು ಕಷ್ಟ. ಇನ್ನು ಕಲಿಯುವುದನ್ನು ಬಿಟ್ಟ ಮೇಲೆ ಎಷ್ಟೋ ವರ್ಷಗಳ ಅನಂತರ ಮತ್ತೆ ಕನ್ನಡವನ್ನು, ಅಂದರೆ ಅದರ ಅಭಿವ್ಯಕ್ತಿ ಕೌಶಲಗಳನ್ನು ಬಳಸಿಯಾರು ಎಂದು ಭಾವಿಸುವುದು ಅಷ್ಟು ಸರಿಯಲ್ಲ.

ಶಾಲಾಶಿಕ್ಷಣದ ಅನಂತರ ಸಮಾಜದಲ್ಲಿ ಕನ್ನಡವನ್ನು ತಮ್ಮ ದೈನಂದಿನ ವ್ಯವಹಾರದಲ್ಲಿ ಬಳಸಲು ಅವಕಾಶವಿರುವ ನಾಗರಿಕರು ಎದುರಿಸುವ ಸಮಸ್ಯೆ ಎಂದರೆ ತಾವು ಕಲಿತದ್ದು ಈಗ ತಮ್ಮ ನೆರವಿಗೆ ಬರುತ್ತಿಲ್ಲ ಎಂಬ ಸಂಗತಿ. ಇತರರೂ ಕೂಡ ಈ ಶಿಕ್ಷಿತರ ಕನ್ನಡ ಬಳಕೆಯ ಅಸಾಮರ್ಥ್ಯವನ್ನು ಕುರಿತು ಟೀಕೆ ಮಾಡುತ್ತಲೇ

ಇರುತ್ತಾರೆ. ಈ ಅಪೇಕ್ಷೆ ಮತ್ತು ಸಿದ್ಧಿಗಳ ನಡುವೆ ಕಂದರವೊಂದು ಏಕೆ ಉಂಟಾಗುತ್ತದೆ ಎಂಬುದು ಕನ್ನಡ ಸಮಾಜವನ್ನು ಬಹುವಾಗಿ ಕಾಡಿಸುತ್ತಿದೆ. ಈಗಾಗಲೇ ವಿವರಿಸಿದಂತೆ ನಾವು ಕಲಿಸುತ್ತಿರುವ ರೀತಿಗೂ ಬಳಸುತ್ತಿರುವ ರೀತಿಗೂ ತಾಳೆಯಾಗುತ್ತಿಲ್ಲ. ಆದ್ದರಿಂದಲೇ ಇಂತಹ ಹತಾಶ ಪರಿಸ್ಥಿತಿ ನಮ್ಮೆದುರು ಕಾಣುತ್ತಿದೆ. ಸಾಮಾನ್ಯವಾಗಿ ಶಿಕ್ಷಿತರ ಕನ್ನಡ ಬಳಕೆಯ ಸಮಸ್ಯೆಗಳನ್ನು ಹೀಗೆ ಗ್ರಹಿಸಬಹುದು. ಒಂದು: ಸಂದರ್ಭಕ್ಕೆ ತಕ್ಕಂತೆ ಕನ್ನಡವನ್ನು ಬಳಸಲು ಆಗದಿರುವುದು. ಅಥವಾ ಅವರು ಬಳಸುತ್ತಿರುವ ಕನ್ನಡ ಆ ಸಂದರ್ಭಕ್ಕೆ ಹೊಂದಿಕೆಯಾಗದಿರುವುದು. ಎರಡು: ವಿವಿಧ ಸಂದರ್ಭಗಳಿಗೆ ಬೇಕಾದ ವಿವಿಧ ಬಗೆಯ ಕನ್ನಡರಚನೆಗಳ ತಿಳಿವು ಇಲ್ಲದಿರುವುದು ಅಥವಾ ಒಂದೇ ಮಾದರಿಯ ಕನ್ನಡವನ್ನು ಎಲ್ಲ ಕಡೆಗೂ ಎಲ್ಲ ಉದ್ದೇಶಕ್ಕೂ ಬಳಸುತ್ತಿರುವುದು. ಇಡೀ ಸಮಸ್ಯೆಯನ್ನು ಹೀಗೆ ಸೂತ್ರೀಕರಿಸಿ ಹೇಳಿದರೂ ಅದರಲ್ಲಿ ಸತ್ಯವಿದೆ. ಆದರೆ ಪರಿಸ್ಥಿತಿ ಹೀಗಾಗಲು ಕಾರಣಗಳು ಮಾತ್ರ ಒಂದೇ ಮೂಲದವು ಅಲ್ಲ. ನಾವೀಗ ವಿವರಿಸಿದ ಭಾಷಾಕಲಿಕೆಯ ವಿಧಾನದ ಕೊರತೆಗಳು ಒಂದು ಕಾರಣ ಮೂಲವಾದರೆ, ಸಾಮಾಜಿಕವಾದ ಮತ್ತೆ ಕೆಲವು ಸಂಗತಿಗಳು ಈ ಪರಿಸ್ಥಿತಿಯ ಹಿಂದೆ ಕಾರ್ಯ ಪ್ರವೃತ್ತವಾಗಿವೆ.

ಭಾಷೆಗಳನ್ನು ಕಲಿಸುವ ನಮ್ಮ ಶಿಕ್ಷಣನೀತಿಯು ಅನುಸರಿಸಿದ ಕೆಲವು ದಾರಿಗಳಿಂದಾಗಿ ಕಳೆದ ಐವತ್ತು ವರ್ಷಗಳಲ್ಲಿ ಉಂಟಾಗಿರುವ ಗೊಂದಲಗಳು ಹಲವು. ಅವುಗಳಲ್ಲಿ ಇನ್ನೊಂದನ್ನು ಈಗ ವಿವರಿಸಲಾಗುತ್ತದೆ. ಪ್ರೌಢಶಿಕ್ಷಣದ ಹಂತದಲ್ಲಿ ಮೂರು ಭಾಷೆಗಳನ್ನು ಕಲಿಯಬೇಕು. ಬಹು ಚರ್ಚೆಯ ವಿವಾದದ ಅನಂತರ ಈಗ ನಿರ್ಧಾರಕ್ಕೆ ಬಂದು ಜಾರಿಗೆ ನೀಡಿರುವ ವ್ಯವಸ್ಥೆ ಎಂದರೆ ಪಾಠ ಮಾಡುವ ಪ್ರಮಾಣದಲ್ಲಿ ಈ ಮೂರು ಭಾಷೆಗಳಿಗೂ ಸಮಾನ ಅವಕಾಶಗಳಿವೆ. ಆದರೆ ಪರೀಕ್ಷೆಯ ಹಂತದಲ್ಲಿ ಒಂದು ಭಾಷೆಯನ್ನು ಉಳಿದೆರಡು ಭಾಷೆಗಳಿಗಿಂತ ಬೇರೆ ಮಾಡಿ ನೋಡಲಾಗಿದೆ. ಹೀಗೆ ಮಾಡಲು ರಾಜಕೀಯ ಕಾರಣವಲ್ಲದೇ ಶೈಕ್ಷಣಿಕ, ಭಾಷಿಕ ಮತ್ತು ಸಾಮಾಜಿಕ ನೆಲೆಯ ಯಾವ ಕಾರಣಗಳೂ ಇಲ್ಲ. ಮೊದಲ ಭಾಷೆಗೆ ೧೨೫ ಅಂಕಗಳು, ಉಳಿದೆರಡು ಭಾಷೆಗೆ ತಲಾ ೧೦೦ ಅಂಕಗಳ ಪ್ರಶ್ನೆ ಪತ್ರಿಕೆಗಳು ಇರುತ್ತವೆ. ಇದು ತೋರಿಕೆಯ ಮಹತ್ವ. ೧೨೫ ಅಂಕಗಳ ಪರೀಕ್ಷೆಯ ಭಾಷೆಯಲ್ಲಿ ವಿದ್ಯಾರ್ಥಿಗೆ ಶೇಕಡಾ ೨೫ ಪ್ರಮಾಣದ ಹೆಚ್ಚಿನ ಸಾಮರ್ಥ್ಯ ಇದೆ ಎಂದು ವಾದಿಸುವುದು ಸಾಧ್ಯವಿಲ್ಲ. ಅಂತಹ ವಾದಗಳನ್ನು ಹೂಡಲಾರರು. ಆದರೆ ಸಮಸ್ಯೆ ಇರುವುದು ಬೇರೆ ಕಡೆ. ಈ ೧೨೫ ಅಂಶಗಳ ಪ್ರಶ್ನೆಪತ್ರಿಕೆಯ ಭಾಷೆ ಕನ್ನಡ ಆಗಿರಬೇಕಾಗಿಲ್ಲ. ಅದರ ಬದಲು ಮಕ್ಕಳು ಹೆಚ್ಚು ಅಂಕಗಳನ್ನು ಪಡೆಯುವ ಕಾರಣದಿಂದ ಸಂಸ್ಕೃತ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಈ ಅವಕಾಶವನ್ನು ಕಲ್ಪಿಸಿದ್ದಕ್ಕೆ ಈಗಾಗಲೇ ಹೇಳಿದಂತೆ ಯಾವ ತಾರ್ಕಿಕ ಒತ್ತಡಗಳೂ ಇಲ್ಲ. ಹಾಗೆ ನೋಡಿದರೆ ಸಂಸ್ಕೃತ ಭಾಷೆಯ ಕಲಿಕೆ ನಡೆಯುವುದು ಆ ಭಾಷೆಯ ಮೂಲಕವಲ್ಲ. ಬೇರೊಂದು ಭಾಷೆಯ ಮೂಲಕ. ಅಂದರೆ ಅದು ತಾರ್ಕಿಕವಾಗಿ ಸಂಸ್ಕೃತ ಭಾಷಾಕಲಿಕೆಯ ವ್ಯಾಪ್ತಿಗೇ ಬರುವುದಿಲ್ಲ. ಅದನ್ನು ಒಂದು ವಿಷಯವಾಗಿ ಇತರ ಭಾಷೆಗಳ ಮೂಲಕ ಗಣಿತ, ವಿಜ್ಞಾನಗಳನ್ನು ಕಲಿತಂತೆ ಕಲಿಯಲಾಗುತ್ತದೆ. ಈ ಅಭಾಸಕರ ಸನ್ನಿವೇಶವನ್ನು ನಮ್ಮ ಶಿಕ್ಷಣವ್ಯವಸ್ಥೆಯಲ್ಲಿ

ಉಳಿಸಿಕೊಳ್ಳಲು ಕಾರಣಗಳಿವೆ. ಇರಲಿ. ಅದೆಲ್ಲವೂ ಈ ಚರ್ಚೆಯ ವ್ಯಾಪ್ತಿಗೆ ಹೊರತಾದದ್ದು. ಆದರೆ ಕನ್ನಡ ಈ ಅತಾರ್ಕಿಕ ನಿರ್ಣಯಗಳಿಂದಾಗಿ ಕಲಿಕೆಯಲ್ಲಿ ಅನುಭವಿಸುತ್ತಿರುವ ಇಕ್ಕಟ್ಟನ್ನು ಗಮನಿಸಲು ಈ ವಿವರ ನೀಡಬೇಕಾಯಿತು.

ಕಲಿಕೆಯ ಮಾಧ್ಯಮವಾಗಿ ಕನ್ನಡ ಭಾಷೆ

ಕಳೆದ ಐವತ್ತು ವರ್ಷಗಳಲ್ಲಿ ಬಹು ಚರ್ಚಿತವಾಗಿರುವ ವಿಷಯಗಳಲ್ಲಿ ಶಿಕ್ಷಣ ಮಾಧ್ಯಮವೂ ಒಂದು. ಕನ್ನಡವನ್ನೇ ಪ್ರಥಮ ತರಗತಿಯಿಂದ ಶಿಕ್ಷಣದ ಎಲ್ಲಾ ಹಂತಗಳಲ್ಲೂ ಕಲಿಕೆಯ ಮಾಧ್ಯಮವನ್ನಾಗಿ ಬಳಸಬೇಕು ಎಂಬ ವಾದ ಒಂದು ಕಡೆ, ಇನ್ನೊಂದು ಕಡೆ ಉನ್ನತವೃತ್ತಿಯ ಅವಕಾಶಗಳು ಸಿಗಬೇಕಾದರೆ ಮತ್ತು ನಾಡಿನ ಜನರು ಬೇರೆ ಬೇರೆ ರಾಜ್ಯಗಳಿಗೆ ಹೋಗಬೇಕಾದರೆ ಶಿಕ್ಷಣದಲ್ಲಿ ಕನ್ನಡವನ್ನು ಮಾಧ್ಯಮವಾಗಿ ಬಳಸುವುದು ಅಷ್ಟು ಸರಿಯಲ್ಲ ಎಂಬ ವಾದ ಇನ್ನೊಂದು ಕಡೆ. ಎರಡನೆಯ ಪಕ್ಷದವರು ಕನ್ನಡವನ್ನು ಮಾಧ್ಯಮವನ್ನಾಗಿ ನಿರಾಕರಿಸುವಾಗ ಅದರ ಬದಲಿಗೆ ಇಂಗ್ಲಿಶ್ ಆಯ್ಕೆ ಮಾಡಿರುತ್ತಾರೆ. ಮೂರನೆಯ ಮಧ್ಯಮ ಮಾರ್ಗವೊಂದು ಇದೆ. ಅದರಂತೆ ಶಿಕ್ಷಣದ ಒಂದು ಹಂತದವರೆಗೆ ಕನ್ನಡವನ್ನು ಮಾಧ್ಯಮವನ್ನಾಗಿ ಬಳಸಿ ಅನಂತರ ಮುಂದಿನ ಹಂತಗಳಲ್ಲಿ ವಿದ್ಯಾರ್ಥಿ ತಾನು ಯಾವ ಮಾಧ್ಯಮದ ಮೂಲಕ ಕಲಿಯಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಬೇಕೆಂದು ಈ ವಾದ ಮಂಡಿಸುವವರು ಹೇಳುತ್ತಾರೆ. ವಾಸ್ತವವಾಗಿ ಈ ಮೂರನೆಯ ಮಾರ್ಗವೇ ಸರ್ಕಾರದ ಘೋಷಿತ ನೀತಿಯಾಗಿದೆ. ಆದರೆ ಅನುಷ್ಠಾನದಲ್ಲಿ ಇದಕ್ಕೆ ಹಲವು ಅಡ್ಡಿಗಳಿವೆ. ಇದರಿಂದಾಗಿ ಎರಡನೆಯ ವಿಧಾನ ಕೆಲವು ಕಡೆ ಜಾರಿಯಲ್ಲಿದೆ.

ಮಾಧ್ಯಮದ ನೀತಿಯ ಜಾರಿಯ ಸಮಸ್ಯೆಯನ್ನು ಚರ್ಚಿಸುವ ಮೊದಲು ಶಿಕ್ಷಣದಲ್ಲಿ ಮಾಧ್ಯಮದ ಪ್ರಭಾವವೇನು ಎಂಬುದನ್ನು ಪರಿಶೀಲಿಸಬೇಕು. ಕಲಿಯುತ್ತಿರುವ ವಿಷಯವನ್ನು ಯಾವ ಭಾಷೆಯ ಮೂಲಕ ಕಲಿಸಬೇಕು ಎಂಬುದೇ ಇಲ್ಲಿನ ಪ್ರಶ್ನೆ. ಕಲಿಕೆಯಲ್ಲಿ ಪಠ್ಯ, ಬೋಧನೆ ಮತ್ತು ಮೌಲ್ಯಮಾಪನ ಎಂಬ ಮೂರು ಹಂತಗಳಿವೆ. ಈ ಮೂರು ಹಂತಗಳಲ್ಲೂ ಒಂದೇ ಭಾಷೆಯನ್ನು ಬಳಸಬೇಕು ಎಂಬುದು ಶೈಕ್ಷಣಿಕ ತತ್ತ್ವ. ಆ ಭಾಷೆ ಮಗುವಿನ ಮೊದಲ ಭಾಷೆಯಾಗಬೇಕು ಎಂದು ಸಾಮಾನ್ಯವಾಗಿ ವಾದಿಸಲಾಗುತ್ತದೆ. ಕಲಿಕೆ ಯಶಸ್ವಿ ಯಾಗಬೇಕಾದರೆ ಮಗು ತನಗೆ ಪರಿಚಿತವಿರುವ ತಾನು ಬಳಸುತ್ತಿರುವ ಭಾಷೆಯ ಮೂಲಕ ಕಲಿಯುವುದು ಅಗತ್ಯ. ಆಗ ಮಾತ್ರ ಹೆಚ್ಚು ಶ್ರಮವಿಲ್ಲದೆ ಕಲಿಯುವುದು ಸಾಧ್ಯ ಎಂಬ ತರ್ಕವನ್ನು ಮಂಡಿಸಲಾಗುತ್ತದೆ. ಇದಕ್ಕೆ ಬದಲಾಗಿ ತನ್ನದಲ್ಲದ ಬೇರೊಂದು ಭಾಷೆಯ ಮೂಲಕ ಮಗು ಕಲಿಯಲು ಯತ್ನಿಸಿದರೆ ವಿಷಯ ಕ್ಲಿಷ್ಟತೆಯ ಜೊತೆಗೆ ಭಾಷಾಕ್ಲಿಷ್ಟತೆಯೂ ಸೇರಿ ಕಲಿಕೆ ತ್ರಾಸದಾಯಕವಾಗುತ್ತದೆ ಎಂದು ವಾದಿಸಲಾಗಿದೆ. ಅಂದರೆ ಕಲಿಯುವ ವಿಷಯ ಗುರಿಯೆಂದೂ ಕಲಿಕೆಯ ಭಾಷೆ ಸಾಧನವೆಂದೂ ಪರಿಗಣಿಸಿದಂತಾಗಿದೆ. ಸಾಧನ ಪರಿಚಿತವಾದರೆ ಗುರಿ ಯನ್ನು ಪಡೆಯುವುದು ಸುಲಭ ಎಂಬ ತರ್ಕ ಮೇಲ್ನೋಟಕ್ಕೆ ಸರಿ ಎನ್ನಿಸುತ್ತದೆ. ಆದರೆ ವಸ್ತುಸ್ಥಿತಿ ಏನೆಂಬುದನ್ನು ನೋಡೋಣ. ಈಗ ನಮ್ಮ ಶಿಕ್ಷಣ

ಪದ್ಧತಿಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಬೇರೆ ಬೇರೆ ತರಗತಿಗಳಲ್ಲಿ ಮುಖ್ಯವಾಗಿ ಕನ್ನಡ ಮತ್ತು ಇಂಗ್ಲಿಶ್ ಭಾಷೆಗಳ ಮೂಲಕ ಕಲಿಯುತ್ತಿದ್ದಾರೆ. ಅಲ್ಪಪ್ರಮಾಣದ ವಿದ್ಯಾರ್ಥಿಗಳು ಕೆಳಹಂತದಲ್ಲಿ ಬೇರೆ ಭಾಷೆಗಳನ್ನು ಮಾಧ್ಯಮವನ್ನಾಗಿ ಹೊಂದಿರುವುದುಂಟು. ಹೀಗೆ ಕನ್ನಡವನ್ನು ಮಾಧ್ಯಮವಾಗಿ ಹೊಂದಿರುವುದರಿಂದ ವಿವಿಧ ವಿಷಯಗಳ ಕಲಿಕೆ ಮಕ್ಕಳಿಗೆ ಸುಲಭವಾಗಿದೆ ಎಂದೂ, ಅಥವಾ ಇಂಗ್ಲಿಶನ್ನು ಮಾಧ್ಯಮವಾಗಿ ಹೊಂದಿರುವ ವಿದ್ಯಾರ್ಥಿಗಳಿಗೆ ಅವರ ಕಲಿಕೆ ಕಷ್ಟಕರವಾಗಿದೆ ಎಂದೂ ಸಾಬೀತು ಮಾಡಲು ಯಾವ ಮಾನದಂಡಗಳೂ ಇಲ್ಲ. ಇದು ಅಭಿಪ್ರಾಯದ ನೆಲೆಯಲ್ಲೇ ನಿಂತಿದೆ. ಈ ಎರಡೂ ಮಾಧ್ಯಮಗಳ ವಿದ್ಯಾರ್ಥಿಗಳು ತಮ್ಮ ಕಲಿಕೆಯಲ್ಲಿ ಬೇರೆಬೇರೆ ಪ್ರಮಾಣದ ಸಾಧನೆಗಳನ್ನು ತೋರುತ್ತಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ವಿದ್ಯಾರ್ಥಿಗಳು ಗಳಿಸುವ ವಿಷಯಪ್ರೌಢಿಮೆಗೂ ಅವರು ಯಾವ ಭಾಷೆಯ ಮೂಲಕ ಕಲಿತರೋ ಆ ಭಾಷೆಯ ಮೇಲೆ ಅವರಿಗಿರುವ ಪ್ರೌಢಿಮೆಗೂ ಸಂಬಂಧವಿರಲಾರದು. ಅಂದರೆ ಕನ್ನಡ ಚೆನ್ನಾಗಿ ಬಲ್ಲ ವಿದ್ಯಾರ್ಥಿ ಗಣಿತವನ್ನು ಕಲಿಯಲು ಕಷ್ಟಪಡಬಹುದು. ಹಾಗೆಯೇ ಗಣಿತವನ್ನು ಚೆನ್ನಾಗಿಬಲ್ಲ ವಿದ್ಯಾರ್ಥಿಯ ಕನ್ನಡ ಕೌಶಲ ಅದರಲ್ಲೂ ಬರೆವಣಿಗೆಯ ಕೌಶಲ ಉತ್ತಮವಾಗಿರಬೇಕಿಲ್ಲ. ಇದೇ ಮಾತು ಇಂಗ್ಲಿಶ್ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳಿಗೂ ಅನ್ವಿಸುತ್ತದೆ. ಇಂಗ್ಲಿಶ್ ಭಾಷೆಯಲ್ಲಿ ಚೆನ್ನಾಗಿ ಪ್ರಾವೀಣ್ಯವಿದ್ದರೆ ಅವರಿಗೆ ಗಣಿತದ ಕಲಿಕೆ ಸುಲಭವಾಗುವುದಿಲ್ಲ. ಹಾಗೆಯೇ ಗಣಿತವನ್ನು ಇಂಗ್ಲಿಶ್ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳು ಗಣಿತವನ್ನು ಚೆನ್ನಾಗಿ ಕಲಿತರೂ ಒಳ್ಳೆಯ ಇಂಗ್ಲಿಶ್ ಭಾಷಾಕೌಶಲಗಳನ್ನು ಪಡೆಯದಿರಬಹುದು.

ಈ ಮಾತಿಗೆ ಪುರಾವೆ ಪಡೆಯಲು ಕಷ್ಟಪಡಬೇಕಾಗಿಲ್ಲ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳೆಲ್ಲರೂ ಅದನ್ನು ಮಾಧ್ಯಮವಾಗಿ ಹೊಂದಿದ ಮಾತ್ರಕ್ಕೆ ವಿಷಯ ಪ್ರೌಢಿಮೆಯನ್ನು ಪಡೆದಿರುವುದಿಲ್ಲ. ಆದರೆ ಅವರ ಭಾಷಾಪ್ರೌಢಿಮೆ ಚೆನ್ನಾಗಿಯೇ ಇರಬಹುದು. ಶಾಲಾಶಿಕ್ಷಣ ಮುಗಿಸಿದ ಎಷ್ಟೋ ವಿದ್ಯಾರ್ಥಿಗಳಿಗೆ ಕನ್ನಡ ಸರಿಯಾಗಿ ಬರೆಯಲು ಬರುವುದಿಲ್ಲ ಎಂದು ಗೊಣಗುತ್ತೇವೆ. ಆದರೆ ಅದೇ ಮಕ್ಕಳು ಬೇರೆ ವಿಷಯಗಳಲ್ಲಿ ಸಮರ್ಥರೇ ಆಗಿರುತ್ತಾರೆ. ಉನ್ನತ ಶಿಕ್ಷಣವನ್ನು ಇಂಗ್ಲಿಶ್ ಮೂಲಕ ಪಡೆದ ತಾಂತ್ರಿಕ, ವೈದ್ಯಕೀಯ ಪದವೀಧರರು ತಂತಮ್ಮ ವಿಷಯಗಳಲ್ಲಿ ಹೆಚ್ಚಿನ ಪ್ರಾವೀಣ್ಯವನ್ನು ಪಡೆದುಕೊಂಡರೂ ಅವರ ಇಂಗ್ಲಿಶ್ ಭಾಷೆಯ ಗ್ರಹಿಕೆ, ಅಭಿವ್ಯಕ್ತಿ ಮತ್ತು ಸಂವಹನ ಕೌಶಲಗಳು ಸಾಧಾರಣ ಮಟ್ಟದಲ್ಲೇ ಇರುವುದನ್ನು ನಾವು ದಿನವೂ ಗಮನಿಸುತ್ತಿದ್ದೇವೆ. ಅಂದರೆ ವಿಷಯ ಪ್ರೌಢಿಮೆ ಮತ್ತು ಭಾಷಾ ಪ್ರೌಢಿಮೆಗಳು ಬೇರೆಬೇರೆ. ಒಂದು ಇನ್ನೊಂದನ್ನು ನಿರೀಕ್ಷಿಸುವುದಿಲ್ಲ. ಎರಡು ಪ್ರೌಢಿಮೆಗಳೂ ಒಟ್ಟಿಗೇ ಇರಬಹುದು. ಆದರೆ ಇರಬೇಕೆಂಬ ನಿಯಮವಿಲ್ಲ. ಆದ್ದರಿಂದ ಯಾವ ಭಾಷೆಯ ಮೂಲಕ ಕಲಿಯುತ್ತೇವೆ ಎಂಬುದು ಕಲಿಕೆಯ ಯಶಸ್ಸನ್ನೇ ಮಾನದಂಡವಾಗಿ ಇರಿಸಿಕೊಂಡು ನೋಡಿದಾಗ ಮಹತ್ವದ ಸಂಗತಿ ಎಂದು ಅನ್ನಿಸುವುದಿಲ್ಲ.

ಆದರೆ ಸಮಸ್ಯೆಯ ಸಂಕೀರ್ಣತೆ ಇರುವುದು ಬೇರೆ ಕಡೆ. ಅಂದರೆ ಇಂಗ್ಲಿಶ್ ಮತ್ತು ಕನ್ನಡ ಭಾಷಾಮಾಧ್ಯಮಗಳು ಮೌಲ್ಯಾತ್ಮಕ ನೆಲೆಯಲ್ಲಿ ಬೇರೆಬೇರೆಯಾಗಿವೆ.

ಇಂಗ್ಲಿಶ್ ಬುದ್ಧಿವಂತರ, ಶ್ರೀಮಂತರ ಆಯ್ಕೆ ಎಂದೂ, ಕನ್ನಡ ಅಷ್ಟು ಬುದ್ಧಿವಂತರಲ್ಲದವರ, ಬಡವರ ಆಯ್ಕೆ ಎಂದೂ ಬಿಂಬಿಸಲಾಗಿದೆ. ಇದಕ್ಕೆ ತಾರ್ಕಿಕ ಸಮರ್ಥನೆಗಳೇನೂ ಇಲ್ಲ. ಈ ಪರಿಸ್ಥಿತಿ ಉಂಟಾಗುವುದಕ್ಕೆ ಸಾಮಾಜಿಕ ವಿನ್ಯಾಸಗಳು ಕಾರಣವಾಗಿವೆ. ಶಿಕ್ಷಣದ ಸಾರ್ವತ್ರಿಕತೆಯು ನಮ್ಮ ಸಂವಿಧಾನದ ಆದರ್ಶ. ಎಲ್ಲರೂ ಸಮಾನರು. ಆದ್ದರಿಂದ ಸಮಾನ ಅವಕಾಶಗಳನ್ನು ಪಡೆಯಬೇಕು ಎಂಬ ಆದರ್ಶ ನಮ್ಮದು. ಆದರೆ ಈ ಆದರ್ಶವು ಪ್ರಾಯೋಗಿಕ ನೆಲೆಯಲ್ಲಿ ಭಿನ್ನವಿನ್ಯಾಸಗಳನ್ನು ಪಡೆದುಕೊಳ್ಳುತ್ತದೆ. ಆಳುವ ವ್ಯವಸ್ಥೆಗೆ ಸಮಾನತೆ ಎನ್ನುವುದು ಒಂದು ಅವಕಾಶ ಕಲ್ಪನೆ; ಆದರೆ ಸಾಮರ್ಥ್ಯ ಕಲ್ಪನೆಯಲ್ಲ. ಅಂದರೆ ಎಲ್ಲರೂ ಸಮಾನ ಅವಕಾಶಗಳನ್ನು ಪಡೆಯಲು ಅಡ್ಡಿಗಳನ್ನು ಸೃಷ್ಟಿಸದಿದ್ದರೂ ಸಾಮರ್ಥ್ಯದ ಸಮಾನತೆ ಇಲ್ಲದೆ ಹೋದರೆ ಅಂತಹ ಅವಕಾಶಗಳನ್ನು ಎಲ್ಲರೂ ಬಳಸಿಕೊಳ್ಳುವ ಸಾಧ್ಯತೆಯೇ ಕಡಿಮೆಯಾಗುತ್ತದೆ.

ಅವಕಾಶಗಳ ಸಮಾನತೆಯು ಪ್ರಾಯೋಗಿಕ ನೆಲೆಯಲ್ಲಿ ಸೋಲುವಂತೆ ಮಾಡಲು ತಾರತಮ್ಯದ ನೆಲೆಗಳನ್ನು ವ್ಯವಸ್ಥೆಯೊಳಗೇ ರೂಢಿಸಲಾಗುತ್ತದೆ. ಸಿರಿವಂತಿಕೆ, ಜಾತಿ, ಲಿಂಗ ಇತ್ಯಾದಿ ಭೇದಗಳು ಸಾಮಾಜಿಕ ಮೂಲದವು. ಇವುಗಳನ್ನು ನಿಯತವಾಗಿರಿಸಿಕೊಂಡು ಸಮಾನತೆಯ ನೆಲೆಗಳನ್ನು ರೂಪಿಸಲಾಗುತ್ತಿದೆ. ಜೊತೆಗೆ ವ್ಯಕ್ತಿಯ ಬುದ್ಧಿಮತ್ತೆಯ ಅಂಶವನ್ನು ಸೇರಿಸಲಾಗಿದೆ. ಈ ಅವಕಾಶ ಸೃಷ್ಟಿಯು ತಂತಾನೇ ಯಶಸ್ವಿಯಾಗದಂತೆ ಒಳಗಿನ ಒಂದು ತಾರತಮ್ಯವನ್ನು ಸೃಷ್ಟಿಸಬೇಕಾಗುತ್ತದೆ. ಇಲ್ಲಿಯೇ ಇಂಗ್ಲಿಶ್ ಭಾಷಾಮಾಧ್ಯಮದ ಪ್ರವೇಶವಾಗುತ್ತದೆ. ಕನ್ನಡ ಮತ್ತು ಇಂಗ್ಲಿಶ್ ಎಂಬ ಎರಡು ಆಯ್ಕೆಗಳನ್ನು ಸೃಷ್ಟಿಸಿ ಕನ್ನಡದ ಆಯ್ಕೆಯು ಯಥಾಸ್ಥಿತಿಯ ಮುಂದುವರಿಕೆ ಎಂದೂ ಇಂಗ್ಲಿಶ್ ಆಯ್ಕೆಯು ಸಾಮಾಜಿಕ ಚಲನಶೀಲತೆಗೆ ನೀಡಿದ ಅವಕಾಶ ಎಂದೂ ತೋರತೊಡಗಿದ ಕೂಡಲೇ ಒಂದು ಅಂತಸ್ಥ ತಾರತಮ್ಯವನ್ನು ರೂಢಿಸಿಕೊಟ್ಟಂತಾಯಿತು. ಸಹಜವಾಗಿಯೇ ಇಂತಹ ಪರಿಸ್ಥಿತಿಯಲ್ಲಿ ಜನರು ಚಲನಶೀಲತೆ ಮತ್ತು ಬದಲಾವಣೆಗಳ ಪರವಾಗಿರುತ್ತಾರೆ. ಹೀಗೆ ಅದರ ಪರವಾಗಿಯೇ ಇರುವುದರಿಂದ ತಾವು ಉತ್ತಮ ಅವಕಾಶಗಳತ್ತ ನಡೆಯಬಹುದು ಎಂಬ ನಂಬಿಕೆ ಅವರದು. ಈ ಕಾರಣದಿಂದ ಇಂಗ್ಲಿಶ್ ಮಾಧ್ಯಮ ಕನ್ನಡ ಮಾಧ್ಯಮಕ್ಕಿಂತ ಹೆಚ್ಚು ಬಯಕೆಯ ನೆಲೆಗಳನ್ನು ಉದ್ದೀಪಿಸುತ್ತದೆ. ಈ ಮೊದಲು ಹೇಳಿದಂತೆ ಕಲಿಕೆಯ ವಿಷಯದ ಪ್ರೌಢಿಮೆ ಮತ್ತು ಅವರು ಕಲಿತ ಭಾಷಾಪ್ರೌಢಿಮೆ ಎರಡೂ ಬೇರೆಬೇರೆ. ಆದರೂ ಈ ಹೊಸ ಪರಿಪ್ರೇಕ್ಷ್ಯದಲ್ಲಿ ಇಂಗ್ಲಿಶ್ ಮಾಧ್ಯಮದ ಆಯ್ಕೆ ತರ್ಕಬದ್ಧವಾಗಿ ಮುಂಚೂಣಿಗೆ ಬರುತ್ತದೆ. ಆಗ ಜನರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಇಂಗ್ಲಿಶ್ ಮಾಧ್ಯಮವನ್ನೇ ಆಯ್ಕೆ ಮಾಡುತ್ತಾರೆ. ತಾರತಮ್ಯವನ್ನು ಕಾಪಾಡಿಕೊಳ್ಳುವುದೇ ಆಳುವ ವ್ಯವಸ್ಥೆಯ ಮೂಲ ಉದ್ದೇಶವಾದ್ದರಿಂದ ಈ ನೀತಿಯು ಉದ್ದೇಶಕ್ಕೆ ಪೂರಕವಾಗಿದೆ ಎಂದು ತಿಳಿಯಲಾಗುತ್ತದೆ.

ಇಂಗ್ಲಿಶ್ ಮಾಧ್ಯಮವನ್ನು ವಿರೋಧಿಸುವವರು ಪ್ರಾಥಮಿಕ ಹಂತದಲ್ಲಿ ಮಗುವು ಭಾಷಾಕಲಿಕೆ ಮತ್ತು ವಿಷಯ ಕಲಿಕೆಗಳನ್ನು ಒಟ್ಟೊಟ್ಟಿಗೇ ಮಾಡಬೇಕಾಗುತ್ತದೆ. ಇದು ಶ್ರಮದಾಯಕ ಎನ್ನುತ್ತಾರೆ. ಈ ಮಾತನ್ನು ಸಮರ್ಥಿಸಲು ಆಧಾರಗಳಿಲ್ಲ. ಏಕೆಂದರೆ

ಈಗಾಗಲೇ ಗಮನಿಸಿರುವಂತೆ ಇವೆರಡೂ ಬೇರೆ ಬೇರೆ ರೀತಿಯಲ್ಲಿ ನಡೆಯುವ ಕಲಿಕೆಗಳು. ವಿಷಯಗಳ ಕಲಿಕೆಗೆ ಅನುಗಮನ ತಾರ್ಕಿಕತೆ ಹೆಚ್ಚಾಗಿ ಬಳಕೆಯಾದರೆ, ಭಾಷೆಯ ಕಲಿಕೆಗೆ ನಿಗಮನ ತರ್ಕವನ್ನು ಬಳಸಲಾಗುತ್ತದೆ. ಆದ್ದರಿಂದ ಈ ಹಂತದಲ್ಲಿ ಕಲಿಕೆಯ ಯಶಸ್ಸು ಅದು ಪರಿಚಿತ ಭಾಷೆಯೋ ಅಪರಿಚಿತ ಭಾಷೆಯೋ ಎಂಬ ಅಂಶವನ್ನು ಅವಲಂಬಿಸುವುದಿಲ್ಲ. ಕಲಿಯುವವರು ಇಂಗ್ಲಿಶ್ ಭಾಷೆಯನ್ನು ಕಲಿಯುತ್ತಿರುತ್ತಾರೆ. ಜೊತೆಗೆ ಇತರ ವಿಷಯಗಳನ್ನೂ ಕಲಿಯುತ್ತಿರುತ್ತಾರೆ. ಈ ಜೋಡಿ ಪ್ರಕ್ರಿಯೆಯಲ್ಲಿ ಒಂದು ಇನ್ನೊಂದನ್ನು ನೇತ್ಯಾತ್ಮಕವಾಗಿ ಪ್ರಭಾವಿಸುತ್ತದೆ ಎಂದು ವಾದಿಸಲು ಪುರಾವೆ ಇಲ್ಲ. ಆದ್ದರಿಂದ ಇಂಗ್ಲಿಶ್ ಮಾಧ್ಯಮದ ಸಾಮಾಜಿಕ ನೆಲೆಯ ಮೌಲ್ಯಭಾರವನ್ನು ಯಥಾವತ್ತಾಗಿ ನಾವು ಒಂದು ಕಡೆಯಿಂದ ಇನ್ನೊಂದು ಕಡೆಗೆ ರವಾನಿಸಲಾರೆವು

ಕನ್ನಡ ಮತ್ತು ಇಂಗ್ಲಿಶ್‌ಗಳ ನಡುವೆ ಇರುವ ಈ ಪೈಪೋಟಿಯಲ್ಲಿ ಇಂಗ್ಲಿಶ್ ಹೆಚ್ಚು ಯಶಸ್ಸನ್ನು ಪಡೆದಿದೆ ಎಂದು ನಮಗೆ ತೋರುತ್ತದೆ. ಆದರೆ ಪರಿಸ್ಥಿತಿ ಕೊಂಚ ಭಿನ್ನವಾಗಿಯೇ ಇದೆ. ಕನ್ನಡವನ್ನು ಬಿಟ್ಟುಕೊಟ್ಟು ಒತ್ತಾಯ ಪೂರ್ವಕವಾಗಿ ಇಂಗ್ಲಿಶ್ ಮಾಧ್ಯಮಕ್ಕೆ ತಳ್ಳಲಾದ ವಿದ್ಯಾರ್ಥಿಗಳು ಔಪಚಾರಿಕವಾಗಿ ಮಾತ್ರ ಇಂಗ್ಲಿಶನ್ನು ನಂಬಿದ್ದಾರೆ. ಅನೌಪಚಾರಿಕವಾಗಿ ಅವರು ತಮ್ಮ ಕಲಿಕೆಯ ಮಾಧ್ಯಮವಲ್ಲದ ಕನ್ನಡವನ್ನೇ ಆಶ್ರಯಿಸುತ್ತಾರೆ. ಇಲ್ಲಿ ಒಂದು ವಿಭಿನ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಕಡೆ ಇಂಗ್ಲಿಶಿನ ಸ್ಥಾನವೇನು ಎಂಬ ಪ್ರಶ್ನೆ ಮುಂಚೂಣಿಗೆ ಬರುತ್ತದೆ. ವಿಶ್ವವಿದ್ಯಾಲಯದ ಹಂತದಲ್ಲಿ, ಅದರಲ್ಲೂ ಪದವಿ ಮತ್ತು ಸ್ನಾತಕೋತ್ತರ ಹಂತದಲ್ಲಿ ಇಂಗ್ಲಿಶನ್ನು ಮಾಧ್ಯಮವನ್ನಾಗಿ ಹೊಂದಿರುವ ವಿದ್ಯಾರ್ಥಿಗಳು ಬಹಳ ಕಡೆಗಳಲ್ಲಿ ತಮ್ಮ ಉತ್ತರ ಪತ್ರಿಕೆಗಳನ್ನು ಕನ್ನಡದಲ್ಲೇ ಬರೆಯುತ್ತಿದ್ದಾರೆ. ಕೆಲವು ಪ್ರಸಂಗಗಳಲ್ಲಿ ಅಧ್ಯಾಪಕರು ಕೂಡಾ ತರಗತಿಗಳಲ್ಲಿ ಇಂಗ್ಲಿಶ್ ಮತ್ತು ಕನ್ನಡ, ಅಥವಾ ಇನ್ನೂ ಮುಂದುವರೆದು ಇಂಗ್ಲಿಶ್ ಬಿಟ್ಟು ಕನ್ನಡ ಎಂಬ ಹಂತದವರೆಗೆ ಚಲಿಸುತ್ತಾರೆ. ಅಂದರೆ ಕನ್ನಡ ಮತ್ತು ಇಂಗ್ಲಿಶ್ ಎರಡರಲ್ಲೂ ಪಾಠ ಮಾಡುತ್ತಾರೆ. ಅಥವಾ ಕೇವಲ ಕನ್ನಡದಲ್ಲಷ್ಟೇ ಪಾಠ ಮಾಡುತ್ತಾರೆ. ಪಠ್ಯ ಪುಸ್ತಕಗಳ ಮಟ್ಟಿಗೂ ಈ ಮಾತೇ ನಿಜ. ಇಂಗ್ಲಿಶ್ ಪಠ್ಯಗಳನ್ನು ಬಳಸುವ ಜೊತೆಗೆ ಅವುಗಳ ಕನ್ನಡಾನುವಾದಗಳನ್ನು, ಸಂಗ್ರಹಾನುವಾದಗಳನ್ನು, ಇಲ್ಲವೇ ಆಧರಿಸಿ ಬರೆದ ಸ್ವತಂತ್ರ ಕನ್ನಡ ಪುಸ್ತಕಗಳನ್ನು ಪರಿಶೀಲಿಸುತ್ತಾರೆ. ಇದು ವಿದ್ಯಾರ್ಥಿ ಶಿಕ್ಷಕರು ಇಬ್ಬರಿಗೂ ಸಮಾನವಾದದ್ದು. ಇಂತಹ ಕಡೆ ಕನ್ನಡ ಸಹಶಿಕ್ಷಣ ಮಾಧ್ಯಮವಾಗಿ ಬಳಕೆಯಾಗಿ ಬಿಡುತ್ತದೆ. ಇಂಗ್ಲಿಶ್‌ನ ಔಪಚಾರಿಕತೆಯಲ್ಲಿ ಕನ್ನಡದ ಈ ಅನೌಪಚಾರಿಕ ಪ್ರವೇಶ ಈಗ ನಿರಂತರವಾಗಿ ನಡೆಯುತ್ತಿದೆ.

ಇನ್ನೊಂದು ಗಮನಿಸಬೇಕಾದ ಸಂಗತಿ ಎಂದರೆ ಕೆಲವು ಮಾನವಿಕ ವಿಷಯಗಳ ಕಲಿಕೆ ಮತ್ತು ಪರೀಕ್ಷೆಗೆ ಕನ್ನಡವನ್ನು ಬಳಸುತ್ತಿರುವುದು. ಮತ್ತೆ ಕೆಲವು ವಿಷಯ ಗಳಿಗೆ ಹಠ ಹಿಡಿದು ಇಂಗ್ಲಿಶನ್ನೇ ಬಳಸುತ್ತಿದ್ದಾರೆ. ಶೈಕ್ಷಣಿಕ ನೀತಿಯ ನೆಲೆಯಲ್ಲೂ ಈ ವಿಭಜನೆಯು ಸಾಧುವೆಂದು ತೋರಿದೆ. ಏಕೆಂದರೆ ಕೆಲವು ಪಠ್ಯಕ್ರಮಗಳನ್ನು ಅನುಸರಿಸುವ ಶಾಲೆಗಳಲ್ಲಿ ಗಣಿತ ಮತ್ತು ವಿಜ್ಞಾನಗಳನ್ನು ಇಂಗ್ಲಿಶ್‌ನಲ್ಲಿಯೂ, ಸಮಾಜವಿಜ್ಞಾನವನ್ನು

ಪ್ರಾದೇಶಿಕ ಭಾಷೆಯಲ್ಲೂ ಬೋಧಿಸುವ ವ್ಯವಸ್ಥೆ ಇದೆ. ಇದು ಆ ವಿಷಯಗಳ ನಡುವೆ ಇರುವ ಬೌದ್ಧಿಕ ಅಂತರವನ್ನು ಸೂಚಿಸುತ್ತದೆಯೇ? ಕಲಿಯಲು ಹೆಚ್ಚು ಕಷ್ಟಪಡಬೇಕಾದ ಗಣಿತ, ವಿಜ್ಞಾನಗಳಿಗೆ ಇಂಗ್ಲಿಶನ್ನೂ, ಮಾನವಿಕಗಳನ್ನು ಕಲಿಯುವುದು ಸುಲಭವಾದ್ದರಿಂದ ಅಲ್ಲಿ ಪ್ರಾದೇಶಿಕ ಭಾಷೆಯನ್ನೂ ಬಳಸಬೇಕೆಂಬ ತರ್ಕ ಇದ್ದಂತೆ ಇದೆ. ಆದರೆ ತಿರುಳಿನಲ್ಲಿ ಹಾಗಲ್ಲ. ಗಣಿತ ಮತ್ತು ವಿಜ್ಞಾನ ವಿಷಯಗಳು ಮಾಹಿತಿ ಪ್ರಧಾನ ಆಗುವುದಕ್ಕಿಂತ ಪರಿಕಲ್ಪನೆ ಪ್ರಧಾನವಾದವು. ಅವುಗಳ ಕಲಿಕೆಗೂ ಕಲಿಯುವ ಭಾಷೆಗೂ ಸಂಬಂಧವಿಲ್ಲ. ಅಲ್ಲಿ ಇಂಗ್ಲಿಶನ್ನು ಬಳಸುತ್ತಿರುವುದು ಕೇವಲ ಸಾಮಾಜಿಕ ಪ್ರತಿಷ್ಠೆಯ ಸಂಕೇತವಾಗಿದೆ. ಈ ಶೈಕ್ಷಣಿಕ ಆಯ್ಕೆಯ ವಿಷಯ ಒಂದು ಬದಿಗಿರಲಿ. ವಿದ್ಯಾರ್ಥಿಗಳೇ ಉನ್ನತ ಶಿಕ್ಷಣದಲ್ಲಿ ಕನ್ನಡವನ್ನು ತಮ್ಮ ಮಾಧ್ಯಮವನ್ನಾಗಿ ಪರಿವರ್ತಿಸಿಕೊಂಡುಬಿಟ್ಟಿದ್ದಾರೆ. ಕೊನೆಯ ಪಕ್ಷ ಮಾನವಿಕ ವಿಷಯಗಳಲ್ಲಂತೂ ಈ ಮಾತು ನಿಜ.

ಸುಮಾರು ನಲವತ್ತು ವರ್ಷಗಳ ಹಿಂದೆ ಕುವೆಂಪು ಅವರು ಇಂಗ್ಲಿಶನ್ನು ಗ್ರಂಥಾಲಯ ಭಾಷೆಯನ್ನಾಗಿ ಮಾತ್ರ ಉಳಿಸಿಕೊಳ್ಳಬೇಕೆಂದು ಸಲಹೆ ನೀಡಿದ್ದಾರೆ. ಅಂದರೆ ತರಗತಿಯಲ್ಲಿ ಪಾಠ ಮಾಡಲು ಕನ್ನಡವನ್ನು ಬಳಸಬೇಕೆಂದೂ ಅದಕ್ಕೆ ಪೂರಕವಾದ ಅಧ್ಯಯನಕ್ಕಾಗಿ ಗ್ರಂಥಾಲಯಗಳಲ್ಲಿ ಇಂಗ್ಲಿಶ್ ಗ್ರಂಥಗಳನ್ನು ಬಳಸುವುದು ಸಾಧ್ಯವೆಂದೂ ಈ ಅಭಿಪ್ರಾಯದ ಹಿಂದಿನ ತರ್ಕವಾಗಿದೆ. ಹೀಗಿದ್ದಾಗಲೂ ಪರೋಕ್ಷವಾಗಿ ಇಂಗ್ಲಿಶ್ ಮೂಲಕ ಕಲಿಯಬೇಕಾಗಿರುವ ವಿದ್ಯಾರ್ಥಿಗಳು ಕನ್ನಡ ಪಠ್ಯಸಾಮಗ್ರಿ ಮತ್ತು ಪರಾಮರ್ಶನ ಸಾಮಗ್ರಿಯ ಕೊರತೆಯಿಂದಾಗಿ ಇಂಗ್ಲಿಶ್ ಗ್ರಂಥಗಳನ್ನೇ ಆಕರಗಳನ್ನಾಗಿ ಬಳಸುತ್ತಾರೆ. ಇದು ಅವರ ಕಲಿಕೆಗೆ ನೆರವಾಗುವ ಅಂಶವೆಂದು ಪರಿಗಣಿತವಾಗಿದೆಯೇ ಹೊರತು ಅಡ್ಡಿಯಾಗುವ ಅಂಶವಾಗಿ ಅಲ್ಲ. ಇಷ್ಟೆಲ್ಲಾ ಪರಿಶೀಲನೆಯಿಂದ ನಾವು ನಿರ್ಣಯಿಸಬಹುದಾದ ಸಂಗತಿ ಇಷ್ಟು; ಕಲಿಕೆಯ ಮಾಧ್ಯಮ ಕನ್ನಡ ಆಗಬೇಕು ಎಂಬುದು ಒಂದು ಶೈಕ್ಷಣಿಕ ತತ್ತ್ವದ ಆಯ್ಕೆಯಲ್ಲ. ಸಾಮಾಜಿಕ ಸಂದರ್ಭದ ಒತ್ತಡ ಮಾತ್ರ. ಇಂಗ್ಲಿಶ್ ಕನ್ನಡದೊಡನೆ ಸಹಶಿಕ್ಷಣ ಮಾಧ್ಯಮವಾಗಿರುವ ಪರಿಸ್ಥಿತಿ ವ್ಯಾಪಕವಾಗಿದೆ. ಕೊನೆಗೆ ವಿಷಯಪ್ರೌಢಿಮೆಯೂ ಕಲಿಕೆಯ ಮಾಧ್ಯಮವನ್ನು ಪೂರ್ಣವಾಗಿ ಅವಲಂಬಿಸಿಲ್ಲ.

ಕರ್ನಾಟಕದಲ್ಲಿ ಕಲಿಕೆಯ ಮಾಧ್ಯಮದ ವಿಷಯ ಶೈಕ್ಷಣಿಕ ನೆಲೆಯಿಂದ ಸಾಮಾಜಿಕ ನೆಲೆಗೆ ದಾಟಿಬಿಟ್ಟಿದೆ. ಏಕೀಕರಣದ ಮೊದಲ ಎರಡು ದಶಕಗಳಲ್ಲಿ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಯಾವುದು ಕಲಿಕೆಯ ಮಾಧ್ಯಮವಾಗಬೇಕು ಎಂಬ ಪ್ರಶ್ನೆ ಗಾಢವಾಗಿ ಚರ್ಚೆಯಾಗಲಿಲ್ಲ. ಅದು ಕನ್ನಡವೇ ಆಗಿರುತ್ತದೆ ಎಂಬ ಬಗೆಗೆ ಒಂದು ಒಪ್ಪಂದ ಇದ್ದಂತೆ ತೋರುತ್ತದೆ. ಐವತ್ತಾರರ ಸುಮಾರಿನಲ್ಲಿ ಕರ್ನಾಟಕದ ಹೊಸ ಭಾಗಗಳಲ್ಲಿ ಕನ್ನಡ ಮಾತ್ರ ಶಿಕ್ಷಣ ಮಾಧ್ಯಮವಾಗಿರಲಿಲ್ಲ. ಮುಖ್ಯವಾಗಿ ಉರ್ದು ಮತ್ತು ಮರಾಠಿಗಳು ಶಾಲೆಯ ಕಲಿಕೆಯ ಮಾಧ್ಯಮಗಳಾಗಿ ಇದ್ದ ಉದಾಹರಣೆಗಳು ಸಾಕಷ್ಟಿವೆ. ಆ ಹೊತ್ತಿಗೆ ಕ್ರಿಶ್ಚಿಯನ್ ಮಿಷನರಿಗಳು ನಡೆಸುತ್ತಿದ್ದ ಶಾಲೆಗಳಲ್ಲಿ ಇಂಗ್ಲಿಶ್ ಶಿಕ್ಷಣಮಾಧ್ಯಮವಾಗಿತ್ತು. ಆ ಶಾಲೆಗಳು ಸಮಾಜದ ಉನ್ನತ ಸ್ತರದ ವಿದ್ಯಾರ್ಥಿಗಳನ್ನು ಮಾತ್ರ ಹೊಂದಿರುತ್ತಿದ್ದವು.

ಇದನ್ನು ಸಮಾನತೆಯ ಪ್ರಶ್ನೆಯಾಗಿಯೂ ಕೂಡ ಆಗ ಯಾರೂ ಚರ್ಚಿಸಿದಂತೆ ತೋರುವುದಿಲ್ಲ. ಅದು ಇರುವುದೇ ಹಾಗೆ ಎಂದು ಒಪ್ಪಿದಂತೆ ಕಾಣುತ್ತಿದೆ. ೧೯೭೦ರ ನಂತರ ಕರ್ನಾಟಕದ ರಾಜಕಾರಣದಲ್ಲಿ ಆದ ಪಲ್ಲಟಗಳು ಶೈಕ್ಷಣಿಕವಾಗಿಯೂ ಪ್ರಭಾವ ಬೀರತೊಡಗಿದವು. ಇದರ ಎಲ್ಲ ಆಯಾಮಗಳನ್ನು ಇಲ್ಲಿ ಚರ್ಚಿಸುವುದಿಲ್ಲವಾದರೂ ಮುಖ್ಯವಾಗಿ ಶಿಕ್ಷಣದ ಸಾರ್ವತ್ರೀಕರಣ ಅಗತ್ಯವಾಗ ತೊಡಗಿತ್ತು. ಹೊಸ ಶಾಲೆಗಳನ್ನು ತೆರೆಯುವುದು ಸರ್ಕಾರದ ಆದ್ಯತೆಯಾಗಿತ್ತಾದರೂ ಆ ಹೊತ್ತಿನ ರಾಜಕೀಯ ನಿರ್ಧಾರಗಳಿಂದಾಗಿ ಖಾಸಗಿ ಶಾಲೆಗಳು ಹೆಚ್ಚಿನ ಪ್ರಮಾಣದಲ್ಲಿ ಆರಂಭಗೊಂಡವು. ಈ ಶಾಲೆಗಳಿಗೆ ಸರ್ಕಾರ ಅನುದಾನವನ್ನು ನೀಡತೊಡಗಿತ್ತು. ಈ ಅನುದಾನ ನೀಡುವಾಗ ಸರ್ಕಾರದ ಶೈಕ್ಷಣಿಕ ನೀತಿಯನ್ನು ಅನುಷ್ಠಾನಗೊಳಿಸುವುದು ಆ ಶಾಲೆಗಳ ಹೊಣೆ ಎಂಬುದನ್ನು ಸ್ಪಷ್ಟಪಡಿಸಲಾಗಿತ್ತು. ಆದರೆ ಎಂಟನೇ ದಶಕದ ಆರಂಭ ಆದ ಮೇಲೆ ಪರಿಸ್ಥಿತಿ ಬೇರೊಂದು ದಿಕ್ಕನ್ನು ಹಿಡಿಯಿತು. ರಾಜ್ಯಸರ್ಕಾರದ ಮನ್ನಣೆಯನ್ನಷ್ಟೇ ನಿರೀಕ್ಷಿಸಿ ಅನುದಾನವನ್ನು ಅಪೇಕ್ಷಿಸದ ಶಾಲೆಗಳು ಕರ್ನಾಟಕದಲ್ಲಿ ಕಾರ್ಯಾರಂಭ ಮಾಡಿದವು. ಆರ್ಥಿಕವಾಗಿ ತಾವು ಸ್ವತಂತ್ರವಾಗಬೇಕಾದರೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ತಾವೇ ನಿರ್ಧರಿಸುವ ಹಕ್ಕು ಇರಬೇಕೆಂಬ ನೆಲೆಯನ್ನು ಅವು ಆಯ್ದುಕೊಂಡವು. ಇಲ್ಲಿಂದ ಆಡಳಿತಾತ್ಮಕವಾದ ಜಂಜಡಗಳು ಮೊದಲಾಗುತ್ತವೆ. ಶಾಲೆಯಲ್ಲಿ ಯಾವ ಭಾಷೆಯ ಮೂಲಕ ಕಲಿಸಬೇಕು ಎಂಬ ನಿರ್ಣಯವನ್ನು ಸರ್ಕಾರ ಸೂಚಿಸಿದರೂ ಅದರ ಅನುಷ್ಠಾನ ಆಗುವಲ್ಲಿ ವ್ಯಾಪಕವಾದ ಉಲ್ಲಂಘನೆಗಳು ಕಂಡುಬಂದವು. ಸರ್ಕಾರವೇ ರಚಿಸಿದ ವಿವಿಧ ಸಮಿತಿಗಳ ವರದಿಗಳು ಈ ಅಂಶವನ್ನು ಬಯಲಿಗಿಡುತ್ತವೆ. ಡಾ. ಎಚ್. ನರಸಿಂಹಯ್ಯ ಅವರ ಸಮಿತಿ ನೀಡಿದ ವರದಿ ಅದಕ್ಕೊಂದು ನಿದರ್ಶನ.

ಇದರ ಜೊತೆಗೆ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳು ಸಂವಿಧಾನ ಬದ್ಧವಾಗಿ ತಮಗಿರುವ ಹಕ್ಕನ್ನು ಉಲ್ಲೇಖಿಸಿ ಅವುಗಳನ್ನು ಕಾಯ್ದುಕೊಳ್ಳಲು ನ್ಯಾಯಾಲಯದ ವಿವಿಧ ಹಂತಗಳಲ್ಲಿ ಹೋರಾಟಗಳನ್ನು ಮೊದಲು ಮಾಡಿದ್ದವು. ಈ ಹೋರಾಟದಲ್ಲಿ ಮಾಧ್ಯಮವು ಯಾವುದಾಗಿರಬೇಕು ಎಂದು ನಿರ್ಧರಿಸುವ ಹಕ್ಕು ಶಾಲೆಯ ಆಡಳಿತಮಂಡಳಿಗಳಿಗೆ ಇರಬೇಕು ಎಂಬುದು ಮುಖ್ಯ ವಾದವಾಗಿತ್ತು. ವಿವಿಧ ಮೊಕದ್ದಮೆಗಳು ಅವುಗಳ ಕಾನೂನಿನ ಅಂಶಗಳು, ತೀರ್ಪುಗಳು, ಅನಂತರದ ಶಾಸಕಾಂಗ, ಕಾರ್ಯಾಂಗದ ಕೆಲಸಗಳು ಇವೆಲ್ಲವೂ ಪ್ರತ್ಯೇಕ ಅಧ್ಯಯನಕ್ಕೆ ವಸ್ತುವಾಗುತ್ತವೆ. ಈ ನ್ಯಾಯಾಂಗದ ನೆಲೆಯ ಮುಖಾಮುಖಿಗಳಿಂದಾಗಿ ಎಷ್ಟೋ ಸಮಸ್ಯೆಗಳು ಪರಿಹಾರವಾಗದೆ ಹಾಗೇ ಉಳಿದವು. ಹೀಗೆ ನ್ಯಾಯಿಕ ಬಿಕ್ಕಟ್ಟುಗಳನ್ನು ಉಂಟು ಮಾಡುವ ಮೂಲಕವೇ ಖಚಿತ ನಿರ್ಧಾರಗಳನ್ನು ತೆಗೆದುಕೊಳ್ಳುವ ನಿರ್ಣಾಯಕ ಹಂತವನ್ನು ಸರ್ಕಾರ ಉದ್ದೇಶ ಪೂರ್ವಕವಾಗಿಯೇ ಮುಂದೂಡುತ್ತಾ ಬಂದಿದೆಯೇನೋ ಎಂದು ಯೋಚಿಸಲು ಅವಕಾಶವಿದೆ. ನಮ್ಮ ಕಾರ್ಯಾಂಗಗಳು ಇಂತಹ ತಂತ್ರಗಳನ್ನು ಅನುಸರಿಸುವುದು ಹೊಸದೇನೂ ಅಲ್ಲ.

ಮುಖ್ಯ ಪ್ರಶ್ನೆ ಇದ್ದದ್ದು ಎರಡು ನೆಲೆಯಲ್ಲಿ. ಒಂದು: ಎಲ್ಲಾ ಶಾಲೆಗಳೂ ಕನ್ನಡವನ್ನು ಕಲಿಸಬೇಕು. ಎರಡು: ಕಲಿಕೆಯ ಮಾಧ್ಯಮವಾಗಿ ನಿರ್ದಿಷ್ಟ

ಕಾಲಾವಧಿಯವರೆಗೆ ಕನ್ನಡವನ್ನು ಮಾತ್ರ ಬಳಸಬೇಕು. ಎರಡನೆಯ ನಿರ್ಣಯವನ್ನು ಜಾರಿಗೆ ಕೊಡಲು ರಾಜ್ಯಾಂಗದ ಕೆಲವು ಅಧಿಕಾರಗಳು ಅಡ್ಡಿಯಾಗುತ್ತವೆ. ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರಿಗೆ ತಮ್ಮ ಭಾಷೆಯಲ್ಲಿ ಮತ್ತು ಭಾಷೆಯನ್ನು ಕಲಿಯುವ ಹಕ್ಕನ್ನು ನಿರಾಕರಿಸಲು ಬರುವುದಿಲ್ಲ. ಇದರಿಂದ ಉರ್ದು, ಮರಾಠಿ, ತೆಲುಗು, ತಮಿಳು ಇವು ಕಲಿಕೆಯ ಮಾಧ್ಯಮಗಳಾಗಿರುವ ಅವಕಾಶ ಉಳಿದುಕೊಳ್ಳುತ್ತದೆ. ರಾಷ್ಟ್ರಭಾಷೆ ಎಂಬ ಅಧಿಕಾರದಿಂದ ಹಿಂದಿಯೂ ಈ ಸೌಲಭ್ಯವನ್ನು ಪಡೆದುಕೊಳ್ಳುತ್ತದೆ. ಹಾಗೆಯೇ ಇಂಗ್ಲಿಶನ್ನು ಕೂಡ ಸೀಮಿತ ಅರ್ಥದಲ್ಲೇ ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರ ಭಾಷೆ ಎಂದು ಬಿಂಬಿಸಲು ಯತ್ನಗಳು ನಡೆದವು. ಈ ಕಾರಣಗಳಿಂದ ಕನ್ನಡದ ಅನುಷ್ಠಾನ ಈ ನೆಲೆಯಲ್ಲಿ ಅಸಾಧ್ಯವಾಯಿತು.

ಕನ್ನಡವನ್ನು ಒಂದು ಭಾಷೆಯನ್ನಾಗಿ ಕಲಿಸಬೇಕು ಎಂಬ ನಿರ್ಧಾರವನ್ನು ಜಾರಿಗೆ ಕೊಡಲು ಸರ್ಕಾರಕ್ಕೆ ಅಷ್ಟೇನೂ ಕಷ್ಟವಾಗಲಿಲ್ಲ. ಆದರೆ ಅದು ಪ್ರಥಮ ಭಾಷೆಯಾಗಬೇಕೇ ಅಥವಾ ದ್ವಿತೀಯ, ತೃತೀಯ ಭಾಷೆಯಾಗಿ ಉಳಿಯಬೇಕೇ ಎಂಬ ಪ್ರಶ್ನೆ ಮುಖ್ಯವಾಯಿತು. ಹಾಗೆ ನೋಡಿದರೆ ಕನ್ನಡವನ್ನು ಬೋಧನೆಯ ವಿಷಯವಾಗಿ ಉಳಿಸಿಕೊಳ್ಳಲು ಹೆಚ್ಚಿನ ವಿರೋಧಗಳೇನೂ ಕಂಡುಬಂದಂತಿಲ್ಲ. ಆದರೆ ಹಾಗೆ ಕಲಿಸುವಾಗ ಪಠ್ಯಕ್ರಮ, ಬೋಧನಾವಿಧಾನ, ಪ್ರಾಶಸ್ತ್ಯ ಇವುಗಳೆಲ್ಲವೂ ಹಲವು ವ್ಯಾಖ್ಯಾನಗಳನ್ನು ಪಡೆದುಕೊಂಡವು.

ಇಂಗ್ಲಿಶ್ ಮಾಧ್ಯಮವನ್ನು ಉಳಿಸಿಕೊಳ್ಳಬೇಕೆಂಬ ನಿರ್ಣಯವನ್ನು ಮಾಡಿಕೊಂಡ ಶಾಲೆಗಳಲ್ಲಿ ಅದನ್ನು ಒಂದು ಭಾಷೆಯಾಗಿ ಮೊದಲ ಹಂತದಿಂದಲೇ ಬೋಧಿಸುವುದು ಅನಿವಾರ್ಯವಾಯಿತು. ಶಾಲೆಗೆ ಬರುವಾಗ ಮಕ್ಕಳು ಇಂಗ್ಲಿಶ್ ಭಾಷಾಕೌಶಲಗಳನ್ನು ಮನೆಯಲ್ಲೇ ಪಡೆದುಬರುವುದಿಲ್ಲ. ಆದ್ದರಿಂದ ಭಾಷೆಯನ್ನು ಕಲಿಸಬೇಕು. ಆ ಭಾಷೆಯ ಮೂಲಕವೇ ಇತರ ವಿಷಯಗಳನ್ನು ಕಲಿಸಬೇಕು ಎಂಬ ವಿಧಾನವನ್ನು ಖಾಸಗಿ ಶಾಲೆಗಳು ಅನುಸರಿಸಿವೆ. ಇಲ್ಲಿ ಕನ್ನಡ ಒಂದು ಭಾಷೆಯಾಗಿ ಉಳಿದಿರುವ ಸಾಧ್ಯತೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಕನ್ನಡವು ಕಲಿಕೆಯ ಭಾಷೆಯಾಗಿ ಮಾತ್ರ ಸ್ಥಾನ ಕಳೆದುಕೊಂಡಿದೆ. ಈ ಖಾಸಗಿ ಶಾಲೆಗಳಲ್ಲಿ ಹಲವು ಅನುದಾನ ಇಲ್ಲದೆಯೇ ಶಾಲೆಯನ್ನು ನಡೆಸಲು ಅನುಮತಿ ಕೋರಿದ್ದಾಗ ಕನ್ನಡವನ್ನೇ ಕಲಿಕೆಯ ಭಾಷೆಯನ್ನಾಗಿ ಮಾಡಿಕೊಳ್ಳುತ್ತೇವೆ ಎಂಬ ಶರತ್ತನ್ನು ಒಪ್ಪಿಕೊಂಡಿದ್ದವು. ಆದರೆ ಆ ಶರತ್ತನ್ನು ಹಲವು ಸಂದರ್ಭಗಳಲ್ಲಿ ಉಲ್ಲಂಘಿಸಲಾಗಿದೆ. ಈ ಉಲ್ಲಂಘನೆಯ ಪ್ರಶ್ನೆಯನ್ನು ಕೇವಲ ಕಾನೂನಿನ ನಿಟ್ಟಿನಿಂದ ನೋಡಬೇಕೇ, ಅಥವಾ ಅದಕ್ಕಿರುವ ಇತರ ಸಾಮಾಜಿಕ ಆಯಾಮಗಳನ್ನು ಪರಿಗಣಿಸಬೇಕೇ ಎನ್ನುವ ಸಂದಿಗ್ಧದಲ್ಲಿ ಈಗ ಸರ್ಕಾರ ಸಿಲುಕಿದೆ.

ಕಲಿಕೆಯ ವಿಷಯವಾಗಿ ಕನ್ನಡವನ್ನು ಉಳಿಸಿಕೊಳ್ಳುವ ಶರತ್ತನ್ನು ಖಾಸಗಿ ಶಾಲೆಗಳು ಉಲ್ಲಂಘಿಸಿವೆಯೇ ಎಂಬ ಪ್ರಶ್ನೆಗೆ ಉತ್ತರ ನೀಡುವ ಮೊದಲು ಸರ್ಕಾರವೇ ತಾನು ನಡೆಸುವ ಶಾಲೆಗಳಲ್ಲಿ ಕನ್ನಡ ಕಲಿಸಬಲ್ಲ ಶಿಕ್ಷಕರನ್ನು ಪೂರ್ಣ ಪ್ರಮಾಣದಲ್ಲಿ ನೇಮಕಾತಿ ಮಾಡಲು ಸಮರ್ಥವಾಗಿಲ್ಲ ಎಂಬ ಮಾಹಿತಿಯನ್ನು ಮೊದಲು

ಪರಿಗಣಿಸಬೇಕು. ನಾಡಿನ ಉರ್ದುಮಾಧ್ಯಮದ ಶಾಲೆಗಳಲ್ಲಿ ಈ ಸಮಸ್ಯೆ ಗಾಢವಾಗಿದೆ. ಆ ಶಾಲೆಗಳಲ್ಲಿ ಕನ್ನಡ ಪಾಠ ಹೇಳುವ ಬೋಧಕರ ಕೊರತೆ ತೀವ್ರವಾಗಿರುವುದನ್ನು ಹಲವು ಬಾರಿ ಮಾಧ್ಯಮಗಳು, ಸಾರ್ವಜನಿಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಗೊಂದಲಗಳ ಪರಿಸ್ಥಿತಿಯಲ್ಲಿ ಕನ್ನಡವು ಕಲಿಕೆಯ ಮಾಧ್ಯಮವಾಗಿ ಪ್ರಾಥಮಿಕ ಹಂತದಲ್ಲಿ ಉಳಿದುಕೊಳ್ಳುವುದು ತುಂಬಾ ಇಕ್ಕಟ್ಟಿನ ಸಂಗತಿಯಾಗಿದೆ. ಮತ್ತೆ ಮತ್ತೆ ರಾಜ್ಯಸರ್ಕಾರದ ಅನಿರ್ಧಾರಿತ ನಿಲುವುಗಳು ಮತ್ತು ಕ್ರಮಗಳು ಈ ಭಾಷಾಪ್ರಶ್ನೆಯನ್ನು ಹಾಗೆಯೇ ಉಳಿಸಲು ಕಾರಣವಾಗಿವೆ. ಕನ್ನಡ ಕಲಿಕೆಯ ಭಾಷೆಯಾಗಿ, ತೀರಾ ವಿಶಿಷ್ಟ ಪ್ರಸಂಗಗಳನ್ನು ಹೊರತು ಪಡಿಸಿದರೆ ಉಳಿದ ಕಡೆ ಯಾವುದೋ ಒಂದು ರೂಪದಲ್ಲಿ ಅನುಷ್ಠಾನಗೊಳ್ಳುತ್ತದೆ. ಈ ಸದ್ಯದ ನ್ಯಾಯಿಕ ಬಿಕ್ಕಟ್ಟುಗಳು ಪರಿಹಾರವಾಗದೆ ಸ್ಪಷ್ಟ ಭಾಷಾನೀತಿಯೊಂದು ರೂಪುಗೊಂಡು ಜಾರಿಗೊಳ್ಳುವುದು ಅಸಾಧ್ಯವಾಗಿದೆ.

ಶಾಲೆಯಲ್ಲಿ ಭಾಷೆ

ಮಕ್ಕಳು ಕುಟುಂಬ ಪರಿಸರದಲ್ಲಿಯೇ ಭಾಷೆ(ಗಳನ್ನು) ಅನೌಪಚಾರಿಕವಾಗಿ ಕಲಿಯುತ್ತಾರೆ. ಪೌರಸಮಾಜಗಳು ಮಕ್ಕಳಿಗೆ ಶಾಲಾಶಿಕ್ಷಣ ಅತ್ಯವಶ್ಯವೆಂದು ನಂಬುವುದರಿಂದ ಆ ಸಮಾಜದಲ್ಲಿ ಮಕ್ಕಳು ಶಾಲೆಗಳಿಗೆ ಬಂದು ಅಲ್ಲಿ ಮೊದಲಿಗೆ ಭಾಷೆಯನ್ನು ಮತ್ತೆ ಔಪಚಾರಿಕವಾಗಿ ಕಲಿಯಲು ತೊಡಗುತ್ತಾರೆ. ಭಾಷೆಗೆ ಸಂಬಂಧಿಸಿದ ಹಲವು ಕೌಶಲಗಳನ್ನು ಮಕ್ಕಳು ಶಾಲೆಯಲ್ಲಿ ಬಲಪಡಿಸಿಕೊಳ್ಳುತ್ತಾರೆ. ಮತ್ತೆ ಕೆಲವು ಕೌಶಲಗಳನ್ನು ಹೊಸದಾಗಿ ಕಲಿಯುತ್ತಾರೆ. ಉದಾ:ಗೆ ಓದುವುದು ಮತ್ತು ಬರೆಯುವುದು. ಹಾಗೆಯೇ ಭಾಷೆಯ ಬಳಕೆಗೆ ಸಂಬಂಧಿಸಿದ ಕೆಲವು ಕೌಶಲಗಳನ್ನು ಹೊಸ ಹಿನ್ನೆಲೆಯಲ್ಲಿ ಅರಿಯ ತೊಡಗುತ್ತಾರೆ. ಮಾತಿನಲ್ಲಿ ಔಪಚಾರಿಕತೆಯನ್ನು ತಂದುಕೊಳ್ಳುವುದು, ಅಂಥ ಮಾತಿನ ರೀತಿಯನ್ನು ಯೋಗ್ಯರೀತಿಯಲ್ಲಿ ಬಳಸಲು ಕಲಿಯುವುದು, 'ಶುದ್ಧ ರೂಪಗಳನ್ನು' 'ಅಶುದ್ಧರೂಪ' ಗಳಿಂದ ಬೇರೆ ಮಾಡುವುದು ಇವೇ ಮುಂತಾದ ಸಂಗತಿಗಳನ್ನು ಕಲಿಯುತ್ತಾರೆ.

ಶಾಲಾಶಿಕ್ಷಣದಲ್ಲಿ ಭಾಷಾಕೌಶಲಗಳನ್ನು ಕಲಿಸುವ ಉದ್ದೇಶ, ಕ್ರಮ, ಗುರಿ ಇತ್ಯಾದಿಗಳು ಏನು, ಎಷ್ಟು, ಹೇಗೆ ಎಂಬಿವೇ ಪ್ರಶ್ನೆಗಳು ಇನ್ನೂ ಬಗೆಹರಿದಿಲ್ಲ. ಸಾಂಪ್ರದಾಯಿಕ ವಿಧಾನದಲ್ಲಿ ಬರೆವಣಿಗೆ ಮ್ತು ಓದುವುದು ಮುಖ್ಯ ಗುರಿಗಳಾಗಿದ್ದವು. ಸಾಕ್ಷರತೆಯೇ ಉದ್ದೇಶವಾಗಿತ್ತು. ಅದಕ್ಕೆ ಬೇಕಾದ ಬೋಧನಾವಿಧಾನ, ಪಠ್ಯಕ್ರಮ, ಹಾಗೂ ಪಾಠಗಳನ್ನು ರೂಪಿಸಿರುತ್ತಿದ್ದರು. ಆದರೆ ಭಾಷೆಯ ಮೌಖಿಕ ಬಳಕೆಯನ್ನು ಅಲಕ್ಷಿಸಲಾಗುತ್ತಿತ್ತು. ಅಂದರೆ ಮಾತಾಡುವ, ಸಂವಾದದಲ್ಲಿ ತೊಡಗುವ, ಇತರರ ಮಾತನ್ನು ಆಲಿಸಿ ಗ್ರಹಿಸುವ ಕೌಶಲಗಳು ಈಗಾಗಲೇ ಮಗುವಿನಲ್ಲಿ ಇರುತ್ತವೆಂದು ತಿಳಿದು ಆ ಬಗ್ಗೆ ಶಾಲೆಗಳಲ್ಲಿ ಹೆಚ್ಚು ಗಮನ ಹರಿಸುತ್ತಿರಲಿಲ್ಲ.

ಈಚೆಗೆ ಚಿಂತನೆಗಳು ಬೇರೊಂದು ದಿಕ್ಕಿನಲ್ಲಿ ಹರಿದಿವೆ. ಶಾಲಾವಧಿಯಲ್ಲಿ ಮಗುವಿಗೆ ದೊರಕುವ ಭಾಷಾಕೌಶಲಗಳ ತಳಹದಿ ಶಿಕ್ಷಣದ ಸಮಗ್ರ ಯಶಸ್ಸಿನಲ್ಲಿ ಮುಖ್ಯ ಪಾತ್ರವಹಿಸುವುದೆಂದು ತಿಳಿಯುತ್ತಿದ್ದಾರೆ. ಆದ್ದರಿಂದ ಕೇವಲ ಬರೆವಣಿಗೆ ಮತ್ತು ಓದುಗಳನ್ನು ಮಾತ್ರ ಮುಖ್ಯ ಗುರಿಯಾಗಿ ಇರಿಸಿಕೊಳ್ಳದೆ ಇತರ ಕೌಶಲಗಳನ್ನೂ ಬೆಳೆಸುವುದು ಅವಶ್ಯವೆಂದು ತಿಳಿದು ಶಿಕ್ಷಣಕ್ರಮದಲ್ಲಿ ಬದಲಾವಣೆಗಳನ್ನು ತರುತ್ತಿದ್ದಾರೆ.

ಭಾಷೆಯ ತರಗತಿಗಳಲ್ಲಿ ಉಪಾಧ್ಯಾಯರು ಮಾತಾಡುವ ಭಾಷಾಪ್ರಭೇದ, ಅವರ ವಿಷಯ ನಿರೂಪಣಾವಿಧಾನ, ಶಾಲೆಯಲ್ಲಿ ಇತರ ವಿದ್ಯಾರ್ಥಿಗಳ ಭಾಷಾಬಳಕೆಯ

ವೈವಿಧ್ಯ –ಇವೆಲ್ಲವೂ ಬರೆವಣಿಗೆಯ, ಓದಿನ ಭಾಷಾರೂಪದ ಜತೆ ಯಾವ ಸಂಬಂಧ ಹೊಂದಿದೆ ಎಂಬುದು ವಿದ್ಯಾರ್ಥಿಗಳಿಗೆ ತಿಳಿಯುತ್ತಿರಲಿಲ್ಲ; ಉಪಾಧ್ಯಾಯರೂ ಆ ಕುರಿತು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ವಿಭಿನ್ನ ಸಾಮಾಜಿಕ ಹಿನ್ನೆಲೆಯಿಂದ ಬಂದ ಮಕ್ಕಳಿರುವ ಶಾಲೆಗಳಲ್ಲಿಯಂತೂ ಈ ಆಡುಮಾತಿನ ವೈವಿಧ್ಯಗಳು ಅಧಿಕಾವಾಗಿಯೇ ಇರುತ್ತಿದ್ದವು. ಇದರಿಂದ ಮಕ್ಕಳ ಭಾಷಾಕಲಿಕೆಯ ಮೇಲೆ ಏನು ಪರಿಣಾಮವಾಗುತ್ತಿದೆಯೆಂಬುದನ್ನು ಭಾಷಾಶಾಸ್ತ್ರಜ್ಞರು ಈಗ ಗುರುತಿಸಿದ್ದಾರೆ; ತಕ್ಕ ಪರಿಹಾರಗಳನ್ನು ರೂಪಿಸುತ್ತಿದ್ದಾರೆ.

ವಾಗ್ವಾದಗಳು: ಶಾಲಾಪಠ್ಯಪುಸ್ತಕಗಳನ್ನು ನೋಡಿದರೆ ಭಾಷಾಕಲಿಕೆಯಲ್ಲಿ ಭಾಷೆಯ ರಚನೆಯನ್ನು ತಿಳಿಸಿಕೊಡುವ ಉದ್ದೇಶವೇ ಮೇಲುಗೈ ಪಡೆದಿರುವುದು ಗೊತ್ತಾಗುತ್ತದೆ. ಅಭ್ಯಾಸಗಳಲ್ಲಿ ಸಂಧಿ ರಚನೆ, ಸಮಾಸ ರಚನೆ, ವಾಕ್ಯದ ಭಾಗಗಳು, ಅವುಗಳ ಬಗೆಗಳು ಇತ್ಯಾದಿಗಳನ್ನು ವಿಶ್ಲೇಷಕ ವಿಧಾನದಲ್ಲಿ ತಿಳಿಯಲು ಪ್ರೇರೇಪಿಸುವ ಮಾಹಿತಿ ಇರುತ್ತದೆ. ಸಂಧಿ, ಸಮಾಸಗಳ ಹೆಸರು, ಅವುಗಳ ರಾಚನಿಕ ನಿಯಮಗಳನ್ನು ಕಲಿಸಿಕೊಡುವ ಯತ್ನ ಮುಖ್ಯವಾಗುತ್ತದೆ. ವಿದ್ಯಾರ್ಥಿಗಳು ಭಾಷೆಯ ಪ್ರಮಾಣ ರೂಪಗಳನ್ನು ಬರೆಯಲು ಓದಲು ಕಲಿಯುತ್ತಿರುವಾಗಲೇ ಆ ರಚನೆಗಳನ್ನು ಚರ್ಚಿಸುವ ಪರಿಭಾಷೆಯೊಂದನ್ನು ಕಲಿಯುವುದು ಅವಶ್ಯವಾಗಿದೆ. ಈ ರಚನೆಯ ಕಲಿಕೆಯಲ್ಲಿ ಭಾಷೆಯನ್ನು ಇಡಿಯಿಂದ ಬಿಡಿಯಾಗಿ ಒಡೆದು ತೋರಿಸಿಕೊಡುವುದು ಮುಖ್ಯವಾಗಿರುತ್ತದೆ. ಭಾಷೆಯ ರೂಪಗಳನ್ನು ಕಟ್ಟುವುದನ್ನು ಕಲಿಸುವ ಪ್ರಯತ್ನಕ್ಕಿಂತ ಕಟ್ಟಿದ ರೂಪಗಳನ್ನು ಚಿಕ್ಕ ಚಿಕ್ಕ ಘಟಕಗಳನ್ನಾಗಿ ವಿಭಜಿಸಿ ನೋಡುವುದನ್ನು ಕಲಿಸುವುದಕ್ಕೆ ಒತ್ತು ಹೆಚ್ಚಾಗಿರುತ್ತದೆ.

ಭಾಷಾಕಲಿಕೆಯ ಈ ವಿಧಾನವನ್ನು ಟೀಕಿಸುವ ಚಿಂತನಾಕ್ರಮವೂ ಬೆಳೆದಿದೆ. ಇಂಥ ಕಲಿಕೆಗಳು ಬಳಕೆಯ ಭಾಷೆಯ ವೈವಿಧ್ಯಗಳನ್ನು ತಿಳಿಸಿಕೊಡುವುದಿಲ್ಲವೆಂಬುದು ಟೀಕೆಯ ಮುಖ್ಯ ತಿರುಳು. ಅದರಲ್ಲೂ ಆಡುಮಾತಿನ ವಿವಿಧ ಬಗೆಗಳು ನಿತ್ಯದ ಹಲವಾರು ಪ್ರಸಂಗಗಳಲ್ಲಿ ಹೇಗೆ ರೂಪುತಳೆಯುತ್ತವೆ, ಅಂಥ ರೂಪಗಳನ್ನು ಬಳಸುವ ಸಾಮರ್ಥ್ಯವನ್ನು ಹೇಗೆ ಗಳಿಸಿಕೊಳ್ಳುವುದು ಎಂಬಿವೇ ಪ್ರಶ್ನೆಗಳಿಗೆ ಉತ್ತರ ನೀಡಲು ಮೇಲಿನ ಕಲಿಕೆಯ ವಿಧಾನ ಅಶಕ್ತವಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಭಾಷಾಕಲಿಕೆಯ ಕ್ರಮದಲ್ಲಿ ಬಳಕೆಯ ಬಗೆಗಳನ್ನು ತಿಳಿಯಲು, ಆ ಕುರಿತ ಸಾಮರ್ಥ್ಯವನ್ನು ಪಡೆಯಲು ಸಾಧ್ಯವಾಗುವುದಿಲ್ಲ.

ಈ ಕೊರತೆಯನ್ನು ನಿವಾರಿಸಲು ಭಾಷಾಬಳಕೆಯನ್ನು ಆಧರಿಸಿದ ಕಲಿಕೆಯ ವಿಧಾನವನ್ನು ರೂಪಿಸಿಕೊಂಡು ಅದನ್ನು ಶಾಲೆಗಳಲ್ಲಿ ಜಾರಿಗೆ ನೀಡುವ ಪ್ರಯತ್ನಗಳು ನಡೆದಿವೆ. ದಿನನಿತ್ಯದ ಹಲವಾರು ಪ್ರಸಂಗಗಳಲ್ಲಿ ಬಳಕೆಯಾಗುವ ಭಾಷಾಮಾದರಿಗಳು ಕಲಿಕೆಗೆ ನೆರವಾಗುವ ಪಠ್ಯಗಳಾಗುತ್ತವೆ. ಅವುಗಳನ್ನು ಬಳಸಿ ವಿದ್ಯಾರ್ಥಿಗಳು ಭಾಷಾ ವೈವಿಧ್ಯಗಳ ಪರಿಚಯ ಪಡೆಯುತ್ತಾರೆ. ಜತೆಗೆ ಅಂಥ ಪ್ರಸಂಗಗಳಲ್ಲಿ ಭಾಷೆಯನ್ನು ತಕ್ಕಂತೆ ಬಳಸಲು ಕಲಿಯುತ್ತಾರೆ. ಈ ಕಲಿಕೆಯಿಂದಾಗಿ ಅವರ ಭಾಷಾಸಾಮರ್ಥ್ಯ ಹೆಚ್ಚು ಸಮಗ್ರವಾಗುತ್ತದೆ.

ಭಾಷಾಬಳಕೆಯನ್ನು ಆಧರಿಸಿದ ಈ ಕಲಿಕೆಯ ವಿಧಾನವೂ ಸಂಪೂರ್ಣ ದೋಷಮುಕ್ತವಲ್ಲ. ಬೋಧನೆಯ ಸಾಮಗ್ರಿ ಇಲ್ಲಿ ಅಗಾಧ. ಅದರ ಬಳಕೆಯೇ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದರಿಂದ ಆ ಭಾಷಾಮಾದರಿಗಳನ್ನು ವಿವರಿಸಿ ವಿಶ್ಲೇಷಿಸಲು ಅವಕಾಶಗಳು ಕಡಿಮೆಯಾಗುತ್ತವೆ. ವಿವಿಧ ಬಗೆಯ ಮುದ್ರಿತಸಾಮಗ್ರಿ, ದೃಕ್ ಸಾಧನಸಾಮಗ್ರಿ, ಧ್ವನಿಮುದ್ರಿತಸಾಮಗ್ರಿ ಹೀಗೆ ಬಹು ವಿಧದಲ್ಲಿ ಪಠ್ಯವಸ್ತು ಸಿಗುವುದು ನಿಜ. ಕಲಿಕೆಯೂ ಆಕರ್ಷಕವಾಗಿರುತ್ತದೆ. ಆದರೆ ಕಲಿಕೆಯ ಪರಿಣಾಮಗಳನ್ನು ಮೌಲ್ಯಮಾಪನ ಮಾಡಲು ಬೇಕಾದ ಚೌಕಟ್ಟು ಈ ಕಲಿಕೆಯ ವಿಧಾನದಲ್ಲಿ ಇಲ್ಲ. ಮತ್ತು ಪಠ್ಯಸಾಮಗ್ರಿಯ ಬಳಕೆ ಹೇಗಾಗಬೇಕೆಂದು ಖಚಿತವಾಗಿ ನಿರ್ಧರಿಸುವುದು ಕಷ್ಟ. ಉದಾ: ಜಾಹಿರಾತಿನ ತುಣುಕಿನಲ್ಲಿ ಬಳಕೆಯಾದ ಕನ್ನಡವನ್ನು ಹೇಗೆ ತರಗತಿಯಲ್ಲಿ ಬಳಸಿ ಪಾಠ ಮಾಡುವುದು? ಇಂಥವೇ ಸಮಸ್ಯೆಗಳಿಂದಾಗಿ ಬೋಧಕರು ಈ ಮಾದರಿಯ ಕಲಿಕೆಯನ್ನೂ ದೋಷಗ್ರಸ್ತವೆಂದೇ ತಿಳಿಯುತ್ತಾರೆ.

ಎಲ್ಲ ವಿವಾದಗಳಲ್ಲೂ ಮಧ್ಯವರ್ತಿ ಮಾರ್ಗದ ಮೂಲಕ ಸಮಸ್ಯೆಯನ್ನು ಬಿಡಿಸುವ ಯತ್ನ ನಡೆಯುತ್ತದೆ. ಇಲ್ಲಿಯೂ ಎರಡೂ ಬಗೆಯ ಬೋಧನೆಯ ವಿಧಾನಗಳ ಉತ್ತಮಾಂಶಗಳನ್ನು ಬೆರೆಸಿದ ವಿಧಾನವನ್ನು ರೂಪಿಸಲು ಯತ್ನಗಳು ನಡೆದಿವೆ. ಕಲಿಕೆಯ ವಿವಿಧ ಹಂತಗಳಲ್ಲಿ ಭಾಷೆಯ ರಚನೆಯ ತಿಳಿವು ಮತ್ತು ಭಾಷೆಯ ಬಳಕೆಯ ತಿಳಿವುಗಳನ್ನು ಯೋಗ್ಯ ಪ್ರಮಾಣದಲ್ಲಿ ಸಂಯೋಜಿಸುವ ಕಲಿಕೆಯ ವಿಧಾನದ ಕಡೆಗೆ ಇಂದಿನ ಒಲುವೆಗಳು ಇವೆ.

ಓದುವುದು: ಶಾಲೆಯ ಭಾಷಾಕಲಿಕೆಯ ಒಂದು ಮುಖ್ಯ ಭಾಗವೆಂದರೆ ಓದುವುದನ್ನು ಕಲಿಯುವುದು. ಓದುವುದು ಎಂದರೇನು? ಲಿಪಿರೂಪದಲ್ಲಿ ಸಂಕೇತೀಕರಣಗೊಂಡ ಮಾತನ್ನು, ವಿಸಂಕೇತಿಸಿ ಮರಳಿ ಪಡೆಯುವುದನ್ನು ಓದು ಎನ್ನುತ್ತೇವೆ. ಓದಿನ ಮೂಲಕ ಮಾತಿನ ನೆಲೆಗೆ ಬರೆವಣಿಗೆಯನ್ನು ಪರಿವರ್ತಿಸುತ್ತೇವೆ. ಇದೊಂದು ಭಾಷಾಕೌಶಲ. ಶಾಲೆಯಲ್ಲಿ ಓದುವುದನ್ನು ಕಲಿಸಲು ಮೊದಲು ಮಾಡಿದಾಗ ಬರೆವಣಿಗೆಯ ಸಂಕೇತಗಳನ್ನು, ಲಿಪಿಗಳನ್ನು ಪರಿಚಯ ಮಾಡಿಕೊಡುತ್ತಾರೆ. ಅನಂತರ ಲಿಪಿಸಂಯೋಜನೆಯ ನಿಯಮಗಳು ಹಾಗೂ ಸಂಯೋಜಿತ ರೂಪದಿಂದ ಉಚ್ಚಾರಣೆಯನ್ನು ಅರಿಯುವ ನಿಯಮಗಳನ್ನು ಕಲಿಯಬೇಕಾಗುತ್ತದೆ. ಮೇಲುನೋಟಕ್ಕೆ ಇದು ಸರಳವಾಗಿರುವಂತೆ ಕಂಡರೂ ವಾಸ್ತವವಾಗಿ ಹಾಗಿಲ್ಲ. ಕನ್ನಡದ ನಿದರ್ಶನವೊಂದನ್ನು ಗಮನಿಸಿ. ಕನ್ನಡದ ಲಿಪಿಸಂಯೋಜನೆ ಎಡದಿಂದ (ಓದುವವರ) ಬಲಕ್ಕೆ ಸಾಗುತ್ತದೆ. ಬಹುಮಟ್ಟಿಗೆ ರೇಖಾತ್ಮಕ. ಆದರೆ ಲಿಪೀಕರಣದಿಂದ ಉಚ್ಚಾರಣೆಯನ್ನು ಗ್ರಹಿಸುವ ನಿಯಮವನ್ನು ತಿಳಿದ ಹೊರತು 'ಓದುವುದು' ಕ್ರಮಬದ್ಧವಾಗುವುದಿಲ್ಲ. 'ಸತ್ಯ' ಎಂಬ ಪದವನ್ನು ಓದುವುದು ಹೇಗೆ? 'ತ' ಲಿಪಿಯೊಡನೆ 'ಯ'ಕಾರದ ಒತ್ತಕ್ಷರದ ಲಿಪಿಯಿದೆ. ನಿಯಮ ತಿಳಿಯದೆ ಕಣ್ಣಂದಾಜಿನಿಂದ ಓದಿದರೆ 'ತ'ಕಾರವನ್ನು ಪೂರ್ಣವಾಗಿ ಉಚ್ಚರಿಸಿ ಅನಂತರ 'ಯ್' (ವ್ಯಂಜನ ರೂಪ)ವನ್ನು ಹೇಳಬೇಕು. (ಸತಯ್) ಆದರೆ ಸಂಯೋಜನೆಯಿಂದ ವಿಸಂಕೇತಿಸುವ ನಿಯಮದಂತೆ ಒತ್ತಕ್ಷರಗಳಿದ್ದಾಗ ಪೂರ್ಣವಾಗಿ 'ಬರೆದಿರುವ' ವ್ಯಂಜನವನ್ನು ಕೇವಲ ವ್ಯಂಜನವನ್ನಾಗಿ ಉಚ್ಚರಿಸಬೇಕು.

ಅನಂತರ ಅದರೊಡನೆ ಸಂಯೋಜನಿಸಿರುವ ಸ್ವರಭಾಗವನ್ನು ಕೆಳಗೆ 'ಅರೆಯಾಗಿ' ಬರೆದಿರುವ ವ್ಯಂಜನದೊಡನೆ ಸಂಯೋಜಿಸಬೇಕು. ಇದು ಕನ್ನಡ ಓದಿನ ನಿಯಮ. ನಮಗೆ ಚೆನ್ನಾಗಿ ಬಳಕೆಯಾಗಿರುವುದರಿಂದ ಓದುವ ಈ ನಿಯಮ ಸರಳವೆಂಬಂತೆ ತೋರುತ್ತದೆ. ಆದರೆ ಕಲಿಯುವ ಮಗುವಿಗೆ ಇದು ಕಠಿಣ ನಿಯಮ.

ಓದಲು ಕಲಿಸುವ ಸಾಂಪ್ರದಾಯಿಕ ವಿಧಾನಗಳು ಹೆಚ್ಚು ಆಕರ್ಷಕವಾಗಿಲ್ಲ, ಬರೆವಣಿಗೆಯ(ಮುದ್ರಿತ) ಮಾದರಿಗಳನ್ನು ಬಳಸಿ ಯಾಂತ್ರಿಕವಾಗಿ ಓದು ಕಲಿಸುವರು. ಓದಿನ ಲಯಗಳಿಗೂ ಮಾತಿನ ಲಯಗಳಿಗೂ ಅಂತರವಿರುವುದರಿಂದ ಕಲಿಯುವ ಮಗುವಿಗೆ ತಾನು ಓದುತ್ತಿರುವ ಭಾಷೆಗೂ ತನಗೂ ಏನಾದರೂ ಸಂಬಂಧವಿರುವಂತೆ ಅನ್ನಿಸುವುದಿಲ್ಲ. ಓದುವ ಕೌಶಲವನ್ನು ಕಲಿತರೂ, ಕಲಿಯುವ ಕ್ರಮದ ಯಾಂತ್ರಿಕತೆಯಿಂದಾಗಿ, ಆ ಕೌಶಲವನ್ನು ಬೆಳೆಸಿಕೊಳ್ಳುವ ಆಸಕ್ತಿ ಹೆಚ್ಚಿನ ಭಾಷಿಕರಲ್ಲಿ ಉಳಿಯುವುದಿಲ್ಲ.

ಓದುಕಲಿಕೆಯನ್ನು ಅದರ ಯಾಂತ್ರಿಕತೆಯಿಂದ ಬಿಡುಗಡೆ ಮಾಡಲೆಂದು 'ಕ್ರಿಯಾತ್ಮಕ ಓದು' ಎಂಬ ವಿಧಾನವನ್ನು ರೂಪಿಸಿದ್ದಾರೆ. ಓದಲು ಕಲಿಯುವವರು ಸಾಮಾನ್ಯವಾಗಿ ಏನನ್ನು ಓದಬೇಕಾಗುತ್ತದೆ ಎಂಬುದನ್ನು ತಿಳಿದು ತಕ್ಕ ಓದುಸಾಮಗ್ರಿಯನ್ನು ನೀಡಬೇಕು. ಶಾಲೆಯ ಹೊರಗೆ ಕಣ್ಣಿಗೆ ಬೀಳುವ ಲಿಖಿತ ಭಾಷಾರೂಪಗಳು, ಬಳಕೆಯ ಸಾಮಗ್ರಿಗಳಿಗೆ ಸಂಬಂಧಿಸಿದ ಲಿಖಿತಗಳು ಇವೇ ಮೊದಲಾದುವನ್ನು ಬಳಸಿದರೆ ಓದಲು ಕಲಿಯುವವರಿಗೆ ಇಚ್ಚೆ ಮೂಡುತ್ತದೆ. ಕಲಿಕೆ ಸುಗಮವಾಗುತ್ತದೆ ಮತ್ತು ಉಪಯುಕ್ತವಾಗುತ್ತದೆ.

ಈ ದಿಕ್ಕಿನಲ್ಲಿ ಹಲವು ಪ್ರಯೋಗಗಳು ನಡೆದಿವೆ. ಓದು ಕಲಿಯುವವರು ಚಿತ್ರಗಳನ್ನೂ 'ಓದು'ತ್ತಾರೆ. ಬರೆವಣಿಗೆಯ ನಡುವೆ ಚಿತ್ರಗಳಿರುವುದು ಸಾಮಾನ್ಯ. ಇದರಲ್ಲಿ ಮುಖ್ಯವಾಗಿ ಎರಡು ಬಗೆ. ಒಂದು: ಹಲವಾರು ವಾಕ್ಯಗಳ ನಡುವೆ ಒಂದು ಚಿತ್ರವಿರುವುದು. ಎರಡು: ವಾಕ್ಯದ ಒಳಗೇ ಪದಗಳ ಬದಲಿಗೆ ಅಕ್ಷರಗಳೊಡನೆ ಚಿತ್ರಗಳನ್ನು ಹೇಗೆ ಹೊಂದಿಸಿಕೊಳ್ಳಬೇಕೆಂದು ಕಲಿಯುವುದೂ ಓದುಕಲಿಕೆಯ ಭಾಗವಾಗಿರುತ್ತದೆ. ಚಿತ್ರದಂಥ ಅಭಾಷಿಕ ರೂಪಗಳನ್ನೂ, ಲಿಪಿಯ ಮೂಲಕ ಗ್ರಹಿಸಿದ ಭಾಷೆಯನ್ನೂ, ಪರಸ್ಪರ ಹೊಂದಿಸಿಕೊಂಡು ಕಲಿಯಲು ಇದರಿಂದ ನೆರವು ದೊರೆಯುತ್ತದೆ. ವಾಕ್ಯದ ಒಳಗೇ ಬರುವ ಚಿತ್ರಗಳ ಮಾದರಿ ಹೊಸದು. ಅಲ್ಲಿ ಪದಗಳ ಬದಲು ಚಿತ್ರಗಳನ್ನು ಒದಗಿಸಿ ಒಟ್ಟು ವಾಕ್ಯವನ್ನು ಓದಲು ಕಲಿಸಲಾಗುತ್ತದೆ.

ಇಂಥ ಓದಿನಿಂದ ಲಿಪಿಸಹಿತ ಭಾಷೆ ಮತ್ತು ಲಿಪ್ಯೇತರ ಸಂಕೇತಗಳನ್ನು ಸಮನ್ವಯಗೊಳಿಸುವ ಚಟುವಟಿಕೆಯಲ್ಲಿ ಕಲಿಯುವವರು ತೊಡಗುತ್ತಾರೆ. ಇದು ಕಲಿಕೆಯನ್ನು ಆಕರ್ಷಕವನ್ನಾಗಿಸುತ್ತದೆ. ಓದುಕಲಿಕೆ ಆಕರ್ಷಕವಾಗಬೇಕೆಂದು ಯೋಚಿಸುವವರು ಲಿಪಿರೂಪದ ಭಾಷೆಗೂ ಅದನ್ನು ಓದಿ ಗ್ರಹಿಸಿದ ಭಾಷೆಗೂ 'ಅಕ್ಷರಶಃ' ತಾಳೆಯಾಗಬೇಕೆಂದು ತಿಳಿಯುವುದಿಲ್ಲ. ಬರೆವಣಿಗೆಯ ಪದಗಳನ್ನು ಓದುವಾಗ

ಇಡಿಯಾಗಿ ಗ್ರಹಿಸಿ ವಾಕ್ಯದ 'ಅಂದಾಜು ಭಾಷಾರೂಪ'ವನ್ನು ಮನಸ್ಸಿಗೆ ತಂದುಕೊಳ್ಳುವುದನ್ನು 'ಓದು' ಎಂದು ಒಪ್ಪಲು ಇವರು ಸಿದ್ಧ. ಪಠ್ಯಬದ್ಧ ಓದಿಗೆ ಪೂರ್ಣಪ್ರಮಾಣದಲ್ಲಿ ಬದ್ಧರಾಗಬೇಕೆಂದು ಬಯಸುವವರು ಇಂಥ 'ಅಂದಾಜು ಓದ'ನ್ನು ಒಪ್ಪುವುದಿಲ್ಲ. ಹೀಗೆ ಓದಲು ಕಲಿತರೆ ಓದುವ ಕೌಶಲ ಅಪೂರ್ಣವಾಗುತ್ತದೆಂದೇ ಅವರು ತಿಳಿಯುತ್ತಾರೆ.

ಓದುವಿಕೆಯೆಂಬ ಭಾಷಾಕೌಶಲವನ್ನು ಶಾಲೆಯಲ್ಲಿ ಕಲಿತ ಮೇಲೆ ಅದನ್ನು ಮುಂದೆ ವ್ಯವಸ್ಥಿತವಾಗಿ ಬಳಸಬೇಕಷ್ಟೆ? ನಿತ್ಯಜೀವನದಲ್ಲಿ ಓದಿನ ಸ್ವರೂಪ ಮತ್ತು ಅವಶ್ಯಕತೆ ನಿರಂತರವಾಗಿ ಬದಲಾಗುತ್ತಲೇ ಇವೆ. 'ವೇಗದ ಓದಿಗೆ' ಅಥವಾ 'ತುರ್ತಿನ ಓದಿಗೆ' ಈಗ ಸಂದರ್ಭಗಳು ಹೆಚ್ಚಾಗುತ್ತಿವೆ. ಉದಾಹರಣೆಗೆ ಟೆಲಿವಿಶನ್‌ನಲ್ಲಿ ಅನ್ಯಭಾಷೆಯ ಚಲನಚಿತ್ರವನ್ನು ಪ್ರದರ್ಶಿಸುವಾಗ ಅಲ್ಲಿನ ಸಂಭಾಷಣೆಗಳನ್ನು ಉಪಶೀರ್ಷಿಕೆಗಳಲ್ಲಿ ನಾವು ಓದಬಲ್ಲ ಭಾಷೆಯಲ್ಲಿ ಅನುವಾದಿಸಿ ಕೊಡುತ್ತಾರೆ. ನೋಡುವ ನಾವು ಸವೇಗವಾಗಿ ಆ ಬರೆವಣಿಗೆಯನ್ನು ಓದಬೇಕು. ಇಂಥ ತುರ್ತಿನಓದಿನಲ್ಲಿ ಅಕ್ಷರಶಃ ಗ್ರಹಿಸಿ ಓದುವುದು ಅಸಾಧ್ಯವೇ ಆಗಿರುತ್ತದೆ. ಹೀಗೆ ಓದಿನ ಬಗೆಗಳು ದಿನೇ ದಿನೇ ಹೆಚ್ಚುತ್ತಲೇ ಇವೆ. ಆದ್ದರಿಂದ ಶಾಲೆಯಲ್ಲಿ ಓದುಕೌಶಲವನ್ನು ಕಲಿಸುವ ಬಗೆಯು ಈ ಎಲ್ಲ ಅವಶ್ಯಕತೆಗಳನ್ನು ಮನಗಂಡಿರಬೇಕಾಗುತ್ತದೆ. ಮತ್ತು ಅದಕ್ಕೆ ತಕ್ಕಂತೆ ಕಲಿಕೆಯ ಕ್ರಮವನ್ನು ರೂಪಿಸಬೇಕಾಗುತ್ತದೆ.

ಬರೆವಣಿಗೆ: ಶಾಲೆಯಲ್ಲಿ ಭಾಷಾಕಲಿಕೆಯ ಮತ್ತೊಂದು ಮುಖ್ಯ ಭಾಗ ಬರೆವಣಿಗೆ. ಓದುಕಲಿಕೆಗಿಂತ ಹೆಚ್ಚು ಸಂಕೀರ್ಣವಾದ ಕಲಿಕೆಯಿದು. ಬರೆಯಲು ಕಲಿಯುವಾಗ ದೇಹದ ಹಲವಾರು ಅಂಗಾಂಗಗಳ ಚಟುವಟಿಕೆಗಳನ್ನು ಗೊತ್ತಾದ ರೀತಿಯಲ್ಲಿ ಸಂಯೋಜಿಸಿ ಹೊಂದಿಸಬೇಕಾಗುತ್ತದೆ. ಕೈಬೆರಳುಗಳು, ಕಣ್ಣುಗಳು ಮತ್ತು ಆಯಾ ಅಂಗಗಳಿಗೆ ಸಂಬಂಧಿಸಿದ ನರಗಳು ಇವೆಲ್ಲವೂ ಈ ಕಲಿಕೆಯಲ್ಲಿ ವಿಶೇಷ ತರಬೇತಿಗೆ ಒಳಗಾಗುತ್ತವೆ.

ಸಾಂಪ್ರದಾಯಿಕ ಬರೆಹಕಲಿಕೆಯ ವಿಧಾನ ಮುಖ್ಯವಾಗಿ ನಿಗದಿತ ಗುರಿಸಾಧನೆಯ ಕಡೆಗೆ ಗಮನವಿಡುತ್ತದೆ. ಅದಕ್ಕಾಗಿ ಅವಶ್ಯವಿರುವ ತರಬೇತನ್ನು ತಾನೇ ರೂಪಿಸಿದೆ. ತಿದ್ದುವುದು ಮತ್ತು ಪುನರಾವರ್ತನೆ ಈ ವಿಧಾನದಲ್ಲಿ ಮುಖ್ಯ. ಮರಳಿನ ಮೇಲೆ ಅಕ್ಷರವನ್ನು ಬೆರಳಿನಿಂದ ತಿದ್ದುವುದು. ಹಲಗೆಯ ಮೇಲೆ ಬರೆದ ಅಕ್ಷರವನ್ನು ತಿದ್ದುವುದು ಇವೆರಡೂ ಈಗೀಗ ಕಡಿಮೆಯಾಗಿವೆ. ಆದರೆ ಪುನರಾವರ್ತನೆಯ ವಿಧಾನ ಬಲವಾಗಿದೆ. ಬರೆದ ಅಥವಾ ಮುದ್ರಿಸಿದ ಮಾದರಿಯನ್ನು ಮತ್ತೆ ಮತ್ತೆ ಅನುಕರಿಸಿ ನಕಲು ಮಾಡುವುದನ್ನು ಬರೆವಣಿಗೆ ಕಲಿಕೆಯಲ್ಲಿ ಅತ್ಯವಶ್ಯವೆಂದು ಶಿಕ್ಷಣಶಾಸ್ತ್ರಜ್ಞರು ತಿಳಿಯುತ್ತಾರೆ.

ಬರೆವಣಿಗೆಗೆ ಬಳಸುವ ಲೇಖನಿ(ಬಳಪ, ಸೀಮೆಸುಣ್ಣ, ಹಲಗೆ, ಪೆನ್ನು, ಪೆನ್ಸಿಲ್)ಗಳನ್ನು ಹೇಗೆ ಹಿಡಿಯಬೇಕು ಮತ್ತು ಬರೆಯುವಾಗ ಹೇಗೆ ಕೂರಬೇಕು ಎಂಬುದನ್ನೂ ಪ್ರಾಸಂಗಿಕವಾಗಿ ಕಲಿಸುವರು. ಯಾವುದು ಆದರ್ಶಮಾದರಿ ಎನ್ನುವುದನ್ನು ತಿಳಿಸುವವರು; ಮಕ್ಕಳು ಬರೆಯುವಾಗ ಈ ಮಾದರಿಯನ್ನೇ ಅನುಕರಿಸುವಂತೆ ಒತ್ತಾಯಿಸುತ್ತಾರೆ.

ಅವರು ಲೇಖನಿ ಹಿಡಿಯುವ ವಿಧಾನ, ಕೂರುವ ವಿಧಾನ ಇವುಗಳಲ್ಲಿ ಇರುವ ವ್ಯತ್ಯಯಗಳನ್ನು ಸರಿಪಡಿಸುವರು. ಆದರೆ ಬರೆಹಕಲಿಕೆಯ ಕೊನೆಯಲ್ಲಿ ಮಕ್ಕಳು ಅಕ್ಷರಗಳ ಆದರ್ಶರೂಪಗಳನ್ನಾಗಲೀ, ಲೇಖನಿ ಹಿಡಿಯುವ, ಕೂರುವ ಆದರ್ಶ ಸ್ಥಿತಿಗಳನ್ನಾಗಲೀ ಕಲಿಯುವುದಿಲ್ಲ. ಅವರದೇ ಆದ ಸಿದ್ಧಿಗಳನ್ನು ಅವರು ಪಡೆಯುತ್ತಾರೆ. ಹಾಗಾಗಿ ಒಬ್ಬೊಬ್ಬರ ಅಕ್ಷರವೂ ಒಂದೊಂದು ಬಗೆ. ಲೇಖನಿ ಹಿಡಿಯುವ, ಬರೆಯುವ, ಕೂರುವ, ವಿಧಾನಗಳೂ ಹಲವು ಬಗೆಗಳಲ್ಲಿ ಇರುತ್ತವೆ.

ವಾಸ್ತವದಲ್ಲಿ ಮಕ್ಕಳು ಬರೆಯುವುದನ್ನು ಕಲಿಯುವಾಗ, ಈ ಮೊದಲೇ ಹೇಳಿದಂತೆ, ಹಲವು ರೀತಿಯ ಅಂಗಸಂಬಂಧಿ ಮತ್ತು ನರಸಂಬಂಧಿಯಾದ ಚಟುವಟಿಕೆಗಳನ್ನು ವಿಶಿಷ್ಟ ರೀತಿಯಲ್ಲಿ ಸಂಯೋಜಿಸುತ್ತಾರೆ. ಅಕ್ಷರಗಳ ಆಕಾರವನ್ನು ಗ್ರಹಿಸುವುದು, ಅವುಗಳ ರೇಖಾಗತಿಯ ದಿಕ್ಕನ್ನು ಅರಿಯುವುದು, ತಾವು ಕಂಡ ಅಕ್ಷರಗಳ ಗಾತ್ರಗಳನ್ನು ಬರೆಯುವ ಅಕ್ಷರಗಳ ಗಾತ್ರಕ್ಕೆ ಹೊಂದಿಸಿಕೊಳ್ಳುವುದು ಇವೇ ಮೊದಲಾದವು ಮುಖ್ಯ ಹಂತಗಳು. ಇವಲ್ಲದೆ ಎಡದಿಂದ ಬಲಕ್ಕೆ ಚಲಿಸುವ ಬರೆವಣಿಗೆಯಾದರೆ ಅದಕ್ಕನುಗುಣವಾಗಿ ಕೈಯನ್ನು, ಬೆರಳುಗಳನ್ನು ಚಲಿಸುವಂತೆ ಮಾಡುವುದು, ಸಾಲುಗಳ ನೇರವನ್ನು ಕಾಯ್ದುಕೊಳ್ಳುವುದು, ಸಾಲುಗಳು ಒಂದರ ಕೆಳಗೆ ಒಂದು ಬಂದಾಗ ಅವುಗಳ ನಡುವಣ ಕೆಳಗಿನ ಸಾಲಿನವರೆಗೆ ಬರೆವಣಿಗೆ ಮುಂದುವರೆದಂತೆ ಬರೆಯುತ್ತಿರುವ ಹಾಳೆ ಇಲ್ಲವೇ ಪುಸ್ತಕಗಳನ್ನು ಸೂಕ್ತಗತಿಯಲ್ಲಿ ಚಲಿಸುವಂತೆ ಮಾಡುವುದು, ಇವೂ ಕಲಿಯಬೇಕಾದ ಇನ್ನಿತರ ಸಂಗತಿಗಳು.

ಬರೆಯುವುದೇಕೆ?: ನಾವೇಕೆ ಬರೆಯುವುದನ್ನು ಕಲಿಯಬೇಕು? ಶಾಲೆಯ ಹಂತದಲ್ಲಿ ಬರೆಯುವುದನ್ನು ಕಲಿತವರಲ್ಲಿ ಬಹುಪಾಲು ಮಂದಿ ಮುಂದೆ ಸಹಿ ಹಾಕುವುದನ್ನು ಬಿಟ್ಟರೆ ಉಳಿದಂತೆ ಬರೆಯುವ ಪ್ರಸಂಗವನ್ನೇ ಎದುರಿಸುವುದಿಲ್ಲ. ಆದರೂ ಬರೆಯುವುದು ಅತ್ಯವಶ್ಯವೆಂದು ತಿಳಿಯುವುದೇಕೆ? ಶಾಲೆಯಲ್ಲಿ ಇನ್ನಿತರ ವಿಷಯಗಳನ್ನು ಕಲಿಸುವರಷ್ಟೆ?. ಹಾಗೆ ಕಲಿತದ್ದು ಎಷ್ಟು ಎಂದು ತಿಳಿಯಲು ಬರೆವಣಿಗೆ ನೆರವಿಗೆ ಬರುತ್ತದೆ. ಅಂದರೆ ಪರೀಕ್ಷೆಗಳಲ್ಲಿ ಉತ್ತರಗಳನ್ನು ಬರೆಯುತ್ತೇವೆ. ಹೀಗೆ ಬರೆವಣಿಗೆ ಇತರ ಕಲಿಕೆಗಳು ಎಷ್ಟು ಗುರಿ ತಲುಪಿವೆಯೆಂದು ತಿಳಿಯಲು ನೆರವಾಗುತ್ತದೆ. 'ಪರೀಕ್ಷೆ ಬರೆಯುವುದು' ಎಂಬ ವಾಗ್ರೂಢಿಯೇ ಭಾಷೆಯಲ್ಲಿ ನೆಲೆಗೊಂಡಿರುವುದು ಗಮನಾರ್ಹ.


ಬರೆಹದ ಉಪಯೋಗವನ್ನು ನಾವು ನೋಡುವ ವಿಧಾನವೇ ಬದಲಾಗಬೇಕಾಗಿದೆ. ಬರೆವಣಿಗೆಯೂ ಒಂದು ಭಾಷಾಭಿವ್ಯಕ್ತಿ ಕೌಶಲ. ಮಾತಿಗೆ ಎಷ್ಟು ಉಪಯೋಗಗಳಿವೆಯೋ ಅಷ್ಟೇ ಉಪಯೋಗ ಬರೆವಣಿಗೆಗೂ ಇದೆ. ಬೇರೆ ಬೇರೆ ಉದ್ದೇಶಗಳಿಗಾಗಿ ಮಾತಿನ ಬಗೆಗಳನ್ನು ಬಳಸುವುದನ್ನು ನಾವು ಕಲಿಯುವಂತೆ ಬರೆಹದ ಭಾಷೆಯನ್ನೂ ಬೇರೆ ಬೇರೆ ಉದ್ದೇಶಗಳಿಗೆ ಅನುಗುಣವಾಗಿ ಬಳಸಲು ಕಲಿಯುವುದು ಅವಶ್ಯವಾಗಿದೆ. ಆತ್ಮೀಯರಿಗೆ ಪತ್ರಬರೆಯುವುದು, ಸಾರ್ವಜನಿಕ ಹಿತಾಸಕ್ತಿಯ ವಿಷಯ ಕುರಿತು ದೂರು ಸಲ್ಲಿಸುವುದು, ಪ್ರಸಂಗಗಳನ್ನು ಬರೆಯುವುದು, ದಿನಚರಿ ಬರೆಯುವುದು

ಹೀಗೆ ಬೇರೆ ಬೇರೆ ಪ್ರಸಂಗಗಳಲ್ಲಿ ಬರೆಯುವ ಭಾಷೆ ಬೇರೆ ಬೇರೆಯ ರೀತಿಯಲ್ಲಿರುತ್ತದೆ. ಆದ್ದರಿಂದ ಬರೆವಣಿಗೆಯ ಕಲಿಕೆಯಲ್ಲಿ ಈ ಬರೆವಣಿಗೆಯ ವಿವಿಧ ಮಾದರಿಗಳನ್ನು ಕಲಿಯುವುದೂ ಸೇರುತ್ತದೆ.

ಸಾಮಾನ್ಯವಾಗಿ ಸಂಗತಿ ಪ್ರಧಾನವಾದ ವ್ಯಾವಹಾರಿಕ ರೀತಿಯ ಬರೆವಣಿಗೆಯನ್ನು ಶಾಲೆಯಲ್ಲಿ ಹೆಚ್ಚಾಗಿ ಕಲಿಸುವರು. ಅಥವಾ ಅಂಥ ಬರೆವಣಿಗೆಯ ಬಳಕೆಗೆ ಹೆಚ್ಚು ಒತ್ತು ಬೀಳುತ್ತದೆ. ನಿತ್ಯಜೀವನದ ಮಾತಿನಲ್ಲಿ ಸೇರುವ ಭಾವನೆಗಳು, ಉದ್ವೇಗಗಳು, ಬರೆವಣಿಗೆಯ ಈ ಮಾದರಿಯಲ್ಲಿ ಇರುವುದಿಲ್ಲ. ಆದರೆ ಮಾತಿನ ಬಗೆಯ ಬರೆವಣಿಗೆಗೂ ಅವಕಾಶಗಳಿವೆ. ಅದನ್ನೂ ಕಲಿಯುವುದು ಅವಶ್ಯವಾಗಿದೆ.

ಬರೆಯುವ ಮಾದರಿಗಳು

1. ಅಕ್ಷರಗಳನ್ನು ಬಳಸಿ ಇಡೀ ವಾಕ್ಯವನ್ನು ಬರೆಯುವುದು.
2. ವಾಕ್ಯದಲ್ಲಿ ಕೆಲವು ಪದಗಳನ್ನು ಮಾತ್ರ ಬಳಸಿ ಉಳಿದವನ್ನು ಪ್ರಸಂಗನಿಷ್ಠವಾಗಿ ಊಹಿಸಲು ಸೂಚಿಸುವಂತೆ ಬರೆಯುವುದು. ತಂತಿಸಂದೇಶ ಇದಕ್ಕೊಂದು ಮಾದರಿ.
3. ಹಲವು ವಾಕ್ಯಗಳಲ್ಲಿ ಒಂದೇ ರೀತಿಯ ಮಾಹಿತಿ ಮತ್ತೆ ಮತ್ತೆ ಪುನರಾವರ್ತನೆಯಾಗುತ್ತಿದ್ದರೆ, ಆಗ ಇಡೀ ಬರೆವಣಿಗೆಯನ್ನು ಒಂದು ಕೋಷ್ಟಕವನ್ನಾಗಿ ಪರಿವರ್ತಿಸುವುದು.



ಉದಾ: ರೈಲು ವೇಳಾಪಟ್ಟಿ

	ಬರುವುದು	ಹೊರಡುವುದು
ಬೆಂಗಳೂರು–ಹುಬ್ಬಳ್ಳಿ	10–15	06–50
ಬೆಂಗಳೂರು–ಮದರಾಸು	08–10	22–15
ಬೆಂಗಳೂರು–ದೆಹಲಿ	20–10	07–50

4. ವಾಕ್ಯಗಳ ಸರಣಿಯು ಹಲವಾರು ಕ್ರಿಯೆಗಳ ರೇಖಾತ್ಮಕ ಚಲನೆಯನ್ನು ಬಿಂಬಿಸುತ್ತಿದ್ದರೆ ಆಗ ವಾಕ್ಯಗಳನ್ನು ಒಂದು ಚಲನನಕ್ಷೆಯನ್ನಾಗಿ ಪ್ರತಿನಿಧಿಸುವುದು.

5. ಪರ್ಯಾಯ ಸಂಕೇತಗಳ ಬಳಕೆ: ಹ್ರಸ್ವೀಕರಣಕ್ಕಾಗಿ ಲಿಖಿತ ಭಾಷೆಯನ್ನೇ ಮತ್ತೊಂದು ಸಂಕೇತವ್ಯವಸ್ಥೆಗೆ ಪರಿವರ್ತಿಸುವುದು

   ಉದಾ: 1. ಔಷಧಿಯ ಹೆಸರು 1–0–1

   ಹೀಗೆ ಬರೆದರೆ 'ಔಷಧಿಯನ್ನು ಬೆಳಿಗ್ಗೆ ಮತ್ತು ರಾತ್ರಿ ತೆಗೆದುಕೊಳ್ಳಬೇಕು' ಎಂದು ಓದುತ್ತೇವೆ.

2. ಒ>ಎ/ವ್ಯ–ಕ

   'ಒ ಧ್ವನಿಯು ಯಾವುದೇ ವ್ಯಂಜನ ಮತ್ತು ಕಕಾರಗಳ ನಡುವೆ ಬಂದಾಗ ಎಕಾರವಾಗಿ ಉಚ್ಚಾರಗೊಳ್ಳುತ್ತದೆ' ಎಂಬ ವಾಕ್ಯವನ್ನು ಪ್ರತಿನಿಧಿಸುವ ಸೂತ್ರವಿದು.

ಮಕ್ಕಳು ಭಾಷೆಯನ್ನು ಕಲಿಯುವ ಬಗೆ

ಮಕ್ಕಳು ನುಡಿಯಲು ಮೊದಲು ಮಾಡುವುದನ್ನು ಎಲ್ಲರೂ ಸಂತಸದಿಂದ ಎದುರು ನೋಡುತ್ತಾರೆ. ಮಗು ಏನು ಉಲಿದರೂ ಅದಕ್ಕೊಂದು ಅರ್ಥ ನೀಡಿ ಉಲ್ಲಾಸ ಪಡುತ್ತಾರೆ. ನುಡಿಯಲು ತಡ ಮಾಡಿದರೆ ಆತಂಕಕ್ಕೆ ಒಳಗಾಗುತ್ತಾರೆ. ಅದು ನುಡಿಯುವಂತೆ ಮಾಡಲು ತವಕಿಸುತ್ತಾರೆ. ಅಂದರೆ ಮಗುವಿನ ಸಹಜ ಬೆಳವಣಿಗೆಯ ಒಂದು ಭಾಗವಾಗಿ ಅದು ನುಡಿಯುವುದನ್ನು ಕಲಿಯಬೇಕೆಂದು ನಾವೆಲ್ಲರೂ ಬಯಸುತ್ತೇವೆ. ಆದರೆ ಮಗುವಿನಲ್ಲಿ ಈ ನುಡಿಯುವ ಸಾಮರ್ಥ್ಯ ಹೇಗೆ ಬರುತ್ತದೆ ಎಂಬ ಬಗೆಗೆ ಹೆಚ್ಚು ಚಿಂತಿಸುವುದಿಲ್ಲ. ಹೆಚ್ಚೆಂದರೆ ಮಗು ತನ್ನ ಸುತ್ತಮುತ್ತಲಿನವರು ನುಡಿಯುವುದನ್ನು ಕೇಳಿ, ನೋಡಿ ತಾನೂ ನುಡಿಯಲು ಕಲಿಯುತ್ತದೆ ಎಂದು ತಿಳಿದಿರುತ್ತೇವೆ. ಮತ್ತೆ ಕೆಲವರು ಮಗುವಿಗೆ ತಾವು ನುಡಿಯಲು ಕಲಿಸುತ್ತೇವೆ ಎಂದುಕೊಳ್ಳುತ್ತಾರೆ.

ತನ್ನ ಸುತ್ತ ಇರುವವರ ಮಾತುಗಳನ್ನು ಮಗು ಕೇಳಿಸಿಕೊಳ್ಳುವುದರಿಂದ ಮಗು ತಾನೂ ನುಡಿಯಲು ಕಲಿಯುತ್ತದೆಂದು ತಿಳಿಯುವುದು ಕೊಂಚ ಸರಿಯಾದ ಮಾತೇ ಸರಿ. ಏಕೆಂದರೆ ಹೀಗೆ ಮಾತುಗಳನ್ನು ಕೇಳಿಸಿಕೊಳ್ಳದಿದ್ದರೆ ಮಗುವಿನಲ್ಲಿ ನುಡಿಯುವ ಸಾಮರ್ಥ್ಯ ಮೂಡುವುದೇ ಇಲ್ಲ. ಮೊಗಲ್ ದೊರೆ ಅಕ್ಬರ್ ಒಂದು ಪ್ರಯೋಗ ಮಾಡಿದ. ಈ ಪ್ರಯೋಗ ಮಾಡಲು ಅವನಿಗಿದ್ದ ಉದ್ದೇಶ ಬೇರೆ. ಜಗತ್ತಿಗೆಲ್ಲ ಮೂಲ ಭಾಷೆ ಯಾವುದು ಎಂಬುದನ್ನು ತಿಳಿಯುವ ಬಯಕೆ ಅವನಲ್ಲಿತ್ತು. ಯಾವ ಭಾಷೆಯನ್ನು ಮಗು ಕೇಳಿಸಿಕೊಳ್ಳುವುದೋ ಅದನ್ನೇ ಅದೂ ಕಲಿತು ಬಿಡುವುದರಿಂದ, ಹಾಗೆ ಯಾವ ಭಾಷೆಯನ್ನಾಗಲೀ ಮಗು ಕೇಳದಂತೆ ಮಾಡಿದರೆ, ಆಗ ಅದು ಮಾನವನ ಮೊದಲ ಭಾಷೆಯನ್ನೇ ನುಡಿಯಲು ಕಲಿಯುವುದೆಂದು ತಿಳಿದಿದ್ದನು. ಒಂದು ಮಗುವನ್ನು ಅದು ಹುಟ್ಟಿದ ಕೆಲವು ದಿನಗಳ ಬಳಿಕ ಒಂದು ಗುಟ್ಟಾದ ಜಾಗದಲ್ಲಿ ಬೆಳೆಸಲು ವ್ಯವಸ್ಥೆ ಮಾಡಿದನು. ಅದರ ಬೆಳವಣಿಗೆಗೆ ಬೇಕಾದ ಎಲ್ಲ ಸಾಮಗ್ರಿಗಳೂ ಅಲ್ಲಿ ದೊರೆಯುವಂತಿದ್ದವು. ಅದರ ಆರೈಕೆಗಾಗಿ ಜನರೂ ಇದ್ದರು. ಆದರೆ ಅವರು ಯಾರೂ ಮಗುವಿಗೆ ಕೇಳುವ ಹಾಗೆ ಒಂದು ಶಬ್ದವನ್ನೂ ನುಡಿಯಬಾರದೆಂದು ಶರತ್ತು ವಿಧಿಸಿದ್ದನು. ಕೆಲವು ತಿಂಗಳ ಬಳಿಕ ಈ ಮಗು ಮಾನವರ ಭಾಷೆಯನ್ನು ನುಡಿಯುವುದನ್ನು ಕೇಳಲು ಆ ಗುಟ್ಟಾದ ಜಾಗಕ್ಕೆ ಅಕ್ಬರ್ ಹೋದನು. ಅವನಿಗೆ ಅಲ್ಲಿ

ಕಾಯ್ದಿದ್ದದ್ದು ನಿರಾಸೆ. ಏಕೆಂದರೆ ಆ ಮಗು ಬೆಬ್ಬೆಬ್ಬೆ ಎನ್ನುವುದನ್ನು ಬಿಟ್ಟು ಮತ್ತೇನನ್ನೂ ನುಡಿಯಲು 'ಕಲಿತಿ'ರಲಿಲ್ಲ. ಇದರಿಂದ ಗೊತ್ತಾಗುವುದಿಷ್ಟು: ಮಗು ನುಡಿಯಲು 'ಕಲಿಯ' ಬೇಕಾದರೆ ಅದು ತನ್ನ ಬೆಳವಣಿಗೆಯ ಗೊತ್ತಾದ ವಯಸ್ಸಿನಲ್ಲಿ ಜನರ ನುಡಿಗಳನ್ನು ಕೇಳಿಸಿಕೊಳ್ಳುವುದು ಅಗತ್ಯ. ಇಲ್ಲದಿದ್ದರೆ ಅದು ಎಂದೂ ಮಾತನ್ನು ಕಲಿಯಲಾರದು.

ಗೊತ್ತಾದ ವಯಸ್ಸಿನಲ್ಲಿ ಎಂಬ ಮಾತನ್ನು ಗುರುತಿಟ್ಟುಕೊಳ್ಳಿ. ಏಕೆಂದರೆ ಆಕ್ಟರನ ಕತೆಯಲ್ಲಿ ಬರುವ ಮಾತು ಕಲಿಯದ ಮಗುವಿಗೆ ಆ ಬಳಿಕ ಸುತ್ತ ಜನರು ಮಾತಾಡುವುದನ್ನು ಕೇಳಿಸಿಕೊಂಡರೂ ಅದು ಮತ್ತೆ ಮಾತಾಡುವುದನ್ನು ಕಲಿಯಲಾರದು. ಇನ್ನೊಂದು ಉದಾಹರಣೆಯನ್ನು ನೋಡೋಣ. ಪಾರಿವಾಳದ ಮರಿಯೊಂದು ಹಾರಲು ಯಾರೂ ಹೇಳಿಕೊಡುವುದಿಲ್ಲ. ತಾನೇ ಹಾರಲು ಕಲಿಯುತ್ತದೆ. ಆದರೆ ಅದು ಹುಟ್ಟಿ ಬೆಳೆಯುವಾಗ ಕೆಲವು ವಾರಗಳ ಅವಧಿಯಲ್ಲಿ ಅದು ಹಾರಲಾಗದಂತೆ ಕಟ್ಟಿ ಹಾಕಿಬಿಟ್ಟರೆ ಆಮೇಲೆ ಅದು ಎಂದೆಂದೂ ಹಾರಲು ಕಲಿಯಲಾರದೆಂಬುದು ಪ್ರಯೋಗಗಳಿಂದ ತಿಳಿದುಬಂದಿದೆ. ಎಂದರೇನಾಯ್ತು? ಬೆಳೆಯುತ್ತಿರುವಾಗ ಒಂದು ಗೊತ್ತಾದ ಹಂತದಲ್ಲಿ ಮಾತ್ರ ಈ ಕಲಿಕೆ ಸಾಧ್ಯ. ಇಲ್ಲದಿದ್ದರೆ ಅದು ಆಗದು. ಮಗುವಿನ ಮಟ್ಟಿಗೂ ಇದು ದಿಟ. ಮಾತಾಡುವುದನ್ನು ಅದು ಕಲಿಯುವ ಒಂದು ಗೊತ್ತಾದ ವಯೋಮಾನವಿದೆ. ಆಗ ಅದಕ್ಕೆ ಇತರರು ನುಡಿಯುವುದನ್ನು ಕೇಳಿಸಿಕೊಳ್ಳುವ ಸೌಲಭ್ಯ ದೊರಕಬೇಕು. ಹಾಗೆ ಆ ವಯೋಮಾನದಲ್ಲಿ ಈ ಸೌಲಭ್ಯ ದೊರಕದೆ ಹೋದರೆ ಮುಂದೆ ಮಾತಾಡುವುದನ್ನು ಕೇಳಿಸಿಕೊಂಡರೂ ಅದು ತಾನು ಮಾತಾಡುವುದನ್ನು ಕಲಿಯಲಾರದು.

ಆದರೆ ಮಗುವಿನ ಎಲ್ಲ ಕಲಿಕೆಗಳೂ ಹೀಗಲ್ಲ. ಕೆಲವು ಕಲಿಕೆಗಳನ್ನು ಹೇಳಿಕೊಟ್ಟು ಕಲಿಸಬಹುದು. ಕಲಿಸುವವರು ನೀಡುವ ತರಬೇತಿಯ ನೆರವಿನಿಂದ ಕಲಿಯಬಹುದು. ಮತ್ತೆ ಕೆಲವನ್ನು ಮಗು ಬೆಳೆದ ಮೇಲೆ ತನ್ನ ಜೀವನದಲ್ಲಿ ಎಂದಾದರೂ ತಾನೇ ಬಯಸಿ ಕಲಿಯಬಹುದು. ಈಜುವುದು, ಸೈಕಲ್ ಸವಾರಿ, ಚೆಸ್ ಆಡುವದು, ಮಗ್ಗಿ ಹೇಳುವುದು ಮುಂತಾದ ಕಲಿಕೆಗಳನ್ನು ನೋಡಿ. ಇವೆಲ್ಲವನ್ನೂ ಕಲಿಯಲು ವಯೋಮಾನದ ಕಟ್ಟುಪಾಡುಗಳಿಲ್ಲ. ಅಲ್ಲದೆ ಈ ಕಲಿಕೆಗಳಿಗೆ ಒಂದು ಗೊತ್ತಾದ ವಿಧಾನವಿದೆ. ನಾವೂ ಕೂಡ ನಮ್ಮ ಬದುಕಿನ ಯಾವುದೇ ಹಂತದಲ್ಲಿ ಬೇಕಾದರೂ ಒಂದು ಭಾಷೆಯನ್ನು ಕಲಿಯಬಹುದಲ್ಲವೇ ಎಂದು ಕೇಳಬಹುದು. ಈ ಮಾತು ಸರಿ. ಆದರೆ ಹೀಗೆ ಬೆಳೆದವರು ಭಾಷೆ ಕಲಿಯುವ ಸಂದರ್ಭಗಳನ್ನು ಗಮನಿಸಿದರೆ ಅವರು ಈಗಾಗಲೇ ಚಿಕ್ಕವರಿದ್ದಾಗ ಒಂದು ಭಾಷೆಯನ್ನು ಕಲಿತವರೇ ಆಗಿರುತ್ತಾರೆ ಎಂಬುದು ಗೊತ್ತಾಗುತ್ತದೆ. ಅಂದರೆ ದೊಡ್ಡವರಾದ ಮೇಲೆ ಇನ್ನೊಂದು ಭಾಷೆಯನ್ನು ಆಡುವುದನ್ನು ಕಲಿಯಬಹುದಾದರೂ, ಆ ಕಲಿಕೆಗೂ ನಾವು ಎಳೆಯವರಾಗಿದ್ದಾಗ ಮೊದಲ ಭಾಷೆಯನ್ನು 'ಕಲಿತ'ದ್ದಕ್ಕೂ ವ್ಯತ್ಯಾಸಗಳಿವೆ. ಬಹಳ ಮುಖ್ಯವಾದ ವ್ಯತ್ಯಾಸವೆಂದರೆ ದೊಡ್ಡವರಾಗಿರುವಾಗ ನಾವು ಇನ್ನೊಂದು ಭಾಷೆ ಕಲಿಯಲು ಮೊದಲು ಮಾಡಿದರೆ, ಹಾಗೆ ಕಲಿಯುತ್ತಿದ್ದೇವೆ

ಎಂಬುದು ನಮಗೆ ಗೊತ್ತಿರುತ್ತದೆ. ಅಂದರೆ ನಾವು ಎಚ್ಚರದಿಂದ ಕಲಿಯುತ್ತಿರುತ್ತೇವೆ. ಆದರೆ ಎಳವೆಯಲ್ಲಿ ನುಡಿಯಲು ಕಲಿಯುವಾಗ ಮಗುವಿಗೆ ತಾನು ಏನನ್ನೋ ಕಲಿಯುತ್ತಿದ್ದೇನೆ ಎಂಬುದು ಗೊತ್ತಿರುವುದಿಲ್ಲ. ಮಗುವಿನಲ್ಲಿ ಅದು 'ತಂತಾನೇ' ಸಂಭವಿಸುತ್ತಿರುತ್ತದೆ. ಇನ್ನೂ ಒಂದು ವ್ಯತ್ಯಾಸವಿದೆ. ಎರಡನೆಯ ಭಾಷೆಯನ್ನು ಕಲಿಯುವಾಗ ನಾವೀಗಾಗಲೇ ಕಲಿತಿರುವ ಭಾಷೆಯೊಂದು ನೆರವಾಗಬಹುದು ಇಲ್ಲವೇ ಅಡ್ಡಿಯೂ ಆಗಬಹುದು. ಅಂದರೆ ಮೊದಲ ಭಾಷೆಯ 'ಭಾರ' ನಮ್ಮಲ್ಲಿ ಇದ್ದೇ ಇರುತ್ತದೆ. ಆದರೆ ಮೊದಲ ಭಾಷೆಯನ್ನು ಕಲಿಯುವಾಗ ಈ 'ಗೋಜಲು' ಇರುವುದಿಲ್ಲ. ಈ ಹೇಳಿಕೆಗಳನ್ನು ನಮ್ಮ ಅನುಭವಗಳಿಗೆ ಹೊಂದಿಸಿ ತಾಳೆ ನೋಡಿಕೊಳ್ಳಬಹುದು.

ಇದರಿಂದ ಗೊತ್ತಾಗುವುದೇನು? ಮಗು ತನ್ನ ಮೊದಲ ಭಾಷೆಯನ್ನು 'ಕಲಿಯುವ' ಬಗೆ ಅದು ತನ್ನ ಜೀವನದಲ್ಲಿ ಪಡೆದುಕೊಳ್ಳುವ ಇತರ ಕಲಿಕೆಗಳ ಹಾಗಲ್ಲ. ಇದು ಬೇರೆಯದೇ ಬಗೆಯ 'ಕಲಿಕೆ'. ಮೊದಲ ಭಾಷೆಯ ಕಲಿಕೆ ಮಗುವಿನ ಬೆಳವಣಿಗೆಯ ಗೊತ್ತಾದ ಹಂತದಲ್ಲಿ ಮಾತ್ರ ನಡೆಯಬಲ್ಲುದು. ಸಾಮಾನ್ಯ ಮಕ್ಕಳಲ್ಲಿ ಇದು ಸುಮಾರು ಹದಿನೆಂಟನೆಯ ತಿಂಗಳಿಂದ ಮೊದಲಾಗಿ ನಾಲ್ಕು ಇಲ್ಲವೇ ಐದನೇ ವಯಸ್ಸಿನೊಳಗೆ ಪೂರ್ಣಗೊಂಡಿರುತ್ತದೆ. ವಯಸ್ಸಿನ ಈ ಅವಧಿಯಲ್ಲಿ ಮಗು ಯಾವುದಾದರೂ ಒಂದು ಭಾಷೆಯನ್ನು ಕೇಳಿಸಿಕೊಳ್ಳುವುದು ಅಗತ್ಯ. ಇಲ್ಲದಿದ್ದರೆ ಅದು ಯಾವುದೇ ನುಡಿಯನ್ನೂ ಕಲಿಯಲಾರದು. ಒಂದಕ್ಕಿಂತ ಹೆಚ್ಚು ನುಡಿಗಳನ್ನು ಕೇಳಿಸಿಕೊಳ್ಳುವಂತಿದ್ದರೆ ಏನಾಗುತ್ತದೆ? ಅಚ್ಚರಿಯ ಸಂಗತಿಯೆಂದರೆ ಮಗು ತಾನು ಕೇಳಿಸಿಕೊಳ್ಳುವ ಎಲ್ಲ ಭಾಷೆಗಳನ್ನೂ ಕಲಿಯುವುದು. ಅಂದರೆ ಈ ವಯೋಮಾನದಲ್ಲಿ ಒಂದು ಭಾಷೆಯ ಕಲಿಕೆ ಇನ್ನೊಂದು ಭಾಷೆಯ ಕಲಿಕೆಗೆ ಅಡ್ಡಿಯಾಗಲಾರದು. ನಮ್ಮ ಸುತ್ತಲಿನ ಅನುಭವಗಳು ಇದಕ್ಕೆ ಬೇಕಾದ ಉದಾಹರಣೆಗಳನ್ನು ನೀಡಬಲ್ಲವು. ಹೀಗೆ ಹೆಚ್ಚು ಭಾಷೆಗಳನ್ನು ಕಲಿಯುವ ಮಗು ಹೆಚ್ಚು ಜಾಣ ಮಗು ಎಂದು ತಿಳಿಯ ಬೇಕಾಗಿಲ್ಲ. ಎಲ್ಲ ಮಕ್ಕಳಲ್ಲೂ ಇದು ಸಾಧ್ಯ. ದೊಡ್ಡವರಾದ ಮೇಲೆ ನಡೆಯುವ ಕಲಿಕೆಯಲ್ಲಿ ಮಾತ್ರ ಹೀಗೆ ಒಂದೇ ಕಾಲಕ್ಕೆ ಎಷ್ಟನ್ನು ಕಲಿಯಬೇಕು ಎಂಬುದು ಮುಖ್ಯವಾಗುತ್ತದೆ. ಅಲ್ಲದೆ ಬುದ್ಧಿವಂತರು ಮಾತ್ರ ಹೆಚ್ಚು ಸುಲಲಿತವಾಗಿ ಕಲಿಯಬಲ್ಲರೆಂಬುದು ಈ ವಯಸ್ಕ ಕಲಿಕೆಗಳಲ್ಲಿ ಮುಖ್ಯವಾಗಬಹುದು.

ಎಳವೆಯಲ್ಲಿ ನಡೆಯುವ ಭಾಷಾಕಲಿಕೆಗೆ ಕಲಿಸುವವರು ಯಾರೂ ಇರುವುದಿಲ್ಲ. ನಾವು ಕಲಿಸುತ್ತಿದ್ದೇವೆ ಎಂದು ತಂದೆತಾಯಿ ಬಂಧು ಬಳಗದವರು ತಿಳಿದಿರುತ್ತಾರೆ. ಆದರೆ ಮಗು ಅವರಲ್ಲಿ ಯಾರನ್ನೋ ತನ್ನ ಗುರು ಎಂದು ತಿಳಿದಿರುತ್ತದೆಂದು ಭಾವಿಸಲು ಪುರಾವೆಗಳಿಲ್ಲ. ಹೆತ್ತವರಿಂದ ದೂರಾಗಿ ಯಾರದೋ ನೆರವಿನಲ್ಲಿ ಬೆಳೆದ ಮಕ್ಕಳೂ ಕೂಡ ತಾನು ಬೆಳೆಯುವ ಪರಿಸರದಲ್ಲಿ ಯಾರೋ ಆಡಿದ ಮಾತುಗಳನ್ನು ಕೇಳಿಸಿಕೊಳ್ಳುತ್ತಲೇ ಒಂದು ಭಾಷೆಯನ್ನು ಆಡಲು ಕಲಿಯಬಲ್ಲರು. ರಕ್ತ ಸಂಬಂಧಿಗಳ ಒತ್ತಾಸೆಯೇ ಬೇಕಿಲ್ಲ. ಮೊದಲ ಭಾಷೆಯ ಕಲಿಕೆಯಲ್ಲಿ, ಸರಳ ಹಂತದಿಂದ ಸಂಕೀರ್ಣ ಹಂತ ಎಂಬ ಇತರ ಕಲಿಕೆಯ ನಿಯಮಗಳು ಬಳಕೆಯಾಗುವಂತೆ ತೋರುವುದಿಲ್ಲ.

ಮಗು ಹೇಗೆ, ಯಾವ ಭಾಷಾಂಶಗಳನ್ನು ಯಾವಾಗ ಕಲಿಯಬೇಕೆಂಬುದನ್ನು ಹೊರಗಿರುವ ನಾವು, ಎಂದರೆ ಕಲಿಸುತ್ತಿದ್ದೇವೆ ಎಂದು ತಿಳಿದುಕೊಂಡಿರುವವರು, ಹಿಡಿತದಲ್ಲಿಟ್ಟುಕೊಳ್ಳುವುದು ಆಗದ ಮಾತು. ಬಲು ಜಟಿಲವಾದ ವಾಕ್ಯವೊಂದನ್ನು ನುಡಿಯುತ್ತಿರುವ ಮಗು ಆ ಭಾಷೆಯ ಯಾವುದೋ ಒಂದು ಧ್ವನಿಯನ್ನು ಸರಿಯಾಗಿ ಉಚ್ಚರಿಸದೆಯೂ ಇರಬಹುದು. ಅಂದರೆ ಧ್ವನಿ ಉಚ್ಚಾರಣೆ ಸುಲಭ, ವಾಕ್ಯ ರಚನೆ ಕಷ್ಟ ಎಂಬ ಕಲಿಕೆಯ ನಿಯಮ ಇಲ್ಲಿ ಗಣನೆಗೆ ಬರುವುದಿಲ್ಲ. ಎಷ್ಟೋ ಮಕ್ಕಳು ಅರಳು ಹುರಿದಂತೆ ಮಾತಾಡುವಾಗಲೂ ರಕಾರವನ್ನೋ ಇಲ್ಲವೇ ಮತ್ತೆ ಯಾವುದೋ ಒಂದು ಧ್ವನಿಯನ್ನೋ ಇನ್ನೂ ಸರಿಯಾಗಿ ಹೇಳಲು ಬರದಿರುವುದನ್ನು ನಾವೇ ಗಮನಿಸಿರುತ್ತೇವೆ. ಹಾಗಾಗಿ ನಾವು ತಿಳಿದಂತೆ ಎಲ್ಲ ಕಲಿಕೆಗಳಂತೆ ಮಗುವಿನ ಮೊದಲ ಭಾಷೆಯ ಕಲಿಕೆಯೂ ಒಂದು ಎಂಬ ನಮ್ಮ ತಿಳುವಳಿಕೆ ಅಷ್ಟು ಸರಿಯಲ್ಲ. ಇದು ಬೇರೆಯದೇ ಆಗಿದೆ. ಮಗುವಿನಲ್ಲಿ ಹೇಗೆ ಸಾಧ್ಯವಾಗುತ್ತದೆ ಎಂಬುದು ತುಂಬಾ ಕುತೂಹಲದ ವಿಷಯ. ಮುಂದಿನ ಟಿಪ್ಪಣಿಯಲ್ಲಿ ಈ ಕುರಿತು ಮಾತಾಡೋಣ.

ಮಗುವಿನಲ್ಲಿ ಭಾಷಾಸಾಮರ್ಥ್ಯವೆಂಬುದು ಮೂಡಲು ಕಾರಣವಾಗುವ ಸಂಗತಿಗಳು ಮಗುವಿಗೆ ಹುಟ್ಟನಿಂದಲೇ ದೊರೆತಿರುತ್ತದೆ. ಮಗು ಯಾವುದೋ ಒಂದು ಭಾಷೆಯನ್ನು ಕಲಿತು ಹುಟ್ಟುವುದಿಲ್ಲವಾದರೂ, ಜಗತ್ತಿನಲ್ಲಿರುವ ಯಾವುದೇ ಮಾನವಸಹಜ ಭಾಷೆಯನ್ನು 'ಕಲಿಯಲು' ಬೇಕಾದ ಸಾಮರ್ಥ್ಯದೊಡನೆ ಹುಟ್ಟಿರುತ್ತದೆ. ಈ ಸಾಮರ್ಥ್ಯ ಮಗುವಿನ ಮೆದುಳಿನಲ್ಲಿ ನೆಲೆಗೊಂಡಿರುತ್ತದೆಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಮನುಷ್ಯರ ಮೆದುಳು ಎಡ ಮತ್ತು ಬಲ ಎಂದು ಎರಡು ಭಾಗಗಳನ್ನು ಹೊಂದಿರುತ್ತದಷ್ಟೆ. ಈಗಿನ ನಮ್ಮ ತಿಳುವಳಿಕೆಯ ನೆಲೆಯಲ್ಲಿ ನಮ್ಮ ಎಡಮೆದುಳಿನಲ್ಲಿ ಭಾಷೆಗೆ ಸಂಬಂಧಿಸಿದ ಹಿಡಿತವನ್ನುಳ್ಳ ಭಾಗಗಳಿವೆ. ಮಗು ಹುಟ್ಟಿದಾಗ ಅದರ ಮೆದುಳು ಹೀಗೆ ಎಡಬಲ ಎಂಬ ಒಡೆತಕ್ಕೆ ಒಳಗಾಗಿರುವುದಿಲ್ಲ. ಇಡೀ ಮೆದುಳು ಒಂದೇ ಎಂಬಂತೆ ಕೆಲಸ ಮಾಡುತ್ತಿರುವುದಂತೆ. ಮಗು ಬೆಳೆದಂತೆ ಸರಿಸುಮಾರು ಹದಿನೆಂಟನೆಯ ತಿಂಗಳಿನ ಹೊತ್ತಿಗೆ ಮಗುವಿನ ಮೆದುಳು ಎಡಬಲವೆಂಬ ಒಡೆತಕ್ಕೆ ಒಳಗಾಗತೊಡಗುತ್ತದೆ. ಅಂದರೆ ಮೆದುಳಿನ ಒಟ್ಟಾರೆ ಕೆಲಸಗಳು ಮೆದುಳಿನ ಈ ಭಾಗಗಳಲ್ಲಿ ಹಂಚಿಕೆಯಾಗತೊಡಗುತ್ತವೆ. ಇದೇ ವೇಳೆಗೆ ಮಗುವಿನಲ್ಲಿ ಯಾವುದೇ ಭಾಷೆಯನ್ನಾಗಲೀ 'ಕಲಿಯುವ' ಸಾಮರ್ಥ್ಯವೂ ಕೂಡ ಕೆಲಸ ಮಾಡಲು ಮೊದಲಿಡುತ್ತದೆ. ಮಗುವಿಗೆ ಆಗ ಯಾವ ಭಾಷೆಯ ಪರಿಸರ ಒದಗುತ್ತದೋ ಆ ಭಾಷೆಯನ್ನು ಆಡಲು, ಕೇಳಿ ಅರಿಯಲು ಮಗು ಸಿದ್ಧವಾಗುತ್ತದೆ. ಒಂದು ವೇಳೆ ಯಾವುದೇ ಒಂದು ಭಾಷೆಯೂ ಪರಿಸರದಿಂದ ಆ ಮಗುವಿಗೆ ಒದಗದಿದ್ದರೆ, ಆಗ ಆ ಮಗುವಿಗೆ ಯಾವ ಭಾಷೆಯ ಸಾಮರ್ಥ್ಯವನ್ನಾಗಲೀ ಪಡೆದುಕೊಳ್ಳಲು ಆಗದೇ ಹೋಗಬಹುದು.

ಕಳೆದ ಮೂರುನಾಲ್ಕು ದಶಕಗಳಲ್ಲಿ ನಡೆದಿರುವ ಸಂಶೋಧನೆಗಳಿಂದಾಗಿ ಮಗು ಹುಟ್ಟುವಾಗಲೇ ಯಾವುದಾದರೊಂದು ಮಾನವ ಸಹಜ ಭಾಷೆಯ ಸಾಮರ್ಥ್ಯವನ್ನು ಪಡೆದುಕೊಳ್ಳಲು ನೆರವಾಗುವ ವ್ಯವಸ್ಥೆಯೊಂದನ್ನು ಪಡೆದುಕೊಂಡಿರುತ್ತದೆಂಬುದು

ಖಚಿತವಾಗಿದೆ. ಈ ವ್ಯವಸ್ಥೆ ಇರುವುದನ್ನು ಪ್ರಾಯೋಗಿಕವಾಗಿ, ಅಂದರೆ ಮೆದುಳನ್ನು ತೆರೆದು ತೋರಿಸಲು ಯಾರೂ ಮುಂದಾಗಿಲ್ಲ. ಆದರೆ ಇಂತದೊಂದು ವ್ಯವಸ್ಥೆ ಇರುವುದನ್ನು ಒಪ್ಪದೆ ಹೋದಲ್ಲಿ ಮಗುವಿಗೆ ಭಾಷಿಕ ಸಾಮರ್ಥ್ಯವು ದೊರಕುವುದು ಹೇಗೆ ಎನ್ನುವ ಪ್ರಶ್ನೆಗೆ ಉತ್ತರ ಸಿಗುವುದೇ ಇಲ್ಲ. ಹಾಗಾಗಿ ಈಗ ಹುಟ್ಟಿನಿಂದಲೇ ದೊರಕಿರುವ ಈ ವ್ಯವಸ್ಥೆಯೊಂದು ಇರುವುದನ್ನು ಒಪ್ಪದೇ ಬೇರೆ ದಾರಿಯಿಲ್ಲ.

ಈ ವ್ಯವಸ್ಥೆಯು ಈಗಾಗಲೇ ಹೇಳಿದಂತೆ ಮಗುವಿನ ಮೆದುಳು ಎಡಬಲ ಭಾಗಗಳೆಂದು ಕೆಲಸ ಹಂಚಿಕೊಳ್ಳುವ ಹೊತ್ತಿನಲ್ಲಿ ಎಚ್ಚರಗೊಳ್ಳುತ್ತದೆ. ಆದರೆ ಇದರ ಕಾರ್ಯವ್ಯಾಪ್ತಿ ಜೀವನದುದ್ದಕ್ಕೂ ಇರಲಾರದು. ಗೊತ್ತಾದ ವಯೋಮಾನದ ಬಳಿಕ ಈ ವ್ಯವಸ್ಥೆಯ ನೆರವು ಬೆಳೆಯುತ್ತಿರುವ ಮಗುವಿಗೆ ದೊರಕುವುದು ನಿಂತುಹೋಗುತ್ತದೆ. ಈಗ ಬಹುಮಟ್ಟಿಗೆ ಒಪ್ಪಿರುವಂತೆ ಮಕ್ಕಳು ಬಾಲ್ಯದ ಹಂತದಿಂದ ಕೌಮಾರ್ಯದ ಹಂತಕ್ಕೆ ದಾಟುವ ಹೊತ್ತಿನಲ್ಲಿ ಈ ವ್ಯವಸ್ಥೆ ಕೆಲಸ ಮಾಡುವುದನ್ನು ನಿಲ್ಲಿಸುವುದು. ಈ ಬಾಲ್ಯ ಕೌಮಾರ್ಯಗಳ ಗಡಿಗೆರೆ ಹವಾಮಾನವನ್ನು ಅವಲಂಬಿಸಿ ದೇಶದಿಂದ ದೇಶಕ್ಕೆ ಬದಲಾಗುತ್ತದೆ. ಹೆಣ್ಣು ಮತ್ತು ಗಂಡು ಮಕ್ಕಳಲ್ಲಿ ಈ ಅವಸ್ಥಾಂತರದ ವಯೋಮಾನ ಬೇರೆಬೇರೆಯಾಗಿರುತ್ತದೆ.

ಈಗ ಭಾಷಾಶಾಸ್ತ್ರಜ್ಞರು ಮಗು ಭಾಷೆಯನ್ನು 'ಕಲಿಯು'ತ್ತದೆ ಎಂಬ ಮಾತನ್ನು ಒಪ್ಪುತ್ತಿಲ್ಲ. ಏಕೆಂದರೆ ಕಲಿಯುವುದು ಎಂದರೆ 1.ಗೊತ್ತಿಲ್ಲದ ಸಾಮರ್ಥ್ಯವನ್ನು ಪಡೆದುಕೊಳ್ಳುವುದು ಎಂದರ್ಥ. 2.ಇದಕ್ಕೆ ಗೊತ್ತಾದ ಕಲಿಕೆಯ ವಿಧಾನಗಳಿರುತ್ತವೆ. 3.ಕಲಿಸುವವರು ಎಂಬುವವರು ಇರುತ್ತಾರೆ. 4.ಕಲಿಯುವವರಲ್ಲಿ ಕಲಿಕೆಯ ಬಳಿಕ ಪಡೆದುಕೊಂಡ ಸಾಮರ್ಥ್ಯದಲ್ಲಿ ಏರುಪೇರುಗಳಿರುತ್ತವೆ. 5.ಕಲಿಕೆಗೆ ಕೊನೆ ಎಂಬುದೇ ಇಲ್ಲ. ಅಂದರೆ ಇನ್ನೂ ಕಲಿಯುವುದು ಇದ್ದೇ ಇರುತ್ತದೆ. ಆದ್ದರಿಂದ ಯಾವುದೇ ಕಲಿಕೆಯಲ್ಲಿ ಒಂದು ಹಂತ ತಲುಪಿದಾಗ ಇನ್ನು ಕಲಿಯಬೇಕಾದ್ದು ಏನೂ ಇಲ್ಲ ಎನ್ನುವ ನೆಲೆ ಇರುವುದಿಲ್ಲ. ಆದರೆ ಕಲಿಕೆಯನ್ನು ಕುರಿತ ಈ ಯಾವ ನಿಲುವುಗಳೂ ಭಾಷಾಸಾಮರ್ಥ್ಯವನ್ನು ಪಡೆದುಕೊಳ್ಳುವ ಬಗೆಗೆ ಹೊಂದಿಕೊಳ್ಳುವುದೇ ಇಲ್ಲ. ಮಗು ಭಾಷಾಸಾಮರ್ಥ್ಯವನ್ನು ಪಡೆದುಕೊಳ್ಳುವಾಗ ತನಗೆ ಗೊತ್ತಿಲ್ಲದ ಏನನ್ನೋ ಪಡೆದುಕೊಳ್ಳುತ್ತಿರುವುದಿಲ್ಲ. ನಾವೀಗ ಗಮನಿಸಿದಂತೆ, ಮೆದುಳಿನಲ್ಲಿದ್ದು ಬಳಿಕ ಮೈಮುರಿದೆದ್ದ ವ್ಯವಸ್ಥೆಯಲ್ಲಿ ಜಗತ್ತಿನ ಯಾವುದೇ ಮಾನವ ಭಾಷೆಗಾದರೂ ಅನ್ವಯಿಸುವ 'ಸಂಗತಿ'ಗಳು ಅಡಕವಾಗಿರುತ್ತವೆ. ಮಗು ತಾನು ಬೆಳೆಯುವ ಪರಿಸರದಲ್ಲಿ ಯಾವ ಭಾಷೆಯ ಮಾಹಿತಿ ದೊರಕುವುದೋ ಆ ಭಾಷೆಯ ಸಂಗತಿಗಳನ್ನು ಆ ಆಂತಸ್ಥ ವ್ಯವಸ್ಥೆಯಿಂದ ಆಯ್ದುಕೊಳ್ಳುತ್ತದೆ. ಉಳಿದ ಸಂಗತಿಗಳನ್ನು ಬಿಟ್ಟುಕೊಡುತ್ತದೆ. ಇನ್ನೂ ಒಂದು ಬಗೆಯಲ್ಲಿ ಹೇಳುವುದಾದರೆ ಮಗುವೊಂದು ತಮಿಳು ಭಾಷಾಪರಿಸರದಲ್ಲಿ ಬೆಳೆಯುತ್ತಿರುವಾಗ ತನ್ನ ಮೆದುಳಿನಲ್ಲಿರುವ ಭಾಷಾಸಂಬಂಧೀ ವ್ಯವಸ್ಥೆಯ ನೆರವಿನಿಂದ ತಮಿಳು ಭಾಷಾರಚನೆಗೆ ಸಂಬಂಧಿಸಿದ ನಿಯಮಗಳನ್ನು ಆಯ್ದುಕೊಳ್ಳುತ್ತದೆ. ಅಂದರೆ ಜಗತ್ತಿನ ಇನ್ನುಳಿದ ಮಾನವ ಭಾಷೆಗಳಿಗೆ ಸಂಬಂಧಿಸಿದ 'ಸಂಗತಿ'ಗಳನ್ನು ಬಿಟ್ಟುಕೊಡುತ್ತದೆ;

ಅವುಗಳನ್ನು ಮರೆಯುತ್ತದೆ. ಮಗು ಒಂದು ಭಾಷೆಯ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಿದೆ ಎಂದರೆ ದಿಟವಾಗಿ ಅದು ಜಗತ್ತಿನ ಇನ್ನಿತರ ಭಾಷೆಗಳನ್ನು 'ಮರೆಯು'ತ್ತಿದೆ ಎಂದೂ ಹೇಳಬಹುದು.

ಮಗುವು ಭಾಷೆಯನ್ನು ಉಳಿದ ಕಲಿಕೆಗಳಂತೆ ಹಂತಹಂತವಾಗಿ ಕಲಿಯುವುದಿಲ್ಲ. ಮಗು ಹಾಗೆ ಕಲಿಯುತ್ತಿದೆ ಎಂದು ನಾವು ಭಾವಿಸುತ್ತೇವೆ. ಸಾಮಾನ್ಯವಾಗಿ ಏನನ್ನಾದರೂ ಕಲಿಯುವಾಗ ಏನನ್ನು ಕಲಿಯಲಾಯಿತು ಎಂಬುದನ್ನು ಪರೀಕ್ಷಿಸಲು ಸಾಧ್ಯ. ಆದರೆ ಭಾಷಾಸಾಮರ್ಥ್ಯದ ವಿಷಯದಲ್ಲಿ ಇದು ಆಗದ ಮಾತು. ಮಗು ತಾನು ಎಂದೂ ಕೇಳದ ವಾಕ್ಯಗಳನ್ನು ಸುಲಲಿತವಾಗಿ ಉಚ್ಚರಿಸುವುದನ್ನು ನೋಡುತ್ತೇವೆ. ಆ ವಾಕ್ಯಗಳನ್ನು ಮೊದಲೇ ಕಲಿತಿರಲು ಸಾಧ್ಯವಿಲ್ಲ. ಒಂದು ವೇಳೆ ವಾಕ್ಯರಚನೆಯ ನಿಯಮಗಳನ್ನು ಮಗು 'ಕಲಿಯು'ತ್ತದೆಂದು ಒಪ್ಪುವುದಾದರೆ, ಈ ನಿಯಮವನ್ನು ಯಾರು ಕಲಿಸಿದರೆಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ತಾನು ಕೇಳಿದ ವಾಕ್ಯಗಳ ಮೂಲಕ ಅಂತಹ ನಿಯಮವನ್ನು ಮಗುವು ತಾನೇ ರೂಪಿಕೊಳ್ಳುತ್ತದೆಂದು ತೀರ್ಮಾನಿಸಲೂ ಆಗದು. ಏಕೆಂದರೆ ಮಗುವಿಗೆ ಹೀಗೆ 'ನಿದರ್ಶನಗಳನ್ನು ನಿಯಮಗಳನ್ನಾಗಿ ಮರುರೂಪಿಸುವ ಸಾಮರ್ಥ್ಯ' ಇರುವುದೆಂಬುದನ್ನು ಸಾಧಿಸಿ ತೋರಿಸಲು ಸಾಧ್ಯವಾಗಿಲ್ಲ. ಇಂತಹ ಸಾಮರ್ಥ್ಯ ಇರುವುದೇ ಆದರೆ ಮಗುವಿನ ಇನ್ನಿತರ ಕಲಿಕೆಗಳಲ್ಲಿ ಅದರ ನೆರವು ಮಗುವಿಗೆ ದೊರಕಬೇಕಾಗುತ್ತದೆ. ಆದರೆ ಒಂದೂವರೆ ಎರಡು ವರ್ಷ ವಯಸ್ಸಿನ ಮಗುವಿನಲ್ಲಿ ಇಂತಹ ನಿಯಮ ಕಟ್ಟುವ ಸಾಮರ್ಥ್ಯವಿರುವುದನ್ನು ಒಪ್ಪಲು ಪುರಾವೆಗಳಿಲ್ಲ. ಆದ್ದರಿಂದ ಈ ನಿಯಮಗಳು ಮಗುವಿನ ಮೆದುಳಿನಲ್ಲಿರುವ ಅಂತಸ್ಥ ವ್ಯವಸ್ಥೆಯಲ್ಲೇ ಇದ್ದಿರಬೇಕೆಂಬ ಊಹೆಯನ್ನು ಮಾಡಬೇಕಾಗುತ್ತದೆ.

ಮಗುವಿಗೆ ಭಾಷೆಯನ್ನು ಯಾರೂ ಕಲಿಸುವುದಿಲ್ಲ; ಅಷ್ಟೇ ಅಲ್ಲದೆ ಯಾರೂ ಕಲಿಸಲಾರರು ಕೂಡ. ಕಲಿಕೆಯಲ್ಲಿ ಇರುವ ತಿಳಿವಿನ ವರ್ಗಾವಣೆ ಎನ್ನುವುದು ಭಾಷಾ ಸಾಮರ್ಥ್ಯದ ವಿಷಯದಲ್ಲಿ ನಡೆಯುವುದಿಲ್ಲ. ಆದರೆ ನಾವು ಮಗುವಿಗೆ ಭಾಷೆಯನ್ನು ಕಲಿಸುವ ನಟನೆಯನ್ನು ಮಾಡುತ್ತೇವೆ. ಅದರೊಡನೆ ಮಾತಾಡುತ್ತಿರುವುದೇ ಆ ಕಲಿಸುವ ಕೆಲಸವೆಂದು ಭಾವಿಸುತ್ತೇವೆ. ಸುಮ್ಮನೆ ನಾವು ಮಗುವಿನೊಡನೆ ಮಾತಾಡುವ ಬಗೆಯನ್ನು ಗಮನಿಸೋಣ. ಮುದ್ದುಮುದ್ದಾಗಿ ಪದಗಳನ್ನು ಮಗುವಿನ ಮುಂದೆ ಉಲಿಯುತ್ತೇವೆ. ಕೆಲವು ವಸ್ತುಗಳಿಗಂತೂ ನಾವು ಬಳಸುವ ಪದಗಳು ಮಗುವಿಗೆ ಹೇಳುವ ಪದಗಳಾಗಿರುತ್ತವೆಯೇ ಹೊರತು, ಮಗು 'ಕಲಿಯ ಬೇಕಾದ' ಪದಗಳಾಗಿರುವುದಿಲ್ಲ. ನೀರು, ಅನ್ನ, ಮಲಗು, ನಾಯಿ, ಬೆಕ್ಕು, ಕಾಗೆ, ಹಾಲು ಮುಂತಾದ ಹತ್ತಾರು ಪದಗಳಿಗೆಂದೇ ವಿಶೇಷ ಪದಕೋಶವೊಂದನ್ನು ನಾವು ರೂಪಿಸಿಕೊಂಡಿದ್ದೇವೆ. ಇದು ಜಗತ್ತಿನ ಎಲ್ಲ ಭಾಷೆಗಳಲ್ಲೂ ಕಂಡು ಬರುವ ಲಕ್ಷಣ. ಇದನ್ನು ಕೆಲವರು 'ಮದರೀಸ್' ಎನ್ನುತ್ತಾರೆ. ಈ ಪದಗಳನ್ನು ಮಗು ಕಲಿಯಬೇಕೆಂದು ನಾವು ಬಯಸುವುದಿಲ್ಲ. ಆ ಪದಗಳಿಗೆ ಮೂಲವಾದ ಪದಗಳನ್ನೇ ಮಗು ಮುಂದೆ ಬಳಸಬೇಕಾಗುತ್ತದೆ. ಅಂದರೆ ಮಗುವಿಗೆ ನಾವು ಏನನ್ನು ಕಲಿಸುತ್ತಿದ್ದೇವೆ? ಇನ್ನೂ ಮುಂದುವರೆದು ನೋಡಿದರೆ

ಮಗುವಿಗೆ ತನ್ನ ಭಾಷಾಪರಿಸರದಲ್ಲಿ ದೊರಕುವುದು ಅಸ್ಪಷ್ಟ ಉಚ್ಚಾರಣೆಗಳು, ತುಂಡುತುಂಡಾದ ವಾಕ್ಯಗಳು, ಮಗುವಿನ ಗ್ರಹಿಕೆಗೆ ಮೀರಿದ ಸಂಗತಿಗಳಿರುವ ಸಂದರ್ಭದ ವಾಕ್ಯಭಾಗಗಳು. ಇವು ಯಾವುವೂ ಸಮರ್ಥ ಕಲಿಕೆಗೆ ನೆರವಾಗುವ ಅಂಶಗಳೇ ಅಲ್ಲ. ಆದ್ದರಿಂದ ಯಾರಾದರೂ ಮಗುವಿಗೆ ಭಾಷೆಯನ್ನು ಕಲಿಸುತ್ತಾರೆ ಎನ್ನುವುದು ಅಷ್ಟು ಸರಿಯಾದ ಮಾತಲ್ಲ.

ಎಲ್ಲಕ್ಕಿಂತ ಮುಖ್ಯವಾದ ಸಂಗತಿಯೊಂದಿದೆ. ಒಂದು ಭಾಷಾಪರಿಸರದಲ್ಲಿ ಬೆಳೆಯುತ್ತಿರುವ ಮಕ್ಕಳಲ್ಲಿ ಮೂಡುವ ಆ ಭಾಷಾಸಾಮರ್ಥ್ಯದಲ್ಲಿ ಏರುಪೇರುಗಳಿರುವುದಿಲ್ಲ. ಈ ಸಾಮರ್ಥ್ಯ ಮೂಡುವ ಅವಧಿಯಲ್ಲಿ ಏರುಪೇರು ಗಳಿರಬಹುದೇ ಹೊರತು, ಎಲ್ಲ ಮಕ್ಕಳಲ್ಲೂ ಸಮಾನ ನೆಲೆಯ ಸಾಮರ್ಥ್ಯ ನೆಲೆಯೂರುತ್ತದೆ. ಇತರ ಕಲಿಕೆಗಳಲ್ಲಿರುವಂತೆ ಜಾಣ ಇಲ್ಲವೇ ದಡ್ಡ, ಚುರುಕು ಇಲ್ಲವೇ ಮಂದ ಎಂಬ ಒಡೆತ ಸಾಧ್ಯವಿಲ್ಲ. ಈ ತೀರ್ಮಾನವನ್ನು ಹಲವರು ಒಪ್ಪದೆಯೂ ಇರಬಹುದು. ಕೆಲವು ಮಕ್ಕಳು ಚುರುಕಾಗಿ ಮಾತಾಡುವುದನ್ನು, ಮತ್ತೆ ಕೆಲವು ಮಕ್ಕಳು ಮುಖೇಡಿಗಳಾಗಿರುವುದನ್ನು ಉದಾಹರಿಸಿ ಮಕ್ಕಳಲ್ಲಿ ಇರುವ ತರತಮಭಾವವನ್ನು ಎತ್ತಿ ಹೇಳಿಯಾರು. ವಾಸ್ತವವಾಗಿ ಇದು ತಪ್ಪು ಗ್ರಹಿಕೆ. ಮಗುವಿನಲ್ಲಿ ಭಾಷಾಸಾಮರ್ಥ್ಯ ಆ ಭಾಷೆಯ ರಚನೆಗೆ ಸಂಬಂಧಿಸಿದ್ದೇ ಹೊರತು ಅದರ ಬಳಕೆಗೆ ಸಂಬಂಧಿಸಿದ್ದಲ್ಲ. ಬಳಕೆಗೆ ಸಂಬಂಧಿಸಿದ ನಿಯಮಗಳನ್ನು ಮಗು ಬೇರೆಯಾಗಿಯೇ ಕಲಿಯಬೇಕಾಗುತ್ತದೆ. ಇದು ಜೀವನದುದ್ದಕ್ಕೂ ನಡೆಯುವ ಕಲಿಕೆ. ಈ ಕಲಿಕೆಯಲ್ಲಿ ಏರುಪೇರುಗಳು ಇದ್ದೇ ಇರುತ್ತವೆ. ಆದರೆ ಭಾಷೆಯ ರಚನೆಯ ಬಗೆಗಿನ ತಿಳುವಳಿಕೆ ಮಾತ್ರ ಎಲ್ಲ ಭಾಷಿಕರಲ್ಲೂ ಸಮಾನವಾಗಿಯೇ ಇರುತ್ತದೆ. ಆದ್ದರಿಂದಲೇ ಪಟಪಟನೆ ಮಾತನಾಡದ ಮಗು ಕೂಡ ಪಟಪಟನೆ ಮಾತಾಡಿದ್ದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ.

ಈ ಎಲ್ಲ ಸಂಗತಿಗಳನ್ನು ಗಮನಿಸಿದಾಗ ಮಗು ಭಾಷಾಸಾಮರ್ಥ್ಯವನ್ನು ಪಡೆದುಕೊಳ್ಳುವುದು ಒಂದು ವಿಶೇಷ ನೆಲೆಯ ಬೆಳವಣಿಗೆ ಎನ್ನುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ಎಲ್ಲ ಕಲಿಕೆಗಳ ಬುಟ್ಟಿಯಲ್ಲಿ ಅದನ್ನು ಇರಿಸುವುದು ಸಾಧ್ಯವಾಗುವುದಿಲ್ಲ. ಆದರೆ ನಾವು ಈಗಾಗಲೇ ಗಮನಿಸಿದಂತೆ ಮೆದುಳಿನಲ್ಲಿ ಹುಟ್ಟಿನಿಂದಲೇ ದೊರೆತಿರುವ ವಿಶಿಷ್ಟ ವ್ಯವಸ್ಥೆ ಕೌಮಾರ್ಯಾವಸ್ಥೆಯಲ್ಲಿ ಮಾಯವಾದ ಮೇಲೆ ಭಾಷೆಯನ್ನು ಕಲಿಯುವುದಾದರೆ ಅದು ಇತರ ಎಲ್ಲ ಕಲಿಕೆಗಳಂತೆಯೇ ಇರುತ್ತದೆ. ಈ ಕಲಿಕೆಗಳಿಗೆ ಹೊಂದುವ ನಿಯಮಗಳೆಲ್ಲವೂ ವಯಸ್ಕ ಭಾಷಾಕಲಿಕೆಗೂ ಅನ್ವಯಿಸುತ್ತವೆ.

ಶಾಲೆಯಲ್ಲಿ ವ್ಯಾಕರಣ

ನಮ್ಮ ಶಾಲೆಗಳಲ್ಲಿ ಕನ್ನಡ ಕಲಿಕೆಗೆಂದು ಮೀಸಲಾದ ಯಾವುದೇ ಪಠ್ಯ ಪುಸ್ತಕವನ್ನು ತೆರೆದರೂ, ಅದರ ಪಾಠಗಳ ಕೊನೆಯಲ್ಲಿ ವ್ಯಾಕರಣಾಂಶಗಳನ್ನು ಕುರಿತು ಮಾಹಿತಿ ಇರುತ್ತದೆ. ಕಲಿಸುವವರು ಮಕ್ಕಳಿಗೆ ಈ ವ್ಯಾಕರಣಾಂಶಗಳನ್ನು ಹೇಳಿಕೊಡುತ್ತಾರೆ. ಪರೀಕ್ಷೆಯಲ್ಲಿ ಮಕ್ಕಳ ವ್ಯಾಕರಣ ಕುರಿತ ತಿಳುವಳಿಕೆಯನ್ನು ಕುರಿತ ಪ್ರಶ್ನೆಗಳನ್ನು ಕೇಳಿ ಮೌಲ್ಯಮಾಪನ ಮಾಡಲಾಗುತ್ತದೆ. ಕಲಿಕೆಯ ಈ ಕ್ರಮ ಎಷ್ಟು ಸರಿ ಎಂದು ನಾವೀಗ ಪ್ರಶ್ನಿಸಿಕೊಳ್ಳಬೇಕಾಗಿದೆ. ಇದಕ್ಕೆ ಮೂರು ಮುಖ್ಯ ಕಾರಣಗಳಿವೆ. ಒಂದು: ನಾವು ಶಾಲೆಗಳಲ್ಲಿ ಕಲಿಸುತ್ತಿರುವ ವ್ಯಾಕರಣ ನಿಜವಾಗಿ ಕನ್ನಡದ ಸ್ವರೂಪವನ್ನು ವಿವರಿಸುತ್ತಿಲ್ಲ. ಎರಡು: ಕನ್ನಡವನ್ನು ಮೊದಲ ಭಾಷೆಯನ್ನಾಗಿ ಹೊಂದಿರುವ ಮತ್ತು ಶಾಲೆಗೆ ಬರುವ ಮೊದಲೇ ಅನೌಪಚಾರಿಕವಾಗಿ ಕನ್ನಡ ಮಾತನಾಡಲು ಕಲಿತಿರುವ ಮಕ್ಕಳಿಗೆ ಈ ವ್ಯಾಕರಣದ ಕಲಿಕೆ ಅಗತ್ಯವಿಲ್ಲ. ನಮ್ಮ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಲ್ಲಿ ಹೆಚ್ಚಿನ ಸಂಖ್ಯೆಯವರಿಗೆ ಕನ್ನಡ ಮೊದಲ ಭಾಷೆ. ಉಳಿದವರಲ್ಲಿ ಹಲವರಿಗೆ ಶಾಲೆಗೆ ಬರುವ ಮೊದಲೇ ಕನ್ನಡ ಆಡುಭಾಷೆಯಾಗಿ ಗೊತ್ತಿರುತ್ತದೆ. ಹೀಗೆ ಕನ್ನಡವನ್ನು ಶಾಲೆಯಲ್ಲೇ ಮೊದಲ ಬಾರಿಗೆ ಕೇಳಿಸಿಕೊಳ್ಳುತ್ತಿರುವ ಮಕ್ಕಳೂ ಇದ್ದಾರಾದರೂ ಅವರ ಬಗ್ಗೆ, ಅವರಿಗೆ ಕನ್ನಡವನ್ನು ಕಲಿಸುವ ರೀತಿಯ ಬಗ್ಗೆ ನಾವು ಯಾವ ವಿಶೇಷ ಎಚ್ಚರವನ್ನೂ ವಹಿಸಿಲ್ಲ. ಹೆಚ್ಚಿನ ಪಾಲು ಉರ್ದು ಮಾಧ್ಯಮದ ಶಾಲೆಗಳಲ್ಲಿ ಈ ಸಮಸ್ಯೆ ಇರುವುದನ್ನು ಇತ್ತೀಚಿನ ಅಧ್ಯಯನಗಳು ತೋರಿಸಿಕೊಟ್ಟಿವೆ. ಅವರಿಗೂ ಈ ವ್ಯಾಕರಣ ಬೇಡದ ಹೊರೆಯಾಗಿದೆ. ಮೂರು: ಹೀಗೆ ಒತ್ತಾಯಪೂರ್ವಕವಾಗಿ ಕಲಿಸುವ ವ್ಯಾಕರಣ ಕೂಡ ಮುಂದೆ ಕನ್ನಡ ಬಳಸುವವರ ನೆರವಿಗೆ ಬರುವುದಿಲ್ಲ. ಅದು 'ಕಲಿತು ಮರೆಯುವ' ವಿಷಯವಾಗಿರುತ್ತದೆ.

ಮೊದಲ ಕಾರಣವನ್ನು ಗಮನಿಸೋಣ. ನಾವು ಈಗ ಕಲಿಸುತ್ತಿರುವ ಕನ್ನಡ ವ್ಯಾಕರಣ ನಿಜವಾಗಿ ಕನ್ನಡದ ಚಹರೆಗಳನ್ನು ವಿವರಿಸುವ ರೀತಿಯಲ್ಲಿ ಇಲ್ಲ. ನಾವು ಬಳಸುತ್ತಿರುವ ಕನ್ನಡದ ರಚನೆಯನ್ನು ವಿವರಿಸುವ ನಿಯಮಗಳನ್ನು ನಾವಿನ್ನೂ ಸರಿಯಾಗಿ ತಿಳಿದುಕೊಳ್ಳದಿರುವುದೇ ಇದಕ್ಕೆ ಕಾರಣವಾಗಿದೆ. ಹಳೆಗಾಲದ ಪಂಡಿತರು ಸಂಸ್ಕೃತ ವ್ಯಾಕರಣವನ್ನು ಅನುಸರಿಸಿ ರೂಪಿಸಿದ ನಿಯಮಗಳನ್ನೇ ಈಗಲೂ ನಾವು ಹೆಚ್ಚಾಗಿ ಬಳಸುತ್ತಿದ್ದೇವೆ. ಡಾ. ಡಿ.ಎನ್. ಶಂಕರಭಟ್ಟರು ಈ ಕೊರತೆಯನ್ನು ತೋರಿಸಿಕೊಟ್ಟಿದ್ದಾರೆ. ಅಲ್ಲದೆ ಈ ವ್ಯಾಕರಣವು ಬರೆಹದ ಕನ್ನಡವನ್ನು ಮಾತ್ರ ಗಮನದಲ್ಲಿ

ಇರಿಸಿಕೊಳ್ಳುತ್ತದೆ. ಆಡುಗನ್ನಡವನ್ನು ಗಮನಿಸುವುದಿಲ್ಲ. ಆದ್ದರಿಂದ ಮಕ್ಕಳು ತಾವು ಆಡುವ ಕನ್ನಡ ವ್ಯಾಕರಣಬದ್ಧವಲ್ಲ ಎಂಬ ತಪ್ಪು ತಿಳುವಳಿಕೆಗೆ ಒಳಗಾಗುತ್ತಾರೆ. ಒಂದು ಚಿಕ್ಕ ನಿದರ್ಶನವನ್ನು ನೋಡಿ. ಸಪ್ತಮೀ ವಿಭಕ್ತಿಯ ಪ್ರತ್ಯಯಗಳೆಂದು 'ಒಳಗೆ' ಮತ್ತು 'ಅಲ್ಲಿ' ಎಂಬ ಎರಡು ರೂಪಗಳನ್ನು ಮಕ್ಕಳಿಗೆ ಪರಿಚಯಿಸಲಾಗುತ್ತದೆ.(ಇವು ಪ್ರತ್ಯಯಗಳೇ ಎಂಬುದು ಬೇರೆಯೇ ಪ್ರಶ್ನೆ. ಅದು ಒತ್ತಟ್ಟಿಗಿರಲಿ). ಮನೆಯೊಳಗೆ, ಮನೆಯುಲ್ಲಿ, ಊರಿನೊಳಗೆ(ಊರೊಳಗೆ),ಊರಿನಲ್ಲಿ(ಊರಲ್ಲಿ) ಮುಂತಾದ ಪದರೂಪಗಳನ್ನು ಉದಾಹರಣೆಯಾಗಿ ಹೇಳಿಕೊಡಲಾಗುತ್ತದೆ. ಆದರೆ ಕನ್ನಡದ ಬಹುಪಾಲು ಮಕ್ಕಳು ಅದರಲ್ಲೂ ತುಂಗಭದ್ರೆಯ ಉತ್ತರದ ಭಾಗದವರು ತಾವು ಕಲಿತು ಆಡುವ ಕನ್ನಡ ಮಾತಿನಲ್ಲಿ ಈ ಪ್ರತ್ಯಯಗಳ ಬದಲು 'ಆಗ' ಎಂಬ ರೂಪವನ್ನೇ ಬಳಸುತ್ತಾರೆ. ಮನೆಯಾಗ, ಊರಾಗ, ತಲೆಯಾಗ ಇತ್ಯಾದಿ. ಆದರೆ ನಮ್ಮ ಶಾಲೆಯ ಪಠ್ಯಗಳಲ್ಲಿ ಇದರ ಸುಳಿವೇ ಇಲ್ಲ. ಅಂದರೆ ನಾವು ಯಾವ ಕನ್ನಡದ ರಚನೆಯನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದೇವೆ? ಇದು ಒಂದು ಚಿಕ್ಕ ಉದಾಹರಣೆ. ಇಂತವು ಹಲವಾರಿವೆ. ಅಂದರೆ ಕನ್ನಡದ ನಿಜವಾದ ಎಲ್ಲ ಲಕ್ಷಣಗಳನ್ನೂ ನಿರೂಪಿಸದ ವ್ಯಾಕರಣವನ್ನು ಮಕ್ಕಳಿಗೆ ನಾವು ಹೇಳಿಕೊಡುತ್ತಿದ್ದೇವೆ.

ಇನ್ನೊಂದು ಕಾರಣವನ್ನು ಈಗ ನೋಡೋಣ. ನಾವು ಶಾಲೆಗಳಲ್ಲಿ ಮಕ್ಕಳಿಗೆ ಕನ್ನಡವನ್ನು ಹೇಳಿಕೊಡುವುದೇಕೆ? ಅವರಿಗಾಗಲೇ ಕನ್ನಡ ಗೊತ್ತಿರುತ್ತದೆ. ಅದರ ವ್ಯಾಕರಣ ನಿಯಮಗಳನ್ನು ಅವರು ಅಂತಸ್ಥ ಮಾಡಿಕೊಂಡಿರುತ್ತಾರೆ. ನಿಯಮಗಳೇನು ಎಂದು ವಿವರಿಸಲು ಆಗದಿದ್ದರೂ ಎಲ್ಲರೂ ವ್ಯಾಕರಣಬದ್ಧವಾಗಿಯೇ ಕನ್ನಡವನ್ನು ಬಳಸುತ್ತಿರುತ್ತಾರೆ. ಹಾಗಿದ್ದಲ್ಲಿ ನಾವು ನಿಯಮಗಳನ್ನು ಮತ್ತೊಮ್ಮೆ ಕಲಿಸಬೇಕೇಕೆ? ಹಾಗೆ ನೋಡಿದರೆ ನಮ್ಮ ಕನ್ನಡ ಬೋಧನೆಯ ಗುರಿ ಮುಖ್ಯವಾಗಿ 1) ಮಕ್ಕಳ ಪದಕೋಶವನ್ನು ಹೆಚ್ಚಿಸುವ ಕಡೆಗೆ ಇರಬೇಕು 2) ಆ ಪದಕೋಶದ ನೆರವಿನಿಂದ ಹೊಸ ಪದರಚನೆಯನ್ನು ಮಾಡಲು ಮಕ್ಕಳು ಶಕ್ತರಾಗುವಂತೆ ಮಾಡಬೇಕು ಮತ್ತು 3) ಅವರು ಕನ್ನಡವನ್ನು ಹಲವು ಹೊಸ ಸನ್ನಿವೇಶಗಳಲ್ಲಿ ಬಳಸಲು ಸಾಧ್ಯವಾಗುವಂತೆ ತರಬೇತು ನೀಡಬೇಕು. ಹಾಗೆ ನೋಡಿದರೆ ಈ ಮೂರೂ ಗುರಿಗಳ ಸಾಧನೆಗೆ ವ್ಯಾಕರಣ ನಿಯಮಗಳನ್ನು ಕಲಿಸುವುದು ಅಗತ್ಯವೆಂದು ತೋರುವುದಿಲ್ಲ.

ವ್ಯಾಕರಣ ನಿಯಮಗಳನ್ನು ಶಾಲೆಗಳಲ್ಲಿ ಹೊಸದಾಗಿ ಕಲಿಯುವ ಮೂಲಕವೇ ಭಾಷೆಯ ಬಳಕೆಯು ಸಾಧ್ಯವಾಗುತ್ತದೆ ಎಂಬ ತಿಳುವಳಿಕೆಯು ನಮ್ಮಲ್ಲಿ ಬಲವಾಗಿ ಬೇರುಬಿಟ್ಟಿದೆ. ಸಾಮಾನ್ಯ ಕಲಿಕೆಯ ತತ್ತ್ವಗಳನ್ನು ನಾವು ಭಾಷೆಯ ನೆಲೆಗೂ ಅನ್ವಯಿಸುತ್ತೇವೆ. ಗಣಿತದಲ್ಲಿ ನಿಯಮಗಳನ್ನು ಕಲಿತ ಹಾಗೆ ಅಥವಾ ವಿಜ್ಞಾನ ವಿಷಯದಲ್ಲಿ ರಚನೆಗಳನ್ನು ತಿಳಿದ ಹಾಗೆ ಭಾಷೆಯ ಕಲಿಕೆಯಲ್ಲೂ ವ್ಯಾಕರಣ ಕಲಿಕೆ ಅಗತ್ಯವೆಂದು ಒಪ್ಪಿಬಿಟ್ಟಿದ್ದೇವೆ. ಆದರೆ ಈ ನಿಯಮಗಳು ಮಕ್ಕಳಿಗೆ ಮೊದಲೇ ತಿಳಿದಿರುತ್ತವೆ. ಹಾಗಿದ್ದಲ್ಲಿ ನಮ್ಮ ಶಾಲಾಶಿಕ್ಷಣದಲ್ಲಿ ವ್ಯಾಕರಣವನ್ನು ಏಕೆ ಅಳವಡಿಸಿಕೊಳ್ಳಲಾಯಿತು ಎಂಬ ಪ್ರಶ್ನೆ ಎದುರಾಗುತ್ತದೆ. ಇದು ಅನ್ಯ ಭಾಷೆಯೊಂದನ್ನು ಕಲಿಸುವ ಸಂದರ್ಭಕ್ಕೆ ಅನ್ವಯಿಸುವ

ವಿಧಾನವಾಗಿದೆ. ಬ್ರಿಟಿಶರು ಇಂಗ್ಲಿಶನ್ನು ನಮಗೆ ಕಲಿಸಲು ಮೊದಲು ಮಾಡಿದಾಗ ಹೀಗೆ ಭಾಷೆಯ ವ್ಯಾಕರಣವನ್ನು ಹೇಳಿಕೊಡುವ ಮೂಲಕವೇ ಅದರ ಬಳಕೆಯನ್ನು ತಿಳಿದುಕೊಳ್ಳಲು ಸಾಧ್ಯವೆಂಬ ತತ್ತ್ವವನ್ನು ಶಿಕ್ಷಣದಲ್ಲಿ ಜಾರಿಗೊಳಿಸಿದರು. ಅದನ್ನು ನಾವು, ಮಕ್ಕಳು ಈಗಾಗಲೇ ಅರಿತಿರುವ ಭಾಷೆಯ ವಿಷಯಕ್ಕೂ ಅನ್ವಯಿಸಿಕೊಂಡು ಬಿಟ್ಟಿದ್ದೇವೆ. ವಿಭಕ್ತಿ, ಕಾರಕ, ಆಖ್ಯಾತ, ಸಂಧಿ ಮುಂತಾದ ವ್ಯಾಕರಣ ಪ್ರಕ್ರಿಯೆಗಳನ್ನು, ಪರಿಕಲ್ಪನೆಗಳನ್ನು ನಾವು 'ಹೇಳಿಕೊಡುವ' ಅಗತ್ಯವಿಲ್ಲ. ಆದರೆ ಭಾಷೆಯನ್ನು ಹೊಸಹೊಸ ಸನ್ನಿವೇಶಗಳಲ್ಲಿ ಬಳಸಲು ಬೇಕಾದ ಉತ್ಪಾದಕತೆಯ ಸಾಮರ್ಥ್ಯವನ್ನು ಮಾತ್ರ ಮಕ್ಕಳಲ್ಲಿ ಬೆಳೆಸಬೇಕಾಗುತ್ತದೆ. ಹಾಗೆ ನೋಡಿದರೆ ನಮ್ಮ ಶಾಲೆಗಳಲ್ಲಿ ಈ ನೆಲೆಗೆ ದೊರಕುತ್ತಿರುವ ಒತ್ತು ತುಂಬಾ ಕಡಿಮೆಯಾಗಿದೆ. ಹಾಗಾಗಿ ನಮ್ಮ ಮಕ್ಕಳು ತಾವು ಬಲ್ಲ ಕನ್ನಡವನ್ನು ಜೀವನದ ಬೇರೆಬೇರೆ ಸಂದರ್ಭಗಳಲ್ಲಿ ಬಳಸಲು ಹಿಂಜರಿಯುವಂತಾಗಿದೆ. ಅವರು 'ಕಲಿತ' ವ್ಯಾಕರಣ ಅವರಿಗೆ ನೆರವಾಗುವುದಿಲ್ಲ. ಅಂದರೆ ಭಾಷೆಯ ರಚನೆಯನ್ನು 'ತಿಳಿಯುವುದು' ಒಂದು ನೆಲೆಯಾದರೆ, ಅದರ ಬಳಕೆಯನ್ನು 'ಕಲಿಯುವುದು' ಇನ್ನೊಂದು ನೆಲೆ. ಮೊದಲನೆಯದನ್ನು 'ಕಲಿಯಬೇಕಾಗಿಲ್ಲ'. ಹಾಗೆ ಕಲಿಸಿದರೂ ಅದು ಅವರಿಗೆ ಬಳಕೆಯ ಸಾಮರ್ಥ್ಯಗಳನ್ನು ತಂದುಕೊಡುವುದಿಲ್ಲ. ಆದರೆ ಬಳಕೆಯ ಸಾಮರ್ಥ್ಯಗಳನ್ನು ಮಾತ್ರ ಹೊಸದಾಗಿಯೇ 'ಕಲಿತು' ಗಳಿಸಿಕೊಳ್ಳಬೇಕಾಗುತ್ತದೆ. ನಮ್ಮ ಶಾಲೆಗಳಲ್ಲಿ ಈ ಅಂಶದ ಕಡೆಗೆ ನಾವು ಗಮನವನ್ನು ನೀಡುತ್ತಿಲ್ಲ.

ಈಗ ಮೂರನೆಯ ಕಾರಣ ಕುರಿತು ಕೆಲವು ಮಾತುಗಳನ್ನು ಹೇಳುವುದು ಅಗತ್ಯ. ನಮ್ಮ ಶಾಲಾಶಿಕ್ಷಣದ ಹಂತದಲ್ಲಿ ನಾವು ಕಲಿತ ವ್ಯಾಕರಣ ಮುಂದೆ ನಮ್ಮನ್ನು ಕೈಹಿಡಿದು ನಡೆಸುವುದಿಲ್ಲವೆಂಬುದಕ್ಕೆ ಹಲವಾರು ನಿದರ್ಶನಗಳಿವೆ. ಹೊಸ ಪದಗಳನ್ನು ರಚಿಸುವಾಗ ನಾವು ಕಲಿತ ಸಂಧಿಯ ನಿಯಮಗಳನ್ನು ನಾವು ಲೆಕ್ಕಕ್ಕೆ ಇರಿಸಿಕೊಳ್ಳುವುದೇ ಇಲ್ಲ. ದಿನದಿನವೂ ಪತ್ರಿಕೆಗಳಲ್ಲಿ ನಮಗೆ ಓದಲು ಸಿಗುವ ಮುಂದಿನ ಹಲವಾರು ರಚನೆಗಳನ್ನು ಗಮನಿಸಿ. ಹಸುರೋತ್ಸವ, ಚುಟುಕೋತ್ಸವ, ಕನ್ನಡೀಕರಣ, ನಗದೀಕರಣ, ಸಿದ್ಧರಾಮಯ್ಯಗೆ ಆಹ್ವಾನ, ದುರ್ನಡತೆ, ಸನ್ನಡತೆ, ಮಿಲಿಯಾಂತರ ಇತ್ಯಾದಿ. ಈ ರಚನೆಗಳನ್ನು ತಪ್ಪು ಎಂದು ಹೇಳಲು ನಾವೇನೋ ಸಿದ್ಧ. ಆದರೆ ಇಂತಹ ರಚನೆಗಳನ್ನು ಸಿದ್ಧಗೊಳಿಸಿ ಬಳಸುವವರಿಗೆ ಅವರು ಕಲಿತ ವ್ಯಾಕರಣ ಏಕೆ ನೆರವಾಗಲಿಲ್ಲ? ಅಥವಾ ಅವರು ವ್ಯಾಕರಣವನ್ನು ಸರಿಯಾಗಿ ಕಲಿಯದೇ ಇದ್ದುದರಿಂದ ಹೀಗಾಯಿತು ಎಂದು ವಾದಿಸಬೇಕೇ? ಹಾಗೇನೂ ಇಲ್ಲ. ಇಂತಹ ರಚನೆಗಳು ಏಕೆ ಸಿದ್ಧಗೊಳ್ಳುತ್ತವೆ ಎನ್ನುವುದನ್ನು ಕಂಡುಕೊಳ್ಳಲು ಸಾಧ್ಯವಾಗುವಂತೆ ನಮ್ಮ ಕನ್ನಡವನ್ನು ನಾವಿನ್ನೂ ವಿವರಿಸಿಕೊಂಡಿಲ್ಲ. ನಮ್ಮ ಶಾಲಾ ವ್ಯಾಕರಣ ನಿಯಮಗಳು ಭಾಷೆಯನ್ನು 'ಒಡೆಯುವಾಗ' ತೋರುವ ಚಹರೆಗಳನ್ನು ಹೇಳಲು ಯತ್ನಿಸುತ್ತವೆ. ಆದರೆ ಭಾಷೆಯನ್ನು 'ಕಟ್ಟುವಾಗ' ಏನಾಗುತ್ತದೆ ಎನ್ನುವುದನ್ನು ನಮ್ಮ ಮಕ್ಕಳಿಗೆ ಶಾಲೆಗಳಲ್ಲಿ ನಾವು ಹೇಳಿಕೊಡುತ್ತಿಲ್ಲ. ಅದರ ಪರಿಣಾಮಗಳನ್ನು ನಾವೀಗ ದಿನವೂ ನೋಡುತ್ತಿದ್ದೇವೆ.

ಶಾಲೆಯ ಮಕ್ಕಳಿಗೆ ವ್ಯಾಕರಣ

ಕನ್ನಡವನ್ನು ಕಲಿಯುವ ಎಲ್ಲ ಮಕ್ಕಳಲ್ಲಿ ಬಹುಮಂದಿ ವ್ಯಾಕರಣವೆಂದರೆ ಬೇಸರಿಸುತ್ತಾರೆ. ಸಂಧಿ, ಸಮಾಸ, ಕೃದಂತ, ಅವ್ಯಯ, ವಿಶೇಷಣ ಇತ್ಯಾದಿ ಪದಗಳನ್ನು ಅರಿತುಕೊಳ್ಳಲು ಯತ್ನಿಸಿ ಕೋಪಗೊಳ್ಳುತ್ತಾರೆ. ಏಕೆ ಹೀಗೆ? ವ್ಯಾಕರಣವೆಂದರೆ ಭಾಷೆಯ ಬಳಕೆಯ ಹಿಂದಿರುವ ನಿಯಮ. ಅಂದರೆ ಭಾಷೆಯನ್ನು ಬಳಸುವ ಪ್ರತಿಯೊಬ್ಬರಿಗೂ ವ್ಯಾಕರಣದ ನಿಯಮಗಳು ಗೊತ್ತಿರುತ್ತವೆ. ಆದರೆ ಆ ನಿಯಮಗಳು ಯಾವುವು ಎಂಬುದನ್ನು ಹೇಳಲು ತಿಳಿಯದಿರಬಹುದು. ಕನ್ನಡವನ್ನು ಮಾತನಾಡುವವರೆಲ್ಲ ಕನ್ನಡ ವ್ಯಾಕರಣವನ್ನು ಬಲ್ಲರು. ಹೀಗಿರುವಾಗ ಅವರಿಗೆ ಮತ್ತೆ ವ್ಯಾಕರಣವನ್ನು ಏಕೆ ಹೇಳಿಕೊಡಬೇಕು?

ಭಾಷೆಯ ಕಲಿಕೆಯ ಅಂಗವಾಗಿ ವ್ಯಾಕರಣವನ್ನು ಹೇಳಿಕೊಡುವುದು ಇಂಗ್ಲಿಶ್ ಶಿಕ್ಷಣದೊಡನೆ ಬೆಳೆದು ಬಂದ ಪದ್ಧತಿ. ತಮ್ಮದಲ್ಲದ ಅನ್ಯಭಾಷೆಯನ್ನು ಕಲಿಯುವವರು ಹೊಸ ಭಾಷೆಯ ವ್ಯಾಕರಣವನ್ನು 'ಕಲಿಯುವುದು' ಭಾಷಾಕಲಿಕೆಯ ಒಂದು ಬಗೆ. ಈ ವಿಧಾನವನ್ನು ಸಾರಾಸಗಟಾಗಿ ಸ್ವಭಾಷೆಯನ್ನು ಕಲಿಸುವಲ್ಲಿಯೂ ಬಳಸಲಾಗುತ್ತಿದೆ. ಹಾಗಾಗಿ ಕನ್ನಡದ ಮಕ್ಕಳು ವಿಭಕ್ತಿ, ಆದೇಶ, ತದ್ಧಿತ, ಅಖ್ಯಾತ ಮುಂತಾದ ಪಾರಿಭಾಷಿಕ ಪದಗಳ ಕಗ್ಗಾಡಿನಲ್ಲಿ ಗಿರಕಿ ಹೊಡೆಯಬೇಕಾಗಿ ಬಂದಿದೆ. ಭಾಷೆಯನ್ನು ಅರಿಯಬೇಕಾದವರಿಗೆ, ಅಭ್ಯಾಸ ಮಾಡಬೇಕಾದವರಿಗೆ ಈ ಎಲ್ಲ ವ್ಯಾಕರಣದ ಸುತ್ತುಬಳಸುಗಳು ಅನಿವಾರ್ಯ. ಆದರೆ ಭಾಷೆಯನ್ನು ಸ್ಪಷ್ಟವಾಗಿ ಬಳಸಬೇಕಾಗಿರುವವರಿಗೆ ಅನವಶ್ಯಕ.

ಈ ವಾದವನ್ನು ನಮ್ಮ ಸಾವಿರಾರು ಪ್ರಾಥಮಿಕ ಶಾಲಾಶಿಕ್ಷಕರು ಒಪ್ಪಲಾರರು. ಭಾಷೆಯನ್ನು ಬೋಧಿಸುವ ಬಹುಪಾಲು ಶಿಕ್ಷಕರ ತಕರಾರು ಏನೆಂದರೆ ಕನ್ನಡ ಮಕ್ಕಳಿಗೆ ಶಾಲೆಯ ಹಂತದಲ್ಲಿ ಬಳಸಲು ಅನುಕೂಲವಾಗುವ ವ್ಯಾಕರಣ ಪುಸ್ತಕವೊಂದು ಇಲ್ಲವೆಂಬುದು. ಸುಮಾರು ಒಂದು ಶತಮಾನಕ್ಕೂ ಮಿಕ್ಕಿದ ಅವಧಿಯಲ್ಲಿ ಕನ್ನಡಕ್ಕಾಗಿ ಹತ್ತಿರಹತ್ತಿರ ನೂರು ವ್ಯಾಕರಣ ಗ್ರಂಥಗಳನ್ನು ಬರೆಯಲಾಗಿದೆ; ಬಳಸಲಾಗಿದೆ. ಅವೆಲ್ಲವೂ ಈಗ ಲಭ್ಯವಿಲ್ಲ. ಪೇಟೆಯಲ್ಲಿ ಕೆಲವು ಸುಲಭ ಮಾದರಿಯ ಪುಸ್ತಕಗಳಿವೆ. ಅವುಗಳಿಂದ ಶಿಕ್ಷಕರು ತೃಪ್ತರಾಗಿಲ್ಲ. ಒಳ್ಳೆಯ ವ್ಯಾಕರಣ ಪುಸ್ತಕವನ್ನು ಸಿದ್ಧಪಡಿಸಬೇಕೆಂದು ಮೇಲಿಂದ ಮೇಲೆ ಬೇಡಿಕೆಯನ್ನು ಮುಂದಿಡುತ್ತಲೇ ಬಂದಿದ್ದಾರೆ.

ಇದೊಂದು ವಿಪರ್ಯಾಸ, ಕನ್ನಡ ಮಕ್ಕಳಿಗೆ ವ್ಯಾಕರಣವನ್ನು ಬೋಧಿಸುವುದು ಅನವಶ್ಯಕವೆಂದು ನಾವು ಹೇಳುತ್ತಿರುವಾಗಲೇ ಶಿಕ್ಷಕರು ಉತ್ತಮ ವ್ಯಾಕರಣ ಗ್ರಂಥದ ಕೊರತೆಯನ್ನು ನೀಗಿಸಲು ಕೋರುತ್ತಿದ್ದಾರೆ. ಮೊದಲು ಶಾಲಾಶಿಕ್ಷಣದಲ್ಲಿ ನಾವೀಗ ಬೋಧಿಸುತ್ತಿರುವ ಮಾದರಿಯ ವ್ಯಾಕರಣ ಕನ್ನಡ ಮಕ್ಕಳಿಗೆ ಬೇಕಿಲ್ಲವೆಂಬ ಸಂಗತಿಯನ್ನು ಶಿಕ್ಷಕರಿಗೆ ಮನದಟ್ಟು ಮಾಡಿಕೊಡಬೇಕಾಗಿದೆ. ಭಾಷಾತರಗತಿಗಳಿಗೆ ಬರುವ ಮಕ್ಕಳು ಭಾಷೆಯನ್ನು ಬಳಸಲು ಬೇಕಾಗಿರುವ ನಿಯಮಗಳನ್ನು ಬಲ್ಲವರಾಗಿರುತ್ತಾರೆ. ವ್ಯಾಕರಣಬದ್ಧ ಹೊಸ ರಚನೆಗಳನ್ನು ಯಾರ ನೆರವೂ ಇಲ್ಲದೆ ಮಾಡಬಲ್ಲವರಾಗಿರುತ್ತಾರೆ. ಹೊಸ ಪದಗಳು ಎದುರಾದರೆ ಪದರಚನೆಯ ನಿಯಮಗಳಿಗೆ ಅನುಗುಣವಾಗಿ ಅವುಗಳನ್ನು ಬಳಸಬಲ್ಲರು. ಕತ್ತೆ ಅಳುತ್ತಾನೆ, ನಾನು ಶಾಲೆಯನ್ನು ಹೋಗುತ್ತೇನೆ, ಅವನು ನಾಳೆ ಬಂದರು ಈ ಮಾದರಿಯ ವಾಕ್ಯಗಳನ್ನವರು ರಚಿಸುವುದಿಲ್ಲ. ಆದರೆ ಈ ವಾಕ್ಯ ಏಕೆ ತಪ್ಪು ಎಂಬುದಕ್ಕೆ ಅವರಲ್ಲಿ ಉತ್ತರಗಳಿಲ್ಲದಿರಬಹುದು. ಅವಶ್ಯ ಕಂಡರೆ ಇವುಗಳ ಸರಿಯಾದ ರೂಪಗಳನ್ನು ರಚಿಸಬಲ್ಲರು. ಎಂದರೇನಾಯ್ತು? ಭಾಷೆಯ ಬಳಕೆಗೆ ಬೇಕಾಗಿರುವ ನಿಯಮಗಳ ಅರಿವು ಮಕ್ಕಳಿಗೆ ಇರುತ್ತದೆ. ಹಾಗಾಗಿ ಆ ನಿಯಮಗಳನ್ನು ಪ್ರತ್ಯೇಕವಾಗಿ ಹೇಳಿಕೊಡಬೇಕಾಗಿಲ್ಲ.

ಈ ಮಾತನ್ನು ಒಪ್ಪದವರು ಹೀಗೆ ವಾದಿಸುತ್ತಾರೆ; ಶಾಲೆಯಲ್ಲಿ ಕನ್ನಡವನ್ನು ಕಲಿಯಲು ಬರುವ ಮಕ್ಕಳು ಒಂದೇ ಬಗೆಯ ಕನ್ನಡವನ್ನು ಬಳಸುವವರಾಗಿರುವುದಿಲ್ಲ. ಬೀದರಿನಲ್ಲಿ ಮಗು ಅಲ್ಲಿನ ಉಪಭಾಷೆಯನ್ನು ಬಳಸಲು ಸಮರ್ಥವಿದ್ದೀತು. ಹಾಗೆಯೇ ಚಾಮರಾಜನಗರದಲ್ಲಿನ ಮಗು ಅಲ್ಲಿನ ಉಪಭಾಷೆಯನ್ನು ಬಳಸಲು ಸಿದ್ಧವಿರಬಹುದು. ಆದರೆ ನಾವು ಶಿಕ್ಷಣ ಕ್ರಮದಲ್ಲಿ ಪ್ರಮಾಣ ಭಾಷೆಯ ಬಳಕೆಗೆ ಮಗುವನ್ನು ಸನ್ನದ್ಧಗೊಳಿಸಬೇಕಾಗುತ್ತದೆ. ಈ ಪ್ರಮಾಣ ಭಾಷೆ(ಕನ್ನಡ)ಆಯಾ ಮಕ್ಕಳ ಉಪಭಾಷೆಗಿಂತ ಹಲವಾರು ರೀತಿಗಳಲ್ಲಿ ಭಿನ್ನವಾಗಿರುತ್ತದೆ. ಈ ಪ್ರಮಾಣಭಾಷೆಯ ವ್ಯಾಕರಣ ಮಗುವಿಗೆ ತಿಳಿದಿರುವುದಿಲ್ಲ. ಹಾಗಾಗಿ ನಾವು ಮಗುವಿಗೆ ಪ್ರಮಾಣಭಾಷೆಯ ವ್ಯಾಕರಣದ ನಿಯಮಗಳನ್ನು ಬೋಧಿಸಲೇಬೇಕಾಗುತ್ತದೆ. ವಾದಕ್ಕಾಗಿ ಈ ವಿವರಣೆಯನ್ನು ಮೊದಲಿಗೆ ಒಪ್ಪಿಕೊಳ್ಳೋಣ. ಆಗ ನಮ್ಮೆದುರು ಹಲವು ಪ್ರಶ್ನೆಗಳು ನಿಲ್ಲುತ್ತವೆ. ಪ್ರಮಾಣ ಕನ್ನಡವೆಂದರೆ ಏನು? ಅದರ ಲಕ್ಷಣವನ್ನು ಖಚಿತವಾಗಿ ವಿವರಿಸಲಾಗಿದೆಯೇ? ಅದರಲ್ಲಿ ದಿನದಿನವೂ ನಡೆಯುತ್ತಿರುವ ಬದಲಾವಣೆಗಳಿಗೆ ಸ್ಥಾನವನ್ನು ಕಲ್ಪಿಸಲಾಗಿದೆಯೇ? ಒಂದು ವೇಳೆ ಪ್ರಮಾಣಕನ್ನಡದ ಲಕ್ಷಣಗಳನ್ನು ವಿವರಿಸಿಕೊಳ್ಳಲಾಗಿದ್ದರೆ ಅದಕ್ಕೂ ಕನ್ನಡದ ಇತರ ಉಪಭಾಷೆಗಳಿಗೂ ಇರುವ ವ್ಯತ್ಯಾಸಗಳ ಸ್ವರೂಪವನ್ನು ಅಧ್ಯಯನ ಮಾಡಲಾಗಿದೆಯೇ? ಈ ಉಪಭಾಷೆಗಳಿಗೂ ಪ್ರಮಾಣಕನ್ನಡಕ್ಕೂ ಇರುವ ಸಮಾನ ಅಂಶಗಳು ಮತ್ತು ವ್ಯತ್ಯಾಸ ಅಂಶಗಳು ಖಚಿತವಾಗಿ ನಮಗೆ ತಿಳಿದಿವೆಯೇ?

ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ಸುಲಭವಲ್ಲ. ವ್ಯಾಪಕವಾದ ಅಧ್ಯಯನಗಳು ಇನ್ನೂ ನಡೆಯಬೇಕಾಗಿದೆ. ಆಗ ಮಾತ್ರ ಈ ಪ್ರಶ್ನೆಗಳಿಗೆ ಉತ್ತರ ಸಾಧ್ಯವಾಗುತ್ತದೆ.

ಪರಿಸ್ಥಿತಿ ಹೀಗಿರುವಾಗ ಒಂದು ಉಪಭಾಷೆಯ ವ್ಯಾಕರಣದಲ್ಲಿ ತಜ್ಞತೆಯನ್ನು ಪಡೆದಿರುವ ಮಕ್ಕಳಿಗೆ ಪ್ರಮಾಣಕನ್ನಡದ ವ್ಯಾಕರಣವನ್ನು ಕಲಿಸುವುದೆಂದರೇನು?

ಇಷ್ಟೆಲ್ಲ ಹೇಳಿದ ಮೇಲೆ ಇನ್ನೂ ಒಂದು ಸಮಸ್ಯೆ ಹಾಗೇ ಉಳಿದಿದೆ. ಈಗ ಬಳಕೆಯಲ್ಲಿರುವ, ಬೋಧನೆಯಲ್ಲಿರುವ ವ್ಯಾಕರಣ ನಾವು ವ್ಯಾಪಕವಾಗಿ ಬಳಸುತ್ತಿರುವ ಕನ್ನಡದ ಲಕ್ಷಣವನ್ನು ವಿವರಿಸಲು ಸಮರ್ಥವಾಗಿದೆಯೇ? ಇಲ್ಲ. ಸುಮ್ಮನೆ ಕೆಲವು ನಿದರ್ಶನಗಳನ್ನು ನೋಡೋಣ. ಈ ವ್ಯಾಕರಣಗಳು ಸಂಧಿಯ ಬಗೆಗೆ ವಿವರಣೆ ನೀಡುವಾಗ ಕನ್ನಡ ಪದಗಳಿಗೆ ಅನ್ವಯವಾಗುವ ನಿಯಮಗಳು ಮತ್ತು ಸಂಸ್ಕೃತ ಭಾಷೆಯ ಪದಗಳಿಗೆ ಅನ್ವಯವಾಗುವ ನಿಯಮಗಳು ಎಂದು ವಿಭಾಗ ಮಾಡಿಕೊಳ್ಳುತ್ತವೆ. ಲೋಪ, ಆಗಮ, ಆದೇಶ ಸಂಧಿಗಳನ್ನು ಮೊದಲ ಗುಂಪಿನಲ್ಲೂ, ಸವರ್ಣದೀರ್ಘ, ಗುಣ, ಯಣ್ ಮೊದಲಾದ ಸಂಧಿಗಳನ್ನು ಎರಡನೆಯ ಗುಂಪಿನಲ್ಲೂ ಇರಿಸುತ್ತವೆ. ಆದರೆ ಕನ್ನಡ ಬಳಸುವವರು ಪದಗಳನ್ನು ಹೀಗೆ ವಿಭಜಿಸಿಕೊಳ್ಳಲು ಆಸಕ್ತರಾಗಿದ್ದಾರೆಯೇ, ಇಲ್ಲವೇ ಎಂಬುದು ಈ ವ್ಯಾಕರಣಗಳ ವಿವೇಚನೆಯ ವ್ಯಾಪ್ತಿಗೆ ಬರುವುದಿಲ್ಲ.

ಇದರಿಂದ ಉಂಟಾಗುವ ಸಮಸ್ಯೆಗಳಲ್ಲಿ ಕೆಲವು ಹೀಗಿವೆ. ಪತ್ರಿಕೆಯೊಂದರಲ್ಲಿ 'ಚುನಾವಣೋತ್ತರ ರಾಜಕೀಯ' ಎನ್ನುವ ಪ್ರಯೋಗವನ್ನು ಕಾಣುತ್ತೇವೆಂದು ಇಟ್ಟುಕೊಳ್ಳೋಣ. ಅರ್ಥ ಸ್ಪಷ್ಟ. ಆದರೆ 'ಚುನಾವಣೋತ್ತರ' ಎಂಬ ಪ್ರಯೋಗದಲ್ಲಿರುವ ಸಂಧಿಕ್ರಿಯೆಯನ್ನು ಯಾವ ನಿಯಮದ ಮೂಲಕ ವಿವರಿಸುವುದು?. 'ಚುನಾವಣೆ' ಮತ್ತು 'ಉತ್ತರ' ಎಂಬ ಪದಗಳ ನಡುವೆ ಸಂಧಿ ನಡೆದಿದೆ. ಅನ್ವಯವಾಗಿರುವ ನಿಯಮ ಗುಣಸಂಧಿಯದ್ದು. ಆದರೆ ಪೂರ್ವಪದ ಚುನಾವಣೆ ಸಂಸ್ಕೃತವಲ್ಲ. ಹಾಗಿದ್ದರೆ ಇಲ್ಲಿ ಗುಣಸಂಧಿಯ ನಿಯಮ ಏಕೆ ಅನ್ವಯವಾಗಿದೆ? ಹಾಗೆಯೇ 'ನಮೂದಿತ ದರ' ಎನ್ನುವ ರಚನೆಯನ್ನು ನೋಡೋಣ. 'ನಮೂದಿತ' ರೂಪವನ್ನು ಚಿತ್ರಿತ, ರೂಪಿತ, ವಿಚಾರಿತ ಇವೇ ಮೊದಲಾದ ರೂಪಗಳ ಮಾದರಿಯಲ್ಲಿ ಸಿದ್ಧಗೊಳಿಸಲಾಗಿದೆ. ಆದರೆ ಹೀಗೆ ನಾಮರೂಪಗಳಿಂದ ವಿಶೇಷಣ ರೂಪಗಳನ್ನು ಪಡೆಯುವ ನಿಯಮ ಸಂಸ್ಕೃತ ಭಾಷೆಯ ಪದಗಳಿಗೆ ಅನ್ವಯವಾಗುವಂಥದ್ದು. 'ನಮೂದು' ಸಂಸ್ಕೃತ ಪದವಲ್ಲ. ಅದರಿಂದ 'ನಮೂದಿತ' ರೂಪವನ್ನು ಪಡೆದದ್ದು ಹೇಗೆ? ಈ ರೂಪಗಳನ್ನು ನಿಯಮಬಾಹಿರವೆಂದು ಹೊರತಳ್ಳುವಂತೆಯೂ ಇಲ್ಲ. ಅವುಗಳಿಗೆ ಬಳಕೆಯ ಮನ್ನಣೆ ಸಿಕ್ಕಿದೆ. ವೈಯಾಕರಣಿಗಳು ಪ್ರಯೋಗಗಳನ್ನು ನಿರಾಕರಿಸುವುದು ಸಾಧ್ಯವೆ? ಪ್ರಯೋಗಗಳಿಗೆ ಅವರು ಶರಣಾಗಲೇ ಬೇಕು ಅಲ್ಲವೇ? ಇಂಥ ಹಲವಾರು ಸಮಸ್ಯೆಗಳನ್ನು ಪಟ್ಟಿ ಮಾಡುತ್ತ ಹೋಗಬಹುದು. ವಾದದ ತಿರುಳು ಇಷ್ಟೆ. ನಾವು ಬಳಸುತ್ತಿರುವ ಕನ್ನಡದ ನಾಡಿ ನಮ್ಮ ಶಾಲೆಗಳಲ್ಲಿ ಬೋಧಿಸುತ್ತಿರುವ ವ್ಯಾಕರಣಗಳಿಗೆ ಸಿಕ್ಕಿಲ್ಲ. ಅವು ತಮ್ಮ ವ್ಯಾಪ್ತಿಯನ್ನು, ಭಾಷೆಯನ್ನು ಕುರಿತ ತಮ್ಮ ದೃಷ್ಟಿಕೋನವನ್ನು ವ್ಯಾಪಕವಾಗಿ ಬದಲಾಯಿಸಿಕೊಳ್ಳಬೇಕಾಗಿದೆ.

ನಮ್ಮ ಮಕ್ಕಳಿಗೆ ಭಾಷೆಯ ಬಳಕೆಯ ಸಾಧ್ಯತೆಗಳನ್ನು ನಾವು ತಿಳಿಸಿಕೊಡಬೇಕಾಗಿದೆ. ಅದಕ್ಕೆ ನೆರವಾಗುವ ಹೊಸ ವೈಚಾರಿಕ ನೆಲೆಯ 'ವ್ಯಾಕರಣ'ವನ್ನು ಶಾಲೆಗಳಲ್ಲಿ ಬಳಸಬೇಕು.

ಅಂಥ ವ್ಯಾಕರಣವನ್ನು ಸಿದ್ಧಪಡಿಸಿ ಶಿಕ್ಷಕರಿಗೆ ಒದಗಿಸಬೇಕು. 1. ಈ ವ್ಯಾಕರಣದಲ್ಲಿ ಪಾರಿಭಾಷಿಕ ಪದಗಳ ಜಂಜಡಗಳಿರಬಾರದು. ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ಶಿಕ್ಷಕರಿಗೆ ಒದಗಿಸುವ ಕೈಪಿಡಿಗಳಲ್ಲಿ ಪಾರಿಭಾಷಿಕ ಪದಗಳನ್ನು ಬಳಸಬಹುದಾಗಿದೆ. 2. ಮಕ್ಕಳು ಈಗಾಗಲೇ ಸ್ಪಷ್ಟವಾಗಿ ಬಳಸುತ್ತಿರುವ ರಚನೆಗಳ ಹಿಂದಿನ ನಿಯಮಗಳನ್ನು ಅವರಿಗೆ ಕಲಿಸಬೇಕಾದ ಅವಶ್ಯಕತೆ ಇಲ್ಲ. ಆದರೆ ಆ ರಚನೆಗಳನ್ನು ಬಳಸಿ ಇನ್ನಷ್ಟು ರಚನೆಗಳನ್ನು ಮಾಡುವ ಅವಕಾಶಗಳನ್ನು ಕಲ್ಪಿಸಬಹುದು. ಆಗ ರಾಚನಿಕವಾಗಿ ಭಾಷೆಯ ಸಾಧ್ಯತೆಗಳ ಅರಿವು ಕಲಿಯುವವರ ಗಮನಕ್ಕೆ ಬರುತ್ತದೆ. ಉದಾಹರಣೆಗೆ 'ಓಡುವ ನಾಯಿ', 'ಅಳುವ ಮಗು' ಮಾದರಿಯಲ್ಲಿ ಸಾಧ್ಯರಚನೆಗಳನ್ನು ರೂಪಿಸಲು ಸೂಚಿಸುತ್ತೇವೆ ಎಂದುಕೊಳ್ಳೋಣ. ಅಂಥ ಹತ್ತಾರು ರಚನೆಗಳಲ್ಲಿ 'ಜಾರುವ ನೆಲ' ಎನ್ನುವ ರಚನೆಯೂ ಒಂದಾಗಿರಬಹುದು. ಈಗಿರುವಂತೆ ಅದು ಮೊದಲು ಹೇಳಿದ ರಚನೆಯ ಮಾದರಿಯಲ್ಲೇ ಇದೆ. ಆದರೆ ಎಚ್ಚರಿಕೆಯಿಂದ ಗಮನಿಸಿದರೆ ವ್ಯತ್ಯಾಸಗಳು ಗೋಚರಿಸುತ್ತವೆ. ಆಗ 'ಬೀಸುವ ಗಾಳಿ', 'ಕೊರೆಯುವ ಚಳಿ' ಇವೇ ಮೊದಲಾದ ಎರಡನೆಯ ಮಾದರಿಯ ರಚನೆಗಳನ್ನು ಕಂಡುಕೊಳ್ಳಲು ಸಾಧ್ಯ. ಈ ವಿಧಾನವನ್ನು ಭಾಷೆಯ ರಚನೆಯ ಹಲವು ನೆಲೆಗಳಿಗೆ ಅನ್ವಯಿಸಲು ಸಾಧ್ಯವಿದೆ. 3. ಭಾಷೆಯಲ್ಲಿ ನಡೆಯುತ್ತಿರುವ ವ್ಯತ್ಯಾಸಗಳನ್ನು ಗ್ರಹಿಸಲು ಹಾಗೂ ಆ ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ಕಲಿಯುವವರನ್ನು ಸಿದ್ಧಗೊಳಿಸಬೇಕು. ಹೊಸ ರಚನೆಗಳನ್ನು ರೂಪಿಸಲು ಭಾಷೆಯಲ್ಲಿ ಬಳಕೆಯಾಗುತ್ತಿರುವ ಹುನ್ನಾರಗಳನ್ನು ತಿಳಿಸಿಕೊಡಬೇಕಾಗುತ್ತದೆ. ಅಂಥ ನೂರಾರು ನಿದರ್ಶನಗಳು ಬಳಕೆಯ ಭಾಷೆಯಲ್ಲಿ ಸಿಗುತ್ತವೆ. 4. ಎಲ್ಲಕ್ಕಿಂತ ಮುಖ್ಯವಾಗಿ 'ಉಪಭಾಷೆಗಳ ಬದಲು ಪ್ರಮಾಣ ಭಾಷೆ' ಎನ್ನುವ ಬದಲು 'ಉಪಭಾಷೆಗಳ ಜೊತೆಗೆ ಪ್ರಮಾಣ ಭಾಷೆ'ಎನ್ನುವುದು ಅರಿವಿಗೆ ಬರಬೇಕು. ಕಲಿಯುವವರಿಗೆ ಅವರ ಉಪಭಾಷೆಗಳು ಸಂಕೋಚದ ಕೇಂದ್ರಗಳಾಗಬಾರದು. ಆ ಉಪಭಾಷೆಯ ಪದರಚನೆಯ ಸಾಧ್ಯತೆಗಳು, ಪದಪ್ರಯೋಗಗಳು ಪ್ರಮಾಣಕನ್ನಡವನ್ನು ಪುಷ್ಟಗೊಳಿಸಲು ದೊರಕುವಂತಾಗಬೇಕು. ಈ ಸಾಧ್ಯತೆಗಳನ್ನು ಈ ಹೊಸ ವ್ಯಾಕರಣ ಅನ್ವೇಷಿಸಬೇಕು.

ಆಗ ರೂಪಿತವಾಗುವ 'ವ್ಯಾಕರಣ' ಕಲಿಯುವವರಿಗೆ ಕನ್ನಡಿಯೂ ಆಗುತ್ತದೆ; ಏಕೆಂದರೆ ತಾವು ಬಳಸುತ್ತಿರುವ ಭಾಷೆಯ ಸ್ವರೂಪವನ್ನು ಕಾಣುವುದು ಅವರಿಗೆ ಸಾಧ್ಯವಾಗುತ್ತದೆ. ಜೊತೆಗೆ ಕೈದೀವಿಗೆಯೂ ಆಗುತ್ತದೆ; ಏಕೆಂದರೆ ಕಲಿಯುವವರು ಹೊಸ ಸಾಧ್ಯತೆಗಳನ್ನು ಆ ಮೂಲಕ ಕಂಡುಕೊಳ್ಳುತ್ತಿರುತ್ತಾರೆ.

ತದ್ಭವಗಳ ರಾಜಕಾರಣ

ಶಾಲಾಶಿಕ್ಷಣದಲ್ಲಿ ಮಕ್ಕಳಿಗೆ ತತ್ಸಮ ತದ್ಭವಗಳೆಂಬ ಪದಸಮೂಹಗಳನ್ನು ಪರಿಚಯಿಸಲಾಗುತ್ತದೆ. ಅನಂತರದಲ್ಲಿ ಮಕ್ಕಳು ಆ ಪದಕೋಶ ವಿಭಜನೆಯನ್ನು ಮರೆಯುತ್ತಾರೆ. ಆ ವಿಭಜನೆಯ ಉಪಯೋಗ ಅವರಿಗೆ ಬರದು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಈ ವಿಭಜನೆಯ ಪ್ರಯೋಜನವನ್ನು ಪಡೆಯಲು ಯಾವ ತಾತ್ತ್ವಿಕ ನಿಲುವಾಗಲೀ, ಕ್ರಿಯಾಯೋಜನೆಯಾಗಲಿ ಇಲ್ಲ. ಏಕೆಂದರೆ ತತ್ಸಮ, ತದ್ಭವಗಳ ನಡುವೆ ಇರುವ ರೂಪಾತ್ಮಕ ವ್ಯತ್ಯಾಸಗಳ ಕಡೆಗೆ ಮಾತ್ರ ಈವರೆಗೆ ಗಮನ ಕೊಡಲಾಗಿದೆ. ತದ್ಭವಗಳು ರೂಪುಗೊಳ್ಳುವ ಕ್ರಿಯೆಯಲ್ಲಿ ಅಡಕವಾಗಿರುವ ರಾಜಕಾರಣವನ್ನು ನಾವಿನ್ನೂ ಗುರುತಿಸಿ ಕೊಂಡಿಲ್ಲ.

ಸಾಮಾನ್ಯವಾಗಿ ಕನ್ನಡ ಭಾಷೆಯ ಪದಕೋಶವನ್ನು ತತ್ಸಮ, ತದ್ಭವ, ಸಮಸಂಸ್ಕೃತ, ಅನ್ಯದೇಶ್ಯ ಎಂದು ವಿಭಜಿಸಲಾಗುತ್ತದೆ. ತತ್ಸಮ ಮತ್ತು ಸಮಸಂಸ್ಕೃತಗಳನ್ನು ವಿವರಿಸುವಾಗ ಗೊಂದಲಗಳಾಗಿವೆ. ಅದೀಗ ನಮಗೆ ಮುಖ್ಯವಲ್ಲ. ನಾವೀಗ ಒಂದು ಉಪಯುಕ್ತ ವ್ಯಾಖ್ಯೆಯನ್ನು ಮಾಡಿಕೊಳ್ಳೋಣ. 1. ಕೆಲವು ಪದಗಳು ಸಂಸ್ಕೃತ ಮತ್ತು ಕನ್ನಡಗಳೆರಡರಲ್ಲಿಯೂ ಬಳಕೆಯಾಗುತ್ತವೆ. ಅವು ಯಾವ ಭಾಷೆಯವು ಎಂಬುದು ನಿಶ್ಚಿತವಲ್ಲ. ಉದಾ: ನೀರು, ಮೀನು, ಮುಂತಾದ ಪದಗಳು. ಇವುಗಳ ಸಂಖ್ಯೆ ಅಗಾಧವಲ್ಲ. ಕಿಟೆಲ್ ಇಂಥ 21 ಪದಗಳನ್ನು ಗುರುತು ಮಾಡಿದ್ದನು. ಈ ಪಟ್ಟಿಗೆ ಮತ್ತೆ ಕೆಲವು ಪದಗಳು ಸೇರಬಹುದು. ಆದರೆ ಆ ಸಂಖ್ಯೆ ಕೂಡ ಮಿತವಾದುದು. 2. ಕೆಲವು ಪದಗಳು ಸಂಸ್ಕೃತದಿಂದ ಕನ್ನಡಕ್ಕೆ ಬಂದು ತಮ್ಮ ಧ್ವನಿರೂಪವನ್ನು ಹಾಗೆಯೇ ಉಳಿಸಿಕೊಂಡಿರುತ್ತವೆ. ಸಾಮಾನ್ಯವಾಗಿ ಈಗ ಈ ಪದಗಳನ್ನು ತತ್ಸಮಗಳೆಂದು ಗುರುತಿಸುವುದುಂಟು. 3. ಕೆಲವು ಪದಗಳು ಸಂಸ್ಕೃತದಿಂದ ಬಂದವಾದರೂ ಅವುಗಳ ಧ್ವನಿರೂಪ ಕನ್ನಡದಲ್ಲಿ ಬೇರೆಯಾಗಿರುತ್ತದೆ. ಈ ಪದಗಳನ್ನು ತದ್ಭವಗಳೆಂದು ನಾವೀಗ ತಿಳಿಯುತ್ತೇವೆ. ಈ ವಿಭಜನೆಯಲ್ಲಿ ಪದಗಳ ಅರ್ಥಕ್ಕೆ ಯಾವ ಗಮನವನ್ನೂ ನೀಡಿಲ್ಲ. 'ಧ್ವನಿ' ಎಂಬ ಸಂಸ್ಕೃತ ಪದ ಕನ್ನಡದಲ್ಲಿ 'ದನಿ' ಎಂದು ಬಳಕೆಯಾಗುತ್ತಿದೆ. 'ಧ್ವನಿ' ತತ್ಸಮ. 'ದನಿ' ತದ್ಭವ. ಇಲ್ಲಿ ರೂಪವ್ಯತ್ಯಾಸ ಮಾತ್ರ ಗಣನೆಗೆ ಬಂದಿದೆ. ಎರಡೂ ಪದಗಳ ಅರ್ಥವ್ಯತ್ಯಾಸ ಮುಖ್ಯವಾಗಿಲ್ಲ. 'ಅವಸರ' ಎಂಬ ಪದ ಸಂಸ್ಕೃತದಲ್ಲಿ ಮತ್ತು ಕನ್ನಡದಲ್ಲಿ ಬೇರೆ ಬೇರೆ ಅರ್ಥದಲ್ಲಿ ಬಳಕೆಯಲ್ಲಿದೆ. ಸಂಸ್ಕೃತದಲ್ಲಿ 'ಅವಸರ' ಎಂದರೆ

ಸೂಕ್ತ ಸಂದರ್ಭ ಎಂದು ಅರ್ಥ. ಕನ್ನಡದಲ್ಲಿ ಅದಕ್ಕೆ ತೀವ್ರತೆ ಎಂಬ ಅರ್ಥವಿದೆ. ಆದರೆ ಕನ್ನಡದ 'ಅವಸರ'ವನ್ನು ನಾವು ತದ್ಭವವೆಂದು ಪರಿಗಣಿಸುವುದಿಲ್ಲ, ಅಂದರೆ ತತ್ಸಮ, ತದ್ಭವಗಳ ಗಣನೆಯಲ್ಲಿ ರೂಪವ್ಯತ್ಯಾಸಕ್ಕೆ ಮಾತ್ರ ಮಹತ್ವವಿದೆ ಅರ್ಥಕ್ಕೆ ಅಲ್ಲ.

ಮುಂದೆ ಕೆಲವು ಪದಗಳನ್ನು ನೀಡಿದೆ. ಕಂಸದಲ್ಲಿ ನೀಡಿರುವ ರೂಪಗಳು ತತ್ಸಮಗಳು. ಅವುಗಳಿಂದಲೇ ಈ ಪದಗಳು ಬಳಕೆಗೆ ಬಂದಿವೆ ಎಂಬುದು ನಮ್ಮ ತಿಳುವಳಿಕೆ. ಕನ್ನೆ (ಕನ್ಯಾ). ಜನ್ನ(ಯಜ್ಞ), ಸಡ್ಡೆ(ಶ್ರದ್ಧಾ), ಆಗಸ(ಆಕಾಶ), ಬೇಡ, ಬಿಯದ (ವ್ಯಾಧ), ಸೊನ್ನೆ(ಶೂನ್ಯ). ಕಾವ(ಕಾಮ), ಕಬ್ಬ(ಕಾವ್ಯ), ಕಜ್ಜ(ಕಾರ್ಯ), ಬಿದಿ(ವಿಧಿ), ಉಜ್ಜುಗ(ಉದ್ಯೋಗ), ಕೊಂಚೆ(ಕ್ರೌಂಚ), ಅಂಚೆ(ಹಂಸ), ಸಿರಿ(ಶ್ರೀ), ಕಂಚು(ಕಾಂಸ್ಯ), ಕುವರ(ಕುಮಾರ), ಬೇಗ(ವೇಗ), ಹರಣ(ಪ್ರಾಣ). ಈ ಪಟ್ಟಿಯನ್ನು ಇನ್ನೂ ವಿಸ್ತರಿಸಬಹುದು. ಆದರೆ ನಮ್ಮ ಉದ್ದೇಶಕ್ಕೆ ಇವಿಷ್ಟು ಸಾಕು. ಈ ಪದಗಳಲ್ಲಿ ಕೆಲವನ್ನು ಸಂಸ್ಕೃತದಿಂದಲೂ, ಮತ್ತೆ ಕೆಲವನ್ನು ಪ್ರಾಕೃತದ ಮೂಲಕವೂ ಪಡೆದುಕೊಂಡಿದೆ. ಉದಾಹರಣೆಗೆ ಆರ್ಯ ಎಂಬುದು ಪ್ರಾಕೃತದಲ್ಲಿ ಅಜ್ಜ ಎಂದು ಬದಲಾವಣೆ ಪಡೆದು ಅನಂತರ ಕನ್ನಡಕ್ಕೆ ಬಂದಿದೆ. ಕನ್ನಡವೇ ಆರ್ಯವನ್ನು ಆಯ್ಯ ಎಂದಾಗಿ ಪರಿವರ್ತಿಸಿಕೊಂಡಿದೆ. ನಮಗೆ ಮುಖ್ಯವಾದ ಸಂಗತಿ ಎಂದರೆ ಈ ತದ್ಭವಗಳು ಏಕೆ ನಿರ್ಮಾಣಗೊಳ್ಳುತ್ತವೆ ಎಂಬುದು.

ಸಂಸ್ಕೃತದ ಒಂದು ಪದವನ್ನು ಕನ್ನಡಕ್ಕೆ ಪಡೆದುಕೊಂಡಾಗ ಅರ್ಥದಲ್ಲಿ ಮತ್ತು ರೂಪದಲ್ಲಿ ಹೀಗೆ ಎರಡೂ ವಿಧಗಳಲ್ಲಿ ಪರಿವರ್ತನೆ ಸಾಧ್ಯ. ಆದರೆ ನಮ್ಮ ಭಾಷಾಧ್ಯಯನಕಾರರು ಕೇವಲ ರೂಪದಲ್ಲಾದ ವ್ಯತ್ಯಾಸಗಳಿಗೆ ಮಾತ್ರ ಗಮನ ಕೊಟ್ಟುದೇಕೆ? ಇವರೆಲ್ಲರೂ ಉಚ್ಚಾರಣೆಯ ಮಾನದಂಡಕ್ಕೆ, ಅಂದರೆ ಬರೆವಣಿಗೆಯ ಪ್ರಮಾಣರೂಪಕ್ಕೆ ಮನ್ನಣೆ ನೀಡಿರುವುದು ಎದ್ದು ಕಾಣುತ್ತದೆ. ಈ ತಾರತಮ್ಯವನ್ನು ಮಾಡಿದುದೇಕೆಂಬ ಪ್ರಶ್ನೆ ನಮಗೀಗ ಮುಖ್ಯ. ಅಲ್ಲದೆ ಸಂಸ್ಕೃತದಿಂದಲ್ಲದೆ ಅನ್ಯ ಹಲವು ಭಾಷೆಗಳಿಂದಲೂ ಕನ್ನಡವು ಪದಗಳನ್ನು ಎರವಲು ಪಡೆದಿದೆ. ಮತ್ತು ಹೀಗೆ ಪಡೆಯುವಾಗ ರೂಪಾತ್ಮಕ ವ್ಯತ್ಯಾಸಗಳು ಜರುಗಿವೆ. ಆದರೆ ಆ ಪದಗಳನ್ನು ತದ್ಭವಗಳೆಂದು ನಮ್ಮ ಭಾಷಾಧ್ಯಯನಕಾರರು ಹೆಸರಿಸುವುದಿಲ್ಲ. ಈ ವಿಭಜನೆ ಸಂಸ್ಕೃತ ಪದಗಳಿಗೆ ಮಾತ್ರ ಏಕೆ?

ಕೊಂಚ ಈ ಸಮಸ್ಯೆಯನ್ನು ಇಂದಿನ ನಮ್ಮ ಭಾಷಾಸಂದರ್ಭದಲ್ಲಿ ಇರಿಸಿ ನೋಡೋಣ. ಇಂಗ್ಲಿಶಿನಿಂದ ನಾವು ಪಡೆದುಕೊಂಡ ಪದಗಳನ್ನು ರೂಪಾತ್ಮಕವಾಗಿ ಬದಲು ಮಾಡಿಕೊಂಡಿರುವುದುಂಟು. ಈ ಬದಲಾವಣೆಗಳನ್ನು ಭಾಷಾಶಾಸ್ತ್ರಜ್ಞರು ಹೊಂದಾಣಿಕೆ ಎಂದು ಹೆಸರಿಸುತ್ತಾರೆ. ಬರೆವಣಿಗೆಯಲ್ಲಿ ಮಾತ್ರ ಇಂಗ್ಲಿಶಿನ ಮೂಲ ಉಚ್ಚಾರಣೆಯನ್ನು ಹಿಡಿಯಲು ವಿಶೇಷ ಚಿಹ್ನೆಗಳನ್ನು ರೂಪಿಸಿಕೊಳ್ಳಲಾಗಿದೆ. ಆದರೂ ಇಂಗ್ಲಿಶಿನ ಎಷ್ಟೋ ರೂಪಗಳನ್ನು ಮೂಲರೂಪದಲ್ಲಿ ಉಚ್ಚರಿಸುವುದಾಗಲೀ ಬರೆಯುವುದಾಗಲಿ ಕನ್ನಡದ ಗುರಿಯಾಗಿರುವಂತೆ ತೋರುವುದಿಲ್ಲ. ಸಂಸ್ಕೃತದ ಮಟ್ಟಿಗೆ ಈ ವ್ಯತ್ಯಾಸಕ್ಕೆ ಮನ್ನಣೆಯನ್ನು ನೀಡಿದ್ದೇವೆ. ಇಲ್ಲೂ ಒಂದು ಸಂಗತಿ ಗಮನ ಸೆಳೆಯುವಂತಿದೆ. ಗ್ಲಾಸ್ ಎಂಬ ಇಂಗ್ಲಿಶ್ ಪದ ಕನ್ನಡಿಗರಲ್ಲಿ ಗಿಲಾಸು ಅಥವಾ

ಗಳಾಸು ಆಗುತ್ತದೆ. ಅಂಥ ಕೆಲವು ಉದಾಹರಣೆಗಳನ್ನು ಮುಂದೆ ನೀಡಿದೆ. ಪಿಳಾನು(ಪ್ಲಾನು), ಸಿಲೇಟು (ಸ್ಲೇಟು), ಬಿಲೇಡು(ಬ್ಲೇಡು), ಕಿರಾಪು(ಕ್ರಾಪ್) ಮುಂತಾದ ಪದಗಳು "ಅಶಿಕ್ಷಿತರ" ರೂಪಗಳೆಂದು ಪರಿಗಣಿತವಾಗಿವೆ. ಅಂದರೆ ಕೆಲವು ಬಗೆಯ ರೂಪವ್ಯತ್ಯಾಸಗಳನ್ನು ಕನ್ನಡ ಒಪ್ಪಿಕೊಂಡಿದ್ದು ಮತ್ತೆ ಕೆಲವನ್ನು ಅವಗಣಿಸಿದೆ ಎಂದಾಯ್ತು. ಈ ತಾರತಮ್ಯ ಏಕೆ?

ತದ್ಭವಗಳು ಕನ್ನಡದ ಆಡುಮಾತಿನಲ್ಲಿ ಉಚ್ಚಾರಣಾ ವ್ಯತ್ಯಾಸಗಳೊಡನೆ ಕಂಡುಬಂದಾಗ ಅವುಗಳನ್ನು ಭಾಷಾಧ್ಯಯನಕಾರರು ಬೇರೆ ಗುಂಪಿನಲ್ಲಿ ಇರಿಸಿದರು.ಹಾಗೆ ಇರಿಸುವ ಮೂಲಕ ಅವುಗಳ ಬಳಕೆಯ ಸ್ವರೂಪವನ್ನೂ ನಿರ್ದೇಶಿಸಿದರು. ಆದರೆ ಕಾಲ ಸರಿದಂತೆ ಈ ತದ್ಭವಗಳ ಬರೆಹರೂಪಗಳೂ ಮನ್ನಣೆಯನ್ನು ಪಡೆಯತೊಡಗಿದವು. ಒಂದು ಮುಖ್ಯ ನಿದರ್ಶನವೆಂದರೆ ಆಂಡಯ್ಯನ "ಕಾವನ ಗೆಲ್ಲ" ಕೃತಿ(ಇದನ್ನು "ಕಬ್ಬಿಗರ ಕಾವ" ಎಂದು ವಿನಾಕಾರಣ ನಂಬಿ ಬಳಸುತ್ತಿದ್ದೇವೆ.) ಈ ಕೃತಿಯನ್ನು ಅಚ್ಚಗನ್ನಡದಲ್ಲಿ ಬರೆಯುತ್ತೇನೆಂದು ಕವಿ ಶಪಥ ಮಾಡಿದ. ಅವನು ಈ ಶಪಥವನ್ನು ಪೂರೈಸಲಾಗದೆ ಅನೇಕ ತದ್ಭವಗಳನ್ನು ಬಳಸಬೇಕಾಯಿತೆಂದು ಹೇಳುತ್ತಿದ್ದೇವೆ. ಆದರೆ ಆಂಡಯ್ಯನ ಕ್ರಮವನ್ನು ನಾವು ವಿವರಿಸಿಕೊಳ್ಳಬೇಕಾದ ಬಗೆಯೇ ಬೇರೆ. ತದ್ಭವಗಳಿಗೆ ಬರೆಹದ ಮನ್ನಣೆಯನ್ನು ಒದಗಿಸುವ ಮೂಲಕ ಆತ ಕನ್ನಡ ಮತ್ತು ಸಂಸ್ಕೃತಗಳ ಸಂಬಂಧಕ್ಕೆ ಹೊಸ ದಿಕ್ಕನ್ನು ಸೂಚಿಸಿದ್ದಾನೆ. ಅಂದರೆ ಭಾಷೆಯಲ್ಲಿ ತದ್ಭವಗಳು ರೂಪುಗೊಳ್ಳುವುದು ಸಹಜಕ್ರಿಯೆಯಾದರೂ ಅವು ಮನ್ನಣೆ ಪಡೆಯುವುದು ಮಾತ್ರ ಒಂದು ವ್ಯವಸ್ಥಿತವಾದ ಕಾರ್ಯಯೋಜನೆಯನ್ನು ಬಯಸುತ್ತದೆಂದಾಯ್ತು. ಆಂಡಯ್ಯನಾಗಲೀ ಅವನ ಅನಂತರದ ಹಲವು ಕನ್ನಡ ಕವಿಗಳಾಗಲೀ ಸಂಸ್ಕೃತಜನ್ಯ ತದ್ಭವಗಳನ್ನು ಅವು ಉಚ್ಚಾರಣೆಗೊಳ್ಳುವ ಕ್ರಮದಲ್ಲಿಯೇ ಲಿಖಿತ ರೂಪದಲ್ಲಿ ಅಧಿಕೃತಗೊಳಿಸಿದ್ದು ಒಂದು ಭಾಷಾರಾಜಕಾರಣವೆಂದು ನಾವು ತಿಳಿಯಬೇಕಿದೆ. ಇದು ಸಾಧ್ಯವಾಗುವುದು ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ. ಪದಗಳನ್ನು ನೀಡುತ್ತಿರುವ ಭಾಷೆ ಮತ್ತು ಪಡೆಯುತ್ತಿರುವ ಭಾಷೆಗಳ ನಡುವೆ ಇರುವ ಅಧಿಕಾರದ ಸಂಬಂಧಗಳಲ್ಲಿ ಬದಲಾವಣೆಯಾದ ಹೊರತು ಈ ಬಗೆಯ ತದ್ಭವಗಳ ರಾಜಕಾರಣ ಸಂಭವಿಸಲಾರದು. ಪದಗಳನ್ನು ಸ್ವೀಕರಿಸುವುದು ಒಂದು ನೆಲೆ. ಅವುಗಳ ರೂಪವನ್ನಾಗಲೀ ಅರ್ಥವನ್ನಾಗಲೀ ಬದಲಿಸಿಕೊಳ್ಳುವುದು ಇನ್ನೊಂದು ನೆಲೆ. ಈ ಎರಡು ನೆಲೆಗಳ ಒಂದು ಸಂಬಂಧವನ್ನು ಹೇಳುತ್ತದೆ. ಕನ್ನಡ ಸಂಸ್ಕೃತದ ರೂಪಗಳನ್ನು ಯಥಾವತ್ತಾಗಿ ಬರೆಯಲೆಂದೇ ತನ್ನ ಲೇಖನ ಚಿಹ್ನೆಗಳಲ್ಲಿ ಪರಿವರ್ತನೆಯನ್ನು ಮಾಡಿಕೊಂಡಿತು. ಮಹಾಪ್ರಾಣ, ಅನುಸ್ವಾರ, ವಿಸರ್ಗ ಚಿಹ್ನೆಗಳನ್ನು ರೂಪಿಸಿಕೊಂಡಿತು. ಈಗ ಇಂಗ್ಲಿಶಿನ ವಿಷಯದಲ್ಲೂ ಸ್ವಲ್ಪ ಪ್ರಮಾಣದಲ್ಲಿ ಇದೇ ಮಾರ್ಗವನ್ನು ಕನ್ನಡ ಅನುಸರಿಸುತ್ತಿರುವುದು ಕಂಡುಬರುತ್ತದೆ. ಆದರೆ ಸಂಸ್ಕೃತದ ವಿಷಯದಲ್ಲಿ ಮಾಡಿಕೊಂಡಷ್ಟು ಪರಿವರ್ತನೆಗಳು ಈಗ ಕಾಣಬರುತ್ತಿಲ್ಲ. ಇದಕ್ಕೆ ಕಾರಣಗಳಿವೆ. ಸಂಸ್ಕೃತವನ್ನು ಕನ್ನಡ ಲಿಪಿಯಲ್ಲಿ ಬರೆಯಲು ಹೊರಟ ಹಾಗೆ ನಾವಿನ್ನೂ ಇಂಗ್ಲಿಶನ್ನು ಕನ್ನಡ ಲಿಪಿಯಲ್ಲಿ ಬರೆಯುತ್ತಿಲ್ಲ. ಹಾಗಾದಾಗ ಪರಿಸ್ಥಿತಿಯಲ್ಲಿ ಬದಲಾವಣೆಗಳು ಕಾಣಬಹುದು. ಮೇಲೆ ಹೇಳಿದ ನೆಲೆಗಳಲ್ಲಿ ಇನ್ನೂ ಒಂದು ಸಂಬಂಧ

ಇರುವುದು ಸಾಧ್ಯ. ಪಡೆದ ಪದಗಳ ರೂಪವನ್ನು ಮತ್ತು ಅವಶ್ಯವಿದ್ದಾಗ ಅರ್ಥವನ್ನು, ಪಡೆದ ಭಾಷೆ ಬದಲಾಯಿಸಿಕೊಳ್ಳುತ್ತದೆ ಮತ್ತು ಈ ಬದಲಾದ ರೂಪಗಳಿಗೆ ಮತ್ತು ಅರ್ಥಕ್ಕೆ ಅಧಿಕೃತತೆಯನ್ನು ಒದಗಿಸುತ್ತದೆ. ಕನ್ನಡ ಭಾಷೆಯ ತದ್ಭವಗಳಿಗೆ ಈ ಮನ್ನಣೆಯನ್ನು ತಂದುಕೊಟ್ಟದ್ದು ಒಂದು ಮಹತ್ವ ಪೂರ್ಣ ಹೆಜ್ಜೆ. ತನ್ನ ಸ್ಥಾನವನ್ನು ಒಂದು ಭಾಷೆ ಸ್ಥಿರೀಕರಿಸಿಕೊಳ್ಳುವ ಕ್ರಮವೇ ಹೀಗಿರುತ್ತದೆ.

ಆದರೆ ಕನ್ನಡವು ತದ್ಭವಗಳ ವಿಷಯದಲ್ಲಿ ತೋರಿದ ಈ ಸಮರ್ಥನೆಯನ್ನು ಅರ್ಥಾಂತರಗಳ ವಿಷಯದಲ್ಲಿ ತೋರಲಿಲ್ಲ. ಅರ್ಥಾಂತರಗಳು ಎರಡು ಬಗೆಯಲ್ಲಿ ಆಗುತ್ತದೆ. ರೂಪ ವ್ಯತ್ಯಾಸವಾಗದೆ ಅರ್ಥಾಂತರವಾಗುವುದು. ಮೊದಲೇ ಹೇಳಿದ ಅವಸರ ಇದಕ್ಕೊಂದು ನಿದರ್ಶನ. ಆಹ್ವಾನ, ಶಿಕ್ಷಣ ಮುಂತಾದವು ಇನ್ನಷ್ಟು ನಿದರ್ಶನಗಳಾಗುತ್ತವೆ. ಈ ಅರ್ಥಾಂತರ ಅರ್ಥವಿಸ್ತಾರ, ಅರ್ಥ ಸಂಕೋಚ, ಅರ್ಥಪಲ್ಲಟ ಹೀಗೆ ಯಾವುದಾದರೂ ನೆಲೆಯಲ್ಲಿ ಆಗಿರಬಹುದು. ಇಂಥ ಕಡೆಗಳಲ್ಲಿ ಕನ್ನಡ ತನ್ನ ಅರ್ಥವನ್ನೇ ಉಳಿಸಿಕೊಂಡಿದೆ. ಕೆಲವು ಕವಿಗಳು ಮಾತ್ರ ಚಮತ್ಕಾರಕ್ಕಾಗಿ ಸಂಸ್ಕೃತದ ಅರ್ಥವನ್ನು ಬಳಸಿಕೊಂಡಿರುವುದುಂಟು. ಇನ್ನೊಂದು ಬಗೆಯ ಅರ್ಥಾಂತರದಲ್ಲಿ ತತ್ಸಮಕ್ಕೆ ಇರುವ ಅರ್ಥ ಅದರಿಂದಲೇ ರೂಪುಗೊಂಡ ತದ್ಭವಕ್ಕೆ ಇರುವುದಿಲ್ಲ. ಅವೆರಡರ ನಡುವೆ ಒಂದು ಬಗೆಯ ಶ್ರೇಣೀಕರಣ ಕಂಡುಬರುತ್ತದೆ. ಸಂಸ್ಥೆ–ಸಂತೆ, ಯೋಗಿ–ಜೋಗಿ, ಪರಿಷತ್–ಪರಿಸೆ, ವೀಥಿ–ಬೀದಿ ಇಂಥ ಜೋಡಿಗಳನ್ನು ನಿದರ್ಶನವಾಗಿ ನೀಡಬಹುದು. ಇಂಥ ಪದಗಳ ಸಂಖ್ಯೆ ಹೆಚ್ಚಿಲ್ಲ. ಆದರೂ ಅರ್ಥದ ದೃಷ್ಟಿಯಿಂದ ಸಾಮಾನ್ಯವಾಗಿ ತತ್ಸಮಗಳಿಗೆ ಹೆಚ್ಚು ವ್ಯಾಪಕ ಸಾಧ್ಯತೆ (ಅಮೂರ್ತ ಅರ್ಥಗಳನ್ನು ಹೇಳಲು ಬಳಕೆ) ಮತ್ತು ತದ್ಭವಗಳಿಗೆ ಸೀಮಿತ ಸಾಧ್ಯತೆ (ಕೇವಲ ಮೂರ್ತ ನೆಲಗಳಿಗೆ ಮಾತ್ರ ಬಳಕೆ) ಇರುವುದನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಹೀಗಿದ್ದರೂ ಕನ್ನಡದಲ್ಲಿರುವ ತದ್ಭವಗಳಿಗೆ ವಿಶೇಷ ಸಾಧ್ಯತೆಗಳನ್ನು ತೋರಿಸಿಕೊಟ್ಟ ಕವಿಗಳ ಸಾಧನೆಯನ್ನು ಮರೆಯುವಂತಿಲ್ಲ.

ಪರ್ಸೋ–ಅರಬಿಕ್ ಮೂಲದ ತದ್ಭವಗಳ ಕತೆ ಬೇರೆಯೇ ಇದೆ. ಸದ್ಯ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡ. ಇಂಗ್ಲಿಶಿನೊಡನೆ ಕನ್ನಡ ಹೊಂದಿರುವ ಸಂಬಂಧವನ್ನು ತದ್ಭವಗಳ ಮೂಲಕ ಅರಿಯಲು ಸಾಧ್ಯ. ಇಂಗ್ಲಿಶಿನ ಪದಗಳಿಂದ ಕನ್ನಡ ರೂಪಿಸಿಕೊಂಡಿರುವ ಮತ್ತು ರೂಪಿಸಿಕೊಳ್ಳಲು ಸಾಧ್ಯವಿರುವ ತದ್ಭವಗಳನ್ನು ನೋಡುವ ದೃಷ್ಟಿಕೋನ ಬದಲಾಗಬೇಕಾಗಿದೆ. ಆ ರೂಪಗಳನ್ನು ಅಧಿಕೃತಗೊಳಿಸುವುದು ಅವಶ್ಯ. ಅವು ಅಶಿಕ್ಷಿತರ ವಿಕಲ್ಪಗಳೆಂದು ತಿಳಿಯದೇ ಕನ್ನಡ ಸಹಜ ಪದಕೋಶದ ಭಾಗಗಳಾಗುವುದು ಅವಶ್ಯ. ತದ್ಭವಗಳಿಗೆ ಮನ್ನಣೆ ಎಂದರೆ ಆ ರೂಪಗಳನ್ನು ರಚಿಸಿಕೊಂಡ ಭಾಷೆಗೆ ದೊರಕುವ ಅಧಿಕಾರವೆಂದೇ ತಿಳಿಯಬೇಕು. ತದ್ಭವಗಳಿಗೆ ಈ ರಾಜಕೀಯ ಪಲ್ಲಟಗಳನ್ನು ತರುವ ಸಾಮರ್ಥ್ಯವಿದೆ.

ಶಿಕ್ಷಣ ಸಂದರ್ಭದ ಉಲ್ಲೇಖದಿಂದ ಈ ಟಿಪ್ಪಣಿಯನ್ನು ಮೊದಲು ಮಾಡಿದೆ. ಅದರ ಉದ್ದೇಶವಿಷ್ಟೆ. ಈ ತದ್ಭವಗಳಿಗೆ ಇರುವ ಸಾಧ್ಯತೆಗಳನ್ನು ವಿದ್ಯಾರ್ಥಿಗಳು

ತಿಳಿದುಕೊಳ್ಳಬೇಕು. ಕೇವಲ ರೂಪಾತ್ಮಕ ವ್ಯತ್ಯಾಸಗಳ ಅರಿವಿಗೆ ಮಾತ್ರ ಸೀಮಿತಗೊಳ್ಳದೆ ಭಾಷಾಬಳಕೆಯ ನೆಲೆಗಳಿಗೂ ಅಲ್ಲಿ ತಿಳುವಳಿಕೆ ಒದಗಬೇಕು. ಮತ್ತು ಆಗಿಹೋದ ಸಂಸ್ಕೃತ ಭಾಷಾಸಂದರ್ಭಕ್ಕೆ ಮಾತ್ರ ಸೀಮಿತಗೊಳ್ಳದೆ ಆಗುತ್ತಿರುವ ಇಂಗ್ಲಿಶ್ - ಕನ್ನಡಗಳ ಸಂಬಂಧಗಳನ್ನೂ ಗುರುತಿಸಿಕೊಳ್ಳುವುದು ಅವಶ್ಯವಾಗಿದೆ. ತದ್ಭವಗಳು ಭಾಷಾಧ್ಯಯನದ ಅನುಬಂಧದ ಭಾಗವಾಗದೇ ಭಾಷಾರಾಜಕಾರಣದ ಮುಖ್ಯ ಪರಿಕರಗಳೆಂದು ನಾವು ಅರಿಯುವುದು ಈಗ ಅತ್ಯವಶ್ಯ.

ಶಾಲೆಯಲ್ಲಿ ಕನ್ನಡ

ನಮ್ಮ ನಾಡಿನಲ್ಲಿ ಹುಟ್ಟಿದ ಮಕ್ಕಳೆಲ್ಲರಿಗೂ ಕಡ್ಡಾಯವಾಗಿ ಶಾಲಾಶಿಕ್ಷಣವನ್ನು ಒದಗಿಸಬೇಕು ಎಂದು ಯೋಜನೆಗಳನ್ನು ರೂಪಿಸಿಕೊಳ್ಳಲಾಗಿದೆ. ಆದರೆ ದಶಕಗಳು ಕಳೆದರೂ ಎಲ್ಲರಿಗೂ ಶಿಕ್ಷಣವೆಂಬುದು ಕನಸಿನ ಮಾತಾಗಿದೆ. ಇದಕ್ಕಿರುವ ಕಾರಣಗಳು ಸದ್ಯ ನಮ್ಮ ಚರ್ಚೆಯ ವಿಷಯವಲ್ಲ. ಕಲಿಯಲು ಅವಕಾಶ ದೊರೆತ ಮಕ್ಕಳು ಎದುರಿಸುತ್ತಿರುವ ಕೆಲವು ಸಮಸ್ಯೆಗಳಲ್ಲಿ ಒಂದನ್ನು ಈಗ ಗಮನಿಸೋಣ. ನಮ್ಮ ಮಕ್ಕಳು ಸಾಮಾನ್ಯ ಶಿಕ್ಷಣವನ್ನು ಪಡೆಯುವ ಹೊತ್ತಿಗೆ ಎಷ್ಟು ಭಾಷೆಗಳನ್ನು ಕಲಿಯಬೇಕು; ಏಕೆ ಆ ಭಾಷೆಗಳನ್ನು ಕಲಿಯಬೇಕು ಎಂಬ ಬಗೆಗೆ ಖಚಿತವಾದ ತಿಳುವಳಿಕೆ ಕಲಿಸುವವರಿಗೆ ಇದ್ದಂತಿಲ್ಲ. ಮಾತೃಭಾಷೆ, ಪ್ರಾದೇಶಿಕ ಭಾಷೆ, ರಾಷ್ಟ್ರ ಭಾಷೆ, ಅಂತಾರಾಷ್ಟ್ರೀಯ ಭಾಷೆ ಎಂಬ ಹೆಸರಿನಲ್ಲಿ ಹಲವು ಭಾಷೆಗಳನ್ನು ಮಕ್ಕಳಿಗೆ ಕಲಿಸಲಾಗುತ್ತಿದೆ. ಅವುಗಳಿಗೆ ಪ್ರಥಮ, ದ್ವಿತೀಯ, ತೃತೀಯ ಎಂಬ ಹೆಸರುಗಳು ಬೇರೆ. ಕರ್ನಾಟಕವನ್ನೇ ಗಮನಿಸಿದರೆ ಇಲ್ಲಿ ಮಕ್ಕಳು ಕನಿಷ್ಠ ಮೂರು ಭಾಷೆಗಳನ್ನು ಮೊದಲ ಹತ್ತು ವರ್ಷದ ಶಾಲಾಶಿಕ್ಷಣದಲ್ಲಿ ಕಲಿಯುತ್ತಾರೆ. ಈ ಮೂರು ಭಾಷೆಗಳು ಸಾಮಾನ್ಯವಾಗಿ ಕನ್ನಡ, ಇಂಗ್ಲಿಶ್, ಮತ್ತು ಹಿಂದಿ, ತಮಿಳು, ತೆಲುಗು, ಮರಾಠಿ, ಉರ್ದು, ಗುಜರಾಥಿ, ಸಂಸ್ಕೃತಗಳನ್ನು ಮೂರರಲ್ಲಿ ಒಂದು ಭಾಷೆಯನ್ನಾಗಿ ಕಲಿಯುವ ಮಕ್ಕಳೂ ಇದ್ದಾರೆ. ಇವರೆಲ್ಲ ಭಾಷೆಯನ್ನು ಔಪಚಾರಿಕ ಶಿಕ್ಷಣದ ಭಾಗವಾಗಿ ಕಲಿಯುತ್ತಿರುವವರು ಎಂಬುದನ್ನು ನೆನಪಿನಲ್ಲಿಡಬೇಕು. ಏಕೆಂದರೆ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಅನೌಪಚಾರಿಕವಾಗಿ ದಿನನಿತ್ಯದ ವ್ಯವಹಾರಕ್ಕಾಗಿ ಕಲಿಯುವವರು ಬೇರೆ ಇದ್ದಾರೆ. ಶಾಲೆಯ ಶಿಕ್ಷಣದಲ್ಲಿ ಭಾಷೆಗಳನ್ನು ಕಲಿಸುವ, ಕಲಿಯುವ ಸಂದರ್ಭದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳನ್ನು ಮಾತ್ರ ನಾವಿಲ್ಲಿ ಪರಿಶೀಲಿಸಬಹುದು.

ಭಾಷೆಯ ಕಲಿಕೆಗೆ ಸಂಬಂಧಿಸಿದಂತೆ ನಮ್ಮ ಯೋಜಕರು, ತಜ್ಞರು ನಿರಂತರವಾಗಿ ಕುರುಡು ನಂಬಿಕೆಗಳನ್ನು ಆಧರಿಸಿಯೇ ಚಿಂತಿಸುತ್ತಿದ್ದಾರೆ. ಏಕೆಂದರೆ ಮಕ್ಕಳು ಭಾಷೆಯನ್ನು ಏಕೆ ಮತ್ತು ಹೇಗೆ ಕಲಿಯಬೇಕು ಎಂಬುದನ್ನು ಅರಿಯಲು ಪ್ರಯತ್ನ ನಡೆಸಿರುವ ಪುರಾವೆಗಳು ನಮಗೆ ದೊರಕುವುದಿಲ್ಲ. ಪ್ರಥಮ, ದ್ವಿತೀಯ ಮತ್ತು ತೃತೀಯ ಎಂಬ ಹಣೆಪಟ್ಟಿಯಾಗಲೀ. ಅವುಗಳನ್ನು ಶಿಕ್ಷಣದ ವಿವಿಧ ಹಂತಗಳಲ್ಲಿ ಕಲಿಸಲು ಪ್ರಾರಂಭಿಸುವುದಕ್ಕೆ ಇರುವ ಕಾರಣಗಳಾಗಲೀ, ಆಯಾ ಭಾಷೆಗಳಿಗೆ ಪಠ್ಯಕ್ರಮವನ್ನು ನಿಗದಿಪಡಿಸುವುದಕ್ಕಾಗಲೀ, ಭಾಷೆಗಳನ್ನು ವಿವಿಧ ತರಗತಿಗಳಲ್ಲಿ ಬೋಧಿಸಲು ಅನುಸರಿಸುತ್ತಿರುವ ವಿಧಾನಗಳಿಗಾಗಲೀ

ಮತ್ತು ವಿದ್ಯಾರ್ಥಿಗಳು ಭಾಷೆಯ ಕಲಿಕೆಯಲ್ಲಿ ಪಡೆದಿರುವ ಸಾಮರ್ಥ್ಯಗಳನ್ನು ತಿಳಿಯುವುದಕ್ಕಾಗಲೀ ಯಾವುದೇ ಆಧಾರಗಳೂ ಇರುವಂತಿಲ್ಲ.

ಈಗಿರುವ ಭಾಷಾಕಲಿಕೆಯ ಕಾರ್ಯಕ್ರಮವನ್ನೇ ಒಮ್ಮೆ ಗಮನಿಸೋಣ. ಶಾಲೆಯ ಮೊದಲ ವರ್ಷದಿಂದ ಮಾತೃಭಾಷೆಯನ್ನು ಮಗು ಕಲಿಯಬೇಕು. ಕನ್ನಡ, ಉರ್ದು, ತೆಲುಗು, ತಮಿಳು, ಮರಾಠಿ, ಗುಜರಾಥಿ, ಮಲೆಯಾಳಂ ಭಾಷೆಗಳಲ್ಲಿ ಯಾವುದಾದರೊಂದನ್ನು ಕಲಿಸಲು ಪ್ರಾರಂಭಿಸುತ್ತಾರೆ ಎನ್ನಬಹುದು. ಅನಂತರ ಮೂರನೆಯ ತರಗತಿ ಅಥವಾ ಐದನೆಯ ತರಗತಿಯಲ್ಲಿ ಎರಡನೆಯ ಭಾಷೆಯ ಕಲಿಕೆ ಮೊದಲಾಗುತ್ತದೆ. ಈ ಭಾಷೆಯ ಪಟ್ಟಿಯಲ್ಲಿ ಕನ್ನಡ, ಇಂಗ್ಲಿಶ್, ಹಿಂದಿ ಸೇರುತ್ತವೆ. ಎಂಟನೆಯ ತರಗತಿಯಲ್ಲಿ ಮೂರನೆಯ ಭಾಷೆಯ ಕಲಿಕೆಯ ಆರಂಭ. ಈ ಪಟ್ಟಿಯಲ್ಲಿ ಕನ್ನಡ ಇಂಗ್ಲಿಶ್, ಹಿಂದಿ,ಸಂಸ್ಕೃತ, ಅರಾಬಿಕ್ ಭಾಷೆಗಳು ಸೇರುತ್ತವೆ. ಕನ್ನಡ ಮೂರು ಪಟ್ಟಿಯಲ್ಲಿ ಇರುವುದಕ್ಕೆ ಕಾರಣಗಳು ಸ್ಪಷ್ಟ. ವಿದ್ಯಾರ್ಥಿ ಶಾಲಾಶಿಕ್ಷಣದ ಮೊದಲ ಹತ್ತು ವರ್ಷಗಳಲ್ಲಿ ಕನ್ನಡವನ್ನು ಯಾವುದಾದರೊಂದು ಹಂತದಲ್ಲಿ ಕಲಿಯಲೇಬೇಕು. ಇದು ಒಂದು ರಾಜಕೀಯ ಹಾಗೂ ಸಾಂಸ್ಕೃತಿಕ ನಿರ್ಧಾರವೆಂದು ತಿಳಿಯೋಣ. ಆದರೆ ಸಮಸ್ಯೆ ಇರುವುದು ಬೇರೆ ನೆಲೆಯಲ್ಲಿ. ಕರ್ನಾಟಕದಲ್ಲೇ ರಾಜ್ಯದ ಅಧಿಕಾರ ವ್ಯಾಪ್ತಿಯಿಂದ ಹೊರಗಿರುವ ಶಾಲೆಗಳಲ್ಲಿ ಶಿಕ್ಷಣ ಪಡೆಯುವ ಮಕ್ಕಳು ಕೇವಲ ಎರಡು ಭಾಷೆಗಳನ್ನು ಔಪಚಾರಿಕ ಶಿಕ್ಷಣದ ಭಾಗವನ್ನಾಗಿ ಕಲಿತರೆ ಸಾಕು. ಕನ್ನಡದ ಮಗುವೊಂದು ಕನ್ನಡವನ್ನು ಔಪಚಾರಿಕವಾಗಿ ಕಲಿಯದೆಯೂ ಇರಬಹುದು.

ಮೂರು ಭಾಷೆಗಳಲ್ಲಿ ಯಾವುದೇ ಒಂದನ್ನು ಈಗಿರುವಂತೆ ನಿರ್ದಿಷ್ಟ ವರ್ಷದ ಶಾಲಾಶಿಕ್ಷಣದ ಹಂತದಲ್ಲಿ ಕಲಿಯಲು ತೊಡಗಬೇಕೆನ್ನುವುದಕ್ಕೆ ಯಾವ ಆಧಾರಗಳನ್ನೂ ಗುರುತಿಸುವುದು ಸಾಧ್ಯವಿಲ್ಲ. ಈ ನಿಯಮವನ್ನು ಪಲ್ಲಟಗೊಳಿಸಿಕೊಂಡಿರುವ ಉದಾಹರಣೆಗಳೂ ದೊರಕುತ್ತವೆ. ಅಂದರೆ ಮೂರನೆಯ ಭಾಷೆಯನ್ನು ಇನ್ನೂ ಮೊದಲೇ ಕೆಲವು ಶಾಲೆಗಳಲ್ಲಿ ಕಲಿಸಲು ಮುಂದಾಗುತ್ತಾರೆ. ಅಲ್ಲದೆ ಈ ಭಾಷೆಗಳನ್ನು ಕಲಿಸುವ ಅವಧಿಯಲ್ಲಿ ವ್ಯತ್ಯಾಸಗಳನ್ನು ಗಮನಿಸಿ ಅವುಗಳನ್ನು ಪ್ರಥಮ, ದ್ವಿತೀಯ ಮತ್ತು ತೃತೀಯ ಎಂದು ಕರೆಯಲಾಗಿದೆ. ಅವುಗಳನ್ನು ಕಲಿಸುವ ವಿಧಾನದಲ್ಲಿಯಾಗಲೀ ಪಠ್ಯಗಳನ್ನು ರೂಪಿಸುವ ವಿಧಾನದಲ್ಲಿಯಾಗಲೀ ಯಾವುದೇ ನಿರ್ದಿಷ್ಟ ತರ್ಕ ಕಾಣಸಿಗುವುದಿಲ್ಲ. ಉದಾಹರಣೆಗೆ ಕನ್ನಡವನ್ನು ಎರಡನೆಯ ಭಾಷೆಯನ್ನಾಗಿ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿ ಯಾವ ಪಠ್ಯವನ್ನು ಮೊದಲ ವರ್ಷ (ಅಂದರೆ ಐದನೆಯ ತರಗತಿಯಲ್ಲಿ) ಓದಬೇಕೋ ಅದನ್ನೇ ಕನ್ನಡವನ್ನು ಮೂರನೆಯ ಭಾಷೆಯನ್ನಾಗಿ ಆಯ್ದುಕೊಂಡ ವಿದ್ಯಾರ್ಥಿ ಎಂಟನೆಯ ತರಗತಿಯಲ್ಲಿ ಓದಬೇಕಿದೆ. ಇನ್ನೂ ಮುಂದುವರೆದು ಗಮನಿಸಿದರೆ ಎಂಟನೆಯ ತರಗತಿಯಿಂದ ಹತ್ತನೆಯ ತರಗತಿವರೆಗೆ ಎರಡನೆಯ ಮತ್ತು ಮೂರನೆಯ ಭಾಷೆಗಳಿಗೆ ಒದಗಿಸುವ ಬೋಧನಾವಧಿ ಹಾಗೂ ಅಂಕ ವಿತರಣೆಗಳಲ್ಲಿ ಸಮಾನತೆ ಇರುವುದು ಗೊತ್ತಾಗುತ್ತದೆ. ಇವೆಲ್ಲ ಸಂಗತಿಗಳು ಏನನ್ನು ಹೇಳುತ್ತವೆ? ನಮಗೊಂದು ನಿಶ್ಚಿತ ಭಾಷಾನೀತಿ ಇಲ್ಲವೆಂಬುದನ್ನು ತಾನೇ?

ಪ್ರೌಢಶಾಲಾ ಶಿಕ್ಷಣದಲ್ಲಿ ವಿದ್ಯಾರ್ಥಿ ತನ್ನ ಕಲಿಕೆಯ ಅವಧಿಯಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಮೂರು ಭಾಷೆಗಳಲ್ಲಿ ತರಬೇತು ಪಡೆಯುವುದಕ್ಕಾಗಿಯೇ ಕಳೆಯಬೇಕಿದೆ. ವಿಜ್ಞಾನ, ಸಮಾಜಶಾಸ್ತ್ರ ಮತ್ತು ಗಣಿತಗಳಿಗೆ ಇರುವ ಕಲಿಕೆಯ ಅವಧಿಗಿಂತ ಹೆಚ್ಚು ಕಾಲಾವಕಾಶ ಭಾಷೆಯ ಕಲಿಕೆಗೆ ದೊರಕುತ್ತದೆ. ಅಂಕಗಳ ವಿತರಣೆ: ಭಾಷೆಗಳಿಗೆ 325 ಇತರ ಮೂರು ವಿಷಯಗಳಿಗೆ 300. ಇಷ್ಟೆಲ್ಲ ಆದರೂ ಭಾಷೆಯ ಕಲಿಕೆಯ ಪರಿಣಾಮಗಳೇನು? ಮೂರನೆಯ ಭಾಷೆಯ ಮಾತು ಹತ್ತನೆಯ ತರಗತಿಗೆ ಮುಗಿಯಿತು. ಅನಂತರದ ಶಿಕ್ಷಣದಲ್ಲಿ ಎರಡು ಭಾಷೆಗಳು ಉಳಿಯುತ್ತವೆ. ಶಾಲಾಶಿಕ್ಷಣದಲ್ಲಿ ಮೂರನೆಯ ಭಾಷೆಯಾಗಿದ್ದುದು ಅವುಗಳಲ್ಲಿ ಒಂದಾಗಬಹುದು. ಕನ್ನಡವನ್ನು ಮೊದಲ ಹತ್ತು ವರ್ಷ ಕಲಿತಿದ್ದರೂ ಪದವಿಪೂರ್ವ ತರಗತಿಗಳಲ್ಲಿ ಅದನ್ನು ಕಲಿಯಲೇಬೇಕೆಂಬ ಕಡ್ಡಾಯವಿಲ್ಲ. ಇನ್ನು ಕನ್ನಡವನ್ನು ಎರಡನೆಯ ಅಥವಾ ಮೂರನೆಯ ಭಾಷೆಯನ್ನಾಗಿ ಕಲಿತಿದ್ದರಂತೂ ಆ ವಿದ್ಯಾರ್ಥಿಗಳು ಮುಂದಿನ ಹಂತದಲ್ಲಿ ಅದನ್ನು ಆಯ್ದು ಕಲಿಯುವ ಸಾಧ್ಯತೆಗಳು ಕನಿಷ್ಠ ಪ್ರಮಾಣದಲ್ಲಿರುತ್ತವೆ.

ಭಾಷೆಯ ಕಲಿಕೆಯಲ್ಲಿರುವ ಈ ವಿತರಣೆಯ ಸ್ವರೂಪದ ಗೊಂದಲ ಒಂದು ಕಡೆಯಾದರೆ ಪಠ್ಯಕ್ರಮದ ಏರುಪೇರು ಮತ್ತೊಂದು ಕಡೆ. ಅದೆಲ್ಲವನ್ನೂ ಇಲ್ಲಿ ವಿವರವಾಗಿ ಚರ್ಚಿಸಲು ಅವಕಾಶಗಳಿಲ್ಲ. ಆದರೆ ತರಗತಿಯ ಸನ್ನಿವೇಶವನ್ನು ಈ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳು ಪೂರ್ಣವಾಗಿ ಗಣನೆಗೆ ತೆಗೆದುಕೊಂಡಿರುವುದಿಲ್ಲ. ಕರ್ನಾಟಕದ ಹಲವು ಜಿಲ್ಲೆಗಳು ದ್ವಿಭಾಷಾ ಪ್ರದೇಶಗಳು. ಆ ಜಿಲ್ಲೆಗಳಲ್ಲಿ ಶಾಲೆಗೆ ಬರುವ ನೂರಾರು ಮಕ್ಕಳಿಗೆ ಕನ್ನಡ ಮೊದಲ ಭಾಷೆಯಾಗಿರುವುದಿಲ್ಲ. ಆದರೆ ಕನ್ನಡವನ್ನು ಮೊದಲ ವರ್ಷದಿಂದಲೇ ಕಲಿಯಲು ಮೊದಲು ಮಾಡುತ್ತಾರೆ. ಅವರೊಡನೆ ಕನ್ನಡವನ್ನು ಮನೆಮಾತನ್ನಾಗಿ ಬಲ್ಲ ಮಕ್ಕಳೂ ಇರುತ್ತಾರೆ. ಇಂಥ ಶಾಲೆಗಳಲ್ಲಿ ಪಾಠ ಮಾಡುವ ಅಧ್ಯಾಪಕರ ಸಮಸ್ಯೆಗಳನ್ನು ನಮ್ಮ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳು ಗುರುತಿಸಿಕೊಂಡಂತೆ ತೋರುವುದಿಲ್ಲ.

ಶಾಲೆಯಲ್ಲಿ ಕನ್ನಡ ಇನ್ನೂ ಒಂದು ಬಗೆಯಲ್ಲಿ ಎದುರಾಗುತ್ತದೆ. ಭಾಷೆಯನ್ನು ಹೊರತು ಪಡಿಸಿ ಇತರ ವಿಷಯಗಳನ್ನು ನಮ್ಮ ಲಕ್ಷಾಂತರ ಮಕ್ಕಳು ಕನ್ನಡದಲ್ಲಿ ಕಲಿಯುತ್ತಾರೆ. ಗಣಿತ, ವಿಜ್ಞಾನ ಮತ್ತು ಸಮಾಜಶಾಸ್ತ್ರ ಪಾಠಗಳನ್ನು ಕನ್ನಡದಲ್ಲಿ ಮಕ್ಕಳಿಗೆ ಹೇಳಿಕೊಡಲಾಗುತ್ತದೆ. ಆ ತರಗತಿಗಳಲ್ಲೂ ಮಕ್ಕಳು ಕನ್ನಡವನ್ನು ಕೇಳುತ್ತಾರೆ. ಕನ್ನಡವನ್ನು ಬರೆಯುತ್ತಾರೆ. ಆ ವಿಷಯಗಳನ್ನು ಬೋಧಿಸಲು ಅನುಕೂಲವಾಗುವಂತೆ ಪಠ್ಯಪುಸ್ತಕಗಳನ್ನು ರಾಜ್ಯ ಸರಕಾರದ ವಿಭಾಗವೊಂದು ಸಿದ್ಧಪಡಿಸಿ ಮಕ್ಕಳಿಗೆ ಒದಗಿಸುತ್ತದೆ. ಈ ಪಠ್ಯಪುಸ್ತಕಗಳು ಬಹುಪಾಲು ಮೊದಲು ಇಂಗ್ಲಿಶಿನಲ್ಲಿ ರಚನೆಯಾಗಿ ಅನಂತರ ಕನ್ನಡಕ್ಕೆ ಅನುವಾದಗೊಳ್ಳುತ್ತವೆ. ನಮ್ಮ ಶಿಕ್ಷಣ ಪದ್ಧತಿ ನಮ್ಮ ಅಧಿಕಾರದ ವ್ಯಾಪ್ತಿಗೆ ಬಂದು ಸುಮಾರು ಐದು ದಶಕಗಳು ತುಂಬುತ್ತ ಬಂದರೂ ಈ ವಿಷಯಗಳ ಪಠ್ಯಪುಸ್ತಕಗಳನ್ನು ಕನ್ನಡದಲ್ಲಿ ಸ್ವತಂತ್ರವಾಗಿ ರಚಿಸದೆ ಇಂಗ್ಲಿಶಿನಲ್ಲಿ ಮೊದಲು ಬರೆದು ಅನಂತರ ಅನುವಾದಿಸಿ ಕೊಡುತ್ತಿದ್ದೇವೆ ಎಂಬುದು ನಾಚಿಕೆಗೇಡಿನ ಸಂಗತಿ. ಕನ್ನಡದ

ಮಟ್ಟಿಗೆ ಇದರಂಥ ಅಘಾತ ಇನ್ನೊಂದಿರಲಾರದು. ಇದರ ದೂರ ಪರಿಣಾಮಗಳನ್ನು ನಾವೀಗಾಗಲೇ ಅನುಭವಿಸತೊಡಗಿದ್ದೇವೆ. ಇದು ಶಿಕ್ಷಣದ ಮೇಲೆ ಏನು ಪರಿಣಾಮ ಬೀರುತ್ತದೆ ಎಂದು ಯಾರಾದರೂ ಕೇಳಬಹುದು. ಆತಂಕವಿರುವುದು ಅಲ್ಲಲ್ಲ. ಶಾಲಾಶಿಕ್ಷಣದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ನೀತಿಯನ್ನು ಜಾರಿಗೆ ತಂದಿರುವ ನಾವು ಸ್ವತಃ ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಬಳಸುತ್ತಿಲ್ಲ. ಅದನ್ನು ಇಂಗ್ಲಿಶಿನ ನೆರಳನ್ನಾಗಿಸಿದ್ದೇವೆ. ಹಾಗಿದ್ದರೆ ಮಕ್ಕಳಿಗೆ ಔಪಚಾರಿಕವಾಗಿ ಕನ್ನಡವನ್ನು ಹತ್ತು ವರ್ಷ ನಾವೇಕೆ ಕಲಿಸಬೇಕು? ಮಕ್ಕಳು ಏಕೆ ಕಲಿಯಬೇಕು? ಕೊನೆಗೂ ತಾವು ಕಲಿತ ಭಾಷೆ ಇಂಗ್ಲಿಶಿಗೆ ಅಧೀನವೆಂಬ 'ಕಟುಸತ್ಯ'ವನ್ನು ಅರಿಯಲು ಇಷ್ಟೊಂದು ಸುತ್ತು ಬಳಸಿನ ಮಾರ್ಗವೇ? ಕಾಲ ಮತ್ತು ಶ್ರಮದ ಅಪವ್ಯಯವೇ?

ಶಾಲೆಗಳಲ್ಲಿ ಕಲಿಕೆ ಮತ್ತು ಬೋಧನೆ

ಕನ್ನಡ ಕಲಿಕೆ

ಕೌಶಲಗಳು

ಸಾಮಾನ್ಯವಾಗಿ ನಾಲ್ಕು ಭಾಷಾಕೌಶಲಗಳನ್ನು ಗುರುತಿಸುತ್ತೇವೆ. ಮಾತನಾಡುವುದು, ಕೇಳಿ ಅರ್ಥ ಮಾಡಿಕೊಳ್ಳುವುದು, ಓದುವುದು ಮತ್ತು ಬರೆಯುವುದು ಎಂಬಿವೇ ಆ ನಾಲ್ಕು ಕೌಶಲಗಳು. ಕೊನೆಯ ಎರಡು ಬರೆವಣಿಗೆಯನ್ನುಳ್ಳ ಭಾಷೆಗಳಿಗೆ ಮಾತ್ರ ಅನ್ವಯವಾಗುತ್ತವೆ. ಆದ್ದರಿಂದ ಮೊದಲ ಎರಡನ್ನು ಪ್ರಾಥಮಿಕ ಕೌಶಲಗಳು, ಕೊನೆಯ ಎರಡನ್ನು ಗೌಣ ಕೌಶಲಗಳು ಎನ್ನಬಹುದು. ಇದಲ್ಲದೆ ಮಾತನಾಡುವ ಮತ್ತು ಬರೆಯುವ ಕೌಶಲಗಳನ್ನು ಅಭಿವ್ಯಕ್ತಿ ಕೌಶಲಗಳೆಂದೂ, ಕೇಳಿ ಅರ್ಥ ಮಾಡಿಕೊಳ್ಳುವ ಮತ್ತು ಬರೆಯುವ ಕೌಶಲಗಳನ್ನು ಸ್ವೀಕರಣ ಕೌಶಲಗಳೆಂದೂ ಕರೆಯುವುದುಂಟು. ಈ ವರ್ಗೀಕರಣಗಳ ಹಿಂದಿರುವ ಉದ್ದೇಶ ಸ್ವಯಂ ಸ್ಪಷ್ಟವಿದೆ. ಎಲ್ಲ ಭಾಷಿಕರೂ ಪ್ರಾಥಮಿಕ ಕೌಶಲಗಳಲ್ಲಿ ಪರಿಣತಿಯನ್ನು ಪಡೆದಿರುತ್ತಾರೆ. ಕೆಲವು ಭಾಷಿಕರು ಮಾತ್ರ ಗೌಣ ಕೌಶಲಗಳಲ್ಲೂ ಪರಿಣತಿಯನ್ನು ಪಡೆದಿರುವುದು ಸಾಧ್ಯ. ಪ್ರಾಥಮಿಕ ಕೌಶಲಗಳಲ್ಲೂ ಕೇಳಿ ಅರಿತುಕೊಳ್ಳುವ ಕೌಶಲದ ಬಳಕೆಯ ಪ್ರಮಾಣ ಅಧಿಕವಾಗಿದ್ದು, ಮಾತನಾಡುವ ಕೌಶಲದ ಬಳಕೆ ಕಡಿಮೆಯಾಗಿರುತ್ತದೆ. ಇದು ಬಹುಪಾಲು ಜನರ ವಿಷಯದಲ್ಲಿ ನಿಜ. ಹಾಗೆಯೇ ಗೌಣ ಕೌಶಲಗಳಲ್ಲೂ ಓದುವ ಕೌಶಲವನ್ನು ಬಳಸುವ ಪ್ರಮಾಣದಲ್ಲಿ ಬರೆಯುವ ಕೌಶಲವನ್ನು ಬಳಸುವುದಿಲ್ಲ. ಹಾಗೆ ಬಳಸಬೇಕಾದ ಒತ್ತಾಯಗಳೂ ಇರುವುದಿಲ್ಲ. ಪ್ರಾಥಮಿಕ ಕೌಶಲಗಳಲ್ಲಿ ಒಂದನ್ನು ಮಾತ್ರ ಪಡೆದು ಇನ್ನೊಂದನ್ನು ಪಡೆಯದೇ ಇರುವುದು ಸಾಧ್ಯವಿಲ್ಲ. ಮಾತನಾಡಲು ಬರುತ್ತದೆ ಆದರೆ ಕೇಳಿದ್ದನ್ನು ಅರ್ಥ ಮಾಡಿಕೊಳ್ಳಲು ಬರುವುದಿಲ್ಲ ಎನ್ನುವಂತಿಲ್ಲ. ಆದರೆ ಕೆಲವೊಮ್ಮೆ ಎರಡನೆಯ ಭಾಷೆಯನ್ನು ಕಲಿತವರಲ್ಲಿ ಹೀಗೆ ಈ ಕೌಶಲಗಳ ಸಾಮರ್ಥ್ಯದಲ್ಲಿ ಏರುಪೇರಾಗುವುದುಂಟು. ಕೆಲವರು ಎರಡನೆಯ ಭಾಷೆಯನ್ನು ಕೇಳಿ ಅರಿತುಕೊಳ್ಳಬಲ್ಲವರಾಗಿದ್ದರೂ ಆ ಭಾಷೆಯನ್ನು ಬಳಸಿ ಮಾತನಾಡಲು ಅಶಕ್ತರಾಗಿರುತ್ತಾರೆ. ಗೌಣ ಕೌಶಲಗಳ ವಿಷಯದಲ್ಲಿ ಈ ತಾರತಮ್ಯ ಇನ್ನಷ್ಟು ಗಾಢವಾಗಿರುತ್ತದೆ. ಮೊದಲ ಭಾಷೆಯ ವಿಷಯದಲ್ಲೂ ಓದುವ

ಸಾಮರ್ಥ್ಯವನ್ನು ಪಡೆದಿರುವವರೆಲ್ಲ ಬರೆಯುವ ಸಾಮರ್ಥ್ಯವನ್ನು ಪಡೆದಿರಲೇಬೇಕೆಂದು ವಾದಿಸಲಾಗುವುದಿಲ್ಲ. ಕನ್ನಡದ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಕೌಶಲಗಳನ್ನು ಕುರಿತ ಮೇಲಿನ ವಿವರಣೆ ಅಗತ್ಯವೆನಿಸಿದ್ದರಿಂದ ಇಷ್ಟು ಹೇಳಬೇಕಾಯಿತು.

ಪ್ರಾಥಮಿಕ ಕೌಶಲಗಳು

ನಾವು ಕಲಿಯುವ ಮೊದಲ ಭಾಷೆಯ ಪ್ರಾಥಮಿಕ ಕೌಶಲಗಳನ್ನು ಬಹುಮಟ್ಟಿಗೆ ಒಂದೇ ಕಾಲಕ್ಕೆ ಪಡೆದುಕೊಳ್ಳುತ್ತೇವೆ. ಆದರೆ ಮಕ್ಕಳಲ್ಲಿ ಕೇಳಿ ಅರ್ಥಮಾಡಿಕೊಳ್ಳುವ ಕೌಶಲವು ಹೆಚ್ಚು ಕ್ರಿಯಾಶೀಲವಾಗಿರುತ್ತದೆ. ಅಷ್ಟೇ ಪ್ರಮಾಣದಲ್ಲಿ ಮಾತನಾಡುವ ಕೌಶಲವು ಬೆಳೆಯಲು ಸಮಯಾವಕಾಶ ಹಿಡಿಯುತ್ತದೆ. ಈ ಏರುಪೇರನ್ನು ಸರಿಪಡಿಸದಿದ್ದಲ್ಲಿ ಮುಂದೆಯೂ ಮಕ್ಕಳಲ್ಲಿ ಈ ವ್ಯತ್ಯಯ ಹಾಗೇ ಉಳಿಯುವುದುಂಟು. ಕನ್ನಡದ ಮಟ್ಟಿಗೆ ಈ ಅಂಶ ಒಂದು ಮುಖ್ಯ ಸಮಸ್ಯೆಯಾಗಿ ಈಗ ಕಾಣತೊಡಗಿದೆ. ಮಕ್ಕಳಲ್ಲಿ ಸಹಜವಾಗಿರುತ್ತದೆ ಎಂದು ನಾವು ತಿಳಿಯುವ ಈ ಕೌಶಲಗಳ ನಡುವಿನ ವ್ಯತ್ಯಾಸ ಬೆಳೆದವರಲ್ಲೂ ಮುಂದುವರೆಯುತ್ತಿರುವುದು ಎದ್ದು ಕಾಣುವಂತಿದೆ. ಅಂದರೆ ಮಾತಾಡಿದ್ದನ್ನು ಅರಿತುಕೊಳ್ಳಲು ಸಮರ್ಥರಾಗಿರುವಷ್ಟು ಮಾತಿನ ಮೂಲಕ ತಮ್ಮ ಮನಸ್ಸಿನಲ್ಲಿರುವುದನ್ನು, ಹೇಳಬೇಕಾಗಿರುವುದನ್ನು ಹೇಳಲು ಜನರು ಸಮರ್ಥರಾಗಿರುವುದಿಲ್ಲ. ಶಾಲೆಗಳಲ್ಲಿ ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಈ ಕೊರತೆ ಇರುವುದನ್ನು ಗುರುತಿಸುತ್ತಾರೆ. ಆದರೆ ಈ ವ್ಯತ್ಯಾಸವನ್ನು ಸರಿಪಡಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ಮಾತ್ರ ಸಾಧ್ಯವಾಗಿಲ್ಲ. ಇದರಿಂದಾಗಿ ಕನ್ನಡವನ್ನು ಬಳಸುವವರು ತಾವು ಕೇಳಿದ ಕನ್ನಡವನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗಿದ್ದರೂ ಕನ್ನಡದಲ್ಲಿ ಏನನ್ನಾದರೂ ಹೇಳಬೇಕೆಂದರೆ ಹಿಂಜರಿಯುವ, ತಡಕಾಡುವ ಪರಿಸ್ಥಿತಿ ಎದ್ದು ಕಾಣುವಂತಿದೆ. ಇನ್ನೂ ಮುಂದುವರೆದು ಕೆಲವರು ಕನ್ನಡದಲ್ಲಿ ಹೀಗೆ ತಮಗೆ ಅನಿಸಿದ್ದನ್ನು ಹೇಳಲು ಸಾಧ್ಯವಾಗಿಲ್ಲದಿರುವುದಕ್ಕೆ ತಮ್ಮ ಅಸಾಮರ್ಥ್ಯಕ್ಕಿಂತ ಹೆಚ್ಚಾಗಿ ಅದು ಭಾಷೆಯ ಕೊರತೆ ಎಂಬ ವಾದವನ್ನು ಹೂಡಲು ಅವಕಾಶವಾಗಿದೆ. ಭಾಷಾಸಾಮರ್ಥ್ಯ ಮೂಲಭೂತವಾಗಿ ಭಾಷೆಯ ರಚನೆಯನ್ನು ಅವಲಂಬಿಸಿರುತ್ತದೆ. ಅಂದರೆ ನನಗೆ ಕನ್ನಡ ಭಾಷಾಸಾಮರ್ಥ್ಯವಿದೆ ಎಂದರೆ ನನಗೆ ಕನ್ನಡ ಭಾಷಾರಚನೆಯ ನಿಯಮಗಳು ಗೊತ್ತು ಎಂದರ್ಥ. ಆದರೆ ಇದರಲ್ಲಿ ಭಾಷೆಯ ಬಳಕೆಯ ಸಾಮರ್ಥ್ಯ ಸೇರುವುದಿಲ್ಲ. ಇದು ಮುಖ್ಯವಾಗಿ ಸಾಮಾಜಿಕ ನೆಲೆಗೆ ಸೇರಿದ್ದು. ಹಾಗಾಗಿ ಒಬ್ಬರಿಂದ ಒಬ್ಬರಿಗೆ ಸ್ವರೂಪ ಮತ್ತು ಪ್ರಮಾಣದಲ್ಲಿ ಬೇರೆಯಾಗಿರುತ್ತದೆ. ನಮ್ಮ ಭಾಷಾಕೌಶಲಗಳು ಬಳಕೆಯಲ್ಲಿ ಕುಂಠಿತವಾಗುವುದನ್ನು ಚರ್ಚಿಸುವಾಗ ಈ ಮೇಲಿನ ಅಂಶ ನಮ್ಮ ಗಮನದಲ್ಲಿರಬೇಕಾಗುತ್ತದೆ.

ಈ ಆತಂಕದ ಸ್ಥಿತಿಯನ್ನು ನಾವಿನ್ನೂ ಅದರ ಪರಿಣಾಮಗಳ ನೆಲೆಯಲ್ಲಿ ಗ್ರಹಿಸಿಲ್ಲ. ಕನ್ನಡವನ್ನು ಮಾತನಾಡುವ ವಲಯಗಳು ಹಲವಿವೆ. ಇವುಗಳಲ್ಲಿ ಪ್ರತಿಯೊಬ್ಬರೂ ಬೇರೆಬೇರೆ ಪ್ರಮಾಣದಲ್ಲಿ ಭಾಗಿಗಳಾಗಿರುತ್ತಾರೆ. ಈ ವಲಯಗಳು ಆಧುನಿಕ ಸಂದರ್ಭದಲ್ಲಿ ಹೆಚ್ಚಾಗುತ್ತಿವೆ. ಮೊದಲು ಮನೆಯ ಒಳಗೆ ಮತ್ತು ಹೊರಗೆ ಎಂದು ಸ್ಥೂಲವಾಗಿ ವಿಭಜಿಸಬಹುದಾಗಿದ್ದ ವಲಯಗಳು ಈಗ ಹಲವು ಮುಖ್ಯ ನೆಲೆಗಳಲ್ಲಿ ವಿಭಜಿತವಾಗಿವೆ. ಅಲ್ಲದೆ ಆಯಾ ವಲಯಗಳಲ್ಲಿ ಭಾಗಿಯಾಗುವವರ ಚಹರೆಗಳು ಬಹುಮಟ್ಟಿಗೆ ನಿಗದಿಗೊಳ್ಳುತ್ತಿವೆ. ಈ ಬಗೆಯ ವ್ಯಾಪಕತೆಯಲ್ಲಿ ಕನ್ನಡವನ್ನು ಕೆಲವು ವಲಯಗಳಲ್ಲಿ ಮಾತನಾಡಲು ಬಳಸಬಲ್ಲ ವ್ಯಕ್ತಿ ಮತ್ತೆ ಕೆಲವು ವಲಯಗಳಲ್ಲಿ ಕೇವಲ ಕೇಳಿ ತಿಳಿದುಕೊಳ್ಳಲು ಮಾತ್ರ ಬಳಸಲು ಸಮರ್ಥರಾಗಿರುವುದು ಗಮನಿಸಬೇಕಾದ ವಿಷಯ. ಅಂದರೆ ಕೆಲವು ವಲಯಗಳಲ್ಲಿ ಕನ್ನಡವನ್ನು ಮಾತಿನ ನೆಲೆಯಲ್ಲಿ ಬಳಸುವುದು ಈಗ ತಜ್ಞತೆಯ, ವಿಶೇಷ ತರಬೇತಿಯ ವಿಷಯವಾಗಿಬಿಟ್ಟಿದೆ.

ಕೆಲವು ಚಿಂತಕರ ಪ್ರಕಾರ ಹೀಗಾಗುವುದು ಅನಿವಾರ್ಯ. ಅಲ್ಲದೆ ಇದು ಚಿಂತಿಸಬೇಕಾದ ವಿಷಯವೇನೂ ಅಲ್ಲ. ಆದರೆ ಈ ತಾರತಮ್ಯದ ವ್ಯಾಪ್ತಿ ನಾವು ತಿಳಿದಂತೆ ಕೇವಲ ಕೆಲವು ವಲಯಗಳಿಗೆ ಮಾತ್ರ ಸೀಮಿತವಾಗಿ ಉಳಿಯುತ್ತಿಲ್ಲ. ನಿಧಾನವಾಗಿ ಹೆಚ್ಚು ಹೆಚ್ಚು ವಲಯಗಳನ್ನು ಆವರಿಸುತ್ತಿದೆ. ಇದರಿಂದಾಗಿ ದಿನಕಳೆದಂತೆ ಕನ್ನಡವನ್ನು ಬಹುವಲಯಗಳಲ್ಲಿ ಕೇಳಿ ಅರ್ಥ ಮಾಡಿಕೊಳ್ಳಬಲ್ಲವರ ಸಂಖ್ಯೆ ಹೆಚ್ಚಿದ್ದರೂ ಆಯಾಾವಲಯಗಳಲ್ಲಿ ಮಾತಿನ ಮೂಲಕ ಕನ್ನಡವನ್ನು ಬಳಸಬಲ್ಲವರು ಕಡಿಮೆಯಾಗತೊಡಗಿದ್ದಾರೆ. ಹಾಗಿದ್ದಲ್ಲಿ ಹೀಗೆ ಕನ್ನಡವನ್ನು ಮಾತನಾಡಲು ಬಳಸದ ಜನರು ಮೌನಿಗಳಾಗಿದ್ದಾರೆಯೇ ಎಂಬ ಪ್ರಶ್ನೆಯನ್ನು ಕೇಳಬಹುದು. ಆದರೆ ಹಾಗಾಗಿಲ್ಲ. ಕನ್ನಡ ನಾಡಿನಲ್ಲಿ ವ್ಯಾಪಕವಾಗಿರುವ ಮತ್ತು ವ್ಯಾಪಕವಾಗಿ ಬೆಳೆಯುತ್ತಿರುವ ದ್ವಿಭಾಷಿಕ ಸಂದರ್ಭದಿಂದಾಗಿ ಈ ಪರಿಸ್ಥಿತಿಯ ನಿರ್ವಹಣೆಯನ್ನು ಬೇರೆ ರೀತಿಯಲ್ಲಿ ನಿಭಾಯಿಸಲಾಗುತ್ತಿದೆ. ಅಂದರೆ ಎಲ್ಲಿ ಕನ್ನಡದ ಮಾತಿನ ಬಳಕೆ ಕಡಿಮೆಯಾಗುತ್ತಿದೆಯೋ ಅಲ್ಲೆಲ್ಲಾ ಕನ್ನಡವನ್ನು ಕೇವಲ ಕೇಳಿಸಿಕೊಳ್ಳಲು ಬಳಸುವವರು ಮಾತನಾಡಲು ಇನ್ನೊಂದು (ತಾವು ದ್ವಿಭಾಷಿಕರಾಗಿರುವ) ಭಾಷೆಯನ್ನು ಬಳಸುವ ಪ್ರವೃತ್ತಿ ಎದ್ದು ಕಾಣುತ್ತಿದೆ. ಈ ಭಾಷಾಬಳಕೆಯ ಸ್ವರೂಪ ನೆಲೆಯೂರಿದಂತೆಲ್ಲ ಕನ್ನಡದ ಸಾಧ್ಯತೆಗಳು ಕಡಿಮೆಯಾಗುತ್ತಾ ಹೋಗುತ್ತವೆ. ಅಥವಾ ಕನ್ನಡವು ಎರಡನೆಯ ಆಯ್ಕೆಯ ಭಾಷೆಯಾಗುವ ಸಾಧ್ಯತೆಗಳು ಹೆಚ್ಚುತ್ತವೆ. (ಸಂಸ್ಕೃತ ನಾಟಕಗಳಲ್ಲಿ ಸಂಸ್ಕೃತ ಮತ್ತು ಪ್ರಾಕೃತಗಳ ನಡುವೆ ಈ ಬಗೆಯ ಪರಿಸ್ಥಿತಿ ಏರ್ಪಟ್ಟಿತ್ತು. ಉತ್ತಮ ಪಾತ್ರಗಳು ಸಂಸ್ಕೃತದಲ್ಲಿ ಮಾತನಾಡುತ್ತಿದ್ದರೆ ಇತರ ಪಾತ್ರಗಳು ಪ್ರಾಕೃತದಲ್ಲಿ ಮಾತನಾಡುವುದು ಅಗತ್ಯವಾಗಿತ್ತು. ಉತ್ತಮ ಪಾತ್ರಗಳಿಗೆ ಪ್ರಾಕೃತವನ್ನು ಕೇಳಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿತ್ತು. ಇತರ ಪಾತ್ರಗಳಿಗೆ

ಸಂಸ್ಕೃತವನ್ನು ಕೇಳಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿತ್ತು. ಆದರೆ ಸಾಮಾಜಿಕವಾದ ಕೆಲವು ಒತ್ತಾಯಗಳಿಂದಾಗಿ ಈ ಬಳಕೆಯ ವ್ಯತ್ಯಾಸ ಅಲ್ಲಿ ನೆಲೆಗೊಂಡದ್ದನ್ನು ನಾವು ಕಾಣುತ್ತೇವೆ.) ಬರಲಿರುವ ದಶಕಗಳಲ್ಲಿ ಕನ್ನಡವೂ ಹೀಗೆ ಕೆಲವು ಇಕ್ಕಟ್ಟುಗಳನ್ನು ಎದುರಿಸಬೇಕಾಗಬಹುದು.

ದ್ವಿಭಾಷಿಕರನ್ನು ನಮ್ಮ ಅನುಕೂಲಕ್ಕಾಗಿ ಎರಡು ಗುಂಪುಗಳಲ್ಲಿ ಗುರುತಿಸಿಕೊಳ್ಳಬಹುದು. ಕನ್ನಡವನ್ನು ಮೊದಲ ಭಾಷೆಯನ್ನಾಗಿ ಹೊಂದಿದ್ದು ಬೇರೊಂದು ಭಾಷೆಯನ್ನು ಎರಡನೆಯ ಭಾಷೆಯನ್ನಾಗಿ ಕಲಿತವರು ಮೊದಲ ಗುಂಪಿನಲ್ಲಿ ಬಂದರೆ, ಕನ್ನಡವಲ್ಲದ ಭಾಷೆಯನ್ನು ಮೊದಲ ಭಾಷೆಯನ್ನಾಗಿ ಕಲಿತು ಕನ್ನಡವನ್ನು ಎರಡನೆಯ ಭಾಷೆಯನ್ನಾಗಿ ಹೊಂದಿರುವವರ ಗುಂಪು ಎರಡನೆಯದು. ಈ ಎರಡು ಗುಂಪುಗಳಲ್ಲೂ ಕನ್ನಡದ ಮಾತಿನ ಕೌಶಲದ ಬಳಕೆ ಕಡಿಮೆಯಾಗುತ್ತಿದೆ ಎನ್ನುವುದನ್ನು ಗಮನಿಸಬೇಕು. ಎರಡನೆಯ ಗುಂಪಿನ ಸಂದರ್ಭದಲ್ಲಿ ಹೀಗಾಗಲು ಕಾರಣಗಳನ್ನು ಊಹಿಸಬಹುದು. ಅವರು ಕನ್ನಡದ ಮಾತಿನ ಕೌಶಲದ ಬಳಕೆಯಲ್ಲಿ ಸಾಮರ್ಥ್ಯವನ್ನು ಪಡೆಯದಿರುವುದೇ ಇನ್ನೊಂದು ಭಾಷೆಯ ಮೊರೆಹೋಗುವುದಕ್ಕೆ ಕಾರಣವಾಗಿದೆ. ಆದರೆ ಕನ್ನಡವನ್ನೇ ಮೊದಲ ಭಾಷೆಯನ್ನಾಗಿ ಹೊಂದಿರುವವರೂ ಹೀಗೆ ಕನ್ನಡವನ್ನು ಎರಡನೆಯ ಆಯ್ಕೆಯನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಮತ್ತು ಈ ಸಂದರ್ಭಗಳಲ್ಲಿ ಈ ಗುಂಪಿನ ಬಹುಪಾಲು ಜನರ ಅಭಿವ್ಯಕ್ತಿಯಾದ ಭಾಷೆ ಇಂಗ್ಲಿಶ್ ಆಗಿರುತ್ತದೆ. ಹೀಗೆ ಎರಡೂ ನೆಲೆಗಳಲ್ಲಿ ಕನ್ನಡ ಭಾಷೆಗೇ ಎಡರುಗಳು ಬಂದೊದಗಿದೆ ಎಂದು ತೋರುತ್ತಿದೆ.

ಗೌಣ ಕೌಶಲಗಳು: ಓದುವ ಮತ್ತು ಬರೆಯುವ ಕೌಶಲಗಳನ್ನು ಶಾಲಾಶಿಕ್ಷಣದ ವ್ಯಾಪ್ತಿಗೆ ಬಂದವರು ಮಾತ್ರ ಪಡೆದುಕೊಳ್ಳುತ್ತಾರೆ. ಇವರಲ್ಲೂ ಓದುವ ಕೌಶಲವನ್ನು ಪಡೆದುಕೊಳ್ಳುವ ಪ್ರಮಾಣದಲ್ಲಿ ಬರೆಯುವ ಕೌಶಲವನ್ನು ಪಡೆದುಕೊಳ್ಳದಿರುವುದು ಎದ್ದು ಕಾಣುವ ಸಂಗತಿಯಾಗಿದೆ. ಅಂದರೆ ಶಿಕ್ಷಿತ ಕನ್ನಡಿಗರು ಕನ್ನಡವನ್ನು ಓದಲು ಸಿದ್ಧವಿದ್ದಷ್ಟು ಬರೆಯಲು ಸಿದ್ಧರಿಲ್ಲ. ಇದು ಬರೆಯಲು ಬಾರದಿರುವ ಸ್ಥಿತಿಯಲ್ಲ; ಬರೆಯಲು ಇರುವ ಅಸಾಮರ್ಥ್ಯವೇ ಮುಖ್ಯ ಸಂಗತಿಯಾಗಿದೆ. ಚಾರಿತ್ರಿಕವಾಗಿ ನೋಡಿದರೆ ಕನ್ನಡವನ್ನು ಓದಿ ಬರೆಯಬಲ್ಲ ಜನರ ಸಂಖ್ಯೆ ಯಾವಾಗಲೂ ಕಡಿಮೆ ಇದ್ದಿತಷ್ಟೆ. ಶಿಕ್ಷಣದ ಸಾರ್ವತ್ರೀಕರಣದಿಂದಾಗಿ ಓದಿ ಬರೆಯಬಲ್ಲ ಜನರ ಸಂಖ್ಯೆ ಸಹಜವಾಗಿಯೇ ಹೆಚ್ಚಾಗಬೇಕಿತ್ತು. ಈ ಸಂಖ್ಯೆ ಹೆಚ್ಚಾಗಿದೆ ಎಂಬುದೇನೋ ನಿಜ. ಆದರೆ ಇವರಲ್ಲಿನ ಗೌಣ ಭಾಷಾ ಕೌಶಲಗಳ ಬಳಕೆಯ ಸಾಮರ್ಥ್ಯದಲ್ಲಿ ಅಗಾಧ ಪ್ರಮಾಣದ ವ್ಯತ್ಯಾಸ ಕಂಡುಬರುತ್ತಿದೆ.

ಇದಕ್ಕೆ ಇನ್ನೂ ಕೆಲವು ಕಾರಣಗಳಿವೆ. ಕನ್ನಡವನ್ನು ಓದಬಲ್ಲವರಿಗೆಲ್ಲ ಬರೆಯುವ ಅವಕಾಶಗಳು ಒದಗಿ ಬರುವುದು ಕಡಿಮೆ. ಈ ವಿಷಯದಲ್ಲಿ ಪ್ರಾಥಮಿಕ ಕೌಶಲಗಳ

ಬಗ್ಗೆ ನಾವು ಗಮನಿಸಿದ ಸಂಗತಿಯ ಸ್ವರೂಪ ಇಲ್ಲಿಲ್ಲ. ಅಲ್ಲಿ ಅಭಿವ್ಯಕ್ತಿ ಕೌಶಲದ ಬಳಕೆಗೆ ಹಿಂಜರಿಕೆ ಇದೆಯಾದರೆ ಇಲ್ಲಿ ಅವಕಾಶಗಳೇ ಇಲ್ಲವಾಗಿದೆ. ಬರೆಯುವ ಅವಕಾಶವಿರುವ ವಲಯಗಳು ನಿಧಾನವಾಗಿ ಆ ಅವಕಾಶವನ್ನು ಸಂಕುಚಿತಗೊಳಿಸಿಕೊಳ್ಳುತ್ತಿವೆ. ಉದಾಹರಣೆಗೆ ಕೆಲವು ದಶಕಗಳವರೆಗೆ ಕನ್ನಡ ಓದಿ ಬರೆಯಲು ಕಲಿತವರು ಕನ್ನಡವನ್ನು ಬರೆಯಲು ಇದ್ದ ಅವಕಾಶವೆಂದರೆ ಪತ್ರ ವ್ಯವಹಾರದ ವಲಯದಲ್ಲಿ. ಈಗ ಸಂಪರ್ಕ ಮಾಧ್ಯಮಗಳಲ್ಲಿ ಆಗಿರುವ ತೀವ್ರ ತರದ ಪರಿವರ್ತನೆಯಿಂದಾಗಿ ಪತ್ರವನ್ನು ಬರೆಯುವವರ ಸಂಖ್ಯೆಯಲ್ಲಿ ಇಳಿಮುಖವಾಗಿದೆ. ಪತ್ರಗಳ ಬದಲಿಗೆ ಲಭ್ಯವಿರುವ ಇತರ ಮಾಧ್ಯಮಗಳನ್ನು ಬಳಸುವುದು ಹೆಚ್ಚಾಗಿದೆ. ಇಂತಹ ಹತ್ತಾರು ನಿದರ್ಶನಗಳು ನಮ್ಮ ಎದುರು ಈಗ ಲಭ್ಯವಿವೆ. ಬರೆಯುವ ಅವಕಾಶಗಳು ಕಡಿಮೆಯಾಗುತ್ತಾ ಹೋದಂತೆ ಬರೆಯಲು ಕಲಿತವರು ತಮ್ಮ ಕೌಶಲವನ್ನು ಕೇವಲ ಓದಿಗೆ ಸೀಮಿತಗೊಳಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಇದು ಜಗತ್ತಿನ ಹಲವು ಭಾಷೆಗಳು ಅನುಭವಿಸುತ್ತಿರುವ ಸನ್ನಿವೇಶ. ನವಮೌಖಿಕತೆ ಎಂದು ಹೆಸರಿಸಲಾಗಿರುವ ಈ ಪ್ರವೃತ್ತಿಯಿಂದಾಗಿ ಬರೆಯುವ ಸಾಮರ್ಥ್ಯ ಈಗ ಕೆಲವರಿಗೆ ಸೀಮಿತವಾದ ಒಂದು ತಜ್ಞ ಚಟುವಟಿಕೆಯಾಗಿ ಉಳಿಯುವ ಸಾಧ್ಯತೆಗಳು ಹೆಚ್ಚಾಗುತ್ತಿವೆ.

ಬರವಣಿಗೆ ಎನ್ನುವುದು ಕೂಡ ತನ್ನ ಸ್ವರೂಪವನ್ನು ಬದಲು ಮಾಡಿಕೊಳ್ಳುತ್ತಿದೆ. ಕೈಬೆರಳುಗಳನ್ನು ಬಳಸಿ ಲೇಖನಿ ಹಿಡಿದು ಸ್ನಾಯುಗಳ ನಿರ್ದಿಷ್ಟ ಬಳಕೆಯ ಮೂಲಕ ಅಕ್ಷರಗಳನ್ನು ಮೂಡಿಸುವ ಕ್ರಿಯೆಯೀಗ ಸಂಪೂರ್ಣ ಬದಲಾಗತೊಡಗಿದೆ. ತಂತ್ರಜ್ಞಾನ ಇದಕ್ಕೆ ಮುಖ್ಯ ಕಾರಣವಾಗಿದೆ. ಸಾಮೂಹಿಕ ಓದಿಗಾಗಿ ಮುದ್ರಣದ ಮೂಲಕ ಬರವಣಿಗೆಯ ಅರ್ಥ ಬೇರೆಯಾದ ಸಂಗತಿ ಈಗ ಹಳೆಯದು. ವ್ಯಕ್ತಿಗತ ನೆಲೆಯಲ್ಲೂ ಬರವಣಿಗೆ ಎನ್ನುವುದೀಗ ಕೈಬೆರಳುಗಳನ್ನು ಕೀಲಿ ಮಣೆಗಳ ಮೇಲೆ ಚಲಿಸುವ ಮೂಲಕ ನಡೆಯುವ ಕ್ರಿಯೆಯಾಗತೊಡಗಿದೆ. ಕಂಪ್ಯೂಟರ್ ಇದಕ್ಕೆ ಕಾರಣವಾಗಿದೆ. ಈ ಬದಲಾವಣೆಯ ಪರಿಣಾಮಗಳು ಅಗಾಧವಾಗಿವೆ. ಕನ್ನಡವೂ ಬರಲಿರುವ ದಶಕಗಳಲ್ಲಿ ಈ ಪರಿಣಾಮಗಳನ್ನು ಎದುರಿಸಬೇಕಾಗುವುದು ಅನಿವಾರ್ಯವಾಗಿದೆ.

ಬರಲಿರುವ ದಿನಮಾನಗಳಲ್ಲಿ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಮಾತನಾಡಿದ ಮಾತು ಕಂಪ್ಯೂಟರ್ ತೆರೆಯ ಮೇಲೆ ಬರವಣಿಗೆಯಾಗಿ ಮೂಡುವುದು ಸಾಧ್ಯವಿದೆ. ಇದರಿಂದಾಗಿ ಪರಿಸ್ಥಿತಿ ಇನ್ನೂ ಬದಲಾಗಲಿದೆ. ಆಗ ಬರವಣಿಗೆ ಎನ್ನುವುದು ಕಲಿತು ಬಳಸಬೇಕಾದ ಒಂದು ಸಾಮರ್ಥ್ಯವಾಗಿ ಉಳಿಯುವ ಸಾಧ್ಯತೆಯೇ ಇಲ್ಲವಾಗುತ್ತದೆ. ಮಾತಿನ ಭಾವಚಿತ್ರವಾಗಿ ಬರವಣಿಗೆ ತಂತಾನೇ ಮೂಡುವುದರಿಂದ ಮಾತಾಡುವುದೇ ಬರವಣಿಗೆಯಾಗುತ್ತದೆ. ಆಗ ಈ ಗೌಣ ಕೌಶಲ ಪ್ರಾಥಮಿಕ ಕೌಶಲವಾಗಿ ಪರಿವರ್ತನೆ ಹೊಂದಿಬಿಟ್ಟಿರುತ್ತದೆ. ಇದೇನೇ ಇರಲಿ. ಬರಲಿರುವ ದಶಕಗಳು ಇಂತಹುದೊಂದು ಪರಿಸ್ಥಿತಿಯನ್ನು ನಮ್ಮೆದುರು ತಂದಿಡಲಿವೆ ಎನ್ನುವುದನ್ನು ಗಮನಿಸಲು ಈ ಮಾತು ಹೇಳಲಾಯಿತು.

ಕನ್ನಡದ ಅಭಿವ್ಯಕ್ತಿ ಕೌಶಲಗಳ ಬಳಕೆ ತೀವ್ರವಾಗಿ ಕಡಿಮೆಯಾಗುತ್ತಿರುವುದಕ್ಕೆ ಇನ್ನೂ ಒಂದು ಕಾರಣವಿದ್ದಂತಿದೆ. ಕನ್ನಡಕ್ಕೆ ಹಲವು ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆಗಳಿವೆಯಷ್ಟೆ. ಈ ಉಪಭಾಷೆಗಳ ನಡುವೆ ಇರುವ ವ್ಯತ್ಯಾಸಗಳು ಕೇವಲ ವಿವರಣೆಯ ಮಟ್ಟದಲ್ಲಿ ಮಾತ್ರ ನಿಂತಿಲ್ಲ. ಪ್ರಮಾಣ ಭಾಷೆ ಅಥವಾ ಶಿಷ್ಟ ಪ್ರಭೇದ ಎಂದು ಕರೆಯಲಾಗುವ ಕನ್ನಡದ ಮಾದರಿಗಿಂತ ಈ ಉಪಭಾಷಿಕ ಮಾದರಿಗಳು ಹಲವು ರೀತಿಗಳಲ್ಲಿ ಭಿನ್ನವಾಗಿವೆ. ಈ ಭಿನ್ನತೆಯನ್ನು ಸಾಮಾನ್ಯವಾಗಿ ತರತಮ ಭಾವದಲ್ಲಿ ಗ್ರಹಿಸುವ ಪ್ರವೃತ್ತಿಯೊಂದು ಕನ್ನಡದಲ್ಲಿ ಬೆಳೆದು ಬಂದಿದೆ. ಅಂದರೆ ಪ್ರಮಾಣ ಪ್ರಭೇದದ ಬಳಕೆಗೆ ಮಾನ್ಯತೆ ಇದ್ದು ಉಪಭಾಷಿಕ ಪ್ರಭೇದಗಳನ್ನು ಬಳಸಿದಾಗ ಒಂದಲ್ಲ ಒಂದು ಬಗೆಯ ಕೀಳರಿಮೆಗೆ ಒಳಗಾಗಬೇಕಾದ ಸನ್ನಿವೇಶವಿದೆ. ಇದರಿಂದಾಗಿ ಮಾತನಾಡುವ ಮತ್ತು ಬರೆಯುವ ಅವಕಾಶವಿದ್ದರೂ ತಂತಮ್ಮ ಉಪಭಾಷೆಗಳನ್ನು ಬಳಸುವ ಸಂದರ್ಭವನ್ನೇ ಭಾಷಿಕರು ಬಿಟ್ಟುಕೊಡಲು ಸಿದ್ಧರಾಗಿದ್ದಾರೆ. ಈ ಸನ್ನಿವೇಶವನ್ನು ಕನ್ನಡ ವಿಚಿತ್ರ ರೀತಿಯಲ್ಲಿ ನಿರ್ವಹಿಸುತ್ತಿದೆ. ಈ ಸಂದರ್ಭವನ್ನು ಬೇರೊಂದು ಟಿಪ್ಪಣಿಯಲ್ಲಿ ಚರ್ಚಿಸುವ ಅಗತ್ಯವಿದೆ.

ಕಲಿಕೆಯ ಸ್ವರೂಪ

ಭಾಷಾಕಲಿಕೆಯ ಸ್ವರೂಪವನ್ನು ಶಿಕ್ಷಣಶಾಸ್ತ್ರಜ್ಞರು, ಮನೋವಿಜ್ಞಾನಿಗಳು ಮತ್ತು ಭಾಷಾಶಾಸ್ತ್ರಜ್ಞರು ತಮ್ಮತಮ್ಮ ರೀತಿಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಮಕ್ಕಳು ಭಾಷೆಯನ್ನು ಕಲಿಯುತ್ತಾರೆ ಎಂಬುದು ಎಲ್ಲರ ಅನುಭವದ ಸಂಗತಿ. ಇದೊಂದು ಕಲಿಕೆಯಾಗಿರುವುದರಿಂದ ಮತ್ತು ಮಗು ಹಲವು ಇನ್ನಿತರ ಕೌಶಲಗಳನ್ನೂ ಕಲಿಯುತ್ತದೆಯಾಗಿ ಎಲ್ಲ ಕಲಿಕೆಯ ಹಿಂದಿನ ತತ್ತ್ವಗಳೂ ಒಂದೇ ರೀತಿಯವು ಎನ್ನುವ ತಿಳುವಳಿಕೆ ಜನಸಾಮಾನ್ಯರಲ್ಲಿದೆ. ಮಕ್ಕಳು ನಡೆಯುವುದನ್ನು ಕಲಿಯುತ್ತಾರೆ. ಈಜುವುದನ್ನು ಕಲಿಯುತ್ತಾರೆ. ವಸ್ತುಗಳನ್ನು ಒಂದು ನಿಯತವಾದ ರೀತಿಯಲ್ಲಿ ಜೋಡಿಸುವುದನ್ನು ಕಲಿಯುತ್ತಾರೆ. ತಮ್ಮದೇ ಆದ ರೀತಿಯಲ್ಲಿ ಸಮಸ್ಯೆಗಳನ್ನು ಬಿಡಿಸುವುದನ್ನು ಕಲಿಯುತ್ತಾರೆ. ಇವೆಲ್ಲ ಕಲಿಕೆಗಳಿಗೂ ಒಂದು ಕ್ರಮವಿರುವುದನ್ನು ಗಮನಿಸಬೇಕು. ಕಲಿಯುವ ಮಗು ತನ್ನ ದೈಹಿಕ ಮಾನಸಿಕ ಸಾಮರ್ಥ್ಯಗಳನ್ನು ಕಲಿಕೆಗಾಗಿ ವಿನಿಯೋಗಿಸುತ್ತದೆ; ಜೊತೆಗೆ ನಿರ್ದಿಷ್ಟ ಕಲಿಕೆಗೆ ಅಗತ್ಯವಾದ ಮಾದರಿಗಳು ಮಗುವಿಗೆ ಪರಿಸರದಲ್ಲಿ ಲಭ್ಯವಿರುತ್ತದೆ; ಕಲಿಸುವವರು ಇರುತ್ತಾರೆ. ಇವರು ಮಾದರಿಗಳನ್ನು ಒದಗಿಸುವವರೂ ಆಗಿರಬಹುದು. ತಪ್ಪುಗಳನ್ನು ತಿದ್ದುವವರೂ ಆಗಿರಬಹುದು; ಕಲಿಕೆಗೆ ಅಗತ್ಯವಾದ ತರಬೇತನ್ನು ನೀಡುವವರೂ ಆಗಿರಬಹುದು. ಈ ಕಲಿಕೆಗಳೆಲ್ಲ ಒಂದು ಕ್ರಮಬದ್ಧತೆಯನ್ನು ಅವಲಂಬಿಸಿರುತ್ತವೆ. ಹಂತಹಂತವಾಗಿ ನಡೆಯುತ್ತವೆ. ಈ ಕ್ರಮದಲ್ಲಿ ಮೊದಲ ಹಂತವನ್ನು ಕಲಿತ ಹೊರತು ಮುಂದಿನ ಹಂತವನ್ನು ಕಲಿಯುವುದು ಅಸಾಧ್ಯ ಅಥವಾ ಅಂತಹ ಕಲಿಕೆಗಳು ಅಪೂರ್ಣ ಮತ್ತು ದೋಷಯುಕ್ತವಾಗಿರುತ್ತವೆ.

ಉದಾಹರಣೆಗೆ ಈಜಲು ಕಲಿಯುವ ಮಗು ಮೊದಲು ನೀರಿನಲ್ಲಿ ತೇಲುವುದನ್ನು ಕಲಿಯಬೇಕಾಗುತ್ತದೆ. ಅನಂತರ ನೀರಿನಲ್ಲಿ ವಿವಿಧ ಬಗೆಯ ಗತಿಶೀಲ ಚಲನೆಗಳನ್ನು ಕಲಿಯಬಹುದು. ಈ ವಿವರಗಳು ಅಗತ್ಯ ಏಕೆಂದರೆ ಈ ಎಲ್ಲ ಕಲಿಕೆಗಳ ರೀತಿಗೂ ಭಾಷೆಯ ಕಲಿಕೆಗೂ ಹೊಂದಾಣಿಕೆ ಇರುವಂತಿಲ್ಲ. ಮಗುವಿಗೆ ಭಾಷೆಯನ್ನು ಯಾರೂ ಕಲಿಸುವುದಿಲ್ಲ. ಕಲಿಕೆಗೆ ಮಾದರಿಗಳನ್ನು ಒದಗಿಸುವುದಿಲ್ಲ. ಈ ಕಲಿಕೆ ನಿಯತ ಮತ್ತು ಕ್ರಮಬದ್ಧ ಎಂದು ಹೇಳಲು ಪುರಾವೆಗಳಿಲ್ಲ. ತಪ್ಪುಗಳನ್ನು ತಿದ್ದುವ ಮೂಲಕ ಕಲಿಕೆಯನ್ನು ಹೆಚ್ಚು ಪರಿಷ್ಕಾರಗೊಳ್ಳುವಂತೆ ಮಾಡುವ ಸಾಧ್ಯತೆಗಳು ಇಲ್ಲಿಲ್ಲ. ಇವೆಲ್ಲ ಸಂಗತಿಗಳಿಂದಾಗಿ ಭಾಷಾಕಲಿಕೆಯು ಇನ್ನಿತರ ಕಲಿಕೆಗಳಿಗಿಂತ ಭಿನ್ನವಾದ ನೆಲೆಯಲ್ಲಿ ನಡೆಯುತ್ತದೆ ಎಂದು ತಿಳಿಯಬೇಕಾಗುತ್ತದೆ.

ಕಳೆದ ಶತಮಾನದ ಮಧ್ಯಭಾಗದವರೆಗೂ ಮಗು ಭಾಷೆಯನ್ನು ಅನುಕರಣೆಯ ಮೂಲಕ ಕಲಿಯುತ್ತದೆ ಎಂಬ ತಿಳುವಳಿಕೆ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಪ್ರಚಾರದಲ್ಲಿತ್ತು. ಈ ತಿಳುವಳಿಕೆ ಈಗಲೂ ನಮ್ಮ ಪರಿಸರದಲ್ಲಿ ಇರುವುದನ್ನು ಯಾರಾದರೂ ಗಮನಿಸಬಹುದು. ಮಗುವಿನ ಪರಿಸರದಲ್ಲಿ ಒಂದು ಭಾಷೆಯನ್ನು ಬಳಸುವ ಬಂಧುಗಳು, ಪರಿಚಿತರೂ ಇರುತ್ತಾರೆ. ಇವರು ಮಗುವಿನ ಜೊತೆಗೆ ಇಲ್ಲವೇ ತಮ್ಮ ಪಾಡಿಗೆ ತಾವು ಭಾಷೆಯನ್ನು ಬಳಸುತ್ತಿರುತ್ತಾರೆ. ಮಗು ಈ ಬಳಕೆಯನ್ನು ಗಮನಿಸಿ ತಾನೂ ಹಾಗೆ ಮಾತನಾಡಲು, ಅವರನ್ನು ಅನುಕರಿಸಲು ಯತ್ನಿಸುತ್ತದೆ. ಇದೇ ಭಾಷಾ ಕಲಿಕೆಯ ಕ್ರಮ ಎನ್ನುವುದು ಈಗಲೂ ಭದ್ರವಾಗಿ ಬೇರೂರಿರುವ ನಂಬಿಕೆಯಾಗಿದೆ. ಆದರೆ ಕೊಂಚ ವಿವರಗಳನ್ನು ಗಮನಿಸಿದರೆ ಈ ತಿಳುವಳಿಕೆಗೆ ಆಧಾರಗಳಿಲ್ಲ ಎನ್ನುವುದು ಗೊತ್ತಾಗುತ್ತದೆ. ಭಾಷೆಯನ್ನು ಕಲಿಯಲು ಅಗತ್ಯವಾದ ಮಾದರಿಗಳು ಮಗುವಿಗೆ ಪರಿಸರದಲ್ಲಿ ದೊರಕುವುದಿಲ್ಲ. ಮಗುವಿನ ಜೊತೆಗೆ ದೊಡ್ಡವರು ಮಾತನಾಡುವುದನ್ನು ಗಮನಿಸಿ. ಮುದ್ದಾದ ನುಡಿಗಳಲ್ಲಿ ಉಚ್ಚಾರಣೆಯನ್ನು ಬದಲಾಯಿಸಿ ಮಾತನಾಡುತ್ತಿರುತ್ತಾರೆ. ಈ ಮಾತುಗಳು ಮಗುವಿಗೆ ಉತ್ತಮ ಮಾದರಿಗಳಾಗುವುದಿಲ್ಲ. ಹಾಗೆ ಅನುಕರಿಸಿ ಮಗು ಮಾತನಾಡಬೇಕು ಎಂದು ಯಾರೂ ನಿರೀಕ್ಷಿಸುವುದೂ ಇಲ್ಲ. ಮಗುವಿಗೆ ಪರಿಸರದಲ್ಲಿ ಕೇಳಸಿಗುವ ಇನ್ನಿತರ ಭಾಷಾಮಾದರಿಗಳು ತುಂಡುತುಂಡಾದ ವಾಕ್ಯಗಳಾಗಿರುತ್ತವೆ. ಅವು ಮಗುವಿನ ಗಮನಕ್ಕೆ ಬರುವ ಸಾಧ್ಯತೆಗಳು ಕೂಡ ನಿಖರವಾಗಿರುವುದಿಲ್ಲ. ಎಲ್ಲೋ ಯಾರೋ ಏನೋ ಸದ್ದು ಮಾಡುತ್ತಿರುವಂತೆ ಅನಿಸಬಹುದೇ ಹೊರತು ಭಾಷೆಯ ಕಲಿಕೆಗೆ ಅನುಕೂಲವಾದ ಮಾದರಿಗಳು ಲಭಿಸುವುದಿಲ್ಲ. ಅಲ್ಲದೆ ಹಾಗೆ ಕೇಳಿಸಿಕೊಳ್ಳುವ ಭಾಷಾರಚನೆಗಳು ಕ್ರಮಾನುಗತವಾಗಿರುವುದಿಲ್ಲ. ಅತ್ಯಂತ ಸಂಕೀರ್ಣವಾದ ರಚನೆಗಳು ಮತ್ತು ಅತಿ ಸರಳ ರಚನೆಗಳು ಒಟ್ಟೊಟ್ಟಿಗೆ ಮಗುವಿಗೆ ದೊರೆಯುತ್ತಿರುತ್ತವೆ. ಹೀಗಾಗಿ ಅನುಕರಣೆಯಿಂದ ಕಲಿಯಲು ಇದು ಸೂಕ್ತ ವಿಧಾನವಾಗುವುದಿಲ್ಲ. ಮಗುವಿನ ಭಾಷೆಯಲ್ಲಿ ನಾವು

ಒಪ್ಪದ ರಚನೆಗಳು, ಸಾಮಾನ್ಯವಾಗಿ ದೋಷಯುಕ್ತ ಎಂದು ನಾವು ತಿಳಿಯುವ ರಚನೆಗಳು ಕೇಳಿಸಿದಾಗ ಆ ತಪ್ಪನ್ನು ತಿದ್ದುವ ಪ್ರಯತ್ನವನ್ನು ಪಾಲಕರು ಮಾಡುತ್ತಾರೆ. ಆದರೆ ಪ್ರಯೋಗಗಳಿಂದ ಖಚಿತಗೊಂಡಿರುವಂತೆ ಮಗು ಈ ತಿದ್ದುಪಾಟುಗಳಿಗೆ ಗಮನವನ್ನೇ ನೀಡುವುದಿಲ್ಲ. ತಪ್ಪುಗಳನ್ನು ಮಾಡುತ್ತಲೇ ಇರುವುದು. ಕೊನೆಗೆ ಆ ತಪ್ಪು ತನ್ನಿಂದ ತಾನೇ ಸರಿ ಹೋಗುತ್ತದೆ. ಇವೆಲ್ಲ ಸಂಗತಿಗಳಿಂದ ಭಾಷಾಕಲಿಕೆಗೆ ಅನುಕರಣೆಯು ಒಂದು ಮುಖ್ಯ ಸಾಧನವೆಂಬ ತಿಳುವಳಿಕೆ ಸರಿಯಲ್ಲವೆನ್ನುವುದು ಗೊತ್ತಾಗುತ್ತದೆ.

ಹಾಗಿದ್ದಲ್ಲಿ ಮಗು ಭಾಷೆಯನ್ನು ಕಲಿಯುವುದು ಹೇಗೆ? ಮಗುವಿನ ಭಾಷಾ ಕಲಿಕೆಗೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ಮೊದಲು ಗಮನಿಸೋಣ. ಮಕ್ಕಳು ಭಾಷೆಯನ್ನು ಕಲಿಯುವ ಅವಧಿ ಬಹುಮಟ್ಟಿಗೆ ನಿಶ್ಚಿತ. ಎಲ್ಲ ಮಕ್ಕಳೂ ಯಾವುದೇ ಭಾಷೆಯನ್ನು ಯಾವುದೇ ದೇಶದಲ್ಲಿ ಕಲಿಯುತ್ತಿದ್ದರೂ ಅದೇ ವಯೋಮಾನದಲ್ಲಿ ಮಾತ್ರ ಕಲಿಯುತ್ತಾರೆ. ಮಗುವಿನಿಂದ ಮಗುವಿಗೆ ಕೆಲವು ವಾರ ತಿಂಗಳುಗಳ ಅಂತರವಿರುವುದು ಸಾಧ್ಯವಾದರೂ ಸರಾಸರಿ ವಯೋಮಾನದಲ್ಲಿ ಗಮನಿಸಬಹುದಾದ ಪಲ್ಲಟಗಳು ಕಾಣಸಿಗುವುದಿಲ್ಲ. ದೈಹಿಕ ಇಲ್ಲವೆ? ಮಾನಸಿಕ ನ್ಯೂನತೆಗಳು ಕಾರಣವಾಗಿ ಕಲಿಕೆಯು ತಡವಾಗಬಹುದು ಅಥವಾ ಅಸಾಧ್ಯವಾಗಬಹುದು. ಆದರೆ ಉಳಿದ ಸಾಮಾನ್ಯ ಸಂದರ್ಭಗಳಲ್ಲಿ ಕಲಿಯುವಿಕೆಗೂ ವಯೋಮಾನಕ್ಕೂ ನಿಕಟವಾದ ಸಂಬಂಧವಿದೆ. ಮಕ್ಕಳ ಭಾಷಾಕಲಿಕೆಯು ಕ್ರಮಬದ್ಧವಾಗಿ ಸಂಭವಿಸುವುದಿಲ್ಲ. ಅಂದರೆ ಭಾಷೆಯಲ್ಲಿ ನಾವು ತಿಳಿದಿರುವ ಸರಳ ಸಂಗತಿಗಳು ಮೊದಲು ಮಗುವಿಗೆ ದಕ್ಕಿ ಅನಂತರ ಹಂತಹಂತವಾಗಿ ಕಠಿಣವಾದ ನೆಲೆಗಳು ಸಿಗುತ್ತವೆ ಎನ್ನುವಂತಿಲ್ಲ. ಅತ್ಯಂತ ಸಂಕೀರ್ಣವಾದ ವಾಕ್ಯವೊಂದನ್ನು ಉಚ್ಚರಿಸಲು ಸಾಧ್ಯವಿರುವ ಮಗುವು ರಕಾರದ ಉಚ್ಚರಣೆಯನ್ನು ಕಲಿತಿಲ್ಲದಿರಬಹುದು. ಭಾಷಾರಚನೆಯಲ್ಲಿ ನಾವು ಗುರುತಿಸುವ ಹಂತಗಳಿಗೂ ಮಗುವಿನ ಭಾಷಾಕಲಿಕೆಯ ಹಂತಗಳಿಗೂ ಸಂಬಂಧವಿಲ್ಲ. ಉದಾಹರಣೆಗೆ ಧ್ವನಿಗಳು, ಪದಗಳು ಮತ್ತು ವಾಕ್ಯಗಳು ಎಂಬ ಸ್ತರಗಳನ್ನು ನಾವು ಗುರುತಿಸುತ್ತೇವೆ. ಆದರೆ ಮಕ್ಕಳು ಈ ಅನುಕ್ರಮದಲ್ಲಿ ಭಾಷೆಯನ್ನು ಕಲಿಯುವುದಿಲ್ಲ. ಮಗುವಿನ ಭಾಷಾಕಲಿಕೆಯನ್ನು ಅಧ್ಯಯನ ಮಾಡುವವರಿಗೆ ಅಲ್ಲಿ ಭಾಷಾರಚನೆಯ ಯಾವುದೇ ಅನುಕ್ರಮದ ಪಾಲನೆಗೆ ನಿದರ್ಶನಗಳು ದೊರಕುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾದ ಸಂಗತಿಯೊಂದಿದೆ. ಮಗು ವ್ಯಾಕರಣದ ನಿಯಮಗಳನ್ನು ಹೇಗೆ ಕಲಿತುಕೊಳ್ಳುತ್ತದೆ ಎಂಬುದು ಅನುಕರಣೆಯ ವಿವರಣೆಯಿಂದ ಗೊತ್ತಾಗುವುದಿಲ್ಲ. ಭಾಷೆ ಎಂದರೆ ಕೇವಲ ಉತ್ಪಾದಿತ ವಾಕ್ಯ, ಪದಗಳು ಮಾತ್ರವಲ್ಲ. ನಿರಂತರವಾಗಿ ಈವರೆಗೆ ಬಳಸದಿರುವ ಅಸಂಖ್ಯಾತ ರಚನೆಗಳನ್ನು ಉತ್ಪಾದಿಸಲು ನೆರವಾಗುವ ನಿಯಾಮಾವಳಿಯನ್ನು ಮಗು ಕಲಿಯುತ್ತದೆ. ಈ

ನಿಯಮಗಳನ್ನು ಯಾರೂ ಹೇಳಿಕೊಡುವುದಿಲ್ಲ. ಲಭ್ಯವಿರುವ ಮಾಹಿತಿಯಿಂದ ನಿಯಮಗಳನ್ನು ರೂಪಿಸುವ ಸಾಮರ್ಥ್ಯ ಮಗುವಿಗೆ ಎಲ್ಲಿಂದ ದೊರಕುತ್ತದೆ?

ಈ ಸಂಗತಿಗಳನ್ನು ಗಮನಿಸಿದರೆ ಮಗುವಿನಲ್ಲಿ ಭಾಷೆಯ ಕಲಿಕೆಯನ್ನು ಪ್ರೇರೇಪಿಸುವ, ಅದಕ್ಕೆ ಅನುವು ಮಾಡಿಕೊಡುವ ಸಾಮಾನ್ಯ ಕಲಿಕೆಯ ಸಾಮರ್ಥ್ಯಕ್ಕಿಂತ ಭಿನ್ನವಾದ ನೆಲಯೊಂದು ಅಂತಸ್ಥವಾಗಿರುತ್ತದೆಂದು ಊಹಿಸಲು ಅವಕಾಶವಿದೆ. ಈ ಸಾಮರ್ಥ್ಯವು ಮಗುವಿನಲ್ಲಿ ನಿರ್ದಿಷ್ಟ ಕಾಲಾವಧಿಯಲ್ಲಿ ಜಾಗ್ರತವಾಗಿದ್ದು ಭಾಷಾ ಕಲಿಕೆಗೆ ಅನುವು ಮಾಡಿಕೊಡುತ್ತದೆ ಭಾಷೆಯ ನಿಯಮಗಳ ನೆಲೆಯನ್ನು ಮಗುವೇ ರೂಪಿಸಿಕೊಳ್ಳಬಲ್ಲುದು ಎಂಬ ವಾದವನ್ನು ಹೂಡಬಹುದಾದರೂ ಆ ಬಗೆಯ ತಾರ್ಕಿಕ ಸಾಧ್ಯತೆಯು ಮಗುವಿನಲ್ಲಿ ಆ ವಯೋಮಾನದಲ್ಲಿ ರೂಪುಗೊಂಡಿರುವುದಕ್ಕೆ ಪುರಾವೆಗಳಿಲ್ಲ. ಹಾಗಾಗಿ ನಿಯಮಗಳು ಮಗುವಿನಲ್ಲಿ ರೂಪುಗೊಳ್ಳುವ ಸಾಧ್ಯತೆಯನ್ನು ನಾವು ಕೈ ಬಿಡಬೇಕಾಗುತ್ತದೆ. ಅದರ ಬದಲು ಎಲ್ಲ ಭಾಷೆಗಳಿಗೂ ಅನ್ವಯವಾಗುವ ವಿವಿಧ ನಿಯಮಗಳ ಸರಣಿಯೊಂದು ಮಗುವಿನಲ್ಲಿ ಮೊದಲೇ ಅಂತಸ್ಥವಾಗಿದ್ದು ಆ ಸರಣಿಯಲ್ಲಿ ತಾನು ಪಡೆದುಕೊಳ್ಳುತ್ತಿರುವ ಭಾಷೆಗೆ ಸಂಬಂಧಿಸಿದ ನಿಯಮವನ್ನು ಮಗು ಆಯ್ಕೆ ಮಾಡಿಕೊಳ್ಳುತ್ತದೆ ಎಂದು ತಿಳಿಯುವುದು ಹೆಚ್ಚು ಸಂಭಾವ್ಯ.

ಶಿಕ್ಷಣದಲ್ಲಿ ಕನ್ನಡ

ಈಗ ಅತಿ ತೀವ್ರತೆಯಿಂದ ನಡೆಯುತ್ತಿರುವ ಚರ್ಚೆ ಈ ವಲಯಕ್ಕೆ ಸೇರಿದೆ. ಕನ್ನಡ ಮತ್ತು ಶಿಕ್ಷಣವಲಯಗಳ ಸಂಬಂಧದಲ್ಲಿ ಎರಡು ನೆಲೆಗಳಿವೆ. ಒಂದು: ಶಿಕ್ಷಣದ ವಿಷಯವಾಗಿ ಕನ್ನಡ ಮತ್ತು ಎರಡು: ಶಿಕ್ಷಣ ಮಾಧ್ಯಮವಾಗಿ ಕನ್ನಡ.

ಕನ್ನಡವನ್ನು ಕಲಿಕೆಯ ವಿಷಯಗಳಲ್ಲಿ ಒಂದಾಗಿ ಪರಿಗಣಿಸಿದ್ದು ಬಹಳ ಹಳೆಯ ಸಂಗತಿಯಾಗಿದೆ. ಕನ್ನಡವನ್ನು ಮಾತನಾಡುತ್ತಿದ್ದವರಿಗೆ ಕನ್ನಡ ಬರೆವಣಿಗೆಯನ್ನು ಕಲಿಸುವುದು ಮತ್ತು ಆಯಾ ಕಾಲದ ಪ್ರಮಾಣರೂಪದ ಬಳಕೆಯಲ್ಲಿ ತರಬೇತನ್ನು ಕೊಡುವುದು ಈ ಕಲಿಕೆಯ ಉದ್ದೇಶ. ಭಾಷೆಯ ಕಲಿಕೆಯ ತತ್ತ್ವಗಳಿಗೂ ಈ ಶಿಕ್ಷಣ ಕ್ರಮಕ್ಕೂ ಯಾವ ಸಂಬಂಧವೂ ಇರುವುದು ಅಗತ್ಯವಿಲ್ಲ. ಏಕೆಂದರೆ ಹೀಗೆ ಕನ್ನಡವನ್ನು ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಈಗಾಗಲೇ ಕನ್ನಡವನ್ನು ಕಲಿತಿರುತ್ತಾರೆ. ಆ ಭಾಷೆಯ ಬಳಕೆಯ ಸಾಮರ್ಥ್ಯ ಅವರಿಗೆ ಒದಗಿರುತ್ತದೆ. ಅದರ ಬರೆವಣಿಗೆಯ, ಓದಿನ ಸಾಮರ್ಥ್ಯವನ್ನು ಗಳಿಸಿಕೊಳ್ಳಲು ಈ ಶೈಕ್ಷಣಿಕ ಪ್ರಕ್ರಿಯೆಗೆ ಅವರು ಒಳಗಾಗುತ್ತಿರುತ್ತಾರೆ.

ಆದರೆ ಶಾಲಾಶಿಕ್ಷಣದ ವಿಕಾಸದ ಹಂತದಲ್ಲಿ ಕನ್ನಡವನ್ನು ಮೊದಲ ಭಾಷೆಯನ್ನಾಗಿ ಹೊಂದಿರದ ವಿದ್ಯಾರ್ಥಿಗಳು ಅದರ ತೆಕ್ಕೆಗೆ ಬಂದರು. ಇವರಿಗೆ ಕನ್ನಡವನ್ನು ಎರಡನೆಯ ಭಾಷೆಯನ್ನಾಗಿ ಕಲಿಸುವ ಅಗತ್ಯ ಉಂಟಾಯಿತು. ಈ ವಿದ್ಯಾರ್ಥಿಗಳಿಗೆ ಕನ್ನಡ

ಭಾಷಾಸಾಮರ್ಥ್ಯ ಇರುವುದು ಅಥವಾ ಇಲ್ಲದಿರುವುದು ನಮ್ಮ ಶಿಕ್ಷಣ ತಜ್ಞರಿಗೆ ಮುಖ್ಯ ಸಂಗತಿಯಾಗಿ ತೋರಲಿಲ್ಲ. ಏಕೆಂದರೆ ಈ ಗುಂಪಿನಲ್ಲಿ ಸೇರುವ ಎಷ್ಟೋ ವಿದ್ಯಾರ್ಥಿಗಳು ಕನ್ನಡವನ್ನು ಎರಡನೆಯ ಭಾಷೆಯನ್ನಾಗಿ ಶಾಲೆಯ ಹೊರಗೆ ಕಲಿತು ಬಳಸುವವರೇ ಆಗಿರುತ್ತಾರೆ. ಅವರು ಕನ್ನಡದ ಬರೆವಣಿಗೆ ಮತ್ತು ಪ್ರಮಾಣ ಕನ್ನಡದ ರೂಪ ಇವುಗಳನ್ನು ಕಲಿಯುವ ಗುರಿಯನ್ನು ಹೊಂದಿರುತ್ತಾರೆ. ಈ ಗುಂಪಿನಲ್ಲಿ ಕನ್ನಡವನ್ನು ಶಾಲೆಯಲ್ಲೇ ಎರಡನೆಯ ಭಾಷೆಯನ್ನಾಗಿ ಕಲಿಯುವ ಮಕ್ಕಳು ಇರುವುದಿಲ್ಲವೆಂದಲ್ಲ. ಅವರು ಕನ್ನಡದ ಎಲ್ಲ ಕೌಶಲಗಳನ್ನೂ ಶಾಲೆಯ ಆವರಣದಲ್ಲೇ ಕಲಿಯಬೇಕಾಗುತ್ತದೆ. ಅಂದರೆ ಕನ್ನಡವನ್ನು ಮೊದಲ ಭಾಷೆಯನ್ನಾಗಿ ಹೊಂದಿಲ್ಲದ ವಿದ್ಯಾರ್ಥಿಗಳಲ್ಲಿ ಇರುವ ಈ ವಿಕಲ್ಪಗಳು ನಮ್ಮ ಕನ್ನಡ ಬೋಧನೆಯ ಸ್ವರೂಪವನ್ನು ಬದಲಾಯಿಸಬೇಕಿತ್ತು. ಅದರೆ ಹಾಗಾಗಿಲ್ಲ. ಬ್ರಿಟಿಶರು ರೂಪಿಸಿದ ದ್ವಿತೀಯ ಭಾಷಾ ಬೋಧನೆಯ ಸೂತ್ರಗಳನ್ನೇ ನಾವು ಈಗಲೂ ಶಾಲೆಯಲ್ಲಿ ವ್ರತವೆಂಬಂತೆ ಪಾಲಿಸುತ್ತಿದ್ದೇವೆ.

ನಮ್ಮ ಶಿಕ್ಷಣ ಕ್ರಮದಲ್ಲಿ ಎಷ್ಟು ಭಾಷೆಗಳನ್ನು ಎಷ್ಟು ಪ್ರಮಾಣದಲ್ಲಿ ಮತ್ತು ಯಾವ ಯಾವ ಹಂತದಲ್ಲಿ ಕಲಿಸಬೇಕು ಎಂಬ ಬಗ್ಗೆ ನಡೆದಿರುವ ಪ್ರಯೋಗಗಳ ಸಂಖ್ಯೆ ಅಧಿಕವಾಗಿದೆ. ಅದಕ್ಕೆ ಹೋಲಿಸಿದರೆ ಶಿಕ್ಷಣದಲ್ಲಿ ಕಲಿಕೆಯ ವಿಧಾನವನ್ನು ಬದಲಾಯಿಸಲು ನಡೆಸಿರುವ ಪ್ರಯೋಗಗಳು ತುಂಬಾ ಕಡಿಮೆಯಾಗಿವೆ. ಈಗ ಕನ್ನಡವನ್ನು ಕನ್ನಡದ ಮಕ್ಕಳು ಕಲಿಯುತ್ತಿಲ್ಲ ಎನ್ನುವ ಆತಂಕ ಹೆಚ್ಚಾಗುತ್ತಿದೆ. ಮನೆಯಲ್ಲಿ ಕನ್ನಡವನ್ನು ಬಳಸುವ ಮಕ್ಕಳು ಶಾಲಾಶಿಕ್ಷಣದಲ್ಲಿ ಒಂದೋ ಕನ್ನಡದ ಬರೆವಣಿಗೆ ಮತ್ತು ಪ್ರಮಾಣ ರೂಪಗಳ ಪರಿಚಯವನ್ನು ಪಡೆಯದೇ ಹೋಗುತ್ತಾರೆ ಅಥವಾ ಹಾಗೆ ಪಡೆದರೂ ಅದು ಕೇವಲ ಔಪಚಾರಿಕವಾಗಿದ್ದು ಶಾಲಾಶಿಕ್ಷಣದ ಅನಂತರದಲ್ಲಿ ಅದು ಸಂಪೂರ್ಣವಾಗಿ ನಿರುಪಯುಕ್ತವಾಗುತ್ತದೆ.

ಕನ್ನಡದ ಮಕ್ಕಳು ಕಲಿಕೆಗೆ ಎರವಾಗುತ್ತಿರುವ ಈ ಸನ್ನಿವೇಶಕ್ಕೆ ಇರುವ ಬಲವಾದ ಕಾರಣ ನಮ್ಮ ಶಿಕ್ಷಣವೇತ್ತರು ಭಾಷಾಕಲಿಕೆಯ ಬಗೆಗೆ ಹೊಂದಿರುವ ಸಿದ್ಧಾಂತದಲ್ಲಿದೆ. ಕಲಿಕೆ ಎನ್ನುವ ವಿಷಯದ ವ್ಯಾಪ್ತಿಯಲ್ಲಿ ಎಲ್ಲವನ್ನೂ ತಂದು ಸೇರಿಸುವ ಈ ಸಿದ್ಧಾಂತದಲ್ಲಿ ಭಾಷಾಕಲಿಕೆಯ ಸ್ವರೂಪದ ಬಗೆಗೆ ಯಾವ ವಿಶಿಷ್ಟವಾದ ನೆಲೆಗಳೂ ಕಾಣಸಿಗುವುದಿಲ್ಲ. ಗೊತ್ತಿಲ್ಲದ ಸಾಮರ್ಥ್ಯವನ್ನು ಪಡೆದುಕೊಳ್ಳುವುದು ಎಲ್ಲ ಕಲಿಕೆಗಳ ಮೂಲ ಉದ್ದೇಶ. ಆದರೆ ಭಾಷಾಕಲಿಕೆ ಎನ್ನುವುದು ಗೊತ್ತಿಲ್ಲದ ಸಾಮರ್ಥ್ಯದ ಗಳಿಕೆಯಲ್ಲ. ಓದು ಬರೆವಣಿಗೆಗೆ ಸಂಬಂಧಿಸಿದಂತೆ ಈ ಮಾತು ನಿಜವಾದುದಾದರೂ ಪ್ರಾಥಮಿಕ ಕೌಶಲಗಳಾದ ಮಾತಾಡುವುದು ಮತ್ತು ಕೇಳಿ ತಿಳಿದುಕೊಳ್ಳುವುದು ಈಗಾಗಲೇ ಕಲಿಯುವವರ ಸಾಮರ್ಥ್ಯದ ಭಾಗವಾಗಿರುತ್ತದೆ. ಈ ಕೌಶಲಗಳನ್ನು ನಮ್ಮ ಶಿಕ್ಷಣ ಕ್ರಮದಲ್ಲಿ ಹೇಗೆ ನಿರ್ವಹಿಸಬೇಕು ಎಂಬುದು ಅತ್ಯಂತ ಗೊಂದಲದ ವಿಷಯವಾಗಿದೆ.

ಇದೂ ಅಲ್ಲದೆ ಭಾಷಾಕಲಿಕೆ ಅಥವಾ ಬೋಧನೆಯ ಬಗ್ಗೆ ಬ್ರಿಟಿಶರು ರೂಪಿಸಿದ ನೀತಿಗೆ ಚಾರಿತ್ರಿಕವಾದ ಕಾರಣಗಳಿವೆ. ಅವರ ಗಮನದಲ್ಲಿದ್ದುದು ಇಂಗ್ಲಿಶ್ ಕಲಿಕೆ. ಹಾಗೆ ಇಂಗ್ಲಿಶ್ ಭಾಷೆಯನ್ನು ಕಲಿಯುತ್ತಿದ್ದ ಭಾರತೀಯರಲ್ಲಿ ಯಾರಿಗೂ ಅದು ಮೊದಲ ಭಾಷೆಯಾಗಿರಲಿಲ್ಲ. ಹಾಗಾಗಿ ಎರಡನೆಯ ಭಾಷೆಯ ಬೋಧನೆ ಮತ್ತು ಕಲಿಕೆ ಸಂಬಂಧಿಸಿದ ರೀತಿರಿವಾಜುಗಳನ್ನು, ತಾತ್ತ್ವಿಕ ಚೌಕಟ್ಟುಗಳನ್ನು ಇಂಗ್ಲಿಶ್ ಕಲಿಕೆಯಲ್ಲಿ ಬಳಸುವುದು ಅವರಿಗೆ ಅಗತ್ಯವಾಗಿತ್ತು. ಆದರೆ ದೇಶೀಯ ಭಾಷೆಗಳ ವಿಷಯದಲ್ಲೂ ಇದೇ ಮಾದರಿಗಳನ್ನು ಮುಂದುವರೆಸಲು ಯಾವ ಕಾರಣಗಳೂ ಇರಲಿಲ್ಲ. ಆದರೆ ನಾವು ಕಣ್ಮುಚ್ಚಿ ಅದೇ ಮಾದರಿಯನ್ನು ಈಗಲೂ ಅವಲಂಬಿಸಿ ನಡೆದಿದ್ದೇವೆ. ಇದರಿಂದ ಕನ್ನಡದ ಕಲಿಕೆಗೆ ಹಿನ್ನಡೆಯುಂಟಾಗಿದೆ. ಶ್ರಮದ ಅಪವ್ಯಯವಾಗುತ್ತಿದೆ. ಅಪೇಕ್ಷಿತ ಪರಿಣಾಮಗಳು ಆಗುತ್ತಿಲ್ಲ.

ಎಷ್ಟು ಭಾಷೆಗಳನ್ನು ಕಲಿಸಬೇಕು?

ಶಾಲೆಯಲ್ಲಿ ಮಕ್ಕಳಿಗೆ ಎಷ್ಟು ಭಾಷೆಗಳನ್ನು ಕಲಿಸಬೇಕು? ಈ ಪ್ರಶ್ನೆಗೆ ಉತ್ತರ ನೀಡಲು ಮಕ್ಕಳಿಗೆ ಎಷ್ಟು ಭಾಷೆಗಳು ಬೇಕು ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಬೇಕಾಗುತ್ತದೆ. ಆದರೆ ಬಹುಮಟ್ಟಿಗೆ ಶಿಕ್ಷಣದಲ್ಲಿ ಭಾಷೆಗಳ ಸಂಖ್ಯೆಯ ಆಯ್ಕೆಯು ಮಕ್ಕಳ ಅಗತ್ಯವನ್ನು ಅವಲಂಬಿಸುವುದಕ್ಕಿಂತ ಹೆಚ್ಚಾಗಿ ರಾಜಕೀಯ ಅಗತ್ಯಗಳನ್ನು, ಒತ್ತಡಗಳನ್ನು ಅವಲಂಬಿಸಿದೆ. ಕನಿಷ್ಠ ಮೂರು ಭಾಷೆಗಳನ್ನು ಮಕ್ಕಳು ಶಾಲಾಶಿಕ್ಷಣದ ವಿವಿಧ ಹಂತಗಳಲ್ಲಿ ಕಲಿಯುವ ಪರಿಸ್ಥಿತಿ ಈಗ ನಮ್ಮಲ್ಲಿ ಇದೆ. ಈ ಸಂದರ್ಭವು ರಾಜಕೀಯ ಕಾರಣಗಳಿಂದಾಗಿ ರೂಪುಗೊಂಡಿದೆ. ಭಾಷೆಯ ಕಲಿಕೆಯ ಹಿಂದಿರುವ ತಾತ್ತ್ವಿಕತೆಯನ್ನು ಸರಿಯಾಗಿ ಅರಿಯದೇ ಹೋಗಿರುವುದರಿಂದಾಗಿ ಅತ್ಯಂತ ಗೊಂದಲದ ಸಂದರ್ಭವೊಂದು ನಮ್ಮ ಶಿಕ್ಷಣ ವಲಯದಲ್ಲಿ ಉಂಟಾಗಿದೆ. ಮಕ್ಕಳು ಶಾಲೆಯಲ್ಲಿ ಕಲಿಯುವ ಭಾಷೆಗಳಲ್ಲಿ ಒಂದು ಆ ಮಗುವಿನ ಮೊದಲ ಭಾಷೆಯಾಗಿರುತ್ತದೆ. ಆದರೆ ಕನ್ನಡದ ಸಂದರ್ಭದಲ್ಲಿ ಈ ಮಾತು ಪೂರ್ಣ ನಿಜವಲ್ಲ. ಬಹುಪಾಲು ಮಕ್ಕಳು ತಮ್ಮ ಮೊದಲ ಭಾಷೆಯನ್ನು ಶಾಲಾಶಿಕ್ಷಣದ ಹಂತದಲ್ಲಿ ಕಲಿಯುವುದೇ ಇಲ್ಲ. ಕನ್ನಡವನ್ನು ಬಿಟ್ಟು ಬೇರೆಯ ಭಾಷೆಯನ್ನಾಡುವ ಮಕ್ಕಳು ಹಲವರು ಹೀಗೆ ತಮ್ಮ ಮೊದಲ ಭಾಷೆಯನ್ನು ಶಾಲಾಶಿಕ್ಷಣದ ಹಂತದಲ್ಲಿ ಬಿಟ್ಟುಕೊಡುತ್ತಾರೆ. ಹಾಗೆಯೇ ಎಷ್ಟೋ ಮಕ್ಕಳು ಕನ್ನಡ ಅವರ ಮೊದಲ ಭಾಷೆಯಾಗಿದ್ದರೂ ಅದನ್ನು ಶಾಲಾಶಿಕ್ಷಣದ ಹಂತದಲ್ಲಿ ಕಲಿಯದೇ ಇರಬಹುದು. ಇದರಿಂದ ಎರಡು ಪರಿಣಾಮಗಳಾಗುತ್ತಿವೆ. ಮೊದಲನೆಯದು: ಮಕ್ಕಳು ಭಾಷಾ ಕಲಿಕೆಯಿಂದ ವಂಚಿತರಾಗುತ್ತಿದ್ದಾರೆ. ಎರಡನೆಯದು: ಹಲವು ಸಾಮಾಜಿಕ ಕಾರಣಗಳಿಂದಾಗಿ ಮಕ್ಕಳು ತಮ್ಮ ಅಗತ್ಯಕ್ಕೆ ಮೀರಿದ ಸಂಖ್ಯೆಯ ಭಾಷೆಗಳನ್ನು ಮತ್ತು ತಮಗೆ ಅಗತ್ಯವಿಲ್ಲದ ಭಾಷೆಗಳನ್ನು ಕಲಿಯುವ ಸನ್ನಿವೇಶ ಈಗ ಉಂಟಾಗಿದೆ. ಈ ಪರಿಸ್ಥಿತಿಗೆ ಮಕ್ಕಳು ಅಥವಾ ಅವರ ಪೋಷಕರು ಮಾಡಿಕೊಳ್ಳುವ ಆಯ್ಕೆಯೇ ಕಾರಣವಾಗಿರುತ್ತದೆ.

ಮೊದಲ ಭಾಷೆಯನ್ನು ಶಾಲಾ ಶಿಕ್ಷಣದಲ್ಲಿ ಕಲಿಯುವ ಜತೆಗೆ ಅನ್ಯ ಭಾಷೆಗಳನ್ನು ಹೊಸದಾಗಿ ಕಲಿಯುವ ಸಂದರ್ಭವನ್ನು ಗಮನಿಸೋಣ. ಮೊದಲ ಭಾಷೆ ಮಕ್ಕಳಿಗೆ ಆಗಲೇ ಗೊತ್ತಿರುತ್ತದೆ. ಆ ಭಾಷೆಯ ಪ್ರಾಥಮಿಕ ಕೌಶಲಗಳು ಅವರಿಗೆ ಗೊತ್ತಿರುತ್ತವೆ. ಗೌಣ ಕೌಶಲಗಳನ್ನು ಕಲಿಯುವುದು ಅವರ ಗುರಿಯಾಗಿರುತ್ತದೆ. ಆದರೆ ಎರಡನೆಯ ಅಥವಾ ಮೂರನೆಯ ಭಾಷೆಗಳ ವಿಷಯ ಹಾಗಲ್ಲ. ಆ ಭಾಷೆಗಳ ಪ್ರಾಥಮಿಕ ಕೌಶಲಗಳನ್ನೂ ಅವರು ಶಾಲೆಯಲ್ಲೇ ಕಲಿಯಬೇಕಾಗಿರುತ್ತದೆ. ಹೀಗೆ ವಿಭಿನ್ನ ಉದ್ದೇಶಗಳು ಭಾಷಾಕಲಿಕೆಯ ಸಂದರ್ಭದಲ್ಲಿ ಅಡಕಗೊಂಡಿರುತ್ತವೆ. ಆದರೆ ಕಲಿಕೆಯ ಇಂದಿನ ತಾತ್ತ್ವಿಕತೆ ಈ ಅಂಶವನ್ನು ಬಹುಪಾಲು ಗಮನಕ್ಕೆ ತಂದುಕೊಳ್ಳುವುದಿಲ್ಲ. ಎಲ್ಲ ಭಾಷೆಗಳಿಗೂ ಒಂದೇ ವಿಧಾನವನ್ನು ಅನುಸರಿಸುವುದನ್ನು ನಾವು ಗಮನಿಸಬಹುದು.

ನಿರ್ದಿಷ್ಟ ವಯೋಮಾನದವರೆಗೆ ಒಂದಕ್ಕಿಂತ ಹೆಚ್ಚು ಭಾಷೆಗಳ ಪ್ರಾಥಮಿಕ ಕೌಶಲಗಳನ್ನು ಕಲಿಯುವುದು ಮಕ್ಕಳಿಗೆ ತೊಂದರೆಯ ಸಂಗತಿಯಲ್ಲ. ಆದ್ದರಿಂದ ಇದು ಮಕ್ಕಳಿಗೆ ಒತ್ತಾಯವನ್ನು ರೂಪಿಸುವ ಸಂಗತಿಯಾಗಿದೆ ಎಂದು ವಾದಿಸಲು ಬರುವುದಿಲ್ಲ. ಆದರೆ ಕಲಿಕೆಯ ವಿಧಾನಗಳನ್ನು ಯೋಗ್ಯ ರೀತಿಯಲ್ಲಿ ಅನುಸರಿಸದೇ ಇರುವುದರಿಂದ ಉಂಟಾಗುವ ಒತ್ತಡಗಳಿಗೆ ಮಕ್ಕಳು ಒಳಗಾಗುತ್ತಿದ್ದಾರೆ. ಮಕ್ಕಳ ಮೆದುಳಿನಲ್ಲಿ ಭಾಷಾಕಲಿಕೆಗೆ ಅನುವು ಮಾಡಿಕೊಡುವ ಹುಟ್ಟಿನಿಂದಲೇ ಬಂದಿರುವ ಸೌಲಭ್ಯವೊಂದಿದೆ. ಇದು ಭಾಷೆಯ ಕಲಿಕೆಗೆ ನೆರವಾಗುವ ವ್ಯವಸ್ಥೆಯಾಗಿದೆ. ನಮಗೀಗ ಲಭ್ಯವಿರುವ ಅಧ್ಯಯನ ಮಾಹಿತಿಗಳ ಪ್ರಕಾರ ಈ ವ್ಯವಸ್ಥೆಯ ನೆರವಿನಿಂದ ನಡೆಯುವ ಕಲಿಕೆಯು ಇತರ ಕಲಿಕೆಗಳಿಗಿಂತ ಭಿನ್ನವಾಗಿರುತ್ತದೆ. ಈ ಅಂಶವನ್ನು ನಮ್ಮ ಶಾಲಾ ಭಾಷಾಕಲಿಕೆಯ ವಿಧಾನಗಳು ಅನುಸರಿಸುತ್ತಿಲ್ಲ. ಎಲ್ಲ ಕಲಿಕೆಯ ಸ್ವರೂಪವೂ ಒಂದೇ ಆಗಿರುತ್ತದೆ ಎನ್ನುವುದೇ ನಿಯಮವಾದಂತಿದೆ.

ಕನ್ನಡದ ಒಂದು ಪ್ರಮಾಣರೂಪವನ್ನು ಕಲಿಸಲು ಶಿಕ್ಷಣಕ್ರಮದಲ್ಲಿ ಪ್ರಯತ್ನಿಸಲಾಗುತ್ತದೆ. ಈ ಪ್ರಮಾಣರೂಪದ ಧ್ವನಿರಚನೆ, ಪದರಚನೆ ಮತ್ತು ಪದಕೋಶಗಳು ಕನ್ನಡದ ಹಲವು ಉಪಭಾಷೆಗಳಿಗಿಂತ ಭಿನ್ನವಾಗಿದೆ. ಕಲಿಕೆಯಲ್ಲಿ ಈ ವ್ಯತ್ಯಾಸದ ಪರಿಣಾಮವೇನು ಎಂಬುದು ಒಂದು ಮುಖ್ಯ ಪ್ರಶ್ನೆಯಾಗಿದೆ. ಅಲ್ಲದೆ ಈ ವ್ಯತ್ಯಾಸವು ಕೇವಲ ವಿವರಣೆಯ ಹಂತದಲ್ಲಿ ಮಾತ್ರ ಉಳಿದಿಲ್ಲ. ಪ್ರಭೇದಗಳ ನಡುವೆ ತರತಮಭಾವವನ್ನು, ಸಾಮಾಜಿಕ ನೆಲೆಯಲ್ಲಿ ಪರಿಗ್ರಹಿಸುವ ಪ್ರವೃತ್ತಿಯೂ ಇದೆ. ಅಂದರೆ ಪ್ರಮಾಣ ಕನ್ನಡದ ಕೌಶಲಗಳನ್ನು ಬಳಸುವುದು ಸಾಮಾಜಿಕವಾಗಿ ಹೆಚ್ಚು ಗೌರವವನ್ನು ತಂದು ಕೊಡುವ ಹಾಗೆ ಅದನ್ನುಳಿದ ಇತರ ಪ್ರಭೇದಗಳನ್ನು, ಕೊನೆಯ ಪಕ್ಷ ಅವುಗಳಲ್ಲಿ ಹಲವು ಪ್ರಭೇದಗಳನ್ನು ಬಳಸುವುದು ಸಾಮಾಜಿಕ ಅವಹೇಳನಕ್ಕೆ ಅಥವಾ ತಿರಸ್ಕಾರಕ್ಕೆ ಕಾರಣವಾಗುತ್ತಿದೆ. ಕೆಲವೊಮ್ಮೆ ಹೀಗೆ ಪ್ರಭೇದಗಳನ್ನು ಬಳಸುವುದು

ಸ್ಥಿರೀಕೃತ ಪ್ರತಿಕ್ರಿಯೆಗೆ ಕಾರಣವಾಗುತ್ತಿದೆ. ಈ ಕೆಲವು ಪ್ರಭೇದಗಳನ್ನು ಬಳಸುವ ಮೂಲಕ ವ್ಯಕ್ತಿಯ ಸಾಮಾಜಿಕ ನೆಲೆಗಳನ್ನು, ಗುಣಸ್ವಭಾವಗಳನ್ನು ಊಹಿಸುವ ಪ್ರವೃತ್ತಿಯೂ ಕನ್ನಡ ಸಮಾಜದಲ್ಲಿದೆ. ಈ ಎಲ್ಲ ಕಾರಣಗಳಿಂದ ಶಿಕ್ಷಣ ಕ್ರಮವು ಕನ್ನಡದ ಪ್ರಭೇದಗಳನ್ನು ತನ್ನ ವ್ಯಾಪ್ತಿಯಿಂದ ಹೊರಗಿಟ್ಟಿರುವುದು ಎಷ್ಟರ ಮಟ್ಟಿಗೆ ಸರಿ ಎನ್ನುವುದು ಒಂದು ಮುಖ್ಯ ಪ್ರಶ್ನೆಯಾಗಿದೆ.

ಕನ್ನಡದ ಪ್ರಭೇದಗಳನ್ನು ನಿರಾಕರಿಸುವ ಮೂಲಕ ಸಾಮಾಜಿಕವಾಗಿ ಉಂಟಾಗಿರುವ ಪರಿಣಾಮಗಳು ಕೆಲವಿವೆ. ಇದರ ಜೊತೆಗೆ ಕನ್ನಡದ ಪದಕೋಶಕ್ಕೆ ಅಗತ್ಯವಾಗಿ ಸೇರ್ಪಡೆಯಾಗಬೇಕಿದ್ದ ನೂರಾರು ಪದಗಳು ಕನ್ನಡದಿಂದ ಮರೆಯಾಗುತ್ತಿವೆ. ಇದೊಂದು ದೊಡ್ಡ ಕೊರತೆ ಎಂದೇ ಪರಿಗಣಿಸಬೇಕು. ಅಲ್ಲದೆ ಪ್ರಭೇದಗಳ ಸ್ವರೂಪವನ್ನು ಅರಿಯದ ಹೊರತು ಕನ್ನಡ ರಚನೆಯ ಎಲ್ಲ ಲಕ್ಷಣಗಳೂ ನಮ್ಮ ಗಮನಕ್ಕೆ ಬರುವುದು ಸಾಧ್ಯವಾಗುವುದಿಲ್ಲ. ಎಷ್ಟೋ ಪ್ರಭೇದಗಳು ತಮ್ಮಲ್ಲಿ ಅಂಶಿಕವಾಗಿ ಕನ್ನಡ ಭಾಷಾ ರಚನೆಯ ನಿಯಮಗಳನ್ನು ಬೇರೆ ಬೇರೆ ರೀತಿಯಲ್ಲಿ ಬಳಸುತ್ತಿರುತ್ತವೆ. ಈ ಅಂಶ ಭಾಷಾಅಧ್ಯಯನಕಾರರಿಗೆ ಮತ್ತು ಬಳಕೆದಾರರಿಗೆ ಗೊತ್ತಿರಬೇಕಾದುದು ಅಗತ್ಯ.

ಶಾಲೆಗಳಲ್ಲಿ ಕನ್ನಡ: ಹೈಕೋರ್ಟ್ ತೀರ್ಪು

ಕರ್ನಾಟಕ ರಾಜ್ಯದ ಹೈಕೋರ್ಟ್ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷಾಮಾಧ್ಯಮವನ್ನು ಜಾರಿಗೆ ಕೊಡುವ ಬಗೆಗೆ ರಾಜ್ಯ ಸರಕಾರ ನೀಡಿದ್ದ 1994 ರ ಆದೇಶವನ್ನು ಅನೂರ್ಜಿತಗೊಳಿಸಿದೆ. ಸರಕಾರದ ಶಿಕ್ಷಣ ನೀತಿ ಮತ್ತು ಭಾಷಾನೀತಿಗಳಲ್ಲಿ ಇರುವ ಹೊಂದಾಣಿಕೆಯಿಲ್ಲದ ನೆಲೆಗಳಿಂದಾಗಿ ಈ ಬಗೆಯ ಕಾನೂನು ಕದನಗಳಿಗೆ ಕೊನೆಯೇ ಇಲ್ಲವೆಂದು ತೋರುತ್ತದೆ. ಹೈಕೋರ್ಟ್ ತೀರ್ಪಿನ ಒಟ್ಟು ಸಾರಾಂಶ ನಮಗೀಗ ಗೊತ್ತಿದೆ. ಆದರೆ ಸರಕಾರ ತನ್ನ ಆದೇಶದ ಸಮರ್ಥನೆಗೆ ಮಂಡಿಸಿದ ವಾದ ಮತ್ತು ನ್ಯಾಯಪೀಠ ಆ ವಾದವನ್ನು ಒಪ್ಪದೇ ಇರಲು ಇರುವ ಕಾರಣಗಳು ಇನ್ನೂ ಗೊತ್ತಾಗಿಲ್ಲ. ಗೊತ್ತಾದರೂ ಅದರಿಂದ ತೀರ್ಪಿನ ನೆಲೆಗಳನ್ನು ಬದಲಿಸಲು ಬರುವುದಿಲ್ಲ. ಆದರೆ ಒಂದು ಸಂಗತಿ ಗೊತ್ತಾಗುತ್ತಿದೆ. ಸರಕಾರ ತನ್ನ ಭಾಷಾನೀತಿಯನ್ನು ತನ್ನ ಶಾಲೆಗಳಲ್ಲಿ ಮತ್ತು ಸರಕಾರದ ಅನುದಾನ ಪಡೆಯುವ ಶಾಲೆಗಳಲ್ಲಿ ಜಾರಿಗೆ ತರಬಹುದೇ ಹೊರತು ಅನುದಾನ ಪಡೆಯದ ಶಾಲೆಗಳ ಮೇಲೆ ಭಾಷಾನೀತಿಯನ್ನು ಹೇರಲು ಬರುವುದಿಲ್ಲ ಎಂದು ಹೈಕೋರ್ಟ್ ತೀರ್ಮಾನ ಮಾಡಿದಂತಿದೆ. ಹೈಕೋರ್ಟ್‌ನ ಈ ತೀರ್ಪು ಸಂವಿಧಾನದ ಬೇರೆಬೇರೆ ಕಲಮುಗಳ ಹಿನ್ನೆಲೆಯಲ್ಲಿ ಸರಿಯಾದುದೋ ಇಲ್ಲವೋ ಎಂಬುದನ್ನು ಹೇಳುವುದು ಈಗ ಆಗದ ಮಾತು. ಮತ್ತೆ ಒಂದು ದಶಕ ಅದಕ್ಕಾಗಿ ಕಾನೂನಿನ ಕದನ ಮಾಡಬೇಕಾಗಬಹುದು.

ಮೊದಲೇ ಹೇಳಿದಂತೆ ಇದು ಸರಕಾರದ ಶಿಕ್ಷಣ ನೀತಿಯಲ್ಲಿರುವ ಕೊರತೆಗಳ ಫಲ. ಅನುದಾನರಹಿತ ಶಾಲೆಗಳು ಎಂಬ ಗುಂಪು ಬೆಳೆಯಲು ಅನುವು ಮಾಡಿಕೊಟ್ಟದ್ದರಲ್ಲಿ ಎಡವಟ್ಟಾಗಿದೆ. ಖಾಸಗಿಯವರಿಗೆ, ಧಾರ್ಮಿಕ ಇಲ್ಲವೇ ಭಾಷಿಕ ಅಲ್ಪಸಂಖ್ಯಾತರಿಗೆ ತಮ್ಮದೇ ಶಿಕ್ಷಣಸಂಸ್ಥೆಗಳನ್ನು ನಡೆಸುವ ಹಕ್ಕನ್ನು ಸಂವಿಧಾನ ನೀಡಿದ್ದರೂ ಅವು ಸರಕಾರದ ಅನುದಾನ ಪಡೆಯದೇ ನಡೆಯಬೇಕು ಎಂದು ಹೇಳಿಲ್ಲವಲ್ಲ. ರಾಜ್ಯದಲ್ಲಿ ಅನುದಾನ ಪಡೆಯುವ ಮತ್ತು ಸರಕಾರ ನಡೆಸುವ ಶಿಕ್ಷಣ ಸಂಸ್ಥೆಗಳ ಸಂಖ್ಯೆಯನ್ನು ಗಮನಿಸಿದರೆ ಅನುದಾನ ಪಡೆಯದ ಶಾಲೆಗಳ ಸಂಖ್ಯೆ ತೀರಾಕಡಿಮೆ. ಆದ್ದರಿಂದ ಇದು ಸರಕಾರದ ವೆಚ್ಚದಲ್ಲಿ ಹೆಚ್ಚಿನ ಉಳಿತಾಯವನ್ನೇನೂ ಮಾಡಿಲ್ಲ. ಈಗಲೂ ದೊರೆಯುವ ಅಂಕಿ ಅಂಶಗಳನ್ನು ನೋಡಿದರೆ 1994ರ ಆದೇಶವನ್ನು ಉಲ್ಲಂಘಿಸಿರುವ ಶಾಲೆಗಳ ಸಂಖ್ಯೆ ಎರಡು ಸಾವಿರದ ಒಳಗೆ ಇದೆ. ಅಂದರೆ ನೂರಕ್ಕೆ ಮೂರರಿಂದ ನಾಲ್ಕು ಶಾಲೆಗಳು. ಇವುಗಳಿಗೆ ಅನುದಾನವನ್ನು

ನೀಡುವ ಮೂಲಕ ಇಲ್ಲವೇ ಅನುದಾನವನ್ನು ಪಡೆಯಲೇಬೇಕೆಂಬ ಶರತ್ತು ಹಾಕುವ ಮೂಲಕ ಸರಕಾರ ತನ್ನ ಭಾಷಾನೀತಿಯನ್ನು ಜಾರಿಮಾಡಲು ಅವಕಾಶವನ್ನು ಪಡೆದುಕೊಳ್ಳಬಹುದು. ಜೊತೆಗೆ ಆ ಶಾಲೆಗಳ ಶೈಕ್ಷಣಿಕ ಮತ್ತು ಆಡಳಿತ ವ್ಯವಹಾರಗಳಲ್ಲಿ ಈಗ ಆಗುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯನ್ನೂ ತಪ್ಪಿಸಬಹುದು.

ಶಿಕ್ಷಣ ನೀತಿಯಲ್ಲಿರುವ ಇನ್ನೊಂದು ಕೊರತೆಯಿಂದಾಗಿ ರಾಜ್ಯದುದ್ದಕ್ಕೂ ಸಾಮಾಜಿಕ ಅಸಮಾನತೆಯನ್ನು ಎತ್ತಿಹಿಡಿಯುವ ಶಾಲೆಗಳು ಹೆಚ್ಚುತ್ತಿವೆ. ಈ ಅಪಾಯ ಮೊದಲಾದದ್ದು 1992ರ ಗೋಕಾಕ್ ಚಳುವಳಿಯ ಬಳಿಕ. ಆಗಲೂ ಕಲಿಸುವ ಭಾಷೆಯ ಸಮಸ್ಯೆ ಮುಂದಾಗಿತ್ತು. ಸಿಬಿಎಸ್‌ಸಿ ಮತ್ತು ಐಸಿಎಸ್‌ಸಿ ಪಠ್ಯಕ್ರಮವನ್ನು ಬಳಸುವ ಶಾಲೆಗಳು ರಾಜ್ಯ ಸರಕಾರದ ಶಿಕ್ಷಣನೀತಿ ಮತ್ತು ಭಾಷಾನೀತಿಗೆ ಸವಾಲು ಹಾಕುತ್ತಿವೆ. ಇದು ಅನುದಾನ ಪಡೆಯದ ಸಂಸ್ಥೆಗಳ ಆಯ್ಕೆಯಂತೆ ಬಿಂಬಿಸಲಾಗಿದೆ. ಆದರೆ ತನ್ನ ಶಿಕ್ಷಣನೀತಿಯನ್ನು ಮರುರೂಪಿಸುವ ಮೂಲಕ ಸರಕಾರವು ಈ ಬಗೆಯ ಶಾಲೆಗಳ ಮೇಲೆ ರಾಜ್ಯದ ಪಠ್ಯಕ್ರಮವನ್ನು ಪ್ರಾಥಮಿಕ ಹಂತದವರೆಗೂ ಪಾಲಿಸುವ ಶರತ್ತನ್ನು ಹಾಕಲು ಸಾಧ್ಯವಿದೆ. ಆಗ ಭಾಷಾನೀತಿಯನ್ನು ಜಾರಿಗೆ ನೀಡುವಲ್ಲಿ ಇರುವ ಅಡ್ಡಿಗಳು ಕಡಿಮೆಯಾಗುತ್ತವೆ. ಇಲ್ಲದಿದ್ದರೆ ದಿನಕಳೆದಂತೆ ಉಳ್ಳವರು ಕಟ್ಟಿಕೊಳ್ಳುವ ಈ ಕೋಟೆಶಾಲೆಗಳು ಜನರ ಬದುಕಿನಿಂದ ಹೊರಚ್ಚಾಗಿಯೇ ಉಳಿಯುತ್ತವೆ.

ಸರಕಾರದ ಭಾಷಾನೀತಿಯ ನಿರೂಪಣೆಯಲ್ಲಿ ಇರುವ ಅತಾರ್ಕಿಕ ನೆಲೆಗಳನ್ನು ಕೈಬಿಡಬೇಕು. ಮಗುವಿಗೆ ತಾಯ್ನುಡಿಯಲ್ಲಿ ಕಲಿಸಿದರೆ ಉತ್ತಮ ಕಲಿಕೆ ಸಾಧ್ಯ ಎನ್ನುವ ಎರಡು ಬಾಯಿ ಕತ್ತಿಯನ್ನು ಹಿಡಿದು ಕಸರತ್ತು ಮಾಡುವುದನ್ನು ನಿಲ್ಲಿಸಬೇಕು. ನಾಡಿನಲ್ಲಿರುವ ಆರುನೂರರ ಆಸುಪಾಸಿನ ತಾಯ್ನುಡಿಗಳಲ್ಲಿ ನಲವತ್ತರಷ್ಟು ಮಾತ್ರ ಈಗ ಶಾಲೆಗಳಲ್ಲಿ ಮಾಧ್ಯಮಗಳಾಗಿವೆ. ಆದ್ದರಿಂದ ಭಾಷಾನೀತಿಯು ಪ್ರಜಾಪ್ರಭುತ್ವದ ಮೌಲ್ಯಗಳ ನೆಲಗಟ್ಟನ್ನು ನೆಮ್ಮುವುದು ಒಳ್ಳೆಯದು. ಸಮಾನತೆಯನ್ನು ಸಾಧಿಸುವುದು ಮತ್ತು ಅಸಮಾನತೆಯನ್ನು ನಿವಾರಿಸುವುದು ನಮ್ಮ ಗುರಿಯಾದರೆ ಅದಕ್ಕೆ ಶಿಕ್ಷಣ ಸಾಧನವಾಗಬೇಕು. ಅಲ್ಲಿನ ಭಾಷಾನೀತಿ ಕೂಡ ಈ ಸಮಾನತೆಯ ನೆಲೆಯಲ್ಲಿಯೇ ನಿರೂಪಿತವಾಗಬೇಕು. ಆಗ ಸಂವಿಧಾನ ದತ್ತವಾದ ಹಕ್ಕುಗಳ ಮರೆಯಲ್ಲಿ ನಡೆಯುತ್ತಿರುವ ನಕಲಿಯಾಟಗಳನ್ನು ನಿಲ್ಲಿಸಲು ಆಗಬಹುದೆಂದು ತೋರುತ್ತದೆ. ಇದು ಭಾವನಾತ್ಮಕ ನೆಲೆಯಲ್ಲಿ ಮಾತ್ರ ನಡೆಯುವ ವ್ಯವಹಾರವಾಗದೆ, ಆಗಲೇ ಹೇಳಿದಂತೆ ಮಾನವ ಹಕ್ಕುಗಳ ನೆಲೆಯಲ್ಲಿ ಬೇರೂರಬೇಕಾಗಿದೆ.

ಪದವಿ ಶಿಕ್ಷಣದಲ್ಲಿ ಭಾಷಾಕೌಶಲಗಳ ನಿರ್ವಹಣೆ

ಭಾಷೆಯನ್ನು ಪಠ್ಯಕ್ರಮದ ಭಾಗವನ್ನಾಗಿ ಇರಿಸುವುದು ಲಾಗಾಯ್ತಿನಿಂದಲೂ ನಡೆದುಬಂದಿದೆ. ಆದರೆ ಶೈಕ್ಷಣಿಕ ಸಾಧನೆಗೂ ಈ ಭಾಷಾಪಠ್ಯಕ್ಕೂ ಇರುವ ಸಂಬಂಧವೇನೆಂಬುದು ನನಗೆ ಗೊತ್ತಿಲ್ಲ. ಪದವಿ ತರಗತಿಗಳಲ್ಲಿ ಮೊದಲ ಎರಡು ವರ್ಷ (ಕೆಲವು ವಿಶ್ವವಿದ್ಯಾಲಯಗಳಲ್ಲಿ ಮೂರು ವರ್ಷ) ಎರಡು ಭಾಷೆಗಳನ್ನು ಕಲಿಯುವುದು ಕಡ್ಡಾಯವಾಗಿದೆ. ಈಗೀಗ ಈ ನಿಯಮದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿರುವುದುಂಟು. ಎರಡು ಭಾಷೆಗಳ ಬದಲು ಒಂದೇ ಭಾಷೆಯನ್ನು ಎರಡೂ ಪತ್ರಿಕೆಗಳಿಗೆ ಅಭ್ಯಾಸ ಮಾಡುವ ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯ ಇಂಗ್ಲಿಶ್ ಭಾಷೆಗೆ ಮಾತ್ರ ದೊರಕಿದೆ. ಒಂದು ಪತ್ರಿಕೆಗೆ ಇಂಗ್ಲಿಶ್ ಆದರೆ, ಇನ್ನೊಂದು ಪತ್ರಿಕೆಗೆ ಅಡಿಶನಲ್ ಇಂಗ್ಲಿಶ್ ಎಂಬ ವಿಷಯಗಳನ್ನು ಆಯ್ದುಕೊಳ್ಳಲು ಈಗ ಸಾಧ್ಯ. ಕೆಲವು ಕ್ಲಾಸಿಕಲ್ ಮತ್ತು ಯುರೋಪಿಯನ್ ಭಾಷೆಗಳನ್ನು ಇಂಗ್ಲಿಶ್ ಭಾಷೆಯೊಂದಿಗೆ ಓದುವ ಅವಕಾಶಗಳಿದ್ದರೂ ಕೆಲವು ವಿಪರ್ಯಾಸಗಳಿವೆ. ತೀರಾ ಕಡಿಮೆ ಸ್ತರದ ಭಾಷಾ ಸಾಧನೆಗಳನ್ನು ಮಾತ್ರ ಈ ಭಾಷೆಗಳ ಪಠ್ಯಕ್ರಮ ನಿರೀಕ್ಷಿಸುತ್ತವೆ. ಕೆಲವು ಸಂದರ್ಭದಲ್ಲಿ ಕಲಿಯುವವರು ದ್ವಿಭಾಷಿಕರಾಗಿರುವುದು ಅನಿವಾರ್ಯವಾಗಿರುತ್ತದೆ. ಸಂಸ್ಕೃತ ಭಾಷೆಯನ್ನು ಅಭ್ಯಾಸ ಮಾಡುವವರು ಇಂಗ್ಲಿಶನ್ನು ಅಥವಾ ಕನ್ನಡವನ್ನು ಕಲಿತಿದ್ದು ಆ ಭಾಷೆಯ ಮೂಲಕ ಸಂಸ್ಕೃತವನ್ನು ಕಲಿಯುತ್ತಾರೆ.

ಈ ಎಲ್ಲ ಗೋಜಲುಗಳ ನಡುವೆ ಇನ್ನೂ ಒಂದು ಪ್ರಶ್ನೆ ಇದೆ. ಇದು ಹಳೆಯ ಪ್ರಶ್ನೆಯೇ ಸರಿ. ಪದವಿ ತರಗತಿಗಳಲ್ಲಿ ಭಾಷಾಪಠ್ಯಕ್ರಮದ ಉದ್ದೇಶ ಭಾಷಾಕೌಶಲಗಳ ಅಭಿವೃದ್ಧಿಯೋ? ಅಥವಾ ಸಾಹಿತ್ಯಸಂಸ್ಕೃತಿಗೆ ಪ್ರವೇಶ ಪಡೆಯುವುದೋ? ಇವೆರಡೂ ಉದ್ದೇಶಗಳನ್ನು ಮನಬಂದಂತೆ ಬಳಸುತ್ತಿರುವುದನ್ನು ನಾವು ನೋಡುತ್ತೇವೆ. ಪದವಿ ತರಗತಿಗಳಲ್ಲಿ ಇಂಗ್ಲಿಶ್ ಕಡ್ಡಾಯ. ಏಕೆ ಕಡ್ಡಾಯ ಮಾಡಲಾಗಿದೆ ಎಂದು ಕೇಳಿದರೆ ಪದವಿ ಪಡೆದವರಲ್ಲಿ ಇಂಗ್ಲಿಶ್ ಭಾಷಾಕೌಶಲಗಳು ಸಮರ್ಥವಾಗಿ ಬೆಳೆದಿರಬೇಕು; ಅದರಿಂದಾಗಿ ಅದನ್ನು ಕಡ್ಡಾಯವಾಗಿ ಕಲಿಯಬೇಕು ಎನ್ನುವ ಉತ್ತರ ಸಿಕ್ಕೀತು. ಆದರೆ ಪಠ್ಯವಾಗಿ ಓದಲೆಂದು ನಿಗದಿಗೊಳಿಸುವ ಪುಸ್ತಕಗಳು, ಬೋಧನಾ ವಿಧಾನ, ಪರೀಕ್ಷಾ ಪದ್ಧತಿ ಈ ಮೂರು ಹಂತಗಳಲ್ಲೂ ಭಾಷಾಕೌಶಲಗಳು ಅನುಷಂಗಿಕವಾಗಿರುತ್ತವೆ. ಸಾಹಿತ್ಯ, ಸಂಸ್ಕೃತಿಗೆ ಪ್ರವೇಶ ಪಡೆಯುವುದೇ ಮುಖ್ಯ ಉದ್ದೇಶವಾಗಿರುತ್ತದೆ. ಆದರೆ ವೃತ್ತಿಪರ ಎಂದು ತಿಳಿಯಲಾಗಿರುವ ಪದವಿಗಳಲ್ಲಿ ಕೊಂಚ ಬದಲಾವಣೆ ಇದೆ.

ಉದಾ: ಬಿ.ಕಾಂ, ಬಿ.ಬಿ.ಎಂ. ಮುಂತಾದ ಪದವಿಗಳಲ್ಲಿ ವ್ಯಾವಹಾರಿಕ ಕನ್ನಡ, ಸಂವಹನ ಕನ್ನಡವೆಂಬ ಪ್ರತ್ಯೇಕ ಪಠ್ಯಭಾಗವಿರುತ್ತದೆ. ಈ ಭಾಗದಲ್ಲಿ ಭಾಷಾಕೌಶಲಗಳ ಅಭಿವೃದ್ಧಿಯೇ ಮುಖ್ಯ ಗುರಿಯಾಗಿರುತ್ತದೆ. ಆ ಉದ್ದೇಶಿತ ಗುರಿಯೂ ಸೀಮಿತವಾಗಿರುವುದಾದರೂ ಇಲ್ಲಿ ಸಾಹಿತ್ಯ ಸಂಸ್ಕೃತಿಯ ಅವಧಾರಣೆ ಇರುವುದಿಲ್ಲ ಎನ್ನುವುದನ್ನು ಗಮನಿಸಬೇಕು.

ಸಾಮಾನ್ಯ ಪದವಿ ತರಗತಿಗಳಲ್ಲಿ ಭಾಷಾಪಠ್ಯದ ಅಂತರ್ಗತ ಉದ್ದೇಶ ಸಾಹಿತ್ಯಸಂಸ್ಕೃತಿ ಪ್ರವೇಶ. ಇಲ್ಲಿ ಗಮನಿಸಬೇಕಾದ ಸಂಗತಿಯೊಂದಿದೆ. ಸಾಹಿತ್ಯಸಂಸ್ಕೃತಿಗೂ ಭಾಷೆಗೂ ಸಂಬಂಧವಿರುವುದು ನಿಜವಾದರೂ ಆ ಸಂಬಂಧದ ಸ್ವರೂಪವೇನು? ಇಂಗ್ಲಿಶ್ ಪಠ್ಯಕ್ರಮದ ಸಾಹಿತ್ಯ ಕೃತಿಗಳು ಮತ್ತು ಕನ್ನಡ ಪಠ್ಯಕ್ರಮದ ಸಾಹಿತ್ಯ ಕೃತಿಗಳು ವಿದ್ಯಾರ್ಥಿಯನ್ನು ಎರಡು ಬೇರೆ ಬೇರೆ ಸಾಹಿತ್ಯಸಂಸ್ಕೃತಿಗಳಿಗೆ ಕರೆದೊಯ್ಯುತ್ತವೆ ಎಂದು ತಿಳಿಯಬೇಕೇ? ಆದರೆ ಇದೊಂದು ಕಾಲ್ಪನಿಕ ಸ್ಥಿತಿ. ಏಕೆಂದರೆ ಹೀಗೆ ಎರಡು ಬೇರೆ ಸಾಹಿತ್ಯ ಸಂಸ್ಕೃತಿಗಳನ್ನು ಊಹಿಸಿದರೂ ಅವೆರಡೂ ವಿದ್ಯಾರ್ಥಿಯಲ್ಲಿ ಮುಖಾಮುಖಿಯಾಗದೇ ಬೇರೆ ಬೇರೆಯಾಗಿ ಉಳಿಯುತ್ತವೆಂದು ತಿಳಿಯುವುದು ಹೇಗೆ? ಶೇಕ್ಸ್‌ಪಿಯರ್‌ನ ಟೆಂಪೆಸ್ಟ್ ನಾಟಕವನ್ನು ಇಂಗ್ಲಿಶ್ ಪಠ್ಯಕ್ರಮದಲ್ಲೂ ಆ ನಾಟಕದ ಕನ್ನಡ ಅವತರಣಿಕೆಯೊಂದನ್ನು (ಉದಾ: ಚಂಡಮಾರುತ, ಎ.ಎನ್.ಮೂರ್ತಿ ರಾವ್) ಕನ್ನಡ ಪಠ್ಯ ಕ್ರಮದಲ್ಲಿ ವಿದ್ಯಾರ್ಥಿ ಓದಿದರೆ ಯಾವ ಸಾಹಿತ್ಯ ಸಂಸ್ಕೃತಿಯೊಳಗೆ ಪ್ರವೇಶ ಪಡೆದಂತೆ ಭಾವಿಸಬೇಕು. ಮೂಲದ ಅನುವಾದದ ಸೀಳನ್ನು ಬಳಸಿ ವಾದ ಹೂಡುವುದು ಸಾಧ್ಯವಿಲ್ಲ. ಬ್ರೆಕ್ಟ್‌ನ ಗೆಲಿಲಿಯೋ ನಾಟಕವನ್ನು ಇಂಗ್ಲಿಶ್ ಪಠ್ಯಕ್ರಮದ ಭಾಗವಾಗಿ ಇರಿಸಿದರೆ ಅದಕ್ಕೂ ಕನ್ನಡದಲ್ಲಿ ಶೇಕ್ಸ್‌ಪಿಯರ್‌ಅನ್ನು ಓದುವುದಕ್ಕೂ ವ್ಯತ್ಯಾಸಗಳೇನೂ ಇಲ್ಲ. ಈ ಎಲ್ಲ ವಿವರಗಳು ನಮ್ಮ ಪದವಿ ಭಾಷಾ ಪಠ್ಯಕ್ರಮದ ಗೊಂದಲಗಳನ್ನು ಬಯಲಿಗಿಡುತ್ತದೆ.

ಇನ್ನೂ ಒಂದು ದಿಕ್ಕಿನಿಂದ ಈ ಸಮಸ್ಯೆಯನ್ನು ನೋಡೋಣ. ಪದವಿ ಮುಗಿಸಿದವರ ಭಾಷಾ ಕೌಶಲಗಳು ಎಷ್ಟು ಬೆಳೆದಿರುತ್ತವೆ? ಪದವಿ ಪೂರ್ವದ ಓದಿನ ಅನಂತರದ ಎರಡು ವರ್ಷಗಳ ಓದು ಅವರಲ್ಲಿ ಯಾವ ಕೌಶಲವನ್ನು ಎಷ್ಟು ಬೆಳೆಸಿರುತ್ತದೆ? ಎಷ್ಟು ಪರಿಷ್ಕರಿಸಿರುತ್ತದೆ? ಈ ಪ್ರಶ್ನೆಯನ್ನು ಶಿಕ್ಷಣವೇತ್ತರು ಆಗಾಗ ಮುಂದಿಡುತ್ತಾರೆ. ಸ್ನಾತಕರ ಭಾಷಾಕೌಶಲಗಳ ಮಟ್ಟ ಕುಸಿಯುತ್ತಿದೆ ಎಂದು ಹಲುಬುವುದೂ ಉಂಟು. ಈ ಸಮಸ್ಯೆಯ ಚರ್ಚೆಯನ್ನು ಭಾಷಾಕೌಶಲಗಳ ಸ್ವರೂಪವನ್ನು ವಿವರಿಸುತ್ತಾ ಮೊದಲು ಮಾಡಬಹುದು. ಸಾಮಾನ್ಯವಾಗಿ ನಾಲ್ಕು ಕೌಶಲಗಳನ್ನು ಭಾಷಾ ಕಲಿಕೆಯ ವ್ಯಾಪ್ತಿಯಲ್ಲಿ ಗುರುತಿಸುವುದುಂಟು. ಇವುಗಳಲ್ಲಿ ಆಲಿಸುವುದು ಮತ್ತು ಮಾತನಾಡುವುದು ಎರಡು ಕೌಶಲಗಳು. ಓದುವುದು ಮತ್ತು ಬರೆಯುವುದು ಮತ್ತೆರಡು ಕೌಶಲಗಳು. ಇವುಗಳಲ್ಲಿ ಆಲಿಸುವುದು ಮತ್ತು ಓದುವುದು ಇವೆರಡನ್ನು ಸ್ಥಿರ ಕೌಶಲಗಳೆಂದೂ ಮಾತನಾಡುವುದು ಮತ್ತು ಬರೆಯುವುದು ಇವೆರಡನ್ನು ಚರಕೌಶಲಗಳೆಂದೂ ಹೇಳುತ್ತಾರೆ. ಈ ವಿಭಜನೆಯ ಉಪಯುಕ್ತತೆ ಏನೂ ಇಲ್ಲ. ಇಂಗ್ಲಿಶಿನ ಪ್ಯಾಸಿವ್ ಮತ್ತು ಆಕ್ಟಿವ್ ಎಂಬ ವಿಶೇಷಣಗಳಿಗೆ ಇಲ್ಲಿ ಸ್ಥಿರ ಮತ್ತು ಚರ

ಎಂಬ ಭಾಷಾರೂಪಗಳನ್ನು ಬಳಸಿದೆ. ಆಲಿಸುವುದು ಮತ್ತು ಮಾತನಾಡುವುದು ಇವೆರಡರ ಸ್ವರೂಪದಲ್ಲಿ ಬದಲಾವಣೆ ಇದ್ದರೂ ಸಾಮರ್ಥ್ಯದಲ್ಲಿ ತಾರತಮ್ಯ ಭಾವವನ್ನು ಹೇಳಲು ಬರುವುದಿಲ್ಲ. ಭಾಷಾಕಲಿಕೆ ಕೆಲವೊಮ್ಮೆ ಆಲಿಸುವ ಹಂತದಲ್ಲೇ ನಿಂತು ಮಾತನಾಡುವ ಹಂತಕ್ಕೆ ದಾಟದೇ ಹೋಗಬಹುದು. ಈ ಅಂಶವನ್ನು ಕೊಂಚ ಎಚ್ಚರಿಕೆಯಿಂದ ಗಮನಿಸಬೇಕು. ಏಕೆಂದರೆ ಭಾಷೆಯನ್ನು ಔಪಚಾರಿಕವಾಗಿ ಕಲಿಯುವಾಗ ಆ ಭಾಷೆಯ ಎಲ್ಲ ಕೌಶಲಗಳೂ ಒಂದೇ ಪ್ರಮಾಣದಲ್ಲಿ ಕಲಿಯುವವರಿಗೆ ಲಭಿಸದೇ ಹೋಗುವುದು ಸಹಜ. ಈ ಮಾತನ್ನು ದ್ವಿತೀಯ ಭಾಷೆಯ ಕಲಿಕೆಯಲ್ಲಿ ಒಪ್ಪಲು ನಾವು ಸಿದ್ಧರಿರಬೇಕು ಹಾಗಾಗಿ ನಾವು ಸಾಮಾನ್ಯ ಶಿಕ್ಷಣದ ಅವಧಿಯಲ್ಲಿ ಹತ್ತು ವರ್ಷಕಾಲ ಇಂಗ್ಲಿಶನ್ನು ಕಲಿಸಿದರೂ ಕಲಿಯುವವರ ಭಾಷಾಸಾಮರ್ಥ್ಯದಲ್ಲಿ ಅಗಾಧ ಪ್ರಮಾಣದ ಏರಿಳಿತಗಳು ಕಂಡುಬರುತ್ತದೆ. ಇದನ್ನು ಒಪ್ಪಿಕೊಳ್ಳುತ್ತಲೇ ಪರಿಹಾರಗಳನ್ನು ಹುಡುಕುವುದೂ ಕೂಡ ಅವಶ್ಯ.

ಆದರೆ ಮೊದಲ ಭಾಷೆಯ ಔಪಚಾರಿಕ ಕಲಿಕೆಯಲ್ಲಿ ಭಾಷಾ ಕೌಶಲಗಳ ಗಳಿಕೆಯ ಪ್ರಮಾಣ ತೀವ್ರವಾಗಿ ವ್ಯತ್ಯಾಸವಾಗುವುದು ಆತಂಕಕ್ಕೆ ಕಾರಣವಾಗಬೇಕು. ಈಗ ಕನ್ನಡ ಕಲಿಕೆಯನ್ನೇ ಗಮನಿಸೋಣ. ಕನ್ನಡ ನಮ್ಮ ಬಹುಪಾಲು ವಿದ್ಯಾರ್ಥಿಗಳಿಗೆ ಮೊದಲ ಭಾಷೆ. ಭಾವನಾತ್ಮಕ ಪರಿಭಾಷೆಯಲ್ಲಿ ಹೇಳುವುದಾದರೆ ತಾಯ್ನುಡಿ. ಈ ಭಾಷೆಯನ್ನು ಅನೌಪಚಾರಿಕ ಕಲಿಕೆಯ ಮೂಲಕ ಕಲಿತ ಅನಂತರವೇ ಮಕ್ಕಳು ಶಾಲಾ ಶಿಕ್ಷಣದ ವ್ಯಾಪ್ತಿಗೆ ಬರುತ್ತಾರೆ. ಪದವಿ ತರಗತಿಯವರೆಗೂ ಕನ್ನಡವನ್ನು ವಿವಿಧ ಪ್ರಮಾಣದಲ್ಲಿ, ವಿವಿಧ ಬಗೆಯಲ್ಲಿ ಓದುತ್ತಾರೆ. ಶಾಲೆಗೆ ಬರುವಾಗ ಅವರಿಗೆ ಕನ್ನಡದಲ್ಲಿ ಇದ್ದ ಭಾಷಾಕೌಶಲಗಳು ಯಾವ ಪ್ರಮಾಣದಲ್ಲಿ ವೃದ್ಧಿಯಾಗುತ್ತವೆ ಎನ್ನುವುದನ್ನು ಗಮನಿಸಿದರೆ ಅಷ್ಟೇನೂ ಆಶಾದಾಯಕವಾದ ಚಿತ್ರ ನಮಗೆ ದೊರಕುವುದಿಲ್ಲ. ನಿಜ, ಬರೆಹ ಮತ್ತು ಓದು ಕೌಶಲಗಳು ಶಾಲಾ ಶಿಕ್ಷಣದ ಫಲ. ಆದರೆ ಈ ಕೌಶಲ್ಯಗಳ ಗರಿಷ್ಠ ಪ್ರಮಾಣದ ವೃದ್ಧಿ ಮೊದಲ ಕೆಲವು ವರ್ಷಗಳಲ್ಲೇ ಮುಗಿದಿರುತ್ತದೆ. ಪದವಿ ತರಗತಿಗಳಲ್ಲಿ ಅವುಗಳನ್ನು ಬಳಸಬಹುದೇ ಹೊರತು, ಬೆಳೆಸಲು ಸಾಧ್ಯವಾಗುವುದಿಲ್ಲ. ನಮ್ಮ ಪದವಿ ಶಿಕ್ಷಣ ಪಠ್ಯ ಕ್ರಮದಲ್ಲಿ, ಬೋಧನಾ ಕ್ರಮದಲ್ಲಿರಲಿ ಈ ಕೌಶಲಗಳನ್ನು ಬಳಸುವ ಕಡೆಗೂ ಕೂಡ ಗಮನಹರಿಸಲು ಅವಕಾಶಗಳಿಲ್ಲ. ಹಾಗಾಗಿ ಈ ಕೌಶಲಗಳು ಕುಂಠಿತವಾಗಿ ಉಳಿಯುತ್ತವೆ.

ಇರುವ ಕೌಶಲಗಳನ್ನು ಬಳಸಲು ಇರುವ ಅಡ್ಡಿಗಳೇನು? ಇದಕ್ಕೆ ಹಲವು ಕಾರಣಗಳನ್ನು ಮುಂದೆ ಮಾಡಬಹುದಾದರೂ ಕೆಲವನ್ನು ಇಲ್ಲಿ ಗಮನಿಸುವುದು ಅವಶ್ಯವಾಗಿದೆ. 1. ಇತರ ವಿಷಯಗಳ ಕಲಿಕೆಗೆ ಪದವಿ ತರಗತಿಗಳಲ್ಲಿ ದೊರಕುವ ಅವಧಾರಣೆ ಭಾಷಾಕಲಿಕೆಗೆ ಲಭಿಸುವುದಿಲ್ಲ. ಇದನ್ನು ಅಲ್ಲಗಳೆಯಬೇಕಾಗಿಲ್ಲ. ಆದರೆ ಈ ಕಾರಣದಿಂದಾಗಿ ಭಾಷಾಕಲಿಕೆಯ ಅಪೇಕ್ಷೆಗಳನ್ನೇ ಸೀಮಿತಗೊಳಿಸಿಕೊಳ್ಳಲು ಕಾರಣಗಳಿಲ್ಲ. ಪಠ್ಯಕ್ರಮದಲ್ಲಿ ಅಂಥ ಅವಕಾಶಗಳನ್ನು ಕಲ್ಪಿಸುವುದನ್ನು ಯಾರೂ ತಡೆಯಲಾರರು. ನಾನು ಮೊದಲಲ್ಲಿ ಹೇಳಿದಂತೆ ಸಾಹಿತ್ಯ ಸಂಸ್ಕೃತಿಗೆ ವಿದ್ಯಾರ್ಥಿಯನ್ನು ಪರಿಚಯಿಸುವ ಉಮೇದಿನಲ್ಲಿ ಈ ಅಂಶವನ್ನು ಪಠ್ಯನಿರ್ಧಾರಕರು ಪೂರ್ಣವಾಗಿ

ಮರೆತಿದ್ದಾರೆ. 2. ನಮ್ಮ ಪದವಿ ವಿದ್ಯಾರ್ಥಿಗಳು ದ್ವಿಭಾಷಿಕ (ಹಲವು ಕಡೆಗಳಲ್ಲಿ ಬಹುಭಾಷಿಕರು)ರಾಗಿರುವುದರಿಂದ ಅವರ ಭಾಷಾಕೌಶಲಗಳ ವೃದ್ಧಿ ಮತ್ತು ಬಳಕೆಯಲ್ಲಿ ಗೊಂದಲದ ಸಂದರ್ಭ ಉಂಟಾಗುತ್ತದೆ. ಈ ವಾದವನ್ನು ನಂಬಲು ಹಲವರು ಸಿದ್ಧರಾಗುತ್ತಾರೆ. ಹಾಗೆ ನೋಡಿದರೆ ಇದು ಇಂಗ್ಲಿಶಿನ ಪರವಾದ ವಾದ. ಅಂದರೆ ಈ ವಾದದಂತೆ ಏಕಭಾಷಿಕರಾಗುವುದು ಹೆಚ್ಚು ಆರೋಗ್ಯಕಾರಿ. ಇದನ್ನು ನಂಬಿದರೆ ಸದ್ಯದಲ್ಲಿ ಕನ್ನಡಕ್ಕಿಂತ ಇಂಗ್ಲಿಶೇ ಆಪ್ಯಾಯಮಾನವಾಗಿ ತೋರುತ್ತದೆ. ಆದರೆ ದ್ವಿಭಾಷಿಕ ಸನ್ನಿವೇಶ ಎರಡೂ ಭಾಷೆಗಳ ಕೌಶಲಗಳ ಅಭಿವೃದ್ಧಿಗೆ ಅಡ್ಡಿಯುಂಟು ಮಾಡುವುದೆಂಬ ವಾದವನ್ನು ಸಮರ್ಥಿಸುವುದು ಕಷ್ಟ.

ನಿಜವಾದ ಇನ್ನೊಂದು ಸಮಸ್ಯೆಯ ಕಡೆಗೆ ನಾವೀಗ ಗಮನಹರಿಸುವುದು ಅವಶ್ಯವಾಗಿದೆ. ಭಾಷಾಕೌಶಲಗಳು ಸಮರ್ಥವಾಗಿ ಬೆಳೆದಿದ್ದರೂ ಭಾಷಾಬಳಕೆಯ ಬಗೆಗಳು ಅರಿವಿನ ವ್ಯಾಪ್ತಿಯಿಂದ ಹೊರಗುಳಿದರೆ ಆಗ ಆ ಕೌಶಲಗಳು ಕೇವಲ ಅಲಂಕಾರಿಕವಾಗುತ್ತವೆ. ಈ ಅಂಶ ಹೊಸ ಸಮಾಜದ ಸವಾಲಾಗಿದೆ. ಏಕೆಂದರೆ ಈಗ ಭಾಷೆಯನ್ನು ಯಾವಾಗ ಮತ್ತು ಹೇಗೆ ಬಳಸಬೇಕು ಎಂಬುದೇ ಮುಖ್ಯ ಪ್ರಶ್ನೆಯಾಗಿದೆ. ಸಂವಹನವೇ ಇಂದಿನ ಮುಖ್ಯ ಆಸಕ್ತಿಯಾಗಿದೆ. ಸಾಮಾಜಿಕ ಸಂವಹನದ ವಿಧಾನಗಳು ಮತ್ತು ಅಪೇಕ್ಷೆಗಳು ಹಿಂದೆಂದಿಗಿಂತಲೂ ವಿಭಿನ್ನವಾದ ರೀತಿಯಲ್ಲಿ ಬೆಳೆಯುತ್ತಿವೆ. ನಮ್ಮ ಹಳೆಯ ಗಾದೆ ಮಾತೊಂದು ಬಾಯಿದ್ದವನು ಬರದಲ್ಲೂ ಬದುಕಿದ ಎನ್ನುತ್ತದೆ. ಮಾತಿನ ಚಾಕಚಕ್ಯತೆಯನ್ನು ಕುರಿತ ಹೇಳಿಕೆ ಇದು. ಈ ಮಾತಿನ ಸತ್ಯಾಸತ್ಯತೆ ನಮಗೆ ಈಗ ಚರ್ಚೆಯ ವಿಷಯವಾಗಬೇಕಿಲ್ಲ. ಆದರೆ ನಮಗೆ ಈಗ ಈ ಕೌಶಲವಷ್ಟೇ ಸಾಲದೆಂದು ಗೊತ್ತಿದೆ. ಲೋಕದ ಹತ್ತಾರು ವ್ಯವಹಾರಗಳಿಗೆ ನಮ್ಮ ಭಾಷಾಕೌಶಲಗಳನ್ನು ನಾವೀಗ ಹೊಂದಿಸಿಕೊಳ್ಳಬೇಕಾಗಿದೆ. ನಮ್ಮ ಪದವಿ ತರಗತಿಗಳ ಭಾಷಾಶಿಕ್ಷಣ ಈ ಅಂಶವನ್ನು ಆದಷ್ಟು ಬೇಗ ಮನಗಾಣಬೇಕು. ಆ ದಿಕ್ಕಿನಲ್ಲಿ ಸಂಬಂಧಪಟ್ಟವರು ತೀವ್ರವಾಗಿ ಗಮನ ಹರಿಸಬೇಕಾಗಿದೆ. ಇಂಗ್ಲಿಶಿಗೆ ಈ ಸೌಲಭ್ಯಗಳು ಅನ್ಯಮೂಲಗಳಿಂದ ಒದಗುತ್ತಿವೆ. ಆದರೆ ಕನ್ನಡದಂಥ ಭಾಷೆಗೆ ವಿಶೇಷ ಪ್ರಯತ್ನಗಳಿಲ್ಲದೆ ಇವು ಒದಗಿ ಬರಲಾರವು.

ಪದವಿ ತರಗತಿಗಳಲ್ಲಿ ಭಾಷಾಕೌಶಲಗಳ ಬಳಕೆ ಮತ್ತು ಸಂವಹನ ಕೌಶಲಗಳ ಬೆಳವಣಿಗೆಯ ಕಡೆಗೆ ಗಮನ ಕೊಡುವುದು ವಿದ್ಯಾರ್ಥಿಯ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಅತ್ಯವಶ್ಯ. ವಿಷಯ ಪರಿಣತಿ ಒಂದು ಹಂತದವರೆಗೆ ನೆರವಿಗೆ ಬರಬಹುದು. ಆದರೆ ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸಲು ಅದು ನೆರವಿಗೆ ಬರಲಾರದು. ವಿದ್ಯಾರ್ಥಿಗಳು ಈ ಅಪಾಯದಿಂದ ಹೊರ ಬರಲು ಎರಡು ರೀತಿಗಳಿಂದ ಯತ್ನಿಸುವುದು ಕಂಡುಬರುತ್ತದೆ. ಒಂದು: ಅನ್ಯ ಮಾರ್ಗಗಳಿರುವುದರಿಂದ ಆ ಭಾಷೆಗೇ ಪಲ್ಲಟಗೊಳ್ಳುವುದು. ಈ ಮಾರ್ಗ ಬಹುಮಟ್ಟಿಗೆ ಸಮಾಜದಲ್ಲಿ ಎರಡು ತಲೆಮಾರುಗಳಿಂದ ವಿದ್ಯೆಯನ್ನು ಪಡೆದ ಕುಟುಂಬಗಳಿಂದ ಬಂದ ವಿದ್ಯಾರ್ಥಿಗಳಿಗೆ ಮಾತ್ರ ಲಭಿಸುತ್ತದೆ ಎನ್ನುವುದನ್ನು ಗಮನದಲ್ಲಿಡಬೇಕು. ಎರಡು: ಬಹು ಪಾಲು ವಿದ್ಯಾರ್ಥಿಗಳು ಅನೌಪಚಾರಿಕ ಕಲಿಕೆಯಲ್ಲಿ

ಲಭಿಸಿದ ಭಾಷಾಕೌಶಲಗಳನ್ನು ತಂತಮ್ಮ ಉಪಭಾಷೆಗಳಲ್ಲೇ ಅಭಿವೃದ್ಧಿಪಡಿಸಿಕೊಳ್ಳಲು ಮನಸ್ಸು ಮಾಡುವುದು. ಇದು ಒಂದು ಸಾಂಸ್ಕೃತಿಕ ರಾಜಕಾರಣದ ಭಾಗ. ಶಿಕ್ಷಣ ಕ್ರಮದಲ್ಲಿ ಹಿನ್ನೆಲೆಗೆ ಸರಿದಿರುವ ಕನ್ನಡ ಉಪಭಾಷೆಯ ಮರುಬಳಕೆಯ ಮೂಲಕ ಆ ಭಾಷೆಯನ್ನಾಡುವ ವಿದ್ಯಾರ್ಥಿಗಳು ತಮ್ಮ ಅಸ್ಮಿತೆಯ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುತ್ತಿರಬಹುದು. ಆದರೆ ಈ ಉಪಭಾಷಾ ಸಾಮರ್ಥ್ಯಗಳು ಸೀಮಿತವಾಗಿರುತ್ತವೆ. ಬರೆಹದ ವಿಶಾಲ ವ್ಯಾಪ್ತಿಗೆ ಅವುಗಳನ್ನು ಒಳಪಡಿಸುವುದು ಬಹಳ ಶ್ರಮವನ್ನು ಬಯಸುತ್ತದೆ. ಮತ್ತೆ ಇದು ಸಾಹಿತ್ಯಸಂಸ್ಕೃತಿಗೆ ಸೀಮಿತವೂ ಆಗಬಹುದು. ಉಪಭಾಷೆಗಳಲ್ಲಿ ಕಥನವನ್ನು ರಚಿಸುತ್ತಿರುವ ಹಲವು ನಿದರ್ಶನಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ನಾವು ಚರ್ಚಿಸುತ್ತಿರುವ ಸಮಸ್ಯೆಗೆ ಇದು ದೀರ್ಘಕಾಲಿಕ ಉತ್ತರವನ್ನು ನೀಡುವುದಿಲ್ಲ. ಈ ಎರಡೂ ಹೊರದಾರಿಗಳಿಗೆ ಮಿತಿ ಇವೆ.

ಈ ಎಲ್ಲ ವಿವರಗಳಿಂದ ಸ್ಪಷ್ಟವಾಗುವುದಿಷ್ಟು: ಪದವಿ ತರಗತಿಗಳ ಭಾಷಾಕಲಿಕೆ, ಬೋಧನೆಗಳ ಉದ್ದೇಶಗಳು ಹೆಚ್ಚು ನಿಖರಗೊಳ್ಳಬೇಕು. ಭಾಷಾಕೌಶಲಗಳ ಬಳಕೆಯ ಬಗೆಗೆ ಇರುವ ಅಪಕಲ್ಪನೆಗಳನ್ನು ಮರು ಪರಿಶೀಲನೆಗೆ ಗುರಿಮಾಡಬೇಕು. ಭಾಷಾ ಸಂವಹನ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಹೆಚ್ಚಿನ ಗಮನವನ್ನು ನೀಡಬೇಕು. ಕನ್ನಡ ಮತ್ತು ಇಂಗ್ಲಿಶಿನ ನಡುವೆ ಇರುವ ಅಸಮ ಸಂಬಂಧದ ನೆಲೆಗಳನ್ನು ಶೈಕ್ಷಣಿಕವಾಗಿ ನಿಭಾಯಿಸುವ ತಂತ್ರಗಳನ್ನು ರೂಪಿಸಬೇಕು.

ಇತರ ಭಾಷೆಗಳ ಜೊತೆಗಿನ ಸಂಬಂಧ

ಕರ್ನಾಟಕರಾಜ್ಯ ನಿರ್ಮಿತಿ ಆದ ಕಾಲಘಟ್ಟದಿಂದಲೂ ಒಂದು ವಾಸ್ತವ ನಮ್ಮೆದುರು ಇದ್ದೇ ಇತ್ತು. ಅದೆಂದರೆ ಈ ರಾಜ್ಯ ಕನ್ನಡಿಗರು ಬಹು ಸಂಖ್ಯೆಯಲ್ಲಿ ಇರುವ ಭೂಪ್ರದೇಶ ಮಾತ್ರ, ಕನ್ನಡ ಭಾಷೆಯ ಜೊತೆಗೆ ಇತರ ಭಾಷೆಗಳನ್ನು ಆಡುವ ಹಲವು ಭಾಷಾಸಮುದಾಯಗಳು ಈ ರಾಜ್ಯದೊಳಗೆ ಇದ್ದವು. ಈ ಪರಿಸ್ಥಿತಿ ಈಗಲೂ ಮುಂದುವರೆದಿದೆ. ಆದರೆ ಕಳೆದ ಐವತ್ತು ವರ್ಷಗಳಲ್ಲಿ ಈ ಭಾಷಾಸಮುದಾಯಗಳ ಸ್ವರೂಪ, ಸಾಮಾಜಿಕ ಚಲನಶೀಲತೆಗಳು ಬದಲಾಗುತ್ತಾ ಬಂದಿವೆ. ಕನ್ನಡಿಗರ ಜೊತೆಗೆ ವಾಸಿಸುತ್ತಿರುವ ಹಲವು ಭಾಷಾಸಮುದಾಯಗಳ ಜನರು ಸಾವಿರಾರು ವರ್ಷಗಳಿಂದ ಈ ಪ್ರದೇಶದಲ್ಲಿ ಜೀವನ ನಡೆಸುತ್ತಿರುವವರೇ ಆಗಿದ್ದಾರೆ. ಇಲ್ಲಿನ ಜೀವನಕ್ರಮದೊಡನೆ ಅವರು ಜೈವಿಕವಾಗಿ ಬೆರೆತು ಹೋಗಿದ್ದಾರೆ. ಈ ಭಾಷಿಕರಲ್ಲಿ ಕೆಲವು ಸಮುದಾಯಗಳು ಅಖಿಲ ಭಾರತ ವ್ಯಾಪ್ತಿಯ ಸಮುದಾಯಗಳಾಗಿವೆ. ಮತ್ತೆ ಕೆಲವು ಗಡಿಯಾಚೆಗೆ ನಿರಂತರತೆಯನ್ನು ಹೊಂದಿರುವ ಸಮುದಾಯಗಳಾಗಿವೆ. ಮತ್ತೆ ಕೆಲವಕ್ಕೆ ಕರ್ನಾಟಕದ ಗಡಿಯಾಚೆಗೆ ಅಸ್ತಿತ್ವವೇ ಇಲ್ಲ. ೧೯೭೧ರ ಜನಗಣತಿಯ ಅಂದಾಜಿನಂತೆ ಕರ್ನಾಟಕದಲ್ಲಿ ೧೭೬ ಭಾಷೆಗಳನ್ನಾಡುವ ಜನರಿದ್ದಾರೆ. ಈ ಸಂಖ್ಯೆ ಅಷ್ಟೇನೂ ಖಚಿತವಾದುದಲ್ಲ. ಏಕೆಂದರೆ ಜನಗಣತಿಯ ಮಾನದಂಡಗಳಲ್ಲೇ ಭಾಷೆಗಳನ್ನು ಗುರುತಿಸಲು ತಕ್ಕ ಪರಿಕರಗಳು ಸಿದ್ಧವಾಗಿಲ್ಲ. ಅದು ಆ ಗಣತಿಯ ಆಸಕ್ತಿಯೂ ಆಗಿರಲಿಲ್ಲ. ಈ ೧೭೬ ಭಾಷೆಗಳನ್ನಾಡುವವರಲ್ಲಿ ಎಷ್ಟೋ ವಿದೇಶೀ ಭಾಷೆಗಳನ್ನಾಡುವವರು, ಮತ್ತು ಆ ಕಾಲದಲ್ಲಿ ಕರ್ನಾಟಕದ ತಾತ್ಕಾಲಿಕ ನಿವಾಸಿಗಳಾಗಿದ್ದವರು ಇದ್ದಾರೆ. ಈ ಎಲ್ಲ ಅಂಶಗಳನ್ನೂ ಗಮನದಲ್ಲಿ ಇರಿಸಿಕೊಂಡರೆ ಕರ್ನಾಟಕದ ಭಾಷಾಪರಿಸ್ಥಿತಿ ಸಾಕಷ್ಟು ಸಂಕೀರ್ಣವಾಗಿದೆ ಎಂದೇ ಹೇಳಬೇಕು. ಕನ್ನಡವನ್ನು ಮಾತನಾಡುವ ಜನರು ಇತರ ಭಾಷಿಕರೊಡನೆ ವ್ಯವಹರಿಸಲು ಆ ಭಾಷೆಗಳನ್ನು ಕಲಿಯುವುದಾಗಲೀ ಇತರ ಭಾಷಿಕರು ತಮ್ಮ ವ್ಯವಹಾರಕ್ಕಾಗಿ ಕನ್ನಡವನ್ನು ಕಲಿಯುವುದಾಗಲೀ, ಅನೌಪಚಾರಿಕವಾಗಿ ಗಡಿ ಪ್ರದೇಶದಲ್ಲಿ ನಡೆಯುತ್ತಲೇ ಬಂದಿವೆ. ಆದರೆ ಕೆಲವೊಂದು ಸಂದರ್ಭದಲ್ಲಿ ಭಾಷಿಕರು ಪರಸ್ಪರ ಸಂಪರ್ಕದಲ್ಲಿದ್ದರೂ, ಸಾಮಾಜಿಕವಾದ ಹಲವು ಕಾರಣಗಳಿಂದ ಇನ್ನೊಂದು ಭಾಷೆಯನ್ನು ಕಲಿಯಬೇಕಾದ ಪ್ರಸಂಗ ಒದಗುವುದಿಲ್ಲ. ಈ ಸಾಮಾಜಿಕ ಕಾರಣಗಳು ಹಲವು. ಉದಾ.ಗೆ ಸಾಮಾಜಿಕವಾಗಿ ಉನ್ನತ ಜಾತಿ ವರ್ಗಗಳಿಗೆ ಸೇರಿದವರು ಇನ್ನೊಂದು ಭಾಷೆಯನ್ನು ಕಲಿಯಬೇಕಾದ ಒತ್ತಾಯಗಳಿಗೆ ಒಳಗಾಗುವುದಿಲ್ಲ. ಕರಾವಳಿಯಲ್ಲಿ

ತುಳು ಭಾಷಿಕರಿಗೆ ಕನ್ನಡ ಬರುವುದು ಎಷ್ಟು ಸಹಜವೋ ಅಷ್ಟು ಸಹಜವಾಗಿ ಎಲ್ಲ ಕನ್ನಡಿಗರೂ ತುಳು ಭಾಷೆಯನ್ನು ಕಲಿತಿರುವುದಿಲ್ಲ. ಹಾಗೆಯೇ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಸಾಮಾಜಿಕ ಸಂಪರ್ಕದ ಕೊರತೆಯಿಂದಾಗಿ ಉರ್ದು ಭಾಷಿಕರಾದ ಮಹಿಳೆಯರು ಕನ್ನಡ ಕಲಿಯದೇ ಉಳಿಯುತ್ತಾರೆ. ಆದರೆ ಅದೇ ಉರ್ದು ಭಾಷೆಯನ್ನಾಡುವ ಪುರುಷರು ಕನ್ನಡ ಕಲಿತಿರುತ್ತಾರೆ. ಈ ಸಂಕೀರ್ಣ ಪರಿಸ್ಥಿತಿಗೆ ಆರ್ಥಿಕ, ಧಾರ್ಮಿಕ ಆಯಾಮಗಳು ಸೇರಿಕೊಳ್ಳುತ್ತವೆ.

ಕರ್ನಾಟಕದಲ್ಲಿ ನೆಲೆಸಿರುವ ಅನ್ಯಭಾಷಿಕರು ಕನ್ನಡವನ್ನು ಕಲಿಯುವುದಿಲ್ಲ ಎಂಬ ಮಾತನ್ನು ಒಂದು ಆರೋಪವಾಗಿ ಮತ್ತೆಮತ್ತೆ ಕೇಳುತ್ತೇವೆ. ಬೆಂಗಳೂರಿನಂತಹ ಪ್ರದೇಶಗಳಲ್ಲಿ ಕಾಲದಿಂದ ಕಾಲಕ್ಕೆ ಇಂತಹ ಆರೋಪವನ್ನು ಮಾಡುತ್ತಲೇ ಬರಲಾಗಿದೆ. ವಾಸ್ತವವಾಗಿ ಒಂದು ಭಾಷೆಯನ್ನಾಡುವ ಜನರು ಇನ್ನೊಂದು ಭಾಷೆಯನ್ನು ಏಕೆ ಕಲಿಯುತ್ತಾರೆ ಅಥವಾ ಏಕೆ ಕಲಿಯುವುದಿಲ್ಲ ಎಂಬುದನ್ನು ನಾವು ಕೇವಲ ವ್ಯಕ್ತಿಗತ ಆಯ್ಕೆಗಳ ನೆಲೆಯಲ್ಲಿ ಪರಿಶೀಲಿಸಲು ಸಾಧ್ಯವಿಲ್ಲ. ಸಾಮಾಜಿಕ ಭಾಷಾಶಾಸ್ತ್ರದ ಅಧ್ಯಯನಗಳು ಈ ಬಗೆಗೆ ಸಾಕಷ್ಟು ಒಳನೋಟಗಳನ್ನು ನೀಡಿವೆ. ಭಾಷೆಯನ್ನು ಕಲಿಯುವವರು ಹಾಗೆ ಕಲಿಯಬೇಕಾದ ಸಂದರ್ಭದಲ್ಲಿ ಇದ್ದರೆ ಅವರು ಕಲಿಯುವುದು ಒಂದು ಸಹಜ ಪ್ರಕ್ರಿಯೆಯಾಗುತ್ತದೆ. ಒಂದು ನಿರ್ದಿಷ್ಟ ಸಂದರ್ಭವನ್ನು ಗಮನಿಸೋಣ. ಕಟ್ಟಡ ಕೆಲಸಗಾರರ ಗುಂಪು ಒಂದಿದೆ ಎಂದುಕೊಳ್ಳಿ. ಈ ಗುಂಪನ್ನು ಅದರ ನಾಯಕ ವ್ಯಕ್ತಿ ಯಾವುದೋ ದೂರದ ಭಾಷಾಪ್ರದೇಶದಿಂದ ಕರೆದು ತಂದಿರಬಹುದು. ಈ ಗುಂಪು ತನ್ನ ಕೆಲಸದ ಅವಧಿಯಲ್ಲಿ ಸಂಪೂರ್ಣವಾಗಿ ಆ ಪ್ರದೇಶದ ಭಾಷಾಸಮುದಾಯದಿಂದ ಬೇರ್ಪಟ್ಟಿರುತ್ತದೆ. ಅವರ ವ್ಯವಹಾರಗಳೆಲ್ಲಾ ಗುಂಪಿನ ಒಳಗೇ ನಡೆಯುತ್ತಿರುತ್ತವೆ. ಇಲ್ಲಿನ ಕೆಲಸ ಮುಗಿದ ಮೇಲೆ ಇಡೀ ಗುಂಪಿನ ಮಂದಿ ಬೇರೊಂದೆಡೆಗೆ ಹೋಗುತ್ತಾರೆ. ಗುಂಪಿನಲ್ಲಿರುವ ಸದಸ್ಯರಲ್ಲಿ ಕೆಲವರು ತೊರೆದು ಹೋಗಬಹುದು. ಮತ್ತೆ ಕೆಲವರು ಅದೇ ಭಾಷೆಯನ್ನಾಡುವವರು ಬಂದು ಸೇರಬಹುದು. ಒಟ್ಟಾರೆ ಅವರು ಇನ್ನೊಂದು ಭಾಷೆಯೊಡನೆ ಸಂಪರ್ಕವನ್ನೇ ಹೊಂದುವುದಿಲ್ಲ. ಭಾಷೆ ಕಲಿಯುವ ಅಗತ್ಯ ಬೀಳುವುದಿಲ್ಲ. ಹಾಗಾಗಿ ಅವರು ಕನ್ನಡ ಕಲಿಯದೇ ಉಳಿಯಲು ಸಾಧ್ಯ. ಇದನ್ನು ನಾವು ಅವರ ಭಾಷಾದುರಭಿಮಾನ ಎಂದು ಬಣ್ಣಿಸಲು ಸಾಧ್ಯವಾಗುವುದಿಲ್ಲ. ಅಥವಾ ತಮ್ಮ ಭಾಷೆಯಲ್ಲೇ ವ್ಯವಹರಿಸುವುದನ್ನು ಭಾಷಾಭಿಮಾನವೆಂದು ವಿವರಿಸುವುದೂ ಸರಿಯಲ್ಲ.

ಕರ್ನಾಟಕದ ವಿವಿಧ ಗಡಿಭಾಗಗಳಲ್ಲಿ ಹಲವಾರು ಶತಮಾನಗಳಿಂದ ಅನ್ಯ ಭಾಷಿಕರು ಕನ್ನಡ ಜನಸಮುದಾಯದೊಡನೆ ಬದುಕುತ್ತಿದ್ದಾರೆ. ಕೇವಲ ವ್ಯಾವಹಾರಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿಯೂ ಹೀಗೆ ಭಾಷಾ ಸಮುದಾಯಗಳು ಒಂದಕ್ಕೊಂದು ತೆರೆದುಕೊಂಡು ಜೀವಿಸುತ್ತಿವೆ. ಹೀಗಲ್ಲದೆ ಕೆಲವು ಭಾಷಾಸಮುದಾಯಗಳು ಕನ್ನಡ ನಾಡಿನ ವಿವಿಧ ಭಾಗಗಳಲ್ಲಿ ಶತಮಾನಗಳಿಂದ ಬದುಕುತ್ತಿದ್ದರೂ ಅವು ಮುಚ್ಚಿದ ಸಮುದಾಯಗಳಾಗಿವೆ. ಅಂದರೆ ಅವರು ವ್ಯವಹಾರಕ್ಕಾಗಿ, ಜೀವನ ನಿರ್ವಹಣೆಗಾಗಿ

ಕನ್ನಡ ಭಾಷಿಕರನ್ನು ಅವಲಂಬಿಸಿದರೂ ಕನ್ನಡ ಭಾಷಿಕರು ಈ ಸಮುದಾಯಗಳೊಡನೆ ಯಾಜಮಾನ್ಯದ ನೆಲೆಯಲ್ಲೇ ಇರುತ್ತಾರೆ. ಉದಾ.ಗೆ ತೆಲುಗು ಮಾತಾಡುವ ಮ್ಯಾಸಬೇಡರು ಹಲವಾರು ಕಡೆಗಳಲ್ಲಿ ಹೀಗೆ ಕನ್ನಡ ಭಾಷಿಕರ ನಡುವೆ ಮುಚ್ಚಿದ ಸಮುದಾಯಗಳಾಗಿ ಜೀವಿಸುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಅಲ್ಲಿನ ಸಮುದಾಯಗಳಿಗೆ ಕನ್ನಡವನ್ನು ಕಲಿಯುವ ಅವಕಾಶಗಳು ಉಂಟಾದರೂ ಕನ್ನಡಿಗರಿಗೆ ಆ ಸಮುದಾಯಗಳ ಭಾಷೆಯನ್ನು ಕಲಿಯುವ ಒತ್ತಾಯಗಳು ಬರುವುದಿಲ್ಲ. ಎರಡು ಭಾಷಿಕಸಮುದಾಯಗಳು ಪರಸ್ಪರ ತೆರೆದುಕೊಂಡಿದ್ದಾಗ ಮಾತ್ರ ಎರಡೂ ಕಡೆಗಳಲ್ಲಿ ದ್ವಿಭಾಷಿಕತೆ ಒಂದು ಸಾಮಾಜಿಕ ಅಂಶವಾಗಿ ಕಂಡು ಬರುತ್ತದೆ. ಹೀಗಲ್ಲದೇ ಹಲವಾರು ಅಲೆಮಾರಿ ಸಮುದಾಯಗಳು ನಾಡಿನಲ್ಲಿ ಇವೆ. ಇವರು ಕಳೆದ ಐವತ್ತು ವರ್ಷಗಳಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರಗಳು ಕೈಗೊಂಡ ಕಲ್ಯಾಣ ಕಾರ್ಯಕ್ರಮಗಳಿಂದಾಗಿ ಅಲ್ಲಲ್ಲಿ ನೆಲೆಸುವಂತಾಗಿದ್ದರೂ ಇಂದಿಗೂ ಅಲೆಮಾರಿಯಾಗಿಯೇ ಉಳಿದಿರುವ ಸಮುದಾಯಗಳು ಸಾಕಷ್ಟಿವೆ. ಇಂತಹವರು ತಮ್ಮ ಜೀವನನಿರ್ವಹಣೆಗಾಗಿ ಅಗತ್ಯವಿದ್ದಷ್ಟು ಕನ್ನಡವನ್ನು ಕಲಿಯುತ್ತಾರೆ. ಉಳಿದಂತೆ ತಮ್ಮ ಸಮುದಾಯದ ಭಾಷೆಯನ್ನು ಬಳಸಿಕೊಳ್ಳುತ್ತಾರೆ. ಇವರ ಭಾಷೆಗಳನ್ನು ಕನ್ನಡಿಗರು ಕಲಿಯಬೇಕಾದ ಪ್ರಸಂಗಗಳು ಬರುವುದಿಲ್ಲ. ಇದಲ್ಲದೆ ಆದಿವಾಸಿಗಳು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಪೌರಸಮಾಜದೊಡನೆ ಕನಿಷ್ಠ ಸಂಪರ್ಕವನ್ನು ಹೊಂದುವ ಇವರಿಗೆ ಕನ್ನಡ ಭಾಷೆಯ ಅಗತ್ಯ ಕನಿಷ್ಠ ಪ್ರಮಾಣದಲ್ಲಿ ಇರುತ್ತದೆ. ಈಚಿನ ದಶಕಗಳಲ್ಲಿ ಈ ಆದಿವಾಸಿಗಳನ್ನು ಸಮಾಜದ ಮುಖ್ಯಧಾರೆಗೆ ಕರೆತರುವ ಯೋಜನೆಗಳು ಜಾರಿಗೆ ಬಂದಿವೆ. ಹೀಗಾಗಿ ಇವರ ಎಳೆಯ ತಲೆಮಾರಿನ ಮಕ್ಕಳು ಕನ್ನಡವನ್ನು ಔಪಚಾರಿಕವಾಗಿ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಇಂತಹ ಜನ ಸಮುದಾಯಗಳು ನಿಧಾನವಾಗಿ ತಮ್ಮ ಚಹರೆಗಳನ್ನು ಕನ್ನಡ ಭಾಷಾಸಮುದಾಯಕ್ಕೆ ಹೊಂದಿಸಿಕೊಂಡರೂ ಆಶ್ಚರ್ಯವಿಲ್ಲ.

ಕೆಲವು ವಿಸ್ತೃತ ಭಾಷಾಸಮುದಾಯಗಳ ಬಗೆಗೆ ನಾವು ಪ್ರತ್ಯೇಕವಾಗಿಯೇ ಚರ್ಚಿಸಬೇಕು. ತುಳು ಮಾತಾಡುವ ಜನಸಮುದಾಯ ಕರ್ನಾಟಕದ ದಕ್ಷಿಣ ಕರಾವಳಿಯಲ್ಲಿದ್ದಾರೆ. ಈ ಭಾಷಿಕರು ಜೀವನ ನಿರ್ವಹಣೆಗಾಗಿ ಕರ್ನಾಟಕದ ಹೊರಗೂ ಇದ್ದಾರೆ. ಆದರೆ ಅವರ ಸಾಂಸ್ಕೃತಿಕ ನೆಲೆ ಮಾತ್ರ ಕರಾವಳಿಯ ಪ್ರದೇಶವೇ ಆಗಿದೆ. ಇವರು ತಲೆಮಾರುಗಳಿಂದ ಕನ್ನಡದಲ್ಲಿ ವ್ಯವಹರಿಸಬಲ್ಲವರು. ನಾವು ಹಿಂದೆಯೇ ಗುರುತಿಸಿದಂತೆ ತುಳುವನ್ನು ಕಲಿಯಲೇಬೇಕಾದ ಒತ್ತಾಯ ಕನ್ನಡ ಸಮುದಾಯಕ್ಕಿಲ್ಲ. ಹಾಗೆ ಕಲಿತರೂ ಗ್ರಹಿಕೆಯ ಸಾಮರ್ಥ್ಯವನ್ನು ಮಾತ್ರ ಪಡೆದುಕೊಳ್ಳುವುದುಂಟು. ಇಂತಹದೇ ಇನ್ನೊಂದು ಸಮುದಾಯ ಕೊಡವ ಭಾಷಿಕರದು. ಈ ಭಾಷೆಯನ್ನಾಡುವ ಜನರನ್ನು ಸಾಮಾನ್ಯವಾಗಿ ಕೊಡವರು ಎಂದು ಕರೆಯಲಾಗಿದೆಯಾದರೂ ಆ ಸಮಾಜ ಮಾತ್ರ ಕೊಡವರನ್ನೂ ಒಳಗೊಂಡಂತೆ ಇನ್ನೂ ವಿಸ್ತೃತವಾಗಿದೆ. ಕನ್ನಡ, ತುಳು, ಮಲೆಯಾಳಂ, ಮತ್ತು ಕೊಡವ ಭಾಷೆಗಳು ಒಂದು ಚಿಕ್ಕ ಭೂಪ್ರದೇಶದಲ್ಲಿ ಒಟ್ಟಾಗಿ ವ್ಯವಹಾರದಲ್ಲಿ ಇರುವುದರಿಂದ ಅದೊಂದು ಬಹುಭಾಷಿಕ ಪ್ರದೇಶವಾಗಿದೆ. ಆ

ವಿನ್ಯಾಸದಲ್ಲಿ ಕನ್ನಡಕ್ಕೊಂದು ಸಂಕೀರ್ಣ ಸ್ಥಾನವಿದೆ. ಅಲ್ಲಿ ಕನ್ನಡಿಗರು ಏಕಭಾಷಿಕರಾಗಿ ಉಳಿಯುವ ಸಂದರ್ಭಗಳು ಕಡಿಮೆ. ಇತರ ಭಾಷೆಗಳ ವ್ಯಾವಹಾರಿಕ ಸಾಮರ್ಥ್ಯವನ್ನು ಪಡೆದುಕೊಳ್ಳುವುದು, ಅಲ್ಲಿ ಅಗತ್ಯವಾಗಿದೆ.

ಕೊಂಕಣಿ ಮಾತಾಡುವ ಜನರು ಕರ್ನಾಟಕದ ಕರಾವಳಿಯ ಜಿಲ್ಲೆಗಳಲ್ಲಿ ಹರಡಿಕೊಂಡಿದ್ದಾರೆ. ಇದೊಂದು ಸಂಕೀರ್ಣ ಸಮಾಜ. ಹಲವು ವೃತ್ತಿಗಳ, ಧರ್ಮಗಳ ಜನರು ಈ ಸಮುದಾಯಕ್ಕೆ ಸೇರುತ್ತಾರೆ. ತಮ್ಮ ದೈನಂದಿನ ಬದುಕಿಗಾಗಿ ಕನ್ನಡವನ್ನು ಕಲಿಯುತ್ತಾರೆ. ಇದೇ ಮಾತು ಇವರೊಡನೆ ಬದುಕುತ್ತಿರುವ ಕನ್ನಡಿಗರಿಗೂ ಅನ್ವಯಿಸುತ್ತದೆ. ಕೊಂಕಣಿ ಭಾಷಿಕರೊಡನೆ ವ್ಯವಹಾರವುಳ್ಳ ಜನರು ಕೊಂಕಣಿ ಭಾಷೆಯನ್ನು ಕಲಿಯುತ್ತಾರೆ. ಈ ಸಂಕೀರ್ಣ ಕೊಂಕಣಿ ಭಾಷಿಕ ಸಮುದಾಯದಲ್ಲಿ ಕೊಂಕಣಿಯ ಹಲವು ಪ್ರಭೇದಗಳು ಸೃಷ್ಟಿಯಾಗಿವೆ. ಸಂದರ್ಭಾನುಸಾರ ಕನ್ನಡಿಗರು ಆ ಪ್ರಭೇದಗಳಲ್ಲಿ ತಮಗೆ ಅಗತ್ಯವಾದುದನ್ನು ಕಲಿಯುತ್ತಾರೆ.

ಉರ್ದು ಭಾಷಿಕರು ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಅಧಿಕ ಪ್ರಮಾಣದಲ್ಲಿ ಇದ್ದಾರೆ. ಎಲ್ಲಾ ಕಡೆಯೂ ಬಹಳ ತೆಳುವಾಗಿ ಹರಡಿಕೊಂಡಿರುವುದು ಕಾಣಬರುತ್ತದೆ. ಈ ಭಾಷಿಕರು ಕನ್ನಡ ಭಾಷಿಕರೊಡನೆ ಬೆರೆಯುವ ರೀತಿಯಲ್ಲಿ ಒಂದು ಬಗೆಯ ಸ್ವ-ಅನ್ಯದ ನೆಲೆ ಕಾಣಿಸಿಕೊಳ್ಳುತ್ತದೆ. ಇಸ್ಲಾಂ ಧರ್ಮ ಮತ್ತು ಉರ್ದುಭಾಷೆಯನ್ನು ಸಮೀಕರಿಸುವ ಪ್ರಯತ್ನ ಎದ್ದುಕಾಣುತ್ತದೆ. ಆದರೆ ಉರ್ದು ಮಾತನಾಡಲಾರದ ಮತ್ತು ಅದರ ಅಗತ್ಯವಿಲ್ಲದ ಮುಸ್ಲಿಂ ಸಮುದಾಯಗಳೂ ಕರ್ನಾಟಕದಲ್ಲಿವೆ. ಧಾರ್ಮಿಕ ಕಾರಣಗಳಿಗಾಗಿ ಈ ಭಾಷಿಕರು ಪರ್ಶಿಯನ್ ಮತ್ತು ಅರಾಬಿಕ್ ಭಾಷೆಯನ್ನು ಅಲ್ಪ ಪ್ರಮಾಣದಲ್ಲಿ ಬಳಸುತ್ತಾರೆ. ಈ ಉರ್ದು ಭಾಷಿಕರ ಕನ್ನಡಕಲಿಕೆ ಉಳಿದ ಭಾಷಾಸಮುದಾಯಗಳಿಗೆ ಹೋಲಿಸಿ ನೋಡಿದರೆ ಬಹಳ ಸಂಕೀರ್ಣವಾಗಿದೆ. ಈ ಭಾಷಿಕರು ವ್ಯಾವಹಾರಿಕವಾಗಿ ಕನ್ನಡವನ್ನು ಕಲಿಯುತ್ತಾರೆ. ಈ ಮಾತು ಕನ್ನಡಿಗರಿಗೂ ಅನ್ವಯಿಸುತ್ತದೆ. ಆದರೆ ಸಮುದಾಯದ ಜೀವನ ಕ್ರಮದಲ್ಲಿ ಒಂದು ರೀತಿಯಲ್ಲಿ ಸಮಾಜದೂರವಾಗಿ ಉಳಿದಿರುವ ಈ ಮುಸ್ಲಿಂ ಸಮುದಾಯ ಈಗ ಕನ್ನಡವನ್ನು ಮೊದಲಿನಷ್ಟು ಅಗತ್ಯವುಳ್ಳ ಭಾಷೆ ಎಂದು ತಿಳಿದಿಲ್ಲ. ಇದಕ್ಕೆ ಸಂಕೀರ್ಣವಾದ ಕಾರಣಗಳಿವೆ. ಸಾಮಾಜಿಕ ಬೇರ್ಪಡುವಿಕೆ ಒಂದು ಕಾರಣ. ರಾಜಕೀಯ ಒತ್ತಡಗಳು ಬೇರೊಂದು ನೆಲೆಯಲ್ಲಿ ಪ್ರವೃತ್ತವಾಗಿವೆ. ಮುಸ್ಲಿಂಸಮುದಾಯದಲ್ಲಿ ಕೆಲವು ವಿಶೇಷ ಪ್ರಸಂಗಗಳನ್ನು ಹೊರತು ಪಡಿಸಿದರೆ ಕನ್ನಡದೊಡನೆ ಸಂಪೂರ್ಣ ಸಂಪರ್ಕ ಕಡಿದುಕೊಂಡವರೂ ಉಂಟು. ಹೆಂಗಸರು ಇದಕ್ಕೆ ನಿದರ್ಶನಗಳಾಗುತ್ತಾರೆ. ಕೆಲವು ಬಗೆಯ ವೃತ್ತಿಗಳಲ್ಲಿ ಇವರ ಪ್ರವೇಶ ಅಸಾಧ್ಯವಾದ್ದರಿಂದ ಕನ್ನಡವನ್ನು ಅನೌಪಚಾರಿಕವಾಗಿ ಕಲಿಯುವ ಅವಕಾಶವು ಕಡಿಮೆ. ನಮ್ಮ ಶಿಕ್ಷಣ ಪದ್ಧತಿಯಲ್ಲೂ ಇದನ್ನು ಪೋಷಿಸುವಂತೆ ಉರ್ದು ಭಾಷಿಕರಿಗೆ ಅವರ ಆಯ್ಕೆಯ ಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವ ಅವಕಾಶ ಲಭಿಸಿದೆ. ಉರ್ದು ಭಾಷೆಯ ಶಾಲೆಗಳು ಕರ್ನಾಟಕದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಈ ನಾಲ್ಕು ಭಾಷೆಗಳ ಬೆಳವಣಿಗೆಗಾಗಿ ಕರ್ನಾಟಕ ಸರ್ಕಾರ ಭಾಷಾ ಅಕಾಡೆಮಿಗಳನ್ನು ಸ್ಥಾಪಿಸಿದೆ. ಆ ಅಕಾಡೆಮಿಗಳ ಕಾರ್ಯವ್ಯಾಪ್ತಿಯನ್ನು ಚರ್ಚಿಸುವುದು ನಮ್ಮ ಆಸಕ್ತಿಯಲ್ಲ. ಆದರೆ ಅವುಗಳನ್ನು ಸ್ಥಾಪಿಸಬೇಕಾದ ಅಗತ್ಯ ಕಂಡು ಬಂದದ್ದು ಗಮನಾರ್ಹ ವಿಷಯ. ಕಳೆದ ಐವತ್ತು ವರ್ಷಗಳಲ್ಲಿ ಈ ನಾಲ್ಕು ಭಾಷೆಗಳ ಜನರ ಭಾಷಿಕ ಅವಕಾಶಗಳನ್ನು ಕಾಯ್ದುಕೊಳ್ಳಲು ಮತ್ತು ವೃದ್ಧಿಗೊಳಿಸಲು ಸರ್ಕಾರ ಈ ಕ್ರಮ ಕೈಗೊಂಡಿದೆ. ಈ ಸಮುದಾಯಗಳಲ್ಲೂ ರಾಜ್ಯಾಂಗವು ಭಾಷಾ ಅಲ್ಪಸಂಖ್ಯಾತರಿಗೆ ನೀಡಿರುವ ಸಂರಕ್ಷಣೆ ಕಲಂಗಳ ಅರಿವಿದೆ. ಅದಕ್ಕಾಗಿ ಅವರು ತಂತಮ್ಮ ಹಕ್ಕುಗಳನ್ನು ಸ್ಥಾಪಿಸಲು ಹೋರಾಡುತ್ತಿದ್ದಾರೆ. ಭಾಷಾ ಅಲ್ಪಸಂಖ್ಯಾತರ ಚೌಕಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ಅಲ್ಲಿ ಉನ್ನತ ಶಿಕ್ಷಣದ ಕೆಲವು ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಕೆಲವು ರಾಜ್ಯಾಂಗಿಕ ಬಿಕ್ಕಟ್ಟುಗಳು ಇದರಿಂದ ಉಂಟಾಗಿವೆ. ಭಾಷಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ಕಾಯ್ದುಕೊಳ್ಳುವ ಈ ಹುನ್ನಾರದಲ್ಲಿ ಭಾಷೆ ಮತ್ತು ಭಾಷಿಕರನ್ನು ಪೂರ್ಣವಾಗಿ ಸಮೀಕರಿಸಲಾಗಿದೆ. ಇದರಿಂದ ಭಾಷೆಗಳಿಗೆ ಆಗಿರುವ ಪ್ರಯೋಜನ ಅಷ್ಟರಲ್ಲೇ ಇದೆ.

ತುಳು ಭಾಷೆಯನ್ನು ರಾಜ್ಯಾಂಗದ ಎಂಟನೆಯ ಅನುಚ್ಛೇದದ ಭಾಷೆಯನ್ನಾಗಿ ಪರಿಗಣಿಸಬೇಕೆಂದು ಹೋರಾಟ ನಡೆದಿದೆ. ಕೊಂಕಣಿಯನ್ನು ಗೋವಾದ ರಾಜ್ಯ ಭಾಷೆಯನ್ನಾಗಿ ಪರಿಗಣಿಸಿ ಅದಕ್ಕೆ ರಾಜ್ಯಾಂಗದಲ್ಲಿ ಮನ್ನಣೆ ನೀಡುವಾಗ ಅದಕ್ಕೆ ಲಿಪಿಯ ಸಮಸ್ಯೆ ಅಷ್ಟಾಗಿ ಕಾಡಲಿಲ್ಲ. ಹಾಗೆ ನೋಡಿದರೆ ಭಾರತದಲ್ಲಿ ಈ ಕೊಂಕಣಿ ಭಾಷೆಯನ್ನು ಬೇರೆ ಬೇರೆ ಕಡೆ ಬೇರೆ ಬೇರೆ ಲಿಪಿಗಳಲ್ಲಿ ಬರೆಯಲಾಗುತ್ತಿದೆ. ದೇವನಾಗರಿ ಮತ್ತು ಕನ್ನಡ ಲಿಪಿಗಳನ್ನು ಕರ್ನಾಟಕದಲ್ಲಿ ಬಳಸಿಕೊಳ್ಳಲಾಗುತ್ತಿದೆ. ಕನ್ನಡ ಲಿಪಿಯ ಬಳಕೆ ಮಾಡುವ ಬಗೆಗೆ ಬಹುಮತದ ಒಪ್ಪಿಗೆ ಇದ್ದರೂ, ವ್ಯಾಪಕ ವಿರೋಧಗಳೂ ಇವೆ. ಅಖಿಲಭಾರತ ಮಟ್ಟದಲ್ಲಿ ಕೊಂಕಣಿಗೆ ದೇವನಾಗರಿ ಲಿಪಿಯನ್ನು ನಿಗದಿಪಡಿಸಲಾಗಿದೆ. ಕೇಂದ್ರ ಸರ್ಕಾರದ ಪರೀಕ್ಷೆಗಳಲ್ಲಿ ಕೊಂಕಣಿ ಭಾಷೆಯನ್ನು ಆಯ್ದುಕೊಳ್ಳುವವರು ದೇವನಾಗರಿ ಲಿಪಿಯಲ್ಲಿ ಬರೆಯಬೇಕೆಂಬ ನಿಯಮವಿದೆ. ಈ ಕಾರಣದಿಂದ ಕೆಲವರು ಕರ್ನಾಟಕದಲ್ಲಿ ಕೊಂಕಣಿಯನ್ನು ದೇವನಾಗರಿ ಲಿಪಿಯಲ್ಲೇ ಕಲಿಸಬೇಕೆಂಬ ವಾದ ಮಂಡಿಸುತ್ತಿದ್ದಾರೆ. ಆದರೆ ಕರ್ನಾಟಕದ ಕೊಂಕಣಿ ಅಕಾಡೆಮಿ ಕನ್ನಡ ಲಿಪಿಯ ಪರವಾಗಿಯೇ ಇದೆ. ಕರ್ನಾಟಕದ ಶಾಲೆಗಳಲ್ಲಿ ಕೊಂಕಣಿಯನ್ನು ಒಂದು ಭಾಷೆಯನ್ನಾಗಿ ಕಲಿಸುವ ಪ್ರಸ್ತಾವ ಈಗ ಚರ್ಚೆಯಲ್ಲಿದೆ. ಒಮ್ಮೆ ಅದು ಜಾರಿಗೆ ಬಂದರೆ ಆ ಶಿಕ್ಷಣವನ್ನು ನೀಡಲು ಅನುಕೂಲವಾಗುವಂತೆ ಪಠ್ಯಪುಸ್ತಕಗಳನ್ನು ಕನ್ನಡ ಲಿಪಿಯಲ್ಲಿ ಸಿದ್ಧಪಡಿಸಬೇಕಾಗುತ್ತದೆ. ಇದು ಒಂದು ಪ್ರಮುಖವಾದ ನಿರ್ಧಾರವೆಂದು ತೋರುತ್ತದೆ. ಕನ್ನಡ ಲಿಪಿಯನ್ನು ಹೀಗೆ ಮತ್ತೊಂದು ಆಧುನಿಕ ಭಾರತೀಯ ಭಾಷೆಯನ್ನು ಬರೆಯಲು ಬಳಸಲಾಗುತ್ತಿರುವುದು ಗಣನೀಯ ಅಂಶ.

ತುಳು ಭಾಷೆಯನ್ನು ತುಳು ಲಿಪಿಯಲ್ಲೇ ಬರೆಯಬೇಕೆಂಬ ಅಪೇಕ್ಷೆ ಈಚೆಗೆ ಮೂಡಿದೆ. ತುಳುವಿನ ಲಿಪಿಯನ್ನು ಗುರುತಿಸಿ ಒಪ್ಪಿಕೊಂಡದ್ದೇ ಒಂದೆರಡು ದಶಕಗಳಿಂದೀಚೆಗೆ. ಆದರೆ ಈಗಾಗಲೇ ಕನ್ನಡ ಲಿಪಿಯನ್ನು ಬಳಸಿ ತುಳು ಬರೆಯುವುದು

ರೂಢಿಯಾಗಿದೆ. ಹಲವು ಸಾಹಿತ್ಯ ಕೃತಿಗಳ ಜೊತೆಗೆ ತುಳು ನಿಘಂಟು ಕೂಡಾ ಕನ್ನಡ ಲಿಪಿಯನ್ನೇ ಬಳಸಿಕೊಂಡಿವೆ. ತುಳು ಭಾಷೆಯನ್ನು ಈಗ ಒಂದು ಆಧುನಿಕ ಭಾರತೀಯ ಭಾಷೆಯನ್ನಾಗಿ ನೆಲೆಗೊಳಿಸಬೇಕೆಂಬ ಯತ್ನ ಮುಂದುವರೆದಿದೆ. ಹಾಗಾದಾಗಲೂ ಕನ್ನಡ ಲಿಪಿ ಅಲ್ಲಿ ಬಳಕೆಯಾಗುವುದು ಅನಿವಾರ್ಯವಾಗಬಹುದು.

ಕೊಡವ ಭಾಷಿಕರ ಒಂದು ಸಮುದಾಯ ಕೊಡಗು ಪ್ರದೇಶಕ್ಕೆ ಸ್ವಾಯತ್ತತೆಯನ್ನು ಕೋರುತ್ತಿದೆ. ಅದನ್ನೊಂದು ಜನಾಂಗಿಕ ಹೋರಾಟವನ್ನಾಗಿ ಪರಿವರ್ತಿಸಲು ರಾಷ್ಟ್ರೀಯ ವೇದಿಕೆಗಳನ್ನು ಬಳಸಲಾಗುತ್ತಿದೆ. ಆದರೆ ಈ ಹೋರಾಟದಲ್ಲಿ ಕೊಡವ ಕನ್ನಡಗಳ ಸಂಬಂಧ ಮುಂಚೂಣಿಗೆ ಬಂದದ್ದೇ ತೋರುತ್ತಿಲ್ಲ. ಈ ಭಾಷೆಯಲ್ಲಿ ಬರವಣಿಗೆ ಕಡಿಮೆ. ಇರುವ ಬರೆವಣಿಗೆಯೂ ಕನ್ನಡ ಲಿಪಿಯಲ್ಲಿ ಇದೆ. ಅಲ್ಲಿನ ಮೌಖಿಕ ಸಾಹಿತ್ಯವನ್ನು ಕನ್ನಡ ಲಿಪಿಯಲ್ಲೇ ದಾಖಲಿಸಲಾಗಿದೆ. ಕೆಲವು ವರ್ಷಗಳ ಹಿಂದೆ ಪ್ರಕಟವಾಗುತ್ತಿದ್ದ ಕೊಡವ ಭಾಷೆಯ ಪತ್ರಿಕೆಗಳು ಕನ್ನಡ ಲಿಪಿಯನ್ನೇ ಬಳಸುತ್ತಿದ್ದವು.

ಈ ನಾಲ್ಕು ಭಾಷೆಗಳನ್ನು ವಿಶೇಷ ಚೌಕಟ್ಟಿನಲ್ಲಿ ಪರಿಶೀಲಿಸಿದ್ದೇವೆ. ಕನ್ನಡ ನಾಡಿನಲ್ಲಿ ಇವುಗಳ ಅಸ್ತಿತ್ವದ ಬಗೆಗೆ ಇರುವ ಚಿಂತನೆಗಳನ್ನು ಗಮನಿಸಿದ್ದೇವೆ. ಆದರೆ ಕನ್ನಡ ಭಾಷಾಸಮುದಾಯ ಬೇರೆ ಬೇರೆ ರೀತಿಯ ಸಂಬಂಧಗಳನ್ನು ಈ ಸಮುದಾಯಗಳೊಡನೆ ರೂಪಿಸಿಕೊಂಡಿದೆ. ಅವುಗಳಲ್ಲಿ ತಲೆ ಎತ್ತುತ್ತಿರುವ ಅಸ್ಮಿತೆಯ ಹೋರಾಟವನ್ನು ಕನ್ನಡ ವಿರೋಧೀ ನೆಲೆಯಲ್ಲಿ ಪರಿಭಾವಿಸುವ ಚಿಂತನೆಗಳೂ ಕಾಣತೊಡಗಿವೆ. ಇವು ಭಾಷಾವಾರುಪ್ರಾಂತ ರಚನೆಯಲ್ಲೇ ಬೀಜ ರೂಪವಾಗಿ ಅಡಗಿದ್ದ ವೈರುಧ್ಯಗಳು. ಚಾರಿತ್ರಿಕ ವಿನ್ಯಾಸಗಳಿಂದಾಗಿ ಈ ವೈರುಧ್ಯಗಳು ಈಗ ಹೊಸ ಆಕಾರದಲ್ಲಿ ತಲೆ ಎತ್ತುತ್ತಿವೆ. ಮುಂದಿನ ದಿನಮಾನಗಳಲ್ಲಿ ಇವು ಯಾವ ಸ್ವರೂಪವನ್ನು ಪಡೆಯುತ್ತವೆಂದು ಹೇಳುವುದು ಸುಲಭವಲ್ಲ. ಕನ್ನಡ ನಾಡಿನಲ್ಲಿ ಈ ಅಸ್ಮಿತೆಯ ನೆಲೆಗಳನ್ನು ಕನ್ನಡ ಭಾಷಾವಿರೋಧೀ ಎಂದು ಪರಿಗಣಿಸಲು ಕಾರಣಗಳಿಲ್ಲ. ಕರ್ನಾಟಕ ರಾಜ್ಯಸರಕಾರ ಕನ್ನಡವನ್ನು ಪೋಷಿಸುವಾಗಲೇ, ರಾಜ್ಯದ ಒಂದು ಬಹುಸಂಖ್ಯಾತರ ಭಾಷೆಯನ್ನು, ಸಾಂವಿಧಾನಿಕ ಕಟ್ಟುಪಾಡುಗಳನ್ನು ಅನುಸರಿಸಿ ಪೋಷಿಸಬೇಕಾಗುತ್ತದೆ. ಕನ್ನಡಕ್ಕೆ ಅವುಗಳೊಡನೆ ಯಾಜಮಾನ್ಯದ ಸಂಬಂಧವನ್ನು ಕಲ್ಪಿಸುವುದು ಸೂಕ್ತವಾಗದು. ಅನೌಪಚಾರಿಕವಾಗಿ ಈ ನಾಲ್ಕು ಸಮುದಾಯಗಳು ಕನ್ನಡದ ಪ್ರಮುಖ ದ್ವಿಭಾಷಾ ಸಮುದಾಯಗಳಾಗಿವೆ. ಇವುಗಳಲ್ಲಿ ಮೂರು ಭಾಷೆಗಳು ಬೇರೆ ಬೇರೆ ಕಾರಣಗಳಿಂದಾಗಿ ಕನ್ನಡ ಲಿಪಿಯನ್ನು ತಮ್ಮ ಭಾಷೆಗೆ ಅಳವಡಿಸಿಕೊಂಡಿವೆ. ಅವರು ಈಗಾಗಲೇ ದ್ವಿಭಾಷಿಕರು. ತಮ್ಮ ಭಾಷೆಯ ಕಲಿಕೆಯ ನೆಪದಲ್ಲಿ ಕನ್ನಡ ಲಿಪಿಯನ್ನು ಕಲಿತರೆ ಪರೋಕ್ಷವಾಗಿ ಅವರು ಕನ್ನಡ ಸಾಕ್ಷರರೇ ಆದಂತಾಯಿತು. ತಾವು ಬಲ್ಲ, ಕನ್ನಡದ ಬರೆಹರೂಪದ ಗ್ರಹಿಕೆಯ ಸಾಮರ್ಥ್ಯ ಅವರಿಗೆ ಕನಿಷ್ಠ ಪ್ರಯತ್ನದಲ್ಲಿ ಲಭ್ಯವಾಗಿ ಬಿಡುತ್ತದೆ. ಇದಂತೂ ಕನ್ನಡದ ಮಟ್ಟಿಗೆ ಒಂದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ಉರ್ದು ಭಾಷೆಯದು ವಿಶಿಷ್ಟ ಸಮಸ್ಯೆ. ಬಹು ಹಿಂದೆಯೇ ಗಾಂಧೀಜಿಯವರು ಹಿಂದೂಸ್ತಾನಿ ಎಂದು ಕಲ್ಪಿಸಿಕೊಂಡ ಭಾಷೆಯೊಂದನ್ನು ಭಾರತದ ರಾಷ್ಟ್ರಭಾಷೆ

ಎಂದು ಒಪ್ಪಿದ್ದರೆ ಸಮಸ್ಯೆಗಳು ಇಷ್ಟು ತೀವ್ರವಾಗಿರುತ್ತಿರಲಿಲ್ಲ. ಈಗಲೂ ಉರ್ದುವನ್ನು ದೇವನಾಗರಿ ಲಿಪಿಯಲ್ಲಿ ಬರೆಯುವುದು, ಓದುವುದು ಸಾಧ್ಯ. ಹಾಗಿದ್ದಾಗ ದೇವನಾಗರಿ ಲಿಪಿಯ ಯಥಾವತ್ತಾದ ಧ್ವನಿ ಅನುಕರಣೆ ಇರುವ ಕನ್ನಡ ಲಿಪಿ ಉರ್ದು ಭಾಷೆಯ ಬರೆವಣಿಗೆಗೆ ಅನುಕೂಲ ಆಗಬಹುದು. ಈಗಲೂ ಆ ಭಾಷೆಯ ಅಲ್ಪಸ್ವಲ್ಪ ಬರವಣಿಗೆಗಳು ಕನ್ನಡ ಲಿಪಿಯಲ್ಲಿ ಓದಲು ಸಿಗುತ್ತವೆ. ಒಂದು ವೇಳೆ ಕರ್ನಾಟಕದಲ್ಲಿ ಉರ್ದು ಭಾಷೆಯನ್ನು ಕಲಿಸುವ ಅವಕಾಶವನ್ನು ಉಳಿಸಿ, ಬಳಸುವ ಲಿಪಿ ಕನ್ನಡವಾದರೆ ಅದರ ದೂರಗಾಮಿ ಪರಿಣಾಮಗಳೇನು ಎಂಬುದನ್ನು ಯೋಚಿಸಬೇಕಾಗಿದೆ. ಈಗಿರುವ ಸ್ವ–ಅನ್ಯ ಚೌಕಟ್ಟಿನಿಂದ ಈ ಎರಡು ಭಾಷೆಗಳನ್ನಾಡುವ ಸಮುದಾಯಗಳು ಹೊರಬರಲು ಸಾಧ್ಯ. ಈ ಪ್ರಸ್ತಾವ ಮುಂದಿಡುವುದು ಸುಲಭವಾದರೂ ಜಾರಿಗೆ ಕೊಡುವುದು ಕಷ್ಟ. ಹಲವಾರು ಭಾವನಾತ್ಮಕ ಸಂಘರ್ಷಗಳಿಗೆ ಇದು ಕಾರಣವಾಗುತ್ತದೆ. ಆದರೂ ಹಂತಹಂತವಾಗಿ ಈ ಪ್ರಸ್ತಾವವನ್ನು ಜಾರಿಗೆ ಕೊಡುವುದು ಸಾಧ್ಯವೇ ಎಂದು ಪರ್ಯಾಲೋಚಿಸಬೇಕಾಗಿದೆ.

ಭಾಷೆಗೂ ಲಿಪಿಗೂ ಇರುವ ಸಂಬಂಧ ಆಕಸ್ಮಿಕವಾದದ್ದು. ಅದನ್ನು ಸಂಸ್ಕೃತಿಯ ಸಾಂಸ್ಥಿಕ ವಲಯಗಳು ಭಾವನಾತ್ಮಕ ನೆಲೆಗೆ ಒಯ್ದು ಕೂರಿಸಿವೆ. ಆದರೂ ಹಲವು ಶತಮಾನಗಳ ಮಾನವ ಜನಾಂಗದ ಚರಿತ್ರೆಯಲ್ಲಿ ಹೀಗೆ ಭಾಷೆಗಳು ಹಲವು ಲಿಪಿಗಳಲ್ಲಿ ಬರೆವಣಿಗೆಯ ರೂಪವನ್ನು ಕಾಣುತ್ತಿರುವ ನಿದರ್ಶನಗಳಿವೆ. ಎಲ್ಲಕ್ಕಿಂತ ಮುಖ್ಯವಾಗಿ ತಂತ್ರಜ್ಞಾನ ಈಗ ತನ್ನ ಪ್ರವೇಶದಿಂದ ಹೊಸ ಸಾಧ್ಯತೆಯೊಂದನ್ನು ನಮಗೆ ನೀಡಿದೆ. ಒಂದು ಲಿಪಿಯ ಬರೆವಣಿಗೆಯನ್ನು ಇನ್ನೊಂದು ಲಿಪಿಯಲ್ಲಿ ಪಡೆದುಕೊಳ್ಳುವುದು, ಅಂದರೆ ಲಿಪ್ಯಂತರಗೊಳಿಸುವುದು, ಈಗ ಕ್ಷಣಮಾತ್ರದ ಕೆಲಸವಾಗಿದೆ. ಮೇಲುನೋಟಕ್ಕೆ ಇದು ತಂತ್ರಜ್ಞಾನದ ಒಂದು ಚಿಕ್ಕ ಸಾಧನೆ ಎನ್ನಿಸುತ್ತದೆ. ಆದರೆ ಪರಿಣಾಮಗಳು ದೂರಗಾಮಿಯಾಗಿವೆ. ಎರಡು ಕಾರಣಗಳನ್ನು ನಾವು ಈಗ ಪ್ರಸ್ತಾಪಿಸಬಹುದು. ಒಂದು: ನಾವು ಬಲ್ಲ ಒಂದು ಲಿಪಿಯ ಮೂಲಕ ನಾವು ಬಲ್ಲ ಒಂದಕ್ಕಿಂತ ಹೆಚ್ಚು ಭಾಷೆಗಳ ಪಠ್ಯಗಳನ್ನು ಓದಬಹುದು. ಅದಕ್ಕಾಗಿ ಪ್ರತ್ಯೇಕವಾಗಿ ಲಿಪಿಯನ್ನು ಶ್ರಮವಹಿಸಿ ಕಲಿಯಬೇಕಾಗಿಲ್ಲ. ಎರಡು: ಭಾಷೆಗೂ, ಲಿಪಿಗೂ ನಾವು ಕಲ್ಪಿಸಿರುವ ಪಾವಿತ್ರ್ಯದ ಸಂಬಂಧ ನಮ್ಮೆಲ್ಲರ ಅನುಕೂಲಕ್ಕಾಗಿಯೇ ಮುರಿದು ಬೀಳುತ್ತದೆ. ಇದರ ಎಲ್ಲಾ ಪರಿಣಾಮಗಳನ್ನು ನಾವು ಬೇರೊಂದೆಡೆ ಚರ್ಚಿಸಲಿದ್ದೇವೆ. ಆದರೆ ಕರ್ನಾಟಕದ ಬಹುಭಾಷಾ ಸಂದರ್ಭದ ನಿರ್ವಹಣೆಗೆ ಕನ್ನಡ ಲಿಪಿಯ ಬಳಕೆ ಒಂದು ಉಪಯುಕ್ತ ಮಧ್ಯಮ ಮಾರ್ಗವನ್ನು ರೂಪಿಸಬಲ್ಲುದೇ ಎನ್ನುವುದನ್ನು ಚರ್ಚಿಸುವ ಕಾಲ ಈಗ ಬಂದಿದೆ.

ಕರ್ನಾಟಕದಲ್ಲಿ ಪರಸ್ಪರ ದ್ವಿಭಾಷಿಕರಾಗುವ ಇತರ ಸಮುದಾಯಗಳ ಸಂದರ್ಭವನ್ನು ನಾವು ಈಗ ಪರಿಗಣಿಸಬೇಕು. ಅಂತಹ ಮೂರು ಸಮುದಾಯಗಳೆಂದರೆ, ಕನ್ನಡ–ತೆಲುಗು, ಕನ್ನಡ–ಮರಾಠಿ ಮತ್ತು ಕನ್ನಡ–ಮಲೆಯಾಳಂ. ಈ ಮೂರು ಭಾಷೆಗಳನ್ನು ಆಡುವ ರಾಜ್ಯಗಳೊಡನೆ ಕರ್ನಾಟಕ ತನ್ನ ಗಡಿಗೆರೆಗಳನ್ನು ಹಂಚಿಕೊಂಡಿದೆ.

ಈ ಗೆರೆಯ ಆಚೀಚೆಗೆ ಈ ಭಾಷಿಕಸಮುದಾಯಗಳು ನಿರಂತರವಾಗಿವೆ. ಮತ್ತೊಂದು ರಾಜ್ಯದೊಡನೆ ಕರ್ನಾಟಕ ತನ್ನ ಗಡಿಗೆರೆಯನ್ನು ಹಂಚಿಕೊಂಡಿದೆ. ಅದು ತಮಿಳುನಾಡು. ಕನ್ನಡ-ತಮಿಳು ಭಾಷಿಕರ ದ್ವಿಭಾಷಿಕತೆ ಬಹು ಪ್ರಾಚೀನವಾದದ್ದು. ಆದರೂ ಪೂರ್ವಘಟ್ಟಗಳ ಕಾರಣದಿಂದಾಗಿ ತಮಿಳು ಭಾಷಿಕಸಮುದಾಯದೊಡನೆ ಕರ್ನಾಟಕದ ನಿರಂತರತೆ ಕನಿಷ್ಠ ಪ್ರಮಾಣದಲ್ಲಿದೆ. ಇದರಿಂದ ಒಂದೆರಡು ಚಿಕ್ಕ ಪ್ರದೇಶಗಳನ್ನು ಹೊರತುಪಡಿಸಿದರೆ ಕನ್ನಡ ತಮಿಳು ನಿರಂತರತೆ ಕೊಂಚ ಕಡಿಮೆಯೇ. ಆದರೆ ತಮಿಳು ಮಾತಾಡುವ ಜನ ಸಮುದಾಯ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಬೇರೆ ಬೇರೆ ಕಾಲಮಾನಗಳಲ್ಲಿ ಬಂದು ನೆಲೆಸಿದ್ದಾರೆ. ಈ ವಲಸೆಗಳಲ್ಲಿ ಇಲ್ಲೇ ಬಂದು ಬಹುಕಾಲದಿಂದ ವಾಸಿಸುವವರು ಇರುವಂತೆ, ಋತುಮಾನಕ್ಕೆ ಅನುಗುಣವಾಗಿ ತೀರ ವಲಸೆ ಹೋಗುವವರು ಇದ್ದಾರೆ.

ಈ ನಾಲ್ಕು ದ್ರಾವಿಡ ಭಾಷೆಗಳ ಜನಸಮುದಾಯದವರು ಕನ್ನಡದೊಡನೆ ದ್ವಿಭಾಷಿಕ ಸಂಬಂಧವನ್ನು ಬೆಳೆಸಿಕೊಂಡು ಬಂದಿದ್ದಾರೆ. ಇವುಗಳಲ್ಲಿ ಕನ್ನಡ-ಮಲೆಯಾಳಂ ಮತ್ತು ಕನ್ನಡ-ತಮಿಳು ದ್ವಿಭಾಷಿಕ ನೆಲೆಗಳಿಗಿಂತ ಕನ್ನಡ-ತೆಲುಗು ದ್ವಿಭಾಷಿಕತೆಯು ಬಹು ವ್ಯಾಪಕವಾದ ನೆಲೆಯನ್ನು ಹೊಂದಿವೆ. ಕೋಲಾರದಿಂದ ಬೀದರ್‌ವರೆಗೆ ಏಳು ಜಿಲ್ಲೆಗಳನ್ನು ಈ ದ್ವಿಭಾಷಾ ಸಮುದಾಯ ವ್ಯಾಪಿಸಿದೆ. ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಇಂದಿನ ಆಂಧ್ರದ ರಾಯಲಸೀಮ ಪ್ರದೇಶ ಕರ್ನಾಟಕದ ಒಂದು ವಿಸ್ತರಣೆಯೇ ಆಗಿತ್ತು. ಸುಮಾರು ನಾಲ್ಕುನೂರು ವರ್ಷಗಳ ದ್ವಿಭಾಷಿಕ ವಾತಾವರಣ ಈ ಪ್ರದೇಶದಲ್ಲಿ ಇದೆ. ರಾಯಚೂರಿನಿಂದ ಬೀದರ್‌ವರೆಗಿನ ತೆಲುಗು-ಕನ್ನಡ ದ್ವಿಭಾಷಿಕ ಸಮುದಾಯ ಬಹುಶಃ ಇನ್ನೂ ಪ್ರಾಚೀನವಾದದ್ದು. ಆಂಧ್ರದ ಕರೀಂನಗರದ ಪ್ರದೇಶವೇ ಕನ್ನಡದ ಆದಿಕವಿ ಪಂಪ ಇದ್ದ ವೇಮುಲವಾಡ ಆಗಿತ್ತು. ಹೀಗಾಗಿ ಸುಮಾರು ಒಂದು ಸಾವಿರ ವರ್ಷದ ಸಂಪರ್ಕ ಇಲ್ಲಿರುವಂತೆ ತೋರುತ್ತದೆ. ಏನೇ ಇರಲಿ; ಕಳೆದ ಐದು ದಶಕದಲ್ಲಿ ಈ ದ್ವಿಭಾಷಿಕ ಸಮುದಾಯ ಕನ್ನಡದ ಜೊತೆಗಿನ ಸಂಬಂಧವನ್ನು ವಿಭಿನ್ನ ರೀತಿಯಲ್ಲಿ ಬೆಳೆಸಿಕೊಂಡಿದೆ. ಔಪಚಾರಿಕವಾಗಿ ಕನ್ನಡ ಅಧಿಕೃತ ಭಾಷೆ ಆಗಿರುವುದರಿಂದ ಸಾರ್ವಜನಿಕ ವಲಯಗಳಲ್ಲಿ ಕನ್ನಡದ ಬಳಕೆ ಸಹಜವಾಗಿಯೇ ಹೆಚ್ಚಾಗಿದೆ. ಅನೌಪಚಾರಿಕವಾಗಿ ಮತ್ತು ಮೌಖಿಕ ನೆಲೆಯಲ್ಲಿ ಎರಡು ಭಾಷೆಗಳೂ ಸಮ ಪ್ರಮಾಣದಲ್ಲಿ ಬಳಕೆಯಲ್ಲಿರುವಂತೆ ಅಧ್ಯಯನಗಳು ತೋರಿಸುತ್ತಿವೆ. ಏಕೀಕರಣದ ಮುನ್ನ ತೆಲುಗು ಭಾಷೆಯನ್ನು ಕಲಿಸಲು ಅವಕಾಶ ನೀಡುತ್ತಿದ್ದ ಶಾಲೆಗಳು ಈಗಲೂ ಬಳ್ಳಾರಿ ಜಿಲ್ಲೆಯಲ್ಲಿವೆ. ಇಲ್ಲಿನ ಒಂದು ಅಧ್ಯಯನವು ತೋರಿಸಿರುವಂತೆ ಈ ಶಾಲೆಯ ವಿದ್ಯಾರ್ಥಿ ಸಮುದಾಯ ಬಹುಮಟ್ಟಿಗೆ ಹೆಣ್ಣುಮಕ್ಕಳಿಂದ ಕೂಡಿದೆ. ಅಂದರೆ ತೆಲುಗು ಭಾಷಿಕರು ಈಗ ಗಂಡುಮಕ್ಕಳಿಗೆ ತಮ್ಮ ಮೊದಲ ಆಯ್ಕೆಯನ್ನಾಗಿ ಕನ್ನಡದ ಬದಲು ಇಂಗ್ಲಿಶನ್ನು ಗುರುತಿಸಿದಂತೆ ತೋರುತ್ತದೆ. ಉನ್ನತ ಶಿಕ್ಷಣದ ಅವಕಾಶಗಳಿಗಾಗಿ ಅವರು ಕನ್ನಡವನ್ನು ಕಲಿಕೆಯ ಹಂತದಲ್ಲಿ ಬಳಸಿಕೊಂಡು ದಾಟಲು ಯತ್ನಿಸುತ್ತಿದ್ದಾರೆ. ಆದರೆ ಸಾಮಾನ್ಯಶಿಕ್ಷಣದ ನೆಲೆಯಲ್ಲಿ ನಿಂತು ಹೋಗುವ ಹೆಣ್ಣುಮಕ್ಕಳ ಮಟ್ಟಿಗೆ ತೆಲುಗು-ಕನ್ನಡ ದ್ವಿಭಾಷಿಕತೆಯನ್ನೇ ಖಚಿತಪಡಿಸಿದಂತಿದೆ. ತೆಲುಗು ದ್ವಿಭಾಷಿಕರು ಈಗಲೂ

ಕನ್ನಡ ಭಾಷೆಯನ್ನು ಯಜಮಾನ ಭಾಷೆಯೆಂದು ಭಾವಿಸುತ್ತಿಲ್ಲ. ಈ ಸಮುದಾಯಗಳ ನಡುವಣ ಸಾಮಾಜಿಕ ಸಂಬಂಧಗಳು ಸಮಪಾತಳಿಯಲ್ಲಿ ಇರುವುದು ಇದಕ್ಕೆ ಮುಖ್ಯ ಕಾರಣ. ಆದರೂ ಬಳ್ಳಾರಿ ಜಿಲ್ಲೆಯ ಅಧ್ಯಯನಗಳೇ ತೋರಿಸುವಂತೆ ಭೂಮಾಲೀಕ ವರ್ಗ ಮತ್ತು ಪರಿಶಿಷ್ಟವರ್ಗದ ಜನರು ತೆಲುಗು ಮಾತೃಭಾಷೆಯವರು. ಇಷ್ಟೇ ಪ್ರಭಾವಶಾಲಿಯಾದ ಲಿಂಗಾಯತರು ಕನ್ನಡ ಮಾತೃಭಾಷೆಯವರಾಗಿರುವುದನ್ನು ಈ ಅಧ್ಯಯನಗಳು ತೋರಿಸುತ್ತದೆ. ಈ ಪರಿಸ್ಥಿತಿ ರಾಯಚೂರು, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲೂ ಮುಂದುವರೆದಿದೆ. ಸಾಮಾಜಿಕ ಸಂಬಂಧಗಳು ಮತ್ತು ಆರ್ಥಿಕ ಸಂಬಂಧಗಳು ಸಮನೆಲೆಯಲ್ಲಿ ಇರುವ ಕಡೆಗಳಲ್ಲಿ ಈ ದ್ವಿಭಾಷಿಕತೆ ಅಷ್ಟೇನೂ ಇಕ್ಕಟ್ಟಿನ ಪ್ರಸಂಗಗಳನ್ನು ಸೃಷ್ಟಿಸಿಲ್ಲ. ಆದರೆ ಕನ್ನಡದ ಅಧಿಕೃತತೆ ಮತ್ತು ಅದನ್ನು ಮೊದಲ ಭಾಷೆಯಾಗಿ ಹೊಂದಿರುವ ಸಾಮಾಜಿಕ ವರ್ಗ ಹಾಗೂ ಪ್ರತಿಷ್ಠೆ ಇವೆರಡೂ ನಿಧಾನವಾಗಿ ಕೆಲವು ಹೊಸ ನೆಲೆಯ ಬೆಳವಣಿಗೆಗಳಿಗೆ ಕಾರಣವಾಗುತ್ತಿವೆ. ಇವು ಅಲ್ಲಲ್ಲಿ ಸಾಮಾಜಿಕ ಸಂಘರ್ಷಗಳಿಗೆ ದಾರಿ ಮಾಡಿವೆ.

ಇಲ್ಲಿ ಇನ್ನೊಂದು ವಿಶಿಷ್ಟ ಸಂದರ್ಭ ಇರುವಂತೆ ಕಂಡು ಬರುತ್ತಿದೆ. ಈ ಸಾಮಾಜಿಕ ವರ್ಗಗಳಲ್ಲಿ ಕೆಲವರು ಮುಖ್ಯವಾಗಿ ಕನ್ನಡ ಮೊದಲ ಭಾಷೆಯಾಗಿ ಇರುವ ಜಾತಿಗಳವರು, ವೈವಾಹಿಕ ಸಂಬಂಧಗಳಿಗಾಗಿ ತೆಲುಗು ಮೊದಲ ಭಾಷೆ ಆಗಿರುವ ಆಂಧ್ರದ ಕುಟುಂಬಗಳನ್ನು ಆಶ್ರಯಿಸುತ್ತಾರೆ. ಇದರಿಂದ ಇಲ್ಲಿ ಮದುವೆಯಾಗಿ ಬಂದ ಹೆಂಗಸರು ತಾವು ಇದುವರೆಗೂ ಕಲಿಯದಿದ್ದ ಕನ್ನಡವನ್ನು ಕಲಿಯಬೇಕಾದ ಪ್ರಸಂಗ ಎದುರಾಗುತ್ತಿದೆ. ಅವರು ಸದ್ಯದ ಮಾಹಿತಿಗಳನ್ವಯ ದ್ವಿಭಾಷಿಕರಾಗಿ ಉಳಿಯುವ ಸಂದರ್ಭಗಳು ಕಡಿಮೆ. ಏಕೆಂದರೆ ಅವರ ವ್ಯಾವಹಾರಿಕ ಸಂಪರ್ಕಗಳು ಕನ್ನಡ ಬಳಕೆಯನ್ನು ಮಾತ್ರ ಬಯಸುತ್ತವೆ. ಹೀಗಾಗಿ ಅವರು ತಮ್ಮ ತೆಲುಗು ಕೌಶಲಗಳನ್ನು ತವರು ಮನೆಗೆ ಮಾತ್ರ ಮೀಸಲಾಗಿ ಇರಿಸಿಕೊಳ್ಳಬೇಕಾಗುತ್ತದೆ. ದ್ವಿಭಾಷಿಕ ಸಮುದಾಯಗಳಲ್ಲಿ ಇಂತಹ ಸನ್ನಿವೇಶಗಳು ಅಪರೂಪವೇನಲ್ಲ. ಹಾಗೆ ನೋಡಿದರೆ ಕನ್ನಡ–ಮರಾಠಿ ಸಂಬಂಧದಲ್ಲಿ ಇಂಥದ್ದೇ ಪರಿಸ್ಥಿತಿ ಲಿಂಗಾಯತ ಮತ್ತು ಜೈನ ಕುಟುಂಬಗಳಲ್ಲಿ ಇದ್ದಂತೆ ತೋರುತ್ತದೆ. ಮರಾಠಿ ಮೊದಲ ಭಾಷೆಯಾಗಿರುವ ಅಲ್ಲಿನ ಹೆಣ್ಣುಮಕ್ಕಳು ಕನ್ನಡವನ್ನು ವಯಸ್ಕರಾದ ಮೇಲೆ, ಅಂದರೆ ಮದುವೆಯ ಅನಂತರ ಕಲಿತು ತಮ್ಮ ಮರಾಠಿ ಕೌಶಲಗಳನ್ನು ಮಿತಗೊಳಿಸಿಕೊಳ್ಳುತ್ತಾರೆ. ಇದರಿಂದ ಈ ದ್ವಿಭಾಷಿಕತೆ ಮನೆಯ ಹೊರಗೆ ಕಾಣಿಸುವ ಪ್ರಮಾಣದಲ್ಲಿ ಮನೆಯ ಒಳಗೆ ಕಾಣಿಸುವುದಿಲ್ಲ. ಈ ದ್ವಿಭಾಷಿಕತೆಯೇ ಸಾರ್ವಜನಿಕವಲಯದ ವ್ಯಾಪ್ತಿಯಲ್ಲಿ ಮಾತ್ರ ಇರುವಂತಹದ್ದು.

ತೆಲುಗು–ಕನ್ನಡ ದ್ವಿಭಾಷಿಕತೆಯು ಹೈದ್ರಾಬಾದ್–ಕರ್ನಾಟಕ ಎಂದು ಗುರುತಿಸಲಾದ ಜಿಲ್ಲೆಗಳಲ್ಲಿ ಉರ್ದು ಭಾಷೆಯೊಡನೆ ತ್ರಿಕೋನ ಸಂಬಂಧವನ್ನು ರೂಪಿಸಿಕೊಂಡಿದೆ. ಏಕೀಕರಣದ ಅನಂತರ ಭಾಷಿಕವಾಗಿ ಅತ್ಯಂತ ತೀವ್ರತರದ ಪಲ್ಲಟಗಳನ್ನು ಕಾಣಬೇಕಾಗಿದ್ದ ಪ್ರದೇಶ ಇದಾಗಬೇಕಿತ್ತು. ಏಕೆಂದರೆ ಇಲ್ಲಿ ಕನ್ನಡ ಅಧಿಕೃತ ಭಾಷೆಯಾಗಿ ಇರಲಿಲ್ಲ. ಶೈಕ್ಷಣಿಕ ವಿಷಯವಾಗಿ ಇಲ್ಲವೇ ಮಾಧ್ಯಮವಾಗಿ

ಕೂಡಾ ಕನ್ನಡಕ್ಕೆ ಅವಕಾಶಗಳಿರಲಿಲ್ಲ. ಏಕೀಕರಣದ ನಂತರ ಕನ್ನಡ ಈ ನಿರ್ವಾತ ಪ್ರದೇಶವನ್ನು ಸಹಜವೇಗದಿಂದ ಆಕ್ರಮಿಸಿದರೆ ಪರಿಸ್ಥಿತಿ ಬೇರೆಯೇ ಆಗುತ್ತಿತ್ತು. ಆದರೆ ಈ ಪ್ರದೇಶದ ಅಭಿವೃದ್ಧಿಯ ವೇಗವೇ ತೀರಾ ನಿಧಾನಗತಿಯಲ್ಲಿ ಇದ್ದುದರಿಂದ ಈ ಅವಧಿಯಲ್ಲೂ ಕನ್ನಡ ತನ್ನ ವ್ಯಾಪಕ ಪ್ರಭಾವವನ್ನು ಬೀರುವುದು ಸಾಧ್ಯವಾಗಿಲ್ಲ. ಏಕೀಕರಣಪೂರ್ವದಲ್ಲಿ ಇಲ್ಲಿ ಕನ್ನಡವನ್ನು ನೆಲೆಗೊಳಿಸುವ ಹೊಣೆಯನ್ನು ತಮ್ಮ ಜವಾಬ್ದಾರಿ ಎಂದು ತಿಳಿದವರು ವೀರಶೈವರು. ಅವರಷ್ಟೇ ಸಾಮಾಜಿಕವಾಗಿ ಪ್ರಭಾವಶಾಲಿಗಳಾಗಿದ್ದ ಬ್ರಾಹ್ಮಣರು ಮುಖ್ಯವಾಗಿ ಮರಾಠಿಯನ್ನು ತಮ್ಮ ಮೊದಲ ಭಾಷೆಯನ್ನಾಗಿ ಹೊಂದಿದ್ದರು. ಈ ಸಾಮಾಜಿಕ ವಿನ್ಯಾಸದಲ್ಲಿ ಉರ್ದು ತನ್ನ ಸ್ಥಾನವನ್ನು ಅಧಿಕೃತತೆಯ ಹಂತದಿಂದ ಕಡಿಮೆ ಮಾಡಿಕೊಳ್ಳುತ್ತ ನಡೆಯಿತಾದರೂ ಒಟ್ಟು ಪ್ರಗತಿಯಲ್ಲಿ ಕನ್ನಡವು ನಿರೀಕ್ಷಿಸಿದ್ದ ಮಟ್ಟವನ್ನು ಮುಟ್ಟಲು ಸಾಧ್ಯವಾಗಿಲ್ಲ. ಆದರೆ ನಾವು ಮೇಲೆ ಚರ್ಚಿಸಿದ ತೆಲುಗು-ಕನ್ನಡ ಸಾರ್ವಜನಿಕ ದ್ವಿಭಾಷಿಕತೆ ಇಲ್ಲಿ ಕೆಳಸ್ತರಕ್ಕೆ ಇಳಿದಿದೆ. ಇದಕ್ಕೆ ಮುಖ್ಯ ಕಾರಣ ತೆಲುಗು ಮೊದಲ ಭಾಷೆಯಾಗಿ ಇರುವ ಇಲ್ಲಿನ ಭಾಷಿಕ ಸಮುದಾಯಗಳು ಸಾಮಾಜಿಕವಾಗಿ ದುರ್ಬಲವಾಗಿವೆ. ಅಲ್ಲಿ ಚಾರಿತ್ರಿಕ ಒತ್ತಡವು ಕೂಡಾ ತೆಲುಗಿಗೆ ಒತ್ತಾಸೆಯಾಗಿ ಇರಲಿಲ್ಲ. ಆದ್ದರಿಂದ ಬರಲಿರುವ ದಶಕಗಳಲ್ಲಿ ಈ ಪ್ರದೇಶದ ತೆಲುಗು ದ್ವಿಭಾಷಿಕತೆ ಸಾಮುದಾಯಿಕ ನೆಲೆಯಿಂದ ವ್ಯಕ್ತಿಗತ ನೆಲೆಗೆ ದಾಟಿದರೆ ಅಚ್ಚರಿ ಏನಿಲ್ಲ.

ಈ ತೆಲುಗು-ಕನ್ನಡ ದ್ವಿಭಾಷಿಕತೆ ಪ್ರದೇಶದಲ್ಲಿ ಕನ್ನಡ ಮಾತಾಡುವವರು ಕೀಳರಿಮೆಯ ಸ್ಥಿತಿಗೆ ಬರಲಿಲ್ಲ. ಆದರೆ ಕನ್ನಡ-ಮರಾಠಿ ದ್ವಿಭಾಷಿಕತೆಯ ಪ್ರದೇಶಗಳಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಅಲ್ಲಿನ ಸಾಮಾಜಿಕ ವಿನ್ಯಾಸದಿಂದಾಗಿಯೇ ಕನ್ನಡ ಅಧೀನ ಭಾಷೆಯಾಗಿತ್ತು. ಮರಾಠಿ ಭಾಷೆಯ ಉಗಮ, ವಿಕಾಸದಲ್ಲಿ ಕನ್ನಡದ ಕೊಡುಗೆ ಇದೆ. ಎಷ್ಟೋ ಆಚರಣೆಗಳು, ಪುರಾಣಗಳು ಕರ್ನಾಟಕದಿಂದ ಮರಾಠಿ ಪ್ರದೇಶಕ್ಕೆ ಹೋದಂತೆ ತೋರುತ್ತದೆ. ವಿಠಲ ಸಂಪ್ರದಾಯ, ಮೈಲಾರ ಸಂಪ್ರದಾಯ ಮತ್ತು ಎಲ್ಲಮ್ಮ ಸಂಪ್ರದಾಯ ಈ ಮೂರನ್ನು ನಿದರ್ಶನವಾಗಿ ಹೇಳಬಹುದು. ಆದರೆ ಹಲವಾರು ಚಾರಿತ್ರಿಕ ಕಾರಣಗಳಿಂದಾಗಿ ಕನ್ನಡ ಮಾತಾಡುವ ಜನರು ಮರಾಠಿಯ ಅಧಿಕೃತತೆಯ ಒತ್ತಡಕ್ಕೆ ಸಿಲುಕಿ ಅಧೀನರಾದಂತೆ ತೋರುತ್ತದೆ. ಕನ್ನಡ ಮಾತಾಡುವ ಪ್ರದೇಶಗಳ ಒಕ್ಕೂಟಕ್ಕೆ ತೀವ್ರವಾದ ಬಯಕೆ ಒತ್ತಡಗಳು ಈ ದ್ವಿಭಾಷಿಕ ಪ್ರದೇಶದಿಂದಲೇ ಹುಟ್ಟಿಬಂದದ್ದು ಆಕಸ್ಮಿಕವಲ್ಲ.

ಕಳೆದ ಐದು ದಶಕಗಳಲ್ಲಿ ಕನ್ನಡ ತನ್ನ ಅಧಿಕೃತತೆಯನ್ನು ಸ್ಥಾಪಿಸಲು ಯತ್ನಿಸಿದೆ. ದ್ವಿಭಾಷಿಕತೆಯಲ್ಲಿ ಸಮಾನಸ್ಕಂದತೆಯನ್ನು ರೂಢಿಸಲು ಪ್ರಯತ್ನಗಳು ನಡೆದಿವೆ. ಈ ನಿಟ್ಟಿನಲ್ಲಿ ಯಶಸ್ಸು ಸಾಕಷ್ಟು ದೊರೆತಂತೆ ತೋರುತ್ತದೆ. ಮರಾಠಿ ಮೊದಲ ಭಾಷೆಯಾಗುಳ್ಳ ಜನವರ್ಗದ ಸಾಮಾಜಿಕ, ಆರ್ಥಿಕ ವರ್ಚಸ್ಸನ್ನು ಮೀರಲು ಪ್ರಯತ್ನಗಳು ನಡೆದಿವೆ. ಅಲ್ಲಿನ ಔದ್ಯೋಗಿಕ ಮತ್ತು ಕೃಷಿ ಸಂಬಂಧದ ಹೊಸ ವಿನ್ಯಾಸಗಳು ಕನ್ನಡ ಮೊದಲ ಭಾಷೆಯಾಗುಳ್ಳ ಜನರನ್ನು ನಿರ್ಣಯಾತ್ಮಕ ನೆಲೆಗೆ ತಂದು ನಿಲ್ಲಿಸಿವೆ. ಇದೆಲ್ಲವೂ

ಇನ್ನೂ ರೂಪುಗೊಳ್ಳುತ್ತಿರುವ ವಿನ್ಯಾಸಗಳು, ಮತ್ತು ಎಲ್ಲ ಪ್ರದೇಶಗಳಲ್ಲೂ ಏಕ ಪ್ರಕಾರವಾಗಿ ನೆಲೆಗೊಂಡಿಲ್ಲ. ಆದರೂ ಕನ್ನಡ-ಮರಾಠಿ ದ್ವಿಭಾಷಿಕತೆ ಎಲ್ಲೋ ಕೆಲವು ಪ್ರದೇಶಗಳನ್ನು ಹೊರತುಪಡಿಸಿದರೆ ಬಹುಮಟ್ಟಿಗೆ ಸ್ಥಿರನೆಲೆಯಲ್ಲಿ ಇದೆ. ಮುಖ್ಯವಾಗಿ ಮರಾಠಿಗೆ ಮತ್ತು ಕನ್ನಡಕ್ಕೆ ಈಗ ಶತ್ರುತ್ವದ ಸಂಬಂಧ ಇಲ್ಲವಾಗಿದೆ. ಆದ್ದರಿಂದ ಎರಡು ಭಾಷೆಗಳ ಆಡುಗರು ತಂತಮ್ಮ ಅಗತ್ಯಗಳಿಗೆ ಅನುಗುಣವಾಗಿ ವ್ಯವಹರಿಸುತ್ತಿದ್ದಾರೆ. ಕನ್ನಡಿಗರಿಗೆ ಈಗ ಮೊದಲಿನಂತೆ ಮರಾಠಿ ದ್ವಿಭಾಷಿಕರಾಗುವ ಒತ್ತಾಯ ಇಲ್ಲ. ಒಂದು ವೇಳೆ ಅದು ಇದ್ದರೂ ಗ್ರಹಿಕೆಯ ಕೌಶಲಗಳಿಗೆ ಸೀಮಿತವಾಗುತ್ತದೆ.

ಕನ್ನಡ ಈ ದ್ವಿಭಾಷಿಕ ಸನ್ನಿವೇಶಗಳಲ್ಲಿ ತನ್ನ ಸ್ಥಾನವನ್ನು ಗಟ್ಟಿಗೊಳಿಸಿಕೊಳ್ಳುತ್ತಾ ಬಂದಿದೆ. ಆದರೆ ಈಗಾಗಲೇ ಬೇರೊಂದೆಡೆ ಗುರುತಿಸಿದಂತೆ ಈ ದ್ವಿಭಾಷಿಕ ಸಮುದಾಯಗಳವರು ತಂತಮ್ಮ ಸಾಮಾಜಿಕ ಉನ್ನತಿಗಾಗಿ ರಾಜ್ಯಾಂಗದ ಸವಲತ್ತುಗಳ ಹಿನ್ನೆಲೆಯಲ್ಲಿ ಕನ್ನಡವನ್ನು ಔಪಚಾರಿಕ ನೆಲೆಯಲ್ಲಿ ಬಳಸಿ ದಾಟುವ ತಂತ್ರವನ್ನು ಅನುಸರಿಸುತ್ತಿದ್ದಾರೆ. ಅಂದರೆ ಕನ್ನಡ ಮಾತಾಡಲು, ಅರ್ಥಮಾಡಿಕೊಳ್ಳಲು ಸಿದ್ಧವಿದ್ದರೂ ಓದಿ ಬರೆಯುವ ಕೌಶಲಗಳನ್ನು ಪಡೆದುಕೊಳ್ಳುವ ಅಗತ್ಯ ಅವರಿಗೆ ಕಂಡು ಬರುತ್ತಿಲ್ಲ. ಅವರು ಇಂಗ್ಲಿಶ್ ಭಾಷೆಯ ಕಡೆಗೆ ಒಲುವೆಯನ್ನು ತೋರಿಸುತ್ತಿದ್ದಾರೆ. ಇದು ಬಹು ಮಟ್ಟಿಗೆ ಕನ್ನಡಿಗರ ಆಯ್ಕೆಯ ವಿನ್ಯಾಸವೂ ಆಗಿದೆ. ಹಾಗಾಗಿ ಈ ಮಟ್ಟಿಗೆ ಅನ್ಯಭಾಷಿಕರನ್ನು ಟೀಕಿಸಲು ಅವಕಾಶಗಳಿಲ್ಲ. ಕನ್ನಡ ಅನೌಪಚಾರಿಕವಾಗಿ ಬಳಕೆಯಲ್ಲಿರುವ ವಲಯಗಳಲ್ಲಿ ಎಲ್ಲಾ ಭಾಷಿಕರೂ ಭಾಗಿಯಾಗಲು ಸಿದ್ಧರಿದ್ದರೂ ಔಪಚಾರಿಕ ವಲಯಗಳಿಂದ ಕನ್ನಡ ಹೊರಬಿದ್ದು ಅಲ್ಲಿ ಇಂಗ್ಲಿಶ್ ಭಾಷೆ ಮನ್ನಣೆ ಪಡೆಯುತ್ತಿದೆ. ಈ ಪರಿಸ್ಥಿತಿಯನ್ನು ನಾವು ಕನ್ನಡದ ಆತಂಕಗಳನ್ನು ಕುರಿತ ಅಧ್ಯಾಯದಲ್ಲಿ ಮತ್ತಷ್ಟು ಚರ್ಚಿಸಲಿದ್ದೇವೆ.

ಐವತ್ತು ವರ್ಷಗಳಲ್ಲಿ ಕನ್ನಡ ಮೊದಲಭಾಷಿಕರು ಇಂಗ್ಲಿಶ್ ಕಡೆಗೆ ತೋರುತ್ತಿರುವ ಒಲುವೆಗೆ ಚಾರಿತ್ರಿಕವಾಗಿ ಸಮರ್ಥನೆ ಇರಬಹುದು. ಆದರೆ ಇದು ಇನ್ನೂ ಯಾವ ಬಗೆಯ ಭಾಷಾಸನ್ನಿವೇಶಕ್ಕೆ ಅವಕಾಶ ಕಲ್ಪಿಸಿದೆ ಎಂಬುದನ್ನು ಗಮನಿಸಬೇಕು. ಕನ್ನಡ ಪ್ರಥಮಭಾಷಿಕರು ಮೌಖಿಕ ನೆಲೆಯಲ್ಲಿ ಮತ್ತು ಗ್ರಹಿಕೆಯ ನೆಲೆಯಲ್ಲಿ ಹಲವು ಹತ್ತು ಭಾಷೆಗಳಿಗೆ ತೆರೆದುಕೊಂಡವರು. ಆದರೆ ಲಿಖಿತ ಅಧಿಕೃತ ನೆಲೆಗೆ ಇಂಗ್ಲಿಶ್ ಮಾತ್ರ ಸಾಕು ಎನ್ನುವುದು ಈ ಚಿಂತನೆಯ ನೆಲೆಯಾಗಿದೆ. ಒಂದು ಪ್ರಸಂಗವನ್ನು ಈ ಮೇಲಿನ ಮಾತಿಗೆ ಪೂರಕವಾಗಿ ಪರಿಶೀಲಿಸಬಹುದು. ಕನ್ನಡ ಪತ್ರಿಕೆಗಳು ತಮ್ಮ ಸುದ್ದಿಮೂಲಕ್ಕಾಗಿ ಇಂಗ್ಲಿಶನ್ನು ಆಶ್ರಯಿಸುವುದು ಎಷ್ಟು ಬಲವಾಗಿದೆ ಎಂದರೆ ಭಾರತದ ಬೇರೆ ಯಾವ ಭಾಷೆಯ ಪತ್ರಿಕೆಯನ್ನೂ ಕನ್ನಡ ಪತ್ರಿಕಾಲಯಗಳಲ್ಲಿ ನೋಡಲು ಸಾಧ್ಯವಿಲ್ಲ. ಈ ಪತ್ರಿಕೆಗಳು ಆಗಾಗ ಬೇರೆ ಬೇರೆ ಪತ್ರಿಕೆಗಳಿಂದ ಉದ್ಧರಿಸಿ ಅಭಿಪ್ರಾಯಗಳನ್ನು ಒದಗಿಸುತ್ತವೆ. ಆದರೆ ಯಾವ ಪತ್ರಿಕೆಯೂ ಕನ್ನಡ ಇಂಗ್ಲಿಶ್ ಅಲ್ಲದೇ ದೇಶೀಯ ಪತ್ರಿಕೆಗಳನ್ನು ಆಕರವಾಗಿ ಎಂದೂ ಬಳಸಿಲ್ಲ. ಇಂಗ್ಲಿಶ್ ಪತ್ರಿಕೆಗಳು ಅಖಿಲಭಾರತ ಮಟ್ಟದ ಪತ್ರಿಕೆಗಳೆಂದು ಪರಿಗಣಿತವಾಗಿ ಅವುಗಳಿಂದ ಆಯ್ದ ಅಭಿಪ್ರಾಯಗಳನ್ನಷ್ಟೇ ಕನ್ನಡ ಪತ್ರಿಕೆಗಳಲ್ಲಿ ಒದಗಿಸಲಾಗುತ್ತಿದೆ. ಅಂದರೆ ಕನ್ನಡ ಮನಸ್ಸು ದೇಶೀಯ

ಭಾಷೆಗಳೊಡನೆ ಇನ್ನೂ ಮಿಳಿತವಾಗಿಲ್ಲ. ಏಕೀಕರಣ ಪೂರ್ವದಲ್ಲಿ ಒಂದಕ್ಕಿಂತ ಹೆಚ್ಚು ದೇಶೀಯ ಭಾಷೆಗಳನ್ನು ಬಲ್ಲವರ ಸಂಖ್ಯೆ ಅಧಿಕವಾಗಿತ್ತು. ಆ ಕಾಲದಲ್ಲಿ ಟ್ಯಾಗೋರರ, ಬಂಕಿಮ ಚಂದ್ರರ, ಶರತ್‌ಚಂದ್ರರ ಕೃತಿಗಳು ನೇರವಾಗಿ ಬಂಗಾಲಿಯಿಂದ ಕನ್ನಡಕ್ಕೆ ಅನುವಾದವಾಗುತ್ತಿದ್ದವು. ಇದು ಒಂದು ಚಿಕ್ಕ ನಿದರ್ಶನ. ಈಗ ನಮಗೆ ಎಲ್ಲವೂ, ಅಂದರೆ ಪಕ್ಕದ ರಾಜ್ಯದಲ್ಲಿ ನಡೆಯುವ ಘಟನೆಯೂ, ಇಂಗ್ಲಿಶ್ ಕಾಪಿಯ ಮೂಲಕ ತಲುಪಬೇಕು. ಹಾಗಾಗಿ ಕನ್ನಡ ಇತರ ಭಾಷೆಗಳೊಡನೆ ಸಮಾನತೆಯ ಸಂಬಂಧವನ್ನು ಕಾಯ್ದುಕೊಳ್ಳುವ ಭರದಲ್ಲಿ ಆಯ್ದುಕೊಂಡ ದಾರಿಯನ್ನು ಕುರಿತು ಈಗ ಮರಳಿ ಪರ್ಯಾಲೋಚಿಸಬೇಕಾಗಿದೆ.

ಆದರೆ ಭಾಷೆಗಳ ನಡುವಣ ಗಡಿಗೆರೆಗಳು ಕಾಲ್ಪನಿಕವೆಂದು ಗಮನಿಸಿದ್ದೇವೆ. ಕಳೆದ ಹಲವು ದಶಕಗಳಿಂದ ಕನ್ನಡಕ್ಕೆ ಲಭ್ಯವಾಗುತ್ತಿರುವ ಅನ್ಯಭಾಷೆಯ ಅನುಭವಗಳ ಪ್ರಮಾಣ ಹೆಚ್ಚಾಗಿದೆ. ಚಲನಚಿತ್ರಗಳು ಒಳ್ಳೆಯ ನಿದರ್ಶನಗಳು. ಹಿಂದಿ, ತಮಿಳು, ತೆಲುಗು ಚಲನಚಿತ್ರಗಳು ಕನ್ನಡಿಗರಿಗೆ ನೋಡಸಿಗುತ್ತಿವೆ. ಇವುಗಳ ಪ್ರೇಕ್ಷಕರು ಕೇವಲ ಆಯಾಭಾಷಿಕರಷ್ಟೇ ಅಲ್ಲ. ಈ ಹೊತ್ತಿನ ಟಿವಿ ವಾಹಿನಿಗಳ ಬಗೆಗೆ ನಡೆದ ಸಮೀಕ್ಷೆಯೊಂದರಂತೆ ಈ ಅನ್ಯಭಾಷೆಯ ಚಲನಚಿತ್ರಗಳನ್ನು ಟಿವಿ ಕಾರ್ಯಕ್ರಮಗಳನ್ನು ನೋಡುವವರಲ್ಲಿ ಕನ್ನಡ ಪ್ರಥಮಭಾಷಿಕರು ಸಾಕಷ್ಟು ಪ್ರಮಾಣದಲ್ಲಿದ್ದಾರೆ. ಎಂಟನೇ ದಶಕದಿಂದ ಈಚೆಗೆ ತಳೆದ ಟೆಲಿವಿಜನ್ ಜಾಲದ ಪರಿಣಾಮವಾಗಿ ಕನ್ನಡಿಗರ ಹಿಂದಿ ಭಾಷೆಯ ಗ್ರಹಿಕೆಯ ಕೌಶಲಗಳು ಮೊದಲಿಗಿಂತ ಹೆಚ್ಚಾಗಿವೆ. ಈ ಮಾತನ್ನು ತಮಿಳು ಮತ್ತು ತೆಲುಗು ಭಾಷೆಗಳಿಗೂ ವಿಸ್ತರಿಸಬಹುದು. ಇಲ್ಲಿ ಕೇವಲ ಮನೋರಂಜನೆಯ ನೆಲೆ ಮಾತ್ರ ಕೆಲಸ ಮಾಡುತ್ತಿಲ್ಲ.

ಈ ಎರಡು ಪ್ರವೃತ್ತಿಗಳನ್ನು ನಾವು ಒಟ್ಟಿಗೆ ಇರಿಸಿ ವಿಶ್ಲೇಷಿಸಬೇಕಾಗಿದೆ. ಮೊದಲನೆಯದು ಔಪಚಾರಿಕ ನೆಲೆಯಲ್ಲಿ ಭಾರತೀಯ ಭಾಷೆಗಳನ್ನೆಲ್ಲಾ ನಿರಾಕರಿಸಿ ಕೇವಲ ಇಂಗ್ಲಿಶ್‌ಗೆ ಮನ್ನಣೆಯನ್ನು ನೀಡಿರುವುದು. ಎರಡನೆಯದು ಇದಕ್ಕೆ ತನ್ನ ವಿರೋಧವೆಂಬಂತೆ ಅನೌಪಚಾರಿಕ ನೆಲೆಯಲ್ಲಿ ಅನ್ಯ ಭಾರತೀಯಭಾಷೆಗಳ ಗ್ರಹಿಕೆಯ ಕೌಶಲಗಳನ್ನು ವಿಸ್ತರಿಸಿಕೊಳ್ಳುತ್ತಿರುವುದು. ಇದು ತೋರಿಕೆಯ ವೈರುಧ್ಯ ಇರಬಹುದೇ ಅಥವಾ ಔಪಚಾರಿಕ ಮತ್ತು ಅನೌಪಚಾರಿಕಗಳನ್ನು ನಾವು ವಿಭಜಿಸಿಕೊಳ್ಳುವ ಕ್ರಮದಲ್ಲೇ ಈ ತಾರತಮ್ಯಕ್ಕೆ ಅವಕಾಶ ಇದೆಯೇ ಯೋಚಿಸಬೇಕಾಗಿದೆ.

ಭಾಷಾವಾರು ಪ್ರಾಂತವಿಭಜನೆ ಆದ ಮೇಲೆ ಭಾರತೀಯ ಭಾಷೆಗಳ ನಡುವೆ ಕೊಡುಕೊಳೆಗಳು ಅಧಿಕ ಪ್ರಮಾಣದಲ್ಲಿ ನಡೆಯಬೇಕು ಎಂಬ ಅಪೇಕ್ಷೆ ಮೂಡಿದ್ದು ಸಹಜ. ಜನರು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ವೈಯಕ್ತಿಕ ಕಾರಣಗಳಿಂದಾಗಿ ಇತರ ಭಾರತೀಯ ಭಾಷೆಗಳೊಡನೆ ಸಂಪರ್ಕ ಬೆಳೆಸಿದ್ದಾರೆಯೇ ಹೊರತು ಸಾರ್ವಜನಿಕ ವಲಯಗಳಲ್ಲಿ ಇಂತಹ ಸಂಪರ್ಕಗಳು ಇಲ್ಲವೆನ್ನುವಷ್ಟು ಕಡಿಮೆ. ಆಡಳಿತದಲ್ಲಿ, ನ್ಯಾಯಾಂಗದಲ್ಲಿ, ಮಾಧ್ಯಮಗಳಲ್ಲಿ ಮತ್ತು ವಾಣಿಜ್ಯ ವ್ಯವಹಾರಗಳಲ್ಲಿ ಭಾರತೀಯ ಭಾಷೆಗಳು ಸಮೀಪವಾಗುತ್ತಿಲ್ಲ. ಕರ್ನಾಟಕದ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ.

ಹಲವು ಸಾಮಾಜಿಕ ಕಾರಣಗಳಿಂದ ಭಾಷಾಸಮುದಾಯಗಳು ಕರ್ನಾಟಕದೊಳಗೆ ನೆಲೆನಿಂತ ಪ್ರಸಂಗಗಳನ್ನು ಹೊರತು ಪಡಿಸಿದರೆ ಉಳಿದಂತೆ ತಾತ್ಕಾಲಿಕವಾಗಿ ಕರ್ನಾಟಕಕ್ಕೆ ಬಂದು ಹೋಗುವ ಅನ್ಯಭಾಷಿಕರು ಸಾಕಷ್ಟು ಪ್ರಮಾಣದಲ್ಲಿದ್ದಾರೆ. ಇವರ ಕರ್ನಾಟಕ ಭೇಟಿಯ ಉದ್ದೇಶ ಹಲವಾರು. ಕೆಲವರು ಜೀವನ ನಿರ್ವಹಣೆಗಾಗಿ ಮತ್ತೆ ಕೆಲವರು ವ್ಯವಹಾರಕ್ಕಾಗಿ, ಉಳಿದವರು ಪ್ರವಾಸಕ್ಕಾಗಿ ಕರ್ನಾಟಕಕ್ಕೆ ಬರುತ್ತಾರೆ. ಇವರು ತಮ್ಮ ನೆಲೆನಿಂತ ಅವಧಿಯಲ್ಲಿ ತಂತಮ್ಮ ಭಾಷೆಯಲ್ಲಿ ಇಲ್ಲವೇ ಇಂಗ್ಲಿಶ್ ಅಥವಾ ಹಿಂದಿಯಲ್ಲಿ ತಮ್ಮ ಸಂಪರ್ಕವನ್ನು ಸಾಧಿಸುತ್ತಾರೆ. ಈ ಪರಿಸ್ಥಿತಿಯನ್ನು ಕನ್ನಡಿಗರ ದುರ್ಬಲತೆಯೆಂದೂ, ಇದಕ್ಕೆ ಅವರ ಅತೀ ಸೌಜನ್ಯವೇ ಕಾರಣವೆಂದೂ ವ್ಯಾಖ್ಯಾನಿಸುವವರಿದ್ದಾರೆ. ಆದರೆ ಭೇಟಿ ಮಾಡಿದ ಜನರಾಗಲೀ ಅವರೊಡನೆ ವ್ಯವಹರಿಸುವ ಜನರಾಗಲೀ ಭಾಷೆಯನ್ನು ಒಂದು ಸಮಸ್ಯೆಯನ್ನಾಗಿ ಪರಿಗಣಿಸಿಲ್ಲ. ಆದರೆ ಸಾರ್ವಜನಿಕವಲಯದಲ್ಲಿ ಇತರ ಭಾಷೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದಿರುವುದು ಕಳೆದ ಐವತ್ತು ವರ್ಷದ ಒಂದು ಅಸಹಜ ಬೆಳವಣಿಗೆ ಎಂದು ತಿಳಿಯಬೇಕಾಗಿದೆ. ಇದರಿಂದಾಗಿ ಆ ಭಾಷೆಯನ್ನಾಡುವ ಸಮುದಾಯಗಳು ಕರ್ನಾಟಕದ ಸಂಸ್ಕೃತಿಮಾನಸದಿಂದ ದೂರವೇ ಉಳಿದಿದ್ದಾರೆ. ಹೀಗೆ ದೂರ ಉಳಿದಿರುವುದು ಪರೋಕ್ಷವಾಗಿ ಕನ್ನಡಭಾಷಿಕರ ಪ್ರತ್ಯೇಕತೆಯನ್ನು ದೃಢೀಕರಿಸುತ್ತಿದೆ. ಅಂದರೆ ಇವರು ತಮ್ಮ ದೇಶವಾಸಿಗಳೊಡನೆ ವ್ಯವಹರಿಸಲು ಎಷ್ಟೋ ವೇಳೆ ತಮ್ಮಿಬ್ಬರದೂ ಅಲ್ಲದ ಮೂರನೆಯ ಭಾಷೆಯೊಂದನ್ನು ಅವಲಂಬಿಸಬೇಕಾಗಿದೆ. ಇದು ಕೇವಲ ವ್ಯವಹಾರದ ಸಮಸ್ಯೆಯಷ್ಟೇ ಅಲ್ಲ. ಸಾಂಸ್ಕೃತಿಕವಾಗಿಯೂ ಕನ್ನಡ ಒಂದು ದ್ವೀಪವಾಗುವುದು ಅನಿವಾರ್ಯವಾಗಿದೆ. ಈ ಸಮಸ್ಯೆ ಕನ್ನಡಕ್ಕೇ ವಿಶಿಷ್ಟವಾದುದಲ್ಲ, ಆದರೆ ಅದರ ಪರಿಣಾಮ ಮಾತ್ರ ಇಲ್ಲಿ ಕಣ್ಣಿಗೆ ರಾಚುವಂತಿದೆ.

ಕನ್ನಡಿಗರು ಆಡುವ ಇಂಗ್ಲಿಶ್

ಲಭ್ಯದಾಖಲೆಯಂತೆ ತೀನಂಶ್ರೀಯವರು 1940ರಲ್ಲಿ 'ಇಂಗ್ಲಿಶ್ ಆ್ಯಸ್ ದ ಕನ್ನಡಿಗಾಸ್ ಸ್ಪೀಕ್ಸ್ ಇಟ್' ಎಂಬ ಲೇಖನವನ್ನು ಬರೆದಿದ್ದಾರೆ. ಇದು ಮೈಸೂರಿನಿಂದ ಪ್ರಕಟವಾಗುತ್ತಿದ್ದ ದ ಬುಲೆಟಿನ್ ಆಫ್ ಫೊನೆಟಿಕ್ ಸ್ಟಡೀಸ್‌ನ ಮೊದಲ ಸಂಚಿಕೆಯಲ್ಲಿ ಪ್ರಕಟಗೊಂಡಿದೆ. ಈ ಲೇಖನಕ್ಕಾಗಿ ಬೇಕಾಗಿದ್ದ ಮಾಹಿತಿಯನ್ನು ತಮ್ಮ ಉಚ್ಚಾರಣೆಯಿಂದಲೇ ಪಡೆದುಕೊಂಡಿದ್ದೇನೆಂದು ತಿಳಿಸುತ್ತಾರೆ. ಹಾಗಾಗಿ ಈ ಲೇಖನಕ್ಕೆ 'ಇಂಗ್ಲಿಶ್ ಆ್ಯಸ್ ಐ ಆರ್ಡಿನರಿಲಿ ಸ್ಪೀಕ್ ಇಟ್' ಎಂಬ ಪರ್ಯಾಯ ಹೆಸರನ್ನು ಸೂಚಿಸಿದ್ದಾರೆ.

ಮೈಸೂರು ದೇಶದಲ್ಲಿ ಇಂಗ್ಲಿಶನ್ನು ಹೇಳಿಕೊಡುವ ಅಧ್ಯಾಪಕರು ಸಾಮಾನ್ಯವಾಗಿ ಕನ್ನಡಿಗರು ಅಥವಾ ದೇಶಭಾಷಿಕರೇ ಆಗಿದ್ದರು. ತಮ್ಮ ಇಂಗ್ಲಿಶಿನ ಉಚ್ಚಾರಣೆ ಸ್ವಭಾಷಿಕರು ಆಡುವ ಇಂಗ್ಲಿಶನ್ನು ಸಮೀಪಿಸಬೇಕೆಂಬ ಇರಾದೆ ಇಂಗ್ಲಿಶ್ ಕಲಿಯುವವರಿಗೆ ಇದ್ದದ್ದು ಅಸಹಜವಲ್ಲ. ಅಂಥ ಸಾಧನೆ ಸಾಧ್ಯವಾಗಲಿಲ್ಲವೆಂಬ ಕೊರಗು ಕಲಿಯುವವರಲ್ಲಿ ನೆಲೆಸಿತ್ತು.

ಕನ್ನಡಿಗರು ಉಚ್ಚರಿಸುವ ಇಂಗ್ಲಿಶಿನಲ್ಲಿ ಯಾವ ಬಗೆಯ ದೋಷಗಳು ಸಂಭವಿಸುತ್ತವೆ ಎನ್ನುವುದನ್ನು ಅವರ ಲೇಖನದಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಈ ದೋಷಗಳಿಗೆ ಎರಡು ಮುಖ್ಯ ಕಾರಣಗಳನ್ನು ಗುರುತಿಸಿದ್ದಾರೆ. 1. ಕನ್ನಡಿಗರಿಗೆ ಇಂಗ್ಲಿಶ್ ಧ್ವನಿಗಳ 'ನಿಜ ಉಚ್ಚಾರಣೆ'ಗಳನ್ನು ಕಿವಿಯಿಂದ ಕೇಳಸಿಕೊಳ್ಳುವ ಅವಕಾಶವಿಲ್ಲದಿರುವುದು. ಇದರಿಂದ ಕನ್ನಡಿಗರಿಗೆ ಅನುಕರಣೆಗೆ ಮಾದರಿಗಳಿಲ್ಲದೆ ಅವರು ಬರೆಹವನ್ನು ಅಂದರೆ ಲಿಪಿಯನ್ನು ಆಧರಿಸಿ ಇಂಗ್ಲಿಶನ್ನು ಮಾತನಾಡುತ್ತಾರೆ. 2. ಇಂಗ್ಲಿಶಿನ ಧ್ವನಿವ್ಯವಸ್ಥೆಗೂ ಕನ್ನಡದ ಧ್ವನಿವ್ಯವಸ್ಥೆಗೂ ಅಂತರವಿದೆ. ಇಂಗ್ಲಿಶಿನಲ್ಲಿದ್ದು ಕನ್ನಡದಲ್ಲಿರದ ಧ್ವನಿಗಳನ್ನು ಉಚ್ಚರಿಸುವಾಗ 'ಸಮೀಪಸ್ಥ ಕನ್ನಡ' ಧ್ವನಿಗಳಿಗೆ ಹೊಂದಿಸಿಕೊಂಡು ಉಚ್ಚರಿಸಬೇಕಾಗುತ್ತದೆ.

ಒಂದು ವೇಳೆ 'ನಿಜ ಉಚ್ಚಾರಣೆ' ಕೇಳುವ ಮತ್ತು ಕಲಿಯುವ ಅವಕಾಶವಿದ್ದಿದ್ದರೆ (ಕಾರಣ 1) ಧ್ವನಿ ರಚನೆಯ ವ್ಯತ್ಯಾಸಗಳ (ಕಾರಣ 2) ಸಮಸ್ಯೆ ನಿವಾರಣೆಯಾಗುತ್ತಿತ್ತೇ? ಹೌದಾದರೆ, ಆಗ ಕನ್ನಡಿಗರು ಎರಡು ಪ್ರತ್ಯೇಕ ಧ್ವನಿರಚನಾ ವ್ಯವಸ್ಥೆಗಳನ್ನು ಪಡೆದುಕೊಂಡು ಒಂದನ್ನು ಕನ್ನಡಕ್ಕೂ ಇನ್ನೊಂದನ್ನು ಇಂಗ್ಲಿಶಿಗೂ ಬಳಸುವುದು ಸಾಧ್ಯವೆಂದು ತಿಳಿಯಬೇಕಾಗುತ್ತದೆ. ಆದರೆ ವಾಸ್ತವದಲ್ಲಿ ಇಂಥ ಸಾಧನೆಗಳು ಅಪರೂಪ. ಆದ್ದರಿಂದ ಕನ್ನಡಿಗರು ತಮ್ಮ ಕನ್ನಡದ ಭಾಷಾಧ್ವನಿ ರಚನೆಗೆ 'ಅನುಗುಣ'ವಾಗಿ ಇಂಗ್ಲಿಶನ್ನು ಉಚ್ಚರಿಸುತ್ತಿರುವುದು ಹೆಚ್ಚು ಸಹಜವಾದ ಮಾದರಿ.

ಈ ಲೇಖನದಲ್ಲಿ ಒಂದು ಆತಂಕದ ದನಿ ಇದೆ. ಕನ್ನಡಿಗರು ಇಂಗ್ಲಿಶನ್ನು 'ಸರಿಯಾಗಿ' ಉಚ್ಚರಿಸಲು ಆಗುತ್ತಿಲ್ಲವಲ್ಲ ಎನ್ನುವುದೇ ಆ ಆತಂಕ. 60 ವರ್ಷಗಳು ಕಳೆದಿವೆ. ಈಗ ಆತಂಕ ಪಡಲು ಕಾರಣಗಳಿಲ್ಲ. ಅಂದರೆ ಕನ್ನಡಿಗರು ಇಂಗ್ಲಿಶನ್ನು ಸರಿಯಾಗಿ ಉಚ್ಚರಿಸುತ್ತಿದ್ದಾರೆ ಎಂದಲ್ಲ. ಅವರು ಉಚ್ಚರಿಸುವುದೇ ಹೆಚ್ಚು ಮಾನ್ಯವಾಗಿದೆ. ಅದೇ ಎಲ್ಲರಿಗೂ ಒಪ್ಪಿಗೆಯಾಗಿದೆ.

ಅಲ್ಲದೆ ಕನ್ನಡಿಗರಿಗೆ ಈಗ ಅದು ಓದು ಬರೆಹದ ಭಾಷೆ. ಅದರಲ್ಲೂ ಓದಿನ ಭಾಷೆಯಾಗಿ ಅದರ ಪಾತ್ರ ವ್ಯಾಪಕವಾಗಿದೆ. ಅಷ್ಟಿಷ್ಟು ಪ್ರಮಾಣದಲ್ಲಿ ಬರೆಹದ ಭಾಷೆಯಾಗಿಯೂ ಇದೆ. ಇವೆರಡೂ ಉದ್ದೇಶಗಳಿಗೆ ಉಚ್ಚಾರಣೆಯ ಮಾದರಿ ಬೇಕಿಲ್ಲ. ಅಂದರೆ ಕಿವಿಯ ನೆಲೆಯಿಂದ ಸ್ವೀಕರಿಸಿ ಅದನ್ನು ಉಚ್ಚಾರಣೆಯನ್ನಾಗಿ ಪರಿವರ್ತಿಸುವ ಕೆಲಸ ತೀರಾ ಕಡಿಮೆ. ಮಾತಿನ ರೂಪದ ಇಂಗ್ಲಿಶ್ ಸಂಕಥನಗಳನ್ನು ಈಗ ಕನ್ನಡಿಗರು ಕೇಳಿಸಿಕೊಳ್ಳುವುದು ಹೆಚ್ಚಿದೆ. ದೂರದರ್ಶನದ ವಾರ್ತೆಗಳು, ವಿವಿಧ ಚಾನೆಲ್‌ಗಳ ಕಾರ್ಯಕ್ರಮಗಳು, ವಾರ್ತಾ ಮಾಧ್ಯಮದ ಪ್ರಸಾರಗಳು, ಭಾಷಣಗಳು, ಚಲನಚಿತ್ರಗಳು, ಹೀಗೆ ಹಲವಾರು ಮೂಲಗಳಿಂದ ಇಂಗ್ಲಿಶನ್ನು ಕೇಳಿಸಿಕೊಂಡರೂ ಅದೀಗ ಇಂಗ್ಲಿಶಿನ ಓದು, ಬರೆಹಕ್ಕೆ ಅಡ್ಡಿತರದು. ಅಂದರೆ ಇವೆರಡೂ ಬೇರೆ ಬೇರೆಯಾಗಿಯೇ ಕಾರ್ಯನಿರ್ವಹಿಸುತ್ತಿವೆ. ಬರೆಯುವಾಗ ಬಳಸಬೇಕಾದ 'ಸರಿಯಾದ' ಕಾಗುಣಿತ ಕುರಿತು ಮಾರ್ಗದರ್ಶನ ನೀಡಲು ಈಗ ಹಲವಾರು ಪರಾಮರ್ಶನ ಗ್ರಂಥಗಳಿವೆ. ಗಣಕದಲ್ಲೂ ಇದೀಗ ಅದು ಅಳವಟ್ಟಿವೆ.

ತೀನಂಶ್ರೀಯವರು ಈ ಉಲ್ಲೇಖಿತ ಲೇಖನ ಬರೆದ ಕಾಲದಿಂದ ಈಚೆಗೆ ಆಗಿರುವ ಪ್ರಮುಖ ಬದಲಾವಣೆಗಳು ಎರಡು. 1. ಇಂಗ್ಲಿಶಿನ ಎರಡು ಶೈಲಿಗಳು ಬಳಕೆಗೆ ಬಂದಿರುವುದು. 2. ಇಂಗ್ಲಿಶ್ ಕಲಿಯುವವರ ಸಂಖ್ಯೆಯಲ್ಲಿ ಹೆಚ್ಚಳ. ಇಂಗ್ಲಿಶಿನ ಬರೆವಣಿಗೆಯಲ್ಲಿ ಕಾಗುಣಿತ ದೋಷ, ಬರೆವಣಿಗೆಯ ನಿಯಮಗಳ ಉಲ್ಲಂಘನೆಯ ದೋಷ ಮತ್ತು ವ್ಯಾಕರಣ ದೋಷಗಳನ್ನು ಈಗಲೂ ಇಂಗ್ಲಿಶ್ ಶಿಕ್ಷಕರು ಒಪ್ಪುವುದಿಲ್ಲ. ಆದ್ದರಿಂದ 'ಶುದ್ಧ' ಇಂಗ್ಲಿಶ್ ಬರೆವಣಿಗೆಯ ಅಪೇಕ್ಷೆ ಈಗಲೂ ಒಂದು ಆದರ್ಶವಾಗಿದೆ. ಆ ಇಂಗ್ಲಿಶ್‌ನ ಶೈಲಿ ಒಂದು ಕಡೆ ನಿಗದಿಗೊಂಡು ನಮ್ಮೆದುರು ಇದೆ. ಇನ್ನೊಂದೆಡೆ ಅಂಥ 'ಶುದ್ಧತೆ'ಯ ಹಂಗಿಲ್ಲದೆ ಇಂಗ್ಲಿಶನ್ನು ಮಾತಾಡುವ ಬಗೆಯೊಂದು ನೆಲೆಗೊಂಡಿದೆ. ಇಂಗ್ಲಿಶಿನ 'ಮೂಲ' ಉಚ್ಚಾರಣೆ ಹಾಗೂ ವ್ಯಾಕರಣ ನಿಯಮಗಳನ್ನು ಅಷ್ಟಾಗಿ ಪಾಲಿಸದ ಶೈಲಿಯೊಂದು ಬಳಕೆಯಲ್ಲಿದೆ. ಇವೆರಡೂ ಈಗ ಕನ್ನಡಿಗರಲ್ಲಿ ನೆಲೆಯೂರಿವೆ. ಶಿಕ್ಷಣವ್ಯವಸ್ಥೆಯು ಮೊದಲನೆ ಶೈಲಿಯನ್ನು ಪ್ರವೃತ್ತಗೊಳಿಸುತ್ತದೆ. ಇನ್ನೊಂದು ಶೈಲಿ ದಿನನಿತ್ಯದಲ್ಲಿ ವ್ಯಾವಹಾರಿಕ ಮಟ್ಟದಲ್ಲಿ ಬಳಕೆಯಾಗುತ್ತಿದೆ.

ಇಂಗ್ಲಿಶ್ ಕಲಿಯುವವರ ಪ್ರಮಾಣದ ಹೆಚ್ಚಳವೂ ಮೇಲಿನ ಪರಿಸ್ಥಿತಿಗೆ ಪರೋಕ್ಷವಾಗಿ ಕಾರಣವಾಗಿದೆ. ನಮ್ಮ ಶಿಕ್ಷಣದ ನೀತಿ ಮತ್ತು ಭಾಷಾನೀತಿಗಳು ಇಂಗ್ಲಿಶಿನ ಕಲಿಕೆಯನ್ನು ಕಡ್ಡಾಯವಾಗಿಸಿವೆ. ಕರ್ನಾಟಕದಲ್ಲೇ ಹಲವು ಲಕ್ಷಗಳಷ್ಟು ಮಕ್ಕಳು ಇಂಗ್ಲಿಶನ್ನು

ಕಲಿಯುತ್ತಿದ್ದಾರೆ. ಈ ಸಂಖ್ಯೆ ಇಂಗ್ಲಿಶನ್ನು ಮೊದಲ ಭಾಷೆಯನ್ನಾಗಿ ಹೊಂದಿರುವ ಎಷ್ಟೋ ದೇಶಗಳ ಜನಸಂಖ್ಯೆಗಿಂತ ಹೆಚ್ಚು. ಇಷ್ಟು ಮಕ್ಕಳಿಗೆ ಇಂಗ್ಲಿಶನ್ನು 'ಇಂಗ್ಲಿಶಿ'ನಂತೆ (ತೀನಂಶ್ರೀಯವರ ಬಯಕೆಯಂತೆ) ಕಲಿಸಲು ನಮ್ಮಲ್ಲಿ ಯಾವ ವ್ಯವಸ್ಥೆಯಿದೆ? ಇಂಗ್ಲಿಶನ್ನು 'ಕೇಳಿದವರಲ್ಲ', 'ಬರೆಯುವವರೂ'ಅಲ್ಲ, 'ಮಾತಾಡುವವರೂ' ಅಲ್ಲ, 'ಓದುವವರೂ' ಅಲ್ಲ. ಪಠ್ಯಗಳನ್ನು ಹೊರತು ಪಡಿಸಿದರೆ ಅವರಿಗೂ ಇಂಗ್ಲಿಶಿಗೂ ಸಂಪರ್ಕ ಅಷ್ಟಕ್ಕಷ್ಟೆ. ಹೀಗಿರುವಾಗ ಅವರು ಇಂಗ್ಲಿಶನ್ನು ಕಲಿಸುವ ಬಗೆಯಲ್ಲಿ ಗುಣಾತ್ಮಕ ವ್ಯತ್ಯಾಸ ಹೇಗೆ ಸಾಧ್ಯ?

ಇಡೀ ಪರಿಸ್ಥಿತಿಯನ್ನು ಗಮನಿಸಿದರೆ ಇನ್ನಾದರೂ ಇಂಗ್ಲಿಶನ್ನು ನಾವು ಬಳಸುತ್ತಿರುವ ವಿಧಾನವು ಎಂಥದೆಂದು ಸರಿಯಾಗಿ ಅಧ್ಯಯನ ಮಾಡಿ ಅದನ್ನು ಪ್ರಮಾಣೀಕರಣ ಗೊಳಿಸುವುದು ಯೋಗ್ಯವೆಂದು ತೋರುತ್ತದೆ. ನಮಗೆ ಬೇಕಾದ ರೀತಿಯಲ್ಲಿ ಆ ಭಾಷೆಯನ್ನು ಹೊಂದಿಸಿಕೊಳ್ಳದಿದ್ದರೆ ಮತ್ತು ಮೂಲ ಇಂಗ್ಲಿಶನ್ನು (ಬ್ರಿಟಿಶ್ ಅಥವಾ ಅಮೆರಿಕನ್)ನಮ್ಮ ಮಾದರಿಯಾಗಿ ಇರಿಸಿಕೊಂಡರೆ ಈಗ ಸಂಭವಿಸಿರುವ ಪ್ರಮಾದವನ್ನು ಇನ್ನೂ ಮುಂದುವರೆಸಿದಂತೆಯೇ ಸರಿ.

ಕನ್ನಡ ಮತ್ತು ಇಂಗ್ಲಿಶ್: ಸಂಬಂಧದ ಹೊಸ ವಿನ್ಯಾಸ

ಎರಡು ಭಾಷೆಗಳ ನಡುವೆ ಇರುವ ಸಂಬಂಧದ ಸ್ವರೂಪವನ್ನು ತಿಳಿಯಲು ಹಲವು ವಿಧಾನಗಳಿವೆ. ಎರಡೂ ಭಾಷೆಗಳನ್ನು ಆಡುವ ಜನ ಸಮುದಾಯಗಳು ಭೌಗೋಳಿಕವಾಗಿ ಸಮೀಪಸ್ಥವಾಗಿದ್ದಾಗ ಅವುಗಳ ನಡುವೆ ಏರ್ಪಡುವ ಸಂಬಂಧ ಒಂದು ಬಗೆಯದ್ದು. ಆ ಎರಡೂ ಭಾಷೆಗಳ ನಡುವೆ ಇರುವ ಅಧಿಕಾರದ ಸಂಬಂಧಗಳಲ್ಲಿ ಸಮಾನತೆ ಇರುವಾಗ ಭೌಗೋಳಿಕ ಸಾಮೀಪ್ಯವಿಲ್ಲದಿದ್ದಾಗಲೂ ಉಂಟಾಗುವ ಸಂಬಂಧ ಇನ್ನೊಂದು ಬಗೆಯದ್ದು. ಅವುಗಳಲ್ಲಿ ಒಂದು ಭಾಷೆ ಇನ್ನೊಂದು ಭಾಷೆಗಿಂತ ಹೆಚ್ಚಿನ ರಾಜಕೀಯ ಪ್ರಾಬಲ್ಯವನ್ನು ಹೊಂದಿದ್ದಾಗ ಏರ್ಪಡುವ ಸಂಬಂಧ ಮತ್ತೊಂದು ಬಗೆಯಲ್ಲಿ ಇರುತ್ತದೆ. ಕನ್ನಡ ಮತ್ತು ಇಂಗ್ಲಿಶ್ ನಡುವೆ ಇರುವ ಸಂಬಂಧವನ್ನು ನಾವು ಈ ಸಂಕೀರ್ಣ ವ್ಯವಸ್ಥೆಯಲ್ಲಿ ಅರಿತುಕೊಳ್ಳಬೇಕಾಗಿದೆ. ಈ ಎರಡು ಭಾಷೆಗಳ ಮಧ್ಯೆ ಏರ್ಪಟ್ಟಿರುವ ಸಂಬಂಧ ಚಾರಿತ್ರಿಕವಾಗಿ ಬದಲಾಗುತ್ತ ಬಂದಿರುವುದನ್ನು ಕೂಡ ಮರೆಯುವಂತಿಲ್ಲ.

ಇಂಗ್ಲಿಶ್ ಭಾಷೆಯನ್ನು ಭಾರತೀಯರಿಗೆ ಕಲಿಸುವ ಅತ್ಯಂತ ಎಚ್ಚರದ ನಿರ್ಣಯವನ್ನು ಬ್ರಿಟಿಶ್ ಆಡಳಿತಗಾರರು ತೆಗೆದುಕೊಂಡಾಗ ಅವರು ಮೇಲು ನೋಟಕ್ಕೆ ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಗಳಿಗೆ ಪರ್ಯಾಯವಾಗಿ ಇಂಗ್ಲಿಶ್ ಭಾಷೆಯನ್ನು ಭಾರತದಲ್ಲಿ ನೆಲೆಗೊಳಿಸುವ ಉದ್ದೇಶವನ್ನು ಹೊಂದಿದ್ದರು. ಆದರೆ ಇದು ಮತ್ತೊಂದು ಬಗೆಯ ಕ್ರಿಯಾವರ್ತಕ್ಕೆ ಕಾರಣವಾಯಿತು. ಆಡಳಿತ, ಶಿಕ್ಷಣ ಮತ್ತು ನ್ಯಾಯಾಂಗಗಳಲ್ಲಿ ಈ ಎರಡು ಅಭಿಜಾತ ಭಾಷೆಗಳ ಜಾಗದಲ್ಲಿ ಇಂಗ್ಲಿಶ್ ಭಾಷೆಗೂ ಒಂದು ಸಂಬಂಧ ಏರ್ಪಡಲು ಮೊದಲಾಯಿತು. ಕನ್ನಡವನ್ನೇ ಇಲ್ಲಿ ನಿದರ್ಶನವನ್ನಾಗಿ ನೋಡೋಣ. ಮದರಾಸ್ ಪ್ರೆಸಿಡೆನ್ಸಿಯ ಅಂತರ್ಗತವಾಗಿದ್ದ ಆದರೆ ರೆಸಿಡೆಂಟ್ ಒಬ್ಬರಿಂದ ಆಳ್ವಿಕೆಗೆ ಒಳಪಟ್ಟಿದ್ದ ಮೈಸೂರು ಸಂಸ್ಥಾನದಲ್ಲಿ ಆಡಳಿತಕ್ಕಾಗಿ ಅಥವಾ ಕನಿಷ್ಠ ಪತ್ರವ್ಯವಹಾರಕ್ಕಾಗಿ ಕನ್ನಡವನ್ನು ಬಳಸುವುದು ಅನಿವಾರ್ಯವಾಗಿತ್ತು. ಶಿಕ್ಷಣದ ವ್ಯಾಪಕತೆಯ ಹಿನ್ನೆಲೆಯಲ್ಲಿ ಇಂಗ್ಲಿಶ್ ಜೊತೆಯಲ್ಲಿ ಕನ್ನಡವನ್ನೂ ಶಾಲೆಗಳಲ್ಲಿ ಕಲಿಸುವ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಇವೆಲ್ಲವೂ ಇಂಗ್ಲಿಶ್ ಮತ್ತು ಕನ್ನಡಗಳ ನಡುವೆ ಸಂಪರ್ಕವೊಂದು ಏರ್ಪಡಲು ಕಾರಣವಾದವು. ಇದರ ಪರಿಣಾಮವಾಗಿ ಕನ್ನಡದ ಹೊಸ ಮಾದರಿ ವ್ಯಾಕರಣಗಳು ರಚನೆಯಾದವು. ಕನ್ನಡ ಮತ್ತು ಇಂಗ್ಲಿಶ್ ಅಥವಾ ಇಂಗ್ಲಿಶ್ ಮತ್ತು

ಕನ್ನಡ ದ್ವಿಭಾಷಾ ನಿಘಂಟುಗಳು ನಿರ್ಮಾಣವಾಗತೊಡಗಿದವು. ಹತ್ತೊಂಬತ್ತನೆಯ ಶತಮಾನದಲ್ಲಿ ಈ ಬಗೆಯ ಚಟುವಟಿಕೆಗಳು ವ್ಯಾಪಕವಾಗಿ ನಡೆದ್ದನ್ನು ನಾವು ಗಮನಿಸುತ್ತೇವೆ.

ಈ ಎರಡೂ ಬಗೆಯ ಪ್ರಯತ್ನಗಳ ಹಿನ್ನೆಲೆಯಲ್ಲಿ ಇಂಗ್ಲಿಶ್ ಪರಾಮರ್ಶನ ಬಿಂದುವಾಗಿ ನಿಲ್ಲುತ್ತದೆ. ಆ ಪರಾಮರ್ಶನ ಬಿಂದುವಿಗೆ ಅನುಗುಣವಾಗಿ ಕನ್ನಡವನ್ನು ನೆಲೆಯಾಗಿಸುವ ಉದ್ದೇಶಗಳು ಈ ವ್ಯಾಕರಣ ಮತ್ತು ನಿಘಂಟುಗಳ ಹಿಂದೆ ಸ್ಪಷ್ಟವಾಗಿದೆ. ಆವರೆಗೆ ಕನ್ನಡ ವ್ಯಾಕರಣಗಳನ್ನು ರಚಿಸುವಾಗ ಸಂಸ್ಕೃತದ ಮಾದರಿಗಳನ್ನು ಅನುಸರಿಸಲಾಗುತ್ತಿತ್ತು. ಈಗ ಅದರ ಬದಲು ಲ್ಯಾಟಿನ್ ವ್ಯಾಕರಣದ ಪರಿಕಲ್ಪನೆಗಳು ಮುಂಚೂಣಿಗೆ ಬಂದವು, ಪರೋಕ್ಷವಾಗಿ ಇಂಗ್ಲಿಶ್ ಮಾದರಿಯಾಯಿತು. ಏಕೆಂದರೆ ಇಂಗ್ಲಿಶ್ ವಾಂಶಿಕವಾಗಿ ಲ್ಯಾಟಿನ್ ಮಾದರಿಯನ್ನು ಅನುಸರಿಸುವ ಭಾಷೆಯಾಗಿದೆ. ನಿಘಂಟುಗಳ ರಚನೆಯಲ್ಲೂ ಇದೇ ವಿಧಾನ ಮೇಲುಗೈ ಪಡೆಯುತ್ತದೆ. ಆವರೆಗೂ ನಿಘಂಟುಗಳ ರಚನೆಗೆ ಅನುಸರಿಸಲಾಗುತ್ತಿದ್ದ ಮಾದರಿ ಮತ್ತು ವಿಧಾನವನ್ನು ಬದಲಿಸಿ ಯುರೋಪಿನ ಜ್ಞಾನೋದಯದ ಅನಂತರದಲ್ಲಿ ಆಕಾರ ಪಡೆದಿದ್ದ ಹೊಸ ಶಾಸ್ತ್ರೀಯ ವಿಧಾನಗಳು ಇಲ್ಲಿ ಚಲಾವಣೆಗೆ ಬಂದವು. ಇಲ್ಲಿಯೂ ಬರೆಹ ಭಾಷೆ ಮತ್ತು ಆಡು ಮಾತುಗಳೆರಡನ್ನೂ ಒಂದೇ ಚೌಕಟ್ಟಿನಲ್ಲಿಡುವ ಯತ್ನವೂ ಮೊದಲಾಯಿತು. ಕಿಟ್ಟೆಲ್ ತನ್ನ ನಿಘಂಟಿನಲ್ಲಿ ಹೀಗೆ ಕನ್ನಡದ ಮೌಖಿಕ ಆಕರಗಳಿಂದ ಅಗಾಧ ಪ್ರಮಾಣದ ಸಾಮಗ್ರಿಯನ್ನು ಸಂಗ್ರಹಿಸಿದ್ದನ್ನು ಉದಾಹರಣೆಯನ್ನಾಗಿ ನೋಡಬಹುದು. ಕನ್ನಡದ ವಿವಿಧ ಉಪಭಾಷಿಕ ರೂಪಗಳನ್ನು ದಾಖಲಿಸುತ್ತಲೇ ಅವುಗಳನ್ನು ಇಂಗ್ಲಿಶ್ ಪದಗಳ ಅರ್ಥಛಾಯೆಗೆ ಹೊಂದಿಸುವ ವಿಧಾನವನ್ನು ಈ ನಿಘಂಟುಕಾರರು ಗುರುತಿಸುತ್ತಾರೆ. ಇದರಿಂದ ಕನ್ನಡದ ಪ್ರಮಾಣೀಕರಣಕ್ಕೆ ಮೊದಲ ಹೆಜ್ಜೆಯನ್ನಿಟ್ಟರು. ಅಲ್ಲದೆ ಹೀಗೆ ಪ್ರಮಾಣೀಕರಣಗೊಳ್ಳುವಾಗ ಇಂಗ್ಲಿಶ್ ಮಾದರಿಯನ್ನು ಅನುಸರಿಸುವ ಅಗತ್ಯವನ್ನೂ ಸ್ಪಷ್ಟಪಡಿಸಿದರು.

ಇದೇ ಪರಿಸ್ಥಿತಿ ಇಪ್ಪತ್ತನೇ ಶತಮಾನದ ಮಧ್ಯ ಭಾಗದವರೆಗೂ ಮುಂದುವರೆಯುತ್ತಾ ಬಂದಿತು. ಕನ್ನಡ ಮಾತಾಡುತ್ತಿದ್ದ ವಿವಿಧ ಪ್ರದೇಶಗಳಲ್ಲಿ ಇಂಗ್ಲಿಶ್‌ನ ಪ್ರಭಾವ ಸಮಪ್ರಮಾಣದಲ್ಲಿ ಇರಲಿಲ್ಲ. ಅರಸರ ಆಳ್ವಿಕೆಯಲ್ಲಿದ್ದ ಪ್ರದೇಶದಲ್ಲಿ ಈ ಪ್ರಭಾವ ಅಧಿಕವಾಗಿದ್ದರೆ ನಿಜಾಮರ ಆಳ್ವಿಕೆಗೆ ಅಧೀನವಾಗಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತ್ಯಂತ ಕನಿಷ್ಠ ಪ್ರಮಾಣದಲ್ಲಿತ್ತು. ಮುಂಬಯಿ ಆಳ್ವಿಕೆಯ ಕರ್ನಾಟಕ ಪ್ರದೇಶ ಮತ್ತು ಕರಾವಳಿಯ ಪ್ರದೇಶಗಳಲ್ಲಿ ಇಂಗ್ಲಿಶ್ ಮತ್ತು ಕನ್ನಡಗಳ ಸಂಬಂಧ ಈ ಎರಡು ತುದಿಗಳ ನಡುವೆ ಇದ್ದಂತೆ ತೋರುತ್ತದೆ. ದೇಶೀಯ ಆಳ್ವಿಕೆ ಮೊದಲಾದ ಇಪ್ಪತ್ತನೆಯ ಶತಮಾನದ ಎರಡನೆಯ ಅರ್ಧದಲ್ಲಿ ಕನ್ನಡ ಮತ್ತು ಇಂಗ್ಲಿಶ್‌ಗಳ ನಡುವಣ ಸಂಬಂಧ ಬೇರೆಯ ನೆಲೆಗಳನ್ನು ತಲುಪುತ್ತವೆ. ಇದಕ್ಕೆ ಸ್ವಾಯತ್ತ ಆಳ್ವಿಕೆಯ ಕಾರಣಗಳಿರುವಂತೆ ಜಾಗತಿಕ ವಲಯದಲ್ಲಿ ನಡೆಯುತ್ತಿದ್ದ ಬದಲಾವಣೆಗಳೂ ಕಾರಣವಾಗುತ್ತವೆ. 1950ರ ರಾಜ್ಯಾಂಗವು 'ಕೆಲಕಾಲ'ದವರೆಗೆ ಇಂಗ್ಲಿಶ್ ಭಾಷೆಯನ್ನು

ಅದು ಹೊಂದಿದ್ದ ಸ್ಥಾನದಲ್ಲೇ ಮುಂದುವರೆಸಲು ಅವಕಾಶ ಕಲ್ಪಿಸಿತಷ್ಟೆ. ಇಂಗ್ಲಿಶಿಗೆ ಪರ್ಯಾಯವಾಗಿ ರಾಷ್ಟ್ರ ಮಟ್ಟದಲ್ಲಿ ಹಿಂದಿಯನ್ನು, ಪ್ರಾಂತ್ಯಗಳ ಮಟ್ಟದಲ್ಲಿ ಆಯಾ ಪ್ರಾಂತ್ಯಗಳ ಭಾಷೆಯನ್ನು ಕಲ್ಪಿಸಿಕೊಳ್ಳಲಾಗಿತ್ತು. ಇದರಿಂದ ಯಾವ ಸಂದರ್ಭಗಳು ಉಂಟಾಗಬಹುದು ಎಂಬುದನ್ನು ಆಗ ಇಡಿಯಾಗಿ ಊಹಿಸಲು ಅಂದಿನ ನಾಯಕರಿಗೆ ಸಾಧ್ಯವಾಗಲಿಲ್ಲ. ಅಥವಾ ಚಾರಿತ್ರಿಕವಾಗಿ ಮೈತಳೆಯುತ್ತಿದ್ದ ಹೊಸ ಸಾಮಾಜಿಕ ವಿನ್ಯಾಸಗಳು ಇಡೀ ಪರಿಸ್ಥಿತಿಗೆ ಬೇರೆಯೇ ತಿರುವನ್ನು ನೀಡಬಹುದೆಂದೂ ಆಗ ಊಹಿಸುವುದೂ ಸಾಧ್ಯವಿರಲಿಲ್ಲ. ಉದಾಹರಣೆಗೆ ರಾಜ್ಯ ಪುನರ್ವಿಂಗಡಣೆಗೆ ಭಾಷೆಯನ್ನು ಆಧಾರವಾಗಿ ಇರಿಸಿಕೊಳ್ಳುವ ನಿರ್ಣಯ ರಾಜ್ಯಾಂಗ ನಿರ್ಮಾಣದ ಅನಂತರದ ಆಕಾರ ಪಡೆದದ್ದು ತಾನೇ. ರಾಜ್ಯಾಂಗವು ಇಂಗ್ಲಿಶಿಗೆ ಕಲ್ಪಿಸಿಕೊಟ್ಟಿದ್ದ 'ಕೆಲಕಾಲ'ದ ಅವಕಾಶ ಹಲವು ಕಾರಣಗಳಿಂದ ಮುಂದುವರೆಯುವ ಪರಿಸ್ಥಿತಿ ಉಂಟಾಯಿತು. ಈಗಲೂ ಈ ಇಬ್ಬಂದಿ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲ.

ಕನ್ನಡದ ಜೊತೆಗೆ ಇಂಗ್ಲಿಶ್ ಹೊಂದಿರುವ ಸಂಬಂಧದ ಸ್ವರೂಪ ಮಾತ್ರ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಎರಡು ಮುಖ್ಯ ಬದಲಾವಣೆಗಳನ್ನು ಕಂಡಿದೆ. ಒಂದು: ಇಂಗ್ಲಿಶ್ ಭಾಷೆಯ ಸಾರ್ವಭೌಮತ್ವವನ್ನು ವಿರೋಧಿಸುವುದು ಅಥವಾ ಕನ್ನಡಕ್ಕೆ ಅಗತ್ಯವಾದ ಸ್ಥಾನಮಾನಗಳನ್ನು ಒದಗಿಸುವುದು. ಎರಡು: ಇಂಗ್ಲಿಶ್ ಜಾಗತಿಕ ಸನ್ನಿವೇಶದಲ್ಲಿ ಸಾಮಾಜಿಕ ಸಮಾನತೆಯ ಸಾಧನೆಗೆ ಅನಿವಾರ್ಯವೆಂದು ತಿಳಿಯುವುದು. ಈ ಎರಡು ಸನ್ನವೇಶಗಳಲ್ಲಿ ವಿರೋಧವಿರುವುದು ಎದ್ದುಕಾಣುವಂತಿದೆ. ಈ ನಿಲುವುಗಳು ಮೈತಳೆದು ಪುಷ್ಟಿಗೊಂಡ ಬಗೆಯನ್ನು ತಿಳಿಯುವುದು ಅಗತ್ಯವಾಗಿದೆ. 1950ರ ಅನಂತರದಲ್ಲಿ ದೇಶೀ ಅಥವಾ ಪ್ರಾಂತೀಯ ಭಾಷೆಗಳ ವ್ಯಾಪಕ ಬಳಕೆಗಾಗಿ ಯೋಜಿತ ರೀತಿಯಲ್ಲಿ ಕ್ರಮವಹಿಸುವುದು ಅಗತ್ಯವೆಂದು ಸರಕಾರಗಳು ತಿಳಿದವು. ಮುಖ್ಯವಾಗಿ ಶಿಕ್ಷಣ ವಲಯದಲ್ಲಿ ಪ್ರಾಂತೀಯ ಭಾಷೆಗಳನ್ನು ಎಲ್ಲ ಹಂತಗಳಲ್ಲೂ ಕಲಿಕೆಯ ಮಾಧ್ಯಮವನ್ನಾಗಿ ಬಳಸಬೇಕೆಂದು ವಾದ ಬೆಳೆಯತೊಡಗಿತು. ಕನ್ನಡವನ್ನು ಹೀಗೆ ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವ ಪ್ರಯತ್ನದಲ್ಲಿ ಎರಡು ನೆಲೆಗಳು ಮೊದಲಾಗಿವೆ. ಒಂದು: ಅಗತ್ಯವಾದ ಮಾಹಿತಿಯನ್ನು ಕನ್ನಡದಲ್ಲಿ ಒದಗಿಸಲು ಕ್ರಮವಹಿಸುವುದು. ಎರಡು: ಶಾಸನಗಳ ಮೂಲಕ ಕನ್ನಡವನ್ನು ಕಲಿಕೆಯ ಮಾಧ್ಯಮವನ್ನಾಗಿ ನಿಯೋಜಿಸುವುದು. ಇವುಗಳಲ್ಲಿ ಮೊದಲನೆಯ ಕ್ರಮ ನಿರಂತರವಾಗಿ ಬೆಳೆಯುತ್ತಲೇ ಬಂದಿದೆ. ಎರಡನೆಯ ಕ್ರಮ ಹಲವು ಬಗೆಯ ಹಿನ್ನಡೆತಗಳಿಗೆ ಒಳಗಾಗಿದೆ. ಸಂವಿಧಾನದ ವಿವಿಧ ಕಲಮುಗಳ ನಡುವೆ ಇದ್ದಿರಬಹುದಾದ ಅವಕಾಶಗಳು ಮತ್ತು ಅವುಗಳನ್ನು ಕುರಿತ ನ್ಯಾಯಾಂಗದ ವ್ಯಾಖ್ಯಾನಗಳು ತುಂಬ ಗೊಂದಲದ ವಾತಾವರಣವನ್ನು ಉಂಟುಮಾಡಿವೆ. ಕನ್ನಡದಲ್ಲಿ ಎಲ್ಲ ಜ್ಞಾನ ಶಾಖೆಗಳ ತಿಳುವಳಿಕೆಯನ್ನು ಒದಗಿಸುವುದಕ್ಕಾಗಿ ನಡೆಸಿರುವ ಪ್ರಯತ್ನಗಳು ಸಮಪ್ರಮಾಣದಲ್ಲಿ ಬೆಳೆಯುತ್ತಿಲ್ಲ. ಕೆಲವು ಸಂದರ್ಭದಲ್ಲಿ ಹೆಚ್ಚಿನ ಒತ್ತಾಸೆ ಕಂಡು ಬಂದರೆ ಕೆಲವೊಮ್ಮೆ ಏನೂ ಕೆಲಸವೇ ನಡೆದಿಲ್ಲವೇನೋ ಎಂಬ ವಾತಾವರಣ ಮೂಡಿರುವುದೂ ಉಂಟು. ಶಾಸನದ ಮೂಲಕ ಕನ್ನಡವನ್ನು ಕಲಿಕೆಯ ಮಾಧ್ಯಮವನ್ನಾಗಿ ಪರಿವರ್ತಿಸಲು ಸಾಧ್ಯವಾಗದಿದ್ದರೂ ಸಾಮಾಜಿಕ

ಸಂಚಲನೆಯಲ್ಲಿ ಆಗಿರುವ ಬದಲಾವಣೆಯಿಂದಾಗಿ ಕನ್ನಡ ಭಾಷೆಯು ಅನಧಿಕೃತವಾಗಿ ಕಲಿಕೆಯ ವಾತಾವರಣದಲ್ಲಿ ಜಾಗ ಪಡೆದುಕೊಂಡಿದೆ. ಇಂಗ್ಲಿಶ್ ಅಧಿಕೃತ ಕಲಿಕೆಯ ಮಾಧ್ಯಮವಾಗಿದ್ದರೂ ಶಿಕ್ಷಣದ ವಿವಿಧ ಹಂತಗಳಲ್ಲಿ ಕನ್ನಡವೇ ವಿದ್ಯಾರ್ಥಿಗಳು ತಮ್ಮ ತಿಳುವಳಿಕೆಯನ್ನು ವ್ಯಕ್ತಪಡಿಸುವ ಭಾಷೆಯಾಗಿದೆ. ಎಷ್ಟೋ ವೇಳೆ ಬೋಧಕರೂ ಕನ್ನಡವನ್ನು ಸಹಭಾಷೆಯನ್ನಾಗಿ ತರಗತಿಗಳಲ್ಲಿ ಬಳಸುತ್ತಲೂ ಇದ್ದಾರೆ. ಕಲಿಕೆ ಸುಗಮವಾಗಲೆಂದು ಹೀಗೆ ಕನ್ನಡವನ್ನು ಇಂಗ್ಲಿಶ್ ಜೊತೆಯಲ್ಲಿ ಸಹಭಾಷೆಯನ್ನಾಗಿ ಆಯ್ದುಕೊಳ್ಳಲಾಗುತ್ತಿದೆ. ಕನ್ನಡ ಹೀಗೆ ಅನಧಿಕೃತವಾಗಿ ಕಲಿಕೆಯ ವಲಯದೊಳಗೆ ಸೇರಿಕೊಳ್ಳುತ್ತಿದೆ. ಹೀಗಿದ್ದರೂ ನಮ್ಮ ಶೈಕ್ಷಣಿಕ ಆಡಳಿತ ಈ ಪರಿಸ್ಥಿತಿಯನ್ನು ಗಂಭೀರವಾಗಿ ಅಭ್ಯಾಸ ಮಾಡಿ ಅಗತ್ಯವಾದ ಕ್ರಮಗಳನ್ನು ಕೈಗೊಂಡಿಲ್ಲ. ಪ್ರಶ್ನೆ ಪತ್ರಿಕೆಗಳನ್ನು ಕನ್ನಡ ಮತ್ತು ಇಂಗ್ಲಿಶ್‌ನಲ್ಲಿ ಒದಗಿಸಿದರೆ ತಮ್ಮ ಜವಾಬ್ದಾರಿ ತೀರಿತೆಂದು ತೀರ್ಮಾನ ಮಾಡಿಕೊಂಡಂತೆ ಈ ಆಡಳಿತ ವ್ಯವಸ್ಥೆ ಪ್ರತಿಕ್ರಿಯಿಸುತ್ತದೆ.

ಕನ್ನಡವನ್ನು ಕಲಿಕೆಯ ಮಾಧ್ಯಮವನ್ನಾಗಿ ಅಧಿಕೃತಗೊಳಿಸಲು ಇರುವ ಅಡ್ಡಿಗಳ ಬಗ್ಗೆ ಇರುವ ವಾದಗಳು ತುಂಬಾ ಹಳೆಯವು. ಕಲಿತವರ ಅವಕಾಶಗಳು ಕುಂಠಿತಗೊಳ್ಳುತ್ತವೆ ಎನ್ನುವುದು ಒಂದು ವಾದ. ಅಂದರೆ ಉನ್ನತಶಿಕ್ಷಣ ಪಡೆದವರು ತಮಗಿರುವ ಶೈಕ್ಷಣಿಕ ಮತ್ತು ವೃತ್ತಿಪರ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕಾದರೆ ಅವರು ಇಂಗ್ಲಿಶ್ ಮೂಲಕ ಕಲಿಯುವುದು ಅಗತ್ಯವೆಂದು ವಾದಿಸಲಾಗುತ್ತದೆ. ರಾಷ್ಟ್ರಮಟ್ಟದಲ್ಲಿ ಮತ್ತು ಜಾಗತಿಕವಾಗಿ ಪ್ರಮಾಣೀಕರಣವನ್ನು ಪಡೆದುಕೊಳ್ಳಲು ಇಂಗ್ಲಿಶ್ ಮೂಲಕ ಕಲಿಯುವುದು ಅಗತ್ಯವೆಂದು ನಂಬಲಾಗುತ್ತಿದೆ. ಎರಡನೆಯ ತಕರಾರು: ಕನ್ನಡವನ್ನು ಕಲಿಕೆಯ ಭಾಷೆಯನ್ನಾಗಿ ಬಳಸಲು ಅಗತ್ಯವಾದ ಪಾರಿಭಾಷಿಕ ಪದಗಳು ಈ ಭಾಷೆಯಲ್ಲಿ ಇಲ್ಲ. ಹಾಗೆ ಪಾರಿಭಾಷಿಕರ ಪದಗಳನ್ನು ರೂಪಿಸುವ ಪ್ರಯತ್ನಗಳು ವಿವಿಧ ವಲಯಗಳಿಂದ ನಡೆದುದರ ಪರಿಣಾಮವಾಗಿ ಹಲವು ಪದಗಳು ರೂಪುಗೊಂಡ ಗೊಂದಲದ ವಾತಾವರಣವಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕೆಗೆ ಅಡ್ಡಿಯಾಗುತ್ತದೆ ಎನ್ನುವುದು ಈ ತಕರಾರಿನ ಸಾರಾಂಶ.

ಕನ್ನಡ ಮತ್ತು ಇಂಗ್ಲಿಶ್ ಈ ಭಾಷೆಗಳ ಕಲಿಕೆಯ ಸಂಬಂಧದಲ್ಲಿ ಈಗ ಹೊಸ ನೆಲೆಗಳ ಚರ್ಚೆ ಮೊದಲಾಗುತ್ತಿವೆ ಎಂದು ನಾವು ತಿಳಿಯಲು ಸಾಧ್ಯವಿದೆ. ಆದರೆ ಇಂಗ್ಲಿಶ್ ಭಾಷೆಯನ್ನು ಸಾಮಾಜಿಕ ಏಕತೆಯನ್ನು ಸಾಧಿಸಲು ಇರುವ ದಾರಿಯೆಂದು ತಿಳಿಯುವ ಚಿಂತನೆ ಬಹಳ ಹಳೆಯದು. ಈಗ ದಲಿತ ಪರ ಚಿಂತನಕಾರರು ಸಂಸ್ಕೃತದ ಹಾಗೆ ಕನ್ನಡವೂ ಕೂಡ ತಮ್ಮನ್ನು ಸಾಮಾಜಿಕ ತಾರತಮ್ಯದ ಸ್ಥಿತಿಯಲ್ಲೇ ಉಳಿಸುತ್ತದೆ ಎಂದು ವಾದಿಸುತ್ತಾರೆ. ಹಾಗಾಗಿ ಇಂಗ್ಲಿಶ್ ಹೊಸ ಅವಕಾಶಗಳಿಗೆ ಮತ್ತು ಸಾಮಾಜಿಕ ಸಮಾನತೆಗೆ ತೆರೆದುಕೊಳ್ಳಲು ಇರುವ ದಾರಿ ಎಂದು ತಿಳಿಯುತ್ತಾರೆ. ಈ ವಾದದ ಎಲ್ಲ ಅಂಶಗಳನ್ನು ವಿವರಿಸಲು ಇಲ್ಲಿ ಅವಕಾಶಗಳಿಲ್ಲ. ಕಲಿಕೆಯಿಂದ ವಂಚಿತರಾಗಿ ಉಳಿದಿದ್ದ ದಮನಿತ ವರ್ಗದ, ವರ್ಣದ ಜನರಿಗೆ ಕನ್ನಡದ ಮೂಲಕ ಪಡೆಯುವ ಮತ್ತು ಕನ್ನಡ ಕೇಂದ್ರಿತವಾದ ಶಿಕ್ಷಣವು ಪ್ರಗತಿಯತ್ತ ಕರೆದೊಯ್ಯುವುದಿಲ್ಲವೆಂಬ ಅನಿಸಿಕೆ

ದೃಢವಾಗಿದೆ. ಇದರಿಂದ ತಾವು ಮತ್ತಷ್ಟು ಹಿಂದುಳಿಯುವ ಮತ್ತು ಅನ್ಯಾಯಕ್ಕೆ ಒಳಗಾಗುವ ಪ್ರಸಂಗ ಎದುರಾಗುತ್ತದೆ ಎಂದು ವಾದಿಸುತ್ತಾರೆ. ಏಕೆಂದರೆ ಇಂಗ್ಲಿಶ್ ಕಲಿಕೆಯಿಂದ ಒದಗುವ ಸೌಲಭ್ಯಗಳನ್ನು ಈಗಾಗಲೇ ಕೆಲವು ತಲೆಮಾರಿನಿಂದ ಶಿಕ್ಷಣದ ಅವಕಾಶವನ್ನು ಪಡೆದವರು ದೋಚಿಕೊಳ್ಳುತ್ತಾರೆ; ಎಲ್ಲ ಅವಕಾಶಗಳು ಅವರ ಪಾಲಿಗೆ ಲಭಿಸುತ್ತವೆ; ತಾವು ಎಂದಿನಂತೆ ಎರಡನೆಯ ಅಥವಾ ಅದಕ್ಕೂ ಕೆಳಗಿನ ದರ್ಜೆಯ ನಾಗರಿಕರಾಗಿ ಉಳಿಯಬೇಕಾಗುತ್ತದೆ ಎಂಬ ಚಿಂತನೆಯನ್ನು ದಲಿತರು ಮಂಡಿಸುತ್ತಾರೆ. ಅವರ ವಾದದಲ್ಲಿ ಹುರುಳಿಲ್ಲವೆಂದು ತಳ್ಳಿಹಾಕಲು ಬರುವುದಿಲ್ಲ. ಆದರೆ ಎಲ್ಲರಿಗೂ ಇಂಗ್ಲಿಶ್ ಬಿಡುಗಡೆಯ ಸಾಧನವಾಗುವುದಾದರೆ ಅದನ್ನು ಪ್ರತಿಯೊಬ್ಬರಿಗೂ ಒದಗಿಸುವುದು ಹೇಗೆ? ಅದಕ್ಕೆ ಅಗತ್ಯವಾದ ಮೂಲ ಸೌಲಭ್ಯಗಳು ನಮ್ಮಲ್ಲಿ ಇವೆಯೇ? ಎಲ್ಲರಿಗೂ ಶಿಕ್ಷಣವೆಂಬ ರಾಜ್ಯಾಂಗದ ನೆಲೆಯೇ ಈಗ ಕೆಲವರಿಗೆ ಮಾತ್ರ ಶಿಕ್ಷಣ ಎಂಬ ಹಂತಕ್ಕೆ ಬಂದು ನಿಂತಿದೆ. ಇದೇ ಪರಿಣಾಮ ಇಂಗ್ಲಿಶ್ ವಿಚಾರದಲ್ಲೂ ಸಂಭವಿಸುವುದಿಲ್ಲವೆಂದು ಹೇಗೆ ಹೇಳುವುದು?

ಇಂಗ್ಲಿಶ್ ಭಾಷೆಯನ್ನು ಕಲಿಯುವುದು ಮತ್ತು ಇಂಗ್ಲಿಶ್ ಮೂಲಕ ಕಲಿಯುವುದು ಇವೆರಡು ಬೇರೆಬೇರೆ ನೆಲೆಯ ವಿಷಯಗಳು. ಒಂದಕ್ಕೊಂದನ್ನು ಬೆರೆಸುವುದು ಸರಿಯಲ್ಲ. ಮೇಲೆ ಹೇಳಿದಂತೆ ಕನ್ನಡದ ಮೂಲಕ ಕಲಿಯುವುದು ಅನಧಿಕೃತವಾಗಿ ಎಲ್ಲ ನೆಲೆಗಳಲ್ಲೂ ಜಾರಿಗೆ ಬಂದಿದೆ. ಅದನ್ನು ಅಧಿಕೃತಗೊಳಿಸಬೇಕಾಗಿದೆ. ಮತ್ತು ಅದರ ಸ್ವರೂಪವನ್ನು ಪ್ರಮಾಣೀಕರಿಸಬೇಕಾಗಿದೆ. ಇರುವ ವಿಕಲ್ಪಗಳನ್ನು ಕಡಿಮೆ ಮಾಡಿ ಸಾಮಾನ್ಯೀಕರಿಸುವ ಅಗತ್ಯವಿದೆ. ಆದರೆ ಇಂಗ್ಲಿಶ್ ಭಾಷೆಯನ್ನು ಕಲಿಸುವ ಮತ್ತು ಕಲಿಯುವ ಪ್ರಕ್ರಿಯೆ ಬೇರೆ. ಇಲ್ಲಿ ಕನ್ನಡ ಮತ್ತು ಇಂಗ್ಲಿಶ್‌ಗಳನ್ನು ಪರಸ್ಪರ ಶತ್ರು ಭಾಷೆಗಳಂತೆ ನೋಡುವ ಪ್ರವೃತ್ತಿ ಸಾಮಾನ್ಯ ತಿಳುವಳಿಕೆಯ ಭಾಗವಾಗಿದೆ. ಜಗತ್ತಿನಾದ್ಯಂತ ಇಂಗ್ಲಿಶ್ ಭಾಷೆಯ ಕಲಿಕೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ನಾವು ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ಇಂಗ್ಲಿಶ್ ಭಾಷೆಯನ್ನು ಮೊದಲ ಭಾಷೆಯನ್ನಾಗಿ ಕಲಿಯುವವರ ಸಂಖ್ಯೆಗಿಂತ ಅದನ್ನು ಎರಡನೆಯ ಭಾಷೆಯನ್ನಾಗಿ ಕಲಿಯುವವರ ಸಂಖ್ಯೆ ಬಹಳ ಹೆಚ್ಚಾಗಿದೆ. ಹಾಗಾಗಿ ಇಂಗ್ಲಿಶ್ ಅನ್ನು ಕಲಿಯುವ ಜನರು ತಮ್ಮ ಮೊದಲ ಭಾಷೆಯ ಬಳಕೆಯ ಪರಿಣಾಮಗಳಿಗೆ ಒಳಗಾಗುವುದು ಅನಿವಾರ್ಯ. ಇದರಿಂದ ಇಂಗ್ಲಿಶ್ ಭಾಷೆಯ ಸ್ವರೂಪದಲ್ಲೇ ಬದಲಾವಣೆಗಳಾಗುತ್ತಿರುವುದನ್ನು ಭಾಷಾ ಶಾಸ್ತ್ರಜ್ಞರು ಗುರುತಿಸುತ್ತಿದ್ದಾರೆ. ಇಂಗ್ಲಿಶ್ ಬದಲು 'ಇಂಗ್ಲಿಶ್‌ಗಳು' ಆಕಾರ ಪಡೆಯುತ್ತಿವೆ. ಈ ವಿವರಗಳು ನಮಗೆ ಅಗತ್ಯ. ಏಕೆಂದರೆ ನಮ್ಮ ಇಂಗ್ಲಿಶ್ ಕಲಿಕೆಯನ್ನು ಕನ್ನಡ ಕಲಿಕೆಯೊಡನೆ ಸಮನ್ವಯಗೊಳಿಸಿಕೊಳ್ಳುವ ಅಗತ್ಯವಿದೆ. ಅಂದರೆ ಇವೆರಡು ಭಾಷೆಗಳ ಕಲಿಕೆಯಲ್ಲಿ ಒಂದು ಬಗೆಯ ನಿರಂತರತೆಯನ್ನು ಕಾಯ್ದುಕೊಳ್ಳಬೇಕು. ಆಗ ಇವೆರಡರ ನಡುವೆ ವಿರೋಧದ ಭಾವ ಹಿಂದಕ್ಕೆ ಸರಿಯುತ್ತದೆ. ಅಲ್ಲದೆ ಎಲ್ಲರಿಗೂ ಇಂಗ್ಲಿಶ್ ಭಾಷೆಯನ್ನು ದೊರಕಿಸುವ ಯತ್ನಕ್ಕೂ ಒತ್ತಾಸೆ ಸಿಗುತ್ತದೆ. ಬರಲಿರುವ ದಶಕಗಳಲ್ಲಿ ಕನ್ನಡ ಮತ್ತು ಇಂಗ್ಲಿಶ್‌ಗಳ ಸಂಬಂಧವನ್ನು ಹೀಗೆ ಹೊಸದಾಗಿ ರೂಪಿಸುವುದು ಒಂದು ಸವಾಲಾಗಲಿದೆ.

ಇಂಗ್ಲಿಶ್ ಭಾಷೆಯ ಸಹವಾಸದಿಂದ ಕನ್ನಡದ ಸ್ವರೂಪದಲ್ಲೂ ಹಲವು ಬದಲಾವಣೆಗಳಾಗುತ್ತಿವೆ. ಬಹುಮುಖ್ಯವಾಗಿ ಕನ್ನಡದ ಪದಕೋಶ ಅಗಾಧ ಪ್ರಮಾಣದಲ್ಲಿ ಇಂಗ್ಲಿಶ್ ಪದಗಳ ಸೇರ್ಪಡೆಯಿಂದ ವಿಕಾಸವಾಗುತ್ತಿದೆ. ಇದು ಕನ್ನಡ-ಇಂಗ್ಲಿಶ್ ದ್ವಿಭಾಷಿಕರಿಗೆ ಮಾತ್ರ ಸಂಬಂಧಪಟ್ಟ ವಿವರಣೆಯಲ್ಲ. ಎಲ್ಲ ಕನ್ನಡಿಗರ ದಿನದಿನದ ಬಳಕೆಯ ಪದಕೋಶಕ್ಕೆ ಇಂಗ್ಲಿಶ್ ಪದಗಳು ಅಗಾಧ ಪ್ರಮಾಣದಲ್ಲಿ ಬಂದು ಸೇರುತ್ತಿವೆ. ರೂಪ ಮತ್ತು ಅರ್ಥದಲ್ಲಿ ಬದಲಾವಣೆಯನ್ನು ಪಡೆಯುತ್ತಿವೆ. ಸಾಮಾನ್ಯ ತಿಳುವಳಿಕೆಯಲ್ಲಿ ಹೀಗೆ ಕನ್ನಡದೊಳಕ್ಕೆ ಇಂಗ್ಲಿಶ್ ಬಂದು ಸೇರುವುದು ಅಷ್ಟು ಸರಿಯಾದ ಬೆಳವಣಿಗೆಯಲ್ಲ. ಆದರೆ ವಾಸ್ತವದಲ್ಲಿ ಈ ಬದಲಾವಣೆಯನ್ನು ನಾವು ತಡೆಯಲು ಬರುವುದಿಲ್ಲ. ಏಕೆಂದರೆ ಇಂಗ್ಲಿಶ್ ಪದಗಳ ನಿವಾರಣೆಯಿಂದ ಶುದ್ಧವಾದ ಕನ್ನಡವನ್ನು ರೂಪಿಸಲು ಹೊರಡುವವರು ಮೊರೆಹೋಗುವುದು ಸಂಸ್ಕೃತಕ್ಕೆ. ಆದರೆ ಹಾಗೆ ತಾವು ಸಂಸ್ಕೃತಕ್ಕೆ ಜೋತುಬೀಳುತ್ತಿರುವುದು ಬಹಳ ಜನರಿಗೆ ಗೊತ್ತಾಗುವುದಿಲ್ಲ. ಕನ್ನಡದ ಪದಕೋಶಕ್ಕೆ ಬಂದು ಸೇರಿದ ಸಂಸ್ಕೃತ ಮತ್ತು ಇಂಗ್ಲಿಶ್ ಪದಗಳ ಬಳಕೆಯಲ್ಲಿ ಒಂದು ಅಲಿಖಿತ ನಿಯಮವನ್ನು ಪಾಲಿಸುತ್ತಿರುವುದನ್ನು ಗಮನಿಸಬಹುದು. ಅದೆಂದರೆ ಇಂಗ್ಲಿಶ್ ಪದಗಳನ್ನು ಅನೌಪಚಾರಿಕವಾಗಿ, ಮಾತಿನಲ್ಲಿ ಬಳಸುವುದು; ಸಂಸ್ಕೃತ ಪದಗಳನ್ನು ಔಪಚಾರಿಕವಾಗಿ ಮತ್ತು ಬರವಣಿಗೆಯಲ್ಲಿ ಬಳಸುವುದು. ಈ ಬಳಕೆಯ ದ್ವಿಸ್ತರತೆ ಕನ್ನಡಕ್ಕೆ ಆರೋಗ್ಯಕರವಾದ ಸ್ಥಿತಿಯಲ್ಲ. ಇದರಿಂದ ನಾವು ಬೇಗ ಹೊರಬರಬೇಕು. ಇಂಗ್ಲಿಶ್ ಪದಗಳ ಬಗ್ಗೆ ಇರುವ ಅನಗತ್ಯ ವಿರೋಧ ಮತ್ತು ಮಡಿವಂತಿಕೆಗಳನ್ನು ಕೈಬಿಡಬೇಕು. ಸಂಸ್ಕೃತದ ಪದಗಳನ್ನು ಹೊಂದಿಸಿಕೊಳ್ಳಲು ಬಹು ಹಿಂದೆಯೇ ಅನುಸರಿಸಿದ ವಿಧಾನವನ್ನೇ ಇಂಗ್ಲಿಶ್ ಪದಗಳ ವಿಷಯದಲ್ಲೂ ಅನುಸರಿಸಬಹುದು. ಅದೆಂದರೆ ಸಂಸ್ಕೃತದ ಪದಗಳಿಗೆ ತದ್ಭವಗಳನ್ನು ರೂಪಿಸಿಕೊಳ್ಳುವುದು ಮತ್ತು ಆ ಪದಗಳನ್ನು ಕನ್ನಡದ ಲಿಪಿಯಲ್ಲಿ ಬರೆಯುವುದು. ಇಂಗ್ಲಿಶ್ ಪದಗಳ ವಿಷಯಕ್ಕೂ ಇದೇ ತಂತ್ರವನ್ನು ಕನ್ನಡ ಬಳಸುವುದು ಅನಿವಾರ್ಯ ಮತ್ತು ಅಗತ್ಯ.

ಇಂಗ್ಲಿಶನ್ನು ಕನ್ನಡದ ಮೂಲಕ ಕಲಿಸುವುದು ಎಂದರೇನು?

ಈಚೆಗೆ (1994) ಕನ್ನಡ ವಿಶ್ವವಿದ್ಯಾಲಯದ ಕುಲಪತಿಯವರು ಶಿಕ್ಷಕರ ಸಮ್ಮೇಳನವೊಂದರಲ್ಲಿ ಇಂಗ್ಲಿಶನ್ನು ಕನ್ನಡದ ಮೂಲಕ ಕಲಿಸಬೇಕೆಂದು ಸೂಚನೆ ನೀಡಿದ್ದಾರೆ. ಅವರ ಈ ಸೂಚನೆಯ ಬಗೆಗೆ ಪತ್ರಿಕೆಯ ತಮ್ಮ ಅಂಕಣದಲ್ಲಿ ಶ್ರೀ ಕು.ಶಿ. ಹರಿದಾಸಭಟ್ ಅವರು ಚರ್ಚೆ ಬೆಳೆಸಿದ್ದಾರೆ. ಅನಂತರ ಎಲ್ಲಿಯೂ ಈ ಕುರಿತು ಮತ್ತೆ ಚರ್ಚೆ ಬೆಳೆದಂತಿಲ್ಲ. ಕು.ಶಿ. ಹರಿದಾಸಭಟ್ ಅವರ ವಿಚಾರದಂತೆ ಇಂಗ್ಲಿಶ್‌ನ್ನು ಕನ್ನಡದ ಮೂಲಕ ಕಲಿಸುವ ಸಲಹೆ ಸ್ವೀಕಾರ ಯೋಗ್ಯವಲ್ಲ. ಏಕೆಂದರೆ ನಮ್ಮ ಮಕ್ಕಳ ಇಂಗ್ಲಿಶ್ ಬಳಕೆಯ ಮಟ್ಟ ಈಗಾಗಲೇ ಸಾಕಷ್ಟು ಕುಸಿದಿರುವುದರಿಂದ ಹೀಗೆ ಕನ್ನಡದ ಮೂಲಕ ಇಂಗ್ಲಿಶ್‌ನ್ನು ಕಲಿಸಲು ಮೊದಲು ಮಾಡಿದರೆ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ. ಅಲ್ಲದೆ ಇನ್ನೂ ಒಂದು ಕಾರಣಕ್ಕಾಗಿ ಈ ಸಲಹೆಯನ್ನು ಅವರು ನಿರಾಕರಿಸುತ್ತಾರೆ. ಇಂಗ್ಲಿಶನ್ನು ಕಲಿಸುವವರಿಗೆ ಜಾಗತಿಕವಾಗಿ ಬಹು ಬೇಡಿಕೆ ಇದೆ. ಬದಲಾಗುತ್ತಿರುವ ಸಂದರ್ಭದಲ್ಲಿ ಭಾರತ ಅಂತಹ ಮಾರುಕಟ್ಟೆಯನ್ನು ಪ್ರವೇಶಿಸಲು ಶಕ್ತವಾಗಬೇಕಾದರೆ ಇಂಗ್ಲಿಶನ್ನು ಸಶಕ್ತವಾಗಿ ಬಳಸುವವರ ಪಡೆಯೊಂದನ್ನು ಬೆಳೆಸಬೇಕಾಗುತ್ತದೆ. ಹಾಗಾಗಲು ನಾವು ಇಂಗ್ಲಿಶ್‌ನ್ನು ಇಂಗ್ಲಿಶಿನ ಮೂಲಕವೇ ಕಲಿಸುವ ವಿಧಾನವನ್ನು ಕೈಬಿಡಬಾರದು. ಮಾತ್ರವಲ್ಲದೆ ಈಗ ಬಳಸುತ್ತಿರುವ ಕಲಿಕೆವಿಧಾನವನ್ನು ಮತ್ತಷ್ಟು ಸುಧಾರಿಸಬೇಕು.

ಶ್ರೀಯುತರ ವಿಚಾರಗಳು ಮತ್ತಷ್ಟು ಚರ್ಚೆಯನ್ನು ಬಯಸುತ್ತವೆ. ಆದರೆ ಸದ್ಯ ಅದನ್ನು ಬೆಳೆಸುವ ಬದಲು ಕುಲಪತಿಯವರ ಸಲಹೆಯನ್ನು ಒಪ್ಪಿಕೊಂಡರೆ ಆಗುವ ಪರಿಣಾಮಗಳೇನು ಎಂಬ ಕಡೆಗೆ ಗಮನಹರಿಸಬಹುದಾಗಿದೆ.

ಭಾಷೆಯನ್ನು, ಅದರಲ್ಲೂ ಎರಡನೆಯ ಭಾಷೆಯನ್ನು ಹೇಗೆ ಕಲಿಸಬೇಕು ಹಾಗೂ ಕಲಿಯಬೇಕು ಎಂಬ ಬಗೆಗೆ ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ. ಕಲಿಯುವ ಹಾಗೂ ಕಲಿಸುವ ವಿಧಾನಗಳು ಏಕೆ ಕಲಿಯಬೇಕು ಹಾಗೂ ಕಲಿಸಬೇಕು ಎಂಬ ಪ್ರಶ್ನೆಯನ್ನೂ ಅವಲಂಬಿಸಿವೆ. ಭಾಷೆಯನ್ನು ಔಪಚಾರಿಕವಾಗಿ ಕಲಿಯಬಹುದು ಅಥವಾ ಅನೌಪಚಾರಿಕವಾಗಿ ಕಲಿಯಬಹುದು. ನಮ್ಮ ಸದ್ಯದ ಚರ್ಚೆ ಔಪಚಾರಿಕವಾಗಿ ಭಾಷೆಯನ್ನು ಕಲಿಯುವ ವಿಧಾನವನ್ನು ಮಾತ್ರ ಗಮನದಲ್ಲಿರಿಸಿಕೊಂಡಿದೆ.

ಕನ್ನಡ ನಾಡಿನಲ್ಲಿ ಯಾರಿಗೂ (ಬಹುಮಟ್ಟಿಗೆ) ಇಂಗ್ಲಿಶ್ ಮನೆಭಾಷೆಯಲ್ಲ; ಮಾತೃಭಾಷೆಯಲ್ಲ. ಹಾಗೆ ಇಂಗ್ಲಿಶ್ ಮೊದಲ ಭಾಷೆಯಾಗಿರುವವರ ಸಂಖ್ಯೆ ಗಣನೀಯ

ಪ್ರಮಾಣದಲ್ಲಿಲ್ಲ. ಅಂದರೆ ಶಾಲೆಗಳಲ್ಲಿ ಇಂಗ್ಲಿಶನ್ನು ಎರಡನೆಯ ಭಾಷೆಯನ್ನಾಗಿ, ಕೆಲವೊಮ್ಮೆ ಮೂರನೆಯ ಭಾಷೆಯನ್ನಾಗಿ ಕಲಿಸಲಾಗುತ್ತದೆ. ಕನ್ನಡ ನಾಡಿನಲ್ಲಿ ಶಾಲಾಶಿಕ್ಷಣದ ವ್ಯಾಪ್ತಿಯಲ್ಲಿ ಬರುವ ಸುಮಾರು 25 ರಿಂದ 30 ಲಕ್ಷ ಮಕ್ಕಳು ಇಂಗ್ಲಿಶನ್ನು ಎರಡನೆಯ ಇಲ್ಲವೇ ಮೂರನೆಯ ಭಾಷೆಯನ್ನಾಗಿ ಕಲಿಯುತ್ತಿದ್ದಾರೆ. ಹೀಗೆ ಇಂಗ್ಲಿಶನ್ನು ಅವರಿಗೆ ಏಕೆ ಕಲಿಸಲಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರ: ಮಕ್ಕಳನ್ನು ಆಧುನಿಕ ಜಗತ್ತಿನ ಜ್ಞಾನವನ್ನು ಪಡೆಯಲು ಸನ್ನದ್ಧಗೊಳಿಸುವುದು; ಅವರು ವ್ಯಾವಹಾರಿಕವಾಗಿ ಆಧುನಿಕ ಜಗತ್ತನ್ನು ಎದುರಿಸಲು ಸಿದ್ಧರಾಗಿರುವಂತೆ ಮಾಡುವುದು ಈ ಗುರಿಗೂ ಇಂಗ್ಲಿಶ್ ಕಲಿಕೆಗೂ ಇರುವ ಸಂಬಂಧದ ಸ್ವರೂಪ ಮಾತ್ರ ಅಸ್ಪಷ್ಟ. ಅಲ್ಲದೆ ಆಧುನಿಕ ಜಗತ್ತಿನ ತಿಳುವಳಿಕೆಯನ್ನು ಪಡೆಯುವುದು ಎಂದರೇನು? ಆ ತಿಳುವಳಿಕೆಯ ಸ್ವರೂಪವೇನು? ಈ ಪ್ರಶ್ನೆಗಳು ಕೂಡ ನಮಗೆ ಎದುರಾಗುತ್ತವೆ. ಹೀಗಾಗಿ ಇಂಗ್ಲಿಶನ್ನು ಏಕೆ ಕಲಿಸಲಾಗುತ್ತಿದೆ ಎನ್ನುವ ಪ್ರಶ್ನೆಗೆ ಉತ್ತರ ಸಮರ್ಪಕವಾಗಿಲ್ಲ. ಆದ್ದರಿಂದಲೇ ಕಲಿಸುವ ಮತ್ತು ಕಲಿಯುವ ಬಗೆಯಲ್ಲೂ ಗೊಂದಲಗಳಿವೆ.

ಕುಲಪತಿಯವರು ಇಂಗ್ಲಿಶನ್ನು ಕನ್ನಡದ ಮೂಲಕ ಕಲಿಸಬೇಕೆಂದು ಹೇಳಿದ್ದಕ್ಕೆ ಕಾರಣಗಳೇನೇ ಇರಲಿ. ಅವರ ಸಲಹೆಯಿಂದ ಪರೋಕ್ಷವಾಗಿ ಇಂಗ್ಲಿಶನ್ನು ನಾವು ಏಕೆ ಕಲಿಯಬೇಕು ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿದಂತಾಗಿದೆ. ನಮ್ಮ ಮಕ್ಕಳ ಶಿಕ್ಷಣದಲ್ಲಿ ಇಂಗ್ಲಿಶಿನ ಸ್ಥಾನ ಏನಾಗಬೇಕು ಎಂಬ ಬಗೆಗೆ ಖಚಿತವಾಗಿ ಯೋಚಿಸಿದವರಲ್ಲಿ ಕುವೆಂಪು ಪ್ರಮುಖರು. ಅವರ ವಿಚಾರವಿಷ್ಟು ಇಂಗ್ಲಿಶ್ ನಮಗೆ ಬೇಕು. ಆದರೆ ಆಧಿಪತ್ಯದ ಭಾಷೆಯಾಗಿ ಅಲ್ಲ. ಗ್ರಂಥಾಲಯದ ಭಾಷೆಯಾಗಿ ಜಗತ್ತಿನ ಜ್ಞಾನವೆಲ್ಲ ಇಂಗ್ಲಿಶಿನಲ್ಲಿದೆ ಎಂದು ನಂಬೋಣ. ಆ ಜ್ಞಾನವನ್ನು ಇಂಗ್ಲಿಶಿನಲ್ಲಿ ಓದುವ ಸಾಮರ್ಥ್ಯ ನಮಗೆ ಒದಗಿದರೆ ಸಾಕು. ಹೀಗೆ ಪಡೆದದ್ದನ್ನು ನಮ್ಮ ಜನಜೀವನದಲ್ಲಿ ಬಳಸಲು ನಮಗೆ ನಮ್ಮ ಭಾಷೆ ಸಾಕು. ಕುಲಪತಿಯವರ ಸಲಹೆಯನ್ನು ಅನುಸರಿಸಿದರೆ ಆಗುವ ಪರಿಣಾಮವೂ ಇದೆ: ಆಗ ಇಂಗ್ಲಿಶ್ ನಮಗೆ ಗ್ರಂಥಾಲಯದ ಭಾಷೆಯಾಗುತ್ತದೆ.

ಮೇಲಿನ ವಿವರಗಳನ್ನು ಭಾಷಾಶಾಸ್ತ್ರೀಯವಾಗಿ ಹೀಗೆ ವಿವರಿಸಬಹುದು. ಒಂದು ಭಾಷೆಯನ್ನು ಕಲಿಯುವುದು ಎಂದರೆ ಆ ಭಾಷೆಯನ್ನು ಕೇಳಿದಾಗ (1) ಅರ್ಥ ಮಾಡಿಕೊಳ್ಳುವ ಹಾಗೂ (2) ಆ ಭಾಷೆಯಲ್ಲಿ ಮಾತನಾಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಎಂದರ್ಥ. ಅದು ಲಿಪಿಯುಳ್ಳ ಭಾಷೆಯಾದರೆ (3) ಅ ಭಾಷೆಯಲ್ಲಿನ ಬರವಣಿಗೆಯನ್ನು ಓದಿ ಅರ್ಥ ಮಾಡಿಕೊಳ್ಳುವ ಹಾಗೂ (4) ಆ ಭಾಷೆಯಲ್ಲಿ ಸ್ವತಂತ್ರವಾಗಿ ಬರೆಯಬಲ್ಲ ಸಾಮರ್ಥ್ಯಗಳನ್ನು ಪಡೆದುಕೊಳ್ಳುವುದೂ ಇದರಲ್ಲಿ ಸೇರುತ್ತದೆ. ನಮಗೆ ಇಂಗ್ಲಿಶ್ ಗ್ರಂಥಾಲಯದ ಭಾಷೆಯಾದಾಗ ಆ ಭಾಷೆಯಲ್ಲಿ 3 ಮತ್ತು 1ನೆಯ ಸಾಮರ್ಥ್ಯ ಬೆಳೆದಿದ್ದರೆ ಸಾಕು. 4 ಮತ್ತು 2 ಸಾಮರ್ಥ್ಯ ಬೆಳೆದಿರುವುದಿಲ್ಲ. ಅದೊಂದು ಕೊರತೆಯಾಗಿ ಕಾಣುವುದಿಲ್ಲ. ಹಾಗೆ ನೋಡಿದರೆ ಈಗ ಇಂಗ್ಲಿಶ್‌ನ್ನೂ 'ಇಂಗ್ಲಿಶಿನ ಮೂಲಕ'ವೇ ಕಲಿತ ಲಕ್ಷಾಂತರ ಮಂದಿ ಇಂಗ್ಲಿಶನ್ನು ಮಾತನಾಡಲು ಹಾಗೂ ಸ್ವತಂತ್ರವಾಗಿ ಆ ಭಾಷೆಯಲ್ಲಿ ಬರೆಯುವುದು ಅಪ್ಪರಲ್ಲೇ ಇದೆ.

ಒಂದು ಭಾಷೆಯನ್ನು ಔಪಚಾರಿಕವಾಗಿ ಕಲಿಯುವಾಗ ಕಲಿಯುವ ಮಾಧ್ಯಮವೂ ಅದೇ ಭಾಷೆಯಾಗಿರಬೇಕೆಂಬುದು ಒಂದು ವಾದ. ಉದಾಹರಣೆಗೆ ಅನ್ಯಭಾಷಿಕರು ಫ್ರೆಂಚ್ ಭಾಷೆಯನ್ನು ಫ್ರೆಂಚ್ ಮೂಲಕ ಜರ್ಮನ್ ಭಾಷೆಯನ್ನು ಜರ್ಮನ್ ಮೂಲಕ ಕಲಿಯುವುದು ಹಾಗೂ ಅವರಿಗೆ ಹಾಗೆ ಕಲಿಸುವುದು ವಾಡಿಕೆಯಲ್ಲಿದೆ. ಮೇಲೆ ಹೇಳಿದಂತೆ ಔಪಚಾರಿಕವಾಗಿ ಭಾಷೆಯನ್ನು ಕಲಿತಾಗ ಒದಗುವ ನಾಲ್ಕೂ ಸಾಮರ್ಥ್ಯಗಳು ಬೆಳೆಯಲು ಈ ವಿಧಾನ ಅನುಕೂಲಕರವೆಂಬ ತಿಳುವಳಿಕೆ ಇದೆ. ಆದರೆ ನಮ್ಮ ಮಕ್ಕಳು ಇಂಗ್ಲಿಶನ್ನು ಕಲಿಯುವುದು ಈ ನಾಲ್ಕೂ ಸಾಮರ್ಥ್ಯಗಳನ್ನು ಪಡೆದುಕೊಳ್ಳಲಿಕ್ಕಲ್ಲ ಎಂಬುದನ್ನು ನಾವು ಖಚಿತ ಪಡಿಸಿಕೊಂಡರೆ ಆಗ ಈ ವಿಧಾನವೇ ಅತ್ಯುತ್ತಮವಾದುದೆಂಬ ವಾದವನ್ನು ಒಪ್ಪಬೇಕಾಗಿಲ್ಲ.

ಭಾರತದಲ್ಲಿ ಇಂಗ್ಲಿಶ್‌ನ್ನು ಹೇಗೆ ಕಲಿಸಬೇಕೆಂಬ ಬಗೆಗೆ ಅಧ್ಯಯನ ನಡೆಸಲು ತರಬೇತು ನೀಡಲು ಹಲವಾರು ಸಂಸ್ಥೆಗಳನ್ನು ಬೆಳೆಸಲಾಗಿದೆ. ಈ ಸಂಸ್ಥೆಗಳಲ್ಲಿ ಇಂಗ್ಲಿಶ್ ಕಲಿಸುವ ಶಿಕ್ಷಕರಿಗೆ ವಿಶೇಷವಾದ ತರಬೇತನ್ನು ನೀಡಲಾಗುತ್ತದೆ. ಶಿಕ್ಷಣ ಕ್ರಮದಲ್ಲಿ ತೊಡಗಿರುವ ಸಾವಿರಾರು ಶಿಕ್ಷಕರಿಗೆ ಪುನರ್ಮನನ, ಪುನಶ್ಚೇತನ ಶಿಬಿರಗಳನ್ನು ನಡೆಸುವ ಮೂಲಕ ಉಪಯುಕ್ತವಲ್ಲದ ಕಲಿಸುವ ವಿಧಾನಗಳನ್ನು ಮತ್ತೆಮತ್ತೆ ಬೇರೂರಿಸಲು ಯತ್ನಿಸಲಾಗುತ್ತಿದೆ. ಈ ಎಲ್ಲ ಕಾರ್ಯಕ್ರಮಗಳಿಗಾಗಿ ಕೋಟ್ಯಂತರ ರೂಪಾಯಿಗಳು ವ್ಯಯವಾಗುತ್ತಿವೆ. ಆದರೆ ದೇಶೀಯ ಭಾಷೆಗಳ ಕಲಿಕೆಯ ಕ್ರಮಗಳ ಬಗೆಗೆ ಚಿಂತನೆ ನಡೆಸಲು ಯಾವ ವ್ಯವಸ್ಥಿತ ಪ್ರಯತ್ನಗಳೂ ನಡೆಯುತ್ತಿಲ್ಲ. ಇಂಗ್ಲಿಶ್ ಪಡೆದುಕೊಂಡಿರುವ ಈ ಮನ್ನಣೆಯ ಸ್ಥಾನಕ್ಕೆ ಯಾವ ತರ್ಕಬದ್ಧವಾದ ಕಾರಣವೂ ಇಲ್ಲ. ಒಂದು ವೇಳೆ ಇಂಗ್ಲಿಶನ್ನು ನಾವು ಗ್ರಂಥಾಲಯದ ಭಾಷೆ ಎಂದು ಒಪ್ಪಿಕೊಂಡರೆ ಆಗ ಇಂಗ್ಲಿಶನ್ನು ಕಲಿಸುವ ವಿಧಾನಗಳ ಬಗೆಗೆ ಈಗಿರುವ ವಿಶೇಷ ಅವಧಾರಣೆ ತಂತಾನೇ ಮಾಯವಾಗುತ್ತದೆ.

ಇಷ್ಟೆಲ್ಲ ಹೇಳಿದರೂ ಇಂಗ್ಲಿಶನ್ನು ಸಂಪೂರ್ಣವಾಗಿ ಕಲಿಯಬೇಕೆಂದು ಬಯಸುವವರನ್ನು ಅವಕಾಶವಂಚಿತರನ್ನಾಗಿ ಮಾಡಬೇಕಾಗಿಲ್ಲ. ಅವರಿಗಾಗಿ ನಮ್ಮ ಶಿಕ್ಷಣ ಕ್ರಮದಲ್ಲಿ ವಿಶೇಷ ಅವಕಾಶಗಳನ್ನು ಕಲ್ಪಿಸುವುದು ಸಾಧ್ಯ. ಗಣಿತದಲ್ಲಿ, ಚರಿತ್ರೆಯಲ್ಲಿ, ಖಗೋಳಶಾಸ್ತ್ರದಲ್ಲಿ ಅರ್ಥಶಾಸ್ತ್ರದಲ್ಲಿ ವಿಶೇಷ ತರಬೇತು ಬೇಕೆನ್ನುವವರಿಗೆ ಈಗ ಅವಕಾಶಗಳನ್ನು ಕಲ್ಪಿಸಲಾಗಿದೆಯಷ್ಟೆ. ಹಾಗೆಯೇ ಇಂಗ್ಲಿಶ್‌ನಲ್ಲಿ ಬರೆಯಲು ಹಾಗೂ ಮಾತನಾಡಲು ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕೆನ್ನುವವರಿಗೂ ಅವಕಾಶಗಳನ್ನು ಒದಗಿಸಬಹುದಾಗಿದೆ. ಹೀಗೆ ತರಬೇತು ಪಡೆದವರು ಇಂಗ್ಲಿಶನ್ನು ಕಲಿಸಬಲ್ಲವರೂ ಆಗಬಹುದು. ಅವಕಾಶಗಳು ಒದಗಿಬಂದು ವಿದೇಶಗಳಲ್ಲಿ ಉದ್ಯೋಗಗಳನ್ನು ಪಡೆಯಲೂಬಹುದು. ಆರ್ಥಿಕ ಉದಾರೀಕರಣದಿಂದಾಗಿ ಒದಗಿಬಂದಿರುವ ಹೊಸ ಸಾಧ್ಯತೆಗಳ ಬಾಗಿಲನ್ನು ನಾವು ಮುಚ್ಚಿಕೊಳ್ಳಬೇಕಾಗಿಲ್ಲ. ಆದರೆ ಈ ಕೆಲವರ ಅವಶ್ಯಕತೆಗಳನ್ನು ಪೂರೈಸಲು ಲಕ್ಷಾಂತರ ಮಕ್ಕಳನ್ನು ಕಲಿಕೆ ಎಂಬ ಹಿಂಸೆಗೆ ಒಳಪಡಿಸಬೇಕಾಗಿಲ್ಲವಷ್ಟೆ.

ಇನ್ನೂ ಒಂದು ಸಂಗತಿಯನ್ನು ನಾವಿಲ್ಲಿ ಗಮನಿಸಬೇಕು. ಕುಲಪತಿಯವರು ಇಂಗ್ಲಿಶನ್ನು ಕನ್ನಡದಲ್ಲಿ ಕಲಿಸಿ ಎಂದು ಶಿಕ್ಷಕರಿಗೆ ಸೂಚಿಸುವ ಮೂಲಕ ಈಗಾಗಲೇ ಅನೌಪಚಾರಿಕವಾಗಿ ಬಳಕೆಯಲ್ಲಿರುವ ಕಲಿಸುವ ವಿಧಾನವೊಂದನ್ನು ಮುಂದುವರಿಯಲು ಹಾಗೂ ಅಧಿಕೃತಗೊಳಿಸಲು ಕಿವಿಮಾತು ಹೇಳಿದ್ದಾರೆಂದು ತಿಳಿಯಬೇಕು. ಏಕೆಂದರೆ ನಮ್ಮ ಶಾಲೆಗಳಲ್ಲಿ ಶಿಕ್ಷಕರು ಇಂಗ್ಲಿಶ್ ಭಾಷಾ ತರಗತಿಗಳನ್ನು ಕನ್ನಡವನ್ನು ವಿವರಣೆಯ ಭಾಷೆಯನ್ನಾಗಿ ಬಳಸುತ್ತಲೇ ಇದ್ದಾರೆ. ಹಾಗೆ ಬಳಸುವ ಸೌಲಭ್ಯವನ್ನು ಅವರು ಕಳೆದುಕೊಳ್ಳಲು ಅವರು ಸಿದ್ಧರಿಲ್ಲ. ಆದರೆ ಹಾಗೆ ಬಳಸುತ್ತಿರುವುದಕ್ಕೆ ಒಂದು ಬಗೆಯ ಸಂಕೋಚ ಅವರಲ್ಲಿದೆ. ಏಕೆಂದರೆ ಹಾಗೆ ಒಂದು ಭಾಷೆಯನ್ನು ಕಲಿಸುವಾಗ ಅದರಲ್ಲೂ ಇಂಗ್ಲಿಶನ್ನು ಕಲಿಸುವಾಗ ಇನ್ನೊಂದು ಭಾಷೆಯನ್ನು ಬಳಸುವುದು ಸರಿಯಲ್ಲವೆಂದು ಅವರ ತರಬೇತಿನ ಸಿದ್ಧಾಂತಗಳು ಹೇಳುತ್ತವೆ. ಈ ಸಂಕೋಚಕ್ಕೆ ಕಾರಣಗಳಿಲ್ಲ. ಅವರು ಅನುಸರಿಸುತ್ತಿರುವ ವಿಧಾನವನ್ನೇ ಅಧಿಕೃತಗೊಳಿಸುವುದು ಈ ಸಂಕೋಚವನ್ನು ನಿವಾರಿಸಲು ಇರುವ ದಾರಿ. ಒಂದು ಭಾಷೆಯನ್ನು ಕಲಿಯಲು ಮಾಧ್ಯಮವನ್ನಾಗಿ ಇನ್ನೊಂದು ಭಾಷೆಯನ್ನು ಬಳಸುವುದು ಪಾರಂಪರಿಕವಾಗಿ ಈಗಾಗಲೇ ಬಳಕೆಯಲ್ಲಿರುವ ವಿಧಾನವೇ ಆಗಿದೆ. ಈಗಲೂ ಸಂಸ್ಕೃತವನ್ನು ಕಲಿಯುವ ಹಾಗೂ ಕಲಿಸುವ ವಿಧಾನವೇ ಇದು. ಹಿಂದಿ ಪ್ರಚಾರ ಸಭೆಯವರು ಹಿಂದಿಯನ್ನು ವ್ಯಾಪಕವಾಗಿ ಕಲಿಸಲು ನಡೆಸುವ ಚಳವಳಿಯಲ್ಲಿಯೂ ಇದೇ ಮಾದರಿಯನ್ನು ಅನುಸರಿಸಲಾಗುತ್ತಿದೆ. ಇದರಿಂದ ಆಕಾಶವೇನೂ ತಲೆಯ ಮೇಲೆ ಬಿದ್ದಿಲ್ಲವಲ್ಲ.

ಒಟ್ಟಾರೆ ಇಂಗ್ಲಿಶನ್ನೂ ಏಕೆ ಕಲಿಸಲಾಗುತ್ತಿದೆ ಮತ್ತು ಏಕೆ ಕಲಿಯಲಾಗುತ್ತಿದೆ ಎಂಬ ಬಗೆಗೆ ಇರುವ ಗೊಂದಲದಿಂದಾಗಿ ಆ ಭಾಷೆಯನ್ನು ಕಲಿಯುವ ಮತ್ತು ಕಲಿಸುವ ವಿಧಾನದಲ್ಲೂ ಗೊಂದಲಗಳು ಅಸ್ಪಷ್ಟತೆಗಳು ಉಂಟಾಗಿವೆ. ಕಲಿಯುವ ಮಕ್ಕಳ ಸಂಕಷ್ಟದ ಜೊತೆಗೆ ಕಲಿಸುವ ಶಿಕ್ಷಕರೂ ಗೊಂದಲದಲ್ಲಿ ಇದ್ದಾರೆ. ಕನ್ನಡದ ಮೂಲಕ ಇಂಗ್ಲಿಶ್‌ನ್ನು ಕಲಿಸುವ ಮೂಲಕ ಈ ಸಮಸ್ಯೆಗಳಿಗೊಂದು ತರ್ಕಬದ್ಧವಾದ ಕೊನೆಯನ್ನು ಕಾಣಿಸಬಹುದೆಂದು ತೋರುತ್ತದೆ. ಆಗ ಇಂಗ್ಲಿಶಿಗಿರುವ ಮೇಲರಿಮೆಯೂ ಹೋಗುತ್ತದೆ. ನಮ್ಮ ಮಕ್ಕಳು ಉನ್ನತ ಶಿಕ್ಷಣವನ್ನು ಪಡೆಯುವಾಗ ಮತ್ತು ಶಿಕ್ಷಣವನ್ನು ಪಡೆದ ಅನಂತರ ಇಂಗ್ಲಶ್‌ನ್ನು ಎಷ್ಟು ಬಳಸಬೇಕೋ ಅಷ್ಟು ಸಾಮರ್ಥ್ಯವನ್ನು ಪಡೆದುಕೊಂಡಿರುತ್ತಾರೆ. ಆಧುನಿಕ ಜೀವನದ ಅವಕಾಶಗಳಿಂದ ಅವರನ್ನು ವಂಚಿತರನ್ನಾಗಿ ಮಾಡಿದಂತಾಗುವುದಿಲ್ಲ.

ಇಂಗ್ಲಿಶ್ ರಹದಾರಿಯೋ ಅಥವಾ ಹೊರದಾರಿಯೋ?

ಈಗ ನಡೆಯುತ್ತಿರುವ ಹಲವು ವಾಗ್ವಾದಗಳಲ್ಲಿ ಶಾಲಾಶಿಕ್ಷಣದ ಯಾವ ಹಂತದಿಂದ ಇಂಗ್ಲಿಶನ್ನು ಕಲಿಸಲು ಮೊದಲು ಮಾಡಬೇಕು ಎಂಬ ಪ್ರಶ್ನೆಯೂ ಸೇರಿದೆ. ಸಾಮಾನ್ಯವಾಗಿ ಎಲ್ಲ ವಾಗ್ವಾದಗಳಲ್ಲಿ ಇರುವಂತೆ ಇಲ್ಲಿಯೂ ಸರಿತಪ್ಪುಗಳ ಎಣಿಕೆಯೇ ಮೇಲುಗೈ ಪಡೆದಿದೆ. ಒಂದನೆಯ ತರಗತಿಯಿಂದ ಇಂಗ್ಲಿಶನ್ನು ಕಲಿಸಬೇಕೆನ್ನುವವರು ಒಂದು ಪಕ್ಷದಲ್ಲಿದ್ದಾರೆ. ಹೀಗೆ ಇಂಗ್ಲಿಶಿಗೆ ಮೊದಲನೆಯ ತರಗತಿಯಿಂದ ಕಲಿಸುವ ಅವಕಾಶವನ್ನು ಕಲ್ಪಿಸಿದರೆ ಅದು ಕನ್ನಡಕ್ಕೆ ಕುತ್ತಾಗುತ್ತದೆ ಎಂಬುವವರು ಇನ್ನೊಂದು ಪಕ್ಷದಲ್ಲಿದ್ದಾರೆ. ಎರಡೂ ಪಕ್ಷಗಳೂ ಪರಿಣಾಮ ಮೀಮಾಂಸೆಯಲ್ಲಿ ಆಸಕ್ತರಾಗಿರುವಂತೆ ತೋರುತ್ತದೆ. ಎಂದರೆ ತಾವು ಮಂಡಿಸುತ್ತಿರುವ ವಾದವನ್ನು ಒಪ್ಪಿದರೆ ಅಥವಾ ಒಪ್ಪದಿದ್ದರೆ ಆಗುವ ಪರಿಣಾಮಗಳೇನು ಎಂದು ವಿವರಿಸುತ್ತಿದ್ದಾರೆ. ಇದು ವಾದದಲ್ಲಿ ಅನುಸರಿಸುವ ಒಂದು ಸಹಜ ವಿಧಾನ. ಆದರೆ ಇದೊಂದೇ ವಿಧಾನವಲ್ಲ. ಈ ವಾಗ್ವಾದದಲ್ಲಿ ಕಾರಣ ಮೀಮಾಂಸೆಯ ಮಾರ್ಗವನ್ನು ಅನುಸರಿಸುವುದು ಅಗತ್ಯವೆಂದು ತೋರುತ್ತದೆ. ಏಕೆ ಈ ವಾದ ಉಂಟಾಗಿದೆ? ಅದಕ್ಕಿರುವ ಚಾರಿತ್ರಿಕ, ಸಾಂಸ್ಕೃತಿಕ ಕಾರಣಗಳೇನು? ಈ ಸಮಸ್ಯೆಗೆ ಕನ್ನಡವನ್ನೂ ಒಳಗೊಂಡಂತೆ ರಾಷ್ಟ್ರವ್ಯಾಪಿಯಾದ ಮತ್ತು ಜಾಗತಿಕವಾದ ಹೊರಚಾಚುಗಳಿವೆಯೇ? ಇವೆಲ್ಲದರ ಒಂದು ಸಮಸ್ಯಾ ಸಂಕೀರ್ಣವನ್ನು ನಾವು ಎದುರಿಸುತ್ತಿದ್ದೇವೆಯೇ ಎಂಬ ಪ್ರಶ್ನೆಯನ್ನು ನಾವು ಮುಂದಿರಿಸಿಕೊಳ್ಳಬೇಕಾಗಿದೆ.

ಇಂಗ್ಲಿಶ್ ಭಾಷೆಯನ್ನು ಶಾಲಾಶಿಕ್ಷಣದ ಮೊದಲ ಹಂತದಿಂದ ಕಲಿಸಬೇಕೆಂದು ಒತ್ತಾಯ ಮಾಡುವವರಲ್ಲಿ ದಲಿತರು ಮತ್ತು ಹಿಂದುಳಿದ ವರ್ಗದವರು ಪ್ರಾತಿನಿಧಿಕವಾಗಿ ಮುಂದಿದ್ದಾರೆ. ಇದು ಕೇವಲ ಊಹೆಯ ಮಾತಲ್ಲ. ಈ ಬಗ್ಗೆ ವ್ಯಾಪಕ ಚಳವಳಿಯ ಮಾತನ್ನಾಡುತ್ತಿರುವವರು ಈ ಸಾಮಾಜಿಕ ವಲಯದ ಮುಖ್ಯಸ್ಥರೇ ಆಗಿದ್ದಾರೆ. ಈ ವಾದವನ್ನು ಕನ್ನಡದ ಪರವಾಗಿ ಇರುವವರು ವಿರೋಧಿಸುತ್ತಿದ್ದಾರೆ. ಹೀಗೆ ವಿರೋಧಿಸುತ್ತಿರುವ ಗುಂಪಿಗೆ ಸಾಮಾಜಿಕ ಚಹರೆಗಳು ಅಸ್ಪಷ್ಟವಾಗಿವೆ. ಇಲ್ಲಿ ದಲಿತರಾದಿಯಾಗಿ ಸಮಾಜದ ಎಲ್ಲ ಸ್ತರಗಳ ಜನರೂ ಇರುವಂತೆ ತೋರುತ್ತದೆ. ಈಗ ನಮ್ಮ ಪ್ರಶ್ನೆ: ಭಾಷೆಯ ಕಲಿಕೆಯ ಸಮಸ್ಯೆಯೊಂದು ಶೈಕ್ಷಣಿಕ ನೆಲೆಯಿಂದ ಸಾಮಾಜಿಕ ನೆಲೆಗೆ ದಾಟಿದ್ದು ಹೇಗೆ? ಮತ್ತು ಏಕೆ?

ಕನ್ನಡ ಮತ್ತು ಇಂಗ್ಲಿಶ್ ಭಾಷೆಗಳು ನಮ್ಮೊಡನೆ ಹೊಂದಿರುವ ಸಂಬಂಧದ ವಿವರಣೆಗೆ ಬಸವಣ್ಣನವರ ವಚನದ ರೂಪಕವೊಂದು ನೆರವಿಗೆ ಬರುತ್ತದೆ. ನೀರಿನಲ್ಲಿರುವ

ವ್ಯಕ್ತಿಗೆ ಕಟ್ಟಿದ ಗುಂಡು, ಬೆಂಡುಗಳೆರಡು ಆ ವ್ಯಕ್ತಿಯನ್ನು ತೇಲಲೂ ಬಿಡದೆ ಮುಳುಗಲೂ ಬಿಡದೆ ಅತಂತ್ರ ಸ್ಥಿತಿಯಲ್ಲಿ ಇರಿಸುವುದನ್ನು ಆ ರೂಪಕ ವಿವರಿಸುತ್ತದೆ. ಕನ್ನಡ ಮತ್ತು ಇಂಗ್ಲಿಶ್‌ಗಳು ಹೀಗೆ ಗುಂಡು ಮತ್ತು ಬೆಂಡಿನಂತೆ ನಮ್ಮೊಂದಿಗಿವೆ. ಆದರೆ ಯಾರಿಗೆ ಯಾವುದು ಗುಂಡು, ಯಾವುದು ಬೆಂಡು ಎಂಬಲ್ಲಿ ಮಾತ್ರ ಸಮಾನ ನೆಲೆಯ ಒಪ್ಪಿಗೆ ಇಲ್ಲ. ಕೆಲವರಿಗೆ ಕನ್ನಡ ಬೆಂಡಿನಂತೆ ಮತ್ತು ಇಂಗ್ಲಿಶ್ ಗುಂಡಿನಂತೆ ಕಂಡರೆ ಮತ್ತೆ ಕೆಲವರಿಗೆ ಕನ್ನಡವೇ ಗುಂಡಾಗಿ ಇಂಗ್ಲಿಶ್ ಬೆಂಡಾಗಿ ತೋರುತ್ತಿದೆ. ಇದು ಸಮಕಾಲೀನ ಆಯ್ಕೆಯಲ್ಲಿ ಇರುವ ವಿಪರ್ಯಾಸವಾಗಿರುವಂತೆ ಚಾರಿತ್ರಿಕ ಬೆಳವಣಿಗೆಯೂ ಇದ್ದೀತು. ಏಕೆಂದರೆ ಒಂದು ಹಂತದಲ್ಲಿ ಇಂಗ್ಲಿಶ್ ಗುಂಡಿನಂತೆ ಕಂಡಿದ್ದು, ಆಗ 'ಪಾರುಮಾಡುವ' ಭಾಷೆಯಾಗಿ ಕನ್ನಡ ತೋರಿದ್ದೀತು. ಈಗ ಬದಲಾದ ಸನ್ನಿವೇಶದಲ್ಲಿ ಇಂಗ್ಲಿಶಿಗೆ ಹೀಗೆ 'ಪಾರುಮಾಡುವ' ಸಾಮರ್ಥ್ಯಗಳಿವೆ ಎಂದು ತಿಳಿಯುವ ಸಂದರ್ಭ ರೂಪುಗೊಂಡಿರುವುದೂ ಸಾಧ್ಯ. ಇದು ಕೇವಲ ಅನಿಸಿಕೆಯ, ಊಹೆಯ, ಅಪೇಕ್ಷೆಯ ನೆಲೆಯ ತಿಳುವಳಿಕೆಯಾಗಿಲ್ಲ. ಸಾಮಾಜಿಕ ವಾಸ್ತವದ ಪರಿಣಾಮವಾಗಿ ಭಾಷೆಗಳು ಹೀಗೆ ಪಾತ್ರ ವ್ಯತ್ಯಯ ಮಾಡಿಕೊಂಡಿವೆ ಅಥವಾ ಪಾತ್ರ ವ್ಯತ್ಯಯ ಉಂಟಾಗಿದೆ. ನೀರಲ್ಲಿ ಇರುವ ವ್ಯಕ್ತಿಗೆ ಮುಳುಗುವ ಭಯವಿರುತ್ತದೆ; ತೇಲುವ ಬಯಕೆ ಇರುತ್ತದೆ. ಹಾಗಾಗಿ ತೇಲಿಸುವ ಬೆಂಡು ಇಂಗ್ಲಿಶೋ ಅಥವಾ ಕನ್ನಡವೋ ಎಂಬುದೂ ಅಷ್ಟೇ ಮಹತ್ವದ ವಿಷಯವಾಗಿದೆ.

ಭಾಷೆಗಳಿಗೆ ಹೀಗೆ ತೇಲಿಸುವ ಅಥವಾ ಮುಳುಗಿಸುವ ಗುಣಗಳಾಗಲೀ ಸಾಮರ್ಥ್ಯಗಳಾಗಲೀ ಇರುವುದಿಲ್ಲ. ನಿರ್ದಿಷ್ಟ ಚಾರಿತ್ರಿಕ ಸನ್ನಿವೇಶದಲ್ಲಿ ಅವುಗಳಿಗೆ ಹೀಗೆ ಮಹತ್ವ ಪ್ರದಾನವಾಗುತ್ತದೆ. ಈ ಚಾರಿತ್ರಿಕ ಸನ್ನಿವೇಶ ನಮ್ಮ ಪರಿಸರದ ಸೃಷ್ಟಿಯಾಗಿರುವಂತೆ ಹೊರಗಿನ ಒತ್ತಡಗಳ ಮೂಲಕವೂ ರೂಪುಗೊಂಡಿರುತ್ತದೆ. ಜಾಗತಿಕವಾಗಿ ನಡೆಯುತ್ತಿರುವ ವಿದ್ಯಮಾನಗಳ ಹಿನ್ನೆಲೆಯಲ್ಲಿ ಭಾಷೆಗಳ ನಡುವಣ ಸಂಬಂಧದ ಸ್ವರೂಪವನ್ನು ಅರಿಯುವ ಯತ್ನ ಮಾಡಬೇಕಾಗುತ್ತದೆ.

ಕಳೆದ ಒಂದೆರಡು ದಶಕಗಳಲ್ಲಿ ಕನ್ನಡದ ಸ್ಥಿತಿಗತಿ, ಸ್ಥಾನಮಾನಗಳ ಬಗ್ಗೆ ನಡೆದಿರುವ ಚರ್ಚೆಗಳಲ್ಲಿ, ಮಂಡನೆಯಾಗಿರುವ ವಿಚಾರಗಳಲ್ಲಿ ಎರಡು ಮಾದರಿಗಳಿವೆ. 1.ಕನ್ನಡದ ಬಳಕೆಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿರುವುದ ಬಗೆಗೆ ಆತಂಕ 2. ಕನ್ನಡದ ಸ್ವರೂಪ ಸಂಕರಗೊಳ್ಳುತ್ತಿರುವ ಬಗೆಗೆ ಆತಂಕ. ಹಲವು ದಶಕಗಳಿಂದಲೂ ಈ ಬಗೆಯ ಆತಂಕಗಳು ಇದ್ದುದು ನಿಜ. ಆದರೆ ಹೊಸ ಆಯಾಮಗಳೊಂದಿಗೆ ಅವು ಕನ್ನಡವನ್ನು ಕಾಡಿಸುತ್ತವೆ ಎಂಬ ಒತ್ತಡ ಈಚಿನ ದಿನಗಳಲ್ಲಿ ಕೇಳಿಬಂದ ಆತಂಕಗಳ ಹಿಂದೆ ಇದೆ. ಕನ್ನಡದ ಸ್ವರೂಪವನ್ನು ಕುರಿತ ಆತಂಕದ ನೆಲೆಗಳು ಈಗ ಶೈಕ್ಷಣಿಕ ನೆಲೆಗೆ ಮಾತ್ರ ಸೀಮಿತಗೊಂಡಿವೆ. ಉಳಿದ ಎರಡು ಪ್ರಮುಖ ಔಪಚಾರಿಕ ವಲಯಗಳಾದ ಆಡಳಿತ ಮತ್ತು ಮಾಧ್ಯಮಗಳಲ್ಲಿ ಈಗ ಸ್ವರೂಪನಿಷ್ಠೆ ಅಷ್ಟೊಂದು ಗಾಢವಾಗಿ ಒತ್ತಾಯಗಳನ್ನು ಹೇರುತ್ತಿಲ್ಲ. ಈ ಬಗ್ಗೆ ಬೇರೆ ಚರ್ಚೆಯೊಂದು ಅಗತ್ಯ. ಸದ್ಯ ಅದನ್ನಿಲ್ಲಿ ನಾವು ಬೆಳೆಸುವುದು ಬೇಡ. ಕನ್ನಡದ ಬಳಕೆಯ ಪ್ರಮಾಣ ಕುಗ್ಗುತ್ತಿರುವ ಬಗ್ಗೆ ಇರುವ

ಆತಂಕಗಳು ಬಲವಾಗಿವೆ. ಕನ್ನಡ ಔಪಚಾರಿಕ ವಲಯದಲ್ಲಿ ಮಹತ್ವವನ್ನು ಕಳೆದುಕೊಂಡು, ಅನೌಪಚಾರಿಕ ವಲಯಕ್ಕೆ ತನ್ನ ಪಾತ್ರವನ್ನು ಸೀಮಿತಗೊಳಿಸಿಕೊಳ್ಳುತ್ತಿದೆ. ಅಥವಾ ಪರಿಸ್ಥಿತಿಯ ಬೆಳವಣಿಗೆ ಆ ನಿಟ್ಟಿನಲ್ಲಿ ಕನ್ನಡದ ಮೇಲೆ ಒತ್ತಾಯವನ್ನು ಹೇರುತ್ತಿದೆ. ಅಲ್ಲದೆ ಕನ್ನಡವೀಗ ತನ್ನ ಮಾತು ಮತ್ತು ಬರೆಹಗಳ ವಲಯವನ್ನೀಗ ನಿಧಾನವಾಗಿ ಕಳೆದುಕೊಳ್ಳುತ್ತಿದೆ. ಕೇಳುವ ಮತ್ತು ಓದುವ ನೆಲೆಗಳಿಗೆ ಅದರ ಪಾತ್ರ ಸೀಮಿತವಾಗುವಂತಿದೆ. ಇವೆಲ್ಲವೂ ಆತಂಕಕ್ಕೆ ಕಾರಣವಾಗುವ ಸಂಗತಿಗಳೇ ಸರಿ. ಹೀಗೆ ಕನ್ನಡದ ಜಾಗವನ್ನು ಒತ್ತುವರಿ ಮಾಡಿಕೊಳ್ಳುವ ಭಾಷೆ ಇಂಗ್ಲಿಶ್ ಎಂಬುದು ಯಾರಿಗಾದರೂ ಎದ್ದು ಕಾಣುವ ಸಂಗತಿಯೇ ಸರಿ. ಆದರೆ ಈ ಸಂದರ್ಭವನ್ನು ಎರಡೂ ಭಾಷೆಗಳ ನಡುವೆ ಇರುವ ಸಂಬಂಧದ ನೆಲೆಯಲ್ಲಿ ಮಾತ್ರ ನೋಡುವುದು ಸಾಧ್ಯವಾಗಿಲ್ಲ. ಕನ್ನಡ ಮತ್ತು ಇಂಗ್ಲಿಶ್ ಭಾಷೆಗಳ ನಡುವೆ ಎರಡು ಭಾಷಾ ಸಮುದಾಯಗಳ ನಡುವೆ ಇರುವ ಸಂಬಂಧದ ಸ್ವರೂಪ ಇಲ್ಲ. ಕನ್ನಡ ಮತ್ತು ತೆಲುಗು, ಕನ್ನಡ ಮತ್ತು ತಮಿಳು ಭಾಷೆಗಳ ನಡುವೆ ಹೀಗೆ ಭಾಷಾ ಸಮುದಾಯಗಳ ಸಹಬಾಳ್ವೆಯ ಸಂಬಂಧವಿದೆ. ಕನ್ನಡ ಮತ್ತು ಇಂಗ್ಲಿಶ್ ದ್ವಿಭಾಷಾ ಸನ್ನಿವೇಶದಲ್ಲಿ ಕನ್ನಡವನ್ನು ಮೊದಲ ಭಾಷೆಯನ್ನಾಗಿ ಹೊಂದಿರುವವರೇ ಇಂಗ್ಲಿಶನ್ನು ಎರಡನೆಯ ಭಾಷೆಯನ್ನಾಗಿ ಕಲಿತು ಬಳಸುತ್ತಿದ್ದಾರೆ. ಹೀಗಾಗಿ ಕನ್ನಡ ಮತ್ತು ತೆಲುಗು ಭಾಷಿಕರಲ್ಲಿ 'ಕನ್ನಡದೊಡನೆ ತೆಲುಗು' ಎಂಬ ಸಂಬಂಧವಿದ್ದರೆ ಕನ್ನಡ ಇಂಗ್ಲಿಶ್‌ಗಳ ನಡುವೆ 'ಕನ್ನಡ ಅಥವಾ/ಇಲ್ಲವೇ ಇಂಗ್ಲಿಶ್ ' ಎಂಬ ಮಾದರಿ ಆಕಾರ ಪಡೆಯುತ್ತದೆ. ಆದ್ದರಿಂದ ಇದು ಒಂದೇ ಭಾಷಾ ಸಮುದಾಯದಲ್ಲಿ ಮೈತಳೆಯುವ ಆಯ್ಕೆಯಾಗಿದೆ. ಇದರ ಪರಿಣಾಮವೇನು ಎಂಬುದನ್ನು ನಾವು ಪರಿಶೀಲಿಸುವುದು ಅಗತ್ಯ.

ಕನ್ನಡದ ಬಳಕೆಯ ವಲಯ ಕುಗ್ಗುತ್ತಿರುವ ಬಗ್ಗೆ ಆತಂಕ ಹೊಂದಿರುವವರಲ್ಲಿ ಕೆಲವರು ಸಾಮಾನ್ಯವಾಗಿ ಮಂಡಿಸುವ ತರ್ಕ ಹೀಗಿರುತ್ತದೆ. ನಗರ ಪ್ರದೇಶಗಳಲ್ಲಿ ಕನ್ನಡ ತಲೆ ಎತ್ತದಂತಾಗಿದೆ. ಅದು ಉಳಿದಿದ್ದರೆ, ಮುಂದೆ ಉಳಿಯುವುದಾದರೆ ಹಳ್ಳಿಗರಲ್ಲಿ ಮತ್ತು ಕೆಳಜಾತಿಯವರಲ್ಲಿ ಮಾತ್ರ. ಅವರೇ ನಿಜವಾಗಿ ಕನ್ನಡದ ಸಂರಕ್ಷಕರು. ಈ ವಾದವನ್ನು ಹೂಡುವಾಗ ಕನ್ನಡವನ್ನು ಕಾಯ್ದುಕೊಳ್ಳುವ ಜವಾಬ್ದಾರಿಯನ್ನು ಹೊತ್ತಿರುವ ಜನವರ್ಗದ ಬಗ್ಗೆ ಅಪಾರವಾದ ಮೆಚ್ಚುಗೆಯೇ ಇರುತ್ತದೆ. ಆದರೆ ಇದರಲ್ಲಿ ಇರುವ ಚಾರಿತ್ರಿಕ ವ್ಯಂಗ್ಯ ಮಾತ್ರ ರಾಚುವಂತಿದೆ. ಕನ್ನಡ ಇಲ್ಲವೇ ಇಂಗ್ಲಿಶ್ ಎಂಬ ಆಯ್ಕೆಯಲ್ಲಿ ಕನ್ನಡವನ್ನು ಆಯ್ದುಕೊಂಡವರು(ಅಥವಾ ಅವರ ಆಯ್ಕೆಗೆ ಕನ್ನಡ ಮಾತ್ರ ಲಭಿಸುವಂತಹ ಪರಿಸ್ಥಿತಿಗೆ ಸಿಲುಕಿರುವವರು) ಕೆಳಜಾತಿಯವರು. ಚಾರಿತ್ರಿಕವಾಗಿ ಹೀಗೆ ಕಾಯ್ದುಕೊಳ್ಳುವ ಹೊಣೆಯನ್ನು ಹೊತ್ತಿರುವವರು ಸಮಾಜದ ಹಿಂದುಳಿದವರು ಮತ್ತು ದಲಿತರು ಎಂದು ಹೇಳುತ್ತಲೇ ಅವರ ಆಯ್ಕೆಗಳಿಗೆ, ಅವಕಾಶಗಳಿಗೆ ಕಟ್ಟುಗಳನ್ನು ವಿಧಿಸಲಾಗುತ್ತಿದೆಯೇ?

ಹೀಗೆ 'ತಮ್ಮ ಭಾಷೆ'ಯನ್ನು ತಲೆಮಾರುಗಳಿಗೆ ದಾಟಿಸಿ ಆಸ್ತಿಯಂತೆ ಕಾಯ್ದುಕೊಳ್ಳುವ ಹೊಣೆಯನ್ನು ಹೊತ್ತ ಜನವರ್ಗ ತಮಗೆ ದೊರೆತ ಈ

ಜವಾಬ್ದಾರಿಯನ್ನು ನಿರ್ವಹಿಸಬೇಕೇ ಅಥವಾ ಅದು ತಮ್ಮ ಮೇಲೆ ಹೇರಿದ ಬಂಧನವೆಂದು ತಿಳಿಯಬೇಕೇ ಎಂಬುದು ಮುಖ್ಯ ಪ್ರಶ್ನೆಯಾಗಿದೆ. ಈಗ ಕನ್ನಡವನ್ನು ಕಾಯ್ದುಕೊಳ್ಳುವ 'ಚಾರಿತ್ರಿಕ' ಮತ್ತು 'ಸಾಂಸ್ಕೃತಿಕ' ಜವಾಬ್ದಾರಿ ಹೊರಬೇಕಾಗಿರುವ ಜನ ಸಮುದಾಯದ ಬಹುಭಾಗಕ್ಕೆ ಇದು ತಮಗೆ ನೀಡಿದ ಅನಗತ್ಯ ಹೊಣೆ ಎನ್ನಿಸಿದ್ದರೆ ಅದಕ್ಕೆ ಕಾರಣಗಳಿವೆ.

ಕನ್ನಡವನ್ನು ಉಳಿಸಿಕೊಳ್ಳುವ ಹೊಣೆ ಹೊರಬೇಕಾಗಿರುವ ಸಮುದಾಯಗಳು ಕಳೆದ ಐದಾರು ದಶಕಗಳಿಂದ ಎದುರಿಸುತ್ತಿರುವ ಸಮಸ್ಯೆಯೊಂದಿದೆ. ಅದೆಂದರೆ ತಮ್ಮ ಉಪಭಾಷಿಕ ಲಕ್ಷಣಗಳನ್ನು ಪ್ರಮಾಣ ಕನ್ನಡಕ್ಕಾಗಿ ಕಳೆದುಕೊಳ್ಳಬೇಕಾಗಿರುವುದು. ಶೈಕ್ಷಣಿಕ ವಲಯದಲ್ಲಿ ಕನ್ನಡ ಭಾಷಾ ಕಲಿಕೆ ಎಂದರೆ ಪ್ರಮಾಣ ಕನ್ನಡದಲ್ಲಿ ವ್ಯವಹರಿಸಲು ಸಿದ್ಧವಾಗುವುದು ಎಂದೇ ಅರ್ಥ. ಈ ಪ್ರಕ್ರಿಯೆಯಲ್ಲಿ ಕನ್ನಡದ ಹಲವಾರು ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆಗಳು ತಮ್ಮ ಚಹರೆಯನ್ನು ಕಳೆದುಕೊಳ್ಳುವುದು ಸಹಜವೆಂದೇ ತಿಳಿಯಲಾಗಿದೆ. ಪ್ರಮಾಣ ಕನ್ನಡವೆಂಬುದು ಚಾರಿತ್ರಿಕ ಕಾರಣಗಳಿಂದಾಗಿ ನಿರ್ಮಾಣಗೊಂಡಿರುವುದಾದ್ದರಿಂದ ಅದಕ್ಕೆ ಉಳಿದೆಲ್ಲ ಉಪಭಾಷೆಗಳನ್ನು, ಪ್ರಭೇದಗಳನ್ನು ಹತ್ತಿಕ್ಕಲು ಯಾವುದೇ ನೈತಿಕ ಇಲ್ಲವೇ ತಾರ್ಕಿಕ ಕಾರಣಗಳಿಲ್ಲ. ಏಕೀಕರಣದ ಮೊದಲ ದಶಕಗಳಲ್ಲಿ ಕನ್ನಡದ ಎಲ್ಲ ಪ್ರಭೇದಗಳನ್ನಾಡುವ ಜನ ಸಮುದಾಯ ತಮ್ಮ ಚಹರೆಗಳನ್ನು ಕಳೆದುಕೊಂಡು ಮುಖ್ಯಧಾರೆಗೆ ಸೇರುವ ಪ್ರಕ್ರಿಯೆಗೆ ಸಮ್ಮತಿಯನ್ನು ಸೂಚಿಸಿದ್ದುಂಟು. ಇದು ಎಲ್ಲ ವಲಯಗಳಲ್ಲೂ ಕಾಣುವ ಸಂಗತಿಯಾಗಿದೆ. ಹಾಗೆ ನೋಡಿದರೆ ಆಗ ಚಹರೆಯು ಲಜ್ಜೆಗೆ ಕಾರಣವಾಗುವ ಸಂಗತಿಯಾಗಿತ್ತು. ಅದನ್ನು ಮುಚ್ಚಿಟ್ಟು ಸ್ವೀಕೃತ ಪ್ರಮಾಣಕ್ಕೆ ಒಪ್ಪಿಸಿಕೊಳ್ಳುವುದು ಎಲ್ಲ ಕಡೆಯೂ ಸಮ್ಮತಿಯನ್ನು ಪಡೆದ ವಿಧಾನವಾಗಿತ್ತು. ಆದರೆ ಇಪ್ಪತ್ತನೆಯ ಶತಮಾನದ ಎಂಟನೆಯ ದಶಕದಿಂದ ಮೊದಲಾದ ಸ್ವಂತಿಕೆಯನ್ನು ಉಳಿಸಿಕೊಳ್ಳುವ ರಾಜಕಾರಣದ ಹಿನ್ನೆಲೆಯಲ್ಲಿ ಚಹರೆಯನ್ನು ಕಾಯ್ದುಕೊಳ್ಳುವ ಮಾದರಿ ಮೇಲುಗೈ ಪಡೆದಿದೆ. ಹಾಗಾಗಿ ಜನ ಸಮುದಾಯದ ವಿವಿಧ ವಲಯಗಳು ತಂತಮ್ಮ ಉಪಭಾಷೆಗೂ ಪ್ರಮಾಣ ಭಾಷೆಗೂ ಇರುವ ವ್ಯತ್ಯಾಸವನ್ನು ಭಿನ್ನತೆ ಎಂದು ತಿಳಿಯುವುದಕ್ಕಿಂತ ಅದನ್ನು ಒಂದು ವೈರುದ್ಧ್ಯವೆಂದು ತಿಳಿಯುವುದು ಎದ್ದು ಕಾಣುತ್ತಿದೆ. ಹಾಗೆ ನೋಡಿದರೆ ಈ ಎಚ್ಚರ ಉಂಟಾಗಲು ಶೈಕ್ಷಣಿಕ ವಲಯದಲ್ಲಿ ಪ್ರಮಾಣ ಭಾಷೆಯ ವ್ಯಾಪಕ ಬೆಳವಣಿಗೆಗೆ ಸೊಂಟಕಟ್ಟಿ ನಿಂತವರೂ ಕಾರಣರಾಗಿದ್ದಾರೆ. ಅವರು ತಮ್ಮ ಕಲ್ಪನೆಯ ಪ್ರಮಾಣ ಭಾಷೆಯನ್ನು ರೂಪಿಸುವಾಗ 'ಕನ್ನಡಗಳನ್ನು' ಒಳಗೊಳ್ಳುವ ಮಾದರಿಗಿಂತ, ಪ್ರಮಾಣ ಕನ್ನಡದ ವ್ಯಾಪ್ತಿಯಿಂದ ಉಳಿದವನ್ನು 'ಹೊರಗಿಡುವ' ಮಾದರಿಗೆ ಜೋತುಬಿದ್ದರು. ಈ ಎಲ್ಲ ಬೆಳವಣಿಗೆಗಳ ಪರಿಣಾಮವೆಂದರೆ ಯಾರು ಈಗ ಚಾರಿತ್ರಿಕ ಕಾರಣಗಳಿಂದ ಕನ್ನಡವನ್ನು ಉಳಿಸಿ ಬೆಳಸುವ ಹೊಣೆ ಹೊರಬೇಕೆಂದು ಬಯಸುತ್ತೇವೆಯೋ ಅವರು ತಮ್ಮ ಕನ್ನಡವನ್ನು ಕಳೆದುಕೊಂಡು ತಮ್ಮದಲ್ಲದ ಕನ್ನಡವನ್ನು ಕಾಯ್ದುಕೊಳ್ಳಬೇಕಾಗಿದೆ. ಸಹಜವಾಗಿಯೇ ಇಂದಿನ ದಿನಮಾನದ ಚಿಂತನಗಳ ನೆರಳಿನಲ್ಲಿ

ಇದು ಸಮ್ಮತಿಯನ್ನು ಪಡೆಯುವ ಪ್ರಕ್ರಿಯೆಯಾಗಿಲ್ಲ. ಆದ್ದರಿಂದಲೇ ಕನ್ನಡದ ಅಭಿಮಾನವೆಂಬುದು ಸಾಮಾನ್ಯ ಜನರಿಗೆ ಮುಳುಗಿಸುವ ಗುಂಡಾಗಿ ತೋರುತ್ತಿದೆ.

ಈ ಹಂತದಲ್ಲಿ ಮಾತೃಭಾಷೆಯ ಪರವಾಗಿ ವಾದ ಹೂಡುವವರ ತರ್ಕವೊಂದನ್ನು ಮರುಪರಿಶೀಲನೆಗೆ ತೆಗೆದುಕೊಳ್ಳುವುದು ಅಗತ್ಯವಾಗಿದೆ. ಇಪ್ಪತ್ತನೆಯ ಶತಮಾನದ ನಡುಭಾಗದಲ್ಲಿ ಜನಪ್ರಿಯವಾಗಿದ್ದ ಸಫೀರ್-ವೂರ್ಫ್ ಪ್ರಮೇಯದ ಅನ್ವಯ ಆಯಾ ಸಮುದಾಯದ ಭಾಷೆ ಮತ್ತು ಸಂಸ್ಕೃತಿಗಳು ಬಿಡಿಸಲಾರದ ಜೈವಿಕ ನಂಟನ್ನು ಹೊಂದಿರುತ್ತವೆ. ಭಾಷೆ ನಾವು ಅಂದರೆ ಸಮುದಾಯದ ಜನರು ಯೋಚಿಸುವ ಕ್ರಮವನ್ನು ನಿರ್ದೇಶಿಸಲು ಶಕ್ತವಾಗಿರುತ್ತದೆ. ಹಾಗಾಗಿ ಸಮುದಾಯವೊಂದು ತನ್ನ ಭಾಷೆಯನ್ನು ಕಳೆದುಕೊಳ್ಳುವುದು ಎಂದರೆ ಅಥವಾ ಇನ್ನೊಂದು ಭಾಷೆಗೆ ಮೊರೆಹೋಗುವುದೆಂದರೆ ವಾಸ್ತವವಾಗಿ ತನ್ನ ಸಂಸ್ಕೃತಿಯ ಬೇರುಗಳನ್ನು ಸಾಯಬಿಟ್ಟಂತೆಯೇ ಸರಿ. ಈ ಪ್ರಮೇಯ ಆಕರ್ಷಕವಾಗಿದೆ. ಅನಂತರದ ದಶಕಗಳಲ್ಲಿ ಈ ಕುರಿತು ಅಗಾಧ ಪ್ರಮಾಣದ ವಾಗ್ವಾದಗಳು ನಡೆದಿವೆ. ಸಮುದಾಯಗಳು ಯಾವ ಬಗೆಯ ಆರ್ಥಿಕ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ ಮತ್ತು ಸಾಂಸ್ಕೃತಿಕವಾಗಿ ಯಾವ ಹಂತದಲ್ಲಿ ಇವೆ ಎನ್ನುವುದನ್ನು ಅವಲಂಬಿಸಿ ಈ ಸಫೀರ್-ವೂರ್ಫ್ ಪ್ರಮೇಯ ಯುಕ್ತವೋ ಅಲ್ಲವೋ ಎಂಬುದು ನಿರ್ಧಾರವಾಗುತ್ತದೆ. ಭಾಷಾ ಸಂಪರ್ಕ ಅಗಾಧ ಪ್ರಮಾಣದಲ್ಲಿ ಬೆಳೆದಿರುವ ಈ ಕಾಲದಲ್ಲಿ ಮತ್ತು ಭಾಷಿಕರು ಅನ್ಯ ಭಾಷಾ ಸಮುದಾಯಗಳೊಡನೆ ದೀರ್ಘಕಾಲ ಜೀವಿಸಬೇಕಾಗಿ ಬಂದಿರುವ ಕಾಲದಲ್ಲಿ ಈ ಪ್ರಮೇಯವನ್ನು ಮತ್ತೊಮ್ಮೆ ಪರಿಶೀಲನೆಗೆ ಗುರಿಪಡಿಸುವ ಅಗತ್ಯವಿದೆಯೆಂದು ವಾದಿಸಲಾಗುತ್ತಿದೆ. ಅದರಲ್ಲೂ ಹತ್ತಾರು ರಾಜಕೀಯ ಕಾರಣಗಳಿಂದ ಜಗತ್ತಿನ ನೂರಾರು ದೇಶಗಳ ಕೋಟ್ಯಂತರ ಜನರು ನೆಲೆಕಳೆದುಕೊಂಡು ನಿರ್ಗತಿಕರಾಗಿ ದೇಶಭ್ರಷ್ಟರಾಗುತ್ತಿರುವ ಸನ್ನಿವೇಶ ನಮ್ಮ ಎದುರಿಗಿದೆ. ಪರಿಸ್ಥಿತಿ ಹೀಗಿರುವಾಗ ಭಾಷೆಯು ಅದನ್ನಾಡುವ ಜನರ ಸಂಸ್ಕೃತಿಯ ಚಿಂತನೆಯ ಮಾದರಿಗಳನ್ನು ನಿರ್ದೇಶಿಸುತ್ತದೆ ಎನ್ನುವುದು ಅಚಲ ಸತ್ಯ ಎಂದು ಪರಿಗಣಿಸುವುದು ಸಾಧ್ಯವಾಗಲಾರದು.

ಈ ಅಂಶವನ್ನು ಗಮನಿಸಿದಾಗ ದಲಿತರು ಮತ್ತು ಹಿಂದುಳಿದವರು ತಮ್ಮ ಸಂಸ್ಕೃತಿಯ ಉಳಿವಿಗಾಗಿ ಕನ್ನಡವನ್ನು ಕಾಯ್ದಿರಿಸಿಕೊಳ್ಳಬೇಕು ಎಂದು ವಾದಿಸುವುದು ಸರಿಯಾಗಲಾರದು. ಅಲ್ಲದೆ ಈಗಾಗಲೇ ಹೇಳಿದಂತೆ ಈ ಭಾಷಾ ಸಂರಕ್ಷಕರು ವಾಸ್ತವಾಗಿ ತಮ್ಮ ಚಹರೆಯುಳ್ಳ ಭಾಷಾ ಪ್ರಭೇದಗಳನ್ನು ಪ್ರಮಾಣ ಭಾಷೆಗಾಗಿ ಕಳೆದುಕೊಳ್ಳಬೇಕೆಂಬ ಒತ್ತಾಯವಿರುವಾಗ, ಸಹಜವಾಗಿಯೇ ಈ ಭಾಷೆ ಮತ್ತು ಸಂಸ್ಕೃತಿಯ ಸಂಬಂಧದ ವಾದವನ್ನು ಮುಂದಿಟ್ಟು ನೈತಿಕವಾದ ಒತ್ತಡವನ್ನು ತರುವುದು ಎಷ್ಟರ ಮಟ್ಟಿಗೆ ಸರಿಯಾದೀತು ಎಂಬುದನ್ನೂ ಕೂಡ ನಾವು ಯೋಚಿಸಬೇಕಾಗಿದೆ.

ಈ ಟಿಪ್ಪಣಿಯಲ್ಲಿ ಮಂಡಿಸಲು ಬಯಸಿದ ವಿಚಾರವಿಷ್ಟು: ಇಂಗ್ಲಿಶಾಗಲೀ ಕನ್ನಡವಾಗಲೀ ಅವು ಭಾಷಿಕ ಸಾಮರ್ಥ್ಯಗಳಾಗಿರುವಂತೆ, ಸಾಮಾಜಿಕ ಸಂದರ್ಭದಲ್ಲಿ ಕೆಲವು ಸಾಮಾಜಿಕ ವಿನ್ಯಾಸಗಳ ಸೂಚಕಗಳಾಗಿರುತ್ತವೆ. ತಾವೇ ಸ್ವತಃ ಆ ಸಾಮಾಜಿಕ

ವಿನ್ಯಾಸಗಳಿಗೆ ಕಾರಣಗಳಾಗಿರುವುದಿಲ್ಲ ಅಥವಾ ಆ ವಿನ್ಯಾಸಗಳ ಉಳಿವು ಬೆಳವುಗಳನ್ನು ನಿಯಂತ್ರಿಸುವುದೂ ಇಲ್ಲ. ಆದರೆ ಆ ವಿನ್ಯಾಸಗಳ ಸ್ವರೂಪವನ್ನು ಅರಿಯಲು ಈ ಸೂಚಕಗಳು ನೆರವಾಗುತ್ತವೆ. ಹಾಗಾಗಿ ಇಂಗ್ಲಿಶ್ ಹಲವರು ಹೇಳುವಂತೆ 'ಸ್ವರ್ಗಕ್ಕೆ ದಾರಿ'ಯಾಗುವುದಿಲ್ಲ (ಈ ಹೋಲಿಕೆಯನ್ನು ನೀಡಿದವರಿಗೆ ಅದರಲ್ಲಿರುವ ಕಟಕಿಯು ಗೊತ್ತಿತ್ತೋ ಇಲ್ಲವೋ ತಿಳಿಯದು) ಅಪರಿಮಿತ ಅವಕಾಶಗಳ ಸ್ವರ್ಗಕ್ಕೆ ಇಂಗ್ಲಿಶ್ ಹಾದಿಯೇ ಸರಿ ಎಂಬುದಾಗಲೀ ಅಥವಾ ಇಂಗ್ಲಿಶಿಗೆ ಜೋತುಬೀಳುವುದರಿಂದ ಸಂಸ್ಕೃತಿಯನ್ನು ಕಳೆದುಕೊಂಡು 'ಸ್ವರ್ಗಸ್ಥ'ರಾಗುವುದೂ ಇಲ್ಲ. ಇಡಿ ವಾಗ್ವಾದದಲ್ಲಿ ಭಾಷೆಗಳು ಸೂಚಕಗಳು ಮಾತ್ರ ಎಂದು ನಾವು ಗ್ರಹಿಸುವುದು ಅಗತ್ಯವಲ್ಲವೇ?

ಯಾವುದು? ಇಂಗ್ಲಿಶ್ ಅಥವಾ ಕಂಗ್ಲಿಶ್

ಕನ್ನಡ ಭಾಷೆಯನ್ನು ಎಲ್ಲ ವಲಯಗಳಲ್ಲೂ ಬಳಸಬೇಕೆಂದು ವಾದಿಸಿದರೆ ಎಲ್ಲರೂ ಅದನ್ನು ಒಪ್ಪುತ್ತಾರೆ. ಹೀಗೆ ಬಳಸಲು ಇರುವ ಅಡೆತಡೆಗಳನ್ನು ಪಟ್ಟಿ ಮಾಡುವವರೂ ಇದ್ದಾರೆ. ಆದರೆ ಅವರೂ ಕನ್ನಡದ ಬಳಕೆಗೆ ವಿರೋಧ ತೋರುವ ಸಂಭವ ಕಡಿಮೆ. ಕನ್ನಡವನ್ನು ಹೀಗೆ ಎಲ್ಲ ವಲಯಗಳಲ್ಲೂ ಬಳಸುವುದು ಎಂದರೆ ವಾಸ್ತವವಾಗಿ ಈಗ ಬಳಕೆಯಲ್ಲಿರುವ ಇಂಗ್ಲಿಶ್ ಬಳಕೆಯನ್ನು ಕಡಿಮೆ ಮಾಡುವುದು ಕೊನೆಗೆ ನಿಲ್ಲಿಸುವುದು ಎಂದರ್ಥ. ಒಂದು ವೇಳೆ ಇಂಗ್ಲಿಶ್ ಭಾಷೆಯ ಬಳಕೆಯನ್ನು ಅಮಾನತ್ತಿನಲ್ಲಿಡಬೇಕೆಂದು ಹೇಳಿದರೆ, ಹಾಗೆ ಹೇಳುವವರನ್ನು ಶವನಿಸ್ಟ್, ಫ್ಯಾನಟಿಕ್ ಎಂದು ಗುರುತಿಸಲಾಗುತ್ತಿದೆ. ಈಚೆಗೆ ಕನ್ನಡ ನಾಮಫಲಕಗಳು, ಕನ್ನಡ ಅಂಕಿಗಳು ಬಳಕೆಗೆ ಬರಲು ಒತ್ತಾಯ ಬಂದಾಗ ಇಂಗ್ಲಿಶ್‌ಪರ ವಾದಿಗಳು ಕನ್ನಡಪರತೆಯನ್ನು ಅಂಧಾಭಿಮಾನ, ದುರಭಿಮಾನವೆಂದರು. ಇಂಗ್ಲಿಶ್ ಮಾಧ್ಯಮ ತರಗತಿಗಳನ್ನು ಆರಂಭಿಸಲು ಸರ್ಕಾರ ಯೋಜಿಸಿದ್ದನ್ನು ವಿರೋಧಿಸಿದಾಗ ಅದು ಪ್ರತಿಗಾಮಿ ನಡೆಯೆಂದು ಟೀಕಿಸಿದರು. ಇದೆಲ್ಲವನ್ನೂ ಕಂಡಾಗ ಕನ್ನಡಪರತೆ ಮತ್ತು ಇಂಗ್ಲಿಶ್ ವಿರೋಧಗಳು ಒಂದೇ ಎಂಬುದನ್ನು ಒಪ್ಪಲು ಹಲವರು ಸಿದ್ಧರಿಲ್ಲವೆಂದು ಗೊತ್ತಾಗುತ್ತದೆ.

ಕೆ.ವಿ. ಸುಬ್ಬಣ್ಣನವರು ಕನ್ನಡ ಮುಗ್ಧ ಭಜನೆ (ನಮ್ಮ ತವಕ ತಲ್ಲಣಗಳು 1998 ಪುಟ. 86–88) ಎಂಬ ಲೇಖನದಲ್ಲಿ ಇಂಗ್ಲಿಶ್ ಬದಲು ಕನ್ನಡ ಎಂಬ ನಿಲುವನ್ನು ವಿರೋಧಿಸುತ್ತಾರೆ. ಇಂಗ್ಲಿಶ್‌ನ್ನು ಸಾಮಾನ್ಯರನ್ನು ಸಬಲೀಕರಿಸುವ ಮತ್ತು ಕೀಳರಿಮೆಯನ್ನು ಕಳೆಯುವ ಅಸ್ತ್ರವೆಂದು ಪರಿಗಣಿಸಲು ಅವರು ಸೂಚಿಸುತ್ತಾರೆ. ಇದು ಹಲವು ಕಾರಣಗಳಿಂದ ಸರಿ. ಆದರೆ ವಾಸ್ತವವಾಗಿ ಸಮಸ್ಯೆಗಳು ಬೇರೆಯಾಗಿವೆ. ಈ ಅಸ್ತ್ರ ಸಾಮಾನ್ಯರಿಗೆ ದೊರಕುವುದು ಹೇಗೆ? ಇಂಗ್ಲಿಶಿಗಾಗಿ ಹಪಾಹಪಿ ಇರುವುದು ನಿಜ. ಅದು ದೊರಕುವುದೇ? ಅದು ಎಲ್ಲರಿಗೂ ಸಮ್‌ಸಾಮರ್ಥ್ಯದಲ್ಲಿ (ಬಹುಮಟ್ಟಿಗೆ) ಒದಗಿದರೆ ಆಗ ಸುಬ್ಬಣ್ಣನವರು ಹೇಳುವಂತೆ ಅಸ್ತ್ರವಾಗುತ್ತದೆ. ಹಾಗಾಗದಿದ್ದರೆ ಅದು ಅಧಿಕಾರದ ಶಸ್ತ್ರವಾಗುತ್ತದೆ.

ಇಂಗ್ಲಿಶ್ ನಮ್ಮೆಲ್ಲರಿಗೂ ದೊರಕದಿರಲು ಕಾರಣಗಳೇನು? ಇದಕ್ಕೆ ಸಾರ್ವತ್ರಿಕ ಶಿಕ್ಷಣದ ಲೋಪ, ಇಂಗ್ಲಿಶ್ ವಿರೋಧ ಇತ್ಯಾದಿ ಕಾರಣಗಳನ್ನು ಹೇಳಬಹುದು. ಇವುಗಳ ಜತೆಗೆ ಇನ್ನು ಒಂದು ಮುಖ್ಯ ಕಾರಣವಿದೆ. ಇಂಗ್ಲಿಶ್‌ನ್ನು ನಾವು

ನಮ್ಮದಾಗಿಸಿಕೊಳ್ಳುವಾಗ ಅದರ ಅಧಿಕೃತರೂಪವನ್ನೇ ಗುರಿಯಾಗಿ ಇರಿಸಿಕೊಳ್ಳುತ್ತೇವೆ. ನಮ್ಮ ಇಂಗ್ಲಿಶಿನಲ್ಲಿರುವ ತಪ್ಪುಗಳ ಬಗ್ಗೆ ಅತೀವ ಕಾಳಜಿ ನಮಗೆ, ಅಂಥ ತಪ್ಪುಗಳ ಪಟ್ಟಿಯೊಂದನ್ನು ಇರಿಸಿಕೊಂಡು ತಿದ್ದಿಕೊಳ್ಳಲು ಯತ್ನಿಸುತ್ತೇವೆ. ಇಂಗ್ಲಿಶರು ಬಳಸುವಂಥ ಇಂಗ್ಲಿಶ್ ಬಳಸುವುದರ ಕಡೆಗೆ ನಮ್ಮ ಒಲುಮೆ. ಆದರೆ ಈ ಭಾಷೆಯನ್ನು ನಮ್ಮ ರೀತಿಗೆ ಬದಲಾಯಿಸಿಕೊಳ್ಳದಿದ್ದರೆ ಈ ಸಮಸ್ಯೆ ಪರಿಹಾರವಾಗದು.

ಭಾಷಾಶಾಸ್ತ್ರಜ್ಞರು ಈಗ **ಇಂಗ್ಲಿಶ್‌ಗಳನ್ನು** ಕುರಿತು ಮಾತಾಡುತ್ತಿದ್ದಾರೆ. ಎಲ್ಲ ದೇಶಗಳಲ್ಲೂ ಆಯಾ ದೇಶದ ಇಂಗ್ಲಿಶ್ ರೂಪುಗೊಳ್ಳುತ್ತಿದೆ. ಹಾಗೆಯೇ ಭಾರತೀಯ ಮಾದರಿಯೂ ಇದೆ. ಭಾರತೀಯ ಮಾದರಿಯಲ್ಲೂ ಕನ್ನಡದ ಉಪಮಾದರಿಯೊಂದು ಇದ್ದೇ ಇರಬೇಕು. ಈ ಕನ್ನಡದ ಮಾದರಿಯ ಇಂಗ್ಲಿಶನ್ನು ನಮ್ಮ ಶಿಕ್ಷಣವೇತ್ತರು ಒಪ್ಪಬೇಕು. ಈ ಇಂಗ್ಲಿಶಿನಲ್ಲಿ ಹಲವಾರು ವ್ಯತ್ಯಯಗಳಿರುತ್ತವೆ. ಟೆನ್ಸ್ ಬಳಕೆ, ನಿರ್ದೇಶಕಗಳ ಬಳಕೆ ವಿಭಕ್ತಿಪ್ರತ್ಯಯ (ಕೇಸ್ ಸಫಿಕ್ಸ್)ಗಳ ಬಳಕೆ ಇಲ್ಲೆಲ್ಲ ಈ ವ್ಯತ್ಯಯಗಳು ಕಾಣಿಸಿಕೊಳ್ಳುತ್ತವೆ. ಕನ್ನಡಿಗರು ಸಮಾನವಾಗಿ ಮಾಡುವ ಈ ವ್ಯತ್ಯಯಗಳನ್ನು ನಮ್ಮ ಇಂಗ್ಲಿಶ್‌ನ ಲಕ್ಷಣ ಎಂದು ಪರಿಗಣಿಸಬೇಕು. ಅದರ ಬಳಕೆಗೆ ಅಡ್ಡಿತರಬಾರದು. ನಾವು ನಮಗಾಗಿ ಆ ಭಾಷೆಯನ್ನು ಬಳಸುತ್ತೇವೆಯೇ ಹೊರತು ಇಂಗ್ಲಿಶಿನವರಿಗಾಗಿ ಅಲ್ಲ.

ಸುಮ್ಮನೆ ಅಂದಾಜು ಮಾಡಿ ಭಾರತದ ಜನಸಂಖ್ಯೆಯ ಪ್ರಮಾಣ, ಶಾಲೆಗೆ ಹೋಗುವ ಮಕ್ಕಳ ಸಂಖ್ಯೆಯನ್ನು ಗಮನಿಸಿದರೆ ನಮ್ಮಲ್ಲಿ ಇಂಗ್ಲಿಶ್ ಕಲಿಯುತ್ತಿರುವವರ ಸಂಖ್ಯೆ ಆ ಭಾಷೆಯನ್ನು ಮಾತೃಭಾಷೆಯನ್ನಾಗಿ ಹೊಂದಿರುವವರ ಸಂಖ್ಯೆಗಿಂತ ದೊಡ್ಡದು. ಈ ಮಾತು ಇಡೀ ಜಗತ್ತಿಗೇ ನಿಜ. ಆದ್ದರಿಂದ ಕಲಿಯುವವರ ಹಕ್ಕಾಗಿ ನಾವು ನಮ್ಮ ಇಂಗ್ಲಿಶನ್ನು ಪ್ರತಿಪಾದಿಸಬೇಕು.

ಈ ಕಂಗ್ಲಿಶ್ (ಕನ್ನಡಿಗರ ಇಂಗ್ಲಿಶ್)ನಿಂದ ಶುದ್ಧ ಇಂಗ್ಲಿಶಿನ ಗ್ರಹಿಕೆಗೆ ಅಡ್ಡಿಯೇನೂ ಆಗುವುದಿಲ್ಲ. ಬೆಳಗಾವಿಯ ಕನ್ನಡ ಉಪಭಾಷೆಯನ್ನು ಮಾತನಾಡುವ ವ್ಯಕ್ತಿ ಪ್ರಮಾಣಕನ್ನಡದ ಪತ್ರಿಕೆಯನ್ನು ಓದುವುದಕ್ಕೆ ಕಷ್ಟವೇನೂ ಇಲ್ಲವಷ್ಟೆ. ಹಾಗೆಯೇ ಕಂಗ್ಲಿಶನ್ನು ಅವಶ್ಯವಿರುವಂತೆ ಬಳಸುವ ವ್ಯಕ್ತಿಗಳು ಜ್ಞಾನದ ಕಿಟಕಿಯಾಗಿ ಇಂಗ್ಲಿಶನ್ನು ಮುಂದೆಯೂ ಬಳಸುವುದು ಸಾಧ್ಯ.

ಜಗತ್ತಿನ ಹಲವಾರು ಭಾಷಾ ಸಂದರ್ಭಗಳನ್ನು ಪರಿಶೀಲಿಸಿದರೆ ಒಂದು ಭಾಷೆಯನ್ನಾಡುವ ಜನರು ಮತ್ತೊಂದು ಭಾಷೆಯನ್ನು ತಮ್ಮದನ್ನಾಗಿ ಪಡೆದುಕೊಳ್ಳುವಾಗ ಅದರ ಪರಿವರ್ತಿತ ರೂಪವೊಂದನ್ನು ಸೃಷ್ಟಿಸಿಕೊಂಡಿರುವುದಕ್ಕೆ ನಿದರ್ಶನಗಳು ಸಿಗುತ್ತವೆ. ಅಂಥ ಪರಿವರ್ತಿತ ರೂಪಗಳು ಸ್ವತಂತ್ರ ಭಾಷೆಗಳಾಗಿಯೂ ರೂಪುಗೊಂಡಿವೆ. ಕಂಗ್ಲಿಶ್ ಸದ್ಯ ಮೂಲ ಇಂಗ್ಲಿಶಿನಿಂದ ಬೇರೆಯಾಗದಿದ್ದರೂ ಪರಿವರ್ತಿತ ರೂಪವಾಗಿ ನೆಲೆ ಪಡೆಯದಿದ್ದರೆ ಇಂಗ್ಲಿಶ್ ಎಲ್ಲರಿಗೂ ದೊರಕುವುದು ಕನಸಿನ ಮಾತು. ಈ ಮನೋಭಾವದ ಬದಲಾವಣೆ ಅವಶ್ಯ. ಆಗ ಈಗ ಇಂಗ್ಲಿಶ್ ಕಲಿಯಲು, ಬರೆಯಲು ಇರುವ ಹಿಂಜರಿಕೆಗಳು ಕ್ರಮೇಣ ಮಾಯವಾಗುತ್ತವೆ. ಕರ್ನಾಟಕವನ್ನೇ ಲೆಕ್ಕಕ್ಕೆ ಹಿಡಿದರೆ ಮೂವತ್ತರಿಂದ ಮೂವತ್ತೈದು ಲಕ್ಷ ಮಕ್ಕಳು ಈಗ ಇಂಗ್ಲಿಶ್‌ನ್ನು ಕಲಿಯುತ್ತಿದ್ದಾರೆ. ಭಾಷಾ ಕಲಿಕೆಯ ದೃಷ್ಟಿಯಿಂದ ಈ ಪ್ರಮಾಣ ಗಾಬರಿಯಾಗುವಷ್ಟು ಗಣನೀಯ

ಯಾವುದೇ ದ್ವಿತೀಯ ಭಾಷೆಯನ್ನು ಈ ಪ್ರಮಾಣದಲ್ಲಿ ಕಲಿಯುವ ಸಂದರ್ಭವನ್ನು ನಾವು ಗ್ರಹಿಸಬೇಕಾದ ವಿಧಾನವೇ ಬೇರೆಯಾಗಬೇಕು.

ನಾವು ಕಲಿಯುವ ಇಂಗ್ಲಿಶನ್ನು ಕನ್ನಡ ಲಿಪಿಯಲ್ಲಿ ಬರೆಯುವುದೇ ಸರಿ. ಸಂಸ್ಕೃತವನ್ನು ಕನ್ನಡ ಎದುರಿಸಿದ ಬಗೆಯೂ ಇದೇ ಆಗಿದೆ. ಕನ್ನಡ ಲಿಪಿಯಲ್ಲಿ ಹೊಸ ಚಿಹ್ನೆಗಳನ್ನು ರೂಪಿಸಿಕೊಂಡು ಸಂಸ್ಕೃತವನ್ನು ಕನ್ನಡದಲ್ಲಿ ಬರೆಯುವ ಕ್ರಮವನ್ನು ನಾವು ಒಪ್ಪಿದ್ದೇವೆ. ಇಂಗ್ಲಿಶಿಗೂ ಇದೇ ವಿಧಾನ ಅನುಸರಿಸುವುದು ಸೂಕ್ತ. ಆಗ ಇಂಗ್ಲಿಶಿನ **ಕೇಳಿದ ಉಚ್ಚಾರಣೆ**(ರಿಸೀವ್ಡ್ ಪ್ರೊನೌನ್ಸಿಯೆಷನ್)ಯನ್ನು ಕನ್ನಡ ಲಿಪಿಯಲ್ಲಿ ಬರೆಯುವುದು ವಾಡಿಕೆಗೆ ಬರುತ್ತದೆ. ಇದರಿಂದ ಶ್ರಮದ ಉಳಿತಾಯ ಮಾತ್ರವಲ್ಲ. ಇಂಗ್ಲಿಶಿನ ಬರೆವಣಿಗೆ ಮತ್ತು ಉಚ್ಚಾರಣೆಗಳ ನಡುವೆ ಇರುವ ತೊಡಕನ್ನು ಅರಗಿಸಿಕೊಳ್ಳುವ ಕಷ್ಟದಿಂದ ಕಲಿಯುವವರು ಪಾರಾಗುತ್ತಾರೆ. ಇದಕ್ಕಿಂತ ಮುಖ್ಯವಾಗಿ ಇಂಗ್ಲಿಶನ್ನು ಇಂಗ್ಲಿಶ್ ಲಿಪಿ (ಹಾಗೆಂದು ನಾವು ಕರೆಯುತ್ತೇವೆ)ಯಲ್ಲಿ ನೋಡುವ ಬರೆಯುವ ಒತ್ತಡವಿಲ್ಲದಿದ್ದರೆ ಅದರಿಂದ ಆ ಭಾಷೆಯ ಬಗೆಗಿನ 'ಭಯ' ಸಾಕಷ್ಟು ಕಡಿಮೆಯಾಗುತ್ತದೆ. ಒಂದು ಭಾಷೆಯನ್ನು ಅದರದ್ದಲ್ಲದ ಬೇರೆ ಲಿಪಿಯಲ್ಲಿ ಬರೆಯುವುದು ಈಗಾಗಲೇ ಹಲವುಕಡೆ ಬಳಕೆಯಲ್ಲಿರುವ ಪದ್ಧತಿಯಾಗಿದೆ. ಆದ್ದರಿಂದ ಮೇಲಿನ ಸೂಚನೆಯಲ್ಲಿ ಅಸಾಧುವಾದುದೇನೂ ಇಲ್ಲ. ಬೇಕೆನಿಸಿದವರು, ಬೇಕಾದಾಗ ಇಂಗ್ಲಿಶ್ ಲಿಪಿಯನ್ನು ಕಲಿತು ಓದಲು ಅವಕಾಶವಿದ್ದೇ ಇದೆ. ಇಂದಿನ ಗಣಕಗಳು ಒಂದು ಲಿಪಿಯಲ್ಲಿ ಬರೆದದ್ದನ್ನು ಇನ್ನೊಂದು ಲಿಪಿಗೆ ಪರಿವರ್ತಿಸುವ ಕೆಲಸವನ್ನು ಸೆಕೆಂಡುಗಳಲ್ಲಿ ಮಾಡಬಲ್ಲವು. ಹಾಗಾಗಿ ಇಂಗ್ಲಿಶಿಗೆ ಕನ್ನಡ ಲಿಪಿ ಬಳಸುವುದು ಯೋಗ್ಯ.

ಈಗಿಂದೀಗಲೇ ಇಂಗ್ಲಿಶ್ ಭಾಷೆಯ ಬೋಧಕರು ಬೋಧನಾ ತಜ್ಞರು ಕನ್ನಡಿಗರು ಬರೆಯುತ್ತಿರುವ ಮಾತನಾಡುತ್ತಿರುವ ಇಂಗ್ಲಿಶ್‌ನ ಲಕ್ಷಣಗಳನ್ನು ಗುರುತಿಸಬೇಕು. ವ್ಯಕ್ತಿಗತ, ಪ್ರಸಂಗನಿಷ್ಠ ದೋಷಗಳನ್ನು ಹೊರತುಪಡಿಸಿ ಸಾಮಾನ್ಯವಾಗಿ ಕಾಣುವ ವ್ಯತ್ಯಯಗಳನ್ನು ಕಂಡುಕೊಂಡು ಅಂಥ ಬಳಕೆಗಳನ್ನು ಒಪ್ಪಬೇಕು. ಪಠ್ಯಗಳಲ್ಲೂ ಈ ವ್ಯತ್ಯಯಗಳಿಗೆ ಅವಕಾಶ ನೀಡಬೇಕು. ಉತ್ತರ ಪತ್ರಿಕೆಗಳಲ್ಲಿ ಇಂಥ ವ್ಯತ್ಯಯಗಳನ್ನು ಸರಿ ಎಂದು ಪರಿಗಣಿಸಬೇಕು. ಈ ಸೂಚನೆಗಳು ವಿಚಿತ್ರ ಎನ್ನಿಸಬಹುದು. ಆದರೆ ಇದಲ್ಲದೆ ಬೇರೆ ಮಾರ್ಗವಿಲ್ಲ. ನಾವಿನ್ನೂ ನಮ್ಮ ಇಂಗ್ಲಿಶ್‌ನಲ್ಲಿ ತಪ್ಪಾಗುತ್ತದೆಂದು ಅಳುಕುತ್ತೇವೆ. ನಮ್ಮವರ ಇಂಗ್ಲಿಶಿನಲ್ಲಿ ತಪ್ಪುಗಳನ್ನು ಹುಡುಕುತ್ತೇವೆ. ಹಾಗೆ ಬಳಸುವವರನ್ನು ನಗೆಚಾಟಿಕೆಗೆ ವಸ್ತು ಮಾಡಿಕೊಳ್ಳುತ್ತೇವೆ. ನಮ್ಮ ಮನೆಮಾತನ್ನು ಸರಿಯಾಗಿ ಬಳಸಲು ಬಾರದಿದ್ದರೂ ಚಂದವಾಗಿ ಇಂಗ್ಲಿಶ್ ಬಳಸುವುವವರನ್ನು ತಲೆಯ ಮೇಲೆ ಹೊತ್ತು ಕುಣಿಯುತ್ತೇವೆ. ಎಲ್ಲಿಯವರೆಗೆ ಈ ನಾಟಕ?

ಶ್ರೀ ಸುಬ್ಬಣ್ಣನವರು ಇಂಗ್ಲಿಶನ್ನು ಕರಿಯ ಸಾಹೇಬರ ಎದುರು ಸೆಟೆದು ನಿಲ್ಲಲು ಅಸ್ತ್ರವನ್ನಾಗಿ ಬಳಸಲು ಸೂಚಿಸುತ್ತಾರೆ. ಹಾಗೆ ಬಳಸಲು ಅನುವಾಗುವಂತೆ ಆ ಭಾಷೆಯನ್ನು ನಮ್ಮ ಬಳಕೆಗೆ ಪಳಗಿಸಿಕೊಳ್ಳಬೇಕು. ಇಲ್ಲದಿದ್ದರೆ ಅದು ನಮ್ಮ ಮೇಲೆ ಸವಾರಿ ಮಾಡುತ್ತಲೇ ಇರುತ್ತದೆ.

ಬೇಗ ಬೇಗ ಇಂಗ್ಲಿಶ್

ಇಂಗ್ಲಿಶ್ ನಮ್ಮನ್ನು ಕಾಡುವ ಗುಮ್ಮ. ಒಂದೋ ಈ ಗುಮ್ಮ ಇಲ್ಲವೆಂದಾಗಬೇಕು ಅಥವಾ ಗುಮ್ಮನಿಗೆ ಹೆದರದಷ್ಟು ಪ್ರಬುದ್ಧತೆ ನಮ್ಮಲ್ಲಿ ಬೆಳೆಯಬೇಕು. ಇವೆರಡೂ ಆಗುವುದು ವೈಯಕ್ತಿಕ ನೆಲೆಯಲ್ಲಿ ಅಲ್ಲ. ಸಾಮಾಜಿಕವಾಗಿ ನಿರ್ದಿಷ್ಟ ಚಿಂತನೆ, ಯೋಜನೆಗಳ ಮೂಲಕ ಇದು ಆಕಾರ ಪಡೆಯಬೇಕಾಗಿದೆ.

ಈಗ ಕರ್ನಾಟಕ ಸರಕಾರವು ತನ್ನ ಭಾಷಾ ನೀತಿಯಲ್ಲಿ ಒಂದು ಬದಲಾವಣೆ ಮಾಡಿಕೊಳ್ಳುತ್ತಿದೆ. ಇಂಗ್ಲಿಶನ್ನು ಮಕ್ಕಳಿಗೆ ಔಪಚಾರಿಕವಾಗಿ ಕಲಿಸುವುದನ್ನು ಮೂರನೆಯ ತರಗತಿಯಿಂದ ಮೊದಲು ಮಾಡಬೇಕೆಂಬುದೇ ಈ ಹೊಸ ನಿರ್ಧಾರ. ಈ ಬದಲಾವಣೆಗೆ ಕಾರಣಗಳೇನು? ಕರ್ನಾಟಕದ ಇಂಗ್ಲಿಶ್ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಶನ್ನು ಮೊದಲ ತರಗತಿಯಿಂದ ವಾಸ್ತವವಾಗಿ ಅದಕ್ಕೂ ಎರಡು ವರ್ಷ ಮೊದಲಿನಿಂದ ಕಲಿಸಲು ತೊಡಗುತ್ತಾರೆ. ಇತರ ಮಾಧ್ಯಮಗಳ ಶಾಲೆಗಳಲ್ಲಿ ಇಂಗ್ಲಿಶನ್ನು ಎರಡನೆಯ ಭಾಷೆಯಾಗಿ ಐದು ಅಥವಾ ಆರನೆಯ ತರಗತಿಯಿಂದ ಕಲಿಸುತ್ತಾರೆ. ಇಂಥ ಶಾಲೆಗಳಲ್ಲಿ ಕೆಲವು ಕಡೆ ಇಂಗ್ಲಿಶನ್ನು ಮೊದಲ ತರಗತಿಯಿಂದಲೂ ಕಲಿಸುವ ಅವಕಾಶಗಳಿವೆ. ಏಳನೆಯ ತರಗತಿ ಮತ್ತು ಹತ್ತನೆಯ ತರಗತಿಗಳಲ್ಲಿ ಸರ್ಕಾರ ನಡೆಸುವ ಸಾಮಾನ್ಯ ಪರೀಕ್ಷೆಗಳಲ್ಲಿ ಇಂಗ್ಲಿಶ್ ವಿಷಯದಲ್ಲಿ ತೇರ್ಗಡೆಯಾಗುವವರ ಪ್ರಮಾಣ ಕಡಿಮೆ ಎಂಬುದು ಅಂಕಿ-ಅಂಶಗಳಿಂದ ಗೊತ್ತಾಗುತ್ತದೆ. ಈ ಸಂಗತಿಯಿಂದ ಸರಕಾರ ತಲುಪಿರುವ ನಿರ್ಣಯವೇನು? ನಮ್ಮ ಮಕ್ಕಳು ಸಾಮಾನ್ಯ ಶಿಕ್ಷಣದ ಭಾಗವಾಗಿ ಇಂಗ್ಲಿಶನ್ನು ಕಲಿಯುವ ಅವಧಿ ಕಡಿಮೆ; ಆದ್ದರಿಂದ ಹೆಚ್ಚು ವರ್ಷಗಳ ಕಾಲ ಅವರು ಕಲಿಯುವುದು ಸಾಧ್ಯವಾದರೆ ಅವರ ಇಂಗ್ಲಿಶ್ ಜ್ಞಾನ ಹೆಚ್ಚಾಗುತ್ತದೆ. ಈ ತೀರ್ಮಾನದ ತರ್ಕ ಅಷ್ಟು ಸಾಧುವಲ್ಲ. ಏಕೆಂದರೆ ಏಳು ಮತ್ತು ಹತ್ತನೇ ತರಗತಿಗಳ ಇಂಗ್ಲಿಶ್ ಪರೀಕ್ಷೆಯಲ್ಲಿ ಪ್ರತಿಶತ 30 ಅಂಕಕ್ಕಿಂತ ಹೆಚ್ಚು ಅಂಕ ಪಡೆದು ಪಾಸಾಗುವವರ ಇಂಗ್ಲಿಶ್ ವ್ಯಾವಹಾರಿಕ ಜ್ಞಾನ ಅಪೇಕ್ಷೆಗಿಂತ ಹೆಚ್ಚಾಗಿರುವುದೆಂದು ತಿಳಿಯಲು ಯಾವ ಕಾರಣಗಳೂ ಇಲ್ಲ. ಇದನ್ನು ಸಾಧಿಸಿ ತೋರಿಸುವ ಅಂಕಿ-ಅಂಶಗಳಾಗಲೀ ಪ್ರಯೋಗಗಳಾಗಲೀ ನಡೆದಿಲ್ಲ. ವಾಸ್ತವವಾಗಿ ಹೀಗೆ ಪಾಸಾದವರ ಇಂಗ್ಲಿಶ್ ಪರಿಜ್ಞಾನ ಅಷ್ಟು ಉತ್ತಮವಾಗಿರುವುದಿಲ್ಲ ಎಂಬುದೇ ವಾಸ್ತವ. ಅನಂತರದ ಶಿಕ್ಷಣದ ಹಂತಗಳಲ್ಲಿ ಮತ್ತು ವೃತ್ತಿಗಳಲ್ಲಿ ತೊಡಗಿಕೊಂಡ ಮೇಲೆ ಈ ಅಂಶವೇ ಕಣ್ಣಿಗೆ ರಾಚುವಂತಿರುತ್ತದೆ. ಹೆಚ್ಚು ವರ್ಷ ಒಂದು ಭಾಷೆಯನ್ನು ಕಲಿತರೆ ಆ ಭಾಷೆಯ ಪರಿಜ್ಞಾನ ನಮ್ಮಲ್ಲಿ ಹೆಚ್ಚಾಗುತ್ತದೆ ಎಂದು ತಿಳಿಯುವುದಕ್ಕೆ

ಯಾವುದೇ ಪುರಾವೆಗಳಿಲ್ಲ; ಆದ್ದರಿಂದ 3ನೇ ತರಗತಿಯಿಂದಲೇ ಇಂಗ್ಲಿಶನ್ನು ಕಲಿಸಲು ತೊಡಗಬೇಕೆಂದು ತೆಗೆದುಕೊಂಡಿರುವ ತೀರ್ಮಾನವನ್ನು ತರ್ಕ ಬದ್ಧವಾಗಿ ಸಮರ್ಥಿಸುವುದು ಕಷ್ಟ.

ಇನ್ನು ಒಂದು ನೆಲೆಯಿಂದ ಈ ಸಂಗತಿಯನ್ನು ಪರಿಶೀಲಿಸೋಣ. ಈ ರಾಜ್ಯದಲ್ಲಿ ಒಂದು ಅಂದಾಜಿನಂತೆ 2001ರ ಶೈಕ್ಷಣಿಕ ವರ್ಷದಿಂದ ಮೂರನೆಯ ತರಗತಿಯಿಂದ ಅಭ್ಯಾಸ ಮೊದಲು ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಸುಮಾರು 20 ಲಕ್ಷ. ಈ ಸಂಖ್ಯೆ ಒಂದು ಅಂದಾಜು.ಅಷ್ಟಿಷ್ಟು ವ್ಯತ್ಯಾಸಗಳಾಗಬಹುದು. ಇಷ್ಟು ಬೃಹತ್ ಪ್ರಮಾಣದ ವಿದ್ಯಾರ್ಥಿಗಳಿಗೆ ಇಂಗ್ಲಿಶ್ ಕಲಿಸಲು ಸರ್ಕಾರದ ನಿಯಮಾವಳಿಗಳ ಪ್ರಕಾರವೇ ಸುಮಾರು 35,000 ಅಧ್ಯಾಪಕರು (1.60 ಪ್ರಮಾಣ) ಬೇಕು. ಇಂಗ್ಲಿಶ್ ಕಲಿಸಲು ತರಬೇತಿ ಪಡೆದ ಇಷ್ಟು ಸಂಖ್ಯೆಯ ಅಧ್ಯಾಪಕರು ಎಲ್ಲಿದ್ದಾರೆ? ಇಂಗ್ಲಿಶ್ ಮಾಧ್ಯಮದ ಖಾಸಗಿ ಶಾಲೆಗಳಲ್ಲಿ ಇಂಗ್ಲಿಶನ್ನು ವಿಷಯವಾಗಿಯೂ ಕಲಿಸಬಲ್ಲ ಅಧ್ಯಾಪಕರು ಈಗಾಗಲೇ ಲಭ್ಯವಿದ್ದಾರೆ ಎಂಬ ವಾದವನ್ನು ಮುಂದಿರಿಸಿದರೂ ಇಂಗ್ಲಿಶ್ ಅಧ್ಯಾಪಕರ ಬೇಡಿಕೆ ಸುಮಾರು ಮೂರನೆ ಒಂದರಷ್ಟು ತಗ್ಗೀತು ಅಷ್ಟೆ. ಅಂದರೆ 20 ರಿಂದ 25 ಸಾವಿರ ಅಧ್ಯಾಪಕರ ಅವಶ್ಯಕತೆ ಇದ್ದೇ ಇರುತ್ತದೆ. ಇಷ್ಟು ಅಧ್ಯಾಪಕರನ್ನು ಎಲ್ಲಿಂದ ತರುವುದು?

ಶಿಕ್ಷಣ ಇಲಾಖೆಗೆ ಮತ್ತು ಭಾಷಾಯೋಜಕರಿಗೆ ಇದು ಒಂದು ಸಮಸ್ಯೆ ಅಲ್ಲವೆಂದು ನಾನು ಬಲ್ಲೆ. ಈಗ ಬಳಕೆಯಲ್ಲಿರುವ ನಮ್ಮ ಶೈಕ್ಷಣಿಕ ವಿಧಾನಗಳ ಮರೆಯಲ್ಲಿ ಈ ಹೊಸ ಯೋಜನೆಯನ್ನು ನಿರ್ವಹಿಸುವುದು ಸಾಧ್ಯವೆಂದು ಅವರು ತಿಳಿಯುತ್ತಾರೆ. ಅಂದರೆ ಪ್ರಾಥಮಿಕ ಶಾಲೆಯ ಯಾವುದೇ ಶಿಕ್ಷಕ ಇಲ್ಲವೇ ಶಿಕ್ಷಕಿ ಪಠ್ಯಕ್ರಮದಲ್ಲಿರುವ ಯಾವ ವಿಷಯವನ್ನಾದರೂ 'ಕಲಿಸಲು' ಶಕ್ತರು ಎಂಬುದು ಜಾರಿಯಲ್ಲಿರುವ ಅಲಿಖಿತ ನಿಯಮ. ಭಾಷೆಯ ಬೋಧನೆ ಕಲಿಕೆಗೂ, ಇತರ ವಿಷಯಗಳ (ಗಣಿತ, ಪರಿಸರ ವಿಜ್ಞಾನ, ಸಮಾಜಶಾಸ್ತ್ರ ಚರಿತ್ರೆ ಇತ್ಯಾದಿ)ಬೋಧನೆ–ಕಲಿಕೆಗೂ ವ್ಯತ್ಯಾಸಗಳಿಲ್ಲವೆಂಬುದೇ ನಮ್ಮ ಇಂದಿನ ಶೈಕ್ಷಣಿಕ ಚಿಂತನೆಯಾಗಿದೆ. ಆದ್ದರಿಂದಲೇ ಆಡಳಿತಗಾರರು, ಯೋಜಕರು ಭಾಷೆ 'ಕಲಿಸಲು' ವಿಶೇಷ ತರಬೇತಿಯಿರುವ ಬೃಹತ್ ಪ್ರಮಾಣದ ಶಿಕ್ಷಕರ ಪಡೆಯೇ ಬೇಕಾಗುತ್ತದೆಂದು ಊಹಿಸಲಾರರು; ಹಾಗೊಮ್ಮೆ ಈ ಕೊರತೆಯನ್ನು ಅವರ ಗಮನಕ್ಕೆ ತಂದರೂ ಅದನ್ನು ಕಲ್ಪಿತ ಸಮಸ್ಯೆಯೆಂದು ತಳ್ಳಿ ಹಾಕುತ್ತಾರೆ.

ಮತ್ತೆ ಮೊದಲಿಗೆ ಬರೋಣ. ಆರು–ಏಳು ವರ್ಷಗಳ ಕಾಲ ಇಂಗ್ಲಿಶನ್ನು ಕಲಿಯಲು ಅವಕಾಶವಿರುವ ಇಂದಿನ ಭಾಷಾನೀತಿಯನ್ನು ಪೂರ್ಣಪ್ರಮಾಣದಲ್ಲಿ ಜಾರಿಗೆ ನೀಡಿದರೂ ಏಕೆ ನಮ್ಮ ಮಕ್ಕಳು ಇಂಗ್ಲಿಶ್ ಕಲಿಕೆಯಲ್ಲಿ ಹಿಂದುಳಿದಿದ್ದಾರೆ? ಇದಕ್ಕೆ ಶಿಕ್ಷಣ ತತ್ತ್ವಕ್ಕೆ ಸಂಬಂಧವಿಲ್ಲದ ಹತ್ತಾರು ಕಾರಣಗಳನ್ನು ಹೇಳುವುದುಂಟು. ನಗರ–ಹಳ್ಳಿ ವಿಭಜನೆ, ಮಕ್ಕಳ ಬುದ್ಧಿಮತ್ತೆಯಲ್ಲಿ ವ್ಯತ್ಯಾಸ, ಸೌಲಭ್ಯಗಳ ಕೊರತೆ, ಶಿಕ್ಷಕರ ಕೊರತೆ ಹೀಗೆ ಕಾರಣಗಳನ್ನು ಪಟ್ಟಿ ಮಾಡುವುದು ಸಾಧ್ಯ. ಆದರೆ ನಾವು ಕಲಿಸುತ್ತಿರುವ ವಿಧಾನದಲ್ಲೇ ಮೂಲಭೂತವಾಗಿ ಕೊರತೆಗಳಿರಬಹುದೆಂದು ಯೋಚಿಸುತ್ತಿಲ್ಲ. ಇದರಿಂದಾಗಿ ಬೋಧನೆಯು ಕಲಿಕೆಯಾಗಿ ಪರಿವರ್ತನೆ ಹೊಂದದೆ

ಉಳಿದಿದೆ ವಿದ್ಯಾರ್ಥಿಗಳ ಶ್ರಮ ವ್ಯರ್ಥವಾಗುತ್ತಿದೆ. ಇಂಗ್ಲಿಶ್ ಎಂಬುದು ಮಕ್ಕಳಿಗೆ ಕೈಗೆಟುಕದ ಕೌಶಲವಾಗಿದೆ.

ಭಾಷೆಯ ಕಲಿಕೆಗೆ ಅಗತ್ಯವಾದುದೇನು? ಔಪಚಾರಿಕ ಮತ್ತು ಅನೌಪಚಾರಿಕ ಭಾಷಾಕಲಿಕೆಗೆ ಕಲಿಕೆಯ ಸಂದರ್ಭ ಮತ್ತು ಕಲಿಕೆಗೆ ಅವಶ್ಯವಾದ ಪ್ರೇರಣೆ – ಇವರೆಡೂ ಅವಶ್ಯ. ಪ್ರೇರಣೆ ಆಂತರಿಕವಾಗಿದ್ದು ಜೈವಿಕ ನೆಲೆಗಳಿಂದ ಪ್ರೇರಿತವಾಗಿರುತ್ತದೆ. ಈ ಅಂಶದ ಮೇಲೆ ನಮ್ಮ ನಿಯಂತ್ರಣ ಕಡಿಮೆ ಅಥವಾ ಇಲ್ಲವೇ ಇಲ್ಲ. ಸಂದರ್ಭ ಸೃಷ್ಟಿಸುವುದು ಅವಶ್ಯ. ಇದರಲ್ಲಿ ಕಲಿಕೆಗೆ ಬೇಕಾದ ಮಾಹಿತಿಯನ್ನು ಮಕ್ಕಳಿಗೆ ಒದಗಿಸಬೇಕಾಗಿರುತ್ತದೆ. ಮನೆಮಾತನ್ನು ಔಪಚಾರಿಕವಾಗಿ ಶಾಲೆಯಲ್ಲಿ ಕಲಿಯುತ್ತಿರುವಾಗ ಮಕ್ಕಳಿಗೆ ಸಮಸ್ಯೆಗಳು ಹೆಚ್ಚಾಗಿರುವುದಿಲ್ಲ. ಏಕೆಂದರೆ ಮಾಹಿತಿಯು ತರಗತಿಯ ಒಳಗೆ ಮತ್ತು ಹೊರಗೆ ಧಾರಾಳವಾಗಿ ದೊರಕುತ್ತದೆ. ಆದರೆ ಇಂಗ್ಲಿಶ್ ಕಲಿಯಲು ಬೇಕಾದ ಮಾಹಿತಿ ಮುದ್ರಿತ ಪಠ್ಯವಾಗಿ ಮಾತ್ರ ಲಭ್ಯ. ಅದು ಕಲಿಕೆಗೆ ಸಾಕಾಗುವುದಿಲ್ಲ. ತರಗತಿಯ ಹೊರಗೆ ಇಂಗ್ಲಿಶ್ ಕಲಿಕೆಗೆ ದೊರಕುವ ಮಾಹಿತಿ ಎಲ್ಲರಿಗೂ ಸಮ ಪ್ರಮಾಣದಲ್ಲಿರುವುದಿಲ್ಲ. ಹೀಗಾಗಿ ಇಂಗ್ಲಿಶ್ ಕಲಿಕೆಗೆ ಅವಶ್ಯವಾದ ಸಂದರ್ಭವನ್ನು ಸೃಷ್ಟಿಸುವಲ್ಲಿ ಈವರೆಗೆ ನಮ್ಮ ಶಿಕ್ಷಣ ವ್ಯವಸ್ಥೆ ವಿಫಲವಾಗಿದೆ.

ಮಕ್ಕಳು ಭಾಷೆಯನ್ನು ಹೇಗೆ ಕಲಿಯುತ್ತಾರೆ ಎಂಬ ಬಗ್ಗೆ ಬಹುಮಟ್ಟಿಗೆ ನಮ್ಮ ಶಿಕ್ಷಣ ತಜ್ಞರಲ್ಲಿ ಇರುವ ತಿಳುವಳಿಕೆಯ ಪ್ರಮಾಣ ಕಮ್ಮಿ. ಅಥವಾ ತಪ್ಪು ತಿಳುವಳಿಕೆಯ ಪ್ರಮಾಣ ಹೆಚ್ಚು. ಆ ಕಾರಣದಿಂದಲೇ ಶಾಲೆಗಳಲ್ಲಿ ಭಾಷಾಬೋಧನೆಗೂ ಗಣಿತ ಬೋಧನೆಗೂ ಏನು ವ್ಯತ್ಯಾಸವಿಲ್ಲ. ಒಂದು ವಿಷಯವನ್ನು ಬೋಧಿಸುವ ವಿಧಾನದಿಂದಲೇ ಇನ್ನೊಂದನ್ನು ಬೋಧಿಸುವುದು ಸಾಧ್ಯವೆಂದು ವಾದಿಸುತ್ತಾರೆ. ಈಚಿನ ಶೋಧಗಳು ಭಾಷೆಯ ಕಲಿಕೆಯು ಒಂದು ವಿಭಿನ್ನ ಪ್ರಕ್ರಿಯೆಯೆಂದು ತೋರಿಸಿಕೊಟ್ಟಿವೆ. 'ಬುದ್ಧಿವಂತಿಕೆ' ಎಂಬ ಸಾಮರ್ಥ್ಯಕ್ಕೆ ಭಾಷೆಯ ಕಲಿಕೆಯಲ್ಲಿ ಇರುವ ಪಾತ್ರ ಇಲ್ಲವೆನ್ನುವಷ್ಟು ಕನಿಷ್ಠವಾದುದು. ಅಂದರೆ ಗಣಿತ, ವಿಜ್ಞಾನ ಮುಂತಾದ ವಿಷಯಗಳ ಕಲಿಕೆ ಅವಶ್ಯವಾದ ಮೆದುಳಿನ ಸಾಮರ್ಥ್ಯಗಳು, ಪರಿಕರಗಳು ಭಾಷಾ ಕಲಿಕೆಗೆ ಅತ್ಯವಶ್ಯವಲ್ಲ. ಅಥವಾ ಭಾಷೆಯ ಕಲಿಕೆಗೆ ಅವಶ್ಯವಾದ ಬೇರೆಯೇ ಸಾಮರ್ಥ್ಯ ಮೆದುಳಿನಲ್ಲಿ ಇದೆ ಎಂಬುದು ಈಗ ಬಹುಮಾನ್ಯವಾದ ವಿಷಯ. ಹೀಗಿರುವಾಗ ನಮ್ಮ ಕಲಿಕೆಯ ತಜ್ಞರು ಸಾರಾಸಗಟಾಗಿ ಭಾಷೆಯ ಕಲಿಕೆಯನ್ನು ಎಲ್ಲ ಕಲಿಕೆಗಳ ಜಾಲದಲ್ಲೇ ತುರುಕುತ್ತಿರುವುದು ಎಷ್ಟು ಸಮರ್ಥನೀಯ?

ಕನ್ನಡ ಮತ್ತು ಸಂಸ್ಕೃತ: ಮರು ಹೊಂದಾಣಿಕೆ

ಕನ್ನಡ ಮತ್ತು ಸಂಸ್ಕೃತಗಳ ನಡುವೆ ಇರುವ ಸಂಬಂಧ ಬಹು ಪ್ರಾಚೀನವಾದುದು. ಈ ಸಂಬಂಧದಲ್ಲಿ ಆಗಿರುವ ಬದಲಾವಣೆ ಮತ್ತು ಬೆಳವಣಿಗೆಗಳೆಲ್ಲವನ್ನೂ ವಿವರಿಸಿಕೊಳ್ಳಲು ಇಲ್ಲಿ ಅವಕಾಶಗಳಿಲ್ಲ. ಆದರೆ ಕೆಲವು ಮುಖ್ಯ ಸಂಗತಿಗಳನ್ನು ನಮ್ಮ ಚರ್ಚೆಯ ಅನುಕೂಲಕ್ಕಾಗಿ ಸಂಗ್ರಹಿಸಿಕೊಳ್ಳುವುದು ಅಗತ್ಯವಾಗಿದೆ. (1) ಕನ್ನಡ ಭಾಷಾಧ್ವನಿಗಳನ್ನು ಸಂಸ್ಕೃತ ಭಾಷಾ ಧ್ವನಿ ರಚನೆಯು ತುಂಬಾ ಪ್ರಭಾವಿಸಿದೆ. ಇದರಿಂದಾಗಿ ಕೆಲವು ಭಾಷಾ ಧ್ವನಿಗಳನ್ನು ಮತ್ತು ಅವುಗಳ ಲಿಖಿತ ಪ್ರತಿನಿಧೀಕರಣವನ್ನು ಕನ್ನಡ ಸಂಸ್ಕೃತದಿಂದ ಪಡೆದುಕೊಂಡಿದೆ. (2) ಕನ್ನಡದ ಪದಕೋಶವನ್ನು ಸಂಸ್ಕೃತವು ಪ್ರಭಾವಿಸಿದೆ. ನೇರವಾಗಿ ಸಂಸ್ಕೃತದಿಂದ ಮತ್ತು ಸಂಸ್ಕೃತ ಪದಗಳನ್ನು ಪ್ರಾಕೃತದ ಮೂಲಕ ಕನ್ನಡ ಪಡೆದುಕೊಂಡಿದೆ. ಪ್ರಮಾಣ ಕನ್ನಡದ ಪ್ರಭೇದವು ಸುಮಾರು ಪ್ರತಿಶತ ಐವತ್ತೈದಕ್ಕೂ ಹೆಚ್ಚು ಪದಗಳನ್ನು ಸಂಸ್ಕೃತದಿಂದ ಪಡೆದುಕೊಂಡಿದೆ. (3) ಕನ್ನಡ ಪದರಚನೆಯ ಕೆಲವು ನೆಲೆಗಳು ಸಂಸ್ಕೃತದಿಂದ ಪ್ರಭಾವಿತವಾಗಿವೆ. ಸಮಸ್ತಪದ ರಚನೆಯಲ್ಲಿ ಮತ್ತು ಆ ಸಂದರ್ಭದ ಸಂಧಿನಿಯಮಗಳಲ್ಲಿ ಕೆಲವೊಮ್ಮೆ ಸಂಸ್ಕೃತದ ನಿಯಮಗಳು ಬಳಕೆಯಾಗುವುದಕ್ಕೆ ಉದಾಹರಣೆಗಳಿವೆ. (4) ಸಂಸ್ಕೃತದ ಪ್ರಭಾವದಿಂದಾಗಿ ಕನ್ನಡದ ಕೆಲವು ಬಳಕೆಯ ವಲಯಗಳಲ್ಲಿ ಭಾಷಾ ದ್ವಿಸ್ತರತೆ ಉಂಟಾಗಿರುವುದನ್ನು ನೋಡಬಹುದು. ಉನ್ನತ ಸ್ತರದ ಪ್ರಭೇದದಲ್ಲಿ ಸಂಸ್ಕೃತ ಬಾಹುಳ್ಯವಿದ್ದರೆ ಕೆಳಸ್ತರದಲ್ಲಿ ದೇಶೀಯ ಪದಗಳ ಬಾಹುಳ್ಯವಿರುವುದನ್ನು ಕಾಣಬಹುದಾಗಿದೆ. ಈ ನಾಲ್ಕು ಅಂಶಗಳನ್ನು ಮುಖ್ಯವಾಗಿ ಇಲ್ಲಿ ಪರಿಗಣಿಸಿ ಚರ್ಚೆಯನ್ನು ಬೆಳೆಸಲಾಗುತ್ತದೆ.

ಕನ್ನಡದ ಶಿಷ್ಟ ಅಥವಾ ಪ್ರಮಾಣ ರೂಪವನ್ನು ನಿರ್ಧರಿಸುವಾಗ ಆ ರೂಪವು ಸಂಸ್ಕೃತದ ಮಾದರಿಯಲ್ಲಿ ಇರುವಂತೆ ಮಾಡಲಾಗಿದೆ. ಬಹುಮಟ್ಟಿಗೆ ಸಂಸ್ಕೃತ ಭಾಷೆಯ ಎಲ್ಲ ಧ್ವನಿಗಳನ್ನು ಕನ್ನಡದ ಭಾಷಾ ಧ್ವನಿಗಳೆಂದು ಪರಿಗಣಿಸಲಾಗುತ್ತದೆ. ಕೆಲವು ಧ್ವನಿಗಳಿಗೆ ಕನ್ನಡದಲ್ಲಿ ಇರಬಹುದಾದ ಉಚ್ಚಾರಣೆಯ ವ್ಯತ್ಯಾಸಗಳು ಮತ್ತು ವಿಶಿಷ್ಟತೆಗಳು ಈ ನಿರ್ಧಾರದಲ್ಲಿ ಮನ್ನಣೆಯನ್ನು ಪಡೆದಿಲ್ಲ. ಅಂದರೆ ಕನ್ನಡದ ಪ್ರಮಾಣ ಅಥವಾ ಶಿಷ್ಟರೂಪದಲ್ಲಿ ಅದರ ಬರೆಹದ ರೂಪವೇ ಅಧಿಕೃತವಾಗಿದೆ. ಉಚ್ಚಾರಣೆಯಲ್ಲಿ ಶಿಷ್ಟವೆನ್ನಬಹುದಾದ ಪ್ರಭೇದವೊಂದು ಇದ್ದರೂ ಅದಕ್ಕೂ ಲಿಖಿತ ರೂಪವೇ ಅಧಿಕೃತತೆಯನ್ನು ನೀಡುತ್ತದೆ. ಈ ಲಿಖಿತ ಮಾದರಿಯನ್ನು ಸಂಸ್ಕೃತ ಧ್ವನಿರಚನೆ

ಮತ್ತು ಪದಕೋಶಗಳು ನಿರ್ದೇಶಿಸುವ ಪರಿಸ್ಥಿತಿ ಕನ್ನಡದಲ್ಲಿದೆ. ಕನ್ನಡದ ವಿವಿಧ ಭಾಷಾ ಸಂಕಥನಗಳಲ್ಲಿ ಈ ಪ್ರಮಾಣ ಕನ್ನಡದ ಬಳಕೆಯೇ ಅಧಿಕವಾಗಿದೆ. ಹೀಗಾಗಿ ಕನ್ನಡದ ಬಳಕೆಯ ಹಲವು ವಲಯಗಳು ಸಂಸ್ಕೃತದಿಂದ ಈಗಲೂ ನಿರ್ದೇಶಿತವಾಗುತ್ತಿವೆ.

ಕನ್ನಡ ಮತ್ತು ಸಂಸ್ಕೃತದ ಈ ಸಂಬಂಧವನ್ನು ಇನ್ನೂ ಒಂದು ನಿಟ್ಟಿನಿಂದ ಪರಿಶೀಲಿಸಲು ಸಾಧ್ಯವಿದೆ. ಮಹಾಪ್ರಾಣಗಳು ಮತ್ತು ಶ/ಷ ಎಂಬ ಘರ್ಷ ಧ್ವನಿಗಳ ಮೌಖಿಕ ಅಸ್ತಿತ್ವ ಕನ್ನಡದ ಮಟ್ಟಿಗೆ ಗೌಣವಾಗಿದ್ದರೂ ಲಿಖಿತ ಮಾದರಿಯಲ್ಲಿ ಇವು ಎಡೆಬಿಡದೆ ತಮ್ಮ ಸ್ಥಾನವನ್ನು ಕಾಯ್ದುಕೊಂಡಿವೆ. ಆದರೆ ಹೊಸ ಪದಗಳ ನಿರ್ಮಾಣದಲ್ಲಿ ಕನ್ನಡ ತನಗೂ ಸಂಸ್ಕೃತಕ್ಕೂ ಇರುವ ಸಂಬಂಧದ ಹಲವು ನೆಲೆಗಳನ್ನು ಉಲ್ಲಂಘಿಸುತ್ತದೆ. ಈ ಪ್ರವೃತ್ತಿಯನ್ನು ಹಳಗನ್ನಡದ ವೈಯಾಕರಣಿಗಳು ಗಮನಿಸಿದ್ದರು. ಹೊಸಪದ ನಿರ್ಮಾಣದಲ್ಲಿ ಈ ಪ್ರವೃತ್ತಿಯನ್ನು ಅರಿಸಮಾಸವೆಂದು ಗುರುತಿಸಲಾಗುತ್ತಿತ್ತು. ಈಗ ಈ ಬಗೆಯ ಕನ್ನಡ-ಸಂಸ್ಕೃತಗಳ ಬೆರಕೆಯಿಂದ ರೂಪು ತಳೆಯುವ ಹೊಸ ಪದಗಳ ಬಳಕೆಗೆ ಯಾವ ಹಿಂಜರಿತವೂ ಕಾಣುತ್ತಿಲ್ಲ. ಅಲ್ಲದೆ ಈ ಹೊಸ ರಚನೆಗಳಲ್ಲಿ ಕನ್ನಡ ಮತ್ತು ಸಂಸ್ಕೃತದ ಪದರಚನೆ ಮತ್ತು ಸಂಧಿ ಕ್ರಿಯೆಗಳ ನಿಯಮಗಳು ಜೊತೆಯಾಗಿಯೇ ಬಳಕೆಯಾಗುತ್ತವೆ. ಭೂಗಳ್ಳ ಎಂಬ ಪದರಚನೆಯನ್ನು ಗಮನಿಸೋಣ. ಇಲ್ಲಿ ಸಂಸ್ಕೃತ ಮತ್ತು ಕನ್ನಡದ ಪದಗಳ ಜೋಡಣೆ ಇದೆ. ಸಂಧಿನಿಯಮ ಮಾತ್ರ ಕನ್ನಡದ್ದು(ಭೂ+ಕಳ್ಳ=ಭೂಗಳ್ಳ. ಕ್>ಗ್) ಹೀಗೆ ಕನ್ನಡ-ಸಂಸ್ಕೃತ ಪದಗಳ ಜೋಡಣೆಯಲ್ಲಿ ಸಂಸ್ಕೃತ ಸಂಧಿನಿಯಮವು ಬಳಕೆಯಾಗುವುದುಂಟು. ಊಟೋಪಚಾರ ಎನ್ನುವ ಬಹುಬಳಕೆಯ ಪದಗುಚ್ಛವನ್ನು ನೋಡಿ. ಊಟ(ಕನ್ನಡ) ಮತ್ತು ಉಪಚಾರ(ಸಂಸ್ಕೃತ) ಪದಗಳು ಸೇರಿವೆ. ಆದರೆ ಸಂಧಿಯ ನಿಯಮ ಮಾತ್ರ ಸಂಸ್ಕೃತದ್ದು(ಗುಣಸಂಧಿ) ಹೀಗೆ ಕನ್ನಡ ತನ್ನಲ್ಲಿ ಸಂಸ್ಕೃತವನ್ನು ಬೆರಸಿಕೊಳ್ಳುವಾಗ ತನ್ನದೇ ಆದ ವಿನ್ಯಾಸವನ್ನು ರೂಪಿಸಿಕೊಂಡಿದೆ. ಈ ವಿನ್ಯಾಸದಂತೆ ಸಂಸ್ಕೃತದ ಕನ್ನಡೀಕರಣ ಒಂದು ಬಳಕೆಯ ತಂತ್ರವಾಗಿ ತೋರುತ್ತದೆ. ಈ ಕಾರಣದಿಂದಾಗಿಯೇ ದಿನಬಳಕೆಯಲ್ಲಿ ನೂರಾರು ಸಂಸ್ಕೃತ ಪದಗಳನ್ನು ಬಳಸುವ ಜನ ಕೂಡ ಅವುಗಳನ್ನು ಕನ್ನಡದ ಪದಗಳಲ್ಲ ಎಂದು ಗುರುತಿಸಲಾರರು. ಆದರೆ ಇತರ ಭಾಷೆಗಳಿಂದ ಅದರಲ್ಲೂ ಇಂಗ್ಲಿಶ್ ಭಾಷೆಯಿಂದ ಪಡೆದ ಪದಗಳನ್ನು, ಧ್ವನಿಗಳನ್ನು ಬೆರಸಿದ ಕೂಡಲೇ ಭಾಷೆ ತನ್ನ ಶುದ್ಧತೆಯನ್ನು ಕಳೆದುಕೊಂಡಿತೆಂದು ಹೇಳಬಲ್ಲರು. ಇದರಿಂದ ಸಂಸ್ಕೃತ ಭಾಷಾಂಗಗಳು ಕನ್ನಡದಲ್ಲಿ ಪಾರದರ್ಶಕವಾಗಿ ಬೆರೆತಿವೆ ಎನ್ನುವ ನಿರ್ಣಯವನ್ನು ನಾವು ಮಾಡಬೇಕಿದೆ.

ಇದೂ ಅಲ್ಲದೆ ಕನ್ನಡವು ಹೊಸದಾಗಿ ರೂಪಿಸಿಕೊಳ್ಳುತ್ತಿರುವ ಎಷ್ಟೋ ಪದಗಳಿಗೆ ಮೂಲ ಆಕರ ಸಂಸ್ಕೃತ ಪದಕೋಶ ಮತ್ತು ಕೆಲವು ಪದರಚನೆಯ ನಿಯಮಗಳೇ ಆಗಿರುತ್ತವೆ. ಆದರೆ ಈ ಹೊಸ ಪದ ನಿರ್ಮಾಣ ಮಾತ್ರ ಕನ್ನಡದಲ್ಲಿ ಮಾತ್ರ ಸಂಭವಿಸಿರುತ್ತದೆ. ಸಂಸ್ಕೃತದಲ್ಲಿ ಬಳಕೆಯಾಗದ ಹೊಸ ಪದಗಳನ್ನು ಅದೇ ಭಾಷೆಯ ಆಕರಗಳನ್ನು ಬಳಸಿಕೊಂಡು ಕನ್ನಡ ಬಳಸುತ್ತಿದೆ. ಇದು ಭಾಷಾ ಸಂಬಂಧದ ಸೃಜನಾತ್ಮಕ

ಪ್ರವೃತ್ತಿಗೆ ಒಂದು ಒಳ್ಳೆಯ ನಿದರ್ಶನವಾಗುತ್ತದೆ. ಕನ್ನಡದ ಬಳಕೆಯ ವಲಯಗಳು ಅಧಿಕವಾಗುತ್ತಾ ಹೋದಂತೆ ಕನ್ನಡ ಸಂಸ್ಕೃತದೊಡನೆ ಏರ್ಪಡಿಸಿಕೊಂಡಿರುವ ಈ ವಿಶಿಷ್ಟ ಸಂಬಂಧದ ನೆರವಿನಿಂದ ನೂರಾರು ಹೊಸರಚನೆಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ.

ಸಂಸ್ಕೃತದ ನೆರವಿನಿಂದ ಹೀಗೆ ರೂಪಿಸಿಕೊಂಡ ಹೊಸ ಪದ ರಚನೆಗಳು ಯಾವಾಗಲೂ ಅಲ್ಲದಿದ್ದರೂ ಹಲವು ಬಾರಿ ಕನ್ನಡದ ಪದಕೋಶದಲ್ಲಿ ಈಗಾಗಲೇ ಬಳಕೆಯಲ್ಲಿ ಇರುವ ಪದಗಳ ಬದಲಿಗೆ ಅಥವಾ ಅದರ ಜತೆಗೆ ಬಳಕೆ ಬಂದಿರುತ್ತವೆ. ಉದಾಹರಣೆಗೆ ಅನ್ನ ಮತ್ತು ಕೂಳು ಎನ್ನುವ ಪದಗಳನ್ನು ನೋಡಿ. ಇವೆರಡು ಈಗ ಕನ್ನಡದಲ್ಲಿ ಬಳಕೆಯಲ್ಲಿವೆ. ಹೀಗೆ ಕನ್ನಡದಲ್ಲಿ ಈಗಾಗಲೇ ಇದ್ದ ಪದ ಅಥವಾ ಪದಗುಚ್ಛವೊಂದರ ಬದಲಿಗೆ ಸಂಸ್ಕೃತದ ನೆರವಿನಿಂದ ಪದವೊಂದನ್ನು ಪಡೆದುಕೊಂಡಾಗ ಆ ಎರಡು ರಚನೆಗಳ ನಡುವೆ ವಿಶಿಷ್ಟ ಸಂಬಂಧವೊಂದು ಏರ್ಪಡುತ್ತದೆ. ಸಂಸ್ಕೃತ ಪದಕ್ಕೆ ಉನ್ನತಾರ್ಥವೂ ಕನ್ನಡ ಪದಕ್ಕೆ ಹೀನಾರ್ಥವೂ ಪ್ರಾಪ್ತವಾಗುವುದು ಒಂದು ನೆಲೆ. ಅನ್ನ ಮತ್ತು ಕೂಳು ಎಂಬ ಪದಗಳೇ ಇದಕ್ಕೆ ನಿದರ್ಶನ. (ಅನ್ನ ಪದಕ್ಕೆ ಮೂಲ ಸಂಸ್ಕೃತದಲ್ಲಿ ಇದ್ದ "ಆಹಾರ" ಎನ್ನುವ ಮತ್ತು ಅರ್ಥ ಸಂಕುಚಿತಗೊಂಡು ಬಹುಮಟ್ಟಿಗೆ ಅಕ್ಕಿಯಿಂದ ತಯಾರಾದ ಖಾದ್ಯ ಎನ್ನುವ ಮುಖ್ಯಾರ್ಥ ನೆಲೆಗೊಂಡಿದ್ದರೆ ಅದೇ ಅರ್ಥವನ್ನು ಹೊಂದಿದ್ದ ಕೂಳು ಈಗ ಹೀನಾರ್ಥವನ್ನು ಪಡೆದುಕೊಂಡಿದೆ.) ಹೀಗಲ್ಲದೆ ಸಂಸ್ಕೃತ ರೂಪಗಳಿಗೆ ಹೆಚ್ಚು ಉಪಾದೇಯತ್ವ ಮತ್ತು ಅಧಿಕೃತತೆ ದೊರಕಿದರೆ ಕನ್ನಡ ರೂಪಗಳು ಅನೌಪಚಾರಿಕವಾಗಿ ಬಿಡುತ್ತವೆ. ಇಂತಹ ಸಂದರ್ಭಗಳಲ್ಲಿ ಅರ್ಥ ವ್ಯತ್ಯಾಸವಿಲ್ಲದಿದ್ದರೂ ಬಳಕೆಯ ನಿರ್ಬಂಧಗಳು ನೆಲೆಗೊಳ್ಳುತ್ತವೆ. ಸಂಸ್ಕೃತ ರೂಪಗಳು ಬರವಣಿಗೆಯಲ್ಲಿ ನೆಲೆಯಾದರೆ ಕನ್ನಡದ ರೂಪಗಳು ಮಾತಿನಲ್ಲಿ ಜಾಗ ಪಡೆದುಕೊಳ್ಳುತ್ತವೆ. ಈ ಭಾಷಾ ದ್ವಿಸ್ತರತೆಯ ಪರಿಣಾಮಗಳು ಇಂಗ್ಲಿಶ್ ಪದಕೋಶದ ಪ್ರವೇಶದಿಂದಾಗಿ ಮತ್ತಷ್ಟು ಜಟಿಲಗೊಂಡಿವೆ. ಇದನ್ನು ಬೇರೆ ಚರ್ಚೆಗೆ ಗುರಿಪಡಿಸಬೇಕಾಗಿದೆ.

ಸಂಸ್ಕೃತಕ್ಕೆ ಇರುವ ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಾನಮಾನಗಳು ಮತ್ತು ಅದರ ಒತ್ತಾಸೆಯಿಂದಾಗಿ ಭಾಷಾ ರಾಜಕಾರಣದಲ್ಲಿ ಕನ್ನಡ ಮತ್ತು ಸಂಸ್ಕೃತಗಳ ಸಂಬಂಧದ ಇನ್ನೊಂದು ಮುಖ ಅನಾವರಣಗೊಂಡಿದೆ. ಶಾಲಾ ಶಿಕ್ಷಣದಲ್ಲಿ ಕಲಿಯ ಬಹುದಾದ ಭಾಷೆಗಳ ಪಟ್ಟಿಯಲ್ಲಿ ಸಂಸ್ಕೃತವೂ ಇದೆ. ಕನ್ನಡ ಮೊದಲ ಭಾಷೆಯಾಗಿರುವ ಮಕ್ಕಳು ಕನ್ನಡದ ಬದಲು ಸಂಸ್ಕೃತವನ್ನು ಕಲಿಯುತ್ತಿರುವ ಪರಿಸ್ಥಿತಿ ಕಂಡುಬಂದಿದೆ. ನಗರ ಪ್ರದೇಶಗಳಿಗೆ ಸೀಮಿತವಾದಂತೆ ಇರುವ ಈ ಪ್ರವೃತ್ತಿಯ ಪರಿಣಾಮಗಳು ಅಷ್ಟು ಗಾಢವೆಂದು ಮೇಲು ನೋಟಕ್ಕೆ ತೋರುತ್ತಿಲ್ಲ. ಆದರೂ ಕನ್ನಡ ಮತ್ತು ಸಂಸ್ಕೃತಗಳ ನಡುವೆ ಈ ಆಯ್ಕೆ ಆಗುತ್ತದೆಯೇ ಹೊರತು ಸಂಸ್ಕೃತಕ್ಕಾಗಿ ಕನ್ನಡವನ್ನು ಬಿಟ್ಟು ಬೇರೆ ಯಾವ ಭಾಷೆಯನ್ನು ತ್ಯಜಿಸುವ ಪ್ರವೃತ್ತಿ ಕಂಡುಬರುತ್ತಿಲ್ಲ. ಅದರಲ್ಲೂ ರಾಜ್ಯದ ಶಿಕ್ಷಣ ಪ್ರಣಾಳಿಕೆಗೆ ಪರ್ಯಾಯವಾಗಿ ಜಾರಿಯಲ್ಲಿರುವ ಕೇಂದ್ರೀಯ ಮತ್ತು ಸ್ವಾಯತ್ತ ಶಿಕ್ಷಣ ಪ್ರಣಾಳಿಕೆಗಳು ಕನ್ನಡವನ್ನು ಶಾಲಾ ಶಿಕ್ಷಣದಿಂದ ಹೊರಗಿರಿಸಿವೆ.

ಆದರೆ ಅಭಿಜಾತ ಭಾಷೆ ಎನ್ನುವ ಕಾರಣಕ್ಕಾಗಿ ಸಂಸ್ಕೃತವನ್ನು ಅಲ್ಲಿ ಕಲಿಯುವ ಅವಕಾಶವನ್ನು ರೂಪಿಸಿಕೊಡಲಾಗಿದೆ. ಹೀಗೆ ಸಂಸ್ಕೃತ ಮತ್ತು ಕನ್ನಡಗಳ ನಡುವೆ ತಿಕ್ಕಾಟವೊಂದು ನಡೆಯುತ್ತಲೇ ಇದೆ. 1982ರ ಅನಂತರದಲ್ಲಿ ನಡೆದ ಗೋಕಾಕ್ ವರದಿಯ ಸಂಬಂಧದ ಚಳುವಳಿಯು ಪಡೆದ ಹಲವು ತಿರುವುಗಳನ್ನು ಗಮನಿಸಿದರೆ ಅಲ್ಲಿ ಸಂಸ್ಕೃತ ಮತ್ತು ಕನ್ನಡಗಳ ನಡುವಣ ಈ ತಿಕ್ಕಾಟವು ಕಾಣಿಸಿಕೊಳ್ಳಲು ಒಂದೆಡೆ ಯತ್ನಿಸುತ್ತಿದ್ದರೆ ಇನ್ನೊಂದೆಡೆ ಅದು ಅಷ್ಟು ಮುಖ್ಯವಲ್ಲವೆಂದು ಬದಿಗೆ ಸರಿಸುವ ಬಗೆಗಳೂ ಕಂಡುಬಂದವು. ಈಗಲೂ ನಮ್ಮ ಶಾಲಾ ಶಿಕ್ಷಣದಲ್ಲಿ ಈ ಸಮಸ್ಯೆ ಬಗೆಹರಿದಿಲ್ಲ. ಇದರಿಂದಾಗಿ ಕನ್ನಡದ ಮಕ್ಕಳೂ ಕನ್ನಡದ ಗೌಣ ಸಾಮರ್ಥ್ಯಗಳಾದ ಓದುವಿಕೆ ಮತ್ತು ಬರೆಯುವಿಕೆಯಲ್ಲಿ ಕನ್ನಡವನ್ನು ಬಳಸದೇ ಉಳಿಯುವ ಸಾಧ್ಯತೆಗಳು ಬೆಳೆದು ನಿಲ್ಲುತ್ತಿವೆ. ಇದು ಕನ್ನಡದ ಒಟ್ಟಾರೆ ಪ್ರಗತಿಗೆ ಧಕ್ಕೆ ಒದಗುವ ಪರಿಸ್ಥಿತಿಗೆ ಕಾರಣವಾಗಿದೆ.

ಆದರೆ ಇಲ್ಲಿ ಮತ್ತೊಂದು ಸಂಗತಿಯನ್ನು ನಾವು ಗಮನಿಸುವುದು ಅಗತ್ಯ. ಸಂಸ್ಕೃತವನ್ನು ಅಭಿಜಾತ ಭಾಷೆ ಎಂದು ಕಲಿಸುತ್ತಿರುವಾಗ ಆ ಭಾಷಾ ಬೋಧನೆಯ ವಿಧಾನದಲ್ಲಿ ಬರೆಹದ ಮಾಧ್ಯಮವಾಗಿ ಈಗ ಚಾಲ್ತಿಯಲ್ಲಿರುವ ಭಾಷೆಯೊಂದನ್ನು ಬಳಸುತ್ತಾರೆ. ಉದಾಹರಣೆಗೆ ಕಲಿಯುತ್ತಿರುವುದು ಸಂಸ್ಕೃತವನ್ನಾದರೂ ಅದನ್ನು ಬರೆಯುವುದು ಕನ್ನಡದ ಲಿಪಿಯಲ್ಲಿ. ಪರೀಕ್ಷೆಯಲ್ಲಿ ಸಂಸ್ಕೃತದ ಕಾವ್ಯಕೃತಿಗಳನ್ನು ಕುರಿತ ಪ್ರಶ್ನೆಗಳಿಗೆ ಉತ್ತರವನ್ನು ಕನ್ನಡದಲ್ಲೇ ಬರೆಯುವ ವಿಧಾನವೊಂದು ಬಳಕೆಯಲ್ಲಿದೆ. ಇದನ್ನು ಸ್ಥಿರಗೊಳಿಸುವುದು ಒಂದು ತಂತ್ರವಾಗಿ ತೋರುತ್ತದೆ. ಸಂಸ್ಕೃತವನ್ನು ಕಲಿಯಬಯಸುವವರು ಅದನ್ನು ಕನ್ನಡದ ಮೂಲಕ ಕಲಿಯುತ್ತಾರಾದರೆ ಪರೋಕ್ಷವಾಗಿ ಅವರು ಕನ್ನಡದ ಗೌಣ ಸಾಮರ್ಥ್ಯಗಳಾದ ಓದುವಿಕೆ ಮತ್ತು ಬರೆಯುವಿಕೆಯನ್ನು ಕಲಿತಂತೆಯೇ ಆಗುತ್ತದೆ. ಅವರ ಮನೆಮಾತು ಕನ್ನಡವೇ ಆಗಿದ್ದರೆ ಅವರಿಗೆ ಕನ್ನಡದ ಪ್ರಾಥಮಿಕ ಸಾಮರ್ಥ್ಯಗಳಾದ ಮಾತಾಡುವಿಕೆ ಮತ್ತು ಆಲಿಸುವಿಕೆ ಈಗಾಗಲೇ ತಿಳಿದಿರುತ್ತದೆ. ಇದರಿಂದ ಆ ವಿದ್ಯಾರ್ಥಿಗಳು ಕನ್ನಡದ ಕಲಿಕೆಯಿಂದ ವಂಚಿತರಾಗುವ ಪ್ರಸಂಗ ಒದಗಿ ಬರುವುದಿಲ್ಲ.

ಹಾಗೆ ನೋಡಿದರೆ ಕನ್ನಡ ಸಂಸ್ಕೃತದ ಪ್ರಭಾವವನ್ನು ತನ್ನ ಬಲವರ್ಧನೆಗೆ ಬಳಸಿಕೊಳ್ಳಲು ಹೂಡಿದ ತಂತ್ರವೇ ಇದು. ಅಂದರೆ ಸಂಸ್ಕೃತವನ್ನು ಕನ್ನಡದ ಲಿಪಿಯಲ್ಲಿ ಬರೆಯುವುದು ಈ ತಂತ್ರವಾಗಿದೆ. ಇದರಿಂದ ಸಂಸ್ಕೃತದ ರಚನೆಗಳು ಕನ್ನಡಕ್ಕೆ ಬಂದಾಗ ಅವುಗಳು ಅನ್ಯವೆನಿಸದೇ ಸೇರಿಕೊಳ್ಳುತ್ತವೆ. ಸಂಸ್ಕೃತವನ್ನು ಓದಲು ಮತ್ತು ಬರೆಯಲು ಕನ್ನಡ ಲಿಪಿ ಮತ್ತು ಬರವಣಿಗೆಯ ಪರಿಚಯವಿರುವುದೂ ಅಗತ್ಯ. ಹೀಗಾಗಿ ಕನ್ನಡದ ಕೆಲವು ಸಾಮರ್ಥ್ಯಗಳನ್ನು ಉಳಿಸಿಕೊಂಡು ಸಂಸ್ಕೃತದೊಡನೆ ಜೊತೆಯಾಗಿರುವುದು ಕನ್ನಡಿಗರಿಗೆ ಸಾಧ್ಯವಾಗಿದೆ. ಇದೇ ಮಾದರಿಯನ್ನು ವ್ಯವಸ್ಥಿತವಾಗಿ ನಮ್ಮ ಶಿಕ್ಷಣ ಕ್ರಮದಲ್ಲಿ ಅಳವಡಿಸುವ ಮೂಲಕ ಈಗಲೂ ಸಂಸ್ಕೃತದೊಡನೆ ನಮಗಿರುವ ಸಂಬಂಧವನ್ನು ಸಹಬಾಳ್ವೆಯ ನೆಲೆಯಲ್ಲಿ ಇರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಕನ್ನಡದ ಮೇಲೆ ಸಂಸ್ಕೃತದ ಸವಾರಿ

ಕನ್ನಡ ಬರಹದಲ್ಲಿ ಹೆಚ್ಚಾಗಿ ಸಂಸ್ಕೃತ ಪದಗಳನ್ನು ಸೇರಿಸಲು ನಾವು ಹಿಂಜರಿಯುವುದಿಲ್ಲ. ಹಾಗೆ ಸಂಸ್ಕೃತ ಪದಗಳನ್ನು ಹೆಚ್ಚು ಬಳಸುವುದು ಏಕೆಂದು ಕೇಳಿದರೆ ಹಾಗೆ ಮಾಡುವುದು ಸರಿಯೆಂದು ಒಪ್ಪಿಸುವ ಮಾತುಗಳನ್ನೂ ಹೇಳುತ್ತೇವೆ. ಒಂದು: ಕನ್ನಡದಲ್ಲಿ ತಕ್ಕ ಪದಗಳಿಲ್ಲದೇ ಇರುವುದರಿಂದ ಹೀಗೆ ಸಂಸ್ಕೃತ ಪದಗಳನ್ನು ಬಳಸುತ್ತೇವೆ. ಎರಡು: ಈಗಾಗಲೇ ಬಳಕೆಯಲ್ಲಿರುವ ಸಂಸ್ಕೃತ ಪದಗಳನ್ನೇ ಬಳಸುವುದರಿಂದ ಓದುವವರಿಗೆ ತಟಕ್ಕನೆ ತೊಂದರೆಯಿಲ್ಲದೆ ಗೊತ್ತಾಗುತ್ತದೆ. ಮೂರು: ಹೊಸ ಕನ್ನಡ ಪದಗಳನ್ನು ತಯಾರು ಮಾಡಲು ಆಗುವುದಿಲ್ಲ ಹಾಗೆ ತಯಾರು ಮಾಡಿದರೂ ಅವುಗಳನ್ನು ಓದುವವರಿಗೆ ಸರಿಯಾಗಿ ಗೊತ್ತಾಗುವುದಿಲ್ಲ. ನಾಲ್ಕು: ಸಂಸ್ಕೃತ ಪದಗಳನ್ನು ಬಳಸುವುದರಿಂದ, ಆ ಪದಗಳಿಂದ ಹುಟ್ಟಿದ ರೂಪಗಳನ್ನು ಬಳಸಲು ಅನುವಾಗುತ್ತದೆ. ಅದರಿಂದ ನಮಗೆ ಹೆಚ್ಚು ಪದಗಳು ದೊರೆಯುತ್ತವೆ. ಇದು ಕನ್ನಡ ಪದಗಳ ಬಳಕೆಯಿಂದ ಆಗುವುದಿಲ್ಲ. ಐದು: ಸಂಸ್ಕೃತ ಪದಗಳಿಗೆ ಒಂದು ಬಗೆಯ ಸೊಬಗಿದೆ; ಕನ್ನಡದ ದೇಸಿ ಪದಗಳ ರೂಪ ಒಂದು ಕಡೆಯಿಂದ ಇನ್ನೊಂದು ಕಡೆಗೆ ಬದಲಾಗುವುದರಿಂದ ಅವುಗಳಲ್ಲಿ ಸರಿಯಾದುದನ್ನು ಹುಡುಕಿ ಬಳಸುವುದು ಆಗದ ಮಾತು. ಈ ಎಲ್ಲ ವಿವರಣೆಯನ್ನೂ ನಾವು ಕೊಂಚ ಎಚ್ಚರಿಕೆಯಿಂದ ನೋಡಿದರೆ ಅವೆಲ್ಲವೂ ದಿಟವಲ್ಲವೆಂದು ಗೊತ್ತಾಗುತ್ತದೆ. ಎಲ್ಲರೂ ಹೇಗೆ ಮಾಡುತ್ತಿದ್ದಾರೋ ಹಾಗೇ ನಾವು ಮಾಡುತ್ತಿದ್ದೇವೆ ಎನ್ನುವುದಂತೂ ನಿಜ.

ಇದೂ ಅಲ್ಲದೆ ಹೆಚ್ಚು 'ಶುದ್ಧ'ವಾದ ಕನ್ನಡ ಎಂದರೆ ಸಂಸ್ಕೃತ ಪದಗಳು ಬೆರೆತ ಮತ್ತು ಸಂಸ್ಕೃತ ಪದಗಳನ್ನು ಅವುಗಳ ಮೂಲ ರೂಪದಲ್ಲೇ ಉಳಿಸಿಕೊಂಡ ಕನ್ನಡ ಎಂಬುದು ಜಾರಿಯಲ್ಲಿರುವ ಒಂದು ನಂಬಿಕೆಯಾಗಿದೆ. ಅಂದರೆ ನಾವು ಸಂಸ್ಕೃತ ಪದಗಳನ್ನು ನೆಮ್ಮುವುದಷ್ಟೇ ಅಲ್ಲ ಅವುಗಳು ಹೇಗಿವೆಯೋ ಹಾಗೇ ಬಳಸಬೇಕೆಂಬ ಒತ್ತಾಯವನ್ನೂ ಹೇರಿಕೊಂಡಿದ್ದೇವೆ. ನಮ್ಮ ಹಳೆಯ ಕವಿಗಳು ಹಿಂಜರಿಕೆ ಇಲ್ಲದೆ ಬಳಸಿದ 'ಅಂಕುಸ', 'ಜನುಮ', 'ಮೊಗ', 'ದಿಟ್ಟ', 'ಆಗಸ' ಮೊದಲಾದ ಪದಗಳನ್ನು ನಾವು ಮಾತು, ಬರಹಗಳಲ್ಲಿ ಬಳಸಲು ಹಿಂಜರಿಯುತ್ತೇವೆ. ಹಾಗೆ ಬಳಸಿದರೂ ಆ ಬಳಕೆಯನ್ನು ಕವಿತೆ, ಕತೆಗಳಿಗೆ ಮೀಸಲಿಡುತ್ತೇವೆ.

ಸರಿ, ಇದು ಹೀಗಿದೆ ಎಂದು ಗೊತ್ತಾದ ಮೇಲೆ ಅದರಿಂದ ಆಗಿರುವ ತೊಂದರೆ ಏನು ಎಂಬುದನ್ನು ನೋಡೋಣ. ನಾವು ನಮ್ಮ ಬರವಣಿಗೆಯಲ್ಲಿ ಬಳಸುತ್ತಿರುವ

ನೂರಾರು ಸಂಸ್ಕೃತ ಪದಗಳಿಗೆ ಬದಲಾಗಿ ಕನ್ನಡದ ಪದಗಳನ್ನೇ ಬಳಸಬಹುದಾಗಿದೆ. ಹಾಗೆ ಆ ಕನ್ನಡ ಪದಗಳನ್ನು ಬಳಸದೇ ಇರುವುದರಿಂದ ಅವುಗಳಲ್ಲಿ ಹಲವು ನಮ್ಮ ನೆನಪಿನಿಂದ ಜಾರಿಹೋಗುತ್ತಿವೆ. ಈ ಮಾತು ಎಷ್ಟು ಸರಿ ಎಂಬುದನ್ನು ತಿಳಿಸಲು ಮುಂದೆ ಕೆಲವು ಪದಗಳನ್ನು ನೀಡಿದ್ದೇನೆ. ಎಲ್ಲ ಪದಗಳೂ ದಿನಪತ್ರಿಕೆಯೊಂದರಲ್ಲಿ ಒಂದೇ ದಿನ ಬಳಕೆಯಾಗಿದ್ದವು. ಆಯಾ ಪದಗಳ ಜೊತೆಗೆ ಬದಲಾಗಿ ಬಳಸಬಹುದಾಗಿದ್ದ ಕನ್ನಡ ಪದಗಳನ್ನೂ ನೀಡಿದೆ. ವೈಫಲ್ಯ (ಸೋಲು), ನೇತೃತ್ವ (ಮುಂದಾಳುತನ, ಕಣ್ಗಾವಲು), ಅಂತಿಮ (ಕೊನೆ), ವಿಳಂಬ (ತಡ), ಸನ್ನಿಹಿತವಾಗು (ಹತ್ತಿರವಾಗು, ಹತ್ತಿರಬರು), ಸ್ಫೋಟ (ಸಿಡಿತ), ತಕ್ಷಣ (ಕೂಡಲೇ), ಸ್ವೀಕರಿಸು (ಪಡೆ, ಪಡೆದುಕೊಳ್ಳು), ಸ್ಥಾಪಿಸು (ನೆಲೆಗೊಳಿಸು, ಇಡು), ಸಾಕಾರಗೊಳ್ಳು (ಮೈದಳೆ, ಕಾಣಿಸು, ಕಾಣುವಂತಾಗು), ತ್ಯಜಿಸು (ಬಿಡು, ಬಿಟ್ಟುಕೊಡು, ತೊರೆ), ಅಭೂತಪೂರ್ವಕ (ಹಿಂದೆಂದೂ ಇಲ್ಲದ, ಈವರೆಗೆ ಇಲ್ಲದ) ಭೀತಿಪಡು (ಹೆದರು, ಬೆದರು) ಸಹಮತ (ಒಪ್ಪಿಗೆ, ಒಪ್ಪಂದ) ಉಕ್ತಿ (ಮಾತು, ನುಡಿ) ವಿನೂತನ (ಹೊಸ), ಪರಂಪರಾಗತ (ತಲೆಮಾರಿನಿಂದ ಬಂದ, ಹಿಂದಿನಿಂದಲೂ ಇರುವ), ಸಮೀಪಿಸು (ಹತ್ತಿರವಾಗು) ಮಗ್ನವಾಗು (ಮುಳುಗಿರು, ಮನಸ್ಸಿಟ್ಟಿರು) ಘಟಿಸು (ಆಗು, ನಡೆ), ಇಚ್ಛಿಸು (ಬಯಸು) ನಿಯಂತ್ರಿಸು (ಹಿಡಿತದಲ್ಲಿಡು), ರಕ್ಷಿಸು (ಕಾಪಾಡು, ಪೊರೆ) ಪುನರುಚ್ಚರಿಸು (ಮತ್ತೆ ಹೇಳು, ಮರಳಿ ನುಡಿ) ಜೊತೆಯಲ್ಲಿ ನೀಡಿದ ಕನ್ನಡ ಪದಗಳು ಆಯಾ ಪದಗಳು ಬಳಕೆಯಾಗಿದ್ದ ಕಡೆ ಹೊಂದಿಕೊಳ್ಳುತ್ತವೆ ಎಂಬುದನ್ನು ಗುರುತಿಸಿಕೊಂಡಿದ್ದೇನೆ. ಒಂದು ವೇಳೆ ಬೇರೆ ಪದಗಳು ಬೇಕೆಂದರೆ ಕನ್ನಡದಲ್ಲಿ ಅವು ದೊರೆಯುವುದಿಲ್ಲ ಎಂದು ಹೇಳಬರುವುದಿಲ್ಲ. ಅಂದರೆ ಕನ್ನಡ ಪದಗಳು ತಟಕ್ಕನೆ ಒದಗುವ ಕಡೆಗಳಲ್ಲೂ ನಾವು ಬರಹದಲ್ಲಿ ಸಂಸ್ಕೃತ ಪದಗಳನ್ನೇ ಬಳಸುತ್ತೇವೆ ಎಂದಾಯ್ತು. ಇದು ಸುದ್ದಿ ಪತ್ರಿಕೆಗಳಲ್ಲಿ ಕಂಡುಬಂದದ್ದು. ಬೇರೆ ಬೇರೆ ಬಗೆಯ ಕನ್ನಡ ಬರಹಗಳಲ್ಲಿ ಈ ಬಗೆಯ ಬಳಕೆ ಇನ್ನೂ ಹೆಚ್ಚಾಗಿರುವುದನ್ನು ಕೊಂಚ ಎಚ್ಚರದಿಂದ ನೋಡಿದರೆ ತಿಳಿಯಬಹುದು.

ಹೀಗೆ ಬರೆದರೆ ತಪ್ಪೇನು ಎಂದು ಕೇಳಬಹುದು. ಇದು ತಪ್ಪು ಸರಿಯ ಮಾತಲ್ಲ. ನೂರಾರು ವರುಷಗಳಿಂದ ಈ ಸಂಸ್ಕೃತ ಪದಗಳನ್ನು ನಾವು ಬಳಸುತ್ತಲೇ ಬಂದಿದ್ದೇವೆ. ಈಗಲೂ ಅವುಗಳನ್ನು ಬಳಸುವುದು ಸರಿಯೇ ತಾನೇ ಎಂದು ಹೇಳಿದರೆ ಅದಕ್ಕೆ ಏನೂ ಹೇಳುವಂತಿಲ್ಲ. ಆದರೆ ಕೊಂಚ ಈ ಬಗ್ಗೆ ತಲೆಕೆಡಿಸಿಕೊಳ್ಳೋಣ. ಹೀಗೆ ಬಂದು ಸೇರಿದ ಸಂಸ್ಕೃತ ಪದಗಳು ಎರಡು ಬಗೆಯಲ್ಲಿ ಕನ್ನಡ ಪದಗಳ ಜೊತ ನಡೆದುಕೊಂಡಿವೆ. ಒಂದು: ಕನ್ನಡ ಪದಗಳನ್ನು ಹೊರದೂಡದಿದ್ದರೂ ಅವುಗಳ ಹರವನ್ನು ತಗ್ಗಿಸುವುದು. ಒಂದೆರಡು ಮಾದರಿಗಳನ್ನು ನೋಡಿ. 'ಸಮಯ' ಬಂದು 'ಹೊತ್ತು' ಕಣ್ಮರೆಯಾಯಿತು. 'ಅನ್ನ' ಬಂದು 'ಕೂಳು' ಎಂಬ ಕನ್ನಡ ಪದ ಮೈಕುಗ್ಗುವಂತಾಯಿತು. ಇಂತಹ ನೂರಾರು ಪದ ಪಟ್ಟಿಯಿದೆ. ಕನ್ನಡ ಪದಗಳು ತೆರೆಮರೆಗೆ ಸರಿಯುವುದು, ಚಲಾವಣೆಯಲ್ಲಿದ್ದರೂ ಮೈಕುಗ್ಗಿಸಿಕೊಂಡಿರುವುದು ಎಷ್ಟು ಸರಿ?

ಸಂಸ್ಕೃತ ಪದಗಳನ್ನು ನಾವು ಇಷ್ಟು ಎಗ್ಗಿಲ್ಲದೆ ಬಳಸುವುದರಿಂದ ನಮಗೆ ಬೇರೊಂದು ಬಗೆಯ ನೆರವು ಒದಗಿದೆ. ಈಗಾಗಲೇ ಬಳಸಿ ಬಳಸಿ ಸವೆದು ಹೋದ ದಾರಿಯಲ್ಲಿ ನಾವು ನಡೆಯುವಂತಾಗಿದೆ. ಹೀಗಂದರೇನು? ಸರಕಾರಿ ಕಚೇರಿಗಳಲ್ಲಿ ಕೆಲಸ ಮಾಡುವವರು ತಮ್ಮ ಕಡತಗಳಲ್ಲಿ ಟಿಪ್ಪಣಿ ಬರೆಯುವುದನ್ನು ನೋಡಿದರೆ ಅವರು ತಾವೇ ಆ ವಾಕ್ಯಗಳನ್ನು ಹೊಸದಾಗಿ ಕಟ್ಟದೇ ಈಗಾಗಲೇ ಬಳಸಿದ ವಾಕ್ಯಗಳ ಚೌಕಟ್ಟನ್ನೇ ಇರುವಂತೆಯೇ ನಕಲು ಮಾಡುತ್ತಿರುತ್ತಾರೆ ಎನ್ನುವುದು ತಿಳಿಯುತ್ತದೆ. ಅಲ್ಲಿ ನುಡಿಬಳಕೆಯಲ್ಲಿ ತನ್ನತನ ಎನ್ನುವುದು ಇರುವುದಿಲ್ಲ; ಇದ್ದರೂ ಕಡಿಮೆ. ಸಂಸ್ಕೃತ ಪದಗಳು ಹೀಗೆ ನಮಗೆ ಸವೆದ ಹಾದಿಯ ವಾಕ್ಯಗಳನ್ನು ಕಟ್ಟಲು ನೆರವಾಗುತ್ತವೆ. ಯಾರಾದರೂ ಕನ್ನಡ ಪದಗಳನ್ನೇ ಬಳಸಿ ವಾಕ್ಯಗಳನ್ನು ಕಟ್ಟಬೇಕೆಂದು ಹೊರಟಾಗ ಮೇಲೆ ಹೇಳಿದ ಮಾತು ದಿಟವೆಂಬುದು ಗೊತ್ತಾಗುತ್ತದೆ. ಹಾಗೆ ಮಾಡುವಾಗ ಬೇಕಾದಷ್ಟು ಕನ್ನಡ ಪದಗಳು ತಟಕ್ಕನೆ ನೆನಪಿಗೆ ಬರುವುದಿಲ್ಲ ಎನ್ನುವುದು ಒಂದು ಮಾತಾದರೆ ಹಾಗೆ ನೆನಪಿಗೆ ಬಂದ ಪದಗಳನ್ನು ಬಳಸಿ ವಾಕ್ಯಗಳನ್ನು ಕಟ್ಟಬೇಕಾದರೆ ಬೇರೆ ಬಗೆಯಲ್ಲೇ ಕಟ್ಟಬೇಕಾಗುತ್ತದೆ. ಈಗ ನೀವು ಓದುತ್ತಿರುವ ಬರಹವನ್ನು ಹೀಗೆ ಕನ್ನಡ ಪದಗಳಿಂದಲೇ ಕಟ್ಟಬೇಕೆಂದುಕೊಂಡೆ. ಆಗ ಅದರ ಎಡರು ತೊಡರುಗಳು ಗೊತ್ತಾಗತೊಡಗಿದವು.

ಇದರಿಂದ ತಿಳಿಯುವುದೇನು? ನಾವು ಸಂಸ್ಕೃತ ಪದಗಳನ್ನು ಬಳಸುವುದರಿಂದ ಹೆಚ್ಚು ಮೈಮುರಿಯದೇ ಬರಹವನ್ನು ಕಟ್ಟುತ್ತಿರುತ್ತೇವೆ. ಕನ್ನಡವನ್ನು ಹೆಚ್ಚಾಗಿ ಬಳಸ ಹೊರಟಾಗ ನಮ್ಮ ದಾರಿ ಎಷ್ಟು ಕಡಿದಾಗಿದೆ ಎಂಬುದು ತಿಳಿಯುತ್ತದೆ. ಹಾಗಿದ್ದರೂ ಈ ಕಡಿದು ದಾರಿಯನ್ನೇ ನಾವೀಗ ಆಯ್ದುಕೊಳ್ಳಬೇಕೆಂಬುದು ನಾನು ಹೇಳುತ್ತೇನೆ. ಹೀಗೆ ಮಾಡುವುದರಿಂದ ನಾವು ಕನ್ನಡವನ್ನು ಬರೆಯುವ ಬಗೆಯೇ ಬದಲಾಗುತ್ತದೆ ಎನ್ನುವುದು ಒಂದು ಮಾತು. ಜೊತೆಗೆ ಕನ್ನಡ ಪದಗಳು ತೆರೆಯ ಹಿಂದಿನಿಂದ ಮುಂದೆ ಬರತೊಡಗುತ್ತವೆ. ಮೈಕುಗ್ಗಿಸಿಕೊಳ್ಳದೆ ತಮ್ಮ ನಿಜ ಬಣ್ಣದಲ್ಲಿ ಬಳಕೆಯಾಗ ತೊಡಗುತ್ತವೆ ಎನ್ನುವುದು ಇನ್ನೊಂದು ಮಾತು.

ಕೆಲವರು ಹೀಗೆ ಮಾಡುವುದರಿಂದ ಬೇಡದ ಹೊರೆಯನ್ನು ಮೈಮೇಲೆ ಎಳೆದುಕೊಂಡಂತೆ ಎನ್ನುವರು. ಮತ್ತೂ ಕೆಲವರು ಮುಂದೆ ಸಾಗುವುದನ್ನು ಬಿಟ್ಟು ಹೆಜ್ಜೆಗಳನ್ನು ಹಿಂದಕ್ಕೆ ಹಾಕಿದಂತೆ ಎನ್ನುವರು. ಮೊದಲ ಮಾತನ್ನು ಬದಿಗಿಡಿ. ಎರಡನೆಯ ಮಾತು ಸರಿಯಲ್ಲ. ಒಂದೊಮ್ಮೆ ನಾವು ಹಿಡಿದು ಹೋಗುತ್ತಿರುವ ದಾರಿ ತಪ್ಪಾಗಿದ್ದರೆ ಹಿಂದೆ ಹೋಗಿ ಸರಿದಾರಿಯನ್ನು ಹಿಡಿಯಬೇಕಲ್ಲವೇ?

ಕನ್ನಡ ಪದಗಳನ್ನೇ ಬಳಸುವುದೆಂದರೆ ಎಲ್ಲ ಸಂಸ್ಕೃತ ಪದಗಳನ್ನು ಹೊರಗಿಡುವುದೆಂದಲ್ಲ. ಕನ್ನಡ ಪದಗಳನ್ನು ಹೆಚ್ಚಾಗಿ ಬಳಸುವುದು ಸಂಸ್ಕೃತ ಪದಗಳನ್ನು ಬಳಸಿದರೂ ಅವು ಕನ್ನಡದ ನುಡಿಜಾಡಿಗೆ ಹೊಂದಿಕೊಳ್ಳುವಂತೆ ಮಾಡಿ, ಆಮೇಲೆ ಬಳಸುವುದು ನಮ್ಮ ಮುಂದಿನ ದಾರಿಯಾಗಬೇಕು. ಹೀಗೆ ಸಂಸ್ಕೃತ ಪದಗಳ ಸವಾರಿಯಿಂದ ತಪ್ಪಿಸಿಕೊಳ್ಳುವುದರಿಂದ ಮತ್ತೊಂದು ಗೊಂದಲದಿಂದ ಪಾರಾಗಬಹುದು. ಅದೆಂದರೆ

ಈಗಿರುವ ಮಾತಿನ ಕನ್ನಡ ಮತ್ತು ಬರಹದ ಕನ್ನಡ ಬೇರೆಬೇರೆಯಾಗಿರುವುದನ್ನು ತಪ್ಪಿಸಬಹುದು. ಎರಡು ಒಂದೇ ಆಗದಿದ್ದರೂ ಅವುಗಳ ನಡುವೆ ಅಷ್ಟೊಂದು ದೊಡ್ಡ ತೆರಪು ತಪ್ಪದಂತೆ ಮಾಡಬಹುದು. ಈಗ ಇವೆರಡು ಒಂದಕ್ಕೊಂದು ಬೆನ್ನು ಮಾಡಿ ನಡೆದಿವೆ. ಮಾತಾಡುವ ಕನ್ನಡಿಗರು ಕನ್ನಡ ಬರಹವನ್ನು ಓದಲು ಹಿಂಜರಿಯುತ್ತಿರುವುದು ಇದರಿಂದಾಗಿಯೇ ಇರಬೇಕು. ಹೆಚ್ಚು ಜನ ಕನ್ನಡವನ್ನು ಓದಬೇಕೆಂದರೆ ಅವರು ಮಾತಾಡುವ ಕನ್ನಡ ಮತ್ತು ಓದುತ್ತಿರುವ ಕನ್ನಡಗಳು ಬೇರೆ ಬೇರೆ ಎನ್ನಿಸಬಾರದಲ್ಲವೇ? ಕನ್ನಡವನ್ನು ಉಳಿಸಬೇಕೆಂದು ಪಣ ತೊಡುತ್ತಿರುವ ನಾವೆಲ್ಲ ಈ ದಿಕ್ಕಿನಲ್ಲಿ ಕೆಲಸ ಮಾಡಬೇಕಲ್ಲವೇ?

ಪ್ರಮಾಣೀಕರಣ

ಭಾಷಾಯೋಜನೆಯ ಚರ್ಚೆ ಮಾಡುವಾಗ ಪ್ರಮಾಣೀಕರಣದ ಮಾತು ಬಂದಿದೆ. ಇದು ವ್ಯವಸ್ಥಿತ ಕ್ರಮದ ಮೂಲಕ ಭಾಷೆಯಲ್ಲಿರುವ ವಿಕಲ್ಪಗಳನ್ನು, ಪರ್ಯಾಯಗಳನ್ನು ಕಡಿಮೆ ಮಾಡಿ ಯಾವುದಾದರೊಂದು ರೂಪವನ್ನು ಅಧಿಕೃತವೆಂದು ನಿರ್ಧರಿಸುವ ಪ್ರಕ್ರಿಯೆ. ಭಾಷಾಯೋಜನೆಯಲ್ಲಿ ಸರ್ಕಾರ ನೇರವಾಗಿ ಪಾತ್ರವಹಿಸುತ್ತದೆ. ಜೊತೆಗೆ ತಾನು ರೂಪಿಸಿದ ಅಥವಾ ಪ್ರೋತ್ಸಾಹಿಸಿದ ಸಾರ್ವಜನಿಕ ಸಂಸ್ಥೆಗಳ ಮೂಲಕ ಅದನ್ನು ನಿರ್ಣಯಿಸಿ ಜಾರಿಗೆ ಕೊಡುತ್ತದೆ. ಕರ್ನಾಟಕದ ಏಕೀಕರಣದ ಪೂರ್ವದಲ್ಲಿಯೂ ಪ್ರಮಾಣೀಕರಣದ ಪ್ರಯತ್ನಗಳು ನಡೆದಿದ್ದವು. ಮುದ್ರಣದ ಅವಿಷ್ಕಾರದ ಅನಂತರದಲ್ಲಿ ಈ ಪ್ರಕ್ರಿಯೆಯ ವ್ಯಾಪ್ತಿ ವಿಸ್ತಾರವಾಗತೊಡಗಿತ್ತು. ಏಕೀಕರಣದ ಹೊತ್ತಿನಲ್ಲಿ ಪ್ರಮಾಣೀಕರಣವು ಮುಖ್ಯವಾಗಿ ಸಾರ್ವಜನಿಕ ವೇದಿಕೆಯಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಹೊಣೆಯಾಗಿ ಇತ್ತೆಂದು ಸ್ಥೂಲವಾಗಿ ಹೇಳಬಹುದು. ಕನ್ನಡ ಪರಂಪರೆಯ ಲಕ್ಷಣಗಳನ್ನು ಕಟ್ಟಿಕೊಡಲು ಇಂತಹ ಕೆಲವು ವೇದಿಕೆಗಳು ಆ ವೇಳೆಗೆ ಕೆಲಸ ಆರಂಭಿಸಿದ್ದವು. ಕರ್ನಾಟಕದ ಶಾಸನ ಸಂಪುಟಗಳ ಪ್ರಕಟಣೆ, ಕನ್ನಡ ಇಂಗ್ಲಿಶ್ ನಿಘಂಟಿನ ಪ್ರಕಟಣೆ, ಶಾಲಾ ವ್ಯಾಕರಣಗಳ ಸಿದ್ಧತೆ ಇವೇ ಮುಂತಾದ ನೆಲೆಗಳಲ್ಲಿ ಚಟುವಟಿಕೆಗಳು ನಡೆದಿದ್ದವು. ದೇಶೀಯ ವಿದ್ವಾಂಸರು ಮತ್ತು ಅವರ ನೆರವಿನೊಡನೆ ಪಾಶ್ಚಾತ್ಯ ಮಿಷನರಿಗಳು ಈ ಕೆಲಸದಲ್ಲಿ ತೊಡಗಿಕೊಂಡಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಏಕೀಕರಣ ಪೂರ್ವದಲ್ಲಿಯೇ ಕನ್ನಡಕ್ಕೊಂದು ಚಾರಿತ್ರಿಕ ನಿಘಂಟಿನ ಅಗತ್ಯವಿರುವುದನ್ನು ಗಮನಿಸಿ ಆ ಯೋಜನೆಯನ್ನು ಕೈಗೆತ್ತಿಕೊಂಡಿತ್ತು. ನಿಘಂಟು ರಚನೆಗೆ ಆ ಹೊತ್ತಿಗೆ ಪ್ರಖ್ಯಾತವಾಗಿದ್ದ ಆಕ್ಸ್‌ಫರ್ಡ್ ಇಂಗ್ಲಿಶ್ ಡಿಕ್ಷನರಿಯ ಮಾದರಿಯನ್ನು ಪರಿಷತ್ತಿನ ನಿಘಂಟು ಕೂಡಾ ಅನುಸರಿಸಿದಂತಿದೆ. ಈ ನಿಘಂಟನ್ನು ರಚಿಸಲು ಕನ್ನಡ ಲಿಖಿತ ಸಾಹಿತ್ಯದ ಮತ್ತು ಬರವಣಿಗೆಯ ದಾಖಲೆಗಳನ್ನು ಆಕರವಾಗಿ ಬಳಸಿಕೊಳ್ಳಲಾಗುತ್ತಿತ್ತು. ಏಕೀಕರಣದ ಹೊತ್ತಿಗೆ ಈ ನಿಘಂಟಿನ ಮೊದಲ ಸಂಪುಟ ಪ್ರಕಟಣೆಗೆ ಸಿದ್ಧವಿರಲಿಲ್ಲ. ಅದರ ಸಂಪಾದಕ ಮಂಡಳಿಯು ಹೆಚ್ಚು ವಿಸ್ತೃತವಾದ ಪ್ರಾತಿನಿಧ್ಯವನ್ನು ಪಡೆದುಕೊಳ್ಳಬೇಕಾದ ಅಗತ್ಯ ಕಂಡುಬಂದಿತ್ತು.

ಏಕೀಕರಣದ ನಂತರ ಪ್ರಮಾಣೀಕರಣಕ್ಕಾಗಿ ಸರ್ಕಾರದ ಕಡೆಯಿಂದ ಯಾವ ವ್ಯವಸ್ಥಿತ ಪ್ರಯತ್ನವೂ ಮೊದಲಾಗಲಿಲ್ಲ. ಆದರೆ ಆಗ ಕಾರ್ಯನಿರ್ವಹಿಸುತ್ತಿದ್ದ ಸಾಹಿತ್ಯ

ಸಂಸ್ಕೃತಿ ನಿರ್ದೇಶನಾಲಯವು ಕನ್ನಡ ಪರಂಪರೆಯ ಪ್ರಮುಖ ದಾಖಲೆಗಳನ್ನು ಕನ್ನಡಿಗರಿಗೆ ಒದಗಿಸುವ ಯತ್ನದಲ್ಲಿ ತೊಡಗಿತ್ತು. ಕುಮಾರವ್ಯಾಸನ ಕರ್ನಾಟ ಭಾರತ ಕಥಾಮಂಜರಿ, ಲಕ್ಷ್ಮೀಶನ ಜೈಮಿನಿ ಭಾರತ, ವಚನಗಳ ಸಂಪುಟ ಇವೇ ಮುಂತಾದ ಪ್ರಕಟಣೆಗಳ ಮೂಲಕ ಕನ್ನಡ ಸಂಸ್ಕೃತಿಯ ಲಕ್ಷಣಗಳನ್ನು ವ್ಯಾಖ್ಯಾನಿಸುವಲ್ಲಿ ನಿರತವಾಗಿತ್ತು. ಇದರಾಚೆಗೆ ಕನ್ನಡದ ಪ್ರಮಾಣೀಕರಣದ ನೆಲೆಗಳನ್ನು ಕಂಡುಕೊಳ್ಳಲು, ಇಲ್ಲವೇ ಜಾರಿಗೆ ಕೊಡಲು ಸರ್ಕಾರ ಆಸಕ್ತವಾಗಿದ್ದಂತೆ ತೋರಲಿಲ್ಲ.

ಪ್ರಮಾಣೀಕರಣದ ಮೊದಲ ವ್ಯವಸ್ಥಿತ ಪ್ರಯತ್ನವೆಂದರೆ ಅಖಿಲ ಕರ್ನಾಟಕ ವ್ಯಾಪ್ತಿಯ ಶಾಲಾ ಪಠ್ಯವಸ್ತುವನ್ನು ಮತ್ತು ಪಠ್ಯಕ್ರಮವನ್ನು ಇಡೀ ಕರ್ನಾಟಕಕ್ಕೆ ಏಕರೂಪಿ ಮಾದರಿಯಾಗಿ ರೂಪಿಸಲು ನಿರ್ಧಾರ ಕೈಗೊಂಡಕ್ರಮ. ಇದರ ಉಪಯುಕ್ತತೆ ಏನೇ ಇರಲಿ. ಅದರ ಹಿಂದಿನ ಉದ್ದೇಶ ಸ್ಪಷ್ಟವಾಗಿದೆ.

ಶಾಲೆಯ ಪಠ್ಯಗಳನ್ನು ಏಕರೂಪಿ ಮಾದರಿಯಲ್ಲಿ ರೂಪಿಸಲು ಮನಸ್ಸು ಮಾಡಿದಾಗ ಸರ್ಕಾರ ಸ್ಪಷ್ಟವಾಗಿ ಆಯ್ಕೆಗಳನ್ನು ಮಾಡಬೇಕಾಗಿ ಬಂತು. ಈ ಆಯ್ಕೆಗಳು ಕೆಲವೊಮ್ಮೆ ಸಾಮಾಜಿಕ ಒತ್ತಡಗಳಿಂದಲೂ ರೂಪುಗೊಂಡಿರುವುದು ಸಾಧ್ಯ. ಏಕೆಂದರೆ ಕನ್ನಡದ ಹತ್ತಾರು ಪ್ರಭೇದಗಳಲ್ಲಿ ಕೆಲವನ್ನು ಮಾತ್ರ ಪ್ರಮಾಣ ಭಾಷೆಯ ಮಾದರಿಯನ್ನಾಗಿ ಆಯ್ಕೆ ಮಾಡಿಕೊಂಡದ್ದು ಒಂದು ವಿಪರ್ಯಾಸ. ಕನ್ನಡದ ಈ ಪ್ರಭೇದ ವ್ಯತ್ಯಾಸಗಳಲ್ಲಿ ಮೊದಮೊದಲು ಭಿನ್ನತೆ ಮಾತ್ರ ಕಂಡುಬರುತ್ತಿದ್ದರೆ, ಈ ಆಯ್ಕೆಗಳಿಂದಾಗಿ ತರತಮ ಭಾವವು ತಲೆಹಾಕತೊಡಗಿತ್ತು. ಉತ್ತಮ,ಸ್ವೀಕಾರಾರ್ಹ ಎಂಬ ಸೂಚನೆಯನ್ನು ಬಹಿರಂಗವಾಗಿ ನೀಡದಿದ್ದರೂ ಚಾಲನೆಗೊಂಡ ಪ್ರಕ್ರಿಯೆಯಲ್ಲಿ ಈ ಎಲ್ಲಾ ಅಂಶಗಳೂ ಗಮನಕ್ಕೆ ಬರುವಂತಿದ್ದವು.

ಪ್ರಮಾಣೀಕರಣ ಎಂದಾಗ ಅದನ್ನು ಶಿಷ್ಟೀಕರಣ ಎಂದು ಸಮೀಕರಿಸಿಬಿಡಲಾಗುತ್ತದೆ. ಕನ್ನಡದಲ್ಲಿ ಇವೆರಡೂ ಒಂದೇ ಎನ್ನಿಸಿಬಿಟ್ಟಿರುವುದು ಒಂದು ವಿಪರ್ಯಾಸ. ಅಥವಾ ನಮ್ಮ ಸಾಮಾಜಿಕ ರಚನೆಯ ಲಕ್ಷಣಗಳನ್ನು ಅದು ತೋರಿಸುತ್ತಿರಬಹುದು. ಏಕೆಂದರೆ ಶಿಷ್ಟೀಕರಣದಲ್ಲಿ ಸ್ಪಷ್ಟವಾಗಿ ಸಾಮಾಜಿಕ ಉನ್ನತ ಸ್ತರಕ್ಕೆ ಮತ್ತು ಅದರ ನಡವಳಿಕೆಗಳಿಗೆ ಹೆಚ್ಚಿನ ಮಹತ್ವವಿರುತ್ತದೆ. ಬೇರೆ ಒಂದು ಸಂದರ್ಭದಲ್ಲಿ ಸಮಾಜ ಶಾಸ್ತ್ರಜ್ಞ ಡಾ. ಎಂ.ಎನ್.ಶ್ರೀನಿವಾಸ್ ಅವರು ಪ್ರಸ್ತುತ ಪಡಿಸಿದ ಸ್ಯಾನ್‌ಸ್ಕ್ರಿಟೈಸೇಶನ್ (ಸಂಸ್ಕೃತಾನುಕರಣ) ಎಂಬ ಪರಿಕಲ್ಪನೆಯನ್ನು ಇಲ್ಲಿ ಅನ್ವಯಿಸಿಕೊಳ್ಳಬಹುದು. ಈ ಪರಿಕಲ್ಪನೆಯು ಸಮಾಜವನ್ನು, ಸಮಪಾತಳಿಯಲ್ಲಿ ಸಮಾಂತರವಾಗಿ ವಿಭಜನೆಗೊಂಡ ನೆಲೆಯಲ್ಲಿ ಒಪ್ಪಿಕೊಳ್ಳುತ್ತದೆ; ಸಮರ್ಥಿಸುತ್ತದೆ. ಆಗ ಉಳಿದ ಸಮಾಜದ ಭಾಗಗಳ ಜನರು ಈ ಮೇಲುಸ್ತರದ ಸಾಂಸ್ಕೃತಿಕ ಮಾದರಿಯನ್ನು ತಮ್ಮ ಆಚರಣೆಗೆ ತಕ್ಕುದೆಂದು ತಿಳಿದು ಅದನ್ನು ಅನುಕರಿಸ ತೊಡಗುತ್ತಾರೆ. ಈ ಮೇಲ್ಮುಖ ಚಲನೆಗೆ ಸಂಸ್ಕೃತೀಕರಣ ಎಂದಿದ್ದಾರೆ. ಇದೊಂದು ಬಹುಚರ್ಚಿತ ಪರಿಕಲ್ಪನೆಯಾಗಿದೆ. ಭಾಷೆಯಲ್ಲಿ ಶಿಷ್ಟೀಕರಣ ಎನ್ನುವುದು ಕೂಡಾ ಸಮಾಜದ ಉಳ್ಳವರ ಪಕ್ಷಪಾತಿಯಾಗಿರುತ್ತದೆ. ಶಿಷ್ಟ ಎನ್ನುವ ಮಾತೇ ಈ ಅಂಶವನ್ನು ಸ್ಪಷ್ಟಗೊಳಿಸುತ್ತದೆ. ನಾವೀಗ ಗುರುತಿಸಿರುವಂತೆ ಪ್ರಮಾಣೀಕರಣ ಮತ್ತು ಶಿಷ್ಟೀಕರಣಗಳು ಒಂದೇ ಎನ್ನಿಸಿಬಿಟ್ಟರೆ ಆಗ ಪ್ರಮಾಣ ಭಾಷೆಯ ರಚನೆ ಮತ್ತು ಸಿದ್ಧತೆಯು

ರಾಜಕಾರಣಕ್ಕೆ ತೆಕ್ಕೆ ಬೀಳುವ ಸಂಭವವಿದೆ. ಕನ್ನಡದಲ್ಲೂ ಕೆಲವು ಚಾರಿತ್ರಿಕ ಕಾರಣಗಳಿಂದಾಗಿ ಇದೇ ಪ್ರಕ್ರಿಯೆಯು ಮೊದಲಾದಂತೆ ತೋರುತ್ತದೆ.

ಪ್ರಮಾಣೀಕರಣಕ್ಕಾಗಿ ಕನ್ನಡದಲ್ಲಿ ನಡೆಸಿದ ಮೊದಲ ವ್ಯವಸ್ಥಿತ ಕಾರ್ಯಕ್ರಮವೆಂದರೆ ಈ ಮೊದಲೇ ಹೇಳಿದಂತೆ ಪಠ್ಯಪುಸ್ತಕಗಳ ನಿರ್ಮಾಣ. ಅನಂತರದಲ್ಲಿ ಆಡಳಿತ ವಲಯದಲ್ಲಿ ಕನ್ನಡ ಬಳಕೆಗೆ ಅನುಕೂಲಕರವಾಗುವ ಸಾಮಗ್ರಿಗಳನ್ನು ಸೃಷ್ಟಿಸುವುದು. ಆಡಳಿತ ಪದಕೋಶವನ್ನು ರಚಿಸುವುದು. ಇವೇ ಮುಂತಾದ ಪ್ರಯತ್ನಗಳು ನಡೆಯುತ್ತಾ ಬಂದವು. ಕರ್ನಾಟಕ ಸರ್ಕಾರವು ಎಂಟನೇ ದಶಕದವರೆಗೂ ಈ ಬಗೆಗೆ ನಿರ್ದಿಷ್ಟ ಕಾರ್ಯಕ್ರಮಗಳನ್ನು ಯೋಜಿಸಿಕೊಂಡಿಲ್ಲ. ಎಂಟನೆಯ ದಶಕದ ಅನಂತರವೂ ಆಗಿ ಹೋಗಿರುವ ಪ್ರಮಾದಗಳನ್ನು ಸರಿಪಡಿಸುವ ಕಡೆಗೆ ಸರ್ಕಾರದ ಗಮನವಿತ್ತೇ ಹೊರತು ಬೇರೆ ಯಾವುದರ ಕಡೆಗೂ ಅಲ್ಲ.

ಲಿಪಿವ್ಯವಸ್ಥೆ: ಕನ್ನಡಕ್ಕೆ ಅದರದ್ದೇ ಆದ ಬಾಹ್ಯಮೂಲದ ಲಿಪಿವ್ಯವಸ್ಥೆಯೊಂದು ಬಳಕೆಯಲ್ಲಿದೆ. ಈ ಲಿಪಿವ್ಯವಸ್ಥೆಯು ಸುಮಾರು ಒಂದೂವರೆ ಸಾವಿರ ವರ್ಷದ ಅವಧಿಯಲ್ಲಿ ಹಲವು ಪರಿವರ್ತನೆಯನ್ನು ಕಂಡಿದೆ. ಎಲ್ಲಕ್ಕಿಂತ ಮುಖ್ಯವಾದುದೆಂದರೆ ಸಂಸ್ಕೃತ ಭಾಷೆಯ ಪದಗಳನ್ನು ಕನ್ನಡದಲ್ಲಿ ಬರೆಯಲು ಅನುಕೂಲವಾಗುವಂತೆ ಕನ್ನಡ ಲಿಪಿವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಕೊಂಡದ್ದು ಮತ್ತು ಕನ್ನಡಕ್ಕೆ ಅನಗತ್ಯವಾದ ಲಿಪಿಚಿಹ್ನೆಗಳನ್ನು ಮೂಲಕನ್ನಡದ ಲಿಪಿವ್ಯವಸ್ಥೆಗೆ ಹೊಂದಿಸಿದ್ದು. ಈ ಕ್ರಮದಿಂದಾಗಿ ಸಂಸ್ಕೃತಪಠ್ಯಗಳನ್ನು ಕನ್ನಡದಲ್ಲಿ ಬರೆಯುವುದು ಸುಲಭವಾಯಿತು. ಆದರೆ ಇದು ದಿನಕಳೆದಂತೆ ಕನ್ನಡದ ಬರವಣಿಗೆಯು ಹೆಚ್ಚು ಹೆಚ್ಚು ಸಂಸ್ಕೃತಮಯವಾಗಲು ಒಂದು ಕಾರಣವನ್ನು ಒದಗಿಸಿಕೊಟ್ಟಂತೆ ತೋರುತ್ತದೆ. ಈ ಕನ್ನಡ ಲಿಪಿವ್ಯವಸ್ಥೆಯನ್ನು ಆಧುನೀಕರಿಸಲು ಕೆಲವು ಪ್ರಯತ್ನಗಳು ನಡೆದವು. ಇಂತಹ ಹಲವು ಪ್ರಯತ್ನಗಳಲ್ಲಿ ಮುಖ್ಯವಾದುದು, ತೆಲುಗು ಕನ್ನಡಗಳಿಗೆ ಏಕಲಿಪಿಯನ್ನು ರೂಪಿಸಬೇಕೆಂದು ಪ್ರಯತ್ನಿಸಿದ್ದು. ಈ ಯೋಜನೆಯ ಉದ್ದೇಶವೇ ನಾದರೂ ಇರಲಿ; ಅದರ ಹಿಂದಿನ ತಾತ್ವಿಕತೆ ನಮಗೆ ಮುಖ್ಯವಾಗಿ ತೋರುತ್ತದೆ. ಕನ್ನಡ ಲಿಪಿಯನ್ನು ಇನ್ನೊಂದು ಭಾಷೆಯ ಬರವಣಿಗೆಗೆ ಬಳಸುವುದರಲ್ಲಿ ಅಥವಾ ಕನ್ನಡ ಭಾಷೆಯ ನಿರೂಪಣೆಯನ್ನು ಇನ್ನೊಂದು ಲಿಪಿಯ ಮುಖಾಂತರ ಮಂಡಿಸುವುದು ಹೊಸ ವಿಚಾರವೇನೂ ಅಲ್ಲ. ಈಗಾಗಲೇ ಸಂಸ್ಕೃತ ಕೃತಿಗಳನ್ನು ಕನ್ನಡ ಲಿಪಿಯಲ್ಲಿ ಮತ್ತು ಕನ್ನಡ ಕೃತಿಗಳನ್ನು ದೇವನಾಗರಿ ಲಿಪಿಯಲ್ಲಿ ಬರೆದ ನಿದರ್ಶನಗಳಿವೆ. ಪ್ರಮಾಣೀಕರಣದ ಪ್ರಯತ್ನದಲ್ಲಿ ಈ ಲಿಪಿ ಸುಧಾರಣೆಯ ತಾರ್ಕಿಕತೆ ಅರ್ಥಹೀನವಾಗಿದೆ.

ಅನಂತರದಲ್ಲಿ ಬಿ.ಎಂ. ಶ್ರೀಕಂಠಯ್ಯನವರು ಕನ್ನಡ ಲಿಪಿಯನ್ನು ಸುಧಾರಿಸಲು ಪ್ರಯತ್ನಿಸಿದರು. ಇದೂ ಏಕೀಕರಣಪೂರ್ವಕಾಲದ ಪ್ರಯತ್ನವೇ. ಬಿ.ಎಂ.ಶ್ರೀಯವರಿಗೆ ಇಂಗ್ಲಿಶ್ ಮತ್ತು ತಮಿಳಿನ ಧ್ವನ್ಯಾತ್ಮಕ ಲಿಪಿಯ ಮಾದರಿ ಅನುಕೂಲಕರವಾಗಿ ಕಂಡಿತು. ಆ ಕಾರಣದಿಂದ ವ್ಯಂಜನ ಮತ್ತು ಸ್ವರಗಳನ್ನು, ವ್ಯಂಜನದ್ವಿತ್ವಗಳನ್ನು ಬೇರ್ಪಡಿಸಿ ಒತ್ತಕ್ಷರಗಳಿಲ್ಲದಂತೆ ಬರೆಯುವ ರೇಖಾತ್ಮಕ ಬರವಣಿಗೆಯನ್ನು ಬಳಸಲು ಸಲಹೆ

ಮಾಡಿದರು. ಆ ಮಾದರಿಯ ಮುದ್ರಣಕ್ಕಾಗಿ ಸಾಹಿತ್ಯ ಪರಿಷತ್ತಿನ ಪ್ರಕಟಣೆಯಾದ 'ಕನ್ನಡಬಾವುಟ' ಎಂಬ ಕವನ ಮತ್ತು ಗೀತೆಗಳ ಸಂಕಲನವನ್ನು ಈ ಪರಾಮರ್ಶಿತ ಲಿಪಿ ವ್ಯವಸ್ಥೆಯಲ್ಲಿ ಮುದ್ರಿಸಿದರು. ಏಕೀಕರಣದ ಹೊತ್ತಿಗೆ ಇವೆಲ್ಲವೂ ಸಂದ ಜೀವನದ ಮಾದರಿಗಳಾಗಿ ಬಿಟ್ಟವು. ಈ ಸೋಲಿಗೆ ಬೇರೆ ಕಾರಣಗಳಿವೆ. ತಾಂತ್ರಿಕ ಬದಲಾವಣೆಗಳ ವೇಗ ಹೆಚ್ಚಾಗಿ ಮೇಲೆ ಹೇಳಿದ ಬದಲಾವಣೆಗಳನ್ನು ನಿಷ್ಕ್ರಿಯಗೊಳಿಸಿದವು. ಕನ್ನಡದ ಲಿಪಿ ಸುಧಾರಣೆಯು ಮುಂದೆಯೂ ಕೂಡಾ ಬೇರೊಂದು ರೀತಿಯಲ್ಲಿ ಮುಂದುವರೆದಿದೆ. ಅದರಂತೆ ಹೊಸ ಮಾದರಿಯ ಅಕ್ಷರವಿನ್ಯಾಸಗಳನ್ನು ರೂಪಿಸುವ ಪ್ರಯತ್ನಗಳು ನಡೆದಿವೆ. ಮುಖ್ಯವಾಗಿ ಲಿಪಿವ್ಯವಸ್ಥೆಯ ಸುಧಾರಣೆಯು ಬರೆಯವವರನ್ನು ಉದ್ದೇಶಿಸಿಲ್ಲ; ಓದುವವರನ್ನು ಗಮನಿಸುತ್ತಿದೆ. ಬರೆಯುವವರು ಆಪ್ತಸಂಪರ್ಕಗಳಲ್ಲಿ ಹೊರತು ಪಡಿಸಿದರೆ ಬಹುಮಟ್ಟಿಗೆ ತಮ್ಮ ಬರವಣಿಗೆಯನ್ನು ಸಾರ್ವಜನಿಕ ಬಳಕೆಗಾಗಿ ಒಪ್ಪಿಸುವವರು. ಹಾಗೆ ಮಾಡುವಾಗ ಕೈ ಬರಹದ ರೂಪದಲ್ಲಿ ಯಾರೂ ಒದಗಿಸುವುದಿಲ್ಲ. ಮುದ್ರಿತ ರೂಪಕ್ಕೆ ಪರಿವರ್ತಿಸುತ್ತಾರೆ. ಆದ್ದರಿಂದ ಇಲ್ಲಿಯೂ ಲಿಪಿ ಸುಧಾರಣೆ ಓದುಗರನ್ನು ಗಮನದಲ್ಲಿ ಇರಿಸಿಕೊಂಡಿದೆ ಎನ್ನಬಹುದು.

ಓದುಗರ ಕಣ್ಣೋದಿಗೆ ನೆರವಾಗುವಂತೆ ಕನ್ನಡ ಅಕ್ಷರಗಳ ವಿನ್ಯಾಸದಲ್ಲಿ ಚಿಕ್ಕ ಚಿಕ್ಕ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. 'ಪ'ಕಾರ ಮತ್ತು 'ಮ'ಕಾರಳಿಗೆ 'ಒ' ಅಥವಾ 'ಓ' ಸ್ವರಗಳು ಸೇರಿದಾಗ ಕಾಗುಣಿತ ಚಿಹ್ನೆಯನ್ನು ಅನಿವಾರ್ಯವಾಗಿ ಆ ಎರಡು ಲಿಪಿಗಳ ತಳಭಾಗದಿಂದ ಆರಂಭಿಸುವ ಪದ್ಧತಿ ಇತ್ತು. ಈಗ ಅದನ್ನು 'ಪ' ಕಾರದಿಂದ ಬದಲಿಸಿ 'ವ'ಕಾರಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ. ಹೀಗೆಯೇ ಅಕ್ಷರಗಳ ಗೆರೆಗಳು ಆರಂಭಗೊಳ್ಳುವ ಸ್ಥಾನ, ಗೆರೆಗಳು ಚಲಿಸುವ ದಿಕ್ಕು, ಕೊನೆಗೊಳ್ಳಬೇಕಾದ ಸ್ಥಾನ, ಗೆರೆಗಳ ಗಾತ್ರ, ಒತ್ತಕ್ಷರಗಳು ಮತ್ತು ಮುಖ್ಯ ಅಕ್ಷರಗಳ ಗಾತ್ರದ ಅನುಪಾತ ಇವೇ ಮುಂತಾದ ಹತ್ತಾರು ತಾಂತ್ರಿಕ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಈಗ ಸುಧಾರಣೆಗಳನ್ನು ಜಾರಿಗೆ ಕೊಡಲಾಗಿದೆ.

ಇದಲ್ಲದೆ ಅಕ್ಷರಗಳ ಜೋಡಣೆಯಿಂದ ನಿರ್ಮಾಣವಾಗುವ ಪದಗಳ ನಡುವಣ ತೆರಪು, ಓದುವ ಸಾಲುಗಳ ಉದ್ದ, ಪುಟದಲ್ಲಿ ಇರಬಹುದಾದ ಸಾಲುಗಳು, ಅಕ್ಷರಗಳ ಗಾತ್ರ ಈ ಎಲ್ಲ ಸಂಗತಿಗಳೂ ಈಗ ತಂತ್ರಜ್ಞಾನಕ್ಕೆ ಸಂಬಂಧಿಸಿವೆ. ಮತ್ತು ಹಲವು ಆಯ್ಕೆಗಳಲ್ಲಿ ಸೂಕ್ತವಾದುದನ್ನು ಅಳವಡಿಸಿಕೊಳ್ಳುವ ಅವಕಾಶವೂ ಈಗ ಲಭ್ಯವಿದೆ. ಪತ್ರಿಕೆಗಳ ಓದಿಗೆ ಅನುಕೂಲಕರವಾದ ರೀತಿಯಲ್ಲಿ ಈ ಎಲ್ಲ ಅಂಶಗಳನ್ನು ಕಳೆದ ಒಂದೆರಡು ದಶಕಗಳಲ್ಲಿ ಪ್ರಯೋಗಗಳಿಂದ ಆಯ್ಕೆಗಳನ್ನು ಕಂಡುಕೊಂಡು, ಅನಂತರ ಸ್ಥಿರೀಕರಿಸಲಾಗಿದೆ. ಮತ್ತೆ ಸ್ಪಷ್ಟಪಡಿಸಲೇಬೇಕಾದ ಸಂಗತಿ ಎಂದರೆ ಇದು ಬರಹದ ಲಿಪಿಯನ್ನು ಕುರಿತ ಪರಿಷ್ಕಾರಗಳಲ್ಲ. ಕಣ್ಣಿನ ಮೂಲಕ ಓದುವವರ ಸಮಸ್ಯೆಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ.

ಪ್ರಮಾಣೀಕರಣದ ಮುಂದಿನ ಕ್ಷೇತ್ರವೆಂದರೆ ಪದರೂಪಗಳನ್ನು ಮತ್ತು ಪದಾರ್ಥಗಳನ್ನು ಖಚಿತಪಡಿಸುವುದು. ಈ ನಿಟ್ಟಿನಲ್ಲಿ ಕನ್ನಡದಲ್ಲಿ ಅಗಾಧ ಪ್ರಯತ್ನಗಳು

ಕಳೆದ ಐದು ದಶಕಗಳಲ್ಲಿ ಆಗಿವೆ. ಆದರೆ ಆ ಮಾಹಿತಿ ಮತ್ತು ಪರಿಹಾರ ಸುಲಭವಾಗಿ ಎಲ್ಲರಿಗೂ ಲಭ್ಯವಾಗುವಂತಿಲ್ಲ. ನಾವೀಗ ಮೊದಲು ಗಮನಿಸಿದ ಕನ್ನಡ-ಕನ್ನಡ ನಿಘಂಟಿನ ಸ್ವರೂಪವನ್ನು ಗಮನಿಸೋಣ. ಇದು ಎಂಟು ಬೃಹತ್ ಸಂಪುಟಗಳಲ್ಲಿ ಸುಮಾರು ಐದರಿಂದ ಆರು ದಶಕಗಳ ಪರಿಶ್ರಮದಿಂದ ಸಿದ್ಧಗೊಂಡ ನಿಘಂಟು. ಈ ನಿಘಂಟಿನಲ್ಲಿ ಮುಖ್ಯ ನಮೂದು, ಅದರ ಪರ್ಯಾಯ, ಬರವಣಿಗೆಯ ರೂಪಗಳು, ವ್ಯಾಕರಣ ವರ್ಗ, ಅನಂತರ ಪದಾರ್ಥಗಳು, ಸಮರ್ಥನೆಗಳಾಗಿ ಉಲ್ಲೇಖಗಳು, ಅಗತ್ಯವಿದ್ದಾಗ ಸಾಧಿತರೂಪಗಳು ಇವೆಲ್ಲವನ್ನೂ ನೀಡಿ ಕೊನೆಗೆ ಆ ನಮೂದಿನ ಪದರಚನೆಯ ಸಾಧ್ಯತೆಯನ್ನು ಮತ್ತು ಆಕರವನ್ನು ಸೂಚಿಸಲಾಗಿದೆ. ಇದು ವೈಜ್ಞಾನಿಕ ತಳಹದಿಯ ಮೇಲೆ ನಿರ್ಮಾಣಗೊಂಡ ಚಾರಿತ್ರಿಕ ನಿಘಂಟು. ಈ ನಿಘಂಟಿನಲ್ಲಿ ನಮೂದುಗಳನ್ನು ಆಯ್ಕೆ ಮಾಡುವಾಗ ಬರಹದ ದಾಖಲೆಗಳನ್ನು ಮುಖ್ಯ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಆ ನಿಟ್ಟಿನ ಶ್ರಮ ತುಂಬ ಹೆಚ್ಚಿದೆ. ಆದರೆ ಇಲ್ಲಿ ಆಡುಮಾತಿನ ರೂಪಗಳು ದಾಖಲೆಯಾಗಿಲ್ಲ. ಮಾತಿನವರಸೆಗಳು ಕೂಡ ಹೀಗೆಯೇ ಹೊರಗೆ ಉಳಿದಿವೆ.ಅವಕ್ಕೆ ಲಿಖಿತ ದಾಖಲಾತಿ ಇಲ್ಲದಿದ್ದರೆ ಈ ನಿಘಂಟಿನಲ್ಲಿ ಸ್ಥಾನ ಕಳೆದುಕೊಳ್ಳುತ್ತವೆ. ಅಲ್ಲದೆ ಒಂದು ಅಂದಾಜಿನ ಪ್ರಕಾರ ಈ ನಿಘಂಟು ನಮೂದುಗಳಲ್ಲಿ ಪ್ರತಿಶತ ಐವತ್ತೈದಕ್ಕೂ ಮಿಕ್ಕಿ ಸಂಸ್ಕೃತಮೂಲದ ಪದಗಳನ್ನು ನೀಡಲಾಗಿದೆ. ಈ ನಿಘಂಟಿನ ರಚನೆಯ ಲಕ್ಷಣಗಳನ್ನು ನೋಡಿದಾಗ ಇದು ಪಂಡಿತರಿಂದ, ಪಂಡಿತರಿಗಾಗಿ ರೂಪುಗೊಂಡ ದಾಖಲಾತಿ ಎನ್ನಿಸುತ್ತದೆ. ಪ್ರಮಾಣೀಕರಣದ ಪ್ರಯತ್ನಗಳು ಇಲ್ಲವೆಂದಲ್ಲ. ಆದರೆ ಅದರ ಫಲಿತಾಂಶ ಮಾತ್ರ ಸುಲಭಗ್ರಾಹ್ಯವಲ್ಲ. ಈ ನಿಘಂಟಿನ ಸ್ವರೂಪ ಮತ್ತು ಗಾತ್ರದಿಂದಾಗಿ ದಿನದಿನವೂ ಕನ್ನಡವನ್ನು ವಿವಿಧ ಉದ್ದೇಶಗಳಿಗಾಗಿ ಬರೆಯುತ್ತಿರುವವರಿಗೆ ಸಿಗುವ ನೆರವು ತುಂಬಾ ಕಡಿಮೆ. ಸಂಪುಟಗಳ ಗಾತ್ರ, ವಿನ್ಯಾಸ, ಮತ್ತು ದುರ್ಲಭತೆ ಈ ಕಾರಣಗಳಿಂದಾಗಿ ಒಂದು ಅಪೂರ್ವ ದಾಖಲಾತಿಯು ಕೂಡಾ ಜನದೂರವಾಗಿ ಉಳಿದು ಬಿಟ್ಟಿದೆ.

ಕನ್ನಡ-ಕನ್ನಡ ನಿಘಂಟಿನ ಪ್ರಯತ್ನ ಪ್ರಮಾಣಕನ್ನಡದ ಚಾರಿತ್ರಿಕ ಬೇರುಗಳನ್ನು ಗುರುತಿಸುವುದೇ ಆಗಿದೆ ಎಂದು ಒಪ್ಪಿದರೆ, ಇನ್ನೊಂದು ಸಮಸ್ಯೆಯನ್ನು ನಾವು ಎದುರಿಸಬೇಕಾಗುತ್ತದೆ. ಅದೆಂದರೆ ಈ ಪ್ರಮಾಣಕನ್ನಡದ ಚಾರಿತ್ರಿಕ ವಿಕಾಸವನ್ನು ಗುರುತಿಸಲು ಅನುಸರಿಸಿದ ವಿಧಾನ ಒಂದು ತಾತ್ವಿಕತೆಯನ್ನು ಬಿಂಬಿಸುತ್ತದೆ. ಈ ತಾತ್ವಿಕತೆಯು ಈ ನಿಘಂಟಿನ ಕೇಂದ್ರವಾಗಿದೆ. ಯಾರೂ ಅದನ್ನು ಬಾಯಿಬಿಟ್ಟು ಲಿಖಿತವಾಗಿ ಸ್ಪಷ್ಟೀಕರಿಸದಿದ್ದರೂ ಕನ್ನಡ ಲಿಖಿತಪರಂಪರೆಯ ಪರವಾಗಿ ನಿಲುವು ತಳೆದ ಈ ನಿಘಂಟು ಭಾಷೆಯ ಪರಿವರ್ತನಾಶೀಲತೆಯನ್ನು ಮತ್ತು ಅದರ ಆಡುಮಾತಿನ ನೆಲೆಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ನಿರಾಕರಿಸುತ್ತಿದೆ.ಕನ್ನಡ ನಿಘಂಟಿನ ಚಾರಿತ್ರಿಕ ದಾಖಲಾತಿಯು ಪ್ರಯತ್ನದಲ್ಲಿ ಗೊತ್ತಿಲ್ಲದಂತೆ ಅಡಕಗೊಂಡಿರುವ ಕೆಲವು ವಿನ್ಯಾಸಗಳಿವೆ.ಇಲ್ಲಿ ದಾಖಲಾದ ಕೆಲವು ಪದ, ಪದರಚನೆಗಳಿಗೆ ೧೯೦೦ಕ್ಕಿಂತ ಹಿಂದಿನ ಲಿಖಿತದಾಖಲೆಗಳ ಪ್ರಯೋಗಮಾನ್ಯತೆ ಇಲ್ಲ. ಒಂದುವೇಳೆ ಇದ್ದರೂ ಅರ್ಥದ ವಿನ್ಯಾಸದಲ್ಲಿ ಬದಲಾವಣೆಗಳಾಗಿವೆ. ಹೀಗಾಗಲು ಕಾರಣಗಳೇನು? ಈ ಪದಗಳು

ಇಪ್ಪತ್ತನೆಯ ಶತಮಾನದಲ್ಲೇ ಮೊದಲ ಪ್ರಯೋಗ ಕಂಡಿವೆ ಎಂದರೆ ಅವುಗಳ ಮೂಲ ಪ್ರಯೋಗ ಆಡುಮಾತಿನಲ್ಲಿರಬಹುದೇ? ಈ ಎಲ್ಲ ಪ್ರಶ್ನೆಗಳೂ ಅಧ್ಯಯನಯೋಗ್ಯವಾಗಿವೆ.

ಇದು ನಾವು ಈಗಾಗಲೇ ಬೇರೆ ಬೇರೆ ಸಂದರ್ಭದಲ್ಲಿ ಗುರುತಿಸಿರುವಂತೆ ಕಳೆದ ಐದು ದಶಕಗಳಲ್ಲಿ ನಡೆದ ಕನ್ನಡಪ್ರಜ್ಞೆಯ ಪಲ್ಲಟದ ಗ್ರಹಿಕೆಗೆ ಹೊಂದಿಕೆಯಾಗದ ಸಂಗತಿಯಾಗಿದೆ. ಈ ಕಾರಣದಿಂದಾಗಿ ಈ ನಿಘಂಟಿನ ಬಳಕೆ ಕೇವಲ ಪದಾರ್ಥ ಗ್ರಹಿಕೆಗೆ ಸೀಮಿತಗೊಂಡಿದೆಯೇ ಹೊರತು, ಕನ್ನಡದ ಪ್ರಮಾಣರೂಪವನ್ನು ಕಂಡುಕೊಳ್ಳಲು ಇದು ನೆರವಾಗುವುದಿಲ್ಲ,

ಕನ್ನಡ-ಕನ್ನಡ ನಿಘಂಟಿನ ನೆರವಿನಿಂದ ಕನ್ನಡದ ಪ್ರಮಾಣರೂಪಕ್ಕೆ ಒಂದು ಪರಾಮರ್ಶನ ಬಿಂದುವನ್ನು ಒದಗಿಸುವ ಪ್ರಯತ್ನ ವಿಫಲಗೊಂಡಿದ್ದು ಕಳೆದ ಐದು ದಶಕಗಳ ಒಂದು ದೊಡ್ಡ ಸೋಲು ಎನ್ನಬೇಕು. ಅದು ಹೆಮ್ಮೆಯ ಪ್ರತೀಕವಾಯಿತೇ ಹೊರತು ಭಾಷೆಯ ಪ್ರಕ್ರಿಯಾತ್ಮಕ ನೆಲೆಯಲ್ಲಿ ಭಾಗಿಯಾಗಲಿಲ್ಲ. ಕನ್ನಡವನ್ನು ವಿವಿಧ ಹಂತಗಳಲ್ಲಿ ಬೋಧಿಸುವ ಅಧ್ಯಾಪಕರು ಕೂಡ ಈ ನಿಘಂಟನ್ನು ಬಳಸುವುದಿಲ್ಲ. ಹೀಗೆ ಬಳಸದಿರಲು ಅದು ಸುಲಭವಾಗಿ ಲಭ್ಯವಾಗುವುದಿಲ್ಲ ಎಂಬ ಕಾರಣ ಮುಖ್ಯವಲ್ಲ. ಇಂದಿನ ಕನ್ನಡದ ಸಮಸ್ಯೆಗಳಿಗೆ ಅಲ್ಲಿ ಉತ್ತರಗಳು ಲಭಿಸುವುದಿಲ್ಲ ಎನ್ನುವುದೇ ನಿಜವಾದ ಕಾರಣ.

ಪ್ರಮಾಣೀಕರಣಕ್ಕಾಗಿ ಸರ್ಕಾರವು ನಡೆಸಿದ ಇನ್ನೊಂದು ಮುಖ್ಯ ಪ್ರಯತ್ನವೆಂದರೆ ಆಡಳಿತ ಕನ್ನಡವನ್ನು ನಿಗದಿಗೊಳಿಸಲು ಯತ್ನಿಸಿದ್ದು. ಅದಕ್ಕಾಗಿ ಕೈಪಿಡಿಯೊಂದನ್ನು ರಚಿಸಲು ಸಮಿತಿಯನ್ನು ನೇಮಿಸಿತು. ಕಛೇರಿ ಕೈಪಿಡಿ ಎಂಬ ಪುಸ್ತಕವನ್ನು ಈ ಸಮಿತಿ ಸಿದ್ಧಪಡಿಸಿದೆ. ಕೊನೆಯ ಪಕ್ಷ ಒಂದು ಹಂತದವರೆಗಿನ ಆಡಳಿತದಲ್ಲಿ ಕನ್ನಡವನ್ನು ಬಳಸಲು ನೆರವಾಗುವ ಸಾಮಗ್ರಿಯನ್ನು ಈ ಕೈಪಿಡಿ ಹೊಂದಿದೆ. ಅಗತ್ಯವಾದ ನಮೂನೆಗಳು, ಮಾದರಿಗಳು, ಸೂಚನೆಗಳು,ಪಾರಿಭಾಷಿಕ ಪದಗಳು ಎಲ್ಲವೂ ಈ ಕೈಪಿಡಿಯಲ್ಲಿವೆ. ಪಾರಿಭಾಷಿಕ ಪದಗಳನ್ನು ರೂಪಿಸುವಾಗ ಬಹುಮಟ್ಟಿಗೆ ಸಂಸ್ಕೃತದ ಪದಕೋಶದ ನೆರವನ್ನು ಪಡೆಯಲಾಗಿದೆ. ಅದೇ ಸುಮಾರಿನಲ್ಲಿ ಕೇಂದ್ರ ಸರ್ಕಾರವು ಪಾರಿಭಾಷಿಕ ಪದಗಳ ಕೋಶವೊಂದನ್ನು ರೂಪಿಸಲು ಡಾ ರಘುವೀರ ಅವರ ನೇತೃತ್ವದ ಸಮಿತಿಯೊಂದನ್ನು ನೇಮಿಸಿತ್ತು. ಆ ಸಮಿತಿಯು ಅತಿಯಾದ ಸಂಸ್ಕೃತ ವ್ಯಾಮೋಹವನ್ನು ಪ್ರಕಟಿಸಿದ್ದು ಈಗ ಚಾರಿತ್ರಿಕ ವಿಷಯವಾಗಿದೆ. ಕನ್ನಡದ ಮಟ್ಟಿಗೆ ಆಡಳಿತದಲ್ಲಿ ಸಮಸ್ಯೆಗೆ ಬೇರೊಂದು ಮುಖವಿತ್ತು. ಆ ಹೊತ್ತಿಗೆ ಆಡಳಿತದಲ್ಲಿ ಇಂಗ್ಲಿಶ್ ಬೇರೂರಲು ಅವಕಾಶ ದೊರಕಿತ್ತಾದರೂ ಆ ಪೂರ್ವದಲ್ಲಿ ಆಡಳಿತ ನಡೆಸಿದ ಉರ್ದು ಭಾಷೆಯ ಪ್ರಭಾವ ಇನ್ನೂ ದಟ್ಟವಾಗಿಯೇ ಇತ್ತು. ಈ ಹಿನ್ನೆಲೆಯಿಂದ ಸೂಕ್ತ ಮಾದರಿಗಳನ್ನು ಆಯ್ದು ಕೊಳ್ಳಬಹುದಾಗಿತ್ತು. ಎಷ್ಟೋ ಕಡೆಗಳಲ್ಲಿ ಆ ಪದಗಳು ಇನ್ನೂ ಉಳಿದಿವೆ. ಆದರೂ ಆ ಪದಗಳ ಬದಲು ಸಂಸ್ಕೃತ ಪದಗಳನ್ನು ಬಳಸುವ ಅಪೇಕ್ಷೆಯು ಆಡಳಿತದ ಒಂದು ಭಾಗಕ್ಕೆ ಇನ್ನೂ ಇದ್ದಂತಿದೆ. ಕಛೇರಿ

ಕೈಪಿಡಿಯು ರೂಪಿಸಿಕೊಟ್ಟ ಮಾದರಿಯನ್ನು ಬಳಸಲು ಇದ್ದ ಅಡ್ಡಿಗಳು ಹಲವು. ಅದರ ಪಾರಿಭಾಷಿಕ ಪದಗಳು ಕಠಿಣವಾಗಿವೆ ಎಂಬ ನೆಪವನ್ನು ಮುಂದಿಡಲಾಯಿತು. ಈ ಕಾರಣದಿಂದ ಈ ಪದಗಳನ್ನು ಸರಳೀಕರಿಸುವ ಪ್ರಯತ್ನಕ್ಕಾಗಿ ಮತ್ತೊಂದು ಸಮಿತಿಯನ್ನು ಸರ್ಕಾರವೇ ರಚಿಸಿದೆ. ಈ ಸಮಿತಿಯ ಸಲಹೆಗಳು ಎಷ್ಟು ಪ್ರಯೋಜನಕಾರಿಯಾಗಿವೆ ಎಂಬುದನ್ನು ತಿಳಿಯಲು ಅವಕಾಶಗಳೇ ಇಲ್ಲವಾಗಿವೆ. ಏಕೆಂದರೆ ಜೊತೆ ಜೊತೆಯಲ್ಲಿ ಪ್ರತಿಯೊಂದು ಇಲಾಖೆಗೂ ಅಗತ್ಯವಾದ ಪಾರಿಭಾಷಿಕ ಪದಗಳನ್ನು ರೂಪಿಸುವ ಪ್ರಯತ್ನಗಳು ನಡೆಯುತ್ತಾ ಬಂದಿವೆ. ಈ ಎಲ್ಲಾ ಪ್ರಯತ್ನಗಳೂ ಕನ್ನಡವನ್ನು ಆಡಳಿತದಲ್ಲಿ ಬಳಸಲು ನೆರವಾಗುವ ಉದ್ದೇಶವನ್ನು ಹೊಂದಿದ್ದರೂ ಪ್ರಮಾಣೀಕೃತ ರೂಪವೊಂದನ್ನು ನಿಗದಿಪಡಿಸುವಲ್ಲಿ ಸಾಕಷ್ಟು ಯಶಸ್ಸು ಪಡೆದಿಲ್ಲ. ಆದರೆ ಇದನ್ನು ಒಂದು ಕೊರತೆ ಎಂದು ತಿಳಿಯಬೇಕೇ? ಇದು ಬೇರೆಯೇ ಮಾತು. ಜಾಗತಿಕ ಸಂದರ್ಭಗಳಲ್ಲಿ ಎರಡು ವಿಭಿನ್ನ ಮಾದರಿಗಳು ಚಲಾವಣೆಯಲ್ಲಿವೆ. ಪ್ರಮಾಣರೂಪವನ್ನು ಸಿದ್ದಪಡಿಸಿ ಅದಕ್ಕೆ ಸಂಪೂರ್ಣವಾಗಿ ನಿಷ್ಠವಾಗುವುದು ಒಂದು ಮಾದರಿಯಾದರೆ ಒಂದು ಚೌಕಟ್ಟನ್ನು ಸಡಿಲವಾಗಿ ರೂಪಿಸಿಕೊಂಡು ಅಂದಂದಿನ ಸಮಸ್ಯೆಗಳಿಗೆ ಅಗತ್ಯವಾದ ಪರಿಹಾರಗಳನ್ನು ಕಂಡುಕೊಳ್ಳುವ ಮಾದರಿ ಇನ್ನೊಂದು.ಈ ಎರಡನೆಯ ಮಾದರಿ ಪ್ರಮಾಣಭಾಷೆಯನ್ನು ಒಂದು ಪ್ರಕ್ರಿಯೆ ಎಂದು ತಿಳಿಯುತ್ತದೆ.

ಕನ್ನಡ ಈ ಎರಡು ಮಾದರಿಗಳನ್ನೂ ಯಥಾವತ್ತಾಗಿ ಅನುಸರಿಸುವುದು ಕಷ್ಟ. ಏಕೆಂದರೆ ಬದಲಾದ ಸನ್ನಿವೇಶದಲ್ಲಿ ಇಂಗ್ಲಿಶ್ ಜಾಗತಿಕ ಪರಾಮರ್ಶನ ನೆಲೆಯಲ್ಲಿ ನಿಂತಿದೆ. ಅಲ್ಲದೆ ಒಕ್ಕೂಟ ಆಡಳಿತದಲ್ಲಿ ರಾಜ್ಯಸರ್ಕಾರ ನಿರಂತರವಾಗಿ ಕೇಂದ್ರಸರ್ಕಾರದೊಡನೆ ಸಂಪರ್ಕದಲ್ಲಿ ಇರಬೇಕಾಗುತ್ತದೆ. ಆದ್ದರಿಂದ ಪಾರಿಭಾಷಿಕ ಪದಗಳ ಆಯ್ಕೆಯ ವಿಷಯದಲ್ಲಿ ಕನ್ನಡಕ್ಕೆ ಸ್ವಾತಂತ್ರ್ಯ ಕಡಿಮೆ. ಹೆಚ್ಚೆಂದರೆ ಒಂದು ಸೂಕ್ತ ಮಾದರಿಯ ಅನುವಾದವನ್ನು ಮಾತ್ರ ಮಾಡಿಕೊಳ್ಳಬೇಕಾಗುತ್ತದೆ. ಹಾಗೆ ನೋಡಿದರೆ ಕರ್ನಾಟಕಸರ್ಕಾರ ರಚಿಸಿರುವ ಭಾಷಾಂತರ ನಿರ್ದೇಶನಾಲಯ ನಿರಂತರವಾಗಿ ಇಂತಹ ಅನುವಾದಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಅನುವಾದದ ಪ್ರಕ್ರಿಯೆಯಲ್ಲೇ ಒಂದು ಪಾರಿಭಾಷಿಕ ಪದಕೋಶವನ್ನು ರೂಪಿಸಿ ಕೊಂಡಿದೆ. ಅದರಲ್ಲಿ ನಿಯತತೆಯನ್ನು ಕಾಯ್ದುಕೊಳ್ಳುವುದೇ ಪ್ರಮಾಣಕನ್ನಡದ ನಿರ್ಮಾಣ ಎನ್ನಬೇಕಾಗಿದೆ. ಈ ಸಮಸ್ಯೆಯು ಆಡಳಿತಾಂಗಕ್ಕಿಂತ ನ್ಯಾಯಾಂಗವನ್ನು ಬಲವಾಗಿ ಕಾಡುತ್ತದೆ. ಏಕೆಂದರೆ ಅಲ್ಲಿ ಪದನಿಖರತೆ ಅತ್ಯಗತ್ಯ. ವ್ಯಾಖ್ಯಾನಗಳನ್ನೇ ಅವಲಂಬಿಸಿ ಕಾನೂನನ್ನು ಅನ್ವಯಿಸುವ ಪ್ರಯತ್ನ ಮುಖ್ಯವಾಗುವುದರಿಂದ ಅಲ್ಲಿ ನಿಯತವಾದ ಪದಪ್ರಯೋಗ ದೈನಂದಿನ ಅಗತ್ಯವಾಗುತ್ತದೆ. ಮೇಲೆ ಹೇಳಿದಂತೆ ಅನುವಾದದ ನೆರವಿನಿಂದ ಈ ಸಮಸ್ಯೆಯನ್ನು ಸಾಕಷ್ಟು ಪ್ರಮಾಣದಲ್ಲಿ ನಿವಾರಿಸಿಕೊಳ್ಳಲಾಗಿದೆ.

ಪ್ರಮಾಣಕನ್ನಡದ ನೆಲೆಗಳು ಲಿಖಿತರೂಪದಲ್ಲಿ ಹೆಚ್ಚಾಗಿ ಪ್ರವೃತ್ತವಾಗುವುದು ಮಾತಿನ ಸಾರ್ವಜನಿಕ ನಿರೂಪಣೆಗಳಲ್ಲಿ ಮಾತ್ರ. ಅಲ್ಲಿ ಕೂಡ ಪದಾರ್ಥಕ್ಕಿಂತ ಪದಕ್ಕೆ ಹೆಚ್ಚಿನ ಮನ್ನಣೆ. ಉದಾ.ಗೆ ನಮ್ಮ ಮಂತ್ರಿಗಳು ಪ್ರಮಾಣವಚನ ಸ್ವೀಕರಿಸುವ ಸಂದರ್ಭದಲ್ಲಿ

ಓದುವ ವಾಕ್ಯಗುಚ್ಚವನ್ನು ಗಮನಿಸಬಹುದು. ಅದನ್ನು ಎಂದರೆ ಅದರಲ್ಲಿರುವ ಪದಗಳನ್ನು ಅವುಗಳ ಅನುಕ್ರಮುವನ್ನು ಯಾರೂ ಬದಲಾಯಿಸಲಾರರು. ಬದಲಾಯಿಸಲು ಅವಕಾಶವಿಲ್ಲ. ಅದನ್ನು ಇರುವಂತೆಯೇ ಪೂರ್ಣವಾಗಿ ಓದಿ ಹೇಳಬೇಕು. ಅಂದರೆ ಭಾಷೆಯ ಪ್ರಮಾಣಿತ ರೂಪದ ಒಂದು ಅತಿರೇಕದಲ್ಲಿ ಶಬ್ದ ಪ್ರಧಾನವಾಗುತ್ತದೆ, ಅರ್ಥ ಹಿಂದಕ್ಕೆ ಸರಿಯುತ್ತದೆ ಅಥವಾ ಪೂರ್ಣವಾಗಿ ಅಮುಖ್ಯವಾಗುತ್ತದೆ. ಕನ್ನಡದ ಕೆಲವು ಮಾದರಿಗಳನ್ನು ಬಿಟ್ಟರೆ ಇಷ್ಟು ಪ್ರಮಾಣದ ಶಬ್ದ ಪ್ರಾಧಾನ್ಯವನ್ನು ಗಳಿಸಿಕೊಳ್ಳುವುದು ಸಾಧ್ಯವೇ ಎನ್ನುವು ದೊಂದು ಪ್ರಶ್ನೆ. ಎಷ್ಟೋ ವೇಳೆಗಳಲ್ಲಿ ಪ್ರಮಾಣರೂಪದ ರಚನೆಗಳನ್ನು ಸರಳಗೊಳಿಸಿ ಹೇಳಲು ಸಾಧ್ಯವಿದ್ದರೂ ಹಾಗೆ ಹೇಳಲು ಅವಕಾಶ ನೀಡುವುದಿಲ್ಲ. ಅವುಗಳು ಯಾವ ರಾಚನಿಕಬಂಧವನ್ನು ಹೊಂದಿರುತ್ತವೋ ಅದನ್ನು ಬದಲಿಸಿದರೆ ಪ್ರಮಾಣಬದ್ಧತೆಗೆ ಕುಂದು ಬರುವುದೆಂದು ತಿಳಿಯಲಾಗುತ್ತದೆ. ಕಳೆದ ಐವತ್ತು ವರ್ಷಗಳಲ್ಲಿ ಈ ನೆಲೆಗೆ ಕನ್ನಡವನ್ನು ಒಯ್ಯುವ ಪ್ರಯತ್ನಗಳು ಸಾಕಷ್ಟು ಪ್ರಮಾಣದಲ್ಲಿ ನಡೆದಿವೆ. ಆದರೂ ಒಟ್ಟು ಚಾರಿತ್ರಿಕ ಸನ್ನಿವೇಶದಿಂದಾಗಿ ಕನ್ನಡ ಭಾಷೆ ಇಂತಹ ಪಾತ್ರವನ್ನು ವಹಿಸುವುದು ಅಥವಾ ಪೂರ್ಣಪ್ರಮಾಣದಲ್ಲಿ ನಿರ್ವಹಿಸುವುದು ಅಸಾಧ್ಯವೇ ಆಗಬಹುದು.

ಬರಹದ ಕನ್ನಡದ ಪ್ರಮಾಣೀಕರಣ ಬೇರೆ ಬೇರೆ ವಲಯಗಳಲ್ಲಿ ತಂತಾನೇ ನಡೆಯುತ್ತಲೇ ಇದೆ. ಮೊದಲೇ ಹೇಳಿದಂತೆ ಇಲ್ಲೆಲ್ಲ ತಂತ್ರಜ್ಞಾನದ ಪ್ರಭಾವ ದಟ್ಟವಾಗಿ ಕಾಣಿಸಿಕೊಳ್ಳುತ್ತಿದೆ. ನಮ್ಮ ಸಮಾರಂಭಗಳ ಆಹ್ವಾನ ಪತ್ರಿಕೆಗಳನ್ನು ನೋಡಿದರೆ ಕೆಲವು ಸಂಗತಿಗಳು ಗೊತ್ತಾಗುತ್ತವೆ. ಆ ಪತ್ರಿಕೆಗಳ ವಿನ್ಯಾಸದಿಂದ ಹಿಡಿದು ಅಲ್ಲಿ ಬಳಕೆಯಾಗುವ ಪದಗಳವರೆಗೆ ಪ್ರತಿಯೊಂದೂ ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಇರುತ್ತದೆ. ಅವುಗಳಲ್ಲಿ ಕನಿಷ್ಠ ವಿವರಗಳನ್ನು ಬದಲಿಸಿ ಮತ್ತೊಂದು ಆಹ್ವಾನವನ್ನು ಸಿದ್ಧಪಡಿಸಬಹುದು. ಇಂತಹ ಸಾಧ್ಯತೆಗಳು ನಮಗೆ ಹಲವು ಕಡೆಗಳಲ್ಲಿ ಕಾಣಸಿಗುತ್ತವೆ. ನಾಮಫಲಕಗಳು, ಸಾರ್ವಜನಿಕ ಪ್ರದೇಶದ ಸೂಚನೆಗಳು ವಿವಿಧ ಸನ್ನಿವೇಶಗಳಲ್ಲಿ ಪ್ರಕಟವಾಗುವ ಸೂಚನಾಪತ್ರಗಳು, ಹೀಗೆ ಹಲವು ಹತ್ತು ಕಡೆಗಳಲ್ಲಿ ಯಾವ ಯಾವ ಮಾದರಿಯನ್ನು ಬಳಸಬೇಕು; ಅಲ್ಲಿ ಇರಬೇಕಾದ ಕನ್ನಡದ ಸ್ವರೂಪವೇನು ಇವೆಲ್ಲವೂ ಖಚಿತಗೊಂಡಿವೆ. ಅದನ್ನು ಮತ್ತೆಮತ್ತೆ ಆವೃತ್ತಗೊಳಿಸುವಾಗ ತಜ್ಞತೆಯ ಅಗತ್ಯ ಬರುವುದಿಲ್ಲ. ಒಂದು ಭಾಷೆಯ ಪ್ರಮಾಣರೂಪವನ್ನು ರೂಪಿಸುವುದೆಂದರೆ ಈ ತಜ್ಞತೆಯ ಪಾತ್ರವನ್ನು ಕುಗ್ಗಿಸಿ ಯಾರು ಬೇಕಾದರೂ ಬಳಸಬಹುದಾದ ಅಚ್ಚನ್ನು ಸಿದ್ಧಪಡಿಸುವುದೇ ಆಗಿದೆ. ಯಾಂತ್ರಿಕ ಉತ್ಪಾದನಾವ್ಯವಸ್ಥೆಯ ಅನುಕರಣೆಯಿಂದ ಈ ಪ್ರಮಾಣ ಭಾಷಾರೂಪದ ಪರಿಕಲ್ಪನೆ ಹುಟ್ಟಿಕೊಂಡಿದೆ. ಕನ್ನಡ ಈ ನಿಟ್ಟಿನಲ್ಲಿ ಕಳೆದ ಐವತ್ತು ವರ್ಷಗಳಲ್ಲಿ ಒಂದು ಖಚಿತ ಹಂತವನ್ನು ತಲುಪಿದೆ.

ಪ್ರಮಾಣಕನ್ನಡದ ಚರ್ಚೆಯಲ್ಲಿ ಭಾಷೆಕ್ರಿಯೆಯ ಉಲ್ಲೇಖವನ್ನು ಮಾಡಲೇಬೇಕು. ಕ್ರಿಯೆಯನ್ನು ಬಣ್ಣಿಸಲು ಕ್ರಿಯಾಪದಗಳು ಇರುತ್ತವೆ. ಇದು ಎಲ್ಲಾ ಭಾಷೆಗಳಿಗೂ ಇರುವ ಒಂದು ಸಾಮಾನ್ಯ ಲಕ್ಷಣ ಆದರೆ ಭಾಷೆಯಲ್ಲಿ ಇನ್ನೊಂದು ಸ್ಥಿತಿ ಸಾಧ್ಯ.

ಅದನ್ನು ಭಾಷಾಕ್ರಿಯೆ ಎಂದು ಕರೆಯುತ್ತಾರೆ. ಈ ವಾಕ್ಯವನ್ನು ಗಮನಿಸಿ. 'ನಾನು ಈ ಸಂದರ್ಭದಲ್ಲಿ ಭಾರತವು ಜಾಗತೀಕರಣವನ್ನು ಎದುರಿಸಲು ಶಕ್ತವಾಗಿಲ್ಲ ಎಂದು ಘೋಷಿಸುತ್ತೇನೆ' ಈ ವಾಕ್ಯದಲ್ಲಿ ಘೋಷಿಸು ಎನ್ನುವ ಕ್ರಿಯಾಪದವಿದೆ. ಆದರೆ ಇದು ಇತರ ಕ್ರಿಯಾಪದಗಳಂತಲ್ಲ. ತಿನ್ನು, ನೋಡು, ಕೊಡು, ಓಡು, ಓದು, ಹಾಡು ಮುಂತಾದ ಕ್ರಿಯಾ ಪದಗಳಲ್ಲಿ ಒಂದು ಲೋಕ ಸಂವಾದಿ ಕ್ರಿಯೆ ಇದೆ. ಆ ಕ್ರಿಯೆಯನ್ನು ಬಣ್ಣಿಸಲು ಒಂದು ಪದವನ್ನು ನಾವು ಬಳಸುತ್ತೇವೆ. 'ನಾನು ಹಾಡುತ್ತೇನೆ' ಎನ್ನುವ ವಾಕ್ಯ ನಿಜವೂ ಆಗಿರಬಹುದು. ಸುಳ್ಳೂ ಆಗಿರಬಹುದು. ಇದನ್ನು ತೀರ್ಮಾನಿಸಲು ಸಾಧ್ಯ. ಹೇಳಿದ ವ್ಯಕ್ತಿ ನಿಜವಾಗಿಯೂ ಹಾಡುವ ಕ್ರಿಯೆಯನ್ನು ಮಾಡಲು ಶಕ್ತರಾದರೆ ಆಗ ವಾಕ್ಯ ನಿಜವಾಗುತ್ತದೆ. ಹಾಗೆ ಮಾಡಲು ಅಶಕ್ತರಾದರೆ ವಾಕ್ಯ ಸುಳ್ಳಾಗುತ್ತದೆ. ಇಂತಹ ಲೋಕಸಂವಾದಿತ್ವದ ಪರೀಕ್ಷೆಗಳು ಕ್ರಿಯಾಪದಗಳ ಮಟ್ಟಿಗೆ ಸಾಧ್ಯ. ಆದರೆ ಮೇಲೆ ಉಲ್ಲೇಖಿಸಿದ ವಾಕ್ಯದಲ್ಲಿ 'ಘೋಷಿಸು' ಎಂಬ ಪದದ ಮಾತು ಬೇರೆ. ಏಕೆಂದರೆ ಅಲ್ಲಿ ಪ್ರತ್ಯೇಕ ಕ್ರಿಯೆಯಿಲ್ಲ. ಆ ವಾಕ್ಯದಲ್ಲಿರುವ ಪದಗಳನ್ನು ಉಚ್ಚರಿಸಿದ್ದೇ ಒಂದು ಕ್ರಿಯೆ. ಇಂತಹ ನೂರಾರು ರಚನೆಗಳನ್ನು ನಾವು ಬಳಸುತ್ತೇವೆ. ಇವುಗಳನ್ನು ಭಾಷಾಕ್ರಿಯೆಗಳೆಂದು ವರ್ಣಿಸುತ್ತಾರೆ.

ಪ್ರಮಾಣಭಾಷೆಯ ಚರ್ಚೆಯಲ್ಲಿ ಭಾಷಾಕ್ರಿಯೆಗಳ ಮಹತ್ವ ಏನು ಎಂಬ ಪ್ರಶ್ನೆ ನಮಗೆ ಮುಖ್ಯ. ನಾವು ಬಳಸುವ ಒಂದು ಕರೆನ್ಸಿ ನೋಟನ್ನು ಗಮನಿಸಿ. ಅದು ನಿರ್ದಿಷ್ಟ ಮೊತ್ತದ ಹಣವನ್ನು ಪ್ರತಿನಿಧಿಸುತ್ತದೆ. ಅದು ನಮ್ಮೆಲ್ಲರ ನಂಬಿಕೆ. ಆದರೆ ಆ ಮೊತ್ತ ನಮಗೆ ಕಾಣಿಸುವುದು ಅದರ ಮೇಲೆ ಮುದ್ರಿತವಾಗಿರುವ ಭಾಷಿಕ ಸಂಕೇತದಲ್ಲಿ ಮಾತ್ರ. ರಿಜರ್ವ್‌ಬ್ಯಾಂಕ್ ಗವರ್ನರ್ ಸಹಿ ಇರುವ ಆ ವಾಕ್ಯ. ಈ ನೋಟನ್ನು ಹೊಂದಿರುವ ವ್ಯಕ್ತಿಗೆ ನಿರ್ದಿಷ್ಟ ಮೊತ್ತದ ಹಣವನ್ನು ನಾನು ಪಾವತಿಸುತ್ತೇನೆ ಎಂದು ಅಲ್ಲಿ ಬರೆದಿರುತ್ತದೆ. ಅಲ್ಲಿ ಬಳಕೆಯಾಗುವ ಪ್ರಾಮಿಸ್ ಎಂಬ ಕ್ರಿಯಾಪದವನ್ನು ಗಮನಿಸಿ ವಾಸ್ತವವಾಗಿ ಯಾರು ರಿಸರ್ವ್ ಬ್ಯಾಂಕ್ ಗವರ್ನರ್ ಬಳಿ ಹೋಗಿ ಆ ಮೊತ್ತದ ಹಣವನ್ನು ಕೇಳುವುದಿಲ್ಲ. ಅಂದರೆ ಅದು ನಿಜವೋ ಸುಳ್ಳೋ ಎಂದು ಪರೀಕ್ಷಿಸುವುದಿಲ್ಲ. ಪ್ರಾಮಿಸ್ ಎನ್ನುವ ಕ್ರಿಯಾಪದ ಇಡೀ ಕರೆನ್ಸಿ ನೋಟಿನ ಚಲಾವಣೆಯನ್ನು ನಿಯಂತ್ರಿಸುತ್ತದೆ. ಎಂದರೆ ಅದಕ್ಕೆ ಒಂದು ಕ್ರಿಯಾ ಸಾಮರ್ಥ್ಯವಿದೆ. ಇಂಥದೇ ನೂರಾರು ಪ್ರಸಂಗಗಳು ನಮ್ಮ ದೈನಿಕ ವ್ಯವಹಾರಗಳಲ್ಲಿ ಕಾಣಿಸಿಕೊಳ್ಳುತ್ತವೆ. ಒಂದು ಚಲನಚಿತ್ರ ಮಂದಿರಕ್ಕೆ ಹೋದಾಗ ಅಥವಾ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಹಣಕೊಟ್ಟು ಪಡೆದುಕೊಳ್ಳುವ ಟಿಕೆಟ್ ಮೇಲೆ ಭಾಷೆಯಲ್ಲಿ ಏನನ್ನು ಮುದ್ರಿಸಿರುತ್ತಾರೆ. ಹೆಚ್ಚು ಗಮನವಿಟ್ಟು ನಾವು ಅದನ್ನು ಓದುವುದಿಲ್ಲ; ನೋಡುವುದೂ ಇಲ್ಲ. ಆದರೆ ಹಾಗೆಂದು ಖಾಲಿ ಕಾಗದವನ್ನು ಕೊಟ್ಟರೆ ಅದಕ್ಕೆ ಸುಮ್ಮನಾಗುವುದಿಲ್ಲ. ಅಂದರೆ ಆ ಚೀಟಿಯ ಮೇಲೆ ಮುದ್ರಿಸಿದ ಭಾಷೆಯ ರಚನೆಗೆ ಏನೋ ಮಹತ್ವವಿದೆ ಎಂದಾಯಿತು. ಆದರೆ ಆ ಮಹತ್ವವಿರುವುದು ಅಲ್ಲಿರುವ ಪದಗಳ ಅರ್ಥದಲ್ಲಲ್ಲ. ಆ ಪದಗಳನ್ನು ಒಂದು ನಿರ್ದಿಷ್ಟ ಬಂಧದಲ್ಲಿ ಅಳವಡಿಸಿರುವ ರೀತಿಗೆ ನಾವು ಸಮ್ಮತಿಯನ್ನು ಸೂಚಿಸುತ್ತೇವೆ. ಈ ಪ್ರಕ್ರಿಯೆಗಳನ್ನು ಭಾಷಾಕ್ರಿಯೆಗಳೆಂದು ಕರೆಯುವುದು ವಾಡಿಕೆ.

ಇದು ಬಹಳ ವಿಶಾಲವಾದ ವ್ಯಾಪ್ತಿಯುಳ್ಳ ಪ್ರಕ್ರಿಯೆ. ಆದರೆ ಭಾಷಾಕ್ರಿಯೆಯಲ್ಲಿ ಭಾಷೆ ಪ್ರಮಾಣ ರೂಪದಲ್ಲಿ ಅಂದರೆ ಸುಲಭವಾಗಿ ಬದಲಾಯಿಸಲಾಗದ ರೂಪದಲ್ಲಿ ಇರಬೇಕಾಗುತ್ತದೆ. ಅಂದರೆ ಆ ನಿಗದಿತ ರೂಪದಲ್ಲಿ ಇರುವುದರಿಂದಲೇ ಅದಕ್ಕೆ ಒಂದು ಭಾಷಾಕ್ರಿಯೆಯಾಗುವ ಸಾಮರ್ಥ್ಯ ಒದಗುತ್ತದೆ.

ಪ್ರಮಾಣಭಾಷೆಯನ್ನು ರೂಪಿಸುವವರು ತಮಗೆ ಗೊತ್ತಿಲ್ಲದಂತೆ ಈ ಅಂಶವನ್ನು ಪಾಲಿಸುತ್ತಾರೆ. ಸಾಮಾನ್ಯವಾಗಿ ಅರ್ಥಖಚಿತತೆಯೇ ಪ್ರಮಾಣ ಭಾಷೆಯ ಪ್ರಧಾನ ಲಕ್ಷಣ ಎಂದು ತಿಳಿಯುವುದು ವಾಡಿಕೆ. ಆದರೆ ಇದು ಸರಿಯಾದ ಕಲ್ಪನೆಯಲ್ಲ. ಅರ್ಥಖಚಿತತೆಗಿಂತಲೂ ಮುಖ್ಯವಾದ ಸಂಗತಿ ಬೇರೊಂದಿರುತ್ತದೆ. ಮತ್ತೊಂದು ನಿದರ್ಶನವನ್ನು ಗಮನಿಸೋಣ. ಪ್ರಮಾಣ ಭಾಷೆಯ ರಚನೆಯನ್ನು ಗೇಲಿ ಮಾಡುವವರು ಕೆಲವೊಮ್ಮೆ ಆ ಪದಗಳ ಅರ್ಥರಾಹಿತ್ಯವನ್ನು ಎತ್ತಿ ಹೇಳುತ್ತಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಎಂಬ ಪದಕ್ಕೆ ವೃತ್ತ ನಿರೀಕ್ಷಕ ಆರಕ್ಷಕ ಎಂಬ ಪದವನ್ನು ಬಳಸುತ್ತಾರೆಂದುಕೊಳ್ಳಿ. ಸಹಜವಾಗಿಯೇ ವೃತ್ತ ನಿರೀಕ್ಷಕ ಆರಕ್ಷಕ ಪದ ಗೇಲಿಗೆ ಒಳಗಾಗುತ್ತದೆ. ಹಾಗೆಂದರೇನು ಎಂಬ ಪ್ರಶ್ನೆ ಮುಂದಿಟ್ಟುಕೊಂಡು ಅದರ ಅರ್ಥರಾಹಿತ್ಯವನ್ನು ಎತ್ತಿ ಹೇಳುತ್ತಾರೆ. ವಾಸ್ತವವಾಗಿ ಸರ್ಕಲ್ ಇನ್ಸ್‌ಪೆಕ್ಟರ್ ಎಂಬ ಪದಕ್ಕೂ ಅರ್ಥವಿಲ್ಲ. ಆ ಪದವಿಯ ವ್ಯಕ್ತಿ ತೊಡುವ ಉಡುಪು, ಆ ಉಡುಪಿನಲ್ಲಿ ಭುಜದ ಮೇಲೆ ಇರುವ ನಕ್ಷತ್ರಗಳ ಸಂಖ್ಯೆ ಇವೆಲ್ಲವೂ ಸೂಚಕಗಳು. ಆದ್ದರಿಂದ ಆ ಪದಕ್ಕೆ ಸ್ವತಂತ್ರ ಅರ್ಥವಿಲ್ಲ. ಉಳಿದ ಸಂಗತಿಗಳೊಡನೆ ಅದು ಒಂದು ಭಾಷಾಕ್ರಿಯೆಯಾಗಿ ಬಳಕೆಯಾಗುತ್ತದೆ. ಪ್ರಮಾಣಭಾಷೆಯ ಆತ್ಯಂತಿಕ ಸ್ಥಿತಿಯಲ್ಲಿ ಈ ಅಂಶ ಮುಖ್ಯವಾಗುತ್ತದೆ. ನಾಗರಿಕಸಮಾಜ ತನ್ನ ಆಚರಣಾ ಜಗತ್ತನ್ನು ನೆಲೆಗೊಳಿಸಿಕೊಳ್ಳಲು ಬಳಸುವ ಹತ್ತಾರು ಪರಿಕರಗಳಲ್ಲಿ ಭಾಷೆಯೂ ಒಂದು. ಭಾಷೆಗೆ ಇರುವ ಅದರ ಸಹಜ ನೆಲೆಗಳನ್ನು ಸಂದಿಗ್ಧಗೊಳಿಸಿ ಅದಕ್ಕೊಂದು ಆಚರಣಾತ್ಮಕ ನೆಲೆಯನ್ನು ಕಲ್ಪಿಸಲಾಗುತ್ತದೆ. ಆಗಲೇ ಭಾಷೆ ಪ್ರಮಾಣರೂಪವನ್ನು ಪಡೆದಿರುತ್ತದೆ. ಈ ನೆಲೆ ನಮ್ಮ ಗ್ರಹಿಕೆಗೆ ಬಾರದಿದ್ದರೆ ಅದನ್ನು ನಿರ್ಲಕ್ಷಿಸುತ್ತೇವೆ ಅಥವಾ ಗೇಲಿ ಮಾಡುತ್ತೇವೆ.

ಕನ್ನಡ ಪ್ರಮಾಣಭಾಷೆಯ ರೂಪಣ ಕ್ರಿಯೆ ಕನ್ನಡ ಸಮಾಜದ ಮನ್ನಣೆಗೆ ಒಳಗಾಗಿದೆಯೇ ಎಂಬುದು ಒಂದು ಮಹತ್ವದ ಪ್ರಶ್ನೆಯಾಗಿದೆ. ನಾಗರಿಕ ಸಮಾಜದ ಚಹರೆಗಳನ್ನು ಪೂರ್ಣವಾಗಿ ಮೈಗೂಡಿಸಿಕೊಂಡಾಗ ಭಾಷೆಯ ಪ್ರಮಾಣ ರೂಪವನ್ನು ಒಪ್ಪುವ ಅಥವಾ ಒಪ್ಪದಿರುವ ಪ್ರಶ್ನೆ ಮುಖ್ಯವಾಗುವುದಿಲ್ಲ. ಏಕೆಂದರೆ ಅದಕ್ಕೆ ವಾಸ್ತವವಾಗಿ ಯಾವ ಅರ್ಥವೂ ಇರುವುದಿಲ್ಲ. ಕನ್ನಡ ಭಾಷೆಯಲ್ಲಿ ಈ ಪ್ರಕ್ರಿಯೆ ನಿಧಾನವಾಗಿ ನೆಲೆಯೂರುತ್ತಿದೆ. ಮೇಲುನೋಟಕ್ಕೆ ಇದು ಸಂವೇದನೆಗಳನ್ನು ಕಳೆದುಕೊಳ್ಳುವ ಸ್ಥಿತಿ ಎಂದು ತೋರುತ್ತದೆ. ಏಕೆಂದರೆ ನಮ್ಮ ಎರಡನೆಯ ಪ್ರಕೃತಿಯೇ ಆಗಿರುವ ಭಾಷೆಯು ಹೀಗೆ ಕೇವಲ ಒಂದು ಸೂಚಕವಾಗಿ ಬದಲಾಗು ವುದು ಯಾರಿಗಾದರೂ ಮುಜುಗರ ತರುವಂಥದ್ದೇ. ಆದರೆ ಆಗಲೇ ಹೇಳಿದಂತೆ ಸಾಮಾಜಿಕ ವಿನ್ಯಾಸಗಳು ಬಯಸುವ ಸ್ಥಿತಿಯೇ ಇಂಥದ್ದು. ಈ ವಿನ್ಯಾಸದ ಮೇಲೆ ನಮಗೆ ಹಿಡಿತವಿಲ್ಲ. ಅದು ಭಾಷೆಯನ್ನು

ಹೀಗೆ ತನಗೆ ಅನುಕೂಲವಾಗುವಂತೆ ಬಳಸಿಕೊಳ್ಳುತ್ತಿರುತ್ತದೆ. ಹತ್ತಾರು ಬಗೆಗಳಲ್ಲಿ ಭಾಷಿಕ ಸಾಮಗ್ರಿಗಳನ್ನು ಅಳವಡಿಸಿ ಅದಕ್ಕೊಂದು ಸೂಚಕದ ಸ್ಥಾನವನ್ನು ರೂಪಿಸಿರುತ್ತದೆ. ಸಾಮಾಜಿಕವಾಗಿ ನಾವು ಆಚರಣೆಯ ಭಾಗವಾಗುತ್ತೇವೆ. ನಮ್ಮ ಮಾಧ್ಯಮಗಳು ದಿನದಿನವೂ ಬಳಸುವ ನೂರಾರು ಇಂತಹ ಪ್ರಮಾಣರೂಪಗಳು ನಮ್ಮ ಸಂವೇದನೆಯ ಅಂಚನ್ನು ಕೂಡಾ ಮುಟ್ಟದೇ ಹೋಗುವ ಸ್ಥಿತಿಯನ್ನು ನಾವು ಅನುಭವಿಸುತ್ತಿದ್ದೇವೆ.

ಆಧುನೀಕರಣ

ಭಾಷಾಶಾಸ್ತ್ರಜ್ಞರು ಆಧುನೀಕರಣ ಎಂಬ ಪರಿಕಲ್ಪನೆಯನ್ನು ಬಳಸಲು ಮೊದಲುಮಾಡಿ ಹತ್ತಿರಹತ್ತಿರ ಐದು ದಶಕಗಳಾಗುತ್ತಿವೆ. ಮುಖ್ಯವಾಗಿ ಈ ಪರಿಕಲ್ಪನೆಯನ್ನು ಜಗತ್ತಿನ ಹಲವು ವಸಾಹತುದೇಶಗಳ ಭಾಷೆಗಳ ಸಂದರ್ಭದಲ್ಲಿ ಬಳಸಲಾಯಿತು. ಹೊಸ ಜಗತ್ತಿನ ಅಗತ್ಯಗಳಿಗೆ ಅನುಗುಣವಾಗಿ ಒಂದು ಭಾಷೆಯನ್ನು ಸಜ್ಜುಗೊಳಿಸುವ ಯೋಜಿತ ಕ್ರಿಯೆಯನ್ನು ಆಧುನೀಕರಣ ಎನ್ನುತ್ತೇವೆ. ಈ ಕ್ರಿಯೆಯನ್ನು ಯೋಜಿತ ಎಂದಿದ್ದಕ್ಕೆ ಕಾರಣಗಳಿವೆ. ಯಾವ ಬಗೆಯ ಬದಲಾವಣೆಗಳು ಆಗಬೇಕು; ಆ ಬದಲಾವಣೆಯನ್ನು ಮಾಡುವ ವಿಧಾನ ಯಾವುದು; ಯಾರು ಅದನ್ನು ಜಾರಿಗೊಳಿಸಬೇಕು ಇತ್ಯಾದಿ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಒಂದು ಕಾರ್ಯಕ್ರಮವನ್ನು ರೂಪಿಸಲಾಗುತ್ತದೆ. ಕಾಲದಿಂದ ಕಾಲಕ್ಕೆ ಈ ನಿಟ್ಟಿನಲ್ಲಿ ಆಗಿರುವ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲಾಗುತ್ತದೆ. ಸೂಕ್ತವೆನಿಸಿದ ಬದಲಾವಣೆಗಳನ್ನು ಮಾಡಿಕೊಳ್ಳಲಾಗುತ್ತದೆ.

ಈ ಕ್ರಿಯೆ ಇಂತಹ ದಿನಾಂಕದಿಂದ ಮೊದಲಾಗಿ ಇಂತಹ ದಿನಾಂಕವರೆಗೆ ಜಾರಿಯಲ್ಲಿದ್ದು, ಈ ಅವಧಿಯಲ್ಲಿ ಎಲ್ಲಾ ಬದಲಾವಣೆಗಳು ಆಗಿ ಬಿಡುತ್ತವೆ ಎಂದು ತಿಳಿಯಬಾರದು. ಏಕೆಂದರೆ ಬದಲಾವಣೆಗಳು ನಡೆಯುತ್ತಿರುವ ಸಂದರ್ಭದಲ್ಲೇ ಹೊಸ ಸಾಧ್ಯತೆಗಳು ಸಮಸ್ಯೆಗಳು ಎದುರಾಗಬಹುದು. ಆಗ ಕಾರ್ಯಯೋಜನೆಯನ್ನು ಬದಲಾಯಿಸಬೇಕಾಗುತ್ತದೆ.

ಕನ್ನಡದ ಆಧುನೀಕರಣ ಪ್ರಕ್ರಿಯೆ ಸರಿ ಸುಮಾರು ೧೯ನೇ ಶತಮಾನದ ಕೊನೆಕೊನೆಗೆ ಆರಂಭವಾಯಿತು. ಆಯಾ ಕಾಲಮಾನದ ಅಪೇಕ್ಷೆಯನ್ನು ಕಂಡುಕೊಂಡು ಅದಕ್ಕನುಗುಣವಾದ ಯೋಜನೆಗಳನ್ನು, ವಿಧಾನಗಳನ್ನು ರೂಪಿಸಬೇಕಾಗುತ್ತದೆ. ಆಧುನೀಕರಣ ಜಾರಿಯಲ್ಲಿದ್ದಾಗ ಅದು ಒಳಗಿನಿಂದ ಮೂಡಿಬಂದ ಅಪೇಕ್ಷೆಯ ಪರಿಣಾಮವಲ್ಲ ಎಂದು ಭಾವಿಸುವವರು ಸದಾ ಈ ಪ್ರಕ್ರಿಯೆಯನ್ನು ವಿರೋಧಿಸುತ್ತಾರೆ. ಆದರೆ ಕಾಲಗತಿಯಲ್ಲಿ ಈ ವಿರೋಧಗಳು ಹಿಂದೆ ಸರಿದು ಆಧುನೀಕರಣ ಪ್ರಕ್ರಿಯೆಯ ಉದ್ದೇಶ ಪೂರ್ಣವಾಗುವವರೆಗೂ ಮುಂದುವರೆಯುತ್ತದೆ.

ಆಧುನೀಕರಣ ಕನ್ನಡದ ವಿವಿಧ ವಲಯಗಳನ್ನು ಹೇಗೆ ಪ್ರವೇಶಿಸಿದೆ ಎಂಬುದನ್ನು ನಾವೀಗ ಪರಿಶೀಲಿಸೋಣ. ಆಧುನೀಕರಣದಲ್ಲಿ ಮುಖ್ಯವಾಗಿ ಪದಕೋಶವನ್ನು

ವೃದ್ಧಿಗೊಳಿಸುವ ಕಾರ್ಯಕ್ರಮ ಸೇರಿಕೊಂಡಿರುತ್ತದೆ. ಇದು ಹೊಸ ಭಾಷಾಬಳಕೆಯ ವಲಯಗಳಿಗೆ ಕನ್ನಡವನ್ನು ಸನ್ನದ್ಧಗೊಳಿಸುವ ಬಗೆಯಾಗಿರುತ್ತದೆ. ಹೊಸಬಗೆ ಎಂದರೆ ಹೊಸಬಗೆಯ ಬರವಣಿಗೆಯ ವಲಯ. ಈ ಬೆಳವಣಿಗೆಯಲ್ಲಿ ಮುಖ್ಯವಾಗಿ ಸಂಪರ್ಕಸಾಧನಗಳು ಪರಿಗಣನೆಗೆ ಬರುತ್ತವೆ. ಸಾಂಪ್ರದಾಯಿಕ ವಿಧಾನದ ಸಂಪರ್ಕಮಾರ್ಗಗಳು ಈಗ ಹೊಸ ತಂತ್ರಜ್ಞಾನದ ಕಾರಣಗಳಿಂದ ಅಮುಖ್ಯವಾಗಿ, ಹೊಸ ಜಾಗತಿಕ ವ್ಯಾಪ್ತಿಯ ಸಂಪರ್ಕ ಮಾಧ್ಯಮಗಳು ಭಾಷೆಯ ಬಳಕೆಯಲ್ಲಿ ಹೊಸ ದೃಷ್ಟಿಕೋನವನ್ನು ಅಪೇಕ್ಷಿಸುತ್ತವೆ. ಈ ಕಾರಣದಿಂದ ಎಷ್ಟೋ ವೇಳೆ ಇದುವರೆಗೂ ಬಳಕೆಯಾಗುತ್ತಿದ್ದ ಪದಕೋಶ ವನ್ನು ಹೊಸ ಅರ್ಥದಲ್ಲಿ, ಇಲ್ಲವೇ ಅಗತ್ಯಕ್ಕನುಗುಣವಾಗಿ ಹೊಸದೇ ಪದಗಳನ್ನು ರೂಪಿಸಬೇಕಾಗುತ್ತದೆ. ಕನ್ನಡದ ಮಟ್ಟಿಗೆ ಇದೊಂದು ತುರ್ತಿನ ಕೆಲಸ ಎಂಬಷ್ಟು ಮಾತ್ರ ಎಲ್ಲರ ಅರಿವಿಗೆ ಬಂದಿದೆ. ಆದರೆ ಪರಿಹಾರ ಕಾರಣಗಳನ್ನು ಕಂಡು ಕೊಳ್ಳುವ ವ್ಯವಸ್ಥಿತ ಯತ್ನಗಳನ್ನು ಮಾಡಿಲ್ಲ. ಅವರವರು ಆಯಾ ಸಂದರ್ಭದ ಅಗತ್ಯಗಳಿಗೆ ಅನುಗುಣವಾಗಿ ಹೊಸ ಪದಗಳನ್ನು ರೂಪಿಸುವ, ಬಳಸುವ ಕೆಲಸವನ್ನು ಮೈಮೇಲೆ ಹಾಕಿಕೊಳ್ಳುತ್ತಾರೆ.

ಈ ನಿಟ್ಟಿನಲ್ಲಿ ಕನ್ನಡವು ಆಯ್ಕೆ ಮಾಡಿಕೊಂಡ ಮಾರ್ಗ ಸ್ಪಷ್ಟವಾಗಿ ಇಂಗ್ಲಿಶ್‌ಗೆ ಮೊರೆ ಹೋಗುವುದಾಗಿದೆ. ಆ ಭಾಷೆಯಿಂದ ಎಣೆ ಇಲ್ಲದಷ್ಟು ಪದಗಳನ್ನು ಎರವಲು ಪಡೆದುಕೊಂಡು ಬಳಸುವ ಹಾದಿಯನ್ನು ಅನುಸರಿಸಲಾಗಿದೆ. ಇಂಗ್ಲಿಶ್ ಭಾಷೆಯ ಪದಗಳನ್ನು ನಮ್ಮ ಭಾಷೆಗೆ ತೆಗೆದುಕೊಂಡು ಬಂದಾಗ ಸಹಜವಾಗಿಯೇ ಕನ್ನಡದ ಅಗತ್ಯಕ್ಕನುಗುಣವಾಗಿ ಬದಲಾವಣೆಗಳು ಆ ಪದದಲ್ಲೇ ಸಂಭವಿಸಿಬಿಡುತ್ತವೆ. ಎಷ್ಟೋ ವೇಳೆ ಈ ಬದಲಾವಣೆಗಳನ್ನು ಗ್ರಹಿಸುವುದೂ ಸಾಧ್ಯವಿಲ್ಲ. ಅದು ನಡೆದು ನೆಲೆನಿಂತ ಮೇಲೆ ಬಳಕೆಯಲ್ಲಿ ಸ್ಥಾನವನ್ನು ಪಡೆದುಕೊಂಡುಬಿಡುತ್ತದೆ.

ಕೆಲವರು ಹೀಗೆ ಇಂಗ್ಲಿಶ್ ಪದಗಳನ್ನು ಕನ್ನಡದಲ್ಲಿ ಬಳಸುವುದು ಮೌಖಿಕ ನೆಲೆಯಲ್ಲಿ ಮಾತ್ರ ಎಂದು ವಾದಿಸುತ್ತಾರೆ. ಇದನ್ನು ಪೂರ್ಣವಾಗಿ ಅಲ್ಲಗಳೆಯಲು ಬರುವುದಿಲ್ಲ. ಪೂರ್ಣಾಂಗ ಬದಲಾವಣೆಗಳು ನಡೆಯದ ಪದಗಳು ಅಥವಾ ಭಾಷಾಂಶಗಳ ಬಳಕೆಗಳು ಮಾತಿನ ಹಂತಕ್ಕೆ ಮಾತ್ರ ಉಳಿಯುತ್ತವೇಕೆ ಎಂಬ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕು. ವಾಸ್ತವವಾಗಿ ಆಧುನೀಕರಣದ ಪ್ರಕ್ರಿಯೆ ಯಲ್ಲಿ ನಾವು ಹಿಂದೆ ಗುರುತಿಸಿದಂತೆ ಸಾರ್ವಜನಿಕವಲಯದ ಮಾತುಕತೆಗೆ ಹಿಂದಿಲ್ಲದಷ್ಟು ಮಹತ್ವ ಬಂದಿದೆ. ಈ ಸಂದರ್ಭಗಳು ಹೆಚ್ಚಿವೆ ಎಂಬುದರ ಜೊತೆಗೆ ಅವುಗಳ ವಿಷಯ ವ್ಯಾಪ್ತಿಯು ಈಗ ಹೆಚ್ಚಾಗಿದೆ. ಈ ಎರಡು ಕಾರಣಗಳ ಜೊತೆಗೆ ಸಂದರ್ಭದ ಒತ್ತಡ ಕೂಡಾ ಮುಖ್ಯ. ಎಲ್ಲವೂ ಇಲ್ಲೇ ಮತ್ತು ಈಗಲೇ ಆಗಬೇಕಾದ ಪರಿಸ್ಥಿತಿ ನಿರ್ಮಾಣಗೊಳ್ಳುತ್ತದೆ. ಆದ್ದರಿಂದ ಮಾತಿನ ವಲಯಗಳಲ್ಲಿ ಇಂಗ್ಲಿಶನ್ನು ಕನ್ನಡದೊಡನೆ ಮುಖಾಮುಖಿಯಾಗಿಸಲು ಜನರು ಹಿಂಜರಿಯುತ್ತಿಲ್ಲ.

ಆಧುನೀಕರಣವು ಭಾಷೆಯ ಎಲ್ಲಾ ಹಂತಗಳಲ್ಲೂ ಕಾಣಿಸಿಕೊಳ್ಳುತ್ತದೆ. ಕನ್ನಡದ ಧ್ವನಿರಚನೆಯನ್ನೇ ಪರಿಗಣಿಸಿದರೆ ಕನ್ನಡದಲ್ಲಿ ಈವರೆಗೆ ಇರದಿದ್ದ ಎಷ್ಟೋ ಧ್ವನಿಗಳು

ಈಗ ಕನ್ನಡದ ಧ್ವನಿಮೊತ್ತದಲ್ಲಿ ಸೇರಿಕೊಂಡಿವೆ. ಉದಾ.ಗೆ ಇಂಗ್ಲಿಶಿನಿಂದ ನಾವು ಎರವಲು ಪಡೆದ ಎರಡು ಘರ್ಷ ಧ್ವನಿಗಳನ್ನು ಗಮನಿಸಬಹುದು. ಒಂದು ದಂತ್ಯ ಘರ್ಷ ಘೋಷ ಧ್ವನಿ, ಕನ್ನಡದ 'ಸ'ಕಾರದ ಘೋಷರೂಪ. ಜೂ ಪದದಲ್ಲಿ ಈ ಧ್ವನಿಯನ್ನು ಉಚ್ಚರಿಸುತ್ತೇವೆ. ಹಾಗೆಯೇ 'ದ್ವಯೋಷ್ಠ್ಯ ಅಘೋಷ ಘರ್ಷ ಧ್ವನಿ' ಇದು ಇಂಗ್ಲಿಶಿನ 'ಫಿ' 'ಕಾಫಿ' ಮುಂತಾದ ಪದಗಳಲ್ಲಿ ಉಚ್ಚಾರಣೆಗೊಳ್ಳುತ್ತಿದೆ. ಈ ಎರಡು ಧ್ವನಿಗಳಲ್ಲದೇ ಮತ್ತೆ ಕೆಲವು ಧ್ವನಿಗಳನ್ನು ನಮ್ಮ ಉಚ್ಚಾರಣೆಗೆ ಅನುಗುಣವಾಗಿ ಬದಲಾಯಿಸಿಕೊಂಡು ಬಳಸುತ್ತಿದ್ದೇವೆ. ಧ್ವನಿಗಳ ನೆಲೆಯ ಆಧುನೀಕರಣ ಇದ್ದ ಧ್ವನಿಗಳನ್ನು ಈಗಿರುವ ಉಚ್ಚಾರಣಾ ವಿಧಾನಗಳಿಗಿಂತ ಬೇರೆ ರೀತಿಯಲ್ಲಿ ಉಚ್ಚರಿಸಿ ಅದನ್ನು ಆಧುನೀಕರಿಸಿಕೊಳ್ಳಲು ಯತ್ನಿಸುವುದುಂಟು. ಕನ್ನಡದ ಮೂರ್ಧನ್ಯ ಧ್ವನಿಗಳನ್ನು ಈಗ ವರ್ತ್ಸ್ಯಧ್ವನಿಗಳನ್ನಾಗಿ ನಾವು ಉಚ್ಚರಿಸುತ್ತಿದ್ದೇವೆ. ಟ.ಠ.ಡ.ಢ.ಣ ಮತ್ತು ಷ ಎಂಬ ಧ್ವನಿಗಳನ್ನು ನಾವು ಉಚ್ಚರಿ ಸುತ್ತಿರುವ ವಿಧಾನವನ್ನು ಎಚ್ಚರದಿಂದ ಗಮನಿಸಿದರೆ ಈ ಉಚ್ಚರಣಾ ಸ್ಥಾನದ ಪಲ್ಲಟ ಗೊತ್ತಾಗುತ್ತದೆ. ಇಂಗ್ಲಿಶ್ ಶಿಕ್ಷಣವನ್ನು ಪಡೆದವರಲ್ಲಿ ಈ ಬದಲಾವಣೆಗಳು ಎದ್ದುಕಾಣುತ್ತವೆ.

ಧ್ವನಿ ಉಚ್ಚಾರವಲ್ಲದೆ ಧ್ವನಿ ಲೇಖನ ಮತ್ತು ಮುದ್ರಣ ವಿಧಾನದಲ್ಲೂ ಹಲವು ಬದಲಾವಣೆಗಳು ನಡೆಯುತ್ತಿವೆ. ಮುಖ್ಯವಾಗಿ ಅಕ್ಷರ ವಿನ್ಯಾಸದಲ್ಲಿ ಅಗಾಧ ಬದಲಾವಣೆಗಳು ಕಾಣತೊಡಗಿವೆ. ಮುದ್ರಣ ಬೆರಳಚ್ಚುಗಳೇ ಮುಖ್ಯವಾಗಿದ್ದ ಕಾಲದಿಂದ ಗಣಕ ಅವಧಿಗೆ ನಾವು ದಾಟಿ ಬಂದಿದ್ದೇವೆ. ಇದರ ಪರಿಣಾಮವಾಗಿ ಶತಮಾನಗಳಿಂದಲೂ ಒಪ್ಪಿಕೊಂಡು ಬಂದಿದ್ದ ಬರವಣಿಗೆಯ ಸ್ವರೂಪ ಬೇರೆಯಾಗತೊಡಗಿದೆ. ಏಕೆಂದರೆ ಮುದ್ರಣ ಮತ್ತು ಬೆರಳಚ್ಚಿನಲ್ಲಿ ಹೊಸ ಬಗೆಯ ಅಕ್ಷರ ವಿನ್ಯಾಸ ಮಾಡುವುದು ಮತ್ತು ಜಾರಿಗೆ ಕೊಡುವುದು ಅಷ್ಟು ಸುಲಭದ ಮಾತಲ್ಲ. ಆದರೆ ಗಣಕದಲ್ಲಿ ಈ ಸಮಸ್ಯೆ ಇಲ್ಲ. ಕಳೆದ ಐವತ್ತು ವರ್ಷಗಳಲ್ಲಿ ಕನ್ನಡ ಬರವಣಿಗೆಯ ವಿಧಾನ ಪಡೆದುಕೊಂಡ ಹೊಸ ನೆಲೆ ಎಂದರೆ ಪ್ರಮಾಣೀಕೃತ ಮತ್ತು ವ್ಯಕ್ತಿನಿರಪೇಕ್ಷ ಅಕ್ಷರ ಶೈಲಿ. ಇದು ಆಧುನೀಕರಣದ ಒಂದು ಬಹುಮುಖ್ಯ ಅಪೇಕ್ಷೆಯಾಗಿದೆ. ಇಂತಹ ವ್ಯಕ್ತಿನಿರಪೇಕ್ಷ ಅಕ್ಷರ ಶೈಲಿಯು ಸಂಪರ್ಕ ಮಾಧ್ಯಮಗಳಿಗೆ ತೀವ್ರ ಅಗತ್ಯವಾಗಿ ಬೇಕಾದ ಸಂಗತಿಯಾಗಿದೆ.

ಆಧುನೀಕರಣವು ನಾವೀಗ ಗುರುತಿಸಿದಂತೆ ತುರ್ತಿನ ಅಗತ್ಯಗಳನ್ನು ಗಮನಿಸಲೇಬೇಕು. ತಂತ್ರಜ್ಞಾನದ ಹೊಸ ಆವಿಷ್ಕಾರಗಳು ಎಷ್ಟು ವೇಗವಾಗಿ ಜನಜೀವನದ ಮೇಲೆ ದಾಳಿ ಇಡುತ್ತಿವೆ ಎಂದರೆ ಅಂತಹ ಪರಿಸರದಲ್ಲಿ ಕನ್ನಡ ಭಾಷೆಯನ್ನು ಬಳಸಲು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಲು ಅವಕಾಶವೇ ಇಲ್ಲವಾಗಿದೆ. ಉದಾ.ಗೆ ಸಿದ್ಧ ಉತ್ತರಗಳನ್ನು ಒದಗಿಸುವ ವ್ಯವಸ್ಥೆಯನ್ನೇ ನೋಡೋಣ. ನಾವೀಗ ಸಾರ್ವಜನಿಕ ಸೇವೆಗಳ ಬಗೆಗೆ ದೂರು ಸಲ್ಲಿಸ ಹೊರಟಾಗ ಅಥವಾ ಹೆಚ್ಚಿನ ಮಾಹಿತಿಯನ್ನು ಪಡೆಯಲು, ದೂರವಾಣಿಯ ಮೂಲಕ ಸಂಪರ್ಕಿಸುತ್ತೇವೆ. ಇನ್ನೊಂದು ತುದಿಯಿಂದ ನಮಗೆ ಸಿಗುವ ಉತ್ತರಗಳು ಈಗಾಗಲೇ ಧ್ವನಿ ಮುದ್ರಿತವಾದಂತಹವು. ಪ್ರಶ್ನೆ ಕೇಳುವವರು ಅಥವಾ ಪ್ರಶ್ನೆಗಳು ಎಷ್ಟೇ ವೈವಿಧ್ಯದಿಂದ ಕೂಡಿದ್ದರೂ ಸಿದ್ಧ ಉತ್ತರಗಳು ಅವೆಲ್ಲವನ್ನೂ

ನಿರ್ದಿಷ್ಟ ಅವಧಿಯಲ್ಲಿ ಒದಗಿಸುವ ರೀತಿಯಲ್ಲಿರಬೇಕು. ಎಷ್ಟೋ ವೇಳೆ ಇಂತಹ ಸಿದ್ಧಉತ್ತರಗಳು ಮುಜುಗರವನ್ನು ತರುವಂತಿರುತ್ತವೆ. ಕಾರಣ ಅವುಗಳನ್ನು ಹೆಚ್ಚು ಪರಿಷ್ಕರಿಸಿ ಅನಂತರ ಜಾರಿಗೆ ನೀಡಲು ಕಾಲಾವಾಕಾಶದ ಅಭಾವ ತುಂಬಾ ಇರುತ್ತದೆ. ಸಂದರ್ಭದ ತುರ್ತಿಗೆ ಪ್ರತಿಕ್ರಿಯಿಸಲೇ ಬೇಕು. ನಾವು ಕರೆ ಮಾಡಿದ ಒಂದು ಸಂಖ್ಯೆಯೂ ನಮ್ಮ ಸಂಪರ್ಕಕ್ಕೆ ಸಿಗದಿದ್ದಾಗ ಬರುವ ಸಿದ್ಧ ಉತ್ತರವನ್ನು ಗಮನಿಸಿ. 'ಈ ಮಾರ್ಗದ ಎಲ್ಲಾ ಲೈನುಗಳು ವ್ಯಸ್ತವಾಗಿವೆ.' ಸಹಜವಾಗಿಯೇ ಇಂತಹ ಪ್ರಯೋಗಗಳು ಆಧುನೀಕರಣದ ಪ್ರಭಾವದಿಂದ ಹುಟ್ಟಿದರೂ ಅವುಗಳಲ್ಲಿ ಒಂದು ಬಗೆಯ ಅಸಹಜತೆ ಎದ್ದು ಕಾಣುತ್ತದೆ. ಮೊದಲೇ ಹೇಳಿದಂತೆ ಸಂದರ್ಭದ ಒತ್ತಡಗಳು ಈ ಬಗೆಯ ಪ್ರಯೋಗಗಳನ್ನು ಒಪ್ಪಿಕೊಳ್ಳುವಂತೆ ಮಾಡಿಬಿಡುತ್ತವೆ.

ಆಧುನೀಕರಣವು ಭಾಷೆಯ ಬಳಕೆಯ ವಲಯಗಳ ವಿಸ್ತರಣೆಯನ್ನು ಗಮನದಲ್ಲಿ ಇರಿಸಿಕೊಳ್ಳುತ್ತದೆ, ಅದಕ್ಕಾಗಿ ಭಾಷೆಯನ್ನು ಸನ್ನದ್ಧಗೊಳಿಸುತ್ತದೆ ಎಂದೆವು. ಆದರೆ ಎಷ್ಟೋ ವೇಳೆ ಕನ್ನಡದ ಜನರು ಆಧುನಿಕ ವಲಯದ ವ್ಯವಹಾರಗಳಲ್ಲಿ ಈಗೀಗ ಹೆಚ್ಚಾಗಿ ಕನ್ನಡಕ್ಕೆ ಪರ್ಯಾಯವಾಗಿ ಇಂಗ್ಲಿಶನ್ನು ಆಶ್ರಯಿಸುತ್ತಿದ್ದಾರೆ. ಮೊದಮೊದಲು ಇಂತಹ ಆಯ್ಕೆಗಳನ್ನು ಜನರ ಆಧುನಿಕತೆಯ ವ್ಯಾಮೋಹ ಎಂದು ತಿಳಿಯುತ್ತಿದ್ದರು. ಆದರೆ ಈಗ ಹಾಗೆ ತಿಳಿಯಲು ಕಾರಣಗಳಿಲ್ಲ. ಇಂಗ್ಲಿಶ್ ಬಳಸಿ ಸಂಪರ್ಕಮಾರ್ಗವನ್ನು ಸುಗಮಗೊಳಿಸಿಕೊಳ್ಳುವುದು ಅಗತ್ಯವಾಗಿ ಬಿಟ್ಟಿದೆ. ಆದರೆ ಇದಕ್ಕೆ ವಿರುದ್ಧವಾದ ಇನ್ನೊಂದು ಪ್ರಕ್ರಿಯೆ ಕನ್ನಡದ ಹೊರಗೆ ನಡೆಯುತ್ತಿದೆ. ಮತ್ತು ಅದರ ಪರಿಣಾಮ ಕನ್ನಡದ ಮೇಲೆ ಆಗುತ್ತಿದೆ. ಕರ್ನಾಟಕದ ಜನಸಮುದಾಯದ ಒಂದು ದೊಡ್ಡ ಭಾಗ ಉಪಭೋಗೀ ಸಂಸ್ಕೃತಿಗೆ ಗುರಿಯಾಗಿದೆ. ಅಂದರೆ ಹೊಸ ಸಾಮಗ್ರಿಗಳನ್ನು ಕೊಂಡು ಬಳಸುವ ಸಾಮರ್ಥ್ಯ ಈ ಜನವರ್ಗಕ್ಕೆ ಇದೆ. ಜಾಗತಿಕ ನೆಲೆಯಿಂದ ಗಮನಿಸಿದರೆ ಸುಮಾರು ಮೂರುವರೆ ಕೋಟಿ ಜನರ ಈ ಗುಂಪು ತುಂಬಾ ಗಣನೀಯವಾದುದ್ದು. ಅವರ ಆಸಕ್ತಿಯನ್ನು ಕಾಯ್ದುಕೊಳ್ಳಲು ಮೊದಮೊದಲು ಇಂಗ್ಲಿಶ್ ಬಳಸುತ್ತಿದ್ದ ಈ ಮಾರಾಟಗಾರರು ಈಗ ಗ್ರಾಹಕರು ಬಳಸುವ ದೇಶೀ ಭಾಷೆಗಳ ಕಡೆಗೆ ಒಲುವೆ ತೋರಿಸಿದ್ದಾರೆ. ಅವರು ರೂಪಿಸುತ್ತಿರುವ ಕನ್ನಡವು ಕೂಡಾ ಹೀಗೆ ಅವರ ಅಪೇಕ್ಷೆಯ ಕನ್ನಡ. ನಮ್ಮ ಅಗತ್ಯಕ್ಕೆ ನಾವು ರೂಪಿಸಿಕೊಂಡದ್ದಲ್ಲ. ಎರಡು ಉದಾಹರಣೆಗಳನ್ನು ಇಲ್ಲಿ ನೀಡಬಹುದು. ಒಂದು: ಮೈಕ್ರೋಸಾಫ್ಟ್ ಕಂಪನಿಯು ತನ್ನ ಗಣಕಗಳಲ್ಲಿ ಒದಗಿಸುತ್ತಿರುವ ಕನ್ನಡ ಕಾರ್ಯವಾಹಿ. ಇದನ್ನು ಕನ್ನಡಿಗರ ಅಗತ್ಯಕ್ಕಾಗಿ ಯಾರೋ ರೂಪಿಸಿದ್ದಾರೆ. ಹಾಗೆಯೇ ಅಂತರ್ಜಾಲದಲ್ಲಿ ಕಾಣಸಿಗುವ ಗೂಗಲ್ ಸರ್ಚ್ ಇಂಜಿನ್ ಇನ್ನೊಂದು ನಿದರ್ಶನ. ಎರಡು-ಮೂರು ವರ್ಷಗಳ ಹಿಂದಿನ ವರೆಗೂ ಈ ಸರ್ಚ್‌ಇಂಜಿನ್ ಭಾಷೆ ಪೂರ್ಣವಾಗಿ ಇಂಗ್ಲಿಶಿನಲ್ಲಿ ಇತ್ತು. ಆದರೆ ಈಗ ಜಗತ್ತಿನ ಅರವತ್ತು ಭಾಷೆಗಳಲ್ಲಿ ಈ ಸೌಲಭ್ಯವನ್ನು ಪಡೆಯಬಹುದು. ಈ ಅರವತ್ತು ಭಾಷೆಗಳಲ್ಲಿ ಕನ್ನಡ ಕೂಡಾ ಒಂದು. ಇಲ್ಲಿಯೂ ಕೂಡಾ ಬಳಸಲಾದ ಕನ್ನಡ ಅಸಹಜತೆಯಿಂದ ಕೂಡಿದೆ. ಆದರೆ ಮೊದಲೇ ಹೇಳಿದಂತೆ ತಂತ್ರಜ್ಞಾನದ ಜಾಲಕ್ಕೆ ಸಿಲುಕಿದ್ದಾಗ ಈ ಬಗೆಯ ಭಾಷಾಪ್ರಯೋಗಗಳನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿ ಬಿಡುತ್ತದೆ. ಮಾರುಕಟ್ಟೆ ಸಂಸ್ಕೃತಿಯಲ್ಲಿ ಇಂತಹ ತುರ್ತುಗಳು ಸೃಷ್ಟಿಸುವ ಪರಿಹಾರಗಳು ನಮ್ಮ ಕೊರಳಿಗೆ ಗಂಟು ಬೀಳುತ್ತವೆ.

ಹಾಗಿದ್ದರೆ ಕನ್ನಡವು ಇಪ್ಪತ್ತೊಂದನೆಯ ಶತಮಾನಕ್ಕೆ ಸಿದ್ಧಗೊಂಡಿದೆಯೇ; ಹಾಗಿಲ್ಲದಿದ್ದರೆ ಎಲ್ಲಿ ಕೊರತೆ ಉಂಟಾಗಿದೆ ಎಂಬುದನ್ನು ನಾವು ಕಂಡುಕೊಳ್ಳಲು ಇದು ಸುಸಂಧಿಯಾಗಿದೆ. ನಮ್ಮ ಸಮಸ್ಯೆ ಇರುವುದು ಭಾಷೆಯಲ್ಲಲ್ಲ. ಭಾಷೆಯ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ಸರಿಯಾಗಿ ಗ್ರಹಿಸದ ನಮ್ಮ ಸ್ಥಿತಿಯಿಂದಾಗಿ ತಕ್ಕ ಪರಿಹಾರೋಪಾಯಗಳನ್ನು ರೂಪಿಸಲಾಗುತ್ತಿಲ್ಲ. ಇಂತಹ ಇಕ್ಕಟ್ಟುಗಳನ್ನು ಮುಂದೆ ಉದಾಹರಣೆಗಳೊಡನೆ ವಿವರಿಸಲಾಗುವುದು.

ಆಧುನೀಕರಣ, ಮಾತಿನ ಹೊಸ ರೂಪಗಳಿಗೆ ಹೆಚ್ಚು ಅವಕಾಶವನ್ನು ಕಲ್ಪಿಸುತ್ತದೆ ಎಂದೆವು ಮತ್ತು ಈ ಮಾತು ಸಾರ್ವಜನಿಕವಲಯದ ಬಳಕೆಯಲ್ಲಿ ಇರುವಂಥದ್ದು. ಮಾತಿನ ಸಹಜ ಲಕ್ಷಣವಾದ ಸ್ವಯಂಸ್ಫೂರ್ತತೆ ಈ ಹೊಸ ಬಳಕೆಗಳಲ್ಲಿ ಕಡಿಮೆಯಾಗುತ್ತಿದೆ. ಅಂದರೆ ಈಗಾಗಲೇ ಬರಹ ರೂಪದಲ್ಲಿ ಸಿದ್ಧವಾದುದನ್ನು ಓದಿಹೇಳುವ ಅಥವಾ ಓದಿ ನೆನಪಿಟ್ಟುಕೊಂಡು ಹೇಳುವ ಬಗೆಗಳು ಈಗ ಹೆಚ್ಚಾಗುತ್ತಿವೆ. ಸ್ವಯಂಸ್ಫೂರ್ತಿಯ ಮಾತಿನ ಲಕ್ಷಣಗಳನ್ನು ಹೀಗೆ ಓದಿ ಹೇಳುವ ಭಾಷೆಗೆ ರವಾನಿಸಲು ಸಾಧ್ಯವಾಗದಿರುವುದು ಇಂದಿನ ಕನ್ನಡದ ಬಹುದೊಡ್ಡ ಕೊರತೆಯಾಗಿದೆ. ಇದಕ್ಕೆ ಮುಖ್ಯ ಕಾರಣ ಓದಿನ ಕನ್ನಡಕ್ಕೂ ಬರೆಹದ ಕನ್ನಡಕ್ಕೂ ಇರುವ ರಾಚನಿಕ ವ್ಯತ್ಯಾಸಗಳನ್ನು ಗುರುತಿಸಿಕೊಳ್ಳದಿರುವುದೇ ಆಗಿದೆ. ನಮ್ಮ ಬರಹದ ಕನ್ನಡ ಮೂರು ಬಗೆಯ ಓದುಗಳಿಗೆ ತೆರೆದುಕೊಳ್ಳುತ್ತದೆ. ಒಂದು ಕಣ್ಣೋದು, ಎರಡು ಕಿವಿ ಓದು, ಮೂರು ಬಾಯಿ ಓದು. ಕಣ್ಣೋದಿನಲ್ಲಿ ನಾವು ನಮ್ಮ ಧ್ವನ್ಯಂಗಗಳನ್ನು ಬಳಸುವುದಿಲ್ಲ. ಮುದ್ರಿತವಾದುದನ್ನು ಕಣ್ಣಿನ ಮುಖಾಂತರ ಗ್ರಹಿಸಿ ಅರ್ಥಮಾಡಿಕೊಳ್ಳುತ್ತಿರುತ್ತೇವೆ. ಇದು ಹೆಚ್ಚು ವೇಗದ ಓದು. ಬಹುಪಾಲು ಇಂದಿನ ಅಕ್ಷರಸ್ಥರೆಲ್ಲ ಬಳಸುವ ಓದು. ಕಿವಿ ಓದು ಎಂದರೆ ನಾವು ಕಣ್ಣಿನಲ್ಲಿ ಅಕ್ಷರಗಳನ್ನು ಕಾಣದಿದ್ದರೂ ಬೇರೊಬ್ಬರು ಓದುವುದನ್ನು ಕೇಳಿಸಿಕೊಳ್ಳುತ್ತಿರುತ್ತೇವೆ. ದೃಶ್ಯಮಾಧ್ಯಮಗಳಲ್ಲಿ ಈ ಮೊದಲೇ ಲಿಖಿತವಾದುದು ನಮಗೆ ಲಭಿಸುವುದು ಈ ಓದಿನ ಮೂಲಕ. ಕೆಲವೊಮ್ಮೆ ಬೇರೊಬ್ಬರು ಓದುತ್ತಿರುವುದನ್ನು ನಾವು ಕೇಳಿಸಿಕೊಳ್ಳುತ್ತಲೂ ಇರಬಹುದು. ಜೊತೆಗೆ ನಾವು ನಮ್ಮ ಕಣ್ಣಿನಿಂದ ಕಣ್ಣೋದು ಮಾಡುತ್ತಿರಬಹುದು.ಇದೊಂದು ಸಂಕೀರ್ಣವಾದ ಪ್ರಕ್ರಿಯೆ. ತರಗತಿಯಲ್ಲಿ ಮುದ್ರಿತ ಪಾಠವನ್ನು ನೋಡಿಕೊಂಡು ಅಧ್ಯಾಪಕರು ಓದುವಾಗ ಅದನ್ನು ಕೇಳಿಸಿಕೊಳ್ಳುವ ವಿದ್ಯಾರ್ಥಿಗಳು ತಮ್ಮ ಬಳಿ ಇರುವ ಪಠ್ಯಪುಸ್ತಕದಲ್ಲಿ ಮುದ್ರಿತಪಾಠವನ್ನು ತಾವು ಕಣ್ಣೋದಿನಲ್ಲಿ ಗ್ರಹಿಸುತ್ತಿರುತ್ತಾರೆ. ಮೂರನೆಯ ಓದು ಬಾಯಿ ಓದು. ಅಂದರೆ ಮುದ್ರಿತವಾದುದನ್ನು ಧ್ವನ್ಯಂಗಗಳನ್ನು ಬಳಸಿ ಓದುವುದು. ಇದು ತನಗಾಗಿ ಮಾಡಿಕೊಳ್ಳುವ ಓದು ಆಗಿರಬಹುದು, ಅಥವಾ ಇತರರಿಗೆ ಕೇಳಿಸಲೆಂದು ಮಾಡುತ್ತಿರುವ ಓದು ಆಗಿರಬಹುದು. ಅಕ್ಷರಸ್ಥರು ಮೊದಮೊದಲು ಈ ಬಾಯಿ ಓದಿಗೆ ತರಬೇತನ್ನು ಪಡೆದಿರುತ್ತಾರೆ. ಆದರೆ ಮುಂದೆ ಈ ಬಗೆಯ ಓದನ್ನು ಮಾಡುವುದು ಇಲ್ಲವೆನ್ನುವಷ್ಟು ಕಡಿಮೆ. ಇದು ತುಂಬಾ ಆಯಾಸಕಾರಿ ಮತ್ತು ನಿಧಾನಗತಿಯದು. ಕಣ್ಣಿನ ವೇಗದಲ್ಲಿ ಧ್ವನ್ಯಂಗಗಳು ಚಲಿಸಲಾರವು.

ಇಷ್ಟು ವಿವರಣೆ ನೀಡಿದ್ದರ ಉದ್ದೇಶವಿಷ್ಟೇ, ನಮ್ಮ ಬರವಣಿಗೆಗಳು ಇವುಗಳಲ್ಲಿ ಯಾವ ಬಗೆಯ ಓದಿಗೆ ಸಿದ್ಧಗೊಂಡಿವೆ ಎಂಬುದು ಮುಖ್ಯ ಸಂಗತಿ. ಏಕೆಂದರೆ ಅದಕ್ಕನುಗುಣವಾಗಿ ಆಯಾ ಸಂದರ್ಭದ ಭಾಷಿಕರಚನೆಗಳು ಬದಲಾಗುತ್ತವೆ. ಈ ಅಂಶವನ್ನು ಆಧುನೀಕರಣ ಪ್ರಕ್ರಿಯೆಯಲ್ಲಿ ನಾವು ಸ್ಪಷ್ಟವಾಗಿ ಗುರುತಿಸಿಕೊಂಡಿಲ್ಲ. ಇದರಿಂದಾಗಿ ಎಲ್ಲವನ್ನೂ ಒಂದೇ ಬಗೆಯ ಓದಿಗೆ ಗುರಿಪಡಿಸುವ ಅಸಹಜ ಸಂದರ್ಭಗಳು ಈಗ ಎದುರಾಗುತ್ತಿವೆ.

ಒಂದು ಪತ್ರಿಕೆಯನ್ನು ಗಮನಿಸೋಣ; ಅದು ಬಹುಮಟ್ಟಿಗೆ ಕಣ್ಣೋದಿನ ಬರಹ. ಅದನ್ನು ಯಾರೂ ಗಟ್ಟಿಯಾಗಿ ಓದಿಕೊಳ್ಳಬೇಕೆಂದು ಅಥವಾ ಇನ್ನೊಬ್ಬರಿಗೆ ಓದಿ ಹೇಳಬೇಕೆಂದು ನಿರೀಕ್ಷಿಸುವುದಿಲ್ಲ. ಹಾಗೆ ಮಾಡಿದರೆ ಅದು ವಿನಾಯಿತಿ ಅಷ್ಟೇ. ಏಕೆಂದರೆ ವೃತ್ತಪತ್ರಿಕೆಯನ್ನು, ಅದರ ಒಂದು ಪದವನ್ನೂ ಬಿಡದೆ ಗಟ್ಟಿಯಾಗಿ ಓದುವುದು ತುಂಬಾ ಆಯಾಸದ ಮತ್ತು ಅಷ್ಟೇ ನಿರರ್ಥಕ ಕ್ರಿಯೆಯಾಗುತ್ತದೆ. ಏಕೆಂದರೆ ಈ ಕಣ್ಣೋದಿನ ಬರಹದಲ್ಲಿ ಕಣ್ಣಿನ ವೇಗಕ್ಕೆ ಅನುಗುಣವಾಗಿ ಭಾಷೆಯ ರಚನೆ ಇರುತ್ತದೆ. ವಾಕ್ಯಗಳು ಬಹು ದೀರ್ಘವಾಗಿರಬಹುದು, ಕೆಲವೊಮ್ಮೆ ಅಗತ್ಯಬಿದ್ದಾಗ ಹಿಂದಿನ ಯಾವುದೋ ವಾಕ್ಯಕ್ಕೆ ಮರಳಿ ಹೋಗಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಇಡೀ ರಚನೆಯಲ್ಲಿ ಒಟ್ಟು ಸಾರಸಂಗ್ರಹ ಮಾಡಿ ಹೇಳಿದರೆ ಅನಗತ್ಯವಾದ ಎಷ್ಟೋ ಭಾಗಗಳಿರುವುದು ಅನಂತರ ವಿಶ್ಲೇಷಣೆಗೆ ಗೊತ್ತಾಗುತ್ತದೆ. ಅನಗತ್ಯ ಎಂಬ ಮಾತು ಸಾಪೇಕ್ಷವಾದದ್ದು. ಅದನ್ನು ಹೊರತುಪಡಿಸಿ ಕೇವಲ ಸಾರಸಂಗ್ರಹವನ್ನು ಮಾತ್ರ ನೀಡಲು ಬರುವುದಿಲ್ಲ. ಆಗ ವೃತ್ತಪತ್ರಿಕೆಯ ಬದಲು ಒಂದು ಕರಪತ್ರ ಸಾಕಾಗಬಹುದು. ಅಂದರೆ ಕಣ್ಣೋದಿನ ವೇಗ ಮತ್ತು ಗ್ರಹಿಕೆಯ ವಿಧಾನಗಳನ್ನು ಅನುಸರಿಸಿ ಇಡೀ ಭಾಷಾರಚನೆಯಲ್ಲಿ ಎಷ್ಟೋ ಅಂಶಗಳು ನಮ್ಮ ಗ್ರಹಿಕೆಯಲ್ಲಿ ಪಾಲನ್ನು ಪಡೆಯದಿರಬಹುದು. ಇದರಲ್ಲಿ ಅಪಾಯವೇನೂ ಇಲ್ಲ. ಸಂವಹನಕ್ಕೆ ಇದರಿಂದ ಕೊರತೆ ಉಂಟಾಗುವುದಿಲ್ಲ. ವೃತ್ತಪತ್ರಿಕೆಗಳು ಹೀಗೆ ತಮ್ಮ ಭಾಷಾಕಟ್ಟಡವನ್ನು ರೂಪಿಸಿಕೊಳ್ಳುತ್ತವೆ. ಕನ್ನಡದ ಮಟ್ಟಿಗೆ ಈ ಕಣ್ಣೋದಿನ ಭಾಷೆಗೆ ಅನುಕೂಲವಾದ ಅಂಶಗಳು ಸಾಕಷ್ಟು ತಾಂತ್ರಿಕ ಪರಿಣತಿಯನ್ನು ಪಡೆದುಕೊಂಡಿವೆ. ಇದಕ್ಕೆ ಸುಮಾರು ಒಂದು ಶತಮಾನದ ಪ್ರಯೋಗಶೀಲತೆಯೇ ಕಾರಣವಾಗಿದೆ.

ಆದರೆ ನಮ್ಮ ಇತರ ವಲಯಗಳ ಭಾಷಾಬಳಕೆಯಲ್ಲಿ ಕಿವಿ ಓದು ಮತ್ತು ಬಾಯಿ ಓದುಗಳು ಅಗತ್ಯವಾಗಿವೆ. ಈಗ ಇವುಗಳಿಗೆ ಅನುಕೂಲವಾಗುವ ರೀತಿಯ ಬರವಣಿಗೆಯನ್ನು ಮಾಡಬೇಕಾಗುತ್ತದೆ. ಅಂದರೆ ಯಾವ ಪದಸಂಚಯಗಳನ್ನು ಉಚ್ಚರಿಸಲು ಅನುಕೂಲವಾಗುವುದೋ ಮತ್ತು ಅವುಗಳನ್ನು ಕೇಳಿಸಿಕೊಳ್ಳಲು ಸಾಧ್ಯವಾಗುವುದೋ ಅಂತಹ ರಚನೆಗಳನ್ನು ಪ್ರಮಾಣಬದ್ಧವಾಗಿ ಅಳವಡಿಸಬೇಕಾಗುತ್ತದೆ.

ಸಾಮಾನ್ಯವಾಗಿ ಕನ್ನಡದ ಸಂಧಿನಿಯಮಗಳನ್ನು ಗಮನಿಸಿ. ಅವುಗಳು ಬಹುಮಟ್ಟಿಗೆ ಧ್ವನಿಪರಿಸರಗಳಿಂದ ನಿಯಂತ್ರಿತವಾಗಿ ರೂಪುಗೊಂಡಿವೆ. ಅಂದರೆ ಪೂರ್ವಪದದ ಅಂತ್ಯಸ್ವರ ಮತ್ತು ಉತ್ತರಪದದ ಮೊದಲ ಧ್ವನಿಯನ್ನು ಅವಲಂಬಿಸಿ ಸಂಧಿಗಳು

ನಡೆಯುತ್ತವೆ. ಈ ಸಂಧಿಗಳು ಉಚ್ಚಾರಣೆಯ ನಿಯಮಗಳನ್ನು ಅನುಸರಿಸುತ್ತವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಉದಾ.ಗೆ 'ಕಾಲನ್ನು' ಎಂಬ ಪದವನ್ನು ಗಮನಿಸಿ ಅಲ್ಲಿ ಕಾಲು ಎಂಬ ಪದಕ್ಕೆ 'ಅನ್ನು' ಪ್ರತ್ಯಯವಾಗಿದೆ. ಇದರಿಂದ ಕಾಲನ್ನು ಎಂಬ ರೂಪ ಹೇಗೆ ದೊರಕುತ್ತದೆ? ಇದಕ್ಕೆ ವಿವರಣೆ ಸರಳವಾಗಿದೆ. ಕಾಲು ಎಂಬ ರೂಪ ಸ್ವತಂತ್ರ ಉಚ್ಚಾರಣೆಯ ಸಂದರ್ಭದ ಪದ. ಅದರ ಅಂತಸ್ಥರೂಪ 'ಕಾಲ್'. ಕೊನೆಯ 'ಉ'ಕಾರ ಉಚ್ಚಾರಣಾ ಸೌಲಭ್ಯಕ್ಕಾಗಿ ಬಂದು ಸೇರಿದೆ. ಕನ್ನಡದಲ್ಲಿ ಇಂತಹ ನೂರಾರು ಪದಗಳಿವೆ. ಆದರೆ 'ಅನ್ನು' ಪ್ರತ್ಯಯವನ್ನು ಸೇರಿಸುವಾಗ ಉಚ್ಚಾರಣೆಯು ಮೂಲಘಟಕವಾದ 'ಕಾಲ್'ಎಂಬುದನ್ನು ಮಾತ್ರ ನಾವು ಗಮನಿಸುತ್ತೇವೆ. ಇದರಿಂದ ಕಾಲನ್ನು ರೂಪ ಸಿದ್ಧವಾಗುತ್ತದೆ. ನಮ್ಮ ವ್ಯಾಕರಣಗಳು ಹೇಳುವ ಲೋಪಸಂಧಿ ಎಂಬ ಪ್ರಕ್ರಿಯೆ ಇಲ್ಲಿ ನಡೆದೇ ಇಲ್ಲ. ಇರುವುದೇ 'ಕಾಲ್' ರೂಪ. ಅದಕ್ಕೆ 'ಅನ್ನು' ಬಂದು ಸೇರಿದೆ, ಈ ಪದವನ್ನು ಉಚ್ಚರಿಸುವಾಗ ಸ್ವಲ್ಪ ಎಚ್ಚರಿಕೆಯಿಂದ ಗಮನಿಸಿದರೆ ಉಚ್ಚಾರಣೆಯಲ್ಲಿ ಸಂಧಿ ಕಾರ್ಯದ ಸುಳಿವು ಸಿಗುವುದೇ ಇಲ್ಲ ಎಂಬುದು ಗೊತ್ತಾಗುತ್ತದೆ. ಅಂದರೆ ಪ್ರಕೃತಿ ರೂಪ 'ಕಾಲ್' ಮತ್ತು ಪ್ರತ್ಯಯ 'ಅನ್ನು'ಗಳನ್ನು ಎರಡು ಸ್ವತಂತ್ರ ಘಟಕಗಳಾಗಿಯೇ ನಾವು ಉಳಿಸಿಕೊಳ್ಳುತ್ತೇವೆ. ಇದು ಉಚ್ಚಾರಣೆಯ ಒಂದು ನಿಯಮ. ಇದೇ ಕಾಲ್ ರೂಪಕ್ಕೆ ಚತುರ್ಥೀ ವಿಭಕ್ತಿ ಪ್ರತ್ಯಯ 'ಗೆ' ಸೇರಿದರೆ ಏನಾಗುವುದು ಎಂಬುದನ್ನು ಗಮನಿಸಿ. ಬರೆಯುವಾಗ ಅಲ್ಲಿ ಸ್ವರಭಕ್ತಿ ನಡೆದು ಎರಡು ವ್ಯಂಜನಗಳ ನಡುವೆ 'ಇ'ಕಾರ ಸೇರುತ್ತದೆ. 'ಕಾಲಿಗೆ' ಎಂಬ ರೂಪ ಸಿದ್ಧಗೊಳ್ಳುತ್ತದೆ. ಆದರೆ ಉಚ್ಚರಿಸುವಾಗ ಪ್ರಕೃತಿ ಮತ್ತು ಪ್ರತ್ಯಯಗಳನ್ನು ಯಾವ ಬದಲಾವಣೆಯೂ ಮಾಡದೆ ನಾವು ಉಳಿಸಿಕೊಳ್ಳುತ್ತೇವೆ. ಆದ್ದರಿಂದ 'ಕಾಲ್ಗೆ' ಎಂದು ಉಚ್ಚರಿಸುತ್ತೇವೆ. ಈ ವಿವರಣೆಯನ್ನು ಇನ್ನಷ್ಟು ಪ್ರಸಂಗಗಳಲ್ಲಿ ಪರಿಶೀಲಿಸಿ ನೋಡಬಹುದು. 'ಅ'ಕಾರಾಂತ ನಾಮಪದಗಳಿಗೆ ಇದೇ 'ಅನ್ನು' ಪ್ರತ್ಯಯ ಸೇರಿದಾಗ 'ಉ'ಕಾರಾಗಮ ಆಗುವುದೆಂದು ವ್ಯಾಕರಣಗಳು ಹೇಳುತ್ತವೆ. ಅಂದರೆ ದೀಪ ಪದಕ್ಕೆ 'ಅನ್ನು' ಸೇರಿದರೆ ದೀಪವನ್ನು ಎಂದಾಗುತ್ತದೆ. ಬರಹದಲ್ಲಿ ಇರುವ ದೀಪವನ್ನು ಎಂಬ ರೂಪವನ್ನು ನಾವು ಮಾತಿನಲ್ಲಿ ಹೇಗೆ ಉಚ್ಚರಿಸುತ್ತೇವೆ ಎಂಬುದನ್ನು ಗಮನಿಸಿ, ಯಾರೂ ಮಾತಿನಲ್ಲಿ ದೀಪವನ್ನು ಎಂದು ಹೇಳುವುದಿಲ್ಲ. ಇದು ಉಚ್ಚಾರಣೆಯ ಶುದ್ಧಾತಿಶುದ್ಧತೆಯ ಪ್ರಶ್ನೆಯಲ್ಲ. ಕನ್ನಡ ಮಾತಿನ ಲಯಕ್ಕೆ ಸಂಬಂಧಿಸಿದ ಪ್ರಶ್ನೆ. ಅಂದರೆ ಕಣ್ಣೋದಿಗೆ ಸಿದ್ಧಗೊಂಡ ಕನ್ನಡವನ್ನು ಯಥಾವತ್ತಾಗಿ ಬಾಯಿಯೋದಿಗೆ ಪರಿವರ್ತಿಸಲು ಬರುವುದಿಲ್ಲ.

ಇಂತಹ ಇನ್ನೂ ಕೆಲವು ಸಮಸ್ಯೆಗಳನ್ನು ಗಮನಿಸೋಣ. ಬೇರೊಂದು ಪ್ರಸಂಗದಲ್ಲಿ ನಾವು ಕನ್ನಡ ಪದಕೋಶವನ್ನು ಬಳಕೆಯ ಪದಕೋಶ ಮತ್ತು ಗ್ರಹಿಕೆಯ ಪದಕೋಶ ಎಂದು ವಿಭಜಿಸಿದ್ದೇವೆ. ಸಾಮಾನ್ಯವಾಗಿ ಗ್ರಹಿಕೆಯ ಪದಕೋಶ ವಿಸ್ತಾರವಾದದ್ದು. ಅದರಲ್ಲಿರುವ ಎಲ್ಲ ಪದಗಳನ್ನೂ ನಾವು ನಮ್ಮ ಮಾತಿನಲ್ಲಿ ಬಳಸುವುದಿಲ್ಲ. ಬಳಕೆಯ ಪದಕೋಶ ಚಿಕ್ಕದು, ಹೀಗೆಂದಾಗಲೂ ಎಚ್ಚರಿಕೆಯಿಂದ ಗಮನಿಸಬೇಕಾದ ಕೆಲವು ಸಂಗತಿಗಳಿವೆ. ಈ ಬಳಕೆಯ ಪದಕೋಶದಲ್ಲಿ ಬರಹ ಮತ್ತು ಮಾತುಗಳಿಗೆ ದೊರಕುವ ಪದಗಳು ಒಂದೇ ಅಲ್ಲ. ಅವು ಬೇರೆ ಬೇರೆ. ನಾವು ನಮ್ಮ ಬಳಕೆಯ ಪದಕೋಶದ

ಪದಗಳಲ್ಲಿ ಇರುವ ಎಲ್ಲವನ್ನೂ ಬರೆಹದಲ್ಲಿ ಬಳಸುವುದಿಲ್ಲ. ಹಾಗೆಯೇ ಬರೆಯಲು ಬಳಸಿದ ಪದಗಳನ್ನೆಲ್ಲಾ ಮಾತಿನಲ್ಲಿ ಬಳಸುವುದಿಲ್ಲ. ಇವೆರಡೂ ಬೇರೆ ಬೇರೆ.ಕೆಲವರು ಈ ನೆಲೆಯನ್ನು ಇನ್ನೊಂದು ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತಾರೆ. ಹದಿಮೂರನೇ ಶತಮಾನದ ಕನ್ನಡ ಆಲಂಕಾರಿಕನೊಬ್ಬ 'ಆಡಿದ ಮಾತುಗಳನ್ನು ಛಂದಕ್ಕೆ ಬರ್ಪ' (ಬರುವ) ಹಾಗೆ ಬರೆಯಬೇಕು ಎನ್ನುತ್ತಾನೆ. ಇದು ಇಬ್ಬಂದಿತನದ ಮಾತು. ಬರಹವು ಮಾತಿನಂತೆ ಇರಬೇಕು ಎಂಬ ವಾಖ್ಯೆಯನ್ನು ಸರಿಯಾಗಿ ಗ್ರಹಿಸಬೇಕು. ಕಣ್ಣೋದಿಗೆ ಸಿದ್ಧಪಡಿಸಿಬೇಕಾದ ಬರಹವನ್ನು ಮಾತಿನ ಧಾಟಿಯಲ್ಲಿ ಬರೆದರೆ ಅದು ಕಣ್ಣೋದಿಗೆ ಅನುಕೂಲಕರವಾಗುವುದಿಲ್ಲ. (ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರ ಪ್ರಕಟಿಸಿರುವ 'ಪಂಪ ಒಂದು ಅಧ್ಯಯನ' (೧೯೭೪)ಕೃತಿಯಲ್ಲಿರುವ ಶ್ರೀ ಕೆ.ವಿ.ಸುಬ್ಬಣ್ಣನವರ ಲೇಖನವನ್ನು ಈ ದೃಷ್ಟಿಯಿಂದ ಪರಿಶೀಲಿಸಬಹುದು.) ಈ ಭಾಷೆಯ ಅಂತರಾಳವನ್ನು ಗ್ರಹಿಸದಿದ್ದರೆ ಸಮಸ್ಯೆಗಳು ಉಂಟಾಗುತ್ತವೆ. ಬರೆಯಲು ಲಭ್ಯವಿರುವ ಪದಕೋಶ ಎಂದಾಗ ಮುಖ್ಯವಾಗಿ ಅದು ಕಣ್ಣೋದಿನ ಬರಹಕ್ಕೆ ಅನ್ವಯಿಸುವ ಮಾತು. ಅಲ್ಲಿನ ಪದಗಳನ್ನು ಅವು ಇರುವಂತೆಯೇ ಕಿವಿ ಓದಿನ ಅಥವಾ ಬಾಯಿ ಓದಿನ ಬರಹಗಳಲ್ಲಿ ಬಳಸಲು ಸಾಧ್ಯವಿಲ್ಲ. ಈ ಗೆರೆ ಎಳೆಯುವಿಕೆಯನ್ನು ಹೊಸ ಭಾಷಾಬಳಕೆಗಳು ಗ್ರಹಿಸದಿರುವುದು ಒಂದು ಮೂಲಭೂತ ಕೊರತೆಯಾಗಿದೆ. ಯಾವ ಪದಗಳು ಉಚ್ಚಾರಣೆಗೆ ತಕ್ಕುವಲ್ಲವೋ ಅಂದರೆ ನಮ್ಮ ಮಾತಿನಲ್ಲಿ ಸಹಜವಾಗಿ ಬಳಸುವುದಿಲ್ಲವೋ ಅಂತಹ ಪದಗಳನ್ನು ಓದಿ ಹೇಳಬೇಕಾದ ಬರಹಗಳಲ್ಲಿ ಬಳಸುತ್ತಿದ್ದೇವೆ. ಇಲ್ಲಿ ಕನ್ನಡ ಇನ್ನೂ ವೃತ್ತಿಪರತೆಯನ್ನು ಅಳವಡಿಸಿಕೊಳ್ಳುವ ಅಗತ್ಯ ಕಂಡು ಬರುತ್ತಿದೆ.

ಆಧುನೀಕರಣದ ಮತ್ತೂ ಹೊಸ ಸಮಸ್ಯೆಗಳೆಂದರೆ ಈ ಹಿಂದೆ ಬಳಕೆಯಲ್ಲಿ ಕಾಣದಿದ್ದ ಎಷ್ಟೋ ಬಗೆಯ ರಚನೆಗಳನ್ನು ಈಗ ರೂಪಿಸಿಕೊಳ್ಳಬೇಕಾಗಿದೆ. ಇದಕ್ಕೆ ಅಗತ್ಯವಾದ ಸಿದ್ಧತೆಗಳು, ಸೂಚನೆಗಳು ಕೈಪಿಡಿಯ ರೂಪದಲ್ಲಿ ಕನ್ನಡದಲ್ಲಿ ದೊರಕುತ್ತಿಲ್ಲ. ಕೆಲವು ದಶಕಗಳ ಹಿಂದೆ ತಂತಿಸಮಾಚಾರವನ್ನು ನೀಡುವ ಅವಕಾಶಗಳಿದ್ದವು. ಆಗ ಲಭ್ಯವಿದ್ದ ತಂತ್ರಜ್ಞಾನಕ್ಕೆ ಅನುಗುಣವಾಗಿ ಸಿದ್ಧ ಮಾದರಿಯ ಸಂದೇಶಗಳನ್ನು ಇಂಗ್ಲಿಶ್‌ನಿಂದ ಅನುವಾದಿಸಿಕೊಂಡು ಬಳಸಲು ಸೂಚನೆ ನೀಡಲಾಗುತ್ತಿತ್ತು, ಆದರೆ ಸ್ವತಂತ್ರ ಸಂದೇಶವೊಂದನ್ನು ರೂಪಿಸಬೇಕಾದಾಗ ಸಮಸ್ಯೆಗಳು ಎದುರಾಗುತ್ತಿದ್ದವು. ಕಡಿಮೆ ಪದಗಳಲ್ಲಿ ಎಷ್ಟು ಅರ್ಥ ಇರಬೇಕೋ ಅಷ್ಟನ್ನು ಮತ್ತು ಅಷ್ಟನ್ನು ಮಾತ್ರ ತಿಳಿಸಿ ಹೇಳುವಂತೆ ಪದಗಳನ್ನು ಆಯ್ಕೆ ಮಾಡುವುದು ಹೊಸ ಸವಾಲಾಗಿತ್ತು. ಇಂತಹದೇ ಸಮಸ್ಯೆಗಳು ಸಾರ್ವಜನಿಕ ವಲಯದ ಪತ್ರಗಳಲ್ಲಿ ಕೂಡಾ ಎದ್ದು ಕಾಣುತ್ತಿತ್ತು. ಸರ್ಕಾರದ ಕಛೇರಿಯೊಂದಕ್ಕೆ ಅಹವಾಲೊಂದನ್ನು ಸಲ್ಲಿಸುತ್ತೇವೆ ಎಂದುಕೊಳ್ಳೋಣ. ಈ ಅಹವಾಲಿನ ಚೌಕಟ್ಟನ್ನು ತಿಳಿಸಿ ಹೇಳುವ ಮಾರ್ಗದರ್ಶಿಗಳಿವೆ. ಎಂದರೆ ವಿಳಾಸ ಎಲ್ಲಿ ಬರೆಯಬೇಕು ದಿನಾಂಕ, ಸಹಿ, ಸಂಬೋಧನಾ ವಿಧಾನ, ಇವೆಲ್ಲಾ ಸೂಚನೆಗಳು ಲಭ್ಯವಿದೆ. ಆದರೆ ಅದಕ್ಕಿಂತ ಮುಖ್ಯವಾದುದು ಬರೆಹದ ರಾಚನಿಕ ನಿಯಮಗಳು. ಏಕೆಂದರೆ ಇಂತಹ ಅಹವಾಲುಗಳನ್ನು ನೂರಾರು ಸಂಖ್ಯೆಯಲ್ಲಿ ಪಡೆಯುವ ಕಛೇರಿಗಳು ಅದರಲ್ಲಿರುವ ಪ್ರತಿಯೊಂದು ವಾಕ್ಯವನ್ನೂ ಓದುವುದಿಲ್ಲ. ಬೇಡದ ವಿವರ ಮತ್ತು ಬೇಕಾದ ವಿವರ

ಎಂಬ ವಿಭಜನೆಗೆ ಅಲ್ಲಿ ಸಮಯಾವಕಾಶ ಇರುವುದಿಲ್ಲ. ಆದ್ದರಿಂದ ಅಲ್ಲಿಯ ಬರವಣಿಗೆಯಲ್ಲೂ ಹೇಳಬೇಕಾದಷ್ಟನ್ನು ಮತ್ತು ಎಲ್ಲವನ್ನೂ ಹೇಳಲು ಅನುಕೂಲವಾಗುವ ಪದಪುಂಜಗಳು ಸಿದ್ಧಗೊಳ್ಳಬೇಕಾಗಿದೆ. ಈ ಸಮಸ್ಯೆಗಳನ್ನು ಕನ್ನಡ ಇನ್ನೂ ನಿವಾರಿಸಿಕೊಂಡಿಲ್ಲ.

ಈ ಅಧ್ಯಾಯದ ಮೊದಲಲ್ಲಿ ಆಧುನೀಕರಣದ ತುರ್ತುನೆಲೆಯಿಂದ ಅಲ್ಲಿ ಇಂಗ್ಲಿಶಿನ ಪ್ರಭಾವ ಹೆಚ್ಚಿದೆ ಎಂದು ಗಮನಿಸಿದ್ದೆವು. ಈ ಇಂಗ್ಲಿಶ್ ಪದಗಳನ್ನು ಕನ್ನಡಕ್ಕೆ ತೆಗೆದುಕೊಂಡು ಬಳಸುವಾಗ, ಮಾತಿನಲ್ಲಿ ಎದುರಾಗದ ಸಮಸ್ಯೆಗಳು ಬರವಣಿಗೆಯಲ್ಲಿ ಎದುರಾಗುತ್ತವೆ. ಮಾತಿನಲ್ಲಿ ಒಂದು ಪದವನ್ನು ಸುಮ್ಮನೆ ಉಚ್ಚರಿಸಿ ಬಿಡುತ್ತೇವೆ. ಅದೇ ಪದವನ್ನು ಬರೆಹದಲ್ಲಿ ಬರೆಯಬೇಕಾಗಿ ಬಂದಾಗ ಕನ್ನಡ ಭಾಷೆಯಲ್ಲಿ ಎರಡು ತಂತ್ರಗಳನ್ನು ಬಳಸುತ್ತಿದ್ದೇವೆ. ಒಂದು: ಬರವಣಿಗೆ ಕನ್ನಡ ಲಿಪಿಯಲ್ಲಿ ಇದ್ದರೂ ನಡುವೆ ಬರುವ ಇಂಗ್ಲಿಶ್ ಪದಗಳನ್ನು ರೋಮನ್ ಲಿಪಿಯಲ್ಲಿ ಬರೆಯುವುದು. ಈ ವಿಧಾನದಲ್ಲಿ ಕೆಲವು ಕಷ್ಟಗಳಿವೆ. ಆ ಪದದ ಇಂಗ್ಲಿಶ್ ಕಾಗುಣಿತ ಸರಿಯಾಗಿ ಗೊತ್ತಿರಬೇಕು. ಉಚ್ಚರಿಸಿದ ಕೂಡಲೇ ಕಾಗುಣಿತ ಗೊತ್ತಿರಬೇಕೆಂದೇನಿಲ್ಲ. ಅಲ್ಲದೆ ಈ ಬರವಣಿಗೆಯನ್ನು ಓದುವವರಿಗೆ ಕನ್ನಡ ಲಿಪಿಯೊಡನೆ ರೋಮನ್ ಲಿಪಿ ಮತ್ತು ಇಂಗ್ಲಿಶ್ ಭಾಷೆಯ ಪರಿಚಯವಿರಬೇಕು. ಇವೆರಡೇ ಅಲ್ಲದೆ ಇನ್ನೂ ಒಂದು ತೊಂದರೆ ಇದೆ. ಅದು ಮುದ್ರಣದಲ್ಲಿ ತಲೆ ಎತ್ತುವ ಸಮಸ್ಯೆ. ಕನ್ನಡ ಲಿಪಿಯ ವಿನ್ಯಾಸ ಮತ್ತು ರೋಮನ್ ಲಿಪಿಯ ವಿನ್ಯಾಸ ಪರಸ್ಪರ ಹೊಂದಿಕೊಳ್ಳುವುದಿಲ್ಲ. ಎರಡನೆಯ ಮಾರ್ಗವೆಂದರೆ ಇಂಗ್ಲಿಶ್ ಪದವನ್ನು ಕನ್ನಡ ಲಿಪಿಯಲ್ಲಿ ಬರೆಯುವುದು. ಇದು ಹೆಚ್ಚು ಸೂಕ್ತವಾದ ವಿಧಾನವೆಂದು ತೋರುತ್ತದೆ. ಮೊದಲ ವಿಧಾನದ ಇಕ್ಕಟ್ಟುಗಳು ಇಲ್ಲಿ ಇರುವುದಿಲ್ಲ. ಅಲ್ಲದೆ ಬಹು ಹಿಂದಿನಿಂದಲೂ ಕನ್ನಡ ಭಾಷೆ ತಾನು ಎರವಲು ಪಡೆದ ಸಂಸ್ಕೃತ ಭಾಷೆಯ ಪದಗಳನ್ನು ಬರೆಯಲು ಕನ್ನಡ ಲಿಪಿಯನ್ನೇ ಬಳಸಿಕೊಂಡಿದೆ. ಇದಕ್ಕಾಗಿ ಕನ್ನಡ ಲಿಪಿ ವ್ಯವಸ್ಥೆಯಲ್ಲೇ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಇಂಗ್ಲಿಶ್ ವಿಷಯಕ್ಕೂ ಇದೇ ತಂತ್ರವನ್ನು ಅನುಸರಿಸುವುದು ಸೂಕ್ತ. ಕೆಲವು ದಶಕಗಳ ಅನಂತರ ಈ ಇಂಗ್ಲಿಶ್ ಪದಗಳು ಕನ್ನಡದ ಲಯಗಾರಿಕೆಗೆ ಅನುಗುಣವಾಗಿ ಬದಲಾಗಿ ಬಿಡುತ್ತವೆ.

ಇಂಗ್ಲಿಶ್ ಪದಗಳನ್ನು ಕನ್ನಡ ಲಿಪಿಯಲ್ಲಿ ಬರೆಯುವ ತಂತ್ರದಿಂದ ಇನ್ನೊಂದು ಬಹುಮುಖ್ಯ ಪ್ರಯೋಜನವಿದೆ. ಇಂಗ್ಲಿಶ್ ಭಾಷೆ ಅಧಿಕಾರದ ಸ್ಥಾನದಲ್ಲಿ ಇದೆ. ಆದ್ದರಿಂದ ಆ ಭಾಷೆಯ ಪದಗಳಿಗೆ ಸಹಜವಾಗಿಯೇ ಒಂದು ಮೇಲರಿಮೆಯ ಭಾವವನ್ನು ಉದ್ದೀಪಿಸುವ ಸಾಮರ್ಥ್ಯವಿರುತ್ತದೆ. ಆದರೆ ಕನ್ನಡ ಭಾಷಿಕರು ಇಂತಹ ಮೇಲರಿಮೆಯ ಭಾವದ ಪದಗಳ ಬಳಕೆಯಿಂದ ಯಾವುದೇ ಮಾನಸಿಕ ಕೀಳರಿಮೆಗೆ ಒಳಗಾಗಬಾರದೆಂಬುದು ಭಾಷಾಯೋಜನೆಯ ಒಂದು ಮುಖ್ಯ ಉದ್ದೇಶವಾಗಬೇಕು.ಅದಕ್ಕಾಗಿ ಇಂಗ್ಲಿಶ್ ಪದಗಳನ್ನು ಕನ್ನಡ ಲಿಪಿಯಲ್ಲೇ ಬರೆಯುವುದರಿಂದ ಕಾಲಕ್ರಮೇಣ ಆ ಪದಗಳು ಸಹಜವಾಗಿಯೇ ತಮ್ಮ ಮೇಲರಿಮೆಯನ್ನು ಕಳೆದುಕೊಳ್ಳಬಹುದು. ಇದು ಒಂದು ಸಾಧ್ಯತೆ. ಸಂಸ್ಕೃತ ಭಾಷೆಯ

ಪದಗಳ ಮಟ್ಟಿಗೆ ಇಂಥದೇ ಪ್ರಭಾವ ಆಗುವ ಸಾಧ್ಯತೆ ಇತ್ತು. ಈಗ ಅದು ಕಡಿಮೆಯಾಗಲು ಆ ಪದಗಳನ್ನು ಕನ್ನಡ ಲಿಪಿಯಲ್ಲಿ ಬರೆದದ್ದು ಒಂದು ಮುಖ್ಯ ಕಾರಣ. ನಾವು ದಿನನಿತ್ಯ ಬಳಸುವ ನೂರಾರು ಸಂಸ್ಕೃತ ಪದಗಳನ್ನು ಕನ್ನಡದ ಪದಗಳೆಂದೇ ತಿಳಿದುಬಿಟ್ಟಿದ್ದೇವೆ. ಇಂಗ್ಲಿಶ್ ಪದಗಳ ಮಟ್ಟಿಗೆ ಈ ಬದಲಾವಣೆ ಅಗತ್ಯವೆಂದು ತೋರುತ್ತದೆ.

ಹೀಗೆ ಮಾಡದೆ ಈಗ ನಾವು ಅನುಸರಿಸುತ್ತಿರುವ ವಿಧಾನವೆಂದರೆ ಇಂಗ್ಲಿಶ್ ಪದಕ್ಕೆ ಸಂವಾದಿಯಾದ ಒಂದು ಪದವನ್ನು ರೂಪಿಸುವುದು. ಅದು ಕನ್ನಡದ್ದಿರಬಹುದು. ಇಲ್ಲವೇ ಸಂಸ್ಕೃತದ್ದಿರಬಹುದು. ಈ ಸಂವಾದಿ ಪದವನ್ನು ಬಳಸಿ, ವಿವರಣೆ ಎನ್ನುವಂತೆ ಮೂಲ ಇಂಗ್ಲಿಶ್ ಪದಗಳನ್ನು ಕಂಸಗಳಲ್ಲಿ, ರೋಮನ್ ಲಿಪಿಗಳಲ್ಲಿ ನೀಡುತ್ತಿದ್ದೇವೆ. ಇದು ಸೌಲಭ್ಯದ ದೃಷ್ಟಿಯಿಂದ ಎಷ್ಟು ಸರಿ ಎಂಬ ಪ್ರಶ್ನೆ ಬದಿಗಿರಲಿ. ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಇದು ಸರಿಯಾದ ಕ್ರಮವಲ್ಲ.

ಆಧುನೀಕರಣದಿಂದಾಗಿ ಬರವಣಿಗೆಯಲ್ಲಿ ಆಗಿರುವ ಇನ್ನೊಂದು ಮುಖ್ಯ ಬದಲಾವಣೆ ಎಂದರೆ ಲೇಖನ ಚಿಹ್ನೆಗಳ ಬಳಕೆ ಮತ್ತು ಸಂಕ್ಷೇಪಾಕ್ಷರಗಳ ಬಳಕೆ. ಲೇಖನ ಚಿಹ್ನೆಗಳನ್ನು ಮುದ್ರಣದ ಆಗಮನದೊಂದಿಗೆ ಕನ್ನಡ ರೂಢಿಸಿಕೊಂಡಿದೆ. ಬಹುಮಟ್ಟಿಗೆ ಇಪ್ಪತ್ತನೇ ಶತಮಾನದಲ್ಲಿ ಕೆಲವು ಮುಖ್ಯ ಲೇಖನ ಚಿಹ್ನೆಗಳನ್ನು ಬಳಸುವ ಮತ್ತು ಸರಿಯಾಗಿ ಬಳಸುವ ಪ್ರಯತ್ನಗಳು ಮುಂದುವರೆದವು. ಹೀಗಿದ್ದರೂ ವಾಕ್ಯದ ಕೊನೆಗೆ ಬರುವ ಪೂರ್ಣ ವಿರಾಮದ ಬಳಕೆಯನ್ನು ಬಿಟ್ಟರೆ ಉಳಿದ ಲೇಖನ ಚಿಹ್ನೆಗಳನ್ನು ಬಳಸಲು ಅನುಕೂಲಕರವಾದ ನಿಯಮಗಳನ್ನು ನಾವು ರೂಪಿಸಿಕೊಂಡಿಲ್ಲ. ಮಾತಿನ ಕೆಲವು ಸೌಲಭ್ಯಗಳನ್ನು ಕಾಯ್ದುಕೊಳ್ಳಲು ಲೇಖನ ಚಿಹ್ನೆಗಳನ್ನು ಯಾವ ಉದ್ದೇಶಕ್ಕಾಗಿ ಎಲ್ಲಿ ಬಳಸಬೇಕು ಎಂಬುದನ್ನು ತಿಳಿಸುವ ಖಚಿತ ನಿಯಮಗಳನ್ನು ರೂಪಿಸಲಾಗಿಲ್ಲ. ಉದಾ.ಗೆ ಒಂದು ವಾಕ್ಯದಲ್ಲಿ ಪ್ರಶ್ನಾರ್ಥಕ ಚಿಹ್ನೆ ಎಲ್ಲಿ ಬಳಕೆಯಾಗುತ್ತದೆ? ಇಡೀ ವಾಕ್ಯವೇ, ಅದೆಷ್ಟೇ ದೀರ್ಘವಾಗಿರಲಿ, ಒಂದು ಪ್ರಶ್ನೆಯಾಗಿದ್ದರೆ ಆಗ ಮಾತ್ರ ವಾಕ್ಯದ ಕೊನೆಗೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸುತ್ತೇವೆ. ಆದರೆ ವಾಕ್ಯವು, ಒಂದು ಹೇಳಿಕೆಯಾಗಿದ್ದು ಅದರೊಳಗೆ ಅಂತರ್ಗತವಾಗಿರುವ ವಾಕ್ಯ ಒಂದು ಪ್ರಶ್ನೆಯಾಗಿದ್ದರೆ ಆಗ ಆ ಅಂತರ್ಗತ ವಾಕ್ಯದ ಕೊನೆಗೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸುವುದಿಲ್ಲ. ಉದಾ.ಗೆ 'ನೀನು ಮನೆಗೆ ಯಾವಾಗ ಬಂದೆ ಎಂದು ಕೇಳಿದರು' ಎಂಬ ವಾಕ್ಯದಲ್ಲಿ ಒಂದು ಅಂತರ್ಗತ ವಾಕ್ಯವಿದೆ. ಬರೆಯುವಾಗ ಈ ವಾಕ್ಯದ ಮಧ್ಯೆ ಅಥವಾ ವಾಕ್ಯದ ಕೊನೆಗಾಗಲೀ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕುವುದು ಸರಿಯಲ್ಲ. ಇಂತಹ ಸರಳ ನಿಯಮಗಳು ಕೂಡಾ ಕನ್ನಡ ಬರವಣಿಗೆಯಲ್ಲಿ ಪಾಲಿತವಾಗುತ್ತಿಲ್ಲ. ಇದೇ ಮಾತು ಅರ್ಧವಿರಾಮ, ಅಲ್ಪವಿರಾಮ, ವಿವರಣಾತ್ಮಕ ಚಿಹ್ನೆ, ನಡುಗೆರೆ, ಉಲ್ಲೇಖ ಚಿಹ್ನೆಗಳು, ಇವೆಲ್ಲದರ ಬಳಕೆಯಲ್ಲೂ ಇಂಥದೇ ಸಮಸ್ಯೆಗಳು ಕಾಣುತ್ತಿವೆ.

ಲೇಖನಚಿಹ್ನೆಯ ಜೊತೆಗೆ ಸಂಕ್ಷೇಪಾಕ್ಷರಗಳನ್ನು ಸಾಕಷ್ಟು ಬಳಸುತ್ತೇವೆ. ಇವುಗಳು ಪೂರ್ಣಪದಗಳಾಗಿರಬಹುದು ಇಲ್ಲವೇ ಪೂರ್ಣ ಪ್ರಕ್ರಿಯೆಗಳಾಗಿರ ಬಹುದು. ಆದರೆ

ಸಂಕ್ಷಿಪ್ತಗೊಳಿಸುವ ರೀತಿಯಲ್ಲೂ ಗೊಂದಲಗಳಿವೆ. ಮತ್ತು ಹೀಗೆ ಸಂಕ್ಷೇಪಗೊಳಿಸಿದ್ದನ್ನು ಓದುವಾಗ ಆ ಸಂಕೇತಾಕ್ಷರಗಳ ಪೂರ್ಣರೂಪವನ್ನೇ ಉಚ್ಚರಿಸಬೇಕು. ಇದು ಕೂಡಾ ಪಾಲನೆಯಾಗುವುದಿಲ್ಲ. ಕ್ರಿಸ್ತಶಕೆ ಎಂಬುದನ್ನು ಕ್ರಿಶ ಎಂದು ಬರೆದರೂ ಓದುವಾಗ ಕ್ರಿಸ್ತಶಕೆ ಎಂದೇ ಓದಬೇಕು, ಈ ಸಂಕ್ಷೇಪಾಕ್ಷರ ಗಳನ್ನು ರೂಪಿಸುವ ನೆಲೆಯಲ್ಲೂ ಕೆಲವು ಗೊಂದಲಗಳಿವೆ. ಹೆಚ್ಚು ಜನಪ್ರಿಯವಾದ ಮತ್ತು ಇಂಗ್ಲಿಶಿನಿಂದ ಎರವಲು ಪಡೆದ ಸಂಕ್ಷೇಪಗಳನ್ನು ಕನ್ನಡಕ್ಕೆ ಹೊಂದಿಸಿಕೊಂಡು ಅದನ್ನು ಬಳಸುವುದುಂಟು. ಇದು ಕೂಡಾ ಕೆಲವು ಗೊಂದಲಗಳಿಗೆ ಕಾರಣವಾಗುತ್ತದೆ.

ಕನ್ನಡದಲ್ಲಿ ಭಾಷಾದ್ವಿಸ್ತರತೆ (ಡೈಗ್ಲಾಸಿಯಾ)

ಕಳೆದ ಶತಮಾನದ ಉತ್ತರಾರ್ಧದಲ್ಲಿ ಸಾಮಾಜಿಕ ಭಾಷಾಶಾಸ್ತ್ರದ ದೃಷ್ಟಿಯಿಂದ ಬಹು ಚರ್ಚಿತವಾದ ಪರಿಕಲ್ಪನೆಗಳಲ್ಲಿ ಭಾಷಾದ್ವಿಸ್ತರತೆಯೂ ಒಂದು. ಚಾರ್ಲ್ಸ್ ಫರ್ಗ್ಯುಸನ್ ಈ ಬಗೆಗೆ ಮೊದಲು ಪ್ರಸ್ತಾಪ ಮಾಡಿದರು. ಬಹು ಪುರಾತನ ಭಾಷೆಗಳು ಮತ್ತು ಆ ಭಾಷೆಗಳನ್ನಾಡುವ ಸಮುದಾಯ ಇವುಗಳ ಸಂಬಂಧದಲ್ಲಿ ಈ ಪರಿಕಲ್ಪನೆ ಚರ್ಚೆಗೆ ಬಂತು. ಅರಾಬಿಕ್ ಸಿಮೆಟಿಕ್ ಭಾಷಾವರ್ಗಕ್ಕೆ ಸೇರಿದ ಒಂದು ಭಾಷೆ. ಜಗತ್ತಿನ ಬಹು ಪ್ರದೇಶಗಳಲ್ಲಿ ವ್ಯಾಪಿಸಿರುವ ಇಸ್ಲಾಂ ಧರ್ಮದ ಪವಿತ್ರ ಗ್ರಂಥ ಕುರಾನ್ ಈ ಭಾಷೆಯಲ್ಲಿದೆ. ಈಗಲೂ ಪ್ರಾರ್ಥನೆಗಾಗಿ ಬಳಸುವ ಭಾಷೆ ಅರಾಬಿಕ್. ಇಸ್ಲಾಂದೇಶಗಳ ಸಂದರ್ಭವನ್ನು ಅಭ್ಯಾಸ ಮಾಡಿದ ಫರ್ಗ್ಯುಸನ್ ಮುಖ್ಯವಾಗಿ ಈಜಿಪ್ಟಿನಲ್ಲಿ ಎರಡು ಬಗೆಯ ಅರಾಬಿಕ್ ಇರುವುದನ್ನು ಗುರುತಿಸಿ ಇವುಗಳನ್ನು ಹೈ-ಅರಾಬಿಕ್ ಮತ್ತು ಲೋ-ಅರಾಬಿಕ್ ಎಂದು ಕರೆದರು. ಒಂದು ಭಾಷಾಸಮುದಾಯದಲ್ಲಿ ಈ ಎರಡು ಭಾಷಾಬಗೆಗಳು ನಿರ್ದಿಷ್ಟ ಕೆಲಸಗಳನ್ನು ಮಾಡಲೆಂದೇ ಇರುವ ಪರಿಸ್ಥಿತಿಯೇ ಭಾಷಾದ್ವಿಸ್ತರತೆ. ಹೈ-ಅರಾಬಿಕ್ ಪ್ರಾರ್ಥನೆ, ಆರಾಧನೆಗಳಲ್ಲಿ, ಉನ್ನತ ಮಟ್ಟದ ಧಾರ್ಮಿಕ ಪ್ರವಚನಗಳಲ್ಲಿ, ಲಿಖಿತ ನಿರೂಪಣೆಗಳಲ್ಲಿ ಬಳಕೆಯಾಗಹತ್ತಿತು. ಉಳಿದ ಕಡೆ,ಮುಖ್ಯವಾಗಿ ದಿನದಿನದ ವ್ಯಾವಹಾರಿಕ ಜಗತ್ತಿನಲ್ಲಿ ಲೋ-ಅರಾಬಿಕ್ ಬಳಕೆಯಲ್ಲಿತ್ತು. ಇದು ಒಂದು ವಿವರಣೆಯಾಗಿ ಕಾಣುತ್ತದೆ. ಒಂದು ಪ್ರಭೇದ ಬಳಕೆಯಾಗುವ ಕಡೆ ಇನ್ನೊಂದು ಪ್ರಭೇದ ಬಳಕೆಯಾಗುವುದು ಸಾಮಾಜಿಕ ಕಟ್ಟುಪಾಡಿನ ಉಲ್ಲಂಘನೆಯಾಗುತ್ತದೆ. ಅಲ್ಲದೇ ಲೋ-ಅರಾಬಿಕ್ ಜನರಿಗೆ ಅನೌಪಚಾರಿಕವಾಗಿ ಲಭಿಸುವ ಪ್ರಭೇದ. ಹೈ ಅರಾಜಿಕನ್ನು ಔಪಚಾರಿಕ ಶಿಕ್ಷಣದ ಮೂಲಕ ಕಲಿಯಬೇಕಾಗುತ್ತದೆ. ಈ ಎರಡು ಪ್ರಭೇದಗಳಲ್ಲಿ ಧ್ವನಿನಿಯಮ, ಪದರಚನೆ, ವಾಕ್ಯರಚನೆಗಳು ಭಿನ್ನವಾಗಿರುತ್ತವೆ. ಭಾಷಾದ್ವಿಸ್ತರತೆಯ ಇತರ ಲಕ್ಷಣಗಳು ನಮಗಿಲ್ಲಿ ಅಷ್ಟು ಪ್ರಸ್ತುತವಲ್ಲ. ಆದರೆ ಮುಂದಿನ ದಶಕಗಳಲ್ಲಿ ಈ ಪರಿಕಲ್ಪನೆಯ ವ್ಯಾಖ್ಯೆಯನ್ನು ಬದಲಾಯಿಸಲಾಯಿತು. ಮೊದಲ ವ್ಯಾಖ್ಯೆಯಲ್ಲಿ ಒಂದೇ ಭಾಷೆಯ ಎರಡು ಚಾರಿತ್ರಿಕ ಭಿನ್ನ ಪ್ರಭೇದಗಳಲ್ಲಿ ದ್ವಿಸ್ತರತೆ ಇರುವುದನ್ನು ಗುರುತಿಸಿದರು. ಅನಂತರ ಸಮಕಾಲೀನವಾದ ಎರಡು ಪ್ರಭೇದಗಳ ನಡುವೆಯೂ ಈ ಪರಿಸ್ಥಿತಿ ಉಂಟಾಗಬಹುದು ಎಂದು ಮರು ವ್ಯಾಖ್ಯಾನಿಸಲಾಯಿತು. ಮುಂದುವರೆದು ದ್ವಿಭಾಷಿಕ ಸಮುದಾಯಗಳಲ್ಲಿ ಎರಡು ಭಾಷೆಗಳ ನಡುವೆ ಇರುವ

ಅಧಿಕಾರ ಸಂಬಂಧದ ನೆಲೆಯಲ್ಲಿ ಈ ದ್ವಿಸ್ತರತೆಯನ್ನು ಕಾಣುವುದೂ ಸಾಧ್ಯವೆಂದು ವಿವರಿಸಲಾಗುತ್ತಿದೆ. ಈ ಎಲ್ಲಾ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ಭಾಷಾದ್ವಿಸ್ತರತೆಯ ಪರಿಸ್ಥಿತಿ ಕನ್ನಡದಲ್ಲಿ ಇದೆಯೇ ಎಂಬುದನ್ನು ಪರಿಶೀಲಿಸಬೇಕಾಗಿದೆ.

ಕನ್ನಡದ ಎರಡು ಚಾರಿತ್ರಿಕ ಪ್ರಭೇದಗಳನ್ನು ಇರಿಸಿಕೊಂಡು ಅವುಗಳಲ್ಲಿ ಒಂದನ್ನು ಹೆಚ್ಚು ಪವಿತ್ರವೆಂದು ಪರಿಗಣಿಸುವ ಪ್ರವೃತ್ತಿ ಇಲ್ಲ. ಹೆಚ್ಚೆಂದರೆ ಆ ಚಾರಿತ್ರಿಕ ಪ್ರಭೇದಕ್ಕೆ ಕೆಲವು ನಿರ್ದಿಷ್ಟ ಕಾರ್ಯಗಳನ್ನು ಆರೋಪಿಸುವುದು ಕಂಡು ಬರುತ್ತಿದೆ. ಆದರೆ ಕನ್ನಡದ ಸಮಕಾಲೀನ ಪ್ರಭೇದಗಳ ನಡುವೆ ಈ ದ್ವಿಸ್ತರತೆಯ ಪರಿಸ್ಥಿತಿ ಆಂಶಿಕವಾಗಿ ಕಂಡುಬರುತ್ತದೆ. ಪ್ರಮಾಣಭಾಷೆ ಉನ್ನತ ಸ್ಥಾನವನ್ನು ಪಡೆದಂತೆ ತೋರುತ್ತದೆ. ಈ ಪ್ರಮಾಣಭಾಷೆ ಯಾರ ಆಡು ಭಾಷೆಯೂ ಅಲ್ಲ. ಹಾಗೆ ನೋಡಿದರೆ ಅದು ಬರೆಹಕ್ಕೆ ಮಾತ್ರ ಬಳಕೆಯಾಗುವ ಭಾಷೆಯಾಗಿದೆ. ಬರೆಹದ ಎಲ್ಲ ಬಗೆಗಳಲ್ಲೂ ಪ್ರಮಾಣ ಭಾಷೆಯೇ ಬಳಕೆಯಾಗುವುದಿಲ್ಲ. ಆದರೆ ಎಲ್ಲಿ ಅದು ಬಳಕೆಯಾಗಬೇಕು ಮತ್ತು ಎಲ್ಲಿ ಅದನ್ನು ಬಳಸದಿದ್ದರೆ ತಪ್ಪಾಗುತ್ತದೆ ಎಂಬ ಬಗೆಗೆ ಒಂದು ಅಲಿಖಿತ ನಿಯಮ ಕನ್ನಡದಲ್ಲಿ ಜಾರಿಯಲ್ಲಿದೆ. ಕನ್ನಡದ ಪ್ರಮಾಣರೂಪವನ್ನು ಕಲಿಸಿಕೊಡುವುದೇ ಶಿಕ್ಷಣದ ಒಂದು ಮುಖ್ಯ ಉದ್ದೇಶವಾಗಿದೆ. ಈ ಪ್ರಮಾಣ ಕನ್ನಡಕ್ಕೆ ಪದಕೋಶ, ಧ್ವನಿರಚನೆ, ಮತ್ತು ಪದರಚನೆಗಳಲ್ಲಿ ನಿರ್ದಿಷ್ಟ ವ್ಯಾಪ್ತಿಯಿದೆ; ನಿಯಮಗಳಿವೆ. ಪ್ರಮಾಣಕನ್ನಡ ಅಲ್ಲದ ಕನ್ನಡಗಳು ಹಲವಾರು ಇವೆ. ಅವು ಬಹುಮಟ್ಟಿಗೆ ಮಾತಿನ ರೂಪಗಳು. ಇವುಗಳನ್ನು ಅನೌಪಚಾರಿಕವಾಗಿ ಪಡೆದುಕೊಳ್ಳುತ್ತೇವೆ. ಪ್ರಮಾಣಕನ್ನಡದಲ್ಲಿ ಬಳಕೆಯಾಗುವ ಪದಕೋಶ ಹೆಚ್ಚು ಸಂಸ್ಕೃತಮಯವಾಗಿರುತ್ತದೆ. ಒಂದು ಉದಾಹರಣೆಯನ್ನು ಗಮನಿಸೋಣ: ಮದುವೆಯ ಆಹ್ವಾನ ಪತ್ರಿಕೆಯಲ್ಲಿ ಸಾಮಾನ್ಯವಾಗಿ ಸಾಂಪ್ರದಾಯಿಕ ನೆಲೆಯಲ್ಲಿ ಹುಡುಗ-ಹುಡುಗಿ, ವರ-ವಧುವಾಗುತ್ತಾರೆ. ಆ ಪತ್ರಿಕೆಯ ಭಾಷೆ, ವಾಕ್ಯರಚನೆಗಳು ಒಂದು ನಿರ್ದಿಷ್ಟ ಮಾದರಿಯನ್ನು ಅವಲಂಬಿಸುತ್ತವೆ. ಮತ್ತು ಸಂಸ್ಕೃತ ಪದಗಳಿಂದ ತುಂಬಿರುತ್ತದೆ. ಆದರೆ ಮದುವೆಯ ಸಂದರ್ಭದಲ್ಲಿ ನಡೆಯುವ ಮಾತುಕತೆಗಳಲ್ಲಿ ಯಾರೂ ಈ ಪರಿಭಾಷೆಯನ್ನು ಬಳಸುವುದಿಲ್ಲ. ಅಲ್ಲಿ ಆಯಾ ಸಂದರ್ಭಕ್ಕೆ ಅನುಗುಣವಾದ ಆಡು ಮಾತಿನ ಪ್ರಯೋಗಗಳು, ಪದಗಳು ಕೇಳಿ ಬರುತ್ತವೆ. ಹೀಗೆಯೇ ಸಾಮಾಜಿಕವಾಗಿ ನಿರ್ದಿಷ್ಟಗೊಂಡ ಹಲವು ಸಂದರ್ಭಗಳಲ್ಲಿ ಲಿಖಿತ ರೂಪದಲ್ಲಿ ಪ್ರಮಾಣ ಕನ್ನಡ ಬಳಕೆಯಾಗಬೇಕೆಂಬ ನಿಯಮವಿದೆ. ಆಡಳಿತದ ದಸ್ತಾವೇಜುಗಳಲ್ಲಿ, ನ್ಯಾಯಾಂಗದ ದಾಖಲೆಗಳಲ್ಲಿ, ಮಾಧ್ಯಮಗಳ ಲಿಖಿತ ಮಾದರಿಗಳಲ್ಲಿ, ಪ್ರಾರ್ಥನೆ, ಪ್ರವಚನ ಮುಂತಾದ ಕಡೆಗಳಲ್ಲಿ ಈ ಪ್ರಮಾಣಕನ್ನಡ ಬಳಕೆಯಾಗಲೇಬೇಕು. ಇದು ಆಡುಮಾತಿನಲ್ಲಿ ಕಂಡುಬರುವುದಿಲ್ಲ ಎಂದರೂ ಕೆಲವು ನಿರ್ದಿಷ್ಟ ಮಾತಿನ ನಿರೂಪಣೆಗಳಲ್ಲಿ ಪ್ರಮಾಣಕನ್ನಡವನ್ನೇ ಬಳಸಲಾಗುತ್ತದೆ. ಈ ನಿರೂಪಣೆಗಳು ಪೂರ್ವನಿರ್ಧಾರಿತ ರಚನೆಗಳಾಗಿರುತ್ತವೆ. ಉದಾ.ಗೆ ಪ್ರಾರ್ಥನೆಗಳು. ಈ ಪ್ರಾರ್ಥನೆಗಳ ಭಾಷೆ ಲಿಖಿತರೂಪದ ಪ್ರಮಾಣಕನ್ನಡವೇ ಸರಿ. ಈಗ ಅದನ್ನು ಉಚ್ಚರಿಸುತ್ತಾ ಪುನರಾವರ್ತನೆ ಮಾಡಲಾಗುತ್ತದೆ. ಈ ಪ್ರಭೇದದಲ್ಲಿ ಸಂಸ್ಕೃತ ಪದಗಳ ಹೆಚ್ಚಳ ಇರುವುದಕ್ಕೆ ಬಹುಮಟ್ಟಿಗೆ ಅಪವಾದಗಳೇ ಇಲ್ಲ.

ಇದಲ್ಲದೆ ಇನ್ನೂ ಒಂದು ಬಗೆಯ ದ್ವಿಸ್ತರತೆಯ ವ್ಯಾಖ್ಯಾನ ಕನ್ನಡದಲ್ಲಿ ಜಾರಿಯಲ್ಲಿರುವಂತೆ ತೋರುತ್ತದೆ. ಅದು ಇಂಗ್ಲಿಶ್ ಮತ್ತು ಕನ್ನಡಗಳ ನಡುವೆ ಇರುವ ಸಂಬಂಧದಲ್ಲಿ ಗೋಚರವಾಗುತ್ತದೆ. ಕನ್ನಡ ಭಾಷಾಸಮುದಾಯ ಇಂಗ್ಲಿಶನ್ನು ಕಲಿಯುವುದು ಔಪಚಾರಿಕ ಶಿಕ್ಷಣದ ಭಾಗವಾಗಿ ಮಾತ್ರ. ನಾಲ್ಕು ಪ್ರಾಥಮಿಕ ಕೌಶಲಗಳಲ್ಲಿ ಕೇಳಿ ಅರಿಯುವ, ಓದಿ ತಿಳಿಯುವ ಕೌಶಲಗಳು ಸ್ವಲ್ಪ ಹೆಚ್ಚಾಗಿ ನೆಲೆಗೊಳ್ಳುತ್ತವೆ. ಮಾತಾಡುವ ಮತ್ತು ಬರೆಯುವ ಕೌಶಲಗಳು ಎಲ್ಲರಲ್ಲೂ ಸಮಪ್ರಮಾಣದಲ್ಲಿ ಬೆಳೆಯುವುದಿಲ್ಲ. ಆದರೆ ಅಧಿಕಾರದ ಸಂಬಂಧದಲ್ಲಿ ಇಂಗ್ಲಿಶ್‌ಗೆ ಇರುವ ಒತ್ತಾಸೆಗಳಿಂದಾಗಿ ಕನ್ನಡದ ಜೊತೆಗೆ ಅದು ಯಾಜಮಾನ್ಯದ ನೆಲೆಯನ್ನು ಪಡೆದುಕೊಳ್ಳುತ್ತದೆ. ಎಷ್ಟೋ ಭಾಷಿಕವ್ಯವಹಾರಗಳು ಈ ಸಂಬಂಧವನ್ನು ಹೊಂದಿದ್ದರೂ ಅವು ಜನರ ಅರಿವಿನ ಭಾಗವಾಗುವುದಿಲ್ಲ. ಉದಾ.ಗೆ ಉನ್ನತ ನ್ಯಾಯಾಲಯಗಳ ತೀರ್ಪುಗಳು. ಅವು ಕಡ್ಡಾಯವಾಗಿ ಇಂಗ್ಲಿಶಿನಲ್ಲೇ ಇರಬೇಕೆಂಬ ನಿಯಮವಿರುವುದರಿಂದ ತನಗೆ ಸಂಬಂಧಿಸಿದ ತೀರ್ಪು ಏನೆಂಬುದು ಕೂಡಾ ಕಕ್ಷಿದಾರರಿಗೆ ಗೊತ್ತಾಗದೇ ಹೋಗುವ ಪ್ರಸಂಗಗಳೇ ಹೆಚ್ಚು. ಇದಲ್ಲದೆ ಒಂದು ಹಂತದ ಅನಂತರದ ಆಡಳಿತ ಸಂಬಂಧೀ ವ್ಯವಹಾರಗಳು ಕೂಡಾ ಮಾತು ಮತ್ತು ಬರಹ ಎರಡರಲ್ಲೂ ಇಂಗ್ಲಿಶನ್ನೇ ಆಶ್ರಯಿಸುತ್ತವೆ. ಇಲ್ಲಿಯೂ ಕೂಡ ಜನರಿಗೆ ತಮ್ಮ ಪ್ರವೇಶವನ್ನು ಕಂಡುಕೊಳ್ಳುವುದು ಸಾಧ್ಯವಾಗದು. ಉನ್ನತ ಮಟ್ಟದ ಚರ್ಚೆಗಳು, ಜಾಗತಿಕ ನೆಲೆಯ ವರದಿಗಳು, ತಂತ್ರಜ್ಞಾನ ಮತ್ತು ವೈಜ್ಞಾನಿಕ ವಿವರಗಳು, ದೇಹಾರೋಗ್ಯ ಸಂಬಂಧದ ವೈದ್ಯಕೀಯ ವಿವರಗಳು ಎಲ್ಲವೂ ಇಂಗ್ಲಿಶಿನಲ್ಲೇ ಇರುತ್ತವೆ. ಅಂದರೆ ಕನ್ನಡ ಭಾಷಾಸಮುದಾಯದ ಜೊತೆಗೆ ಇಂಗ್ಲಿಶ್ ಈ ಭಾಷಾದ್ವಿಸ್ತರತೆಯ ಸಂಬಂಧವನ್ನು ರೂಪಿಸಿದೆ ಎಂದು ವ್ಯಾಖ್ಯಾನಿಸಬಹುದಾಗಿದೆ.

ಕೆಲವು ಭಾಷಾಶಾಸ್ತ್ರಜ್ಞರು ಇಂಗ್ಲಿಶ್ ಮತ್ತು ಕನ್ನಡಗಳ ನಡುವೆ ಈ ದ್ವಿಸ್ತರತೆಯ ಸಂಬಂಧ ಇದೆ ಎಂದು ಒಪ್ಪುವುದಿಲ್ಲ. ತಮ್ಮ ಈ ನಿರಾಕರಣೆಗೆ ಅವರು ನೀಡುವ ಮುಖ್ಯ ಕಾರಣ ಹೀಗಿದೆ. ಕನ್ನಡ ಮತ್ತು ಇಂಗ್ಲಿಶ್ ಸಂಬಂಧ ಒಂದು ಸ್ಥಿರಗೊಂಡ ಸಂಬಂಧವಲ್ಲ. ಅದು ನಿರಂತರವಾಗಿ ಬದಲಾಗುತ್ತಿರುತ್ತದೆ. ಭಾಷಿಕರು ತಮ್ಮ ಕೌಶಲಗಳ ಬೆಳವಣಿಗೆಯ ಮೂಲಕ ಇಂಗ್ಲಿಶ್ ನಿರೂಪಣೆಗಳಲ್ಲಿ ಪಾಲುದಾರರಾಗುತ್ತಾರೆ. ಅಲ್ಲದೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಇಂಗ್ಲಿಶ್ ನಿರೂಪಣೆಗಳು ಅಗ್ರಾಹ್ಯವಾಗಿದ್ದರೂ ಅಪಾರದರ್ಶಕವಾಗಿಲ್ಲ. ಎಂದರೆ ನಾವೇ ರೂಪಿಸಿಕೊಂಡಿರುವ ವ್ಯವಸ್ಥೆಗಳಿಂದಾಗಿ ಇಂಗ್ಲಿಶ್ ನಿರೂಪಣೆಗಳ ಕನ್ನಡ ರೂಪಾಂತರಗಳು ನಮಗೆ ಲಭ್ಯವಾಗುತ್ತವೆ. ಆದ್ದರಿಂದ ಅಷ್ಟರ ಮಟ್ಟಿಗೆ ಇಂಗ್ಲಿಶ್ ಪಾರದರ್ಶಕವಾಗಿದೆ. ಈ ವಾದ ತಾಂತ್ರಿಕವಾಗಿ ಸರಿಯಾಗಿದೆ. ಆದರೆ ಜಾಗತಿಕ ನೆಲೆಯ ಇನ್ನಿತರ ಪ್ರಸಂಗಗಳನ್ನು ಗಮನಿಸಿದಲ್ಲಿ ಕನ್ನಡ ಮತ್ತು ಇಂಗ್ಲಿಶ್‌ಗಳ ನಡುವಣ ಸಂಬಂಧ ಅಷ್ಟು ಸರಳವಾಗಿಲ್ಲ ಎಂಬುದು ಗೊತ್ತಾಗುತ್ತದೆ. ಭಾರತದಲ್ಲೇ ಹಲವು ಭಾಷೆಗಳು ಇಂಥಾ ಇಕ್ಕಟ್ಟನ್ನು ಅನುಭವಿಸುತ್ತಿವೆ. ಭಾಷಾದ್ವಿಸ್ತರತೆಯ ನಿರ್ದಿಷ್ಟ ಮಾದರಿಯಾಗಿ ಈ ಎರಡು ಭಾಷೆಗಳ ನಡುವಣ ಸಂಬಂಧವನ್ನು ನೋಡಲು ಆಗದಿದ್ದರೂ ಒಂದು ಹಂತದವರೆಗೆ ಆ ವ್ಯಾಖ್ಯೆ ಇಲ್ಲಿ ಅನ್ವಯಿಸುತ್ತದೆ.

ಕಳೆದ ಐವತ್ತು ವರ್ಷಗಳಲ್ಲಿ ಕನ್ನಡವು ಇಂಗ್ಲಿಶ್ ಜೊತೆಗಿನ ತನ್ನ ಸಂಬಂಧವನ್ನು ಮತ್ತೆ ಮತ್ತೆ ಮರು ವ್ಯಾಖ್ಯಾನಿಸಿಕೊಳ್ಳುತ್ತಾ ಬಂದಿದೆ. ಏಕೀಕರಣದ ಮೊದಲ ಕೆಲವು ವರ್ಷಗಳಲ್ಲಿ ಇಂಗ್ಲಿಶನ್ನು ನಾವು ಎಚ್ಚರಿಕೆಯಿಂದ ಬಳಸಿಕೊಳ್ಳಬೇಕಾದ ಸಾಧ್ಯತೆ ಎಂದು ಭಾವಿಸಿದ್ದೆವು. ಅದು ಸ್ವಯಂಚಾಲಿತ ಸಾಮರ್ಥ್ಯವುಳ್ಳ ಭಾಷೆ ಎನ್ನುವುದನ್ನು ಒಪ್ಪಲಿಲ್ಲ. ನಮಗೆಷ್ಟು ಅದರ ಪ್ರಯೋಜನ ಬೇಕೋ ಅಷ್ಟನ್ನು ಪಡೆದರೆ ಸಾಕು, ಉಳಿದಂತೆ ನಾವು ಭಾಷಿಕವಾಗಿ ಸ್ವಾಯತ್ತರಾಗಿ ಉಳಿಯುತ್ತೇವೆ ಎಂದು ನಂಬಿದ್ದೆವು. ಏಕೀಕರಣದ ಸರಿಸುಮಾರಿನಲ್ಲಿ(೧೯೬೨) ಕುವೆಂಪು ತಾವು ಬರೆದ ಗೀತೆಯಲ್ಲೇ ಇಂಗ್ಲಿಶನ್ನು ಪೂತನಿಗೆ ಹೋಲಿಸುತ್ತಾರೆ. (ಭಾರತದ ವಿವಿಧ ರಾಜ್ಯಗಳ ವಿದ್ಯಾಮಂತ್ರಿಗಳ ಸಭೆಯಲ್ಲಿ ಇಂಗ್ಲಿಶನ್ನು ಶಾಲೆಯ ಮೂರನೆಯ ತರಗತಿಯಿಂದ ಕಲಿಸಲು ನಿರ್ಣಯ ತೆಗೆದುಕೊಂಡರೆಂಬ ಅಮಂಗಳ ಪತ್ರಿಕಾವಾರ್ತೆಯನ್ನು ಓದಿ ಈ ಕವಿತೆಯನ್ನು ಕುವೆಂಪು ಬರೆದಿದ್ದಾರೆ)ಇದೊಂದು ಪರೋಕ್ಷ ಹೋಲಿಕೆ. 'ಪಾರು ಮಾಡೆಮ್ಮನೀ ಇಂಗ್ಲಿಶಿನಿಂದ ಪೂತನಿಯ ಕೊಂದ ಓ ಗೋವಿಂದ' ಎಂಬ ಈ ಸಾಲು ಕವಿತೆಯಲ್ಲಿ ಮುಂದುವರೆಯುತ್ತ ಹೋಗುತ್ತದೆ. ಇಂಗ್ಲಿಶ್ ನಮ್ಮ ಮೂಲ ಜೀವಸೆಲೆಯನ್ನು ನಿರ್ನಾಮ ಮಾಡಿ ನಮ್ಮನ್ನು ಪರಾವಲಂಬಿಗಳಾಗಿ ಪರಿವರ್ತಿಸುತ್ತದೆ ಎಂಬುದು ಸಾಮಾನ್ಯ ತಿಳುವಳಿಕೆಯಾಗಿತ್ತು. ಪೂತನಿಯನ್ನು ಕೊಲ್ಲುವ ಮೊದಲು ಕೃಷ್ಣ ಆಕೆ ಊಡಿದ ವಿಷವನ್ನು ಅರಗಿಸಿಕೊಂಡಿದ್ದ. ಕುವೆಂಪು ಈ ಸೂಚನೆಯನ್ನು ಆ ಕವಿತೆಯಲ್ಲಿ ನೀಡುತ್ತಿರಬಹುದು. ಸುಮಾರು ಎರಡೂವರೆ ದಶಕಗಳ ನಂತರ ಯಾವುದೋ ಒಂದು ಸಾಮಾಜಿಕ ವಾಗ್ವಾದದಲ್ಲಿ ಭಾಗಿಯಾದ ಕುವೆಂಪು ಇಂಗ್ಲಿಶ್ ಕಲಿಯದೇ ಹೋಗಿದ್ದರೆ ತಾವು ಯಾರದೋ ಮನೆಯ ಕೊಟ್ಟಿಗೆಯಲ್ಲಿ ಕೆಲಸ ಮಾಡಿಕೊಂಡು ಇರಬೇಕಾಗುತ್ತಿತ್ತು ಎಂದರು. ಈ ಎರಡು ಪ್ರತಿಕ್ರಿಯೆಗಳು ನಮಗೆ ಸಾಂಕೇತಿಕವಾಗಿ ತೋರುತ್ತವೆ. ಇಂಗ್ಲಿಶನ್ನು ಗೆಲ್ಲಬಹುದು ಎಂಬ ಹುಮ್ಮಸಿನಲ್ಲಿ ನಾವು ಮುಂದಾದೆವು ಎಂದು ತೋರುತ್ತದೆ. ಅನಂತರದ ದಿನಮಾನಗಳು, ಆ ಇಂಗ್ಲಿಶಿಗೆ ಇರುವ ಸ್ವಯಂಚಾಲಿತ ಸಾಮರ್ಥ್ಯದ ಅರಿವನ್ನು ನಮಗೆ ಮಾಡಿಕೊಟ್ಟಿವೆ.

ಕನ್ನಡ ಭಾಷಿಕರು ಇಂಗ್ಲಿಶ್ ಜೊತೆಗೆ ಎರಡು ಬಗೆಯ ಸಂಬಂಧಗಳನ್ನು ರೂಢಿಸಿಕೊಂಡಿದ್ದಾರೆ. ಒಂದು: ಆಧುನೀಕರಣದ ನೆಲೆಯಲ್ಲಿ ಇಂಗ್ಲಿಶಿಗೆ ಮುಖಾಮುಖಿಯಾಗುತ್ತಾರೆ. ಎರಡು: ಸಾಂಸ್ಕೃತಿಕ ಸ್ವಾಯತ್ತತೆಯ ನೆಲೆಯಲ್ಲಿ ಇಂಗ್ಲಿಶನ್ನು ಎದುರಿಸುತ್ತಿರುವುದು. ಮೊದಲ ನೆಲೆ, ಹೆಚ್ಚು ವೈರುಧ್ಯಗಳಿಂದ ಕೂಡಿಲ್ಲ. ನಮ್ಮ ಸಾಂಪ್ರದಾಯಿಕ ಚಿಂತನೆಗಳ ಇಬ್ಬಂದಿತನದಿಂದ ಹೊರಬರಲು ಇಂಗ್ಲಿಶನ್ನು ಒಂದು ಸಾಧನವಾಗಿ ಕನ್ನಡಿಗರು ಬಳಸಿಕೊಂಡಿದ್ದಾರೆ. ಅವರ ಪದಕೋಶಕ್ಕೆ ಬಂದು ಸೇರಿರುವ ನೂರಾರು ಇಂಗ್ಲಿಶ್ ಪದಗಳನ್ನೇ ನೋಡಿದರೆ ಈ ಅಂಶ ಸ್ಪಷ್ಟವಾಗುತ್ತದೆ. ನಾಗರಿಕ ಜಗತ್ತಿನ ತಂತ್ರಜ್ಞಾನದ ಹೊಸ ಸಾಮಗ್ರಿಗಳು ನಮ್ಮ ಬದುಕಿನಲ್ಲಿ ಪ್ರವೇಶ ಪಡೆದದ್ದರಿಂದ ಈ ಪದಗಳು ಬಂದು ಸೇರಿದವೆಂದು ಸುಲಭವಾಗಿ ಹೇಳಬಹುದು. ಆದರೆ ಎಷ್ಟೋ ಪದಗಳು ನಮ್ಮ ದಿನನಿತ್ಯದ ಕನ್ನಡ ಪದಗಳ ಬದಲಿಗೆ ಬಂದು ಸೇರಿವೆ. ಸಾಮಾಜಿಕ ಮತ್ತು ವೈಯಕ್ತಿಕ ವಲಯಗಳನ್ನು ವಿಭಜಿಸಿಕೊಳ್ಳಲು ಇಂಗ್ಲಿಶ್ ಭಾಷೆಯ ಪದಗಳನ್ನು

ಕನ್ನಡಿಗರು ಉಪಯೋಗಿಸುತ್ತಾರೆ. ಸಂಬಂಧ ಸೂಚಕ ಪದಗಳನ್ನು ಹೀಗೆ ಬಳಸಿಕೊಳ್ಳುತ್ತಾರೆ. ಅಂಕಲ್, ಆಂಟಿ, ಕಜಿನ್, ಬ್ರದರ್, ಸಿಸ್ಟರ್ ಮುಂತಾದ ಪದಗಳನ್ನು ಎಲ್ಲಿ ಬಳಸುತ್ತೇವೆ ಮತ್ತು ಹೇಗೆ ಬಳಸುತ್ತೇವೆ ಎಂಬುದು ಗಮನಾರ್ಹ. ಹೀಗೆಯೇ ಎಷ್ಟೋ ಕೌಟುಂಬಿಕ ನೆಲೆಯ ಪದಗಳು ಸಾರ್ವಜನಿಕ ವಲಯದಲ್ಲಿ ಬಳಕೆಯಾಗಬೇಕಾದಾಗ ಇಂಗ್ಲಿಶ್ ಪದಗಳು ನೆರವಿಗೆ ಬಂದಿವೆ. ಮನೆ ಮತ್ತು ಜಗತ್ತುಗಳ ನಡುವಣ ಗಡಿಗೆರೆಗಳು ತೆಳುವಾಗುತ್ತಾ ಹೋಗುತ್ತಿವೆ. ಮನೆಯ ಲೋಕವನ್ನು ಹೊರಜಗತ್ತಿನಲ್ಲಿ ಮಂಡಿಸುವ ಅನುಭವಗಳು ಹೆಚ್ಚಾಗುತ್ತಿವೆ. ಈ ಸಂದರ್ಭದಲ್ಲಿ ಹೆಚ್ಚು ಮೌಲ್ಯನಿರಪೇಕ್ಷ ಅಥವಾ ಮುಜುಗರ ತರದಿರುವ ಇಂಗ್ಲಿಶ್ ಪದಗಳನ್ನು ಬಳಸುವುದು ರೂಢಿಯಾಗುತ್ತಿದೆ. ಅಂದರೆ ವ್ಯಕ್ತಿ ಆಧುನೀಕರಣಗೊಳ್ಳಲು ಹಪಹಪಿಸುವಾಗ, ಆ ವ್ಯಕ್ತಿಯು ಮನೋಭಾವದ ನೆಲೆಗಳಲ್ಲಿ ಬದಲಾಗದೆಯೂ ಆಚರಣೆಯಲ್ಲಿ ಆಧುನೀಕರಣಗೊಳ್ಳುವ ಸಾಧ್ಯತೆಯನ್ನು ಇಂಗ್ಲಿಶ್ ಪದಗಳು ಒದಗಿಸಿ ಕೊಟ್ಟಿವೆ. ಈ ಪ್ರಕ್ರಿಯೆ ಈಗಲೂ ಬೇರೆ ಬೇರೆ ರೀತಿಯಲ್ಲಿ ಮುಂದುವರೆಯುತ್ತಿದೆ. ಇಲ್ಲಿ ಈ ಭಾಷೆಯೊಡನೆ ಶತ್ರುತ್ವದ ಸಂಬಂಧ ಇದ್ದಂತಿಲ್ಲ.

ಎರಡನೆಯ ಬಗೆಯ ಸಂಬಂಧ ಹೆಚ್ಚು ಸಂಕೀರ್ಣವಾದುದು ಮತ್ತು ಕನ್ನಡಿಗರು ಕೆಲವು ದಶಕಗಳಿಂದ ಇದರಿಂದಾಗಿ ತೀವ್ರ ಸಂಘರ್ಷಗಳನ್ನು ಎದುರಿಸುವಂತೆ ಮಾಡಿದೆ. ಕನ್ನಡ ಮತ್ತು ಕನ್ನಡಿಗರ ಸಂಬಂಧದ ಸ್ವಾಯತ್ತತೆಯನ್ನು, ಸಾಂಸ್ಕೃತಿಕ ಅನನ್ಯತೆಯನ್ನು ಕಾಯ್ದುಕೊಳ್ಳಬೇಕೆಂಬ ಬಯಕೆ, ಎಲ್ಲ ಭಾಷಾ ಸಮುದಾಯಗಳಿಗೆ ಇರುವಂತೆ ಕನ್ನಡಿಗರಲ್ಲೂ ಇದ್ದುದು ಸಹಜ ಸಂಗತಿಯಾಗಿದೆ. ನಾವು ಬೇರೊಂದು ಕಡೆ ಇದೇ ಅಧ್ಯಯನದಲ್ಲಿ ಗಮನಿಸಿರುವಂತೆ ಈ ಅನನ್ಯತೆಯ ಸ್ಥಾಪನೆ ಮತ್ತು ಪೋಷಣೆಗಳಿಗಾಗಿ ಕೆಲವು ಗುರುತುಗಳನ್ನು ಕನ್ನಡಿಗರು ಸ್ಥಾಪಿಸಿಕೊಂಡರು. ಈ ಪ್ರಕ್ರಿಯೆಯಲ್ಲಿ ಚರಿತ್ರೆಯ ಪುನಾರಚನೆಯ ಪ್ರಯತ್ನಗಳು ನಡೆದವು. ಈಗಲೂ ಅಂಥಾ ಪ್ರಯತ್ನಗಳು ನಡೆಯುತ್ತಲೇ ಇವೆ. ಆದರೆ ಈ ಪ್ರಕ್ರಿಯೆಗೆ ಧಕ್ಕೆ ಒದಗಲಿದೆ ಎಂದು ಗೋಚರವಾಗಿದ್ದು ಇಂಗ್ಲಿಶಿನ ಮೂಲಕ. ಅಂದರೆ ಇಂಗ್ಲಿಶ್ ಭಾಷಾಸಮುದಾಯ ಅಥವಾ ಆಡಳಿತವರ್ಗ ವಸಾಹತು ಕಾಲದಲ್ಲಿದ್ದಂತೆ ಈಗ ಆಳ್ವಿಕೆ ನಡೆಸುತ್ತಿಲ್ಲ. ಆ ಮೂಲಕ ನಮ್ಮ ಸಾಂಸ್ಕೃತಿಕ ಬೇರುಗಳಿಗೆ ಯಾವ ಆಘಾತವನ್ನೂ ಉಂಟುಮಾಡುತ್ತಿಲ್ಲ. ಆದರೆ ಬದಲಾದ ಪರಿಸ್ಥಿತಿಯಲ್ಲಿ ಇಂಗ್ಲಿಶ್, ಕನ್ನಡಿಗರು ಕಲ್ಪಿಸದಿದ್ದ ಪಾತ್ರವೊಂದನ್ನು ವಹಿಸಲು ಮುಂದಾಯಿತು. ಇಂಗ್ಲಿಶ್ ಆಧುನಿಕತೆಗೆ ದಾರಿದೀಪ ಎಂದು ತಿಳಿಯುತ್ತಿದ್ದಾಗಲೇ ಅದು ನಮ್ಮ ಅಂತರಂಗಕ್ಕೆ ಹಿಡಿದ ಕನ್ನಡಿ ಎಂಬ ಸತ್ಯವು ರಾಚತೊಡಗಿತ್ತು. ಕನ್ನಡಿಗರು ರಚಿಸಿಕೊಂಡ ಸಾಂಸ್ಕೃತಿಕ ಪರಂಪರೆಯು ಸಮಕಾಲೀನ ಜೀವನದಲ್ಲಿ ಯಾವ ಸಂಬಂಧವನ್ನು ರೂಢಿಸಲು ಯತ್ನಿಸುತ್ತಿದೆ ಎಂಬ ಅರಿವು ಕನ್ನಡಿಗರಿಗೆ ದೊರೆತದ್ದೇ ಇಂಗ್ಲಿಶಿನಿಂದ ಎಂದು ಕುವೆಂಪು ಎಂಟನೇ ದಶಕದಲ್ಲಿ, ಅಂದರೆ ಅವರಿಗೆ ಎಂಬತ್ತು ದಾಟಿದ ನಂತರ ಏಕೆ ಹೇಳಿದರು? ಅದು ಚರಿತ್ರೆಯ ಅಪವ್ಯಾಖ್ಯೆಯೆ? ಅಥವಾ ವಾಸ್ತವವನ್ನು ಹೊರಗಿಡುವ ಯತ್ನವೇ? ಕನ್ನಡ ಸಂಸ್ಕೃತಿಯ ಒಳಗಿನ ವೈರುಧ್ಯಗಳು ಜನ ವಿರೋಧಿಯಾಗಿವೆ. ನಾವು ಭಾವುಕತೆಯಲ್ಲಿ ಅದಕ್ಕೆ ಶರಣಾಗುವುದು ಸಾಧ್ಯವಿಲ್ಲ. ಈ ಸಂಸ್ಕೃತಿಯು ನಿಯುಕ್ತಿಗೊಳಿಸಿದ

ಅಧೀನತೆಯ ಗುರಿಯಿಂದ ಹೊರಬರಲು ಇಂಗ್ಲಿಶ್ ತಮಗೆ ಅವಕಾಶ ನೀಡಿತ್ತು ಎಂದು ಕುವೆಂಪು ಹೇಳಿದರು. ಎರಡು ಸಂಗತಿಗಳು ಇಲ್ಲಿ ಸ್ಪಷ್ಟವಾಗುತ್ತಿವೆ. ಒಂದು: ನಾವು ರಚಿಸಿಕೊಂಡ ಕನ್ನಡ ಸಂಸ್ಕೃತಿಯ ಒಳ ಪದರುಗಳಲ್ಲಿ ಇರುವ ವೈರುಧ್ಯಗಳು ನಮಗೆ ಗೋಚರವಾದುದು. ಎರಡು: ಇಂತಹ ವೈರುಧ್ಯಗಳ ನಿವಾರಣೆಯ ಮೂಲಕ ಹೊಸ ಜೀವನವಿನ್ಯಾಸಕ್ಕೆ ದಾರಿಗಳನ್ನು ಹುಡುಕಿಕೊಂಡದ್ದು. ಈ ಎರಡೂ ಸಂದರ್ಭದಲ್ಲಿ ಇಂಗ್ಲಿಶಿಗೆ ಒಂದು ಮಹತ್ವದ ಪಾತ್ರವಿದ್ದಂತೆ ತೋರುತ್ತದೆ.

ಭಾಷಾದ್ವಿಸ್ತರತೆಯನ್ನು ಕುರಿತು ಚಿಂತಿಸುವ ಸಾಮಾಜಿಕ ಭಾಷಾಶಾಸ್ತ್ರಜ್ಞರು ನಿರೂಪಿಸುವ ಲಕ್ಷಣಗಳನ್ನು ಯಥಾವತ್ತಾಗಿ ಕನ್ನಡ ಮತ್ತು ಇಂಗ್ಲಿಶ್‌ಗಳ ಸಂಬಂಧಕ್ಕೆ ಅನ್ವಯಿಸುವುದು ಸಾಧ್ಯವಿಲ್ಲ. ಆದರೆ ಭಾಷಾದ್ವಿಸ್ತರತೆಯನ್ನೇ ಬೇರೆ ಬೇರೆ ರೀತಿಯಲ್ಲಿ ನಾವೀಗ ವ್ಯಾಖ್ಯಾನಿಸುತ್ತಿದ್ದೇವೆ. ಆದ್ದರಿಂದ ಕನ್ನಡ ಮನಸ್ಸು ಎದುರಿಸುತ್ತಿರುವ ಭಾಷಿಕ ದ್ವಿಧಾಭಾವವನ್ನು ಅರಿತುಕೊಳ್ಳಲು ಕನ್ನಡ ಇಂಗ್ಲಿಶ್ ಸಂಬಂಧದ ನೆಲೆಗಟ್ಟನ್ನು ಅನ್ವಯಿಸಿಕೊಳ್ಳುವುದು ಅಗತ್ಯವೆನಿಸುತ್ತದೆ. ಈ ಮೊದಲೇ ಹೇಳಿದಂತೆ ಕಳೆದ ಐವತ್ತು ವರ್ಷದಲ್ಲಿ ಇಂಗ್ಲಿಶ್ ನಮ್ಮ ಭಾಷೆಯ ಜೊತೆಗೆ ಹೊಂದಿರುವ ಸಂಬಂಧದ ಸ್ವರೂಪ ಬದಲಾಗುತ್ತಾ ನಡೆದಿದೆ. ಇಂಗ್ಲಿಶ್ ಅಂತಾರಾಷ್ಟ್ರೀಯ ಭಾಷೆಯಾಗಿ ಪಡೆದುಕೊಳ್ಳುತ್ತಿರುವ ವಿಸ್ತಾರದಲ್ಲಿ ಕನ್ನಡ ಕೂಡಾ ಅದರ ಜೊತೆಗೆ ತನ್ನ ಸ್ಥಾನವನ್ನು ಮರುರೂಪಿಸಿಕೊಳ್ಳಬೇಕಾದ ಅಗತ್ಯ ಹೆಚ್ಚಾಗುತ್ತಿದೆ. ಕಳೆದ ಎರಡು ದಶಕಗಳಲ್ಲಿ ತಂತ್ರಜ್ಞಾನದ ಜಿಗಿತದಿಂದ ಮಾಹಿತಿಸ್ಫೋಟ ಅಗಾಧ ಪ್ರಮಾಣದಲ್ಲಿ ನಡೆದಿದೆ. ಇದೆಲ್ಲವೂ ನಮಗೆ ದಕ್ಕುವುದು ಅಂತರ್ಜಾಲ ತಾಣಗಳಲ್ಲಿ. ಮಾಹಿತಿಯ ಪ್ರಮಾಣ ಮತ್ತು ಅದರ ಪ್ರಸಾರ ಇವುಗಳ ಬಗೆಗೆ ಚರ್ಚೆ ನಡೆಸುವುದು ಇಲ್ಲಿ ಸಾಧ್ಯವಿಲ್ಲ. ಆದರೆ ಮಾಹಿತಿ ಲಭಿಸುತ್ತಿರುವುದು ಇಂಗ್ಲಿಶ್ ಮೂಲಕ ಎನ್ನುವುದನ್ನು ಗಮನಿಸಬೇಕು. ಒಂದು ಸಂದರ್ಭವನ್ನು ವಿಶ್ಲೇಷಿಸಿ ಇಂಗ್ಲಿಶ್ ಜೊತೆಗೆ ಇತರ ಭಾಷೆಗಳ ಸಂಬಂಧ ಯಾವ ರೀತಿ ರೂಪಗೊಳ್ಳುತ್ತಿದೆ ಎನ್ನುವುದನ್ನು ಅರಿತುಕೊಳ್ಳಬಹುದು.

ಅಂತರ್ಜಾಲದಲ್ಲಿ ಮಾಹಿತಿಯನ್ನು ಹುಡುಕಲು 'ಗೂಗಲ್' ಎಂಬ ಹುಡುಕು ತಾಣ ಇದೆ. ಯಾವುದೇ ವಿಷಯವನ್ನು ಕುರಿತ ಮಾಹಿತಿಯನ್ನಾದರೂ ಹುಡುಕಿ ತೆಗೆಯಲು ಇಂತಹ ಹಲವು ಸರ್ಚ್‌ಎಂಜಿನ್‌ಗಳು ಲಭ್ಯವಿವೆ. 'ಗೂಗಲ್' ಮಾಹಿತಿ ಕ್ರೋಢೀಕರಣಕ್ಕಾಗಿ ಮುಖ್ಯವಾಗಿ ಇಂಗ್ಲಿಶ್ ಭಾಷೆಯ ಅಂತರ್ಜಾಲ ತಾಣಗಳನ್ನು ಆಶ್ರಯಿಸುತ್ತದೆ. ಇಂತಹ ತಾಣಗಳ ಪ್ರಮಾಣ ಶೇಕಡಾ ೬೮. ಉಳಿದ ಶೇಕಡಾ ೩೨ ಪ್ರಮಾಣದ ತಾಣಗಳಲ್ಲಿ ಯುರೋಪಿನ ಹಲವು ಭಾಷೆಗಳಿಗೆ ಮತ್ತು ಚೀನಿ ಭಾಷೆಗೆ ಅವಕಾಶ ಹೆಚ್ಚಿದೆ. 'ಗೂಗಲ್' ಹುಡುಕಲು ಅವಕಾಶ ನೀಡುವ ಆದೇಶಗಳನ್ನು ಇಂಗ್ಲಿಶಿನಲ್ಲಿ ರೂಪಿಸಿಕೊಂಡಿದೆ. ಆದರೆ ಕಳೆದ ಆರು ವರ್ಷಗಳಿಂದ ಹೀಗೆ ನೀಡುವ ಆದೇಶಗಳನ್ನು ಜಗತ್ತಿನ ೬೦ ಭಾಷೆಗಳಿಗೆ ವಿಸ್ತರಿಸಿದೆ. ಆ ಅರವತ್ತು ಭಾಷೆಗಳಲ್ಲಿ ಕನ್ನಡವೂ ಒಂದು. ಅಂದರೆ ನಾವು ಹುಡುಕಲು ನೀಡುವ ಆದೇಶಗಳನ್ನು ಕನ್ನಡದಲ್ಲಿ ನೀಡಬಹುದು. ಎಷ್ಟೋ ಕಡೆಗಳಲ್ಲಿ ಕನ್ನಡ ಅಕ್ಷರಗಳನ್ನು ಕೂಡ ಬಳಸಬಹುದಾಗಿದೆ. ಆದರೆ ನಮಗೆ ಲಭಿಸುವ ಮಾಹಿತಿ ಮಾತ್ರ ಇಂಗ್ಲಿಶ್ ಭಾಷೆಯಲ್ಲೇ ಇರುತ್ತದೆ. ಅಂದರೆ ಮಾಹಿತಿಯ

ಹುಡುಕುವಿಕೆಗೆ ಅನುಕೂಲವಾಗುವಂತೆ ಕನ್ನಡ ಭಾಷೆಯನ್ನು ಬಳಸಿಕೊಳ್ಳಬೇಕಾಗಿದೆ. ಆದರೆ ಮಾಹಿತಿಯೇ ಕನ್ನಡದಲ್ಲಿ ಇರುವುದಿಲ್ಲ. ಕನ್ನಡದ ಬಗೆಗೆ ಇರುವ ಮಾಹಿತಿಯು ಇಂಗ್ಲಿಶ್ ಭಾಷೆಯಲ್ಲೇ ಇರುತ್ತದೆ.

ಇಷ್ಟೂ ವಿವರಣೆ ನೀಡಿದ್ದರ ಉದ್ದೇಶವಿಷ್ಟೇ. ಜಾಗತಿಕ ಭಾಷೆಯಾಗಿ ಇಂಗ್ಲಿಶ್ ತನ್ನ ಯಜಮಾನಿಕೆಯನ್ನು ಗಟ್ಟಿಯಾಗಿ ಸ್ಥಾಪಿಸಿಕೊಂಡಿದೆ. ಉಳಿದ ಭಾಷೆಗಳು ಅದರ ಸಹಚರ ಭಾಷೆಗಳಾಗಿ ಮಾತ್ರ ಸ್ಥಾನ ಪಡೆಯುತ್ತವೆ. ಮಾಹಿತಿಯ ಆಕರವಾಗಿ ಇಂಗ್ಲಿಶಿಗೆ ಹತ್ತಿರ ಹತ್ತಿರ ಬರುವ ಕೆಲವು ಭಾಷೆಗಳು ಮುಂದಿನ ದಶಕಗಳಲ್ಲಿ ಸಿದ್ಧಗೊಳ್ಳಬಹುದು. ಆದರೆ ಕನ್ನಡಕ್ಕೆ ಆ ಅವಕಾಶ ದೊರೆಯುವುದು ಕಷ್ಟ. ಏಕೆಂದರೆ ಆ ಮಾಹಿತಿಯ ಜಗತ್ತನನ್ನು ಕನ್ನಡದಲ್ಲಿ ರೂಪಿಸುವುದು ಸಾಧ್ಯವಾಗುವುದಿಲ್ಲ. ಕನ್ನಡದ ವಾತಾವರಣದಲ್ಲಿ ಯೋಚಿಸುವವರಿಗೂ ಹೀಗೆ ಇಂಗ್ಲಿಶಿನ ಇರುವಿಕೆ ಪ್ರತಿಗಳಿಗೆಯಲ್ಲೂ ಅರಿವಿಗೆ ಬರುವ ವಿಷಯವಾಗಿ ಬಿಟ್ಟಿದೆ. ದ್ವಿಸ್ತರತೆಯ ಸಂದರ್ಭದಲ್ಲಿ ಒಂದು ಭಾಷೆಗೆ ದೊರಕುವ ಪಾವಿತ್ರ್ಯದ ಸ್ಥಾನ ಇಂಗ್ಲಿಶಿಗೆ ಲಭಿಸದೆ ಹೋಗಬಹುದು. ಆದರೆ ಮಾಹಿತಿಯ ಆಕರವಾಗಿ ಮತ್ತು ಆ ಮೂಲಕವೇ ನಮ್ಮ ಆಲೋಚನಾಕ್ರಮದ ನಿಯಂತ್ರಕವಾಗಿ ಇಂಗ್ಲಿಶ್ ಒಂದು ಸ್ಥಾನವನ್ನು ಪಡೆದುಕೊಂಡು ಬಿಟ್ಟಿದೆ. ದ್ವಿಸ್ತರತೆಯ ಸಂದರ್ಭದಲ್ಲಿ ಉನ್ನತ ಸ್ಥಾನ ಪಡೆದ ಭಾಷೆಯ ವ್ಯಾಪ್ತಿಗೆ ಭಾಷಾಸಮುದಾಯದ ಪ್ರತಿಯೊಬ್ಬರೂ ಒಳಗಾಗುತ್ತಾರೆ ಎಂದು ಹೇಳಬರುವುದಿಲ್ಲ. ಇಲ್ಲಿಯೂ ಆ ಮಾತು ನಿಜ. ಇಂಗ್ಲಿಶ್ ಜೊತೆಗೆ ಯಾವ ಸಂಪರ್ಕವನ್ನೂ ಇರಿಸಿಕೊಳ್ಳದಿದ್ದರೆ ಜೀವನನಿರ್ವಹಣೆ ಅಸಾಧ್ಯ ಎಂದು ಹೇಳಲು ಬರುವುದಿಲ್ಲ. ಆದರೆ ಸಮಕಾಲೀನ ಆಗು ಹೋಗುಗಳ ಲಯದಲ್ಲಿ ತೊಡಗಿಕೊಳ್ಳುವ ಪ್ರತಿಯೊಬ್ಬರೂ ಮೇಲೆ ಹೇಳಿದ ಭಾಷಿಕ ದ್ವಿಧಾಭಾವಕ್ಕೆ ಒಳಗಾಗಲೇ ಬೇಕಾಗಿದೆ.

ಕನ್ನಡ ಚಿಂತನೆಗಳು ಕಳೆದ ಐವತ್ತು ವರ್ಷಗಳಲ್ಲಿ ಎದುರಿಸಿದ ಬಿಕ್ಕಟ್ಟುಗಳ ಸ್ವರೂಪವನ್ನು ನಾವು ಸ್ವಲ್ಪ ಚರ್ಚಿಸುವ ಅಗತ್ಯವಿದೆ, ಏಕೀಕರಣದ ಪೂರ್ವದಲ್ಲಿ ವಸಾಹತು ಆಡಳಿತ, ಇಂಗ್ಲಿಶ್ ವಿದ್ಯಾಭ್ಯಾಸ, ಮತ್ತು ಆಧುನೀಕರಣ ಇವೆಲ್ಲವೂ ಒತ್ತಟ್ಟಿಗೆ ಪ್ರಭಾವ ಬೀರುತ್ತಿದ್ದುದರಿಂದ ಕನ್ನಡಿಗರ ಆಲೋಚನಾಕ್ರಮಕ್ಕೆ ಪೂರಕವಾದ ಪ್ರಭಾವಗಳು ಇಂಗ್ಲಿಶ್ ಮೂಲಕ ಒದಗಿ ಬಂದವು. ಈಗ ದೇಶೀಯ ಚಿಂತನೆ ಮತ್ತು ಪಾಶ್ಚಾತ್ಯ ಪ್ರಭಾವ ಇವುಗಳ ನಡುವೆ ಒಂದು ವಾಗ್ವಾದ ಮೊದಲಾಗಿದೆ. ಯಾವುದೇ ನಿರ್ಣಯಾತ್ಮಕ ಹಂತವನ್ನು ತಲುಪದಿದ್ದರೂ ವಾಗ್ವಾದದ ಹಲವು ಮುಖಗಳು ಆಗ ಅನಾವರಣಗೊಂಡಿವೆ. ಕನ್ನಡ ಚಿಂತನೆ ತನ್ನ ವಿನ್ಯಾಸಗಳಲ್ಲಿ ಇಂಗ್ಲಿಶ್ ಮೂಲಕ ಯುರೋಪಿಯನ್ ಚಿಂತನೆಗಳಿಗೆ ತೆರೆದುಕೊಂಡಿತ್ತು. ಏಕೀಕರಣದ ಅನಂತರವೂ ಈ ಬಗೆಯ ಪ್ರಭಾವಗಳಿಗೆ, ಪ್ರೇರಣೆಗಳಿಗೆ ವಿರೋಧಗಳು ಹೆಚ್ಚಾಗಿ ವ್ಯಕ್ತವಾಗಲಿಲ್ಲ. ಈ ಪ್ರಭಾವಗಳು ಸಂಸ್ಕೃತಿ ಚಿಂತನೆಯ ಎಲ್ಲ ಕ್ಷೇತ್ರದಲ್ಲೂ ಕಾಣಿಸಿಕೊಂಡಿವೆ. ಸಾಹಿತ್ಯ, ಜಾನಪದ, ಚರಿತ್ರೆ, ಸಮಾಜಶಾಸ್ತ್ರ, ಅಭಿವೃದ್ಧಿಚಿಂತನೆ ಹೀಗೆ ಹಲವು ವಲಯಗಳಲ್ಲಿ ಈ ಪ್ರಭಾವಗಳನ್ನು ನಾವು ಗುರುತಿಸುತ್ತೇವೆ.

ಎಂಟನೇ ದಶಕದ ಅನಂತರದಲ್ಲಿ, ಅಡಿಗರು ತಮ್ಮ ಕವಿತೆಯೊಂದರಲ್ಲಿ ಹೇಳಿದಂತೆ, 'ಪಶ್ಚಿಮ ಬುದ್ಧಿಯನ್ನು ನಂಬಿ' ಅನಾಥರಾಗುವ ಪ್ರವೃತ್ತಿಯ ಬಗೆಗೆ ವಿರೋಧವೊಂದು

ಕಾಣಿಸಿಕೊಳ್ಳತೊಡಗಿತ್ತು. ಎಲ್ಲ ವಲಯಗಳಲ್ಲೂ ದೇಶೀಯ ಮೂಲದ ಚಿಂತನೆ ಗಳನ್ನು ರೂಢಿಸಬೇಕೆಂಬ ಒತ್ತಾಯ ಕಾಣಿಸಿಕೊಳ್ಳತೊಡಗಿತ್ತು. ವಿಪರ್ಯಾಸವೆಂದರೆ ಕನ್ನಡದಂತಹ ಭಾಷಾಸಂಸ್ಕೃತಿಗಳಲ್ಲಿ ಇಂತಹ ಅಪೇಕ್ಷೆಗಳು ತಲೆದೋರಿದರೂ ಅಖಿಲಭಾರತ ವ್ಯಾಪ್ತಿಯಲ್ಲಿ ಈ ಕುರಿತ ಚರ್ಚೆಗಳು ಮಾತ್ರ ಇಂಗ್ಲಿಶ್ ಭಾಷೆಯಲ್ಲೇ ನಡೆಯತೊಡಗಿದ್ದವು. ಅಂದರೆ ಇಂಗ್ಲಿಶ್ ಭಾಷೆಯು ವೈಚಾರಿಕ ಆಕೃತಿಗಳಿಗೆ ಆಕರವಾಗುವ ಪ್ರವೃತ್ತಿ ಮಾತ್ರ ಕುಗ್ಗಲಿಲ್ಲ. ಈಗ ಪಾಶ್ಚಾತ್ಯ ಪ್ರಭಾವವೆನ್ನುವುದು ಮರುವ್ಯಾಖ್ಯಾನಕ್ಕೆ ಗುರಿಯಾಗಿದೆ. ಇಂಗ್ಲಿಶ್ ಕಳೆದ ಎರಡು ದಶಕಗಳಲ್ಲಿ ಈ ದೃಷ್ಟಿಯಿಂದ ಹೊಸ ಪಾತ್ರವನ್ನು ವಹಿಸುತ್ತಿದೆ. ದೇಶೀಯತೆಯ ಪರಿಭಾಷೆ ಮತ್ತು ಚರ್ಚೆಗಳು ಕೂಡಾ ಇಂಗ್ಲಿಶ್ ಭಾಷೆಯಲ್ಲೇ ನಡೆಯತೊಡಗಿವೆ. ಭಾರತದಂತಹ ದೇಶಕ್ಕೆ ಇದು ಅನಿವಾರ್ಯವೆಂದು ಸಮರ್ಥನೆ ನೀಡಿದರೂ, ಈ ಸಂದರ್ಭವನ್ನು ಇಂಗ್ಲಿಶ್ ಭಾಷೆ ತನ್ನ ಅನುಕೂಲಕ್ಕೆ ತಕ್ಕಂತೆ ಪರಿವರ್ತಿಸಿಕೊಂಡದ್ದನ್ನು ನಿರಾಕರಿಸುವಂತಿಲ್ಲ. ಕನ್ನಡ ಈಗಲೂ ತನ್ನ ವೈಚಾರಿಕತೆಯ ವಿಸ್ತರಣೆಯ ಸಂದರ್ಭದಲ್ಲಿ ಇಂಗ್ಲಿಶ್ ಭಾಷೆಯನ್ನು ಮಾಧ್ಯಮವನ್ನಾಗಿ ಬಳಸುವುದು ಅನಿವಾರ್ಯವೆನಿಸಿ ಬಿಟ್ಟಿದೆ.

ದೇಶೀಯ ಸಾಮಾಜಿಕ ಚಿಂತನೆಗಳು ಕಳೆದ ಎರಡು ದಶಕಗಳಲ್ಲಿ ನಾಡಿನ ಸಾಂಸ್ಕೃತಿಕ ಬಹುಳತೆಯನ್ನು ಕುರಿತು ಚರ್ಚಿಸುತ್ತಿವೆ. ಕನ್ನಡದ ಸಂದರ್ಭದಲ್ಲಿಯೂ ಈ ಚರ್ಚೆ ಪ್ರಾರಂಭಗೊಂಡಿದೆ. ಏಕಘನಾಕೃತಿ ಮಾದರಿಯ ಗ್ರಹಿಕೆಗಳು ಈಗ ಪ್ರಶ್ನೆಗೆ ಒಳಗಾಗುತ್ತಿವೆ. ಸಂಸ್ಕೃತಿಯ ಹೆಣಿಗೆಯಲ್ಲಿ ಇರುವ ಅಂಗಗಳ ನಡುವೆ ಸಮರಸದ ಭಾವಕ್ಕಿಂತ ವಿರೋಧದ ಭಾವವೇ ಹೆಚ್ಚಾಗಿದೆ ಎನ್ನುವುದು ಹೊಸ ತಿಳುವಳಿಕೆಯಾಗಿದೆ. ೧೯೭೦ರ ನಂತರದಲ್ಲಿ ಕರ್ನಾಟಕದಲ್ಲಿ ನಡೆದ ದಲಿತ ಬಂಡಾಯ ಚಳುವಳಿಗಳನ್ನು ಈ ನಿಟ್ಟಿನಲ್ಲಿ ಗಮನಿಸ ಬೇಕು. ಈ ಚಳುವಳಿಗಳ ಎಲ್ಲಾ ಅಂಶಗಳನ್ನೂ ಇಲ್ಲಿ ನಾವು ಚರ್ಚಿಸಬೇಕಾದ ಅಗತ್ಯವಿಲ್ಲ. ಆದರೆ ಭಾಷೆಗೆ ಸಂಬಂಧಿಸಿದ ನೆಲೆಗಳನ್ನು ಗಮನಿಸುವುದು ಅಗತ್ಯವಾಗುತ್ತದೆ. ಮುಖ್ಯವಾಗಿ ಈ ಚಳುವಳಿಗಳು ಸಮಾಜದ ಕೆಳಸ್ತರದ ಶೋಷಿತ ಜನ ಸಮುದಾಯಗಳನ್ನು ಗಮನದಲ್ಲಿ ಇರಿಸಿಕೊಂಡಿದ್ದವು. ಈ ಜನಸಮುದಾಯಗಳು ಸಮಾಜರಚನೆಯ ವಿನ್ಯಾಸದಲ್ಲಿ ತಮ್ಮ ಶೋಷಣೆಗೆ ಕಾರಣವಾಗುವ ನೆಲೆಗಳನ್ನು ಗುರುತಿಸಿಕೊಳ್ಳಲು ಯತ್ನಿಸಿವೆ. ಈ ಸಮುದಾಯಗಳ ಸ್ಥಿತಿಯಲ್ಲಿದ್ದ ರಿಕ್ತತೆ ಮತ್ತು ಸಮೃದ್ಧತೆಗಳನ್ನು ಜೊತೆಜೊತೆಯಾಗಿಯೇ ಗಮನಿಸಲಾಗಿದೆ. ಆರ್ಥಿಕ, ಸಾಮಾಜಿಕ ಸಂಬಂಧಗಳಲ್ಲಿ ರಿಕ್ತತೆಯನ್ನು ಗುರುತಿಸಿದ್ದರೆ, ಭಾಷಿಕ ನೆಲೆಯಲ್ಲಿ, ಸಾಂಸ್ಕೃತಿಕ ನೆನಮುಗಳ ನೆಲೆಯಲ್ಲಿ ಸಮೃದ್ಧತೆಯನ್ನು ಗುರುತಿಸಲಾಗಿದೆ. ಈ ಸಮೃದ್ಧತೆಯು ಈ ಸಮುದಾಯಗಳ ಸಾಮಾಜಿಕ ಬಂಡವಾಳ ಆಗಬಹುದೇ ಅಥವಾ ಈ ಸಮೃದ್ಧತೆಯು ಕೇವಲ ವಸ್ತುಸ್ಥಿತಿಯನ್ನು ಮರೆಮಾಚಲು ಇರುವ ಒಂದು ಹುನ್ನಾರವೇ ಎಂಬ ಪ್ರಶ್ನೆಗಳು ಮುಂಚೂಣಿಗೆ ಬಂದಿವೆ.

೧೯೮೫ರ ಸುಮಾರಿನಲ್ಲಿ ದಲಿತ ಬಂಡಾಯ ಚಳುವಳಿಗಾರರು ಚಂದ್ರಗುತ್ತಿಯ ಬೆತ್ತಲೆ ಸೇವೆ ಆಚರಣೆಯ ವಿರುದ್ಧ ಚಳುವಳಿ ಮಾಡಿದರು. ಆಡಳಿತದ ದೃಷ್ಟಿಯಿಂದ

ಇದೊಂದು ಕಾನೂನುಪಾಲನೆಯ ಸಮಸ್ಯೆಯಾಯಿತು. ಬೆತ್ತಲೆ ಸೇವೆ ಆಚರಣೆ, ದೇವದಾಸಿ ಪದ್ಧತಿ ಇತ್ಯಾದಿಗಳ ಬಗೆಗೆ ಜಾರಿಗೆ ಬಂದಿದ್ದ ಕಾನೂನುಗಳ ಅನುಸರಣೆಯ ಪ್ರಶ್ನೆ ಮುಂಚೂಣಿಗೆ ಬಂದಿತು. ಆದರೆ ಅದೇ ಸುಮಾರಿಗೆ ಇನ್ನೊಂದು ಚರ್ಚೆ ಮೊದಲಾಯಿತು. ಬೆತ್ತಲೆ ಸೇವೆಯ ದಲಿತ ಸಮುದಾಯದ ಸಾಂಸ್ಕೃತಿಕ ನೆನಪುಗಳನ್ನು ಪ್ರತಿನಿಧಿಸುತ್ತಿರುವುದರಿಂದ ಅದನ್ನು ನಿಷೇಧಿಸುವುದೆಂದರೆ ದಲಿತರ ಹಕ್ಕುಗಳನ್ನು ಕಸಿದುಕೊಂಡಂತೆ ಎಂಬ ವಾದವನ್ನು ಮಂಡಿಸಲಾಗಿದೆ. ಡಾ.ಯು.ಆರ್.ಅನಂತ ಮೂರ್ತಿಯವರೇ (ಆ ಸಂದರ್ಭದಲ್ಲಿ ಅವರು 'ಬೆತ್ತಲೆ ಸೇವೆ ಏಕೆ ಕೂಡದು?' ಎಂಬ ಲೇಖನವನ್ನು ಬರೆದರು) ಮೊದಲಾಗಿ ಹಲವು ಜನರು ಈ ವಾಗ್ವಾದದಲ್ಲಿ ಭಾಗಿಯಾದರು. ನಮಗಿಲ್ಲಿ ಎಲ್ಲ ವಿವರಗಳೂ ಅಗತ್ಯವಿಲ್ಲ. ಆದರೆ ಮೇಲೆ ಹೇಳಿದ ಕೆಳಸ್ತರದ ಬದುಕಿನ ರಿಕ್ತತೆ ಮತ್ತು ಸಮೃದ್ಧತೆಗಳ ಮುಖಾಮುಖಿಯನ್ನು ಹೇಗೆ ನಿರ್ವಹಣೆ ಮಾಡಬೇಕು ಎನ್ನುವುದು ಒಂದು ಚರ್ಚೆಯ ವಿಷಯವಾಯಿತು. ಭಾಷೆಯ ದೃಷ್ಟಿಯಿಂದ ಈ ಚರ್ಚೆಗೆ ಇರುವ ಆಯಾಮಗಳನ್ನು ನಾವೀಗ ಗಮನಿಸೋಣ.

ಕೆಳಸ್ತರದ ಜನರ ಭಾಷೆ ಕನ್ನಡದ ಒಂದು ಪ್ರಭೇದವಾಗಿ ಅವರ ದೈನಿಕಗಳ ಅಭಿವ್ಯಕ್ತಿಗೆ ನೆರವಾಗುತ್ತಿದೆ. ಆದರೆ ಅದರೊಡನೆ ಅವರ ಅಗಾಧ ಪ್ರಮಾಣದ ಸಾಂಸ್ಕೃತಿಕ ನೆನಪುಗಳು ಹಾಡುಗಳಾಗಿ, ಕಾವ್ಯಗಳಾಗಿ, ಕಥೆಗಳಾಗಿ, ದೃಶ್ಯರೂಪಗಳಾಗಿ ಮೈದಳೆಯುತ್ತಿವೆ. ಈ ಸಮೃದ್ಧ ನೆನಪುಗಳನ್ನು ಕನ್ನಡ ಸಂಸ್ಕೃತಿಯ ಭಾಗವೆಂದು ತಿಳಿದು ಅದನ್ನು ಒಳಗೊಳ್ಳುವ ವಿಧಾನಗಳನ್ನು ರೂಪಿಸಿಕೊಳ್ಳಲಾಗಿದೆ. ಮುಖ್ಯವಾಗಿ ಈ ಸಮೃದ್ಧ ನೆನಪುಗಳಿಗೂ ಅವರ ಭಾಷೆಗೂ ಇರುವ ಸಂಬಂಧ ಎಂಥದ್ದು? ಎ.ಕೆ.ರಾಮಾನುಜನ್ ಮಾದರಿಯ ವಿದ್ವಾಂಸರಿಗೆ ಈ ಸಂಬಂಧ ಆಕಸ್ಮಿಕವಾದುದು. ಏಕೆಂದರೆ ಆ ಸಮೃದ್ಧ ನೆನಪುಗಳೆಲ್ಲವನ್ನೂ ಅವರು ಪ್ರಮಾಣಕನ್ನಡಕ್ಕೆ ಇಲ್ಲವೇ ಇಂಗ್ಲಿಶಿಗೆ ವರ್ಗಾಯಿಸಿದರೆ ಆಗ ದಲಿತರ ಕನ್ನಡಕ್ಕೆ ಯಾವ ಹೆಚ್ಚಿನ ಮಹತ್ವವೂ ಉಳಿಯದು. ಇದಲ್ಲದೆ ಇನ್ನೊಂದು ಮಾದರಿಯೆಂದರೆ ಆ ನೆನಪುಗಳನ್ನು ಮತ್ತು ಭಾಷೆಯನ್ನು ಒಂದು ಆಚರಣೆಯ ಸಾಮುಗ್ರಿಯನ್ನಾಗಿ ಪರಿವರ್ತಿಸುವುದು. ಚಲನಚಿತ್ರಗಳಲ್ಲಿ ಕಂಸಾಳೆಯ ಪದಗಳನ್ನು, ಕುಣಿತದ ಹೆಜ್ಜೆಗಳನ್ನು ಬಳಸುವ ರೀತಿ ಇದಕ್ಕೆ ಒಂದು ಉದಾಹರಣೆ. ಇವೆರಡೂ ಮಾದರಿಗಳು ಭಾಷೆಯನ್ನು ಒಂದು ಪರಿಕರವನ್ನಾಗಿ ಮಾತ್ರ ನೋಡುತ್ತವೆ.

ಇದಲ್ಲದೆ, ಕಳೆದ ಐವತ್ತು ವರ್ಷಗಳಲ್ಲಿ ಕನ್ನಡ ಸಂಸ್ಕೃತಿ ರೂಪಿಸಿಕೊಟ್ಟ ಪ್ರಗತಿಯ ಮಾದರಿಯಲ್ಲಿ ಕೆಳಸ್ತರದ ಜನರು ತಮ್ಮ ಭಾಷಿಕರೂಪಗಳನ್ನು ಬಿಟ್ಟುಕೊಡಬೇಕೆಂಬ ಒತ್ತಾಯವನ್ನು ಹೇರುತ್ತಿವೆ. ಅಂದರೆ ಅವರು ತಮ್ಮ ಭಾಷಾ ಪ್ರಭೇದವನ್ನು ಒಂದು ಚಹರೆಯನ್ನಾಗಿ ಉಳಿಸಿಕೊಳ್ಳಲು ಅವಕಾಶವಿಲ್ಲ. ಅದನ್ನು ಬಿಟ್ಟುಕೊಟ್ಟು, ಪ್ರಮಾಣ ಕನ್ನಡಕ್ಕೆ ದಾಟಬೇಕೆಂಬ ಒತ್ತಾಯವನ್ನು ಶಿಕ್ಷಣಕ್ರಮ ಹೇರುತ್ತಿದೆ. ನಾವು ಗುರುತಿಸಿದಂತೆ ಎಂಟನೇ ದಶಕದ ಅನಂತರದ ದಲಿತ ಅರಿವಿನ ಸ್ಫೋಟದಲ್ಲಿ ಈ ಭಾಷೆಯ ಪ್ರಶ್ನೆ ಮುಂಚೂಣಿಗೆ ಬರುತ್ತದೆ. ಸಮೃದ್ಧ ನೆನಪುಗಳು ಅಡಕಗೊಂಡಿರುವ ಭಾಷೆಯು ನಿಜಬದುಕಿನಲ್ಲಿ ರಿಕ್ತತೆಯ ಸಂಕೇತವಾಗುವುದು ಒಂದು ವಿಪರ್ಯಾಸವೇ ಸರಿ. ಒಟ್ಟು

ಕನ್ನಡ ಸಂಸ್ಕೃತಿ ದಲಿತರ ನೆನಪುಗಳನ್ನು ತನ್ನ ಸಾಂಸ್ಕೃತಿಕ ಪರಂಪರೆಯ ಭಾಗವನ್ನಾಗಿ ಮಾಡಿಕೊಳ್ಳಲು ಸಿದ್ಧವಿದೆ. ಆದರೆ ಅವರ ಭಾಷೆಯನ್ನು ಮಾತ್ರ ತನ್ನದೆಂದು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಈ ಅರಿವಿನ ನೆಲೆಗಳು ಶತಮಾನದ ತಿರುವಿನಲ್ಲಿ ಹೊಸ ಬಗೆಯ ಚಿಂತನೆಗೆ ಕಾರಣವಾದವು. ದೇವನೂರ ಮಹದೇವ ಅವರ ಕುಸುಮಬಾಲೆ ಕೃತಿಯಲ್ಲಿ ಕುಸುಮಬಾಲೆ ಮುಖ್ಯ ಪಾತ್ರವಾದರೂ ಅವಳು ಮಾತನಾಡುವುದು ಒಂದೇ ಬಾರಿ. ಹಾಗೆ ಮಾತನಾಡಿದಾಗ ಅವಳ ಬಾಯಿಂದ ಬರುವ ವಾಕ್ಯ ಇಂಗ್ಲಿಶಿನಲ್ಲಿರುತ್ತದೆ. "ಐ ವಾಂಟ್ ಟು ಬಿ ಇನ್ ಮೈ ಹೋಮ್" ಎಂದು ಕುಸುಮಬಾಲೆ ಇಂಗ್ಲಿಶಿನಲ್ಲಿ ಹೇಳುತ್ತಾಳೆ. ಕಾದಂಬರಿಯಲ್ಲಿ ಈ ಮಾತಿನ ಅರ್ಥವ್ಯಾಪ್ತಿ ಏನಾದರೂ ಇರಲಿ. ಕೆಳಸ್ತರದ ಬದುಕಿನಲ್ಲಿ ಕಳೆದ ಎರಡು ದಶಕಗಳಿಂದ ಭಾಷೆಗೆ ಸಂಬಂಧಿಸಿದಂತೆ ನಡೆದಿರುವ ವಾಗ್ವಾದಗಳಿಗೆ ಹೊಸ ತಿರುವೊಂದನ್ನು ಈ ಪ್ರಸಂಗ ಸೂಚಿಸುವಂತಿದೆ.

ಅಖಿಲಭಾರತ ವ್ಯಾಪ್ತಿಯ ದಲಿತಚಿಂತಕರಾದ ಕಾಂಚ ಐಲಯ್ಯ ಅವರು ಮಂಡಿಸುವ ವಿಚಾರದಂತೆ ಭಾರತೀಯ ರಾಜಕೀಯ ವಿನ್ಯಾಸದಲ್ಲಿ ದ್ಲಲಿತರು ಅವಕಾಶ ವಂಚಿತರಾಗಿರಲು ಇರುವ ಹಲವು ಕಾರಣಗಳಲ್ಲಿ ಭಾಷೆಯ ಪ್ರಶ್ನೆಯೂ ಮುಖ್ಯವಾಗಿದೆ. ಈಗ ದಲಿತರು ತಂತಮ್ಮ ಪ್ರದೇಶಗಳಲ್ಲಿ ಶೋಷಿತರಾಗಲು ಆಯಾ ಪ್ರದೇಶದ ಭಾಷೆಗಳು ಕಾರಣವಾಗಿವೆ. ಆದ್ದರಿಂದ ಅವರು ಆ ಭಾಷೆಗಳೊಡನೆ ತಮಗಿರುವ ಸಂಬಂಧವನ್ನು ಕಡಿದುಕೊಂಡು ಅಖಿಲಭಾರತ ಮಟ್ಟದ ಒಂದು ಭಾಷೆಗೆ ವರ್ಗಾವಣೆಗೊಳ್ಳಬೇಕು. ಚಾರಿತ್ರಿಕವಾಗಿ ಈ ಸಾಧ್ಯತೆ ಇರುವುದು ಇಂಗ್ಲಿಶಿಗೆ ಮಾತ್ರ. ಆದ್ದರಿಂದ ದಲಿತರು ಮತ್ತು ಕೆಳಜಾತಿಯ ಜನರು ದೇಶಭಾಷೆಗಳ ಹಂಗನ್ನು ಕಿತ್ತೊಗೆದು ಇಂಗ್ಲಿಶ್ ಭಾಷೆಯನ್ನು ತಮ್ಮದೆಂದು ಒಪ್ಪಿಕೊಳ್ಳಬೇಕು. ಶ್ರೀ ಐಲಯ್ಯ ಅವರ ವಾದಕ್ಕೆ ಹಲವು ನೆಲೆಗಳಿವೆ. ನಮಗಿಲ್ಲಿ ಮುಖ್ಯವಾದುದು ದೇಶ ಭಾಷೆಗಳ ಬಗೆಗೆ ಅವರ ವ್ಯಾಖ್ಯೆ, ಮತ್ತು ಇಂಗ್ಲಿಶಿಗೆ ಅವರು ನೀಡಿರುವ ಚಾರಿತ್ರಿಕ ಮಹತ್ವ. ಕರ್ನಾಟಕದಲ್ಲೂ ಕಳೆದ ಮೂರು ವರ್ಷಗಳಿಂದ ಒಂದು ಚರ್ಚೆ ಮೊದಲಾಗಿದೆ. ದಲಿತರು, ಕೆಳಜಾತಿಯ ಜನರು ಯಾವ ಸಂಬಂಧದಲ್ಲಿ ಪರಿಗ್ರಹಿಸಬೇಕು ಎಂಬುದೇ ಆ ಪ್ರಶ್ನೆ. ಈಗಂತೂ ಕನ್ನಡವನ್ನು ಈ ಇಕ್ಕಟ್ಟಿನಿಂದ ಬಿಡುಗಡೆ ಪಡೆಯಲು ಇಂಗ್ಲಿಶ್ ಒಂದು ಹೊರದಾರಿ ಎಂಬ ವಾದಗಳು ಮಂಡನೆಯಾಗುತ್ತಿವೆ.

ಇಂಗ್ಲಿಶ್ ಭಾಷೆ ಕನ್ನಡದ ಸಂದರ್ಭದಲ್ಲಿ ಮೊದಮೊದಲು ಕೇವಲ ಆಧುನಿಕತೆಯ ಮತ್ತು ತಿಳುವಳಿಕೆಯ ಆಕರ ಎಂಬ ನೆಲೆಯನ್ನು ಪಡೆದಿತ್ತು. ಆಧುನಿಕತೆಯ ಸೂಚಕವಾಗಿ ಈ ಭಾಷೆಯನ್ನು ಪರಿಗಣಿಸಿದಾಗ ಕನ್ನಡ ಸಂಸ್ಕೃತಿಗೆ ಆಘಾತಕಾರಿಯಾದ ಅಂಶಗಳು ಅಷ್ಟು ಕಂಡುಬರಲಿಲ್ಲ. ಹೆಚ್ಚೆಂದರೆ ಕೆಲವು ಹೊಸ ಪದಗಳು ಸಾರ್ವಜನಿಕ ನಿರೂಪಣೆಗಳಲ್ಲಿ ಸೇರ್ಪಡೆಯಾದವು. ತಿಳುವಳಿಕೆಯ ಆಕರವನ್ನಾಗಿ ಇಂಗ್ಲಿಶ್ ಭಾಷೆಯನ್ನು ಪರಿಗಣಿಸಬೇಕೆಂಬ ವಾದ ಇಂದಿಗೂ ಬಲವಾಗಿದೆ. ಇಂಗ್ಲಿಶನ್ನು ಗ್ರಂಥಾಲಯದ ಭಾಷೆಯನ್ನಾಗಿ ಕಲಿಸಬೇಕೆಂಬ ಮಾತನ್ನು ಮೇಲಿಂದ ಮೇಲೆ ಹೇಳುತ್ತಲೇ ಬರಲಾಗಿದೆ. ಆದರೆ ತಿಳುವಳಿಕೆಯ ಆಕರವಾಗುತ್ತಲೇ ಭಾಷೆ ಯಜಮಾನಿಕೆಯ ನೆಲೆಗೂ ತಲುಪುವುದು

ಸಾಧ್ಯ ಎಂಬ ಅರಿವು ಏಳನೇ ದಶಕದಿಂದ ಈಚೆಗೆ ಕನ್ನಡ ಜನಮನದಲ್ಲಿ ನೆಲೆಯೂರಲು ಮೊದಲಾಯಿತು. ಅದರಲ್ಲೂ ಕಲಿಕೆ ಮತ್ತು ಇಂಗ್ಲಿಶ್ ಎರಡನ್ನೂ ಸಮಾನ ಪಾತಳಿಯಲ್ಲಿ ಇರಿಸಿ, ಈ ಎರಡರಿಂದಲೂ ಪಾರಂಪರಿಕ ಮೌಲ್ಯಗಳಿಗೆ ಧಕ್ಕೆಯಾಗುತ್ತದೆ ಎನ್ನುವ ಚಿಂತನೆಗಳು ಜನಪ್ರಿಯ ಆಕೃತಿಗಳಲ್ಲಿ ಮೈದಳೆದವು. ಆ ಸರಿಸುಮಾರಿನ ಎಷ್ಟೋ ಚಲನಚಿತ್ರಗಳು ಇಂಥದ್ದೇ ವಸ್ತುವನ್ನು ಹೊಂದಿವೆ. ಇಂಗ್ಲಿಶ್ ಕಲಿತ ಮಕ್ಕಳು ತಂದೆ-ತಾಯಿಗಳನ್ನು, ಕೌಟುಂಬಿಕ ಮೌಲ್ಯಗಳನ್ನು ತಿರಸ್ಕರಿಸುವ ಅಂಶವನ್ನು ಅಲ್ಲಿ ಎತ್ತಿ ಹೇಳಲಾಗುತ್ತಿತ್ತು. ಹಾಗೆ ನೋಡಿದರೆ ಈ ಅಪಾಯದ ಮುನ್ಸೂಚನೆ ಏಕೀಕರಣಪೂರ್ವದಲ್ಲೇ ಕಂಡು ಬಂದಿತ್ತು. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಇಂಗ್ಲಿಶ್ ಕಲಿತ ಲಚ್ಚ ದಾರಿತಪ್ಪಿದ ಹುಡುಗನಾಗುವ ಸೂಚನೆಯನ್ನು ಶಿವರಾಮ ಕಾರಂತರು ನೀಡಿದರು. ಅದೇ ಸುಮಾರಿನಲ್ಲಿ ಕುವೆಂಪು ಇಂಗ್ಲಿಶ್ ಕಲಿತ ಹೂವಯ್ಯನನ್ನು ಸೃಷ್ಟಿಸಿದರು. ಈತ ಲಚ್ಚನಂತೆ ದಾರಿ ತಪ್ಪಿ ಹೋಗದಿದ್ದರೂ ಪಾರಂಪರಿಕ ಮೌಲ್ಯಗಳನ್ನು, ನಂಬಿಕೆಗಳನ್ನು ಧಿಕ್ಕರಿಸುತ್ತಾನೆ. ಅನಂತರದಲ್ಲೂ ಈ ಸೂಚನೆಗಳು ಮುಂದುವರೆಯುತ್ತಾ ಬರುತ್ತವೆ. ಇಂಗ್ಲಿಶ್ ಕಲಿತವರ ಬಗೆಗೆ ಇರುವ ಆತಂಕ ಭಯಗಳು ಸಾಂಸ್ಕೃತಿಕವಾಗಿ ಬೇರೂರುತ್ತವೆ. ಇದೇ ಭಯಗಳು ಮತ್ತೊಂದು ರೀತಿಯಲ್ಲಿ ಹೊರಬರಲು ಯತ್ನಿಸಿದ ಪ್ರಸಂಗಗಳು ಇಲ್ಲವೆಂದಲ್ಲ. ಹೀಗಾದಾಗ ಇಂಗ್ಲಿಶ್ ಮೂಲಕ ದೊರಕುವ ವೈಚಾರಿಕತೆ, ವೈಜ್ಞಾನಿಕತೆ, ವಿಚಾರವಾದ ಇವೆಲ್ಲವೂ ಪರಂಪರೆಯ ಬೇರುಗಳಿಗೆ ಕೊಡಲಿ ಪೆಟ್ಟು ಹಾಕುತ್ತವೆ ಎಂಬ ಚಿಂತನೆ ಕನ್ನಡ ಸಂಸ್ಕೃತಿಯಲ್ಲಿ ಕಾಣಿಸಿಕೊಳ್ಳುತ್ತದೆ.

ಈ ಹಂತದಲ್ಲೇ ದಲಿತ ಬಂಡಾಯ ಚಳುವಳಿಯು ರೂಪಿಸಿದ ತಲೆಕೆಳಗು ಮಾದರಿ ಆವಿಷ್ಕಾರಗೊಳ್ಳುತ್ತದೆ. ಇದನ್ನು ತಲೆಕೆಳಗು ಮಾದರಿ ಎಂದು ಕರೆಯಲು ಕಾರಣಗಳಿವೆ. ಇಂಗ್ಲಿಶ್ ಪರಂಪರೆಗೆ ಧಕ್ಕೆ ತರುತ್ತದೆ ಎಂಬ ಭಯ ಮೂಡಿದ್ದು ಇಡೀ ಕನ್ನಡ ಸಂಸ್ಕೃತಿಗಲ್ಲ. ಅದರೊಳಗೆ ಇರುವ ಯಜಮಾನಿಕೆಯ ಕೇಂದ್ರಗಳಿಗೆ ಮಾತ್ರ ಈ ಅಪಾಯ ತೋರತೊಡಗಿತ್ತು. ತಮ್ಮ ಅಧಿಕಾರವನ್ನು ಪ್ರಶ್ನಿಸುವ ನೆಲೆಗಳನ್ನು ಸಹಜವಾಗಿಯೇ ಅವರು ನಿರಾಕರಿಸಿದ್ದಾರೆ. ದಲಿತ ಬಂಡಾಯ ಚಳುವಳಿಗಳು ಈ ಅಧಿಕಾರ ಕೇಂದ್ರಗಳ ಭಯವನ್ನು ಸರಿಯಾಗಿಯೇ ಗ್ರಹಿಸಿವೆ. ಆದ್ದರಿಂದ ಯಾವುದು ಸಂಸ್ಕೃತಿಯ ಯಜಮಾನರಿಗೆ ಅಪಾಯಕಾರಿ ಎಂದು ತೋರುತ್ತದೋ ಅದೇ ಕೆಳಸ್ತರದ ಜನರಿಗೆ ಬಿಡುಗಡೆಯ ದಾರಿಯಾಗಿ ಕಾಣತೊಡಗುತ್ತದೆ. ಆ ಮೂಲಕ ಮಾತ್ರ ತಮ್ಮ ರಿಕ್ತತೆ ಮತ್ತು ಸಮೃದ್ಧತೆಗಳ ನಡುವಣ ವಿರೋಧವನ್ನು ಪರಿಹರಿಸಿಕೊಳ್ಳಲು ಸಾಧ್ಯ ಎಂಬ ನೆಲೆಗೆ ಬರುವುದು ಅನಿವಾರ್ಯವಾಗುತ್ತದೆ. ಕನ್ನಡದ ಹಂಗನ್ನು ಬಿಟ್ಟುಕೊಟ್ಟ ಹೊರತು ತಮಗೆ ಬಿಡುಗಡೆ ಇಲ್ಲ ಎನ್ನುವ ಚಿಂತನೆ ಒಟ್ಟು ಸಾಂಸ್ಕೃತಿಕ ವಿನ್ಯಾಸದಲ್ಲಿ ಬಂಡುಕೋರುತನ ಎನ್ನಿಸಿದರೂ ಚಾರಿತ್ರಿಕ ಅಗತ್ಯವಾಗಿ ಅದನ್ನು ಗ್ರಹಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಪರಿಗಣಿಸಬೇಕು. ಕಳೆದ ಶತಮಾನದ ಕೊನೆಯ ದಶಕದಲ್ಲಿ ಇಂಗ್ಲಿಶ್ ಪ್ರಭಾವದಿಂದ ಮತ್ತು ಜಾಗತೀಕರಣದ ಅಪಾಯದಿಂದ ಕನ್ನಡಕ್ಕೆ ಕುತ್ತುಗಳು ಒದಗಿವೆ ಎನ್ನಿಸಿದಾಗ ಕನ್ನಡದ ಪ್ರಜ್ಞಾವಂತರು, ಕನ್ನಡ ಮುಂದೆ ಉಳಿಯುವುದು ದಲಿತರು ಮತ್ತು ಕೆಳಜಾತಿಯವರಲ್ಲಿ ಮಾತ್ರ; ಅವರು ಮಾತ್ರ

ಕನ್ನಡವನ್ನು ಉಳಿಸಬಲ್ಲರು ಎಂದು ಹೇಳುತ್ತಿದ್ದಾರೆ. ಇದು ಮೇಲುನೋಟಕ್ಕೆ ದಲಿತರಿಗೆ ಕೆಳಜಾತಿಯವರಿಗೆ ವಹಿಸಿದ ಚಾರಿತ್ರಿಕ ಹೊಣೆಗಾರಿಕೆ ಎಂದು ತೋರುತ್ತದೆ. ಈ ಹೊಸ ಜವಾಬ್ದಾರಿಯಿಂದ ಅವರು ಉಬ್ಬುಬ್ಬಿ ತಾವು ಕನ್ನಡದ ಕಟ್ಟಾಳುಗಳು ಆಗಬೇಕು ಎಂದು ತಿಳಿಯಲು ಸಿದ್ಧರಾದರು. ವಾಸ್ತವವಾಗಿ ಈ ಹೊಣೆಗಾರಿಕೆ ಕಲ್ಪಿತವಾದುದು. ಏಕೆಂದರೆ ಆಘಾತಕ್ಕೆ ಒಳಗಾಗಿರುವ ಕನ್ನಡ, ದಲಿತರ ಮತ್ತು ಕೆಳಜಾತಿಯವರ ಕನ್ನಡವಲ್ಲ. ಅವರು ತಮ್ಮ ಕನ್ನಡವನ್ನು ಕಳೆದುಕೊಂಡು ತಮ್ಮದಲ್ಲದ ಕನ್ನಡವನ್ನು ಬಳಸಬೇಕೆಂದು ಹೇಳಿದಂತಾಗಿದೆ. ಈ ತರ್ಕ ಸಹಜವಾಗಿಯೇ ದಲಿತ ಕೆಳವರ್ಗಕ್ಕೆ ಒಪ್ಪಿತವಾಗಲಿಲ್ಲ. ಇನ್ನೂ ಒಂದು ಮುಖ್ಯ ಕಾರಣವನ್ನು ಕಾಂಚ ಐಲಯ್ಯ ಸೂಚಿಸಿದ್ದಾರೆ. ಭಾರತದ ಬೇರೆ ಬೇರೆ ಪ್ರದೇಶದ ಜಾತಿಗಳು ಆಳುವ ವರ್ಗವಾಗಿ ಮಾರ್ಪಟ್ಟಾಗ ತಮ್ಮ ಪ್ರಾದೇಶಿಕ ಲಕ್ಷಣಗಳನ್ನು ಮೀರಲು ಇಂಗ್ಲಿಶ್ ಅಥವಾ ಹಿಂದಿಯನ್ನು ಬಳಸಿಕೊಂಡಿವೆ. ಮೇಲ್ಜಾತಿಯ ರಾಜಕಾರಣವೆಲ್ಲ ಈ ನಿಟ್ಟಿನಲ್ಲೇ ನಡೆದಿರುವುದು. ಆದರೆ ದಲಿತರು, ಕೆಳಜಾತಿಯವರು ಅಖಿಲಭಾರತ ವ್ಯಾಪ್ತಿಯ ಜಾತಿಗಳಾದರೂ ಅವರು ತಮ್ಮ ಸಂಪರ್ಕಜಾಲವನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗಿಲ್ಲ. ಭಾಷೆಯೇ ಅದಕ್ಕೆ ದೊಡ್ಡ ಅಡೆತಡೆ. ಅಲ್ಲದೆ ಇವರು ಪ್ರಾದೇಶಿಕ ಸಂಸ್ಕೃತಿಯ ವಕ್ತಾರರು ಎಂಬ ಭ್ರಾಮಕ ಹಕ್ಕುದಾರಿಕೆಯನ್ನು ತೊರೆಯುವುದು ಆಗಿಲ್ಲ. ಐಲಯ್ಯ ಹೇಳುವಂತೆ ಈ ಇಕ್ಕಟ್ಟಿನಿಂದ ಹೊರಬರಲು ಇಂಗ್ಲಿಶ್ ಒಂದು ಅವಕಾಶವನ್ನು ನೀಡುತ್ತದೆ. ಈ ಎರಡು ಕಾರಣಗಳು ಮುಖ್ಯವಾಗುತ್ತವೆ. ಒಂದು: ಪ್ರಾದೇಶಿಕ ಭಾಷೆಯ ಹಕ್ಕುದಾರಿಕೆಯ ಹಂಗಿನಿಂದ ಹೊರಬರಬೇಕು ಎನ್ನುವ ಇಚ್ಛೆ. ಎರಡು: ಅಖಿಲಭಾರತ ನೆಲೆಯಲ್ಲಿ ಸಂಪರ್ಕಜಾಲ ರೂಪಿಸಲು ಇಂಗ್ಲಿಶ್ ಒಂದು ಅಗತ್ಯ ಹೊರದಾರಿ ಎಂಬ ತಿಳುವಳಿಕೆ. ಇವೆರಡೂ ಒಟ್ಟಾಗಿ ಸೇರಿ ಇಂಗ್ಲಿಶ್ ಪರವಾದ ವಾದವೊಂದು ಈಗ ಮುಂಚೂಣಿಗೆ ಬಂದು ನಿಂತಿದೆ. ವರ್ಣಭೇದ ನೀತಿಯ ಅಂತರಾಷ್ಟ್ರೀಯ ಸಮ್ಮೇಳನ ನಡೆದಾಗ ಅಲ್ಲಿ ಭಾರತವನ್ನು ಪ್ರತಿನಿಧಿಸಿದ ದಲಿತರು ವರ್ಣಭೇದ ಮತ್ತು ಅಸ್ಪೃಶ್ಯತೆಗಳನ್ನು ಸಮೀಕರಿಸಲು ಯತ್ನಿಸಿದರು. ಈ ಪ್ರಯತ್ನಕ್ಕೆ ಭಾರತದ ಆಳುವ ಸಮುದಾಯ ತನ್ನ ಸಮ್ಮತಿ ನೀಡಿಲ್ಲ. ಆದರೆ ಕೆಳಸ್ತರದ ಸಮುದಾಯಕ್ಕೆ ಅಂತರಾಷ್ಟ್ರೀಯ ಸಂವಾದ ಆರಂಭಗೊಂಡಿರುವ ಸಂದರ್ಭದಲ್ಲಿ ಇಂಗ್ಲಿಶಿಗೆ ಈವರೆಗೆ ಇರದಿದ್ದ ಮಹತ್ವ ಒದಗಿ ಬಂದಿದೆ.

ಇದಕ್ಕೆ ಇಂಗ್ಲಿಶ್ ಭಾಷೆಯ ಸ್ವರೂಪದಲ್ಲಿ ಆಗಿರುವ ಬದಲಾವಣೆಗಳೂ ಮುಖ್ಯವಾಗಿವೆ. ಜಾಗತಿಕವಾಗಿ ಲಭ್ಯವಿರುವ ಮಾಹಿತಿಯ ಪ್ರಕಾರ ಇಂಗ್ಲಿಶ್ ಭಾಷೆಯನ್ನು ಕಲಿಯುವವರು ಮೂರು ಗುಂಪುಗಳಲ್ಲಿ ಇದ್ದಾರೆ. ಮೊದಲ ಭಾಷೆಯಾಗಿ ಕಲಿಯುವವರು ಒಂದು ಗುಂಪು. ವಸಾಹತು ಆಡಳಿತದ ಸಂದರ್ಭದಲ್ಲಿ ಇಂಗ್ಲಿಶನ್ನು ಕಲಿಯಬೇಕಾಗಿ ಬಂದು ವಸಾಹತೋತ್ತರ ಕಾಲದಲ್ಲೂ ಅದರ ಕಲಿಕೆಯನ್ನು ಮುಂದುವರೆಸಿರುವವರು ಇನ್ನೊಂದು ಗುಂಪು. ಜಾಗತಿಕ ವ್ಯವಹಾರಗಳಿಗಾಗಿ ಈಗ ಹೊಸದಾಗಿ ಇಂಗ್ಲಿಶನ್ನು ಕಲಿಯುತ್ತಿರುವವರದು ಮೂರನೆಯ ಗುಂಪು. ಸಂಖ್ಯಾದೃಷ್ಟಿಯಿಂದ ಎರಡನೇ ಗುಂಪಿನವರು ಅತ್ಯಧಿಕವಾಗಿದ್ದಾರೆ. ಎಂದರೆ ಇಂಗ್ಲಿಶನ್ನು

ಎರಡನೆಯ ಭಾಷೆಯಾಗಿ ಕಲಿಯುತ್ತಿರುವ ಜನರು ಇವರು. ಇವರ ಸಾಂಸ್ಕೃತಿಕ ಸ್ವರೂಪದಿಂದ ಇಂಗ್ಲಿಶ್ ಭಾಷೆ ಈಗ ತನ್ನ ಲಕ್ಷಣಗಳನ್ನು ಬದಲಾಯಿಸಿಕೊಳ್ಳತೊಡಗಿದೆ. ಇದು ಪೂರ್ಣವಾಗಿ ಸಂಪರ್ಕ ಭಾಷೆಯಾಗಿ ಪರಿವರ್ತನೆ ಆಗಿಲ್ಲವಾದರೂ ಮೊದಲಿನ ಯಾಜಮಾನ್ಯದ ಅಂಶಗಳು ಕಡಿಮೆಯಾಗಿವೆ. ಈ ಲಕ್ಷಣ ಪರಿವರ್ತನೆಯಿಂದಾಗಿ ಕೂಡ ಕರ್ನಾಟಕದ ದಲಿತ ಕೆಳವರ್ಗ ಇಂಗ್ಲಿಶನ್ನು ಒಂದು ಹೊರದಾರಿಯನ್ನಾಗಿ ಪರಿಗಣಿಸತೊಡಗಿದೆ. ಭಾಷಾ ದ್ವಿಸ್ತರತೆಯ ಸಂದರ್ಭವೊಂದು ಚಾರಿತ್ರಿಕ ವಿನ್ಯಾಸದಲ್ಲಿ ಈ ಬದಲಾವಣೆಯನ್ನು ಹೊಂದಿರುವುದು ಇನ್ನಷ್ಟು ಅಭ್ಯಾಸಯೋಗ್ಯವಾಗಿವೆ.

ಇದಕ್ಕೆ ಪೂರಕವಾದ ಮತ್ತೊಂದು ಕಾರಣವನ್ನು ಇಲ್ಲಿ ವಿವರಿಸಬೇಕಾಗಿದೆ. ಭಾಷಾದ್ವಿಸ್ತರತೆಯ ಸಂದರ್ಭದಲ್ಲಿ ಸಂಸ್ಕೃತ ಮತ್ತು ಕನ್ನಡ ಇವುಗಳ ಸಂಬಂಧ ಬಹು ಹಿಂದಿನಿಂದಲೂ ಕರ್ನಾಟಕದಲ್ಲಿ ಒಂದು ಪ್ರಶ್ನೆಯಾಗಿದೆ. ವೈಯಾಕರಣರು ರೂಪಿಸಿದ ನಿಯಮಗಳಿರಲಿ ಅಥವಾ ಕವಿಗಳು ಕನ್ನಡ ಸಂಸ್ಕೃತಗಳ ಬೆರಕೆಯನ್ನು ಕುರಿತು ಹೇಳಿದ ಹೋಲಿಕೆಗಳಿರಲಿ ಈ ವಿವಾದವನ್ನು ಸ್ಪಷ್ಟಪಡಿಸುತ್ತವೆ. ಕನ್ನಡದಲ್ಲಿ ಸಂಸ್ಕೃತ ಬೆರೆಯುವುದು ಮುತ್ತು–ಮೆಣಸು ಸೇರಿದಂತೆ, ತುಪ್ಪ–ಎಣ್ಣೆ ಸೇರಿದಂತೆ ಎಂದೆಲ್ಲ ಬಣ್ಣಿಸಿರುವುದು ಗಮನಾರ್ಹ. ಈ ಬೆರೆಯುವಿಕೆಗೆ ಆದರ್ಶ ಸ್ಥಿತಿಯನ್ನು ರೂಪಿಸಲು ಯತ್ನಿಸಿದ್ದಾರೆ. ಆದರೆ ಬಹುಮಟ್ಟಿಗೆ ಈ ಬೆರೆಯುವಿಕೆಗೆ ಅಷ್ಟು ಸಹ್ಯವಲ್ಲದ ಪ್ರತಿಕ್ರಿಯೆಯೇ ಇದ್ದಂತೆ ತೋರುತ್ತದೆ. ೧೯ನೇ ಶತಮಾನದ ಕೊನೆಯವರೆಗೂ ಇದೇ ಅಭಿಪ್ರಾಯ ಬಲವಾಗಿದೆ. ಸಂಸ್ಕೃತಮಯ ಕನ್ನಡ 'ನೀರು ಕುಡಿಯಲು ಕಷ್ಟಪಡುವ ಗಂಟಲಿನಲ್ಲಿ ಕಡುಬನ್ನು ತುರುಕಿದಂತೆ' ಎಂದು ಮುದ್ದಣ ಹೇಳಿದನು. ಆದರೆ ಚಾರಿತ್ರಿಕ ವಿನ್ಯಾಸಗಳಿಂದಾಗಿ ೨೦ನೇ ಶತಮಾನದ ಉತ್ತರಾರ್ಧದಲ್ಲಿ ಸಂಸ್ಕೃತ ಭಾಷೆಯ ಮರುಸ್ಥಾಪನೆ ಆಗುವುದನ್ನು ನೋಡುತ್ತೇವೆ. ಕನ್ನಡ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳಲು ಸಂಸ್ಕೃತದ ನೆರವನ್ನು ಪಡೆಯುತ್ತಾ ಹೋದದ್ದು ಸ್ಪಷ್ಟ. ಇದರಿಂದ ಶುದ್ಧ ಕನ್ನಡವೆಂದರೆ ಸಂಸ್ಕೃತಮಯ ಕನ್ನಡ ಎನ್ನುವ ತರ್ಕ ನೆಲೆಗೊಳ್ಳುತ್ತಿದೆ. ಏಕೀಕರಣಪೂರ್ವದಲ್ಲಿ ತೀ.ನಂ ಶ್ರೀಕಂಠಯ್ಯ ನವರು ಬರೆದ 'ಕಾಸಿನ ಸಂಘ' ಎಂಬ ಪ್ರಬಂಧದಲ್ಲಿ ಹಾಸ್ಯಮಯ ಘಟನೆಗಳು ನಿರೂಪಿತವಾಗಿವೆ. ಕನ್ನಡ ಮಾತನಾಡುವಾಗ ಇಂಗ್ಲಿಶ್ ಭಾಷೆಯ ಪದಗಳನ್ನು ಬೆರೆಸಬಾರದೆಂದು ಶಪಥ ಮಾಡಿದ ಅಧ್ಯಾಪಕರು ಎದುರಿಸಿದ ಬಿಕ್ಕಟ್ಟನ್ನು ಅಲ್ಲಿ ಬಣ್ಣಿಸಿದ್ದಾರೆ. ಅಚ್ಚರಿ ಎಂದರೆ ಈ ಅಧ್ಯಾಪಕರಿಗೆ ಇಂಗ್ಲಿಶ್ ಬೆರೆತ ಕನ್ನಡ ಇಷ್ಟವಾಗದಿದ್ದರೂ ಸಂಸ್ಕೃತ ಬೆರೆತ ಕನ್ನಡ ಒಪ್ಪಿಗೆಯಾಗುತ್ತದೆ. ಈ ದೃಷ್ಟಿಕೋನ ಕನ್ನಡ ಮನಸ್ಸಿನಲ್ಲಿ ಒಂದು ನೆಲೆನಿಂತ ದೃಷ್ಟಿಕೋನವಾಗಿ ಕಾಣುತ್ತಿದೆ. ಇಂದಿಗೂ ಈ ನಿಲುವನ್ನು ದೃಢವಾಗಿ ಸಮರ್ಥಿಸುವವರು ಇದ್ದಾರೆ. ಆದರೆ ಸಂಸ್ಕೃತಮಯವಾದ ಕನ್ನಡ ಲಿಖಿತ ನಿರೂಪಣೆಗಳ ವ್ಯಾಪ್ತಿಯಲ್ಲಿ ಮೆರೆದರೂ ಮಾತಿನ ನಿರೂಪಣೆಗಳಲ್ಲಿ ಅದಕ್ಕೆ ಅವಕಾಶ ಕಡಿಮೆ, ಲಿಖಿತ ನಿರೂಪಣೆಗಳನ್ನು ಈ ಭಾಷಾಶೈಲಿ ಒಂದು ಅತಿರೇಕದಲ್ಲಿ ಜನರನ್ನು ದೂರವಿರಿಸುವ ಪ್ರಯತ್ನವಾಗಿ ತೋರುತ್ತದೆ. ಅಲ್ಲದೆ ಆ ಶೈಲಿಯಲ್ಲಿ ಸಂಸ್ಕೃತಕ್ಕೆ ಆರೋಪಿಸಿಲಾದ ಪಾವಿತ್ರ್ಯ ನುಂಗಲಾರದ ತುತ್ತಾಗುತ್ತದೆ. ಕನ್ನಡ ಪದಗಳ ಬರವಣಿಗೆಯಲ್ಲಿ ಪರ್ಯಾಯ ರೂಪಗಳನ್ನು ಒಪ್ಪಿಕೊಳ್ಳಲು ಸಿದ್ಧರಿರುವವರು ಸಂಸ್ಕೃತದ ಕಾಗುಣಿತದಲ್ಲಿ

ಕೊಂಚ ತಪ್ಪಾದರೂ ಅದು ಪಾವಿತ್ರ್ಯ ನಾಶ ಎಂದೇ ಭಾವಿಸಿದರು. ಈ ದ್ವಿಸ್ತರತೆಯ ಇಕ್ಕಟ್ಟಿನಿಂದ ಹೊರಬರಲು ಹಲವು ದಾರಿಗಳು ಇದ್ದವು. ಒಂದು: ಕನ್ನಡದ ಪದಕೋಶವನ್ನು ಮರಳಿ ನೆಲೆಗೊಳಿಸುವುದು. ಎರಡು: ಸಂಸ್ಕೃತ ಪದಗಳ ಕಾಗುಣಿತಕ್ಕೆ ಮೊದಲ ಮಣೆ ಹಾಕದೆ ಬಳಸುವುದು. ಮೂರು: ಸಂಸ್ಕೃತದ ಬದಲು ಪಾವಿತ್ರ್ಯದ ಅಂಟಿಲ್ಲದೆ ಮತ್ತೊಂದು ಭಾಷೆಯನ್ನು ಬಳಸುವುದು. ಕುತೂಹಲಕ್ಕಾಗಿ ಕನ್ನಡ ಸಮಾಜದ ಜನರು ಕಳೆದ ಐವತ್ತು ವರ್ಷದಲ್ಲಿ ಮುದ್ರಿಸಿದ ಮದುವೆಯ ಆಹ್ವಾನ ಪತ್ರಿಕೆಗಳನ್ನು ಗಮನಿಸಬಹುದು. ಕನ್ನಡ ಮತ್ತು ಇಂಗ್ಲಿಶ್‌ನಲ್ಲಿ ಜೊತೆಯಾಗಿ ಮುದ್ರಿಸುವ ಪರಿಪಾಠ ಹೆಚ್ಚಿದೆ. ಇಲ್ಲವೇ ಇಂಗ್ಲಿಶಿನಲ್ಲೇ ಮಾತ್ರ ಮುದ್ರಿಸಲಾಗುತ್ತದೆ. ಕನ್ನಡ ಭಾಗದ ಪಾಠ ಪೂರ್ಣವಾಗಿ ಸಂಸ್ಕೃತಮಯ. ಅಲ್ಲೊಂದು ಶ್ಲೋಕ. ಬಳಸುವ ಪದಗಳು ಪಾವಿತ್ರ್ಯದ ಸೂಚನೆ ನೀಡುವ ಪದಗಳು. ಎಷ್ಟೇ ಔಪಚಾರಿಕವಾಗಿ ಕಂಡರೂ ಈ ಕರೆಯೋಲೆಗಳು ಏಕೆ ಇಂಗ್ಲಿಶಿಗೆ ಬರಬರುತ್ತಾ ವರ್ಗಾವಣೆಯಾದವು ಎನ್ನುವುದು ಕುತೂಹಲಕಾರಿ. ಎಷ್ಟೋ ವೇಳೆ ಆ ಮದುವೆಗೆ ಸಂಬಂಧಿಸಿದ ಕುಟುಂಬದವರು ಯಾರೂ ಆ ಇಂಗ್ಲಿಶ್ ಒಕ್ಕಣೆಗೆ ಕಾರಣರಾಗಿರುವುದಿಲ್ಲ. ಆದರೂ ಇಂಗ್ಲಿಶಿಗೆ ಗಂಟು ಬೀಳುತ್ತಾರೆ. ಇದು ಒಂದು ಕಡೆ ಆಧುನಿಕತೆಯ ಸೂಚಕವಾದರೆ ಇನ್ನೊಂದು ಕಡೆ ಹೆಚ್ಚು ಧರ್ಮನಿರಪೇಕ್ಷ ಆಗಬೇಕೆಂಬ ಸೂಚನೆಯೂ ಇದ್ದೀತು. ಬಹುಶಃ ಈ ತರ್ಕವನ್ನು ವಿಸ್ತರಿಸಿದರೆ ಸಹಜವಾಗಿಯೇ ಸಂಸ್ಕೃತದ ಸ್ಥಾನ ಬದಲಾಗಿ ಇಂಗ್ಲಿಶಿಗೆ ಆ ಅವಕಾಶ ದೊರಕುತ್ತದೆ. ನಾವು ಈವರೆಗೆ ಚರ್ಚಿಸುತ್ತಿದ್ದ ಪ್ರಸಂಗದಲ್ಲಿ ಭಾಷಾದ್ವಿಸ್ತರತೆಯ ಸನ್ನಿವೇಶವನ್ನು ಭಾಷಿಕಸಮುದಾಯಗಳು ಒಪ್ಪಿ ಆಚರಿಸುವ ಬದಲಾಗಿ ಅದನ್ನು ನಿರಾಕರಿಸುವ ಇಲ್ಲವೇ ಮರಳಿ ಮರುರೂಪಿಸುವ ಪ್ರಯತ್ನವನ್ನು ಮಾಡಿದನ್ನು ಗಮನಿಸುತ್ತೇವೆ. ಸಂಸ್ಕೃತ, ಕನ್ನಡ ಈ ದ್ವಿಸ್ತರತೆಯ ಇಕ್ಕಟ್ಟನ್ನು ಮುರಿಯಲು ಯತ್ನಗಳು ಈ ನೆಲೆಯಲ್ಲಿ ಮೊದಲಾಗಿವೆ. ಸಂಸ್ಕೃತವನ್ನು ಕನ್ನಡದ ಸಾಧ್ಯತೆಯ ವಿಸ್ತರಣೆಗೆ ಬಳಸಬಹುದಾದರೆ, ಅದೇ ಕಾರಣಕ್ಕೇ ಇಂಗ್ಲಿಶನ್ನೂ ಬಳಸಬಹುದಾಗಿದೆ. ಮತ್ತು ಬದಲಾದ ಚಾರಿತ್ರಿಕ ಸಂದರ್ಭದಲ್ಲಿ ಸಂಸ್ಕೃತಕ್ಕೆ ಸೇರಿದ ಪಾವಿತ್ರ್ಯದ ನಂಟು ಇಂಗ್ಲಿಶಿಗೆ ಇಲ್ಲ. ಬದಲಿಗೆ ಅದು ಆಧುನಿಕತೆಯ ಚಹರೆಯನ್ನು ಭಾಷಾ ಬಳಕೆದಾರರಿಗೆ ದೊರಕಿಸಿಕೊಡುತ್ತದೆ.

ಸಂಸ್ಕೃತದ ಸ್ಥಾನ ಹೆಚ್ಚು ಸಂಕೀರ್ಣವಾದುದು. ಏಕೀಕರಣಪೂರ್ವದಲ್ಲಿ ಓರಿಯಂಟಲಿಸ್ಟರು 'ಭಾರತ ಶಾಸ್ತ್ರ'ವನ್ನು ಕಟ್ಟುವಾಗ ಅದಕ್ಕೆ ಮೂಲ ಆಕರವಾಗಿ ಸಂಸ್ಕೃತ ಭಾಷೆಯ ಗ್ರಂಥ ಸಮುದಾಯವನ್ನು ಬಳಸಿಕೊಂಡರು. ಭಾರತ ಮತ್ತು ಸಂಸ್ಕೃತ ಎರಡು ಸಮಾನವಾಚಿಗಳಾದವು. ಕನ್ನಡದಲ್ಲೂ ಈ ಚಿಂತನೆ ಬಲವಾಗಿ ಬೇರೂರಿತ್ತು. ಸಂಸ್ಕೃತ ಕಾವ್ಯಮೀಮಾಂಸೆಯನ್ನು ಭಾರತೀಯ ಕಾವ್ಯಮೀಮಾಂಸೆ ಎಂದೆವು. ಸಂಸ್ಕೃತ ಭಾಷೆಯ ವ್ಯಾಕರಣದ ಚೌಕಟ್ಟನ್ನು ಕನ್ನಡ ಭಾಷೆಗೆ ಅನ್ವಯಿಸಿದ್ದೆವು. ಬಹು ಮುಖ್ಯವಾದ ಎಲ್ಲ ಚರ್ಚೆಗಳಲ್ಲೂ ಹೀಗೆ ಸಂಸ್ಕೃತವನ್ನು ದೇಶವ್ಯಾಪೀ ಚಿಂತನೆಗೆ ಸೂಚಕವನ್ನಾಗಿ ಮಾಡಿಕೊಂಡೆವು. ಏಕೀಕರಣದ ಅನಂತರದಲ್ಲಿ ಕನ್ನಡ ಭಾಷೆಯಲ್ಲಿ ಸೃಷ್ಟಿಯಾದ ಚಿಂತನಾಸಾಹಿತ್ಯ ಈ ಕಾರಣಗಳಿಂದಾಗಿ ಹೆಚ್ಚು ಸಂಸ್ಕೃತಮಯವಾಯಿತು. ಅದರಲ್ಲೂ ಸಂಸ್ಕೃತದಿಂದಲೇ ಕನ್ನಡಕ್ಕೆ ಅನುವಾದಗೊಂಡ ಕೃತಿಗಳಲ್ಲಿ ಆ ಪದಗಳನ್ನು

ಯಥಾನುಕ್ರಮದಲ್ಲಿ ಉಳಿಸಿಕೊಳ್ಳಲಾಯಿತು. ಇಂಗ್ಲಿಶ್ ಭಾಷೆಯಿಂದ ಅನುವಾದಿಸುವಾಗಲೂ ಸಂಸ್ಕೃತದ ಪದಕೋಶದ ಮೊರೆ ಹೋಗಲಾಯಿತು. ಮಾಧ್ಯಮಗಳ ನವಪದಸೃಷ್ಟಿಯಲ್ಲೂ ಹೀಗೆಯೇ ಸಂಸ್ಕೃತದ ಪ್ರವೇಶ ಹೆಚ್ಚಿತ್ತು. ೧೯೬೭ರಲ್ಲಿ ಪ್ರಕಟಣೆ ಮೊದಲು ಮಾಡಿದ 'ಕನ್ನಡ ಪ್ರಭ' ಪತ್ರಿಕೆಯ ಹೆಸರನ್ನು ಕುರಿತು ನಡೆದ ಚರ್ಚೆಯನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಆ ಪತ್ರಿಕೆಯ ಮಾಲೀಕರು ಆಂಧ್ರಪ್ರಭ ಮಾದರಿಯಲ್ಲಿ ಕನ್ನಡಪ್ರಭ ಸೃಷ್ಟಿಸಿದರು. ಆದರೆ ನಮ್ಮ ಚರ್ಚೆ ಆ ಪದರೂಪ 'ಪ್ರಭಾ','ಪ್ರಭ' ಇಲ್ಲವೇ 'ಪ್ರಭೆ' ಈ ಮೂರರಲ್ಲಿ ಯಾವುದು ಸರಿ ಎಂಬ ಕಡೆಗೆ ಇತ್ತು. ಇದು ಒಂದು ಸೂಚನೆ ಮಾತ್ರ. ಇಂತಹ ಪ್ರಯತ್ನಗಳು ಮೇಲಿಂದ ಮೇಲೆ ನಡೆಯುತ್ತಲೇ ಬಂದವು. ಮೇಲುನೋಟಕ್ಕೆ ಇದು ಭಾಷೆಗಳ ಸಂಬಂಧದಂತೆ ತೋರಿದರೂ ಒಳಗೆ ನಮ್ಮ ಕನ್ನಡ ಸಮಾಜ ರಚನೆಯ ಕೆಲವು ವಿರೋಧಗಳು ಅಡಕಗೊಂಡಿದ್ದವು. ಭಾಷೆಯನ್ನು ಹೀಗೆ ಸಂಸ್ಕೃತದ ಚೌಕಟ್ಟಿಗೆ ಸಿಲುಕಿಸುವ ಪ್ರಯತ್ನ ಮೂಲಭೂತವಾಗಿ ಪುರೋಹಿತಶಾಹಿ ಪ್ರೇರಣೆಯನ್ನು ಪಡೆದಿತ್ತು. ಇದು ಹಲವು ರೀತಿಗಳಲ್ಲಿ ವ್ಯಕ್ತವಾಗುವ ಅಂಶ. ಆದರೆ ನಾವೀಗ ಗಮನಿಸಿದಂತೆ ಎಂಟನೇ ದಶಕದಿಂದ ಆದ ಸಾಮಾಜಿಕ ಚಿಂತನೆಗಳ ಪಲ್ಲಟದಿಂದ ಈ ಪುರೋಹಿತಶಾಹಿ ಪ್ರೇರಣೆಗಳನ್ನು ನಿರಾಕರಿಸುವ, ಪ್ರತಿಭಟಿಸುವ ಪ್ರಯತ್ನಗಳು ಮೊದಲಾದವು. ದಲಿತ ಬಂಡಾಯ ಚಳುವಳಿಗಳ ಸಾಮಾಜಿಕ ಪ್ರಣಾಳಿಗಳು ಏನೇ ಇರಲಿ; ಭಾಷಿಕವಾಗಿ ಅವು ಸಂಸ್ಕೃತದ ಯಜಮಾನಿಕೆಯನ್ನು ಪಾವಿತ್ರ್ಯ ಪರಿವೇಶವನ್ನು ನಿರಾಕರಿಸಿದವು ಮತ್ತು ಪರ್ಯಾಯವಾಗಿ ಇಂಗ್ಲಿಶನ್ನು ಒಂದು ಹೊರದಾರಿಯನ್ನಾಗಿ ಪರಿಗಣಿಸಿದ್ದವು. ಈ ಇಂಗ್ಲಿಶ್ ಕುರಿತ ಪರಿಭಾವನೆ ಪರೋಕ್ಷವಾಗಿ ಕನ್ನಡ ಸಂಸ್ಕೃತಿಯ ಒಳಗಿದ್ದ ಯಜಮಾನಿಕೆಗೂ ಆಘಾತ ನೀಡುವಂತಿದೆ ಎನ್ನುವುದು ಗಮನಿಸಬೇಕಾದ ಮಾತು.

ಕ್ರಿಯಾತ್ಮಕ ಕನ್ನಡ

ಸಮಸ್ಯೆ ಪರಿಹಾರದ ಸಾಧ್ಯತೆಗಳು

ಕನ್ನಡವನ್ನು ನಾವು ಈಗ ಬಹು ವಿಸ್ತಾರವಾದ ಮತ್ತು ಬಲು ವೈವಿಧ್ಯದ ಪರಿಸರಗಳಲ್ಲಿ ಬಳಸುವುದು ಅನಿವಾರ್ಯವಾಗಿದೆ. ಈ ಹೊಸ ಬಳಕೆಗಳು ಹೊಸ ಸಮಸ್ಯೆಗಳನ್ನು ತರುತ್ತಿವೆ. ಜಗತ್ತಿನಾದ್ಯಂತ ಹಲವಾರು ನೂರು ಭಾಷೆಗಳು ಇಂಥದೇ ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಭಾಷೆಗಳು ಸಮಸ್ಯೆಗಳನ್ನು ಎದುರಿಸಲು ಅನುಸರಿಸುತ್ತಿರುವ ತಂತ್ರಗಳನ್ನು ಅಭ್ಯಾಸ ಮಾಡುವ ಮೂಲಕ ಕನ್ನಡದ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಸಾಧ್ಯ. ಇದಲ್ಲದೆ ಕನ್ನಡ ಕಳೆದ ಒಂದೂವರೆ ಸಾವಿರ ವರ್ಷಗಳಲ್ಲಿ ಬಳಕೆಯನ್ನು ಕುರಿತಂತೆ ಭಿನ್ನ ಬಗೆಯ ಸಮಸ್ಯೆಗಳನ್ನು ಎದುರಿಸಿದೆ. ಆಗ ಇಂಥ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಕನ್ನಡ ಭಾಷಿಕರು ರೂಪಿಸಿಕೊಂಡಿರುವ ತಂತ್ರಗಳನ್ನು ಪರಿಶೀಲಿಸುವುದು ಕೂಡ ಅವಶ್ಯ. ಇದರಿಂದಲೂ ಕನ್ನಡ ತಾಳಿಕೆಯ ಗುಣ ಎಲ್ಲಿದೆ ಎಂಬುದನ್ನು ಗುರುತಿಸಲು ಸಾಧ್ಯವಾಗಬಹುದು.

ಬಳಕೆ ಕನ್ನಡ ಎದುರಿಸುತ್ತಿರುವ ಸವಾಲುಗಳು: ಬಳಕೆಯ ಸೀಮಿತಗೊಳ್ಳುವಿಕೆ

ಈ ಪಾಠದಲ್ಲಿ ನಾವು ಇಂದು ಕನ್ನಡದ ಬಳಕೆಯು ಎದುರಿಸುತ್ತಿರುವ ಸವಾಲುಗಳು ಯಾವುವು ಎಂಬುದನ್ನು ತಿಳಿಯುತ್ತೇವೆ. ಅಲ್ಲದೆ ಹೊಸ ಅವಕಾಶಗಳು ಬಳಕೆಯ ನೆಲೆಯಲ್ಲಿ ಕನ್ನಡಕ್ಕೆ ಒದಗಿಬರುತ್ತಿದ್ದರೂ ಕನ್ನಡದ ಬಳಕೆಯು ಸೀಮಿತವಾಗುತ್ತಿರುವ ಪರಿಸ್ಥಿತಿಯನ್ನು ಕೂಡ ಗಮನಿಸಲಿದ್ದೇವೆ. ಅಂದರೆ ಕನ್ನಡಕ್ಕೆ ವ್ಯಾಪಕ ಬಳಕೆಯ ಅವಕಾಶಗಳು ರೂಪುಗೊಳ್ಳುತ್ತಿದ್ದರೂ ಕನ್ನಡವನ್ನು ಹೀಗೆ ವ್ಯಾಪಕವಾಗಿ ಬಳಸಲು ಹೊಸ ಬಗೆಯ ಅಡ್ಡಿಗಳ ಕೂಡ ಮೈದಳೆಯುತ್ತಿರುವುದು ಒಂದು ವಿಪರ್ಯಾಸವಾಗಿದೆ. ಈ ಸಂದರ್ಭವನ್ನು ನಾವು ವಿವರವಾಗಿ ಅರಿಯಲು ಪ್ರಯತ್ನಿಸೋಣ.

ಮುದ್ರಣದ ಆಗಮನವಾಗುವವರೆಗೂ ಕನ್ನಡವನ್ನು ಬರೆಯಲು ಇದ್ದ ಅವಕಾಶಗಳು ಯಾವುವು? ಈಗ ನಮಗೆ ದೊರೆತಿರುವ ಉಳಿದು ಬಂದಿರುವ ದಾಖಲೆಗಳು ಏನು ಹೇಳುತ್ತವೆ? ಕವಿಗಳು ಶಾಸ್ತ್ರಕಾರರು ತಮ್ಮ ಕೃತಿಗಳನ್ನು ಕನ್ನಡದಲ್ಲಿ ಬರೆಯುತ್ತಿದ್ದರು. ಅವರ ಕೃತಿಗಳ ಹಸ್ತ ಪ್ರತಿಗಳು ನಮಗೆ ಲಭಿಸುತ್ತಿವೆ. ಇದಲ್ಲದೆ ಕಲ್ಲಿನ ಮೇಲೆ ಮತ್ತು ಲೋಹದ ಫಲಕಗಳ ಮೇಲೆ ಶಾಸನಗಳನ್ನು ಬರೆಯುತ್ತಿದ್ದರು. ಈ ದಾಖಲೆಗಳು

ಕೂಡ ನಮಗೆ ದೊರೆಯುತ್ತವೆ. ಇದಲ್ಲದೆ ಕಡಿತವೆಂಬ ಇನ್ನೊಂದು ಮಾಧ್ಯಮವನ್ನು ಬಳಸಿ ಲೆಕ್ಕಪತ್ರಗಳನ್ನು ಕೆಲವು ಮುಖ್ಯ ದಾಖಲೆಗಳನ್ನು ಬರೆಯುವ ಪರಿಪಾಟ ಕೂಡ ಇತ್ತು. ಬಟ್ಟೆ ಮೇಲೆ ಕಪ್ಪು ಬಣ್ಣದ ಸರಿಯನ್ನು ಬಳಿದು ಈ ಕಡಿತಗಳನ್ನು ರೂಪಿಸಲಾಗುತ್ತಿತ್ತು. ಈ ಕಡಿತಗಳು ಬರೆಯಲು ಅನುವಾಗುವ ಕಪ್ಪು ಬಣ್ಣದ ಮೇಲ್ಮೈಯನ್ನು ಒದಗಿಸುತ್ತಿದ್ದವು. ಕಾಗದವು ಲಭ್ಯವಾಗತೊಡಗಿದ ಮೇಲೆ ಕಾವ್ಯ ಶಾಸ್ತ್ರಗಳ ಪ್ರತಿಗಳನ್ನು ಕಾಗದದ ಮೇಲೆ ಬರೆದಿಡುವ ಪದ್ಧತಿ ಕಾಣಿಸಿಕೊಂಡಿತು. ಅಂದರೆ ಬರವಣಿಗೆಯ ವಲಯ ಇನ್ನೆಷ್ಟು ವಿಫುಲವಾಗಿದ್ದಿರಬಹುದೆಂದು ನಾವು ಕೇವಲ ಊಹಿಸಬೇಕಾಗುತ್ತದೆ. ಏಕೆಂದರೆ ಅದಕ್ಕೆ ಬೇಕಾದ ಪುರಾವೆಗಳು ನಮಗೆ ಭೌತಿಕ ವಸ್ತುಗಳ ರೂಪದಲ್ಲಿ ನಮಗೆ ದೊರಕುವುದಿಲ್ಲ. ಪರೋಕ್ಷ ಮಾಹಿತಿಗಳಿಂದ ಮಾತ್ರ ನಾವು ಕೆಲವು ನಿರ್ಧಾರಗಳನ್ನು ಮಾಡಬೇಕಾಗುತ್ತದೆ. ಉದಾಹರಣೆಗೆ ಪತ್ರಗಳನ್ನು ಬರೆದು ಪಾರಿವಾಳಗಳ ಕಾಲಿಗೆ ಕಟ್ಟಿ ಹಾರಿಸುತ್ತಿದ್ದರೆಂಬ ಬಣ್ಣನೆಗಳನ್ನು ಕೇಳಿದ್ದೇವೆ. ಈ ಸಂದೇಶಗಳನ್ನು ಯಾವ ಸಾಮಗ್ರಿಗಳನ್ನು ಬಳಸಿ ಬರೆಯಲಾಗುತ್ತಿತ್ತು ಎಂಬುದನ್ನು ನಾವು ಈಗ ಕಣ್ಣಾರೆ ಕಾಣುವುದು ಸಾಧ್ಯವಿಲ್ಲ. ಏಕೆಂದರೆ ಅಂಥ ದಾಖಲೆಗಳು ನಮ್ಮವರೆಗೆ ಉಳಿದು ಬಂದಿಲ್ಲ. ಎಲೆಗಳ ಮೇಲೆ ಉಗುರುಗಳಿಂದ ಅಕ್ಷರಗಳನ್ನು ಕೊರೆದು ಸಂದೇಶಗಳನ್ನು ತಲುಪಿಸುತ್ತಿದ್ದ ವಿವರಗಳು ದೊರಕುತ್ತವೆ. ಸಹಜವಾಗಿಯೇ ಇವು ತತ್ಕಾಲೀನ ಅವಶ್ಯಕತೆಗಳನ್ನು ಪೂರೈಸುತ್ತಿದ್ದಿರಬೇಕು. ಏಕೆಂದರೆ ಹಸಿಯ ಎಲೆಗಳಿಗೆ ಬಹುಕಾಲ ಉಳಿದು ಬರುವ ಸಾಮರ್ಥ್ಯವಿರುವುದಿಲ್ಲ. ಸಂದೇಶ ದೊರಕಿದ ಕೂಡಲೇ ಸಂದೇಶವನ್ನು ಹೊತ್ತು ತಂದಿದ್ದ ಮಾಧ್ಯಮವೂ ಕೂಡ ಖಿಲವಾಗುತ್ತಿದ್ದಿರಬೇಕು. ಈ ಎಲ್ಲ ವಿವರಗಳು ನಮಗೆ ತಿಳಿಸುವ ಸಂಗತಿ ಏನು? ಮುದ್ರಣವೆಂಬ ತಂತ್ರಜ್ಞಾನ ಒದಗಿಬರುವವರೆಗೆ ಕನ್ನಡ ಬರವಣಿಗೆಯು ಕೆಲವು ವಲಯಗಳಿಗೆ ಮಾತ್ರ ಸೀಮಿತವಾಗಿರುತ್ತಿತ್ತು. ಅಲ್ಲದೆ ಇಂಥ ಬರವಣಿಗೆಗಳು ಕೂಡ ಒಮ್ಮೆ ಬರೆದದ್ದನ್ನೇ ಮರಳಿ ನಕಲು ಮಾಡುವ ಕೆಲಸಕ್ಕೆ ಹೆಚ್ಚಾಗಿ ಬಳಕೆಯಾಗುತ್ತಿತ್ತು. ಅದರಿಂದಲೇ ನಮಗೆ ಒಂದೇ ಕಾವ್ಯದ ನೂರಾರು ಹಸ್ತಪ್ರತಿಗಳು ನಾಡಿನ ಬೇರೆ ಬೇರೆ ಕಡೆಗಳಲ್ಲಿ ದೊರಕುತ್ತವೆ. ಇದರಿಂದ ಬರೆವಣಿಗೆಯ ವಲಯಗಳು ಸೀಮಿತವಾಗಿದ್ದುದು ಗೊತ್ತಾಗುತ್ತದೆ. ಬರೆವಣಿಗೆಗೆ ಬಳಸುತ್ತಿದ್ದ ಸಾಮಗ್ರಿಗಳ ಅಂತಃಸ್ವಭಾವ ಬರೆವಣಿಗೆಗೆ ಇದ್ದ ಉದ್ದೇಶಗಳು ಇವೆಲ್ಲವೂ ಸೇರಿ ಬರೆವಣಿಗೆಗೆ ಸಾಂಸ್ಕೃತಿಕ ವಲಯದಲ್ಲಿ ಕಡಿಮೆ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದವು.

ಆದರೆ ಮುದ್ರಣದ ನೆರವು ಮತ್ತು ಸಾಮಾಜಿಕವಾದ ಇನ್ನಿತರ ಬದಲಾವಣೆಗಳಿಂದಾಗಿ 19ನೆಯ ಶತಮಾನದಿಂದ ಈಚೆಗೆ ಕನ್ನಡ ಬರೆವಣಿಗೆಯ ವಲಯಗಳು ವಿಸ್ತಾರಗೊಳ್ಳುತ್ತಾ ಹೋಗುವುದನ್ನು ನೋಡುತ್ತೇವೆ. ಕಾವ್ಯ ಶಾಸ್ತ್ರಗಳು ಮಾತ್ರವಲ್ಲದೆ ಇನ್ನಿತರ ಮಾದರಿಯ ನಿರೂಪಣೆಗಳು ಕಾಗದದ ಮೇಲೆ ಮುದ್ರಣಗೊಂಡು ದಾಖಲಾಗತೊಡಗಿದವು. ತತ್ಕಾಲೀನ ಉಪಯೋಗದ ಬರೆವಣಿಗೆಗಳು ಕೂಡ ಈಗ ಸಂರಕ್ಷಣೆಗೆ ಒಳಗಾಗಿ ನೋಡಲು ಸಿಗುತ್ತಿವೆ. ಭಾಷೆಯ ಬಳಕೆಗೆ ಹೊಸ ಅವಕಾಶಗಳು ಶಿಕ್ಷಣದ ಸಾರ್ವತ್ರೀಕರಣದಿಂದಾಗಿ ಒದಗಿಬಂತು. ಪಾಠ್ಯ ಪುಸ್ತಕಗಳು ವಿವಿಧ ವಿಷಯಗಳಲ್ಲಿ ರಚನೆಯಾಗುವುದು ಅನಿವಾರ್ಯವಾಯಿತು. ಪರಾಮರ್ಶನಗ್ರಂಥಗಳು

ರಚನೆಯಾಗ ತೊಡಗಿದವು. ನಿಘಂಟುಗಳು, ವ್ಯಾಕರಣಗಳು ಮೊದಲಾಗಿ ಹಲವಾರು ಸಂದರ್ಭ ಗ್ರಂಥಗಳು ಸಿದ್ಧಗೊಳ್ಳುತ್ತಾ ಬಂದವು. ಬರೆಯುವವರ ಸ್ವಾತಂತ್ರ್ಯ ಹೆಚ್ಚಾಗ ತೊಡಗಿತು. ಮಾತಿನಲ್ಲಿ ಮೂಡಿ ಲಯವಾಗುತ್ತಿದ್ದ ಎಷ್ಟೋ ಸಂಕಥನಗಳು, ನಿರೂಪಣೆಗಳು ಈಗ ಬರೆಹದ ರೂಪದಲ್ಲಿ ಸಿಗತೊಡಗಿದ್ದನ್ನು ನೋಡುತ್ತೇವೆ.

ಇಪ್ಪತ್ತನೆಯ ಶತಮಾನಕ್ಕೆ ಬಂದಾಗ ಈ ಅವಕಾಶಗಳು ಇನ್ನೂ ವಿಸ್ತಾರವಾಗುತ್ತಾ ಬರುವುದನ್ನು ಕಾಣುತ್ತೇವೆ. ಪತ್ರಿಕೆಗಳೇ ಮೊದಲಾಗಿ ಹಲವು ಪ್ರಸಾರ ಮಾಧ್ಯಮಗಳ ಬೆಳವಣಿಗೆ. ಆಡಳಿತದ ವಿಸ್ತಾರ. ವಾಣಿಜ್ಯದ ಪ್ರಸಾರ, ಪ್ರಚಾರ ಮಾಧ್ಯಮಗಳ ಅವಶ್ಯಕತೆ ಇವೇ ಮೊದಲಾಗಿ ಹಲವು ರೀತಿಗಳಲ್ಲಿ ಸಾಮಾಜಿಕ ನೆಲೆಯ ಭಾಷಾ ಬಳಕೆ ಹೆಚ್ಚುತ್ತಾ ಬಂದಿವೆ. ಅಲ್ಲದೆ ವೈಯಕ್ತಿಕ ನೆಲೆಯಲ್ಲಿ ಬರೆವಣಿಗೆಯ ಅವಕಾಶಗಳು ಸಹ ಹೆಚ್ಚುತ್ತಲೇ ಬಂದಿವೆ. ಪತ್ರವ್ಯವಹಾರಗಳು ಮೊದಲಾಗಿ ಹಲವು ಬಗೆಗಳಲ್ಲಿ ಬರೆವಣಿಗೆಯ ಸಾಧ್ಯತೆಗಳು ಒದಗಿಬಂದವು.

ಇಲ್ಲಿಯವರೆಗೆ ಭಾಷೆಯ ಬಳಕೆಯು ವಿಸ್ತಾರಗೊಳ್ಳುತ್ತಾ ಹೋಗುತ್ತಿರುವುದಕ್ಕೆ ಬರೆವಣಿಗೆಯನ್ನು ಮಾತ್ರ ಗಮನದಲ್ಲಿ ಇರಿಸಿಕೊಂಡು ವಿವರಣೆಯನ್ನು ನೀಡಿದ್ದಾಯಿತು. ಆದರೆ ಬರೆವಣಿಗೆಯಲ್ಲದೆ ಇನ್ನಿತರ ವಿಧಾನಗಳಲ್ಲೂ ಭಾಷಾ ಬಳಕೆಯ ಸಾಧ್ಯತೆಗಳು ಹೆಚ್ಚುತ್ತಾ ಹೋಗಿರುವುದನ್ನು ಯಾರಾದರೂ ಗುರುತಿಸಬಹುದಾಗಿದೆ.

ಚಟುವಟಿಕೆ

ನಾವು ಕನ್ನಡವನ್ನು ಎಲ್ಲೆಲ್ಲಿ ಹೇಗೆ ಬಳಸುತ್ತೇವೆ ಎಂಬುದನ್ನು ಪಟ್ಟಿ ಮಾಡಲು ಪ್ರಯತ್ನಿಸೋಣ ಮಾತು : ಸಂಭಾಷಣೆ ಜಗಳ, ಹರಟೆ, ಸಲ್ಲಾಪ ಇವೇ ಮುಂತಾದವು ದ್ವಿಮುಖಿ ಬಳಕೆಗೆ ನಿದರ್ಶನಗಳು. ಅಂದರೆ ಒಬ್ಬರಿಗಿಂತ ಹೆಚ್ಚು ಜನ ಸರದಿಯಲ್ಲಿ ಅಥವಾ ಕೆಲವೊಮ್ಮೆ ಒಟ್ಟಾಗಿ ಮಾತಾಡುತ್ತಿರುವ ಪ್ರಸಂಗಗಳಿವು. ಟೆಲಿಫೋನ್ ಸಂಭಾಷಣೆಯಲ್ಲಿ ದ್ವಿಮುಖಿ ನೆಲೆ ಇದ್ದರೂ ಒಬ್ಬರು ಇನ್ನೊಬ್ಬರಿಗೆ ಕಾಣಿಸುತ್ತಿರಬೇಕಿಲ್ಲ. ಭಾಷಣ, ತರಗತಿಯ ಪಾಠಗಳು ಇವೇ ಮುಂತಾದವು ಏಕಮುಖಿ ಮಾತಿನ ಬಳಕೆಯ ಮಾದರಿಗಳು. ಆದರೆ ಕೇಳಿಸಿಕೊಳ್ಳುತ್ತಿರುವವರು ಮಾತನಾಡುತ್ತಿರುವವರ ಎದುರಿನಲ್ಲೇ ಇರಬೇಕಾಗುತ್ತದೆ. ಆದರೆ ರೇಡಿಯೋ ಭಾಷಣ, ಜಾಹಿರಾತು ಮುಂತಾದ ಕಡೆಗಳಲ್ಲಿ ಏಕಮುಖಿ ನೆಲೆಯ ಬಳಕೆ ಇದ್ದರೂ ಅಲ್ಲೆಲ್ಲಾ ಕೇಳಿಸಿಕೊಳ್ಳುವವರು ಮಾತನಾಡುವವರ ಎದುರು ಇರಬೇಕಿಲ್ಲ. ಇದಲ್ಲದೆ ಮಾತಾಡುವವರು ತಮಗಾಗಿ ಮಾತ್ರ ಮಾತಾಡಿಕೊಳ್ಳದೆ ಇತರರಿಗಾಗಿ ಮಾತಾಡುವ ಸಂಭಾಷಿಸುವ ಬಳಕೆಗಳೂ ಇವೆ. ಉದಾ. ಟೆಲಿವಿಶನ್‌ನಲ್ಲಿ ಯಾವುದೋ ವಿಚಾರವನ್ನು ಕುರಿತು ಇಬ್ಬರು ಸಂಭಾಷಿಸುತ್ತಿದ್ದಾರೆಂದುಕೊಳ್ಳೋಣ. ಅವರಿಬ್ಬರ ನಡುವೆ ಸಂಭಾಷಣೆ ನಡೆಯುತ್ತಿರುವುದು ನಿಜವಾದರೂ ಅದರ ಉದ್ದೇಶ ಅವರಿಬ್ಬರಿಗೆ ಸೀಮಿತವಾಗಿಲ್ಲ. ಎಲ್ಲೋ ಇರುವ ನೋಟಕರನ್ನು ಉದ್ದೇಶಿಸಿ ಅವರು ಮಾತನಾಡುತ್ತಿರುತ್ತಾರೆ. ಇಂಥ ಇನ್ನೂ ಹಲವು ಭಾಷಾ ಬಳಕೆಯ (ಮಾತಿನ ನೆಲೆ) ಸಾಧ್ಯತೆಗಳನ್ನು ನಮ್ಮ ಅನುಭವದಲ್ಲಿ ಗ್ರಹಿಸಬಹುದಾಗಿದೆ.

ಬರೆವಣಿಗೆ

ಇದಕ್ಕಂತೂ ಮಿತಿಯೇ ಇಲ್ಲ. ಪ್ರಚಾರದ ಬಿಲ್ಲುಗಳು, ಪತ್ರಿಕೆಯ ಪುಟಗಳು ಪಾಠ್ಯ ಪುಸ್ತಕಗಳು, ವಿವರಣಾತ್ಮಕ ಬರೆಹಗಳು ಮೊದಲಾಗಿ ಹಲವು ಬಗೆಗಳಲ್ಲಿ ಮುದ್ರಿತ ಸಾಮಗ್ರಿ ನಮಗೆ ಲಭಿಸುತ್ತವೆ. ಯಾರನ್ನೋ ಖಚಿತವಾಗಿ ಉದ್ದೇಶಿಸಿದ ಬರೆಹಗಳು ಮತ್ತು ಹಾಗೆ ಖಚಿತವಾದ ಓದುಗರು ಎದುರಿಗಾಗಲೇ ಮರೆಯಾಗಿ ಆಗಲಿ ಗುರುತಿಸಲು ಸಾಧ್ಯವಿಲ್ಲದ ಬರೆಹಗಳು ಎಂದು ಎರಡು ಬಗೆಗಳನ್ನು ನಾವು ವಿಭಜಿಸಿಕೊಳ್ಳಬಹುದು. ಪತ್ರಗಳು ಓದುಗರು ಯಾರು ಎಂಬುದು ಖಚಿತವಾಗಿ ತಿಳಿದಿರುವ ಬರೆಹಗಳಿಗೆ ಉದಾಹರಣೆಗಳಾಗಿವೆ. ಏಕೆಂದರೆ ಪತ್ರಗಳು ಗೊತ್ತಾದ ಓದುಗರಿಗಾಗಿಯೇ ರಚನೆಯಾಗುತ್ತವೆ. ಕೆಲವೊಮ್ಮೆ ಬಹು ಖ್ಯಾತನಾಮರಾದವರ ಪತ್ರಗಳು ಎಷ್ಟೋ ಕಾಲ ಕಳೆದ ಅನಂತರ ಸಾರ್ವಜನಿಕವಾಗಿ ಓದುಗರಿಗೆ ದೊರೆಯುತ್ತವೆ. ಆದರೆ ಬಹುಮಟ್ಟಿಗೆ ಖಾಸಗಿ ಪತ್ರಗಳು ಇಂಥದೇ ಓದುಗರಿಗಾಗಿ ಎಂದೇ ರಚನೆಯಾಗುತ್ತವೆ ಮತ್ತು ಆ ಓದುಗರನ್ನು ಉದ್ದೇಶಿಸಿಯೇ ಅವುಗಳನ್ನು ಬರೆಯಲಾಗಿರುತ್ತದೆ. ಹೀಗೆ ಬರೆಯುವಾಗ ಅದರ ಭಾಷೆಯ ಲಕ್ಷಣಗಳು ನಿಗದಿಯಾಗುತ್ತವೆ. ಹೀಗೆ ಖಾಸಗಿಯಲ್ಲದ ಯಾರನ್ನು ಬೇಕಾದರೂ ಉದ್ದೇಶಿಸಿದ ಬರೆಹಗಳ ಭಾಷೆ ಭಿನ್ನವಾಗಿರುತ್ತದೆ. ಅಂಥ ಉದಾಹರಣೆಗಳನ್ನು ನೀವು ಈಗಾಗಲೇ ಬೇರೆ ಕಡೆಗಳಲ್ಲಿ ಗಮನಿಸಿದ್ದೀರಿ. ನಮ್ಮ ಈಗಿನ ಸಮಸ್ಯೆ ಎಂದರೆ ಕನ್ನಡವನ್ನು ಹೀಗೆ ಬಹುಪ್ರಮಾಣದಲ್ಲಿ ಬರೆಯಲು ಬಳಸಲು ತೊಡಗಿರುವಾಗ ಆಯಾ ಸಂದರ್ಭಕ್ಕೆ ತಕ್ಕಂತೆ ಕನ್ನಡವನ್ನು ಹೇಗೆ ಬಳಸ ಬೇಕೆಂಬುದು ಇನ್ನೂ ಪ್ರಮಾಣೀಕರಣವಾಗಿಲ್ಲ. ಅಂದರೇನು? ಸರಕಾರಿ ಆದೇಶಗಳ ಭಾಷೆ, ಖಾಸಗಿ ಪತ್ರಗಳ ಭಾಷೆ, ಪ್ರಚಾರ ಮಾಧ್ಯಮಗಳ ಭಾಷೆ, ಸಾರ್ವಜನಿಕ ಘೋಷಣೆಗಳ ಭಾಷೆ, ಕಾನೂನಿನ ಭಾಷೆ ಹೀಗೆ ಹತ್ತಾರು ಬಗೆಯಲ್ಲಿ ಭಾಷೆಯನ್ನು ಬಳಸುವಾಗ ಅವುಗಳ ಸ್ವರೂಪದಲ್ಲಿ ಹಲವಾರು ವ್ಯತ್ಯಾಸಗಳಿರುತ್ತವೆ. ಈ ವ್ಯತ್ಯಾಸಗಳು ಪದಗಳ ಆಯ್ಕೆಯಲ್ಲಿ ಇರುತ್ತದೆ. ವಾಕ್ಯ ರಚನೆಯ ನಿಯಮಗಳಲ್ಲಿ ಇರುತ್ತದೆ. ಅಲ್ಲದೆ ಆಯಾ ಸಂದರ್ಭಗಳಿಗೆ ಹಲವು ನಿಷೇಧಗಳಿರುತ್ತವೆ. ಇವೆಲ್ಲವೂ ಖಚಿತವಾಗಬೇಕು. ಮತ್ತು ಬಳಸುವವರಿಗೆ ಅವು ಗೊತ್ತಿರಬೇಕು.

ಕನ್ನಡವನ್ನು ಬಳಸುವವರ ಸಂಖ್ಯೆ ಹೆಚ್ಚಾಗುತ್ತಿದೆ ಎನ್ನುವುದಕ್ಕೆ ಪುರಾವೆಗಳನ್ನು ಒದಗಿಸಬೇಕಿಲ್ಲ. ಕಳೆದ ಐವತ್ತು ವರ್ಷಗಳಲ್ಲಿ ಕರ್ನಾಟಕದ ಜನಸಂಖ್ಯೆಯಲ್ಲಿ ಆಗಿರುವ ಅಗಾಧ ಪ್ರಮಾಣದ ಹೆಚ್ಚಳವೇ ಈ ಅಂಶಕ್ಕೆ ಅಂದರೆ ಕನ್ನಡವನ್ನು ಬಳಸುವವರು ಹೆಚ್ಚಾಗುತ್ತಿದ್ದಾರೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಕನ್ನಡವನ್ನು ಬಳಸುವ ವಲಯಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂಬುದನ್ನು ಮೇಲೆ ನಿರೂಪಿಸಲಾಗಿದೆ. ಸಮಸ್ಯೆ ಇರುವುದು ಇಲ್ಲಿಯೇ. ಬಳಕೆಯ ವಲಯಗಳಲ್ಲಿ ಆಗಿರುವ ಹೆಚ್ಚಳ ಮತ್ತು ಬಳಸುವವರ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳ ಇವೆರಡರ ನಡುವೆ ಇರಬೇಕಾದ ತಾಳಮೇಳ ಕಾಣುತ್ತಿಲ್ಲ. ಅಂದರೆ ಬಳಕೆಯ ವಲಯಗಳ ಹೆಚ್ಚಳ ಎಷ್ಟು ಪ್ರಮಾಣದಲ್ಲಿ ವೃದ್ಧಿಯಾಗಿದೆಯೋ ಅಷ್ಟು

ಪ್ರಮಾಣದಲ್ಲಿ ಬಳಸುವವರ ಸಂಖ್ಯೆ ಹೆಚ್ಚಾಗಿಲ್ಲ. ಅಥವಾ ಕನ್ನಡದ ಬಳಕೆ ನಾವು ನಿರೀಕ್ಷಿಸಿದ ಮಟ್ಟಕೆ ಬೆಳೆದಿಲ್ಲ. ಉದಾಹರಣೆಗೆ ಶಿಕ್ಷಣ ಕ್ಷೇತ್ರವನ್ನೇ ಗಮನಿಸಬಹುದು. ದಿನದಿನವೂ ಈ ವಲಯದಲ್ಲಿ ಕೇಳಿಬರುತ್ತಿರುವ ಆತಂಕದ ದನಿಯೆಂದರೆ ಕನ್ನಡವನ್ನು ಮಾಧ್ಯಮವನ್ನಾಗಿ ಬಳಸುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬುದು ಓದುವವರ ಸಂಖ್ಯೆ ಖಂಡಿತವಾಗಿಯೂ ಹೆಚ್ಚಾಗುತ್ತಿದೆ. ಆದರೆ ಕನ್ನಡವನ್ನು ಮಾಧ್ಯಮವನ್ನಾಗಿ ಹೊಂದಿ ಓದುವವರ ಸಂಖ್ಯೆ ಕಡಿಮೆಯಾಗಿದೆ. ಅಥವಾ ನಿರೀಕ್ಷಿತ ಪ್ರಮಾಣದಲ್ಲಿ ಹೆಚ್ಚಾಗುತ್ತಿಲ್ಲ. ಇದೇ ಸಂದರ್ಭವನ್ನು ಬಹುಪಾಲು ಎಲ್ಲ ವಲಯಗಳಲ್ಲು ನಾವು ನೋಡಬಹುದಾಗಿದೆ.

ಇನ್ನೂ ಒಂದು ಮುಖ್ಯ ಸಂಗತಿ ಹೆಚ್ಚಿನ ಗಮನವನ್ನು ಬಯಸುತ್ತದೆ. ಕನ್ನಡವನ್ನು ಮಾತನಾಡುವವರ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬರುತ್ತಿದೆ. ಎಲ್ಲ ವಲಯಗಳಲ್ಲೂ ಕನ್ನಡವನ್ನು ಮಾತಾಡುವವರ ಸಂಖ್ಯೆಯಲ್ಲಿ ಹೆಚ್ಚಳವಿದೆ. ಆದರೆ ಕನ್ನಡವನ್ನು ಬರೆಯುವವರ ಪ್ರಮಾಣ ಕಡಿಮೆಯಾಗುತ್ತಿದೆ. ಇದಕ್ಕೆ ಅನುಗುಣವಾಗಿ ಕನ್ನಡವನ್ನು ಓದುವವರ ಸಂಖ್ಯೆಯಲ್ಲೂ ಇಳಿಮುಖ ಕಂಡುಬರುತ್ತಿದೆ. ಕನ್ನಡವನ್ನು ಓದುವವರ ಕೂಡ ಅದನ್ನು ಯಾವ ವಲಯಗಳಲ್ಲಿ ಓದುತ್ತಾರೆ ಎಂಬುದನ್ನು ಪರಿಶೀಲಿಸಿ ನೋಡಬೇಕಾಗಿದೆ. ದಿನಪತ್ರಿಕೆಗಳನ್ನು ಗಮನಿಸಿ. ಅಲ್ಪವಯಿ ಲಿಖಿತ ಮಾಹಿತಿಯನ್ನು ಓದುವವರು ಕನ್ನಡದಲ್ಲಿ ಅದನ್ನು ಓದಲು ಸಿದ್ಧರಿರಬಹುದು. ಆದರೆ ಉನ್ನತ ವಿಷಯಗಳನ್ನು ಓದಬಯಸುವವರು ಇಂಗ್ಲಿಷ್ ಮೂಲಕ ಹೋಗಬಯಸುತ್ತಾರೆ. ಕಾನೂನಿನ ಸಲಹೆಯೊಂದನ್ನು ಪತ್ರಿಕೆಯ ಅಂಕಣದಲ್ಲಿ ಓದುವುದಾದರೆ ಕನ್ನಡ ಅಲ್ಲಿ ಮಾನ್ಯ. ಆದರೆ ಕಾನೂನಿನ ಮುಖ್ಯ ಸಂಗತಿಯೊಂದನ್ನು, ಜಟಿಲವಾದ ನ್ಯಾಯಿಕ ಪ್ರಕ್ರಿಯೆಯನ್ನು ಕುರಿತು ಓದಿ ತಿಳಿದುಕೊಳ್ಳಲು ಅಧಿಕೃತವೆಂದು ಇಂಗ್ಲಿಷ್ ಭಾಷೆಯ ಮೂಲಕ್ಕೆ ಹೋಗುವುದನ್ನು ನಾವು ಗಮನಿಸಬಹುದಾಗಿದೆ.

ಭಾಷಾ ಸಂಪನ್ಮೂಲಗಳ ಬಳಕೆ, ಹೊಸ ತಂತ್ರ ಜ್ಞಾನ ಮತ್ತು ಜಾಗತೀಕರಣ

ಜನ ಬಳಸುವ ಪ್ರತಿಯೊಂದು ಭಾಷೆಗೂ ಅದರದ್ದೇ ಆದ ಸಂಪನ್ಮೂಲಗಳಿರುತ್ತವೆ. ಸಂಪನ್ಮೂಲ ಎಂದರೇನು? ನಮಗೆ ಸುಲಭವಾಗಿ ತಿಳಿಯುವ ಅಂಥ ಒಂದು ಸಂಪನ್ಮೂಲವೆಂದರೆ ಭಾಷೆಯ ಪದಕೋಶ. ನಾವು ಮಾತಾಡುವಾಗ ಬರೆಯುವಾಗ ನಮಗೆ ಗೊತ್ತಿರುವ ನಮ್ಮ ಭಾಷೆಯ ಪದಗಳನ್ನು ಬಳಸುತ್ತಿರುತ್ತೇವೆ. ಈ ಪದಗಳ ಸಂಖ್ಯೆ ಅಸಂಖ್ಯವೇನಲ್ಲ. ಕನ್ನಡದ ಎಲ್ಲ ಪದಗಳು ನಮಗೆ ಗೊತ್ತಿರುವುದಿಲ್ಲ. ಹಾಗೆ ಗೊತ್ತಿರುವುದು ಅನಿವಾರ್ಯವೇನೂ ಅಲ್ಲ. ನಾವು ಬಳಸುವ ಪದಕೋಶದಲ್ಲಿ ಸೀಮಿತ ಸಂಖ್ಯೆಯ ಪದಗಳಿರುತ್ತವೆ. ಆದರೆ ಇತರರು ಮಾತಾಡಿದಾಗ ಅಥವಾ ಇತರರು ಬರೆದದ್ದನ್ನು ಓದುವಾಗ ಬಳಕೆಯಾಗುವ ಕನ್ನಡ ಪದಕೋಶದಲ್ಲಿ ಇನ್ನೂ ಹೆಚ್ಚಿನ ಪದಗಳಿರುತ್ತವೆ. ಅಂದರೆ ನಮಗೆ ಗೊತ್ತಿರುವ ಎಲ್ಲ ಪದಗಳನ್ನು ನಾವು ಮಾತಾಡುವಾಗ ಇಲ್ಲವೇ ಬರೆಯುವಾಗ ಬಳಸುವುದಿಲ್ಲ.

ಈ ಪದಕೋಶ ನಮಗೆ ಸಾಲದು ಎಂದು ಕೆಲವೊಮ್ಮೆ ಅನ್ನಿಸುವುದುಂಟು. ವೃತ್ತಿಪರರು, ತಂತ್ರಜ್ಞರು ಉನ್ನತ ವಿದ್ಯಾಭ್ಯಾಸ ಮಾಡಿದವರು ತಮ್ಮ ವಿಚಾರಗಳನ್ನು ಕನ್ನಡದಲ್ಲಿ ಹೇಳಲು ತಕ್ಕ ಪದಗಳಿಲ್ಲವೆಂದು ನುಡಿಯುವುದನ್ನು ನಾವು ಕೇಳಿದ್ದೇವೆ. ಅಂದರೆ ನಮ್ಮ ಭಾಷೆಯ ಪದಕೋಶ ನಮಗೆ ಹಲವು ಬಾರಿ ಅಸಮರ್ಥವೆನಿಸುವುದುಂಟು. ಆದರೆ ಭಾಷಿಕರು ಈ ಸಮಸ್ಯೆಯನ್ನು ಬೇರೆಬೇರೆ ರೀತಿಯಲ್ಲಿ ಪರಿಹರಿಸಿಕೊಳ್ಳುತ್ತಾರೆ. ಅನ್ಯ ಭಾಷೆಯ ಪದಗಳನ್ನು ತಮ್ಮ ಭಾಷೆಗೆ ತೆಗೆದುಕೊಳ್ಳುವುದು ಇಂಥದೊಂದು ಮಾರ್ಗ. ಕನ್ನಡ ಹೀಗೆ ಅನ್ಯ ಭಾಷೆಗಳಿಂದ ಪದಕೋಶವನ್ನು ಬಲಪಡಿಸಿಕೊಂಡಿದೆ ಎಂಬುದನ್ನು ನೀವು ಈಗಾಗಲೇ ಬಲ್ಲಿರಿ.

ಎಲ್ಲಕ್ಕಿಂತ ಮುಖ್ಯವಾದ ಸಂಗತಿಯೊಂದನ್ನು ನಾವೀಗ ಗಮನಿಸಬೇಕು. ಅಕ್ಷರಸ್ಥರ ಸಂಖ್ಯೆ ಬಹಳ ಕಡಿಮೆ ಇದ್ದಾಗ ಮತ್ತು ಭಾಷೆಯ ವ್ಯವಹಾರಗಳು ಅತ್ಯಂತ ಸೀಮಿತವಾಗಿದ್ದಾಗ ಇದ್ದ ಪರಿಸ್ಥಿತಿಗಳು ಈಗ ಉಳಿದಿಲ್ಲ. ಈಗ ಅಕ್ಷರಸ್ಥರ ಸಂಖ್ಯೆ ಹೆಚ್ಚಾಗಿದೆ. ಅಂದರೆ ಬರಹ ಭಾಷೆಯನ್ನು ಬಳಸುವವರು (ಬರೆಯುವವರು ಮತ್ತು ಓದುವವರು) ಈಗ ಹೆಚ್ಚಾಗಿದ್ದಾರೆ. ಅಲ್ಲದೆ ಸಾಮಾಜಿಕ ಸಂಪರ್ಕಗಳು ಹೆಚ್ಚಾಗ ತೊಡಗಿವೆ. ಸಂಪರ್ಕದ ಸ್ವರೂಪಗಳೂ ಬೇರೆಬೇರೆಯ ನೆಲೆಯನ್ನು ಪಡೆದುಕೊಂಡಿವೆ. ಹೀಗಾಗಿ ಕನ್ನಡದ ಬಳಕೆಯ ಪ್ರಮಾಣ ಮತ್ತು ಸ್ವರೂಪ ಎರಡೂ ಹೆಚ್ಚಾಗಿದೆ ಎಂದು ತಿಳಿಯಬಹುದು. ಈ ಪರಿಸ್ಥಿತಿಯಿಂದಾಗಿ ಭಾಷೆಯ ಬಳಕೆಗೆ ಅವಶ್ಯವಾದ ಮಾರ್ಗದರ್ಶನಗಳು ಭಾಷಿಕರಿಗೆ ದೊರಕುತ್ತಿಲ್ಲ. ಶಿಕ್ಷಣ ವಲಯವು ಈ ಕೆಲಸವನ್ನು ನಿರ್ವಹಿಸಬೇಕಾಗಿತ್ತು. ಆದರೆ ಬೇರೆಬೇರೆ ಕಾರಣಗಳಿಂದಾಗಿ ಇದು ಸಾಧ್ಯವಾಗಿಲ್ಲ. ಭಾಷೆಯ ಬಗೆಗೆ ಬಳಕೆಯ ನಿಯಮಗಳ ಬಗೆಗೆ ಮಾರ್ಗ್‌ದರ್ಶನ ಅವಶ್ಯವಾದಾಗ ಅದು ಎಲ್ಲಿ ದೊರಕುತ್ತದೆ? ಎಷ್ಟೋ ಜನರಿಗೆ ಇಂತಹ ಮಾರ್ಗದರ್ಶನದ ಕೊರತೆಯಿಂದಾಗಿ ತಮ್ಮ ಭಾಷಾ ಬಳಕೆಗೆ ಕೆಲವು ಅಡೆತಡೆಗಳು ಬಂದಿದೆ ಎನ್ನುವುದೂ ಗೊತ್ತಿಲ್ಲ.

ಈ ಮಾರ್ಗದರ್ಶನಕ್ಕಾಗಿ ಭಾಷೆಯಲ್ಲಿ ನಿಘಂಟುಗಳು ಸಮಾನಾರ್ಥಕ ಪದಕೋಶಗಳು, ಶೈಲಿ ಕೈಪಿಡಿಗಳು, ವಿಶ್ವಕೋಶಗಳು, ಪಾರಿಭಾಷಿಕ ಪದಕೋಶಗಳು ದ್ವಿಭಾಷಾ, ಬಹುಭಾಷಾ ನಿಘಂಟುಗಳು ಇಂತಹವೇ ಪರಾಮರ್ಶನ ಗ್ರಂಥಗಳು ನಿರ್ಮಾಣವಾಗಬೇಕು. ಭಾಷೆಯನ್ನು ಬಳಸುವವರಿಗೆ ಸಂದೇಹಗಳು ಬಂದಾಗ ಈ ಪರಾಮರ್ಶನ ಗ್ರಂಥಗಳ ನೆರವಿನಿಂದ ಅವರು ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಬಹುದು. ಕನ್ನಡದಲ್ಲಿ ಇಂತಹ ಗ್ರಂಥಗಳ ಸಿದ್ಧತೆ ಸಾಕಷ್ಟು ಪ್ರಮಾಣದಲ್ಲಿ ಆಗಿವೆಯಾದರೂ ಅವುಗಳು ಇನ್ನೂ ಹೆಚ್ಚಾಗಬೇಕಿದೆ. ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್-ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು, ವಿಶ್ವಕೋಶಗಳು ಇವೇ ಮುಂತಾದ ಗ್ರಂಥಗಳನ್ನು ನಿದರ್ಶನವಾಗಿ ಕೊಡಬಹುದು.

ಜಾಗತೀಕರಣದ ಮಾತನ್ನು ಹೆಚ್ಚಾಗಿ ನಾವು ಕೇಳ ತೊಡಗಿದ್ದೇವೆ. ಕಳೆದ ಹತ್ತು ವರ್ಷಗಳಿಂದ ದಿನವೂ ಈ ಮಾತು ನಮ್ಮ ಕಿವಿಯ ಮೇಲೆ ಬೀಳುತ್ತಿದೆ; ಕಣ್ಣಿಗೆ ಕಾಣುತ್ತಿದೆ. ಜಾಗತೀಕರಣಕ್ಕೂ ಕನ್ನಡ ಭಾಷೆಗೂ ಇರುವ ಸಂಬಂಧವೇನು? ಒಂದು ನಿದರ್ಶನದ ಮೂಲಕ ಈ ಸಂಬಂಧದ ಸ್ವರೂಪವನ್ನು ನಾವು ಅರಿತುಕೊಳ್ಳಲು ಪ್ರಯತ್ನಿಸೋಣ. ಜಾಗತೀಕರಣದಿಂದಾಗಿ ಎಂತಹ ಪರಿಣಾಮಗಳು ಉಂಟಾಗಿವೆ? ಮುಖ್ಯವಾಗಿ ಸ್ಥಳೀಯವಾದ ಮತ್ತು ಕಿರುವ್ಯಾಪ್ತಿಯ ಸಂಸ್ಕೃತಿಗಳು ತಮ್ಮ ಚಹರೆಗಳನ್ನು ಉಳಿಸಿಕೊಳ್ಳುವುದು ಕಷ್ಟವೆನಿಸುವ ರೀತಿಯಲ್ಲಿ ಜಾಗತಿಕ ಮಾದರಿಗಳು ಪ್ರಚುರಗೊಳ್ಳುತ್ತಿವೆ. ಇಂಗ್ಲಿಷ್ ಇದರ ಮುಂಚೂಣಿಯಲ್ಲಿದ್ದು ಆ ಭಾಷೆಯ ಪ್ರಭಾವದಿಂದ ಕನ್ನಡದಂತಹ ಭಾಷೆಗಳು ಕೇವಲ ಮಾತಿನ ಬಳಕೆಗೆ ಮಾತ್ರ ಸೀಮಿತಗೊಳ್ಳುವ ಸಂದರ್ಭವೊಂದು ರೂಪುಗೊಳ್ಳಬಹುದಾಗಿದೆ. ಬರೆಹದ ಭಾಷೆಯಾಗಿ ಕನ್ನಡದ ವ್ಯಾಪಕತೆ ಕಡಿಮೆಯಾಗುತ್ತಾ ಹೋಗುವ ಸಾಧ್ಯತೆ ಇದೆ. ಆದರೆ ಕನ್ನಡದಂತಹ ಭಾಷೆಯ ಆಧುನಿಕ ರೂಪವನ್ನು ಮತ್ತು ಅದರ ಲಕ್ಷಣಗಳನ್ನು ನಿರ್ಧರಿಸುವ ಹೊಣೆಯನ್ನೂ ಬೇರೆ ಯಾರೋ ನಿರ್ವಹಿಸುವ ಸಾಧ್ಯತೆ ಇರುತ್ತದೆ. ಗಣಕದಲ್ಲಿ ಕನ್ನಡವನ್ನು ಅಳವಡಿಸುವ ಮಾತನ್ನೇ ತೆಗೆದುಕೊಳ್ಳೋಣ. 2001ರಲ್ಲಿ ಮೈಕ್ರೋಸಾಫ್ಟ್ ಸಂಸ್ಥೆಯು ಬಳಕೆಗೆ ತಂದ ವಿಂಡೋಸ್ ಎಕ್ಸ್‌ಪಿ ಎಂಬ ತಂತ್ರಾಂಶದಲ್ಲಿ ಕನ್ನಡದ ಅಕ್ಷರಗಳಿಗೆ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಅದನ್ನು ಪಡೆಯಲು ಬೇಕಾದ ಭಾಷಿಕ ಮಾಹಿತಿಯೆಲ್ಲವೂ ಅಮೆರಿಕದಲ್ಲೇ ಸಿದ್ಧವಾಗಿದೆ. ಕನ್ನಡಿಗರ ಅವಶ್ಯಕತೆಗಳನ್ನು ಕೇಳುವ ವ್ಯವಧಾನವೂ ಆ ಸಂಸ್ಥೆಗೆ ಇಲ್ಲ. ತಾನು ರೂಪಿಸುವ ಮಾದರಿಯ ಕನ್ನಡವನ್ನು ಬಳಸಲು ಅದು ನಿರ್ದೇಶನ ನೀಡುತ್ತದೆ. ಇದೊಂದು ನಿದರ್ಶನ. ಹೀಗೆ ಜಾಗತೀಕರಣದಿಂದಾಗಿ ಕನ್ನಡ ಹಲವು ಇಕ್ಕಟ್ಟುಗಳನ್ನು ತನಗೇ ಗೊತ್ತಿಲ್ಲದಂತೆ ಎದುರಿಸಬೇಕಾಗುತ್ತದೆ.

ಪ್ರಮಾಣೀಕರಣ

ಭಾಷೆಯಲ್ಲಿ ನಡೆಯುವ ಬದಲಾವಣೆಗಳನ್ನು ಮುಖ್ಯವಾಗಿ ಎರಡು ರೀತಿಗಳಲ್ಲಿ ವಿಂಗಡಿಸಬಹುದು. ಕೆಲವು ಬದಲಾವಣೆಗಳ ಮೇಲೆ ಆ ಭಾಷೆಯನ್ನಾಡುವ ಜನರ ನಿಯಂತ್ರಣವೇನೂ ಇರುವುದಿಲ್ಲ. ಅವು ತಂತಾನೇ ಸಂಭವಿಸುತ್ತವೆ. ಭಾಷಿಕರು ಆ ಬದಲಾವಣೆಗಳನ್ನು ತಮ್ಮ ಭಾಷಾ ಬಳಕೆಯಲ್ಲಿ ಅಳವಡಿಸಿಕೊಳ್ಳುತ್ತಿರುತ್ತಾರೆ. ಮತ್ತೆ ಕೆಲವು ಬದಲಾವಣೆಗಳು ಭಾಷಿಕರ ಇಚ್ಚೆಗೆ ತಕ್ಕಂತೆ ಅವರ ಗಮನಕ್ಕೆ ಬರುವಂತೆ ನಡೆಯುತ್ತಿರುತ್ತವೆ. ಪ್ರಮಾಣೀಕರಣವೆಂಬುದು ಎರಡನೆಯ ಬಗೆಗೆ ಸೇರಿದ ಬದಲಾವಣೆ.

ಪ್ರಮಾಣೀಕರಣ ಎಂದರೇನು? ನಮಗೆಲ್ಲ ತಿಳಿದಿರುವಂತೆ ಯಾವುದೇ ಭಾಷೆಯಲ್ಲಿ ಹಲವಾರು ಪ್ರಭೇದಗಳಿರುತ್ತವೆ. ಈ ಪ್ರಭೇದಗಳು ಪ್ರಾದೇಶಿಕವಾಗಿರುತ್ತವೆ; ಸಾಮಾಜಿಕ ವಾಗಿರುತ್ತವೆ. ಭಾಷೆಯನ್ನು ಆಡುವ ಜನರ ನೆಲಸಿರುವ ಭೂ ಪ್ರದೇಶದ ವಿಸ್ತಾರ ಮತ್ತು ಚಾರಿತ್ರಿಕವಾದ ಹಲವು ಕಾರಣಗಳಿಂದಾಗಿ ಭಾಷೆಯ ಪ್ರಾದೇಶಿಕ ಪ್ರಭೇದಗಳು ಉಂಟಾಗಿರುತ್ತವೆ. ಕನ್ನಡವನ್ನೇ ಗಮನಿಸಿ. ನೀವು ನಿಮ್ಮ ಪ್ರದೇಶದಲ್ಲಿ ಬಳಸುವ ಕನ್ನಡಕ್ಕೂ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಬಳಸುವ ಕನ್ನಡಕ್ಕೂ ಹಲವಾರು

ವ್ಯತ್ಯಾಸಗಳಿರುತ್ತವೆ. ಬೀದರಿನಲ್ಲಿ ಬಳಸುವ ಕನ್ನಡ ಮಂಗಳೂರಿನಲ್ಲಿ ಬಳಸುವ ಕನ್ನಡ, ಕೋಲಾರದಲ್ಲಿ ಬಳಸುವ ಕನ್ನಡ, ಬೆಳಗಾಂನಲ್ಲಿ ಬಳಸುವ ಕನ್ನಡ, ನಂಜನಗೂಡಿನಲ್ಲಿ ಬಳಸುವ ಕನ್ನಡ ಇವೆಲ್ಲವೂ ಹಲವಾರು ವಿಶಿಷ್ಟ ಲಕ್ಷಣಗಳನ್ನು ಹೊಂದಿರುತ್ತವೆ. ಹೀಗೆಯೇ ಸಾಮಾಜಿಕ ಪ್ರಭೇದಗಳೂ ಕೂಡ. ನಮ್ಮ ಸಮಾಜದ ರಚನೆಯಲ್ಲಿ ಇರುವ ಜಾತಿ ಪದ್ಧತಿಗಳಿಂದಾಗಿ ಎಷ್ಟೋ ಪ್ರದೇಶಗಳಲ್ಲಿ ಒಂದೊಂದು ಜಾತಿಯ ಜನರು ಬಳಸುವ ಕನ್ನಡ ಇತರ ಜಾತಿಯ ಜನರು ಬಳಸುವ ಕನ್ನಡಕ್ಕಿಂತ ಬೇರೆಯೇ ಆಗಿರುವುದು ನಿಮ್ಮ ಅನುಭವಕ್ಕೂ ಬಂದಿರಬಹುದು. ಇಲ್ಲದಿದ್ದರೆ ಎಚ್ಚರದಿಂದ ಗಮನಿಸಿ ನೋಡಿ ವ್ಯತ್ಯಾಸಗಳು ಗೋಚರವಾಗುತ್ತವೆ. ಈ ವ್ಯತ್ಯಾಸಗಳು ಬಹುಮಟ್ಟಿಗೆ ಭಾಷಿಕರಿಗೆ ತಿಳಿದಿರುತ್ತವೆ. ಹಲವು ಸಂದರ್ಭಗಳಲ್ಲಿ ವ್ಯಕ್ತಿಯು ಬಳಸುವ ಕನ್ನಡದ ಸ್ವರೂಪವನ್ನು ಗಮನಿಸಿ ಆ ವ್ಯಕ್ತಿ ಯಾವ ಪ್ರದೇಶದವರು ಅಥವಾ ಯಾವ ಜಾತಿಗೆ ಸೇರಿರಬಹುದು ಎಂಬುದನ್ನು ಊಹಿಸುವುದು ಸಾಧ್ಯವಿದೆ. ಈ ಊಹೆ ಬಹಳ ಸಂದರ್ಭಗಳಲ್ಲಿ ಸರಿಯಾಗಿಯೇ ಇರುತ್ತದೆ.

ಭಾಷೆಯಲ್ಲಿ ಪ್ರಭೇದಗಳಿರುವುದು ಸಹಜವಾದರೂ ಆ ಭಾಷೆಯನ್ನು ಆಡಳಿತ, ನ್ಯಾಯಾಂಗ, ವಾಣಿಜ್ಯ, ಶಿಕ್ಷಣ ಮುಂತಾದ ಸಾರ್ವಜನಿಕ ವಲಯಗಳಲ್ಲಿ ಬಳಸ ತೊಡಗುವುದಾದರೆ ಈ ಪ್ರಭೇದಗಳಲ್ಲಿ ಯಾವುದನ್ನು ಆಯಾ ವಲಯದಲ್ಲಿ ಬಳಸಬೇಕು ಎಂಬ ಬಗೆಗೆ ಗೊಂದಲಗಳು ಉಂಟಾಗುತ್ತವೆ. ಈ ಗೊಂದಲ ನಿವಾರಣೆ ಅತ್ಯಗತ್ಯ. ಯಾವುದಾದರೊಂದು ಪ್ರಭೇದವನ್ನು ಇವುಗಳಲ್ಲಿ ಆಯ್ದು ಅಥವಾ ಅಂಥದೊಂದು ಪ್ರಭೇದವನ್ನು ರೂಪಿಸಿ ಅದನ್ನು ಎಲ್ಲ ವಲಯುಗಳಲ್ಲೂ ಬಳಸುವ ಕೆಲಸ ನಡೆಯಬೇಕಾಗುತ್ತದೆ.

ಹೀಗೆ ಭಾಷೆಯ ಒಂದು ಪ್ರಭೇದವನ್ನು ಸಾರ್ವಜನಿಕ ವಲಯಗಳಲ್ಲಿ ಅಧಿಕೃತವಾಗಿ ಬಳಸುವುದನ್ನು ಒಂದು ನಿಯಂತ್ರಿತ ಕೆಲಸವನ್ನಾಗಿ ಮಾಡಬೇಕು. ಅಂದರೆ ಭಾಷೆಯ ಬೆಳವಣಿಗೆಯಲ್ಲಿ ಅಸಕ್ತವಾಗಿರುವ ಅಥವಾ ಅಂಥ ಜವಾಬ್ದಾರಿಯನ್ನು ಹೊತ್ತ ಸಂಸ್ಥೆ ಅಥವಾ ಸರಕಾರ ಈ ಆಯ್ಕೆಯ ಕೆಲಸವನ್ನು ಮಾಡುತ್ತದೆ. ಇದು ಭಾಷಾ ಯೋಜನೆಯ ಭಾಗ. ಭಾಷೆ ಯೋಜನೆ ಎಂದರೆ ಭಾಷೆಯ ಬೆಳವಣಿಗೆಗೆ ಅತ್ಯವಶ್ಯಕವಾದ ಬದಲಾವಣೆಗಳಿಗೆ ಬಾಷೆಯನ್ನು ಸಿದ್ಧಪಡಿಸುವುದು. ಈ ಭಾಷಾ ಯೋಜನೆಯಲ್ಲಿ ಭಾಷಾ ಪ್ರಭೇದಗಳಲ್ಲಿ ನಿರ್ದಿಷ್ಟ ಪ್ರಭೇದವನ್ನು ಆಯ್ಕೆ ಮಾಡಿ ಅದನ್ನು ಎಲ್ಲ ವಲಯುಗಳಿಗೆ ತಕ್ಕಂತೆ ರೂಪಿಸುವ ಕೆಲಸವೂ ಸೇರುತ್ತದೆ. ಈ ಆಯ್ಕೆ ಮತ್ತು ನಿರ್ಮಾಣವನ್ನು ಪ್ರಮಾಣೀಕರಣ ಎನ್ನುತ್ತಾರೆ.

ಕನ್ನಡದ ಮಟ್ಟಿಗೆ ಈ ಪ್ರಮಾಣೀಕರಣ ಎನ್ನುವುದು ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪ್ರಕ್ರಿಯೆ. ಕವಿರಾಜಮಾರ್ಗ ಎಂಬ ಒಂಬತ್ತನೆಯ ಶತಮಾನದ ಕೃತಿಯಲ್ಲೇ ಕನ್ನಡದಲ್ಲಿ ಇರುವ ಹಲವಾರು ಪ್ರಭೇದಗಳ ಬಗೆಗೆ ವಿವರಣೆ ಇದೆ. ಈ ಪ್ರಭೇದಗಳನ್ನು ಕುರಿತು ವಿವರಣೆ ನೀಡುವುದು ಸಾವಿರ ನಾಲಿಗೆಗಳನ್ನು ಹೊಂದಿರುವ ವಾಸುಕಿಗೂ ಬೇಸರ ತರಿಸುವ ಕೆಲಸವೆನ್ನಲಾಗಿದೆ. ಇದರಲ್ಲಿ ಉತ್ಪ್ರೇಕ್ಷೆ

ಇದೆ. ಆದರೆ ಕನ್ನಡಗಳ ಪ್ರಭೇದಗಳ ಬಗೆಗೆ ಕೃತಿಕಾರನಿಗೆ ಅರಿವಿತ್ತು. ಈ ಕನ್ನಡದಲ್ಲಿ ಒಂದು ನಿರ್ದಿಷ್ಟ ಭೂಪ್ರದೇಶದ ಒಳಗೆ ಆಡುವ ಕನ್ನಡವನ್ನು ತಿರುಳುಗನ್ನಡದ ಪ್ರದೇಶವೆಂದು ಆ ಕೃತಿಯಲ್ಲಿ ಗುರುತಿಸಲಾಗಿದೆ. ಕೊಪಣ(ಇಂದಿನ ಕೊಪ್ಪಳ) ಒಂಕುಂದ (ಇಂದಿನ ಬೆಳಗಾಂ ಜಿಲ್ಲೆಯಲ್ಲಿದ್ದು ಈಗ ಅಣೆಕಟ್ಟಿನಲ್ಲಿ ಮುಳುಗಡೆಯಾಗಿದೆ) ಈ ನಾಲ್ಕು ಗಡಿಗಳ ನಡುವೆ ಇರುವ ಕನ್ನಡವೇ ಆ ಕೃತಿಕಾರನ ದೃಷ್ಟಿಯಲ್ಲಿ ತಿರುಳುಗನ್ನಡ. ಅಂದರೆ ಇಂದಿನ ಪರಿಭಾಷೆಯಲ್ಲಿ ಪ್ರಮಾಣೀಕರಣಗೊಂಡ ಕನ್ನಡ. ಮುಂದೆಯೂ ಕನ್ನಡದ ಇಂಥ ಪರಿಷ್ಕೃತ ರೂಪಗಳ ನಿರ್ಮಾಣ ಕರ್ನಾಟಕದಲ್ಲಿ ನಡೆಯುತ್ತಾ ಬಂದಿದೆ. ಇರಲಿ, ಈಗ ಏಕೀಕರಣದ ಅನಂತರ ಕಳೆದ ಐವತ್ತು ವರ್ಷಗಳಲ್ಲಿ ಈ ಪ್ರಮಾಣೀಕರಣ ಪ್ರಕ್ರಿಯೆ ವ್ಯಾಪಕ ಪ್ರಮಾಣದಲ್ಲಿ ನಡೆಯುತ್ತಿದೆ.

ಪ್ರಮಾಣೀಕರಣಕ್ಕೆ ಆ ಹಲವು ನೆಲೆಗಳಿವೆ. ಕನ್ನಡಕ್ಕೆ ಸಂಬಂಧಿಸಿ ಇರುವ ಅಂಥ ಕೆಲವು ನೆಲೆಗಳನ್ನು ಮೊದಲಿಗೆ ಪರಿಶೀಲಿಸೋಣ. 1) ಬರವಣಿಗೆಗೆ ಸಂಬಂಧಿಸಿದಂತೆ: ವಿವಿಧ ತಂತ್ರ ಜ್ಞಾನದ ಬೆಳವಣಿಗೆಗಳಿಂದಾಗಿ ಕನ್ನಡದ ಲಿಖಿತ ರೂಪಕ್ಕೆ ಸಂಬಂಧಿಸಿದಂತೆ ಹಲವಾರು ಬದಲಾವಣೆಗಳು ತೀವ್ರ ಗತಿಯಲ್ಲಿ ನಡೆಯುವಂತೆ ಯೋಜಿಸುವುದು ಅನಿವಾರ್ಯವಾಗಿದೆ. ಕೈ ಬರೆಹದಲ್ಲಿ ಬರೆಯುತ್ತಿದ್ದ ಹಂತದಿಂದ ಬೆರಳಚ್ಚು ಮಾಡಲು ತೊಡಗಿದಾಗ ಬೆರಳಚ್ಚು ಯಂತ್ರಕ್ಕೆ ಅನುವಾಗುವಂತೆ ಕನ್ನಡದ ಲಿಖಿತ ಮಾದರಿಗಳನ್ನು ರೂಪಿಸಬೇಕಾಯಿತು. ಈಗ ಗಣಕಗಳಲ್ಲಿ ಕನ್ನಡವನ್ನು ಬಳಸಬೇಕಾಗಿರುವುದರಿಂದ ಕನ್ನಡದ ಲಿಖಿತ ರೂಪವನ್ನು ಗಣಕಗಳಲ್ಲಿ ಒಂದೇ ರೀತಿಯಲ್ಲಿ ಮೂಡಿಸಲು ಅನುಕೂಲವಾಗುವಂತೆ ತಂತ್ರಾಂಶವನ್ನು ರೂಪಿಸಬೇಕಾಗುತ್ತದೆ. ಇಲ್ಲದಿದ್ದರೆ ಬಳಕೆಯಲ್ಲಿ ಹಲವಾರು ತೊಡಕುಗಳು ಉಂಟಾಗುತ್ತವೆ. ಉದಾಹರಣೆಗೆ ಒಂದು ತಂತ್ರಾಂಶದಲ್ಲಿ ರೂಪಿಸಿದ ದಾಖಲೆಯೊಂದನ್ನು ಇನ್ನೊಂದು ತಂತ್ರಾಂಶದ ಮೂಲಕ ಓದುವುದು ಕಷ್ಟವಾಗುತ್ತದೆ. ಅಂದರೆ ಗಣಕದಲ್ಲಿ ಕನ್ನಡವನ್ನು ಅಳವಡಿಸುವುದೇ ಅಸಾಧ್ಯವಾಗುತ್ತದೆ. ಕರ್ನಾಟಕ ಸರಕಾರ ಇದನ್ನು ಮನಗಂಡು ಕಳೆದೆರಡು ವರ್ಷಗಳಿಂದ ಒಂದು ಅಧಿಕೃತ ತಂತ್ರಾಂಶವನ್ನು ರೂಪಿಸಿ ಬಳಕೆ ಅವಕಾಶ ಮಾಡಿಕೊಟ್ಟಿದೆ. ನುಡಿ ಎಂಬ ಹೆಸರಿನ ಈ ತಂತ್ರಾಂಶ ಈಗ ಸರಕಾರದ ವಿವಿಧ ಕಚೇರಿಗಳಲ್ಲಿ ಬಳಕೆಯಾಗುತ್ತಿದೆ. ಖಾಸಗಿಯವರಲ್ಲೂ ಉಪಲಬ್ಧ.

ತಂತ್ರಾಂಶವನ್ನು ಏಕೆ ಪ್ರಮಾಣೀಕರಿಸಬೇಕು? ಈಗಾಗಲೇ ಹೇಳಿದಂತೆ ಒಂದು ಕಡೆಯಲ್ಲಿ ರೂಪುಗೊಂಡ ದಾಖಲೆ ಇನ್ನೊಂದು ಕಡೆಯಲ್ಲಿ ಬಳಕೆಯಾಗಬೇಕಾದರೆ ಸಮಾನ ತಂತ್ರಾಂಶ ಇರುವುದು ಅತ್ಯವಶ್ಯ. ಸರಕಾರದ ಒಂದು ಅಧಿಕೃತ ದಾಖಲೆ ನುಡಿ ತಂತ್ರಾಂಶವನ್ನು ಬಳಸಿ ರೂಪುಗೊಂಡಿದೆ ಎಂದುಕೊಳ್ಳಿ. ಅದನ್ನು ಎಲ್ಲಿ ಬೇಕಾದರೂ ಯಾರಾದರೂ ಓದುವುದು ಸಾಧ್ಯವಾಗಬೇಕಾದರೆ ಹಾಗೆ ಓದಬಹುಸುವವರು ಕೂಡ ನುಡಿ ತಂತ್ರಾಂಶವನ್ನು ಹೊಂದಿರಬೇಕು. ಇಲ್ಲದಿದ್ದರೆ ಗಣಕದಲ್ಲಿ ಈ ದಾಖಲೆಯನ್ನು ಓದುವುದು ಸಾಧ್ಯವಾಗುವುದಿಲ್ಲ. ಅಂದರೆ ದಾಖಲೆಯನ್ನು ಗಣಕಕ್ಕೆ ಹಾಕಿದ್ದೂ ವ್ಯರ್ಥವೇ ಸರಿ. ಕಳೆದ ಒಂದು ದಶಕದಿಂದಲೂ ಇಂಥ ಗೊಂದಲದ ಪರಿಸ್ಥಿತಿ ಕನ್ನಡದ ಸಂದರ್ಭದಲ್ಲಿ

ಇದ್ದಿತು. ಈಗಲೂ ಇದೆ, ಮುಂದಿನ ದಿನಗಳಲ್ಲಿ ಪ್ರಮಾಣೀಕರಣಗೊಂಡ ತಂತ್ರಾಂಶವನ್ನು ಬಳಸುವ ಮೂಲಕ ಈ ಸಮಸ್ಯೆ ಬಗೆಹರಿಯಬಹುದೆಂದು ತೋರುತ್ತದೆ.

ಲಿಖಿತ ರೂಪದ ಪ್ರಮಾಣೀಕರಣ ಲಿಪಿ ಚಿಹ್ನೆಗಳ ವಿಷಯದಲ್ಲೂ ಮುಖ್ಯ. ಅದರಲ್ಲೂ ದಿನವೂ ನೂರಾರು ಹೊಸಪದಗಳನ್ನು ಕನ್ನಡದ ಲಿಪಿಯಲ್ಲಿ ಬರೆಯಬೇಕಾಗಿ ಬಂದಾಗ ಯಾವುದು ಪ್ರಮಾಣ ರೂಪ ಅಥವಾ ಪ್ರಮಾಣ ರೂಪವನ್ನು ಗೊತ್ತು ಮಾಡಿಕೊಳ್ಳುವುದು ಹೇಗೆ ಎಂಬ ಪ್ರಶ್ನೆಗಳು ಎದುರಾಗುತ್ತವೆ. ಉದಾ.ಗೆ ಅಮೆರಿಕದ ಅಧ್ಯಕ್ಷರ ಹೆಸರನ್ನು ಬುಶ್ ಎಂದು ಬರೆಯಬೇಕೋ ಅಥವಾ ಬುಷ್ ಎಂದು ಬರೆಯಬೇಕೋ? ಇದು ಸಾಮಾನ್ಯ ಸಮಸ್ಯೆ ಎಂದು ನಿಮಗೆ ಅನ್ನಿಸಬಹುದು. ಸುಮ್ಮನೆ ನೀವು ನಿಮ್ಮ ಪಟ್ಟಣದ ಅಥವಾ ಊರಿನ ಅಂಗಡಿ ಬೀದಿಯಲ್ಲಿ ನಡೆದಾಡಿ. ಅಲ್ಲಿ ಬೇರೆಬೇರೆ ಅಂಗಡಿಗಳಿಗೆ ಹಾಕಿರುವ ನಾಮಫಲಕಗಳ ಕಾಗುಣಿತವನ್ನು ಓದಿ. ಎಷ್ಟೊಂದು ಗೊಂದಲಗಳಿವೆ ಎನ್ನುವುದು ಗೊತ್ತಾಗುತ್ತದೆ. ಅಂದರೆ ನಾವು ನಮ್ಮ ಬರೆವಣಿಗೆಯ ಲಿಪಿ ರೂಪವನ್ನು ಇನ್ನೂ ಸಾಕಷ್ಟು ಪ್ರಮಾಣೀಕರಿಸಬೇಕಾಗಿದೆ. ಒಂದೇ ಪದವನ್ನು ಬೇರೆಬೇರೆ ಬಗೆಯಲ್ಲಿ ಬರೆಯುವುದರಿಂದ ತಪ್ಪು ಕಾಗುಣಿತ ಬಳಸಿ ಬರೆಯುವುದರಿಂದ ಸಾರ್ವಜನಿಕ ವಲಯದಲ್ಲಿ ಭಾಷೆಯ ಬಳಕೆಗೆ ಹಲವು ಬಗೆಯ ಅಡೆತಡೆಗಳು ಉಂಟಾಗುತ್ತವೆ. ಶಿಕ್ಷಣ ಕ್ಷೇತ್ರದಲ್ಲಂತೂ ಇದರ ಪರಿಣಾಮ ಅಗಾಧವಾದುದು. ಆದ್ದರಿಂದ ಕನ್ನಡದ ಲಿಖಿತ ರೂಪದಲ್ಲಿ ಲಿಪಿಚಿಹ್ನೆಗಳ ವ್ಯವಸ್ಥಿತ ಬಳಕೆಯಲ್ಲಿ ಪ್ರಮಾಣೀಕರಣ ಹೆಚ್ಚಾಗಬೇಕು.

ಪದಕೋಶದ ನೆಲೆಯಲ್ಲಿ ಪ್ರಮಾಣೀಕರಣವನ್ನು ಕುರಿತು ನಾವೀಗ ಗಮನಿಸೋಣ. ಇದರಲ್ಲಿ ಎರಡು ಸ್ತರಗಳಿವೆ. ಒಂದು: ಕನ್ನಡ ವಿವಿಧ ಪ್ರಭೇದಗಳಲ್ಲಿ ಇರುವ ಸಮಾನಾರ್ಥಕ ಪದಗಳಲ್ಲಿ ಯಾವುದನ್ನು ಅಧಿಕೃತ ರೂಪ ಎಂದು ಪರಿಗಣಿಸುವುದು? ಈ ಪ್ರಭೇಧಗಳು ಉಚ್ಚಾರಣೆಯ ನೆಲೆಯಲ್ಲಿ ಇರಬಹುದು. ಉದಾ. ಮನೆ, ಮನಿ; ತಲೆ,ತಲಿ; ತಲ ಇವುಗಳಲ್ಲಿ ಯಾವುದನ್ನು ಪ್ರಮಾಣ ರೂಪವೆಂದು ಪರಿಗಣಿಸಬೇಕು. ಪ್ರಭೇದಗಳು ಭಿನ್ನ ರೂಪಗಳನ್ನು ಹೊಂದಿರಬಹುದು. ಉದಾ. ಬತ್ತ, ನೆಲ್ಲು, ಕಳವಿ. ಇವು ಮೂರೂ ಪದಗಳು ಬೇರೆಬೇರೆ ಪ್ರದೇಶಗಳಲ್ಲಿ ಬಳಕೆಯಾಗುತ್ತಿದ್ದರೂ ಒಂದೇ ವಸ್ತುವನ್ನು ಸೂಚಿಸುತ್ತವೆ. ಹೀಗಿರುವಾಗ ಯಾವ ಪದವನ್ನು ಪ್ರಮಾಣ ರೂಪವೆಂದು ಪರಿಗಣಿಸುವುದು. ಹೀಗೆ ಪದಕೋಶದಲ್ಲಿ ಇರುವ ಅನೇಕ ರೂಪಗಳಲ್ಲಿ ಕೆಲವನ್ನು ಆಯ್ದು ಅವುಗಳನ್ನು ಅಧಿಕೃತಗೊಳಿಸುವುದು ಪ್ರಮಾಣೀಕರಣ ಪ್ರಕ್ರಿಯೆಯಲ್ಲಿ ಒಂದು ಅನಿವಾರ್ಯ ಹಂತ.

ಕನ್ನಡದಲ್ಲಿ ಹೊಸಪದಗಳ ಅವಶ್ಯಕತೆಯೂ ಅಗಾಧ ಪ್ರಮಾಣದಲ್ಲಿ ಇದೆ. ಏಕೆಂದರೆ ಹೊಸಹೊಸ ಅನುಭವ ವಲಯವನ್ನು ಕುರಿತು ಕನ್ನಡದಲ್ಲಿ ಮೊದಲ ಬಾರಿಗೆ ಹೇಳುವ ಅವಕಾಶಗಳು ಈಗ ಹೆಚ್ಚು ಹೆಚ್ಚು ದೊರಕುತ್ತಿವೆ. ವೈಜ್ಞಾನಿಕ ಕ್ಷೇತ್ರದಲ್ಲಿ ಇದರ ಪ್ರಮಾಣ ಹೆಚ್ಚು. ಅಲ್ಲದೆ ವ್ಯಾವಹಾರಿಕ ವಲಯದಲ್ಲೂ ಇದು ಸಾಕಷ್ಟು ಕಂಡು ಬರುತ್ತದೆ. ಪಾರಿಭಾಷಿಕ ಎನ್ನಬಹುದಾದ ಪದಗಳು ಹೆಚ್ಚು ಹೆಚ್ಚಾಗಿ

ಕನ್ನಡಕ್ಕೆ ಬೇಕಾಗಿವೆ. ಕಳೆದ ಮೂವತ್ತು ನಲವತ್ತು ವರ್ಷಗಳಿಂದ ಇಂಥ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕನ್ನಡವು ಅನುಸರಿಸುತ್ತಿರುವ ದಾರಿಯೊಂದಿದೆ. ಅದೆಂದರೆ ಹೊಸ ಪದಗಳ ಅವಶ್ಯಕತೆ ಬಿದ್ದಾಗಲೆಲ್ಲಾ ಸಂಸ್ಕೃತ ಪದಕೋಶದ ಮೊರೆಹೋಗುವುದು. ಕಳೆದ ಹತ್ತು ವರ್ಷದಲ್ಲೇ ಬಳಕೆ ಬಂದಿರುವ ಈ ಮುಂದಿನ ಪದಗಳನ್ನು ಗಮನಿಸಿ. ಗಣಕ, ತಂತ್ರಾಂಶ, ಕಾರ್ಯವಾಹಿ, ಅಂತರ್ಜಾಲ, ಮುದ್ರಕ, ದೂರಸಂಪರ್ಕ, ಜೈವಿಕ ತಂತ್ರಜ್ಞಾನ, ವಂಶವಾಹಿ, ಅಂಗಾಂಗಕೃಷಿ, ಹೀಗೆ ಇನ್ನೂ ಹತ್ತಾರು ಪದಗಳು. ಇವೆಲ್ಲವೂ ಸಂಸ್ಕೃತ ಪದಕೋಶದಿಂದ ಬಂದಿದೆ. ಕನ್ನಡ ಈ ಸುಲಭ ಮಾರ್ಗವನ್ನು ಅನುಸರಿಸುವಾಗಲೂ ಸಂಸ್ಕೃತದಲ್ಲಿ ಬಳಕೆಯಲ್ಲಿದ್ದ ಅಥವಾ ಇರುವ ಪದಗಳನ್ನು ತನ್ನ ಪದಕೋಶಕ್ಕೆ ಪಡೆದುಕೊಳ್ಳುತ್ತಿಲ್ಲ. ಆ ಭಾಷೆಯ ಪದಗಳನ್ನು ಬಳಸಿ ತನಗೆ ಅವಶ್ಯವಾದ ಹೊಸಪದಗಳನ್ನು ರಚಿಸಿಕೊಳ್ಳುತ್ತಿದೆ ಎನ್ನಬಹುದು. ಈ ಅಂಶ ಗಮನಾರ್ಹವಾದುದು. ಆದರು ಕನ್ನಡ ಹೊಸಪದಗಳ ಅವಶ್ಯಕತೆಗಳಿಗೆ ಮತ್ತು ಪ್ರಮಾಣೀಕೃತ ರೂಪಗಳಿಗೆ ಸಂಸ್ಕೃತ ಪದಕೋಶವನ್ನು ಆಶ್ರಯಿಸುತ್ತಿರುವ ಬಗ್ಗೆ ಕೆಲವು ವಲಯಗಳಲ್ಲಿ ಸಹಮತಿ ಇಲ್ಲ. ಕನ್ನಡ ಇದರಿಂದ ತನ್ನಲ್ಲೇ ಇರುವ ಅಪಾರ ಪ್ರಮಾಣದ ದೇಶೀಯ ಪದಗಳನ್ನು ಕಳೆದುಕೊಳ್ಳುತ್ತಿದೆ ಮತ್ತು ಹೊಸಪದಗಳ ರಚನೆಗೆ ಕನ್ನಡದಲ್ಲಿ ಇರುವ ಅವಕಾಶಗಳಿಂದ ದೂರವಾಗುತ್ತಿದೆ ಎನ್ನುವ ಅಭಿಪ್ರಾಯವನ್ನು ಮಂಡಿಸಲಾಗುತ್ತಿದೆ.

ಇದಲ್ಲದೆ ಇನ್ನೂ ಒಂದು ಅಂಶವನ್ನು ನಾವು ಮನಗಾಣಬೇಕಾಗಿದೆ. ಕನ್ನಡದ ಪ್ರಮಾಣೀಕರಣ ಪ್ರಕ್ರಿಯೆಯಲ್ಲಿ ಬಹುಮಟ್ಟಿಗೆ ಬೆಂಗಳೂರು ಮೈಸೂರು ಭಾಗದ ಮೇಲುವರ್ಣದ ಜನರಾಡುವ ಭಾಷೆಯ ಅಂಶಗಳು ಹೆಚ್ಚಾಗಿ ಅವಕಾಶ ಪಡೆದುಕೊಳ್ಳುತ್ತಿರುವುದನ್ನು ಗಮನಿಸಿ. ಬೇರೆ ಪ್ರದೇಶದ ಮತ್ತು ಬೇರೆ ಬೇರೆ ಪ್ರಭೇದಗಳನ್ನಾಡುವ ಜನ ಸಮುದಾಯಗಳು ತಮ್ಮ ನುಡಿ ಪ್ರಭೇದ ಅವಗಣನೆಗೆ ಒಳಗಾಗುತ್ತಿದೆ ಎನ್ನುವ ನಿಲುವನ್ನು ವ್ಯಕ್ತಪಡಿಸುತ್ತಿದ್ದಾರೆ. ಕನ್ನಡ ಆಡುವ ಸಮುದಾಯದಲ್ಲಿ ಇರುವ ಸಾಮಾಜಿಕ ಶ್ರೇಣೀಕರಣದ ಪ್ರಭಾವಗಳು ಈ ಬಗೆಯ ಅನಿಸಿಕೆಗಳಿಗೆ ಕಾರಣವಾಗಿದೆ. ಇದರಿಂದಲೂ ಕನ್ನಡದ ಪ್ರಮಾಣೀಕರಣ ನಿರೀಕ್ಷಿತ ವೇಗದಲ್ಲಿ ನಡೆಯುವುದು ಸಾಧ್ಯವಾಗುತ್ತಿಲ್ಲ.

ಆಧುನೀಕರಣ

ಆಧುನೀಕರಣ ಎಂದರೇನು? ಈ ಪದದಲ್ಲೇ ಅದರ ಅರ್ಥದ ಸೂಚನೆಗಳಿವೆ. ಹೊಸದಾಗುವುದು; ಹೊಸದಂತೆ ತೋರುವುದು; ಹೊಸ ಪರಿಸ್ಥಿತಿಗೆ ಅನುಗುಣವಾಗಿ ಬದಲಾಗುವುದು. ಈ ಎಲ್ಲ ಅರ್ಥಗಳನ್ನೂ ನಾವಿಲ್ಲಿ ಗಮನಿಸಬಹುದು. ಭಾಷೆಯ ಬಳಕೆಯಲ್ಲಿ ಸದಾಕಾಲವೂ ಹೊಸ ಹೊಸ ಸವಾಲುಗಳು ಎದುರಾಗುತ್ತಿರುತ್ತವೆ. ಸಮಾಜದಲ್ಲಿ ಆಗುವ ಬದಲಾವಣೆಗಳು, ಮನುಷ್ಯ ಇತರ ಜ್ಞಾನಶಾಖೆಗಳಲ್ಲಿ ಮಾಡುವ ಸಾಧನೆಗಳು ಭಾಷೆಯ ಬಳಕೆಯನ್ನೂ ಪ್ರಭಾವಿಸುತ್ತಿರುತ್ತವೆ. ಅದಕ್ಕನುಗುಣವಾಗಿ ಭಾಷೆ ತನ್ನ ಸ್ವರೂಪದಲ್ಲಿ ಬದಲಾವಣೆಗಳನ್ನು, ಹೊಂದಾಣಿಕೆಗಳನ್ನು

ಮಾಡಿಕೊಳ್ಳಬೇಕಾಗುತ್ತದೆ. ಈ ಪರಿವರ್ತನೆಯನ್ನು ಆಧುನೀಕರಣ ಎನ್ನುತ್ತೇವೆ. ಈ ಮೊದಲು ನಾವು ಪ್ರಮಾಣೀಕರಣವನ್ನು ಕುರಿತು ಯೋಚಿಸುವಾಗ ಅದೊಂದು ಯೋಜಿತ ಪ್ರಕ್ರಿಯೆ ಎನ್ನುವುದನ್ನು ಗಮನಿಸಿದ್ದೇವೆ. ಅಂದರೆ ಯಾವ ದಿಕ್ಕಿನಲ್ಲಿ ಭಾಷೆಯು ಪ್ರಮಾಣೀಕರಣವಾಗಬೇಕು ಎಂಬುದನ್ನು ಪೂರ್ವಭಾವಿಯಾಗಿ ಯೋಜಿಸಬೇಕು; ಹಾಗೆ ಯೋಜಿಸುವ ಮೂಲಕವೇ ನಿರೀಕ್ಷಿತ ಪರಿಣಾಮ ಸಾಧ್ಯ. ಆದರೆ ಆಧುನೀಕರಣ ಹೀಗೆ ಒಂದು ಯೋಜಿತ ಪ್ರಕ್ರಿಯೆಯಲ್ಲ. ಭಾಷೆಯನ್ನು ಬಳಸುವ ಸಂದರ್ಭಗಳಲ್ಲಿ ಆಧುನೀಕರಣ ಪ್ರಕ್ರಿಯೆ ತಂತಾನೇ ನಡೆಯುತ್ತಿರುತ್ತದೆ. ಅದರ ಸ್ವರೂಪವನ್ನು ನಾವು ಅಭ್ಯಾಸ ಮಾಡಬಹುದು ಅಷ್ಟೆ. ಈ ಪ್ರಕ್ರಿಯೆಯು ಹಲವು ನೆಲೆಗಳಲ್ಲಿ ಹಲವು ಸ್ವರೂಪಗಳಲ್ಲಿ ನಡೆಯುತ್ತಿರುತ್ತದೆ. ಅದರಲ್ಲಿ ಭಾಗಿಯಾಗುವವರಿಗೆ ತಾವು ಇಂಥದೊಂದು ಬದಲಾವಣೆಯಲ್ಲಿ ಭಾಗಿಗಳಾಗುತ್ತಿದ್ದೇವೆ ಎಂಬುದು ಗೊತ್ತಾಗುವುದಿಲ್ಲ. ಅವರ ಭಾಷಿಕ ವರ್ತನೆಗಳ ಮೂಲಕ ಆಧುನೀಕರಣವೆಂಬುದು ಭಾಷೆಯಲ್ಲಿ ಮೈತಳೆಯತೊಡಗುತ್ತದೆ.

ಕನ್ನಡದಲ್ಲಿ ಈ ಪ್ರಕ್ರಿಯೆ ಹೇಗೆ ನಡೆಯುತ್ತಿದೆ ಎಂಬುದನ್ನು ಈಗ ಪರಿಶೀಲಿಸೋಣ ಆಧುನೀಕರಣ ನಡೆಯುವ ಹಲವು ಹಂತಗಳಲ್ಲಿ ಧ್ವನಿಯ ನೆಲೆಯೂ ಒಂದಾಗಿದೆ. ಕನ್ನಡದಲ್ಲಿ ಹೊಸ ಪದಗಳನ್ನು ಅನ್ಯ ಭಾಷೆಯಿಂದ ಪಡೆದುಕೊಳ್ಳುವ ಪ್ರಕ್ರಿಯೆ ಅವ್ಯಾಹತವಾಗಿ ನಡೆಯುತ್ತಿರುವುದನ್ನು ನೀವು ಬಲ್ಲಿರಿ. ಅದಕ್ಕನುಗುಣವಾಗಿ ಇಂಗ್ಲಿಶಿನಿಂದ ನೂರಾರು ಪದಗಳನ್ನು ಪಡೆದು ಕನ್ನಡದಲ್ಲಿ ಬಳಸುತ್ತಿದ್ದೇವೆ. ಈ ಪದಗಳನ್ನು ಕನ್ನಡಿಗರು ಉಚ್ಚರಿಸುವಾಗ ಕನ್ನಡದ ಧ್ವನಿನಿಯಮಗಳಿಗೆ ಅನುಗುಣವಾಗಿ ಬದಲಾವಣೆ ಮಾಡಿಕೊಳ್ಳುವುದು ಸಾಮಾನ್ಯವಾಗಿ ಕಂಡುಬರುವ ಕ್ರಮ. ಆದರೂ ಕೆಲವು ಇಂಗ್ಲಿಶ್ ಪದಗಳನ್ನು ಉಚ್ಚರಿಸಲೆಂದು ಮತ್ತು ಅಂತಹವನ್ನು ಬರೆಯಲೆಂದು ಕೆಲವು ಧ್ವನಿಗಳನ್ನು ಮತ್ತು ಲಿಪಿ ಚಿಹ್ನೆಗಳನ್ನು ಕನ್ನಡ ತನ್ನಲ್ಲಿ ಹೊಸದಾಗಿ ಅಳವಡಿಸಿಕೊಳ್ಳುತ್ತಿದೆ. ಉದಾಹರಣೆಗೆ ಜೂ ಎಂಬ ಪದವನ್ನು ಬರೆದಿರುವ ಕ್ರಮವನ್ನು ನೋಡಿ, ಇದು ಕನ್ನಡದಲ್ಲಿ ಇದುವರೆಗೆ ಇಲ್ಲದಿದ್ದ ಬರೆಹದ ಚಿಹ್ನೆ, ಇದನ್ನು ಉಚ್ಚರಿಸುವ ರೀತಿಯನ್ನು ಗಮನಿಸಿದರೆ ಅಲ್ಲಿಯೂ ಕನ್ನಡಕ್ಕೆ ಅಪರಿಚಿತವಾಗಿದ್ದ ಉಚ್ಚಾರಣೆಯೊಂದು ಈಗ ಕನ್ನಡಿಗರ ಉಚ್ಚಾರಣೆಯ ಭಾಗವಾಗುತ್ತಿರುವುದು ಗೊತ್ತಾಗುತ್ತದೆ. ಇಂತಹ ಕೆಲವು ಧ್ವನಿಗಳು ಮತ್ತು ಲಿಪಿ ಚಿಹ್ನೆಗಳು ಕನ್ನಡಕ್ಕೆ ಈಗ ಸೇರ್ಪಡೆಯಾಗಿವೆ. ಇದು ಕನ್ನಡದಲ್ಲಿ ನಡೆಯುತ್ತಿರುವ ಆಧುನೀಕರಣದ ಒಂದು ನೆಲೆ.

ಹೀಗೆಯೇ ಪದಕೋಶದ ನೆಲೆಯಲ್ಲಿ ನೋಡೋಣ. ಹೊಸ ವಿಚಾರಗಳನ್ನು ಕನ್ನಡದಲ್ಲಿ ಹೇಳುವ ಸಂದರ್ಭದ ನಿಭಾವಣೆಗಾಗಿ ನೂರಾರು ಇಂಗ್ಲಿಶ್ ಪದಗಳನ್ನು ಪಡೆದುಕೊಳ್ಳುತ್ತಿರುವುದನ್ನು ಯಾರಾದರೂ ಗುರುತಿಸಬಹುದಾಗಿದೆ. ಇಲ್ಲಿ ಎರಡು ಮುಖ್ಯ ಅಂಶಗಳು ಪರಿಶೀಲನೆ ತಕ್ಕುವಾಗಿವೆ. 1) ಹೀಗೆ ಇಂಗ್ಲಿಶ್ ನಿಂದ ಪಡೆದುಕೊಳ್ಳುತ್ತಿರುವ ಪದಗಳು ಯಾವಾಗಲು ಕನ್ನಡದಲ್ಲಿ ಇಲ್ಲದ ಪದಗಳಿಗಾಗಿ ಬಂದವಾಗಿರುವುದಿಲ್ಲ. ಕನ್ನಡದಲ್ಲಿ ಸುವ್ಯವಸ್ಥಿತವಾದ ಬಳಕೆಯ ಪದವೊಂದು ಇರುವಾಗಲೂ ಬೇರೆ

ಕಾರಣಗಳಿಂದಾಗಿ ಇಂಗ್ಲಿಶ್ ಪದವೊಂದನ್ನು ಸ್ವೀಕರಿಸುವುದನ್ನು ಗುರುತಿಸಬಹುದಾಗಿದೆ. ಉದಾ. ಸಂಬಂಧ ಸೂಚಕ ಪದವಾಗಿ ಚಿಕ್ಕಪ್ಪ, ದೊಡ್ಡಪ್ಪ, ಮಾವ. ಎಂಬೆಲ್ಲ ಪದಗಳು ಕನ್ನಡದಲ್ಲಿ ಇದ್ದರೂ ಇಂಗ್ಲಿಶಿನಿಂದ ಅಂಕಲ್ ಎನ್ನುವ ಪದವನ್ನು ನಾವು ಕೆಲವು ಸಂದರ್ಭಗಳಲ್ಲಿ ಬಳಸುತ್ತಿದ್ದೇವೆ. ಇದು ಏಕೆ? ಅಂಕಲ್ ಎಂಬ ಪದಕ್ಕೆ ಹೆಚ್ಚು ಸಾಮಾಜಿಕ ಮನ್ನಣೆ ಇದೆ. ಮತ್ತು ಅದನ್ನು ಬಳಸುವ ಸಂದರ್ಭಗಳು ಹೆಚ್ಚು ವ್ಯಾಪಕವಾಗಿವೆ. ಈ ಸಾಮಾಜಿಕ ಕಾರಣಗಳನ್ನು ನಿಭಾಯಿಸಲು ಕನ್ನಡದ ಪದಗಳು ಅಸಮರ್ಥವೆಂಬ ತಿಳುವಳಿಕೆಯಿಂದ ಅಂಕಲ್ ಪದವನ್ನು ಬಳಸುತ್ತಿದ್ದೇವೆ. ಇದರಲ್ಲಿ ಸರಿ ತಪ್ಪುಗಳ ಪ್ರಶ್ನೆ ಇಲ್ಲ. ಡ್ಯೂಟಿ ಎನ್ನುವ ಪದವನ್ನು ನೋಡಿ. ಕೆಲಸ, ದುಡಿಮೆ ಗೆಯ್ಮೆ ಎಂಬೆಲ್ಲ ಪದಗಳನ್ನು ನಾವು ಕನ್ನಡದಲ್ಲಿ ಹೊಂದಿರುವೆವಾದರೂ ಕೆಲವು ನಿರ್ದಿಷ್ಟ ಸಾಮಾಜಿಕ ಸಂದರ್ಭಗಳಲ್ಲಿ ಆ ಪದಗಳ ಬದಲು ಡ್ಯೂಟಿ ಎಂಬ ಪದದ ಬಳಕೆಯನ್ನು ಮಾಡುತ್ತೇವೆ. ನಿರ್ದಿಷ್ಟ ಸಮಯದ ಅವಧಿಯ ದುಡಿಮೆಯನ್ನು ಹೇಳುವುದು, ನಿಗದಿತ ವೇತನದ ದುಡಿಮೆಯನ್ನು ಹೇಳುವುದು ಈ ಡ್ಯೂಟಿ ಪದದ ಸಾಮರ್ಥ್ಯವಿದ್ದಂತೆ ತೋರುತ್ತದೆ. ಈ ನಿದರ್ಶನಗಳು ನಮಗೆ ಕನ್ನಡದ ಸಾಮಾಜಿಕ ಸಂದರ್ಭದಲ್ಲಿ ಆಗುತ್ತಿರುವ ಬದಲಾವಣೆಗಳು ನಮ್ಮ ಪದಕೋಶದಲ್ಲಿ ತರುತ್ತಿರುವ ಹೊಸತನವನ್ನು ತೋರಿಸುತ್ತವೆ. ಇದು ಕೂಡಾ ಆಧುನೀಕರಣದ ಪ್ರಭಾವವೇ ಆಗಿದೆ. 2) ಇನ್ನೊಂದು ಲಕ್ಷಣ ಇನ್ನೂ ಕುತೂಹಲಕಾರಿಯಾಗಿದೆ. ಪ್ರಮಾಣೀಕರಣವನ್ನು ಕುರಿತು ತಿಳಿಯುವಾಗ ಈ ಪ್ರಕ್ರಿಯೆಯು ಬರೆಹದಲ್ಲಿ ಕಂಡಬರುವಷ್ಟು ಮಟ್ಟಿಗೆ ಮಾತಿನಲ್ಲಿ ಇರುವುದಿಲ್ಲವೆಂಬುದನ್ನು ಕಂಡೆವು. ಇಲ್ಲಿ ಇದು ತದ್ವಿರುದ್ಧವಾಗಿದೆ. ಅಂದರೆ ಆಧುನೀಕರಣವು ಅದು ಮಾತಿನಲ್ಲಿ ತೀವ್ರಗತಿಯ ಪ್ರಭಾವಗಳನ್ನು ಬೀರುತ್ತಿದೆ. ಆದರೆ ಆ ಪರಿಣಾಮ ಬರೆಹದ ಮಾದರಿಯಲ್ಲಿ ಅಷ್ಟಾಗಿ ಕಾಣುವುದಿಲ್ಲ. ನೀವು ಇದನ್ನು ನಮ್ಮ ಭಾಷಾ ಬಳಕೆಯ ವಿವಿಧ ಸಂದರ್ಭಗಳನ್ನು ಎಚ್ಚರಿಕೆಯಿಂದ ಗಮನಿಸುವ ಮೂಲಕ ತಿಳಿದುಕೊಳ್ಳಬಹುದಾಗಿದೆ. ಮಾತಿನಲ್ಲಿ ಶುದ್ಧತೆಯನ್ನು ಬಯಸುವ ಹಲವರು ಇಂದಿನ ಕನ್ನಡವನ್ನು ಮಿಶ್ರ ಭಾಷೆ ಎಂದೋ ಬೆರಕೆ ಭಾಷೆ ಎಂದೋ ಹೀಯಾಳಿಸುವುದನ್ನು ನೀವು ಕೇಳಿರುತ್ತೀರಿ. ಅವರ ದೃಷ್ಟಿಯಲ್ಲಿ ಕನ್ನಡದ ಶುದ್ಧತೆ ದಿನೇದಿನೇ ಕಡಿಮೆಯಾಗುತ್ತಿದೆ. ಅಂದರೆ ಕನ್ನಡದ ಮಾತಿನಲ್ಲಿ ಇಂಗ್ಲಿಶ್ ಪದಗಳ ಅಧಿಕ ಪ್ರಮಾಣದ ಮಿಶ್ರಣ ನಡೆಯುತ್ತಿದೆ. ಇದು ಸ್ವಾಗತಾರ್ಹವಲ್ಲ. ಆದರೆ ಇಂತಹ ಮಿಶ್ರಣ ಏಕೆ ನಡೆಯುತ್ತಿದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕು. ಕನ್ನಡವನ್ನು ವಿವಿಧ ಉದ್ದೇಶಗಳಿಗಾಗಿ ಬಳಸುವಾಗ ಹೀಗೆ ಇರುವ ಬಳಕೆಗಳ ರೀತಿಗಳಿಗಿಂತ ಭಿನ್ನವಾಗಿ ಅವಶ್ಯ ಪರಿವರ್ತನೆಗಳನ್ನು ಮಾಡಿಕೊಳ್ಳುವುದು ಅವಶ್ಯ ಇದು ಈಗಾಗಲೇ ನಾವು ಗಮನಿಸಿದಂತೆ ಆಧುನೀಕರಣದ ಪ್ರಭಾವ.

ಇದಲ್ಲದೆ ಆಧುನೀಕರಣವು ವಾಕ್ಯ ರಚನೆಯ ಮೇಲೂ ಪ್ರಭಾವ ಬೀರುತ್ತದೆ. ಕನ್ನಡದಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಬಳಕೆಯಲ್ಲಿ ಇದ್ದ ವಾಕ್ಯ ರಚನೆಯ ವಿಧಾನಗಳಿಗಿಂತ ಭಿನ್ನವಾದ ವಾಕ್ಯಗಳು ಈಗ ದಿನದಿನವೂ ಬಳಕೆಯಾಗುತ್ತಿವೆ. ಸಂವಹನ ಮಾಧ್ಯಮಗಳ ಅವಶ್ಯಕತೆಗೆ ಅನುಗುಣವಾಗಿ ಕನ್ನಡದಲ್ಲಿ ಇಂತಹ ಪರಿಣಾಮಗಳು ಒಂದೇ ಸಮನೆ ನಡೆಯುತ್ತಿವೆ.

ಆಧುನೀಕರಣವು ಕನ್ನಡದ ಉಳಿಕೆಗೆ ಮತ್ತು ನಿರಂತರವಾದ ಬಳಕೆಗೆ ಅವಶ್ಯವಾಗಿ ಬೇಕಾದ ಪ್ರಕ್ರಿಯೆಯಾಗಿದೆ. ಇದರಲ್ಲಿ ಎರಡು ಮಾತಿಲ್ಲ. ಆದರೆ ಇದೊಂದು ಅನಿಯಂತ್ರಿತವಾದ ಪರಿವರ್ತನೆಯಾದುದರಿಂದ ಪರಿಣಾಮಗಳನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟ. ಅಂದರೆ ಆಧುನೀಕರಣದ ಪ್ರಭಾವದಿಂದ ಉಂಟಾದ ಬದಲಾವಣೆಗಳು ಭಾಷೆಯ ಸ್ವಂತಿಕೆಗೆ ಯಾವ ರೀತಿಯಲ್ಲಾದರೂ ಧಕ್ಕೆಯನ್ನು ತರುತ್ತಿವೆಯೇ ಎಂಬುದನ್ನು ತಟ್ಟನೆ ಗುರುತಿಸಿ ಹೇಳುವುದು ಕಷ್ಟ.

ಸಮೀಕ್ಷೆ

ಈವರೆಗೆ ನಾವು ಕನ್ನಡ ಇಂದಿನ ಸ್ಥಿತಿಗತಿಗಳ ಸ್ಥೂಲ ಪರಿಚಯ ಮಾಡಿಕೊಂಡೆವು. ಬರೆಹ ಮಾತುಗಳಲ್ಲಿ ಆಗುತ್ತಿರುವ ತೀವ್ರ ಪರಿವರ್ತನೆಗಳ ಸ್ವರೂಪವನ್ನು ಅರಿತೆವು. ಪ್ರಮಾಣೀಕರಣ ಮತ್ತು ಆಧುನೀಕರಣ ಎಂಬ ಪ್ರಕ್ರಿಯೆಗಳ ಲಕ್ಷಣವನ್ನು ತಿಳಿದೆವು. ಸಾಮಾನ್ಯವಾಗಿ ಯಾವುದೇ ಭಾಷೆಯ ಸಂದರ್ಭದಲ್ಲಿ ಈ ಎರಡು ಪ್ರಕ್ರಿಯೆಗಳ ನಡುವೆ ಪರಸ್ಪರ ವಿರೋಧ ಇರುವುದು ಅನಿವಾರ್ಯವೇನಲ್ಲ. ಆದರೆ ಕನ್ನಡದ ಮಟ್ಟಿಗೆ ಒಂದು ವಿಚಿತ್ರ ಸಂದರ್ಭ ಏರ್ಪಟ್ಟಿದೆ ಪ್ರಮಾಣೀಕರಣವು ಬರೆಹದ ಭಾಷೆಯನ್ನು ಹೆಚ್ಚು ಪ್ರಭಾವಿಸತ್ತಿದೆ; ಅದರಲ್ಲಿ ಸಂಸ್ಕೃತದ ಪ್ರಭಾವ ಹೆಚ್ಚಾಗಿದೆ. ಆಧುನೀಕರಣವು ಮಾತಿನ ಮೇಲೆ ಹೆಚ್ಚು ಪ್ರಭಾವ ಬೀರುತ್ತಿದೆ. ಅದರಲ್ಲಿ ಇಂಗ್ಲಿಶಿನ ಪ್ರಭಾವ ಹೆಚ್ಚಾಗಿದೆ. ಪ್ರಮಾಣೀಕರಣವು ಕನ್ನಡದ ಪ್ರಭೇದಗಳನ್ನು ಹತ್ತಿಕ್ಕಿ ಒಂದು ಸಾಮಾನ್ಯ ರೂಪದ ಕಡೆಗೆ ಚಲಿಸಲು ಒತ್ತಾಯಿಸುತ್ತಿದ್ದರೆ ಆಧುನೀಕರಣವು ಹೆಚ್ಚಿನ ಪ್ರಭೇದಗಳನ್ನು ಪೋಷಿಸುವ ಕಡೆಗೆ ಚಲಿಸುತ್ತಿದೆ. ಒಂದಕ್ಕೊಂದು ವಿರುದ್ಧವಾದ ಪರಿಣಾಮಗಳಿಂದ ಉಂಟಾಗಿರುವ ಸ್ಥಿತಿಯನ್ನು ಕುರಿತು ಈಗ ಪರ್ಯಾಲೋಚಿಸಬೇಕಾಗಿದೆ.

ಕನ್ನಡ ರಚನೆಯಲ್ಲಿ ಆಗಿರುವ ಪಲ್ಲಟಗಳು

ಐವತ್ತು ವರ್ಷಗಳ ಅವಧಿ ಒಂದು ಭಾಷೆಯ ರಚನೆಯಲ್ಲಿ ಆಗಿರುವ ಪಲ್ಲಟಗಳನ್ನು ಅಧ್ಯಯನ ಮಾಡಲು ತುಂಬಾ ಕಡಿಮೆಯಾದದ್ದು. ಆದರೆ ಈ ಮೊದಲೇ ಹೇಳಿದಂತೆ ಕನ್ನಡ ಬಳಕೆಯ ಸ್ವರೂಪದಲ್ಲಿ ಆದ ಸ್ಫೋಟದಿಂದ ರಚನೆಯ ಪಲ್ಲಟಗಳು ತೀವ್ರಗೊಂಡಿವೆ. ಕೆಲವು ಪಲ್ಲಟಗಳು ಈಗಾಗಲೇ ಮುಗಿದು ಅವು ನೆಲೆಗೊಂಡಿದ್ದರೆ ಮತ್ತೆ ಕೆಲವು ಬದಲಾವಣೆಗಳು ಇನ್ನೂ ನಡೆಯುತ್ತವೆ. ಇವನ್ನು ಗುರುತಿಸಿ ಚರ್ಚಿಸುವುದು ಈ ಅಧ್ಯಾಯದ ಉದ್ದೇಶ.

ಈ ಎಲ್ಲವನ್ನೂ ಉಚ್ಚಾರಣೆ ಮತ್ತು ಬರಹ ಎಂಬ ಎರಡು ನೆಲೆಗಳಲ್ಲಿ ಪರಿಗಣಿಸಲಾಗುತ್ತದೆ. ಬರೆವಣಿಗೆಗೆ ಸಂಬಂಧಿಸಿದ ಪ್ರಶ್ನೆಗಳು ಇನ್ನೊಂದು ಅಧ್ಯಾಯದಲ್ಲಿ ವಿವರವಾದ ಚರ್ಚೆಗೆ ಒಳಗಾಗಲಿವೆ. ಆದ್ದರಿಂದ ಇಲ್ಲಿ ಪ್ರಾಸಂಗಿಕವಾದ ಸೂಚನೆಗಳು ಮಾತ್ರ ಇರುತ್ತವೆ. ಮಾತಿನ ಉಚ್ಚಾರಣೆಯ ನೆಲೆಯಲ್ಲಿ ಆಗಿರುವ ಮತ್ತು ಆಗುತ್ತಿರುವ ಪಲ್ಲಟಗಳನ್ನು ಇಲ್ಲಿ ಚರ್ಚಿಸಲಾಗುತ್ತದೆ.

ಈ ಪಲ್ಲಟಗಳು ಧ್ವನಿರಚನೆ, ಪದರಚನೆ, ವಾಕ್ಯರಚನೆ ಮತ್ತು ಅರ್ಥರಚನೆ ಎಂಬ ನಾಲ್ಕು ಹಂತಗಳಲ್ಲಿ ಇಲ್ಲಿ ವಿವರಣೆಗೆ ಒಳಗಾಗುತ್ತವೆ. ಧ್ವನಿರಚನೆಯಲ್ಲಿ ಧ್ವನಿಗಳು ಮತ್ತು ಧ್ವನಿನಿಯಮಗಳು ಎಂಬ ಎರಡು ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆ. ಧ್ವನಿನಿಯಮಗಳಿಗೆ ಸಂಬಂಧ ಪಟ್ಟ ವಿವರಣೆಯಲ್ಲಿ ಧ್ವನಿ ಪ್ರಕ್ರಿಯೆಗಳು ಮತ್ತು ಧ್ವನಿತಂತ್ರಗಳನ್ನು ಸೇರಿಸಿ ವಿವರಿಸಲಾಗುತ್ತದೆ.

ಧ್ವನಿರಚನೆ : ಕನ್ನಡದಲ್ಲಿ ಇರುವ ಭಾಷಾಧ್ವನಿಗಳ ಸ್ವರೂಪದ ಬಗೆಗೆ ಸಾಕಷ್ಟು ವಿವರವಾದ ಅಧ್ಯಯನಗಳು ನಡೆದಿವೆ. ಕಳೆದ ಐವತ್ತು ವರ್ಷಗಳಲ್ಲಿ ಈ ಧ್ವನಿಗಳ ಸಮೂಹಕ್ಕೆ ಕೆಲವು ಹೊಸ ಧ್ವನಿಗಳು ಬಂದು ಸೇರಿವೆ. ಕನ್ನಡದಲ್ಲಿ ಇದ್ದ ಧ್ವನಿಗಳು ತಮ್ಮ ಚಹರೆಯನ್ನು ಅಷ್ಟಿಷ್ಟು ಬದಲಾವಣೆ ಮಾಡಿಕೊಂಡಿವೆ. ಮತ್ತೆ ಕೆಲವು ಧ್ವನಿಗಳು ಉಚ್ಚಾರಣೆಯಿಂದ ಮರೆಯಾಗುವ ಲಕ್ಷಣವನ್ನು ತೋರಿಸುತ್ತಿವೆ.

ಇಂಗ್ಲಿಶ್‌ನ ಪ್ರಭಾವದಿಂದಾಗಿ ಕನ್ನಡಕ್ಕೆ ಬಂದು ಸೇರಿದ ಪದಗಳು ಅನೇಕ. ಅಂತಹ ಪದಗಳನ್ನು ಕನ್ನಡದ ಏಕಭಾಷಿಕರು ತಮ್ಮ ಉಚ್ಚಾರಣೆಗಳಿಗೆ ಹೊಂದಿಸಿ ಕೊಂಡು ಬಳಸುತ್ತಾರೆ. ಹೀಗಾದಾಗ ಕನ್ನಡದ ಮೂಲ ಧ್ವನಿಗಳಲ್ಲೇ ಆ ಪದಗಳು

ಬಳಕೆಯಾಗತೊಡಗುತ್ತವೆ. ಆದರೆ ಕನ್ನಡ ಮತ್ತು ಇಂಗ್ಲಿಶ್‌ನಲ್ಲಿ ದ್ವಿಭಾಷಿಕರಾದವರು ಮತ್ತು/ಅಥವಾ ಇಂಗ್ಲಿಶ್ ಉಚ್ಚಾರಣೆಗಳನ್ನು ಕೇಳುವ ಸೌಕರ್ಯವನ್ನು ಪಡೆದವರು ತಮ್ಮ ಉಚ್ಚಾರಣೆಯನ್ನು ಕನ್ನಡ ಏಕಭಾಷಿಕರ ರೀತಿಯಲ್ಲಿ ಇರಿಸಿಕೊಳ್ಳುವುದಿಲ್ಲ. ಹಾಗಾಗಿ ಅವರ ಉಚ್ಚಾರಣೆಗಳಲ್ಲಿ ಕೆಲವು ಮಾರ್ಪಾಡುಗಳು ಆಗುತ್ತವೆ. ಅಂತಹ ಕೆಲವು ಬದಲಾವಣೆಗಳನ್ನು ನಾವು ಮುಂದೆ ಚರ್ಚಿಸಲಿದ್ದೇವೆ.

ಒಂದು: ಇಂಗ್ಲಿಶಿನ ಪದಗಳಲ್ಲಿ ಇರುವ ಒಂದು ಧ್ವನಿ ಓಷ್ಠ್ಯ-ದಂತ್ಯ- ಘರ್ಷ. ಇದನ್ನು ಕೆಳತುಟಿಯನ್ನು ಮೇಲಿನ ದಂತಸಾಲಿಗೆ ಮುಟ್ಟಿಸಿ ಉಚ್ಚರಿಸಲಾಗುತ್ತದೆ. ಫೀ, ಫಾದರ್, ಫಾರ್, ಮುಂತಾದ ಪದಗಳಲ್ಲಿ ಪದಾದಿಯ ಧ್ವನಿ ಇದೇ ಆಗಿದೆ. ಕನ್ನಡ ಇಂಗ್ಲಿಶ್ ದ್ವಿಭಾಷಿಕರು ಈ ಧ್ವನಿಯನ್ನು ಬೇರೊಂದು ರೀತಿಯಲ್ಲಿ ಉಚ್ಚರಿಸುತ್ತಾರೆ ಓಷ್ಠ್ಯದಂತ್ಯ ಘರ್ಷದ ಬದಲು ದ್ವಯೋಷ್ಠ್ಯ ಘರ್ಷವನ್ನಾಗಿ ಬದಲಾಯಿಸಿಕೊಂಡಿದ್ದಾರೆ. ಅಂದರೆ ಎರಡು ತುಟಿಗಳ ನಡುವೆ ಗಾಳಿಯನ್ನು ಹೆಚ್ಚು ಒತ್ತಡದಿಂದ ಹೊರತಳ್ಳುವ ಮೂಲಕ ಉಂಟಾಗುವ ಧ್ವನಿ ಇದು. ಅಂದರೆ ಉಚ್ಚಾರಣಾ ಅಂಗ ಮತ್ತು ಉಚ್ಚಾರಣಾ ವಿಧಾನಗಳನ್ನು ಯಥಾವತ್ತಾಗಿ ಪಾಲಿಸಿದರೂ ಉಚ್ಚಾರಣಾ ಸ್ಥಾನವನ್ನು ಬದಲಾಯಿಸಿದ್ದಾರೆ. ಈ ದ್ವಯೋಷ್ಠ್ಯ ಘರ್ಷಧ್ವನಿ ಕನ್ನಡದಲ್ಲಿ ಇರಲಿಲ್ಲ. ಅಂದರೆ ಕನ್ನಡ ಭಾಷಿಕರು ತಮ್ಮ ಯಾವುದೇ ಪದದಲ್ಲೂ ಈ ಧ್ವನಿಯನ್ನು ಬಳಸುತ್ತಿಲ್ಲ. ಈ ಹೊಸ ಧ್ವನಿಯನ್ನು ಲಿಪಿಗೆ ಇಳಿಸುವಾಗ ಕನ್ನಡದ ಮಹಾಪ್ರಾಣ 'ಫ' ಬರೆದು ಅದರ ಕೆಳಗೆ ಎರಡು ಚುಕ್ಕಿಗಳನ್ನಿಟ್ಟು ಬರೆಯುವ ಪದ್ಧತಿ ಜಾರಿಯಲ್ಲಿದೆ. ಗಣಕಕ್ಕೆ ಸಿದ್ಧಗೊಂಡಿರುವ ಕನ್ನಡ ಕಾರ್ಯವಾಹಿಗಳು ಈ ಲಿಪಿಚಿಹ್ನೆಯನ್ನು ಈಗ ಅಳವಡಿಸಿಕೊಂಡಿವೆ. ಕನ್ನಡದ ಏಕಭಾಷಿಕರು ಈ ಧ್ವನಿಯನ್ನು ಕೇವಲ ಮಹಾಪ್ರಾಣವಾಗಿ, ಮತ್ತೆ ಕೆಲವೊಮ್ಮೆ ಅಲ್ಪಪ್ರಾಣವಾಗಿ ಉಚ್ಚರಿಸುವುದನ್ನು ಕೇಳಬಹುದು. ಇಂಗ್ಲಿಶಿನ ಕಾಫಿ ಪದ ಕನ್ನಡಿಗರ ಬಾಯಿಯಲ್ಲಿ ಉಚ್ಚಾರಣೆಯಾಗುವ ಹಲವು ವಿಧಗಳು ಇಲ್ಲಿ ಉಲ್ಲೇಖಾರ್ಹ. ಒಟ್ಟಾರೆ ಕನ್ನಡ ಧ್ವನಿ ಸಮುದಾಯಕ್ಕೆ ಒಂದು ಹೊಸಧ್ವನಿಯನ್ನು ನಾವೀಗ ಸೇರಿಸಿದ್ದೇವೆ. ಅದರ ಲಿಖಿತರೂಪವನ್ನು ನಿರ್ವಹಿಸುತ್ತಿದ್ದೇವೆ.

ಎರಡು : ಇದೇ ಮಾದರಿಯಲ್ಲಿ ಇಂಗ್ಲಿಶ್‌ನ ದಂತ್ಯಘೋಷ ಘರ್ಷ ಧ್ವನಿಯೊಂದನ್ನು ಕನ್ನಡಿಗರು ಉಚ್ಚರಿಸತೊಡಗಿದ್ದಾರೆ. ಈ ಧ್ವನಿ ಕನ್ನಡದ 'ಸ' ಕಾರಕ್ಕೆ ಸಮಾನ ಸ್ಥಾನೀಯವಾಗಿದೆ. 'ಸ' ಅಘೋಷವಾದರೆ ಇದು ಘೋಷಧ್ವನಿ ಇಂಗ್ಲಿಶಿನ ಜೂ, ಬಿಜಿ, ಬಿಜಿನೆಸ್ ಮುಂತಾದ ಪದಗಳಲ್ಲಿ ಈ ಧ್ವನಿಯು ಉಚ್ಚಾರಣೆ ಯಾಗುವುದು. ಕನ್ನಡಿಗರು, ಅದರಲ್ಲೂ ಇಂಗ್ಲಿಶ್ ಕಲಿತ ಕನ್ನಡಿಗರು ಈ ಧ್ವನಿಯನ್ನು ಹೆಚ್ಚು ಬದಲಾವಣೆಯಿಲ್ಲದೆ ಅಳವಡಿಸಿಕೊಂಡಿದ್ದಾರೆ. ಅದಕ್ಕೊಂದು ಲಿಪಿಚಿಹ್ನೆಯನ್ನು ರೂಪಿಸಿದ್ದಾರೆ. ಕನ್ನಡದ 'ಜ' ಕಾರದ ತಳದಲ್ಲಿ ಎರಡು ಚುಕ್ಕಿಗಳನ್ನಿಡುವುದು ಈ ಹೊಸ ಚಿಹ್ನೆಯ ಲಕ್ಷಣ. ಇದು ಕೂಡ ಕನ್ನಡ ಗಣಕ ಕಾರ್ಯವಾಹಿಗಳಲ್ಲಿ ಬಳಕೆಯಾಗಲು ತೊಡಗಿದೆ.

ಮೂರು: ಇಂಗ್ಲಿಶಿನ ಎರಡು ಧ್ವನಿಗಳನ್ನು ಕನ್ನಡಿಗರು ಮಹಾಪ್ರಾಣಗಳನ್ನಾಗಿ ಪರಿವರ್ತನೆ ಮಾಡಿಕೊಂಡಿದ್ದಾರೆ. ಥಿನ್, ಥಿಂಕ್ ಮುಂತಾದ ಪದಗಳ ಆದಿವ್ಯಂಜನ ಇಂಗ್ಲಿಶಿನವರ ಉಚ್ಚಾರಣೆಯಲ್ಲಿ ಒಂದು ಅಘೋಷ ಘರ್ಷಧ್ವನಿ. ಅವನ್ನು ಕನ್ನಡಿಗರು ತಾವು ಉಚ್ಚರಿಸುತ್ತಿರುವ ಅಥವಾ ತಮ್ಮ ಭಾಷಾಧ್ವನಿಗಳಲ್ಲಿ ಒಂದಾಗಿರುವ ದಂತ್ಯ ಅಘೋಷ ಮಹಾಪ್ರಾಣದೊಡನೆ ಸಮೀಕರಿಸಿದ್ದಾರೆ. ಬರೆಯುವಾಗಲೂ ಮಹಾಪ್ರಾಣಯುಕ್ತವಾಗಿಯೇ ಬರೆಯುತ್ತಾರೆ. ದೆನ್, ದಟ್,ದಿಸ್ ಮುಂತಾದ ಪದಗಳಲ್ಲಿರುವ ಆದಿವ್ಯಂಜನವು ಮೇಲೆ ಹೇಳಿದ ಇಂಗ್ಲಿಷ್ ಧ್ವನಿಯ ಘೋಷರೂಪ. ಈ ವ್ಯಂಜನಗಳನ್ನು ಕನ್ನಡಿಗರು ಸ್ಪರ್ಶಧ್ವನಿಗಳನ್ನಾಗಿ ಬದಲಿಸಿದ್ದಾರೆ. ಅಂದರೆ ಕನ್ನಡದ 'ದ' ಕಾರವನ್ನಾಗಿ ಉಚ್ಚರಿಸುತ್ತಾರೆ. ಇದಕ್ಕೆ ಪ್ರತ್ಯೇಕ ಲಿಪಿಯ ಅಗತ್ಯ ಕಂಡು ಬಂದಿಲ್ಲ.

ನಾಲ್ಕು: ಕನ್ನಡಕ್ಕೆ ಎರವಲು ಬಂದ ಪದಗಳಲ್ಲಿ ಪರ್ಶಿಯನ್ ಮತ್ತು ಅರಾಬಿಕ್ ಮೂಲದ ಪದಗಳು ಹಲವಾರಿವೆ. ಬಹು ಹಿಂದಿನಿಂದಲೂ ಇಂತಹ ಪದಗಳು ಕನ್ನಡಕ್ಕೆ ಬಂದು ಸೇರಿವೆ. ಕಳೆದ ಐವತ್ತು ವರ್ಷಗಳ ಅಂತಹ ಪದಗಳ ಸಂಖ್ಯೆ ಹೆಚ್ಚೇನೂ ಆಗಿಲ್ಲ. ಆದರೂ ಆ ಪದಗಳ ಉಚ್ಚಾರಣೆ ಮತ್ತು ಬರಹರೂಪದಲ್ಲಿ ಕನ್ನಡ ಮಾಡಿಕೊಂಡಿರುವ ಹೊಂದಾಣಿಕೆಯೊಂದು ಗಮನಾರ್ಹ. ಕನ್ನಡದ ಕಂಠ್ಯಧ್ವನಿಗಿಂತ ಭಿನ್ನವಾದ ಕಾಕಲ್ಯ ಘರ್ಷಧ್ವನಿಯೊಂದು ಆ ಭಾಷೆಗಳಲ್ಲಿ ಇದೆ. ಈ ಧ್ವನಿಯನ್ನುಳ್ಳ ಪದಗಳನ್ನು ಕನ್ನಡ ಪಡೆದು ಕೊಂಡಾಗ ಆ ಧ್ವನಿಯ ಬದಲು ಕಂಠ್ಯಸ್ಪರ್ಶ ಮಹಾಪ್ರಾಣ ಧ್ವನಿಯಾದ 'ಖ' ಅನ್ನು ಉಚ್ಚರಿಸುವುದನ್ನು ಗಮನಿಸುತ್ತೇವೆ. ಅದೇ ಲಿಪಿಚಿಹ್ನೆಯು ಬರಹದಲ್ಲೂ ಬಳಕೆಯಾಗುತ್ತಿದೆ.

ಇಂಗ್ಲಿಶ್, ಪರ್ಶಿಯನ್ ಮತ್ತು ಅರಾಬಿಕ್ ಮೂಲದಿಂದ ಬಂದ ಪದಗಳಲ್ಲಿ ತಾಲವ್ಯ ಅಥವಾ ವರ್ತ್ಸ್ಯ ಘರ್ಷಧ್ವನಿಗಳು ಇದ್ದರೆ, ಅವುಗಳ ಉಚ್ಚಾರಣೆಯಲ್ಲಿ ತಾಲವ್ಯ ಘರ್ಷಧ್ವನಿಯನ್ನೇ ಕನ್ನಡವು ಉಳಿಸಿಕೊಂಡರೂ ಬರಹರೂಪದಲ್ಲಿ ಮಾತ್ರ 'ಶ್' ಇಲ್ಲವೇ 'ಷ್' ಈ ಚಿಹ್ನೆಗಳಲ್ಲಿ ಯಾವುದನ್ನು ಬಳಸಬೇಕು ಎಂಬ ಬಗೆಗೆ ಗೊಂದಲವಿದೆ. ಎರಡು ರೂಪಗಳನ್ನೂ ಮುಕ್ತಪ್ರಸಾರದಲ್ಲಿ ಬಳಸುತ್ತಿರುವುದನ್ನು ಗಮನಿಸಬಹುದು. ಶರಬತ್ತು ಶರತ್ತು, ಶರಾರತ್ತು, ಶೇಕ್ಸ್‌ಪಿಯರ್, ಶೇಕ್ ಮುಂತಾದ ಪದಗಳನ್ನು ಕನ್ನಡದಲ್ಲಿ ಬರೆಯುವಾಗ ಆದಿವ್ಯಂಜನವನ್ನು ಯಾವ ಚಿಹ್ನೆಯಿಂದ ಪ್ರತಿನಿಧಿಸಬೇಕು ಎಂಬ ಬಗೆಗೆ ಗೊಂದಲಗಳಿವೆ.

ಐದು: ಇಂಗ್ಲಿಶ್‌ನಲ್ಲಿ ಪಡೆದುಕೊಂಡ ಪದಗಳಲ್ಲಿ ದ್ವಯೋಷ್ಠ್ಯ ಘೋಷ ಘರ್ಷ ಧ್ವನಿಯೊಂದು ಬಳಕೆಯಾಗುತ್ತದೆ. ಇದು ಕನ್ನಡದ 'ವ'ಕಾರಕ್ಕೆ ಸಮವೆಂದು ಕೆಲವರು ತಿಳಿಯುತ್ತಾರೆ. ಮತ್ತು ಅದೇ ಚಿಹ್ನೆಯಿಂದ ಪ್ರತಿನಿಧಿಸುತ್ತಾರೆ. ಆದರೆ ಕರ್ನಾಟಕದ ಕೆಲವು ಭಾಗಗಳಲ್ಲಿ ಅದರಲ್ಲೂ ಮರಾಠಿ ಪ್ರಾಧಾನ್ಯ ಇರುವ ಪ್ರದೇಶಗಳಲ್ಲಿ ಇಂಗ್ಲಿಶಿನ ಎರಡು ಬಗೆಯ 'ವ'ಕಾರಗಳನ್ನು ಕನ್ನಡದಲ್ಲಿ ಬೇರೆ ಬೇರೆ ಚಿಹ್ನೆಗಳಿಂದ ಗುರುತಿಸುವುದು ಬಳಕೆಯಾಗಿದೆ. ಓಷ್ಠ್ಯಧ್ವನಿಯನ್ನು 'ವ'ಕಾರಕ್ಕೆ 'ಹ'ಕಾರದ ಒತ್ತಕ್ಷರವನ್ನು ಒದಗಿಸಿ ಬರೆಯುತ್ತಾರೆ. ಕಂಠ್ಯ 'ವ'ಕಾರವನ್ನು 'ವ'ಕಾರದಿಂದ ಪ್ರತಿನಿಧಿಸುತ್ತಾರೆ. ಬರಹದಲ್ಲಿ ಮಾತ್ರವಲ್ಲದೆ ಅವರ ಉಚ್ಚಾರಣೆಯಲ್ಲೂ ಕೂಡ ಈ ವ್ಯತ್ಯಾಸ ಕಾಣುತ್ತದೆ.

ಆರು: ಕನ್ನಡವು ದ್ರಾವಿಡ ಭಾಷೆಗಳಲ್ಲಿ ಒಂದು. ದ್ರಾವಿಡ ಭಾಷೆಗಳಿಗೆ ಮೂರ್ಧನ್ಯ ಧ್ವನಿಗಳು ವಿಶೇಷ ಲಕ್ಷಣವನ್ನು ಒದಗಿಸಿವೆ. ಭಾರತದ ಬೇರೆ ಯಾವ ಭಾಷಾವರ್ಗದಲ್ಲೂ ಈ ಧ್ವನಿಗಳು ಮೂಲಧ್ವನಿಗಳಿಲ್ಲ. ಮೂರ್ಧನ್ಯಧ್ವನಿಗಳನ್ನು ಉಚ್ಚರಿಸುವಾಗ ನಾಲಿಗೆಯನ್ನು ಹಿಂದಕ್ಕೆ ಬಾಗಿಸಿ ಅದನ್ನು ಅವರ ತುದಿಯನ್ನು ಉಚ್ಚಾರಾಣಾಂಗವಾಗಿ ಮಾಡಿಕೊಂಡು ಮಧ್ಯತಾಲುವನ್ನು ಉಚ್ಚಾರಣಾ ಸ್ಥಾನವನ್ನಾಗಿ ಮಾಡಿಕೊಂಡು ಉತ್ಪಾದಿಸುತ್ತೇವೆ. ಆದರೆ ಈಚಿನ ದಿವಸಗಳಲ್ಲಿ ಇಂಗ್ಲಿಶ್ ಭಾಷೆಯನ್ನು ಕಲಿತ ಕನ್ನಡಿಗರು ಕನ್ನಡದ ಈ ಮೂರ್ಧನ್ಯಧ್ವನಿಗಳನ್ನು ವರ್ತ್ಸ್ಯಧ್ವನಿಗಳನ್ನಾಗಿ ಬದಲಾಯಿಸಕೊಂಡಿದ್ದಾರೆ. ಇದನ್ನು ಅವರಾಡುವ ಮಾತಿನಲ್ಲಿ ಕೇಳಿಸಿಕೊಳ್ಳಲು ಸಾಧ್ಯ. ಬರವಣಿಗೆಯಲ್ಲಿ 'ಟ' ವರ್ಗದ ಚಿಹ್ನೆಗಳೇ ಎಂದಿನಂತೆ ಮುಂದುವರೆದಿವೆ. ಇಂಗ್ಲಿಶ್ ಭಾಷೆಯ ವರ್ತ್ಸ್ಯ ಧ್ವನಿಗಳ ಪ್ರಭಾವ ಇಲ್ಲಿ ಎದ್ದು ಕಾಣುತ್ತದೆ. ಈ ಬಗೆಯ ಬದಲಾದ ಉಚ್ಚಾರಣೆ ಉಚ್ಚರಿಸುವವರ ಸಾಮಾಜಿಕ ಅಂತಸ್ತನ್ನೂ ಹಿರಿಮೆಯನ್ನೂ ಸೂಚಿಸುವುದೆಂಬ ಅಲಿಖಿತ ನಂಬಿಕೆ ಬಳಕೆಯಲ್ಲಿದೆ. ಈ ಉಚ್ಚಾರಣಾ ಬದಲಾವಣೆ ಇನ್ನೊಂದು ಕಡೆಯಿಂದ ಕನ್ನಡದ ಬರವಣಿಗೆಯಲ್ಲಿರುವ ಎರಡು ಅಘೋಷ ಘರ್ಷಗಳಾದ ಶ ಮತ್ತು ಷ ಗಳ ನಡುವೆ ಉಚ್ಚಾರಣೆಯಲ್ಲಿ ವ್ಯತ್ಯಾಸ ಇಲ್ಲದಂತೆ ಮಾಡಿದೆ. ಬಹುಪಾಲು ಶಿಕ್ಷಿತ ಕನ್ನಡಿಗರು ಈ ಎರಡು ಲಿಪಿಗಳನ್ನೂ ಬರವಣಿಗೆಯಲ್ಲಿ ಬೇರೆಬೇರೆಯಾಗಿ ಇರಿಸಿಕೊಂಡರೂ ಉಚ್ಚಾರಣೆಯಲ್ಲಿ ಯಾವ ವ್ಯತ್ಯಾಸವನ್ನೂ ಮಾಡುತ್ತಿಲ್ಲ.

ಏಳು: ಕನ್ನಡ ಮಾತಿನಲ್ಲಿ ಆಗುತ್ತಿರುವ ಒಂದು ಬದಲಾವಣೆಯ ಸಾಧ್ಯತೆಯ ಬಗೆಗೆ ಭಾಷಾಶಾಸ್ತ್ರಜ್ಞರು ಗಮನ ಸೆಳೆದಿದ್ದಾರೆ. ಅದೆಂದರೆ ಎರಡು ಸ್ವರಗಳ ನಡುವೆ ಬರುವ ಘೋಷ ಮಹಾಪ್ರಾಣ ಸ್ಪರ್ಶಗಳು ಘರ್ಷತ್ವನ್ನು ಪಡೆದುಕೊಳ್ಳುತ್ತವೆ ಎಂಬುದು. ಇದು ಕನ್ನಡದಲ್ಲಿ ಕೆಲವು ಪ್ರಸಂಗಗಳಲ್ಲಿ ಬಹು ಹಿಂದಿನಿಂದಲೂ ಬಳಕೆಯಲ್ಲಿದ್ದಂತೆ ತೋರುತ್ತದೆ. ಸಂಧಿಕಾರ್ಯ ನಡೆಯುವಾಗ ಉತ್ತರಪದದ ಆದಿಯಲ್ಲಿ 'ಪ,ಬ,ಮ' ವರ್ಗದ ಧ್ವನಿಗಳಿದ್ದರೆ ಅವು 'ವ'ಕಾರವಾಗಿ ಬದಲಾಗುತ್ತಿದ್ದವು. ಉತ್ತರಪದದ ಆದಿಯ ಪ,ಬ,ಮ ಧ್ವನಿಗಳು ಸಂಧಿಯಾದ ಪದದಲ್ಲಿ 'ವ' ಕಾರವಾಗಿಯೇ ಕಾಣಿಸಿಕೊಳ್ಳುತ್ತವೆ. ಮೊದಲಿದ್ದ ಧ್ವನಿಗಳು ಸ್ಪರ್ಶಗಳಾದರೆ ಫಲಿತ ಧ್ವನಿಯು ಘರ್ಷವಾಗಿದೆ. ಇದು ನಡುಗನ್ನಡದ ವೇಳೆಗಾಗಲೇ ಕಂಡು ಬಂದಿದ್ದ ಬದಲಾವಣೆ. ಈಗ ಅಂತಹುದೇ ಪರಿವರ್ತನೆ ದಂತ್ಯಧ್ವನಿಗಳಲ್ಲಿ ಕಾಣಿಸಿಕೊಳ್ಳಲು ಆರಂಭಿಸಿದೆ. ಅದರಲ್ಲೂ ಎರಡು ಸ್ವರಗಳ ನಡುವೆ ಬರುವ 'ದ' ಕಾರ ಮತ್ತು ಸ್ವರ ಮತ್ತು ವ್ಯಂಜನಗಳ ನಡುವೆ ಬರುವ 'ದ' ಕಾರ ತನ್ನ ಮೂಲ ಸ್ಪರ್ಶಗುಣವನ್ನು ಕಳೆದುಕೊಂಡು ಘರ್ಷತ್ವವನ್ನು ಪಡೆದುಕೊಳ್ಳುತ್ತಿದೆ. ಕನ್ನಡದಲ್ಲಿ ಘೋಷ ಘರ್ಷ ವ್ಯಂಜನವೊಂದು ಇಲ್ಲ. ಆದ್ದರಿಂದ ಬರವಣಿಗೆಯಲ್ಲಿ ಈ ಧ್ವನಿಯನ್ನು ಮಹಾ ಪ್ರಾಣ ಇದೆಯೆಂದು ಗುರುತಿಸುತ್ತಿದ್ದಾರೆ. ಇದು ಮೇಲುನೋಟಕ್ಕೆ ಬರವಣಿಗೆಯ ದೋಷವೆಂಬಂತೆ ತೋರುತ್ತದೆ. ಉದಾ.ಗೆ ವಿದ್ಯಾರ್ಥಿ ಪದವನ್ನು ವಿಧ್ಯಾರ್ಥಿ ಎಂದು ಬರೆಯುವುದು. ಉದಾರ ಪದವನ್ನು

ಉಧಾರ ಎಂದು ಬರೆಯುವುದು. ಆದರೆ ಇದು ಬರವಣಿಗೆಯ ದೋಷವಾಗಿರುವುದಕ್ಕಿಂತ ಹೆಚ್ಚಾಗಿ ಕನ್ನಡಿಗರ ಉಚ್ಚಾರಣೆಯಲ್ಲಿ ಆಗುತ್ತಿರುವ ಒಂದು ಪರಿವರ್ತನೆಯನ್ನು ಸೂಚಿಸುವಂತಿದೆ.

ಇಂತಹುದೇ ಇನ್ನೊಂದು ಬದಲಾವಣೆ ಸ್ವರಗಳ ನಡುವೆ ಬರುವ 'ಪ' ಕಾರದಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಅದರಲ್ಲೂ 'ಪ' ಕಾರವು ಪದದಲ್ಲಿ ಮೊದಲು ಸ್ವರದ ನಂತರ ಬರುತ್ತಿದ್ದರೆ ಆ ಧ್ವನಿಯು ಅಘೋಷ ಘರ್ಷಧ್ವನಿಯಾಗಿ ಉಚ್ಚಾರಣೆಯಾಗುವ ಸಂದರ್ಭ ಕಂಡು ಬರುತ್ತದೆ. 'ಅಪಘಾತ' 'ವಿಪತ್ತು', 'ವಿಫಲ' ಮುಂತಾದ ಪದಗಳಲ್ಲಿ ಪಕಾರವನ್ನು ಕನ್ನಡಿಗರು ಉಚ್ಚರಿಸುತ್ತಿರುವುದನ್ನು ಎಚ್ಚರಿಕೆ ಯಿಂದ ಗಮನಿಸಿದರೆ ಇಲ್ಲಿ ಸ್ಪರ್ಶವು ಘರ್ಷಧ್ವನಿಯಾಗುತ್ತಿರುವ ಪರಿಸ್ಥಿತಿಯನ್ನು ಗ್ರಹಿಸುವುದು ಸಾಧ್ಯ

ಎಂಟು: ಮತ್ತೊಂದು ಧ್ವನಿಯ ಉಚ್ಚಾರಣೆ ಮತ್ತು ಚಿಹ್ನೆಯ ಬಗೆಗೆ ಈಚೆಗೆ ಒಂದು ವಾಗ್ವಾದವೇ ನಡೆಯಿತು. ಇದು 'ಋ' ಕಾರದ ಚಿಹ್ನೆಯ ಬಗೆಗೆ ನಡೆದ ಚರ್ಚೆಯಾಗಿದೆ. ಕನ್ನಡ ಲಿಪಿ ವ್ಯವಸ್ಥೆಯು ವಾಸ್ತವವಾಗಿ ಕನ್ನಡ ಧ್ವನಿ ವ್ಯವಸ್ಥೆಯನ್ನು ಪ್ರತಿನಿಧಿಸುವ ಬದಲು ಸಂಸ್ಕೃತದ ಎಲ್ಲಾ ಪ್ರಮಾಣಿತ ಧ್ವನಿಗಳನ್ನು ಪ್ರತಿನಿಧಿಸುವ ಉದ್ದೇಶವನ್ನು ಹೊಂದಿದೆ. ಕಳೆದ ಶತಮಾನದಲ್ಲಿ ಶಾಲಾ ಶಿಕ್ಷಣದ ಭಾಗವಾಗಿ ಸ್ವರಗಳನ್ನು ಕಲಿಸುವಾಗ 'ಋ'ಕಾರ ಮತ್ತು ಅದರ ದೀರ್ಘರೂಪ, ಉಪಧ್ಮಾನೀಯಗಳು, ಅನುಸ್ವರ ಮತ್ತು ವಿಸರ್ಗಗಳನ್ನು ಕಲಿಸಿಕೊಡುತ್ತಿದ್ದರು. ಆದರೆ ಕಾಲ ಕಳೆದಂತೆ ಕನ್ನಡಿಗರ ಉಚ್ಚಾರಣೆಯಲ್ಲಿ ಈ ಸ್ವರಗಳಿಗೆ ಅರ್ಥವಿಲ್ಲವೆಂಬುದು ಗಮನಕ್ಕೆ ಬಂದಿದೆ. ಇದರಿಂದಾಗಿ ಶಾಲಾ ಪಠ್ಯಗಳಿಂದ ಉಪಧ್ಮಾನೀಯಗಳನ್ನು ಮೊದಲು ಕೈ ಬಿಟ್ಟರು. ಹೀಗೆಯೇ 'ಋ'ಕಾರವನ್ನು ಚಿಹ್ನೆ ಮತ್ತು ಉಚ್ಚಾರಣೆಗಳ ನೆಲೆಯಲ್ಲಿ ಬಿಟ್ಟು ಬಿಡಬೇಕೆಂದು ಚರ್ಚೆ ಮೊದಲಾಯಿತು.

ವಾಸ್ತವವಾಗಿ 'ಋ'ಕಾರವು 'ರ'ಕಾರವನ್ನು ಪ್ರತಿನಿಧಿಸುತ್ತದೆ. ಅವರ್ಗೀಯ ವ್ಯಂಜನವಾದ 'ರ'ಕಾರವು ಕೆಲವು ಪರಿಸರಗಳಲ್ಲಿ ಅಕ್ಷರ ಕೇಂದ್ರವಾಗುವ ಸಾಧ್ಯತೆಗಳಿವೆ. ಅಕ್ಷರ ಕೇಂದ್ರಗಳು ಸಾಮಾನ್ಯವಾಗಿ ಸ್ವರಗಳು. ಈ ಅಕ್ಷರ ಕೇಂದ್ರಗಳಾಗಿ ಬಂದಾಗ ಅವುಗಳು ವ್ಯಂಜನಗಳಾಗಿದ್ದರೂ ಅವುಗಳಿಗೆ ಸ್ವರತ್ವ ಒದಗುತ್ತದೆ. ಹೀಗಾಗಿ 'ರ' ವ್ಯಂಜನದ ಬದಲು ಅದರ ಸ್ವರರೂಪವಾಗಿ ಅಥವಾ ಅಕ್ಷರ ಕೇಂದ್ರವಾಗಿ 'ಋ'ಕಾರವನ್ನು ಸಂಸ್ಕೃತದಲ್ಲಿ ಬಳಸುವ ಪದ್ಧತಿ ಇದೆ. ಇದು ಸರ್ವಥಾ ಕನ್ನಡಕ್ಕೆ ಅನ್ವಯಿಸುವ ವಿಚಾರವಲ್ಲ. ಏಕೆಂದರೆ ಕನ್ನಡದಲ್ಲಿ ಎಲ್ಲಿಯೂ ವ್ಯಂಜನವು ಅಕ್ಷರ ಕೇಂದ್ರವಾಗಲಾರದು. 'ರ' ಕಾರವನ್ನು ಹೇಗೆ ಬರೆದರೂ ಅದರ ವ್ಯಂಜನ ಗುಣವನ್ನು ಮಾತ್ರ ಕಾಯ್ದುಕೊಳ್ಳುತ್ತದೆ. ಈ ಅಂಶ ಸಂಪ್ರದಾಯವಾದಿಗಳಿಗೆ ಒಪ್ಪಿಗೆಯಾಗಲಿಲ್ಲ. ಶಾಲಾ ಪಠ್ಯಗಳಿಂದ 'ಋ'ಕಾರ ಚಿಹ್ನೆಯನ್ನು ಕೈಬಿಡುವ ಪ್ರಸ್ತಾವ ಅವರನ್ನು ಕೆರಳಿಸಿತು. ಎಂದಿನಂತೆ ಸರ್ಕಾರದ, ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವ ಎಂದಿನ ಆಲೋಚನೆಯ ಫಲವಾಗಿ 'ಋ'ಕಾರ ಅದಿರುವ ಜಾಗದಲ್ಲಿ ಉಳಿದುಕೊಂಡಿದೆ.

ಒಂಬತ್ತು: ಕನ್ನಡದ ಧ್ವನಿರಚನೆಯಲ್ಲಿ ಆಗಿರುವ ಮತ್ತೆ ಕೆಲವು ಬದಲಾವಣೆಗಳು ಸಾರ್ವತ್ರಿಕವಾಗಿ ಕಾಣದಿದ್ದರೂ ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆಗಳಲ್ಲಿ ಕ್ರಿಯಾಶೀಲವಾಗಿವೆ. ಇವುಗಳು ಶೈಕ್ಷಣಿಕ ಮತ್ತು ಆಡಳಿತ ನೆಲೆಯಲ್ಲಿ ಸದ್ಯ ಪ್ರಭಾವಶಾಲಿಯಾಗಿಲ್ಲ. ಆದರೆ ಸಾಮಾಜಿಕ ಪರಿವರ್ತನೆಗಳು ಇಂಥಾ ಸಮತೋಲನವನ್ನು ಬದಲಾಯಿಸಬಹುದು. ಆಗ ಬೇರೆ ಬೇರೆ ಸೀಮಿತ ವಲಯಗಳಲ್ಲಿ ಕಾಣುತ್ತಿರುವ ಧ್ವನಿರಚನೆಯ ಪಲ್ಲಟಗಳು ಹೆಚ್ಚು ವ್ಯಾಪಕವಾದ ಬಳಕೆಯನ್ನು ಪಡೆಯುವ ಸಾಧ್ಯತೆ ಇದೆ. ಅಂತಹ ಎರಡು ಬದಲಾವಣೆಗಳನ್ನು ಇಲ್ಲಿ ಚರ್ಚಿಸಲಾಗುವುದು. ಒಂದು: ಮಹಾಪ್ರಾಣಗಳ ಉಚ್ಚಾರ, ಎರಡು: 'ಹ'ಕಾರದ ಉಚ್ಚಾರ. ಮಹಾಪ್ರಾಣಗಳು ಕನ್ನಡದ ಮೂಲಧ್ವನಿಗಳಲ್ಲ ಎಂಬ ವಾದ ಹಳೆಯದು. ಆದರೆ ಬರೆಹ ಕನ್ನಡದಲ್ಲಿ ಅವುಗಳ ನಿಯತ ಬಳಕೆ ಮತ್ತು ನಿಯಮಬದ್ಧ ಬಳಕೆ ಎದ್ದು ಕಾಣುವ ಲಕ್ಷಣವಾಗಿದೆ. ಉಚ್ಚಾರಣೆಯಲ್ಲಿ ಮಹಾಪ್ರಾಣ ಮತ್ತು ಅದರ ಅಲ್ಪಪ್ರಾಣಗಳ ನಡುವೆ ವ್ಯತ್ಯಾಸ ಮಾಡದವರು ಕೂಡ ತಮ್ಮ ಬರೆಹದಲ್ಲಿ ಈ ವ್ಯತ್ಯಾಸವನ್ನು ಉಳಿಸಿಕೊಳ್ಳಲು ಯತ್ನಿಸುತ್ತಾರೆ. ಹಾಗೆ ವ್ಯತ್ಯಾಸವನ್ನು ಕಾಯ್ದುಕೊಳ್ಳದೇ ಹೋದರೆ ಅದನ್ನು ಬರವಣಿಗೆಯ ದೋಷ ಎಂದು ಪರಿಗಣಿಸಲಾಗುತ್ತಿದೆ. ಆದರೆ ಕನ್ನಡದ ಬರವಣಿಗೆಯಲ್ಲಿ ಭಾಗವಹಿಸುವವರ ಸ್ವರೂಪವು ಸಾಮಾಜಿಕ ನೆಲೆಯಲ್ಲಿ ಬದಲಾಗುತ್ತಾ ಹೋದಂತೆ ತಮ್ಮ ಉಚ್ಚಾರಣೆಯ ರೀತಿಯನ್ನೇ ಬರೆಹದಲ್ಲೂ ಉಳಿಸಿಕೊಳ್ಳುವವರು ಹೆಚ್ಚಾಗುತ್ತಿದ್ದಾರೆ. ಅಂದರೆ ಬರವಣಿಗೆಯಲ್ಲೂ ಮಹಾಪ್ರಾಣಗಳ ಬದಲು ಅಲ್ಪಪ್ರಾಣಗಳನ್ನು ಬಳಸಲು ತೊಡಗಿದ್ದಾರೆ. ಈ ವಿಕಲ್ಪಕ್ಕೆ ಮನ್ನಣೆ ಇನ್ನೂ ದೊರಕಿಲ್ಲ. ಆದರೂ ಭಾಷಾ ಶಾಸ್ತ್ರಜ್ಞರು ಈ ಬಗೆಗೆ ಸಾಕಷ್ಟು ಜಾಗ್ರತರಾಗಿದ್ದಾರೆ. ಮಹಾಪ್ರಾಣಗಳನ್ನು ಅಲ್ಪ ಪ್ರಾಣಗಳನ್ನಾಗಿ ಉಚ್ಚರಿಸುವುದರಿಂದ ತೊಂದರೆ ಇಲ್ಲವಾದರೆ ಅವುಗಳನ್ನು ಬರವಣಿಗೆಯಲ್ಲೂ ಅಲ್ಪಪ್ರಾಣವಾಗಿಯೇ ಬರೆದರೆ ತಪ್ಪೇನು ಎಂಬ ಪ್ರಶ್ನೆ ಮುಂಚೂಣಿಗೆ ಬರುತ್ತಿದೆ. ಈಗಾಗಲೇ ಹೇಳಿದಂತೆ ಮಹಾಪ್ರಾಣಗಳಿರುವ ಪದಗಳು ಕನ್ನಡಕ್ಕೆ ಸಂಸ್ಕೃತದಿಂದ ಬಂದಿವೆ. ಅಂತಹ ಪದಗಳನ್ನು ಬರೆಯುವಾಗ ಅಲ್ಪಪ್ರಾಣ ಯುಕ್ತವಾಗಿ ಬರೆದರೆ ಅರ್ಥವ್ಯತ್ಯಾಸವಾಗುತ್ತದೆ ಎಂಬುದು ಸಂಪ್ರದಾಯವಾದಿಗಳ ಕೊರಗು. ಹೀಗೆ ಮಹಾಪ್ರಾಣಗಳ ಬದಲು ಅಲ್ಪಪ್ರಾಣ ಬರೆದರೆ ಅರ್ಥದ ನೆಲೆಯಲ್ಲಿ ಗೊಂದಲ ಉಂಟಾಗಬಹುದಾದ ಪದಗಳ ಸಂಖ್ಯೆ(ಕನ್ನಡ ಬರಹದಲ್ಲಿ ಬಳಕೆಯಾಗುವಂತಹವು) ಸುಮಾರು ೨೧ನ್ನು ದಾಟುವುದಿಲ್ಲ ಎಂಬುದನ್ನು ಲೆಕ್ಕಹಾಕಿ ತೋರಿಸಲಾಗಿದೆ. ಉದಾ. ರಥ/ರತ. ಅಲ್ಲದೆ ಯಾವುದೇ ಧ್ವನಿವ್ಯತ್ಯಾಸ ಲಿಖಿತರೂಪದಲ್ಲಿ ಪ್ರತಿನಿಧಿತವಾಗುವಾಗ ಇಂತಹ ಗೊಂದಲಗಳು ಅಸಹಜವಲ್ಲ. ಅರ್ಥವ್ಯತ್ಯಾಸವುಳ್ಳ ಪದಗಳು ಒಂದೇ ರೀತಿಯ ಬರವಣಿಗೆಯ ರೂಪವನ್ನು ಪಡೆದುಕೊಂಡು ಬಿಡುತ್ತದೆ. ೧೦-೧೨ನೇ ಶತಮಾನದಲ್ಲಿ 'ರಳ' 'ಕುಳ'ವಾಗಿ ಬದಲಾದಾಗ, ಶಕಟ ರೇಫೆಯು 'ರ' ಕಾರವಾಗಿ ಬದಲಾದಾಗ ಬರವಣಿಗೆಯ ರೂಪದಲ್ಲಿ ಇಂತಹ ಗೊಂದಲಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಗಿವೆ. ಆದರೆ ಅದರಿಂದ ಕನ್ನಡಕ್ಕೆ ಕುತ್ತೇನೂ ಬಂದಿಲ್ಲ. ಮಹಾಪ್ರಾಣಗಳ ವಿಷಯದಲ್ಲೂ ಈ ಮಾತು ನಿಜ. ಕನ್ನಡದಲ್ಲಿ ನಡೆಯುತ್ತಿರುವ ಒಂದು ಮುಸುಕಿನ ಸಂಘರ್ಷ

ಮುಂದಿನ ದಶಕಗಳಲ್ಲಿ ನಿರ್ದಿಷ್ಟ ಆಕಾರವನ್ನು ಪಡೆಯಬಹುದು. ಮಹಾಪ್ರಾಣಗಳು ಕನ್ನಡದ ಉಚ್ಚಾರಣೆಯಿಂದ ಕಳೆದುಹೋದಂತೆ ಬರವಣಿಗೆಯಿಂದಲೂ ಮಾಯವಾಗಬಹುದು.

'ಹ'ಕಾರದ ಕತೆಯೂ ಹೀಗೆಯೇ ಇದೆ. 'ಹ'ಕಾರವನ್ನು ಪದಾದಿಯಲ್ಲಿ ಉಚ್ಚರಿಸುವುದಿಲ್ಲ ಎಂಬುದು ಹಲವರ ಕನ್ನಡ ಉಚ್ಚಾರಣೆಯ ಬಗೆಗೆ ಸುಶಿಕ್ಷಿತರ ಟೀಕೆ. ಇದು ಅಶಿಕ್ಷಿತ ಕನ್ನಡಿಗರನ್ನು ಗೇಲಿ ಮಾಡಲು ಬಳಸುವ ಒಂದು ಸಿದ್ಧ ಮಾದರಿಯೂ ಆಗಿದೆ. ಆದರೆ ಇದು ನಾವು ತಿಳಿದಂತೆ ಇಲ್ಲ. ಪದಾದಿಯ 'ಹ'ಕಾರವನ್ನು ಕೆಲವರು ಉಚ್ಚರಿಸುತ್ತಿಲ್ಲವೋ ಅಥವಾ ಅವರು ಉಚ್ಚರಿಸುತ್ತಿರುವ ಧ್ವನಿಯನ್ನು ನಾವು ಕೇಳಿಸಿಕೊಳ್ಳುತ್ತಿಲ್ಲವೋ ತಿಳಿಯದು. ಏಕೆಂದರೆ 'ಹ'ಕಾರ ಲೋಪವನ್ನು ಗೇಲಿ ಮಾಡುವವರು 'ಹ'ಕಾರ ಬಿಟ್ಟು ಉಚ್ಚರಿಸಿದಾಗ ಅದು ಕೇಳುವ ರೀತಿಗೂ, ನಿಜಜೀವನದಲ್ಲೂ 'ಹ'ಕಾರವನ್ನು ಪರಿಗಣಿಸದೆ ಉಚ್ಚರಿಸುವವರ ಉಚ್ಚಾರಣೆಗೂ ವ್ಯತ್ಯಾಸಗಳಿವೆ. ಅಂದರೆ ಅವರು 'ಹ'ಕಾರ ಲೋಪಮಾಡುತ್ತಾರೆಂದು ನಾವು ತಿಳಿದರೆ ಅವರು ತಮ್ಮ ಉಚ್ಚಾರಣೆಯಲ್ಲಿ 'ಹ'ಕಾರದ ಬದಲು ಬೇರೊಂದು ಧ್ವನಿಯನ್ನು ಬಳಸುತ್ತಿರಬಹುದು. ನಮಗೆ ಅಪರಿಚಿತವಾದ ಆ ಧ್ವನಿಯನ್ನು ನಾವು ಕೇಳಿಸಿಕೊಳ್ಳದೆಯೂ ಇರಬಹುದು. ಇದು ಕೇವಲ ಊಹೆಯಲ್ಲ. ಕನ್ನಡದ ಹಲವು ಉಪಭಾಷೆಗಳನ್ನು ನಿಕಟವಾಗಿ ಗಮನಿಸಿದರೆ ಅಲ್ಲಿ ಈ 'ಹ'ಕಾರದ ಉಚ್ಚಾರಣಾಸ್ವರೂಪವು ಹೆಚ್ಚು ಸಂಕೀರ್ಣವಾಗಿರುವುದು ಗೊತ್ತಾಗುತ್ತದೆ.

ಇಂಗ್ಲಿಶ್ ಭಾಷೆಯನ್ನು ಶಾಲಾಶಿಕ್ಷಣದಲ್ಲಿ ಕಡ್ಡಾಯವಾಗಿ ಕಲಿಯುತ್ತಿರುವುದರಿಂದ, ಮತ್ತು ಆಡಳಿತದಲ್ಲಿ ಇಂಗ್ಲಿಶ್ ಒಂದು ಸಹಭಾಷೆಯಾಗಿ ಬಳಕೆಯಾಗುತ್ತಿರುವುದರಿಂದ ಮತ್ತೊಂದು ಬಗೆಯ ಧ್ವನಿವ್ಯತ್ಯಾಸವು ಕನ್ನಡದಲ್ಲಿ ನೆಲೆಯೂರತೊಡಗಿದೆ. ಅದನ್ನೀಗ ಗಮನಿಸಬಹುದು. ಕನ್ನಡದ 'ಣ'ಕಾರ ಮತ್ತು 'ಳ'ಕಾರಗಳು ಇಂಗ್ಲಿಶ್ ಭಾಷೆಯಲ್ಲಿ ಸಂವಾದಿ ಉಚ್ಚಾರಣೆಯನ್ನಾಗಲೀ ಲಿಪಿಚಿಹ್ನೆಯನ್ನಾಗಲೀ ಪಡೆದಿಲ್ಲ. ಆದರೆ ಈ ಧ್ವನಿಗಳುಳ್ಳ ಎಷ್ಟೋ ಕನ್ನಡಪದಗಳನ್ನು ಅದರಲ್ಲೂ ಮುಖ್ಯವಾಗಿ ನಾಮಪದಗಳನ್ನು ಇಂಗ್ಲಿಶ್ ಭಾಷೆಯಲ್ಲಿ ಅಂದರೆ ರೋಮನ್ ಲಿಪಿಯಲ್ಲಿ ಬರೆಯಬೇಕಾಗಿ ಬರುತ್ತದೆ. ಹೀಗೆ ಬರೆದಾಗ ಕನ್ನಡದ 'ಣ'ಕಾರಕ್ಕೆ ಬದಲಾಗಿ ಇಂಗ್ಲಿಶ್‌ನ 'ಎನ್' ಚಿಹ್ನೆಯನ್ನು ಕನ್ನಡದ 'ಳ'ಕಾರಕ್ಕೆ ಬದಲಾಗಿ 'ಎಲ್' ಚಿಹ್ನೆಯನ್ನು ಬರೆಯುವುದು ಬಳಕೆಯಲ್ಲಿದೆ. ಹೀಗೆ ಬರೆದ ಇಂಗ್ಲಿಶ್ ರೂಪದ ಕನ್ನಡ ಪದಗಳನ್ನು ಕನ್ನಡಿಗರು, ಅದರಲ್ಲೂ ಶಿಕ್ಷಿತ ಕನ್ನಡಿಗರು ಉಚ್ಚರಿಸುವಾಗ ಮೂಲಕನ್ನಡದ ಉಚ್ಚಾರವನ್ನು ಬಿಟ್ಟುಕೊಡುತ್ತಿರುವುದು ಕಂಡುಬರುತ್ತಿದೆ. ಅದರ ಬದಲು ರೋಮನ್ ಲಿಪಿಯ ಉಚ್ಚಾರವನ್ನೇ ಬಳಸುವುದು ವಾಡಿಕೆಯಾಗತೊಡಗಿದೆ. ವ್ಯಕ್ತಿ ನಾಮಗಳಲ್ಲಿ ಇದು ವ್ಯಾಪಕವಾಗಿ ಕಂಡುಬರುತ್ತಿರುವ ಪ್ರವೃತ್ತಿ. ಹಾಗೆಯೇ ಸ್ಥಳ ನಾಮಗಳನ್ನು ರೋಮನ್ ಲಿಪಿಯಲ್ಲಿ ಬರೆದಾಗ ಅದನ್ನು ಮರಳಿ ಕನ್ನಡಿಗರು ಹೇಳುವಾಗ ಕನ್ನಡದ 'ಣ' ಮತ್ತು 'ಳ'ಗಳಿಗೆ ಬದಲು 'ನ' ಮತ್ತು 'ಲ'ಗಳನ್ನು ಹೇಳುತ್ತಿದ್ದಾರೆ. ಕೆಲವು ನಿದರ್ಶನಗಳನ್ನು ನೋಡಬಹುದು. **ನಾರಾಯಣ** ಎಂಬುದು ಶಿಕ್ಷಿತರ ಉಚ್ಚಾರಣೆಯಲ್ಲಿ **ನಾರಾಯನ್**, **ಹರಿಣಿ** ಎನ್ನುವುದು **ಹರಿನಿ**

ಎಂದಾಗುತ್ತದೆ. ಹಾಗೆಯೇ **ಹಳಿಯಾಳ** ಎನ್ನುವ ಊರ ಹೆಸರು **ಹಲಿಯಾಲ್** ಎಂದು ಬದಲಾಗುತ್ತಿದೆ. ಹೀಗೆ ಉಚ್ಚಾರಣೆ ಬದಲಾಗುವುದು ಶಿಕ್ಷಿತರ ಆಧುನಿಕತೆಯ ಲಕ್ಷಣವೂ ಆಗಿರುವುದರಿಂದ ಈ ಹೊಸ ಉಚ್ಚಾರಣೆಗಳು ಪ್ರಮಾಣರೂಪಗಳಾಗುವ ಸಂಭವವಿದೆ.

ಈ ಬದಲಾವಣೆಯನ್ನು ವಿವರಿಸುವಾಗ ಕನ್ನಡದ 'ಣ' ಕಾರ ಮತ್ತು 'ಳ'ಕಾರಗಳು ಪೂರ್ಣವಾಗಿ ಕನ್ನಡಿಗರ ಉಚ್ಚಾರಣೆಯಿಂದ ಮಾಯವಾಗುತ್ತಿವೆ ಎಂದು ಹೇಳುವ ಉದ್ದೇಶವಿಲ್ಲ. ಆದರೆ ಅವುಳನ್ನು ಉಚ್ಚರಿಸಬೇಕಾದ ಕೆಲವು ಕಡೆಗಳಲ್ಲಿ ಅವುಗಳ ಬದಲಿಗೆ 'ನ' ಮತ್ತು 'ಲ'ಗಳನ್ನು ಬಳಸಲಾಗುತ್ತಿದೆ ಎಂದು ಹೇಳುವುದು ಇಲ್ಲಿನ ಉದ್ದೇಶ. ಹಾಗೆ ನೋಡಿದರೆ ಇಂಗ್ಲಿಶ್‌ನ ಎಷ್ಟೋ ಪದಗಳನ್ನು ಕನ್ನಡಿಗರು ಉಚ್ಚರಿಸುವಾಗ ಅಲ್ಲಿನ 'ನ' ಕಾರಕ್ಕೆ 'ಣ'ಕಾರವನ್ನು ಆದೇಶಿಸುವುದುಂಟು. ಅದರಲ್ಲೂ 'ಎನ್' ನಂತರ 'ಟ'ಅಥವಾ 'ಡಿ' ಬರುವ ಪದಗಳನ್ನು ಉಚ್ಚರಿಸುವಾಗ 'ನ' ಕಾರದ ಬದಲು 'ಣ' ಆದೇಶಿಸುತ್ತಾರೆ. ಇದು ಕನ್ನಡದ ಸಹಜ ಉಚ್ಚಾರಣಾ ನಿಯಮವೇ ಆಗಿದೆ. ಉದಾ.ಗೆ **ಕೌಂಟ್, ಅಂಡ್, ಬೆಂಡ್, ಟೆಂಟ್** ಮುಂತಾದ ಪದಗಳನ್ನು ಕನ್ನಡಿಗರು ಉಚ್ಚರಿಸುವುದನ್ನು ಗಮನಿಸಬಹುದು. ಆದರೆ 'ಲ' ಕಾರದ ಬದಲು 'ಳ' ಕಾರವನ್ನು ಆದೇಶಿಸಿ ಉಚ್ಚರಿಸುವ ಪ್ರಸಂಗಗಳು ವಿನಾಯಿತಿಗಳೇ ಹೊರತು ನಿಯಮಗಳಲ್ಲ. ಉದಾ. ಟೋಳ್ಡ್. ಇದರಿಂದ ಕನ್ನಡ ಧ್ವನಿರಚನೆಯಲ್ಲಿ ಇರುವ 'ಣ' ಕಾರ ಮತ್ತು 'ಳ' ಕಾರಗಳು ತಮ್ಮ ಪ್ರಸಾರವ್ಯಾಪ್ತಿಯಲ್ಲಿ ಬದಲಾವಣೆ ಕಂಡಿವೆ ಎಂದು ವಿವರಿಸುವುದು ಹೆಚ್ಚು ಸೂಕ್ತವೆಂದು ತೋರುತ್ತದೆ.

ಸಾಮಾನ್ಯ ತಿಳುವಳಿಕೆಯಂತೆ ಕನ್ನಡ ಪದಗಳು ಸ್ವರಾಂತ ರಚನೆಯನ್ನು ಹೊಂದಿವೆ. ಇದನ್ನು ಸಮರ್ಥಿಸಲು ಕನ್ನಡ ಭಾಷೆಯ ಚರಿತ್ರೆಯನ್ನು ಉಲ್ಲೇಖಿಸಲಾಗುತ್ತದೆ. ಆದರೆ ಈ ಸ್ವರಾಂತ ಸ್ವರೂಪ ಒಂದು ವಿಶಿಷ್ಟ ಬದಲಾವಣೆಗೆ ಒಳಗಾಗುತ್ತದೆ. ಅನ್ಯಭಾಷೆಯಿಂದ ಕನ್ನಡಕ್ಕೆ ಪಡೆದುಕೊಂಡ ವ್ಯಂಜನಾಂತ ಪದಗಳನ್ನು ಕನ್ನಡವು ಸ್ವರಾಂತ ಮಾಡಿಕೊಂಡಿದೆ. ಹೀಗೆ ಸ್ವರವನ್ನು ಪದಗಳ ಕೊನೆಗೆ ಸೇರಿಸುವಾಗ ಅನುಸರಿಸುವ ನಿಯಮವನ್ನು ಕೂಡಾ ಈಗಾಗಲೇ ಗುರುತಿಸಲಾಗಿದೆ. ಆದರೆ ಹೀಗೆ ಸ್ವರಾಂತ ಮಾಡಿದ ರೂಪಗಳು ಸ್ವತಂತ್ರ ಪದಗಳಾಗಿ ಮಾತ್ರ ಬಳಕೆಯಾಗುತ್ತವೆ. ಉಳಿದಂತೆ ಬೇರೆ ಬೇರೆ ಪ್ರತ್ಯಯಗಳು ಸೇರಿದ್ದಾಗ ಅವು ವ್ಯಂಜನಾಂತವಾಗಿಯೇ ನಿಲ್ಲುತ್ತವೆ. ಅಂದರೆ ಅವುಗಳಿಗೆ ಸೇರಿದ ಕೊನೆಯ ಸ್ವರವು ಪ್ರಕೃತಿಯ ಭಾಗವಾಗಿರುವುದಿಲ್ಲ. ಆದರೆ ಅಂತಸ್ಥ ರೂಪಗಳು ವ್ಯಂಜನಾಂತವಾಗಿಯೇ ಇರುತ್ತವೆ. ಈ ಪ್ರಕ್ರಿಯೆ ಕಳೆದ ಕೆಲವು ದಶಕಗಳಲ್ಲಿ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದೆ. ಇದರಿಂದ ನಿಜವಾಗಿಯೂ ಸ್ವರಾಂತವಾಗುವ ಪದಗಳನ್ನು ಕೂಡಾ ಎಷ್ಟೋ ಕಡೆಗಳಲ್ಲಿ ವ್ಯಂಜನಾಂತವಾಗಿಯೇ ಬಳಸುವುದು ಕಾಣುತ್ತಿದೆ. ಅದರಲ್ಲೂ ವ್ಯಕ್ತಿ ನಾಮ ಮತ್ತು ಸ್ಥಳನಾಮಗಳಲ್ಲಿ ಇದು ಹೆಚ್ಚಾಗಿ ಕಂಡುಬರುವ ಪ್ರವೃತ್ತಿ. 'ಅ'ಕಾರಾಂತವಾಗುವ ವ್ಯಕ್ತಿನಾಮಗಳು ಬಹುಮಟ್ಟಿಗೆ ತಮ್ಮ ಕೊನೆಯ ಸ್ವರಗಳನ್ನು ಕಳೆದುಕೊಂಡು ವ್ಯಂಜನಾಂತವಾಗಿ ನಿಲ್ಲುತ್ತವೆ. ಸಾಮಾನ್ಯವಾಗಿ 'ಇ'ಕಾರಾಂತ ನಾಮಪದಗಳು ಮತ್ತು ಸಜಾತೀಯ ದ್ವಿತ್ವವನ್ನು ಕೊನೆಯ ವ್ಯಂಜನವನ್ನಾಗಿ ಪಡೆದಿರುವ

ನಾಮಪದಗಳು ವ್ಯಂಜನಾಂತವಾಗುವುದಿಲ್ಲ. ಆದರೆ ಸ್ಥಳನಾಮಗಳಲ್ಲಿ ಈ ಕಟ್ಟುಪಾಡನ್ನು ಮೀರಲು ಬೇರೆಬೇರೆ ತಂತ್ರಗಳನ್ನು ಅವಲಂಬಿಸಲಾಗುತ್ತಿದೆ.ಕೆಲವು ನಿದರ್ಶನಗಳನ್ನು ನೋಡೋಣ. 'ಅ'ಕಾರಾಂತ ನಾಮಪದಗಳು ವ್ಯಂಜನಾಂತ ವಾಗುವುದಕ್ಕೆ ರಾಮ / ರಾವ್, ನಾಯಕ / ನಾಯಕ್, ಮನೋಜ / ಮನೋಜ್ 'ಉ'ಕಾರಾಂತ ನಾಮಪದಗಳಿಗೆ ಅಸಂಖ್ಯ ನಿದರ್ಶನಗಳಿವೆ. ಆದರೆ ಮಣಿ, ಮಾಲಿನಿ, ಹರಿಣಿ ಮುಂತಾದ 'ಇ' ಕಾರಾಂತ ನಾಮಪದಗಳು ತಮ್ಮ ಅಂತ್ಯ ಸ್ವರಗಳನ್ನು ಕಳೆದುಕೊಳ್ಳುವುದಿಲ್ಲ. 'ಅ' ಕಾರಾಂತವಾದರೂ ವ್ಯಂಜನಾಂತವಾಗದ ನಾಮಪದ ಪದಗಳಿಗೆ ನಿದರ್ಶನಗಳು ರಾಮಯ್ಯ, ಚಂದ್ರಪ್ಪ, ಅಪ್ಪಯ್ಯ, ರಾಮಕ್ಕ, ಇಂಥವು ಆದರೆ ಸ್ಥಳನಾಮಗಳಲ್ಲಿ ಪಟ್ಟಣ ಎಂದು ಕೊನೆಯಾಗುವ ಊರ ಹೆಸರುಗಳು ಹಿಂದಿನ ವ್ಯಂಜನದ ದ್ವಿತ್ವವನ್ನು ಕಳೆದು ಪಟ್ಟನ್/ಪಟನ್ ಎಂದು ಬದಲಾಗಿ ಬಿಡುತ್ತವೆ.

ಈ ಬದಲಾವಣೆಯನ್ನು ನಾವು ಮಾತಿನ ರೂಪಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ. ಲಿಖಿತರೂಪಗಳು ಸ್ವರಾಂತವಾಗಿದ್ದರೂ ಅವುಗಳನ್ನು ಉಚ್ಚರಿಸುವಾಗ ವ್ಯಂಜನಾಂತ ಮಾಡಿ ಹೇಳುವ ಪ್ರವೃತ್ತಿ ಹೆಚ್ಚಾಗಿದೆ. ಉದಾ.ಗೆ ಮನಮೋಹನ್ ಸಿಂಗ್ ಎಂದು ಬರೆದರೂ ಹೇಳುವುದು ಮಾತ್ರ ಮನ್‌ಮೋಹನ್ ಸಿಂಗ್ ಎಂದೇ. ಈ ವ್ಯಂಜನಾಂತಗೊಳಿಸುವ ಪ್ರಕ್ರಿಯೆಯ ಹಿಂದೆ ಭಾಷಿಕವಾದ ಒತ್ತಡಗಳಿರುವಂತೆಯೇ ಸಾಮಾಜಿಕವಾದ ನಿರೀಕ್ಷೆಗಳೂ ಕೆಲಸಮಾಡುತ್ತಿವೆ. ಈ ಹಿಂದೆ ಹೇಳಿದಂತೆ ವ್ಯಕ್ತಿಯು ಆಧುನಿಕಗೊಂಡ ಗುರುತಾಗಿ ಇಂತಹ ಉಚ್ಚಾರಣಾ ವ್ಯತ್ಯಾಸಗಳನ್ನು ಮಾಡಿಕೊಳ್ಳುವುದು ಅಗತ್ಯವಾಗಿ ಬಿಟ್ಟಿದೆ. ಕನ್ನಡದಲ್ಲಿ ವ್ಯಾಪಕವಾಗಿ ಆವರಿಸುತ್ತಿರುವ ಈ ಧ್ವನಿತಂತ್ರದ ಸ್ವರೂಪವನ್ನು, ಅದರ ಸಾಮಾಜಿಕ ಆಯಾಮಗಳನ್ನು ಅಭ್ಯಾಸ ಮಾಡಬೇಕಾಗಿದೆ.

ಈ ವ್ಯಂಜನಾಂತಗೊಳಿಸುವ ಪ್ರಕ್ರಿಯೆ ಭಾಷಿಕವಾದ ಒತ್ತಡದಿಂದಲೂ ಬಳಕೆಗೆ ಬಂದಿದೆ ಎಂದೆವು. ಅಂತಸ್ಥ ರೂಪಗಳು ವ್ಯಂಜನಾಂತವಾಗಿರುವುದು ಒಂದು ಮುಖ್ಯ ಕಾರಣ. ಎರಡನೆಯದಾಗಿ ಕನ್ನಡ ಭಾಷೆಯ ಉಚ್ಚಾರಣಾ ಲಯದ ಕೆಲವು ಶರತ್ತುಗಳು ಈ ಬಗೆಯ ಪರಿವರ್ತನೆಯನ್ನು ಬಯಸುತ್ತವೆ. ಈ ಲಯದ ನಿರೀಕ್ಷೆಗಳನ್ನು ಸ್ಥೂಲವಾಗಿ ಹೀಗೆ ವಿವರಿಸಬಹುದು. ವ್ಯಕ್ತಿಯ ಹೆಸರಿನಲ್ಲಿ ನಾಲ್ಕಕ್ಕಿಂತ ಹೆಚ್ಚು ಸ್ವರಗಳನ್ನು ಉಚ್ಚಾರಣೆಯಲ್ಲಿ ಉಳಿಸಿಕೊಳ್ಳುವುದಿಲ್ಲ. ಅದಕ್ಕಿಂತ ಕಡಿಮೆ ಆಗುವುದೇ ಹೆಚ್ಚು. ನಾಲ್ಕು ಸ್ವರಗಳಿದ್ದರೆ, ಅವುಗಳನ್ನು ಎರಡೆರಡು ಸ್ವರಗಳ ಎರಡು ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ಇದೇ ನಿಯಮ, ಸ್ಥಳನಾಮಗಳು ಮತ್ತು ಬೀದಿಯ ಹೆಸರುಗಳು ಇವೆಲ್ಲಕ್ಕೂ ಅನ್ವಯವಾಗುತ್ತದೆ. ಕನ್ನಡದ ಉಚ್ಚಾರಣೆಯ ಈ ಲಯಗಾರಿಕೆ, ವಿನಾಯಿತಿಗಳು ಇಲ್ಲ ಎನ್ನುವಷ್ಟು ಬಲವಾಗಿ ಜಾರಿಗೊಳ್ಳುತ್ತಿದೆ.

ಈ ಉಚ್ಚಾರಣೆಯ ಲಯವನ್ನು ಗುರುತಿಸಲು ಕೆಲವು ನಿದರ್ಶನಗಳನ್ನು ನೋಡಬಹುದು. ವ್ಯಕ್ತಿಯ ಹೆಸರುಗಳಲ್ಲಿ ಒಂದೇ ಪದವಿದ್ದರೆ ಸಾಮಾನ್ಯವಾಗಿ ಅದನ್ನು ವ್ಯಂಜನಾಂತ ಮಾಡುವ ಪ್ರವೃತ್ತಿ ಇದೆ. ಹೀಗೆ ವ್ಯಂಜನಾಂತ ಮಾಡದಿದ್ದಲ್ಲೂ ನಿರ್ಬಂಧ ವಿಧಿಸುವ ಪರಿಸರಗಳೆಂದರೆ ಒಂದು: 'ಇ'ಕಾರಾಂತ ಪದಗಳು, ಎರಡು: ಅಂತ್ಯ ವ್ಯಂಜನವು ಸಜಾತೀಯ

ಅಥವಾ ವಿಜಾತೀಯ ದ್ವಿತ್ವದಿಂದ ಕೂಡಿರುವುದು. ಉಳಿದಂತೆ ಹೆಸರುಗಳಲ್ಲಿ ಎರಡು ಭಾಗಗಳಿದ್ದರೆ ಅವುಗಳನ್ನು ಸಮಾನ ಉಚ್ಚಾರಣಾಘಟಕಗಳನ್ನಾಗಿ ವಿಂಗಡಿಸಲಾಗುವುದು. ಈ ಎರಡು ಘಟಕಗಳಲ್ಲಿ ಸಾಮಾನ್ಯವಾಗಿ ಎರಡು ಸ್ವರಗಳು (ಅಂದರೆ ಅಕ್ಷರಗಳು) ಇರುವಂತೆ ನೋಡಿಕೊಳ್ಳಲಾಗುತ್ತದೆ. ಎರಡಕ್ಕಿಂತ ಹೆಚ್ಚು ಸ್ವರಗಳು ಒಂದು ಘಟಕದಲ್ಲಿ ಬಂದರೆ ಅಲ್ಲಿ ಹೆಸರನ್ನೇ ಹ್ರಸ್ವಗೊಳಿಸುವ ವಿಧಾನವನ್ನು ಅನುಸರಿಸಲಾಗುತ್ತದೆ.

ಇದೇ ನಿಯಮ ಬಹುಮಟ್ಟಿಗೆ ಊರ ಹೆಸರು ಮತ್ತು ಬೀದಿಯ ಮತ್ತು ಬಡಾವಣೆಯ ಹೆಸರುಗಳಿಗೂ ಅನ್ವಯಿಸುತ್ತದೆ. ಕನ್ನಡ ಮಾತಿನ ಈ ಲಯಗಾರಿಕೆ ಕಳೆದ ಕೆಲವು ದಶಕಗಳ ಅವಿಷ್ಕಾರವೆಂದು ತೋರುತ್ತದೆ. ಹೀಗಾಗಿ ಹೆಸರುಗಳನ್ನು ಈ ಲಯಕ್ಕನುಗುಣವಾಗಿ ಪರಿವರ್ತಿಸುವ ಈ ಪ್ರವೃತ್ತಿ ಈಚಿನ ವರ್ಷಗಳಲ್ಲಿ ಗಾಢವಾಗಿದೆ. ಈ ಪ್ರವೃತ್ತಿಯನ್ನು ಪರಿಗಣಿಸದೆ ಇಟ್ಟ ಹೆಸರುಗಳೆಲ್ಲ ತಮ್ಮ ಮೂಲ ರೂಪವನ್ನು ಕಳೆದುಕೊಂಡು ಚಿಕ್ಕ ರೂಪಗಳಲ್ಲಿ ಉಳಿದುಕೊಳ್ಳುತ್ತವೆ. ಈ ಲಯದ ಬಳಕೆ ಒಂದು ಅಲಿಖಿತ ನಿಯಮ. ಇದನ್ನು ಯಾರೂ ನಿರ್ದೇಶನದ ಮೂಲಕ ಕನ್ನಡಿಗರ ಮೇಲೆ ಒತ್ತಾಯಪೂರ್ವಕವಾಗಿ ಹೇರಿಲ್ಲ.

ಕನ್ನಡದ ಪದಗಳ ಅಂತಸ್ಥ ರೂಪವು ಹೀಗೆ ವ್ಯಂಜನಾಂತವಾಗುತ್ತಿರುವ ಪ್ರಕ್ರಿಯೆ ಒಂದು ಮೂಲಭೂತ ಭಾಷಿಕ ಬದಲಾವಣೆಗೆ ಕಾರಣವಾಗಿದೆ. ಹಳೆಗನ್ನಡದ ಅಕ್ಷರ ರಚನೆ ನಡುಗನ್ನಡದಲ್ಲಿ ಬದಲಾಗುತ್ತದೆ. ಬಹುಮಟ್ಟಿಗೆ ನಡುಗನ್ನಡದ ಅಕ್ಷರಗಳು ವಿವೃತ ಮಾದರಿಯವು. ತೀರಾ ಹೆಚ್ಚೆಂದರೆ ಪದಾದಿಯಲ್ಲಿ ಒಂದು ಸಂವೃತ ಅಕ್ಷರ ಬರುತ್ತದೆ. ಆ ಸಂವೃತ ಅಕ್ಷರದಲ್ಲೂ ಕೇಂದ್ರದ ಅನಂತರ ಬರುವ ವ್ಯಂಜನ ಯಾವುದಾಗಬೇಕು ಎಂಬ ಬಗೆಗೆ ನಿಯಮಗಳಿವೆ. ಆದ್ದರಿಂದಲೇ ನಡುಗನ್ನಡದಲ್ಲಿ ರಕುತ, ಭಕುತಿ, ಮುಕುತಿ, ಸೂರಿಯ ಮುಂತಾದ ಪದರೂಪಗಳು ಅಗಾಧ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಹೊಸಗನ್ನಡದಲ್ಲಿ ಈ ರೂಪಗಳು ಗ್ರಹಿಕೆಯ ನೆಲೆಯಲ್ಲಿ ಮಾತ್ರ ಉಳಿದು ಬಳಕೆಯ ನೆಲೆಯಲ್ಲಿ ಮೂಲರೂಪಗಳನ್ನೇ ನಾವು ಆಶ್ರಯಿಸುತ್ತಿದ್ದೇವೆ. ಅಂದರೆ ಸಂವೃತಾಕ್ಷರಗಳಲ್ಲಿ ಹೆಚ್ಚಿನ ಸಾಧ್ಯತೆಗಳನ್ನು ಒಪ್ಪಿಕೊಳ್ಳುತ್ತಿದ್ದೇವೆ. ಕನ್ನಡದ ಆಡುಮಾತಿನ ರೂಪಗಳು ಮತ್ತು ಬರಹದ ರೂಪಗಳು ಬೇರೆ ಬೇರೆಯ ರೀತಿಯಲ್ಲಿ ಇದ್ದರೂ ಎರಡೂ ಕಡೆ ವಿವೃತಾಕ್ಷರದ ರಚನೆಗಳೇ ಬೇಕೆಂಬ ಒತ್ತಾಯವಿಲ್ಲ. ಇದು ಕನ್ನಡದಲ್ಲಿ ಆಗಿರುವ ಧ್ವನಿತಂತ್ರ ನೆಲೆಯ ಬಹುಪ್ರಮುಖ ಬದಲಾವಣೆ. ಈ ಹಿಂದೆ ಹೇಳಿದ ವ್ಯಂಜನಾಂತಗೊಳಿಸುವ ಪ್ರವೃತ್ತಿಯಲ್ಲೂ ಈ ಅಕ್ಷರರಚನೆಯ ಬದಲಾವಣೆಯೇ ಕೆಲಸ ಮಾಡುತ್ತಿದೆ.

ಈ ಹಿಂದೆ ಉಲ್ಲೇಖಿಸಿದಂತೆ ೧೯೫೫ರಲ್ಲಿ ವಿಲಿಯಂ ಬ್ರೈಟ್ ಅವರು ಪೂನಾದ ಡೆಕನ್ ಕಾಲೇಜಿನಿಂದ ಕನ್ನಡದ ಆಡುಮಾತಿನ ಲಕ್ಷಣಗಳನ್ನು ನಿರೂಪಿಸುವ ಪುಸ್ತಿಕೆಯೊಂದನ್ನು ಪ್ರಕಟಿಸಿದರು. ಆಡುಮಾತಿನಲ್ಲಿ ಬರಹದ ರೂಪವನ್ನು ಬದಲಾಯಿಸಿಕೊಳ್ಳುವ ಪ್ರವೃತ್ತಿ ಮತ್ತು ಅದರ ಹಿಂದಿರುವ ನಿಯಮಗಳ ಬಗೆಗೆ ಅಲ್ಲಿ ಚರ್ಚಿಸಿದ್ದಾರೆ. ಈಗಲೂ ಈ ವ್ಯತ್ಯಾಸಗಳು ಬೇರೆ ಬೇರೆ ಪ್ರಮಾಣದಲ್ಲಿ ಜಾರಿಯಲ್ಲಿವೆ.

ಮುಖ್ಯವಾದ ಒಂದು ನಿಯಮವನ್ನು ನಾವಿಲ್ಲಿ ಪರಿಶೀಲಿಸೋಣ. ಪದದ ಎರಡನೆಯ ಸ್ವರವನ್ನು ಉಚ್ಚಾರಣೆಯಲ್ಲಿ ಬಿಟ್ಟುಬಿಡುವ ಪ್ರವೃತ್ತಿ ಇದೆ. ಆದರೆ ಪದದಲ್ಲಿ ಎರಡೇ ಸ್ವರಗಳಿದ್ದರೆ ಅಥವಾ ಮೂರನೇ ಸ್ವರವು ಪ್ರತ್ಯಯದ ಭಾಗವಾಗಿದ್ದರೆ, ಅಥವಾ ಇನ್ನೊಂದು ಪದಕ್ಕೆ ಸೇರಿದ ಭಾಗವಾಗಿದ್ದರೆ ಅಲ್ಲಿ ಈ ಸ್ವರವನ್ನು ಬಿಟ್ಟುಬಿಡುವ ಸಾಧ್ಯತೆ ಇಲ್ಲ. ಉದಾ.ಗೆ ಬೆರಳು–ಬೆಳ್ಳು, ಬಳಪ–ಬಳ್ಪ, ಕರಡಿ–ಕರ್ಡಿ ಈ ರೀತಿ ಆಗಬಹುದು. ಆದರೆ ಮನೆ, ತಲೆ ಇಂಥ ಕಡೆಗಳಲ್ಲಿ ಎರಡನೆಯ ಸ್ವರ ಹಾಗೆಯೇ ಉಳಿಯುತ್ತದೆ. ಇದಲ್ಲದೆ ಈ ನಿಯಮಕ್ಕೆ ಇನ್ನೂ ಕೆಲವು ಶರತ್ತುಗಳಿವೆ. ಉದಾ.ಗೆ ಮೊದಲನೆಯ ಸ್ವರ ದೀರ್ಘವಾಗಿದ್ದರೆ ಆಗ ಈ ನಿಯಮದ ಬಳಕೆಗೆ ಬೇರೆಯೇ ಶರತ್ತುಗಳಿವೆ. ನಮಗಿಲ್ಲಿ ಮುಖ್ಯವಾದುದು ಏನೆಂದರೆ ಹೀಗೆ ಸ್ವರಲೋಪ ಮಾಡುವುದರಿಂದ ಕನ್ನಡದ ಪದಾದಿಯ ತೆರೆದ ಅಕ್ಷರವು ಮುಚ್ಚಿದ ಅಕ್ಷರವಾಗಿ ಬದಲಾಗುತ್ತದೆ ಎಂಬುದು. ಈ ಬಗೆಯ ಹಲವು ನಿದರ್ಶನಗಳಿಂದ ಹೊಸಗನ್ನಡವು ಅಳವಡಿಸಿಕೊಂಡಿರುವ ಅಕ್ಷರ ರಚನೆಯು ನಡುಗನ್ನಡಕ್ಕಿಂತ ಬೇರೆ ಎನ್ನುವುದು ಗೊತ್ತಾಗುತ್ತದೆ. ಹೊಸಗನ್ನಡದ ಈ ಲಕ್ಷಣವು ಕಳೆದ ಐವತ್ತು ವರ್ಷಗಳಲ್ಲಿ ಬಲವಾಗಿ ಬೇರನ್ನು ಬಿಟ್ಟಿದೆ.

ಕನ್ನಡದ ಪ್ರಮಾಣಭಾಷೆಯೊಂದು ಬರಹದಲ್ಲಿ ಮಾಧ್ಯಮಗಳ ಮತ್ತು ಮಾತಿನಲ್ಲಿ ಬಳಕೆಯಲ್ಲಿದೆ. ಇದರ ಉಚ್ಚಾರಣೆ ಮತ್ತು ಉತ್ಪಾದನೆಗಳೆರಡೂ ಕನ್ನಡ ಮಾತಾಡುವವರಿಗೆ ಒಂದು ಆಧುನಿಕತೆಯ ಗುರುತನ್ನು ನೀಡುತ್ತದೆ. ಆದರೆ ಕನ್ನಡದ ಹಲವು ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆಗಳಲ್ಲಿ ಪ್ರಮಾಣ ಭಾಷೆಯಲ್ಲಿ ಇಲ್ಲದ ಧ್ವನಿರಚನೆಯೂ ಇಲ್ಲಿ ಕಂಡುಬರುತ್ತದೆ. ಸ್ವರ ಮತ್ತು ವ್ಯಂಜನಗಳೆರಡರಲ್ಲೂ ಈ ವ್ಯತ್ಯಾಸಗಳು ನೆಲೆಯೂರಿದೆ. ಪ್ರಮಾಣಭಾಷೆಯ ಲಿಖಿತ ಮತ್ತು ಬರೆಹ ನೆಲೆಯ ಧ್ವನಿರಚನೆಯ ಆಚೆಗೆ ಕನ್ನಡದ ಉಪಭಾಷೆಗಳ ಧ್ವನಿರಚನೆ ಕಳೆದ ಐವತ್ತು ವರ್ಷಗಳಲ್ಲಿ ಕನ್ನಡಿಗರ ಕಿವಿಯ ಮೇಲೆ ಬೀಳ ತೊಡಗಿದೆ. ಈ ಭಿನ್ನಧ್ವನಿಗಳು, ಧ್ವನಿಸಂಯೋಜನೆಗಳು, ಧ್ವನಿತಂತ್ರಗಳು ಇವೆಲ್ಲವೂ ಕನ್ನಡಿಗರ ಉಚ್ಚಾರಣೆಯ ಭಾಗವಾಗದಿದ್ದರೂ ಗ್ರಹಿಕೆಯ ಭಾಗವಾಗಿವೆ. ಅಂದರೆ ಆ ಧ್ವನಿಗಳನ್ನು ಕೇಳಿದಾಗ ಅವು ಭಿನ್ನ ಎಂದು ತೋರಿದ್ದರೂ ತಮ್ಮ ತಮ್ಮಲ್ಲಿ ನೆಲೆಗೊಂಡ ಧ್ವನಿವ್ಯವಸ್ಥೆಗೆ ಹೊಂದಿಸಿಕೊಳ್ಳುವ ಕೆಲಸವನ್ನು ಕನ್ನಡಿಗರು ಮಾಡುತ್ತಿದ್ದಾರೆ. ಇದು ಶಿಕ್ಷಿತರಲ್ಲಿ ಹೆಚ್ಚು ಪ್ರಮಾಣದಲ್ಲಿ ಕಂಡು ಬಂದರೂ ಸಾಮಾಜಿಕ ಚಲನಶೀಲತೆಯುಳ್ಳ ಪ್ರತಿಯೊಬ್ಬರಲ್ಲೂ ಈ ಸಾಧ್ಯತೆ ಕಾಣತೊಡಗಿದೆ. ಉದಾ.ಗೆ ಕರ್ನಾಟಕದ ವಾಯುವ್ಯ ಭಾಗದ ಒಂದು ನಿರ್ದಿಷ್ಟ ಭೂಪ್ರದೇಶದಲ್ಲಿ ತಾಲವ್ಯ ಅನುಘರ್ಷಧ್ವನಿಯು ಅದರ ಘೋಷ ಮತ್ತು ಅಘೋಷ ರೂಪದಲ್ಲಿ ಬಳಕೆಯಲ್ಲಿದೆ. ಸಾಮಾನ್ಯವಾಗಿ 'ತ' ಮತ್ತು 'ಸ' ಗಳ ಮಿಶ್ರಣದಂತೆ ಕೇಳುವ ಈ ಧ್ವನಿಯನ್ನು ಸಮಾನ ಸ್ಥಾನೀಯವಾದ ತಾಲವ್ಯ ಸ್ಪರ್ಶದ ದ್ವಿತ್ವವನ್ನಾಗಿ ಉಳಿದ ಭೂಪ್ರದೇಶದ ಜನರು ಕೇಳಿಸಿಕೊಳ್ಳುತ್ತಾರೆ. ಹಾಗೆಯೇ ಕರಾವಳಿಯ ದಕ್ಷಿಣ ಭಾಗದ ಕನ್ನಡಿಗರ ಸ್ವರಗಳಲ್ಲಿ ಅವನತ ಮಧ್ಯ(ಪೂರ್ವ ಮತ್ತು ಪಶ್ಚ ಎರಡೂ ಕಡೆಗಳಲ್ಲಿ) ರೂಪಗಳು ಬಳಕೆಯಲ್ಲಿವೆ. ಇವುಗಳಲ್ಲಿ ಒಂದು ಪ್ರಮಾಣಕನ್ನಡದ 'ಏ' ಕಾರಕ್ಕಿಂತ, ನಾಲಿಗೆ ಕೊಂಚ ಕೆಳಗೆ ಇರುವಾಗ ಉಚ್ಚಾರವಾಗುವ ಸ್ವರ. ಆ ಪ್ರದೇಶದ ಕನ್ನಡದಲ್ಲಿ ಇಂಗ್ಲಿಶಿನ ಆಯಿಲ್, ಆಕ್ಸೈಡ್ ಮುಂತಾದ ಪದಗಳನ್ನು

ಕೇಳಿಸಿಕೊಂಡಾಗ ಈ ಧ್ವನಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ಉಳಿದ ಭೂ ಪ್ರದೇಶದ ಕನ್ನಡಿಗರು ತಮಗೆ ಪರಿಚಿತವಿರುವ ಸ್ವರದೊಡನೆ ಅದನ್ನು ಸಮೀಕರಿಸಿಕೊಳ್ಳುತ್ತಾರೆ. ಈ ವಿವರಣೆಯ ಉದ್ದೇಶವಿಷ್ಟೆ. ಕನ್ನಡಿಗರು ಹಲವು ಉಪಭಾಷೆಗಳ ಧ್ವನಿರಚನೆಯನ್ನು ತಮ್ಮ ಕನ್ನಡ ಬಳಕೆಯಲ್ಲಿ ಅನುಸರಿಸದಿದ್ದರೂ ಕನ್ನಡ ಗ್ರಹಿಕೆಯಲ್ಲಿ ಆ ಧ್ವನಿಗಳು ನೆಲೆಯೂರಿವೆ ಎನ್ನುವುದನ್ನು ಗಮನಿಸುವುದು.

ಕನ್ನಡ ಮಾತಾಡುವವರು ಹೀಗೆ ಬೇರೆ ಉಪಭಾಷೆಗಳ ಧ್ವನಿರಚನೆಯ ವಿಕಲ್ಪಗಳನ್ನು ಬಳಸದಿದ್ದರೂ ಒಪ್ಪಿಕೊಂಡಿದ್ದಾರೆ ಎಂಬುದನ್ನು ಸಮರ್ಥಿಸುವುದು ಹೇಗೆ? ಇದಕ್ಕೆ ಪುರಾವೆಗಳೇನು? ಇದು ಬಳಸು ಮಾರ್ಗದಿಂದ ಗೊತ್ತು ಮಾಡಬೇಕಾದ ಸಂಗತಿ. ತಮ್ಮದಲ್ಲದ ಉಪಭಾಷೆಯೊಂದನ್ನು ಆಡಲು ಮನಸ್ಸು ಮಾಡಿದಾಗ ಆ ಉಪಭಾಷೆಯ ವಿಲಕ್ಷಣ ಅಂಶಗಳನ್ನು ಈ ಬೇರೆ ಕನ್ನಡ ಮಾತಾಡುವವರು ಅನುಕರಿಸುತ್ತಾರೆ. ಇದು ನಗೆಯುಕ್ಕಿಸುವ ಸಂದರ್ಭಕ್ಕಾಗಿ ನಡೆಯುವ ಪ್ರಕ್ರಿಯೆಯೇ ಆದರೂ ಹೀಗೆ ಮಾಡುವವರಿಗೆ ಇನ್ನೊಂದು ಉಪಭಾಷೆಯ ಧ್ವನಿರಚನೆಯ ಪರಿಚಯವಿರುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಕನ್ನಡದ ಉಪಭಾಷೆಗಳ ಮಟ್ಟಿಗೆ ಇದೊಂದು ಸ್ವಾಗತಾರ್ಹ ಬೆಳವಣಿಗೆ. ಪದರಚನೆಯ ಹಂತದಲ್ಲೂ ಈ ಅಂಶ ಮತ್ತೆ ಕಾಣಿಸಿಕೊಳ್ಳಲಿದೆ.

ಕನ್ನಡ ಚಳುವಳಿಗಳು

ಚಳುವಳಿ ಹೋರಾಟ ಮುಂತಾದ ಪದಗಳು ಯಾವ ಅರ್ಥವನ್ನೇ ಸೂಚಿಸಲಿ, ಅವು ಸಾಮಾಜಿಕವಾಗಿ ಅಸ್ತಿತ್ವ ಪಡೆದುಕೊಳ್ಳಲು ಕಾರಣವಾಗುವ ಸಂದರ್ಭಗಳನ್ನು ಗಮನಿಸಿದರೆ ಒಂದು ನಿರ್ದಿಷ್ಟ ಸಾಮಾಜಿಕ ಚಹರೆಗೆ ಆಘಾತಕಾರಿಯಾದ ಸನ್ನಿವೇಶಗಳು ಮೂಡಿದ್ದು, ಅದರ ನಿವಾರಣೆಗೆ, ಅದರ ಪರಿಹಾರಕ್ಕೆ ಈ ಚಳುವಳಿಗಳು ಕಾರ್ಯಪ್ರವೃತವಾಗಿರುತ್ತವೆ. ಏಕೀಕರಣದ ಅನಂತರದಲ್ಲಿ ನಡೆದ ಕನ್ನಡಪರ ಚಳುವಳಿಗಳನ್ನು ಮತ್ತು ಅವುಗಳ ತಾತ್ವಿಕ ಚೌಕಟ್ಟನ್ನು ವಿಶ್ಲೇಷಿಸುವುದು ಈ ಅಧ್ಯಾಯದ ಗುರಿ.

ಹಾಗೆ ನೋಡಿದರೆ ಕೆಲವರು ಗ್ರಹಿಸುವಂತೆ ಏಕೀಕರಣವೆಂಬುದೇ ನಿಡುಗಾಲದ ಚಳುವಳಿಯ ಫಲಿತಾಂಶ. ಆದರೆ ನಾವೀಗಾಗಲೇ ಗಮನಿಸಿರುವಂತೆ ರಾಜ್ಯ ಪುನರ್ವಿಂಗಡನೆಯಿಂದಾದ ಏಕೀಕರಣ ಅಥವಾ ಕರ್ನಾಟಕ ರಾಜ್ಯ ನಿರ್ಮಾಣ, ಏಕೀಕರಣದ ಪರವಾಗಿದ್ದ ಚಳುವಳಿಯ ಫಲಿತ ಎನ್ನುವುದಕ್ಕಿಂತ ಅದೊಂದು ರಾಜಕೀಯ ನಿರ್ಧಾರದ ಪರಿಣಾಮವೇ ಆಗಿದೆ. ಅದರರ್ಥ ಈ ಚಳುವಳಿಯ ಪಾತ್ರವೇನೂ ಇಲ್ಲವೆಂದಲ್ಲ. ಆಡಳಿತವರ್ಗ ತನ್ನ ಅಪೇಕ್ಷಿತ ನಿರ್ಧಾರಗಳನ್ನು, ನಿರ್ಣಯಗಳನ್ನು ಜಾರಿಗೆ ಕೊಡುವಾಗ ತನ್ನ ಸಮರ್ಥನೆಗಾಗಿ ಇಂತಹ ಚಳುವಳಿಗಳನ್ನು ಬಳಸಿಕೊಳ್ಳುತ್ತದೆ. ಕಳೆದ ಐವತ್ತು ವರ್ಷಗಳಲ್ಲಿ ಇಂತಹ ಪ್ರಸಂಗಗಳನ್ನು ನಾವು ಗಮನಿಸಬಹುದು. 1956ಕ್ಕೆ ಮೊದಲೇ ಮದ್ರಾಸ್ ಪ್ರಾಂತ್ಯದಿಂದ ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಚಳುವಳಿಯೊಂದು ನಡೆಯುತ್ತಿತ್ತು. ಆಗಿನ ದಾಖಲೆಗಳನ್ನು ಪರಿಶೀಲಿಸಿದರೆ ಬಳ್ಳಾರಿ ಜಿಲ್ಲೆಯಲ್ಲೇ ಈ ಭೂಭಾಗವನ್ನು ಆಂಧ್ರಪ್ರದೇಶಕ್ಕೆ (ಆಗಿನ್ನೂ ಅದು ನಿರ್ಮಾಣವಾಗದಿದ್ದರೂ) ಸೇರಿಸಬೇಕು ಎಂದು ಒತ್ತಾಯ ಮಾಡುವ ಚಳುವಳಿಯೂ ನಡೆಯುತ್ತಿತ್ತು. ಈ ಎರಡು ಒತ್ತಾಯಗಳಲ್ಲಿ ಸೀಡೆಡ್ ಜಿಲ್ಲೆಗಳಲ್ಲಿ ಒಂದಾಗಿದ್ದ ಬಳ್ಳಾರಿಯನ್ನು ಕರ್ನಾಟಕಕ್ಕೆ, ಅಂದರೆ ಅಂದಿನ ಹಳೆಯ ಮೈಸೂರಿಗೆ ಸೇರಿಸಿ, ಅನಂತಪುರ ಕರ್ನೂಲುಗಳನ್ನು ಹೈದ್ರಾಬಾದ್ ಪ್ರಾಂತ್ಯದಲ್ಲಿ ಸೇರಿಸಲಾಯಿತು. ಈ ನಿರ್ಣಯದಿಂದ ಕರ್ನಾಟಕಕ್ಕೆ ನ್ಯಾಯ ದೊರಕಿಲ್ಲ ಎಂಬ ಮಾತು ಈಗ ತೀವ್ರತೆಯನ್ನು ಕಳೆದುಕೊಂಡಿದ್ದರೂ ಒಂದು ಹಂತದಲ್ಲಿ ಕನ್ನಡಪರ ಚಳುವಳಿಗಳ ಕಾರ್ಯಸೂಚಿಯಲ್ಲಿ ಆಂಧ್ರಕ್ಕೆ ಸೇರಿದ ಕನ್ನಡ ಪ್ರದೇಶಗಳು ಮರಳಿ ಕರ್ನಾಟಕ್ಕೆ ಸೇರಬೇಕೆಂಬ ಕೂಗು ಸೇರಿತ್ತು. ಈ ವಿವರಣೆ ಇಲ್ಲಿ ಅಗತ್ಯ. ಏಕೆಂದರೆ ಕನ್ನಡ ಪರ ಚಳುವಳಿ ಎಂದರೆ ಅದು ಭೌಗೋಳಿಕ ನೆಲೆಯಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುವ ಚಳುವಳಿಯಾಗಿಯೇ ಮೊದಲು ಮೈದಳೆದದ್ದು ಇದರಿಂದ ಗೊತ್ತಾಗುತ್ತದೆ.

ಕನ್ನಡವೆಂಬುದು ದೇಶ, ಜನ ಮತ್ತು ಭಾಷೆ ಹೀಗೆ ಮೂರು ಸಂಗತಿಗಳನ್ನು ಪ್ರತಿನಿಧಿಸುತ್ತದೆ. ದೇಶವಾಚಿಯಾಗಿದ್ದಾಗ ಕರ್ನಾಟಕವನ್ನು, ಜನವಾಚಿಯಾದಾಗ ಕನ್ನಡ ನಾಡಿನಲ್ಲಿ ವಾಸಿಸುವವರನ್ನು ಭಾಷಾವಾಚಿಯಾದ್ದಾಗ ಕನ್ನಡ ಮಾತಾಡುವವರನ್ನು ಸೂಚಿಸುತ್ತದೆ. ಕನ್ನಡಪರ ಚಳುವಳಿಗಳು ಈ ಮೂರರಲ್ಲಿ ಯಾವುದೇ ಒಂದನ್ನು ತಮ್ಮ ಮುಖ್ಯ ಗುರಿ ಎಂದು ಹೇಳುತ್ತಿದ್ದರೂ ಉಳಿದೆರಡೂ ಒಂದಲ್ಲೊಂದು ರೀತಿಯಲ್ಲಿ ಸಂಬಂಧವನ್ನು ಪಡೆದುಕೊಂಡೇ ಬಿಟ್ಟಿರುತ್ತವೆ. ಈ ಚಳುವಳಿಗಳನ್ನು ವಿಶ್ಲೇಷಿಸುವಾಗ ಈ ಬೆರೆಯುವಿಕೆಯನ್ನು ಗಮನಿಸುವುದು ಅಗತ್ಯ.

1956ರ ಏಕೀಕರಣ ಘಟನೆಯು ಕನ್ನಡಿಗರನ್ನು ತಮ್ಮ ಬಹುಕಾಲದ ಆಸೆ ಪೂರೈಸಿತೆಂಬ ಉದ್ದೇಶ ಈಡೇರಿದ ಸಂತೃಪ್ತ ಭಾವನೆಯಲ್ಲಿ ಉಳಿಸಲಿಲ್ಲ. ಅಲ್ಲಿಂದ ಮೊದಲಾಗಿ ಈ ಐವತ್ತು ವರ್ಷಗಳಲ್ಲಿ ಒಂದಿಲ್ಲೊಂದು ಬಗೆಯ ಕನ್ನಡ ಪರ ಹೋರಾಟಗಳು ರಾಜ್ಯವ್ಯಾಪ್ತಿಯಾಗಿ ಇಲ್ಲವೇ ಪ್ರದೇಶವ್ಯಾಪ್ತಿಯಾಗಿ ನಡೆಯುತ್ತಲೇ ಬಂದಿವೆ. ಈ ಎಲ್ಲ ಚಳುವಳಿಗಳ ಪ್ರತ್ಯೇಕ ಸಮೀಕ್ಷೆ ಇಲ್ಲಿನ ಗುರಿಯಲ್ಲ. ಅವುಗಳ ತಾತ್ವಿಕತೆ, ಕಾರ್ಯವಿಧಾನ ಮತ್ತು ಸಮಾಜೋ-ಭಾಷಿಕ ಆಯಾಮಗಳನ್ನು ಮಾತ್ರ ಇಲ್ಲಿ ಗಮನಿಸಲಾಗುತ್ತದೆ. ಐವತ್ತಾರರ ಸುಮಾರಿನಲ್ಲೇ ಕನ್ನಡ ಚಳುವಳಿ ಎಂಬ ಹೋರಾಟರಂಗ ಬೆಂಗಳೂರಿನಲ್ಲಿ ಕಾರ್ಯಾರಂಭಮಾಡಿತ್ತು. ಪ್ರಗತಿಶೀಲ ಸಾಹಿತ್ಯ ವಲಯದಲ್ಲಿ ಕ್ರಿಯಾಶೀಲರಾಗಿದ್ದ ಹಲವು ಬರೆಹಗಾರರು, ಸಾಮಾಜಿಕ ಕಾರ್ಯಕರ್ತರು ಈ ಚಳುವಳಿಯಲ್ಲಿ ಭಾಗಿಗಳಾಗಿದ್ದರು. ಕನ್ನಡಕ್ಕೆ ಅನ್ಯಾಯವಾಗದಂತೆ ಹೋರಾಡುವುದು ಈ ಚಳುವಳಿಯ ಮುಖ್ಯಗುರಿ. ಅವರ ಹೋರಾಟದ ಕೆಲವು ನೆಲೆಗಳನ್ನು ನೋಡೋಣ. ಈ ಚಳುವಳಿಯ ನೇತಾರರಲ್ಲಿ ಒಬ್ಬರಾಗಿದ್ದ ಖ್ಯಾತ ಕನ್ನಡ ಕಾದಂಬರಿಕಾರ ಅನಕೃ ಅವರು ಬೆಂಗಳೂರಿನ ಕೋಟೆ ಮೈದಾನದ ಶ್ರೀರಾಮೋತ್ಸವದ ಸಂಗೀತ ಕಛೇರಿಗಳಲ್ಲಿ ತಮ್ಮ ಪ್ರತಿಭಟನೆಗಳನ್ನು ನಡೆಸುತ್ತಿದ್ದರು. ಎರಡು ಮುಖ್ಯ ಬೇಡಿಕೆಗಳು ಅಲ್ಲಿ ಇದ್ದಂತೆ ತೋರುತ್ತವೆ. ಒಂದು: ಹೀಗೆ ಕರ್ನಾಟಕದ ರಾಜಧಾನಿಯಲ್ಲಿ ಸನ್ಮಾನಿತರಾಗಿ ಸಂಗೀತ ಕಛೇರಿಗಳನ್ನು ನಡೆಸುವ ಅವಕಾಶ ಕನ್ನಡ ಸಂಗೀತಗಾರರಿಗೆ ಸಿಗಬೇಕು. ಎರಡು: ಅನ್ಯಭಾಷೆಯ ಸಂಗೀತಗಾರರು ತಮ್ಮ ಕಛೇರಿಗಳಲ್ಲಿ ಕನ್ನಡ ಕೃತಿಗಳನ್ನು ಪ್ರಸ್ತುತ ಪಡಿಸಬೇಕು ಎಂಬುದು. ಈ ಬೇಡಿಕೆಗಳನ್ನು ಇಟ್ಟುಕೊಂಡು ಎಷ್ಟೋ ಕಛೇರಿಗಳಲ್ಲಿ ಘೋಷಣೆಮಾಡಿ ಕಪ್ಪು ಬಾವುಟ ಪ್ರದರ್ಶಿಸಿ ಅಡ್ಡಿ ಉಂಟುಮಾಡಿದ್ದಿದೆ. ಈ ಬೇಡಿಕೆಗಳ ಸ್ವರೂಪವನ್ನು ಗಮನಿಸೋಣ. ಕನ್ನಡ ಸಂಗೀತಗಾರರಿಗೆ ಅವಕಾಶ ಕಲ್ಪಿಸಬೇಕೆಂಬುದು ಕನ್ನಡದ ಪರ ಎಂಬುದಕ್ಕಿಂತ ಕನ್ನಡಿಗರ ಪರ ಎಂದು ತಿಳಿಯಬೇಕಾಗುತ್ತದೆ. ಏಕೆಂದರೆ ಹೀಗೆ ಯಾರ ಪರವಾಗಿ ಈ ಘೋಷಣೆಗಳು ಇದ್ದವೋ ಆ ಸಂಗೀತಗಾರರು ಕೂಡ ತಮ್ಮ ಕಛೇರಿಗಳಲ್ಲಿ ಕನ್ನಡೇತರ ಕೃತಿಗಳನ್ನೇ ಪ್ರಧಾನವಾಗಿ ಪ್ರಸ್ತುತ ಪಡಿಸುತ್ತಿದ್ದರು. ಇದು ಭಾಷೆಯ ಪ್ರಶ್ನೆಯಾಗಿರದೆ ಆವರೆಗೆ ಬೆಳೆದು ಬಂದಿದ್ದ ಸಂಗೀತ ಪರಂಪರೆಯ ಸ್ವರೂಪವನ್ನು ಸೂಚಿಸುತ್ತದೆ. ಹಾಗೆ ನೋಡಿದರೆ ಎರಡನೆಯ ಬೇಡಿಕೆಯು ಈ ಸಂಗೀತ ಪರಂಪರೆಯನ್ನು ಪುನಾರಚಿಸಲು ಒತ್ತಾಯ ಮಾಡುವಂತಿದೆ. ಕರ್ನಾಟಕ

ಸಂಗೀತದ ಪ್ರವರ್ತಕರೆಂದು ಪುರಂದರದಾಸರನ್ನು ಗುರುತಿಸುವುದರಿಂದ ಕನ್ನಡ ಕೇಂದ್ರಿತವಾದ ಒಂದು ಸಂಗೀತ ಪರಂಪರೆಯನ್ನು ರೂಪಿಸಬೇಕೆಂಬ ಉದ್ದೇಶ ಅಲ್ಲಿದೆ. ಇದು ಕನ್ನಡಿಗರ ಕಳೆದುಹೋದ ಪರಂಪರೆಯೊಂದನ್ನು ಉತ್ಖನನ ಮಾಡುವ ಅಥವಾ ಮರಳಿಪಡೆಯುವ ಬಯಕೆಯನ್ನು ಹೊಂದಿದೆ. ಹಾಗೆ ನೋಡಿದರೆ ಏಕೀಕರಣ ಚಳುವಳಿಯ ಒಂದು ಮುಂಚಾಚಾಗಿ ಈ ಹೋರಾಟ ಕಾಣುತ್ತದೆ. ಅನಕೃ ಅವರು ಈ ಹಿಂದೆಯೂ ಇಂತಹ ಪ್ರಯತ್ನಗಳನ್ನು ಹೋರಾಟದ ನೆಲೆಯಿಲ್ಲದೆಯೂ ಮಾಡಿದ್ದರು. ಆ ಹೊತ್ತಿಗೆ ಬಹುಖ್ಯಾತರಾಗಿದ್ದ ಉತ್ತರಾದಿ ಸಂಗೀತದ ಮಹಾನ್ ಗಾಯಕರಾಗಿದ್ದ ಮಲ್ಲಿಕಾರ್ಜುನ ಮನಸೂರ್, ಬಸವರಾಜ ರಾಜಗುರು, ಭೀಮ್‌ಸೇನ್ ಜೋಶಿ ಮುಂತಾದವರನ್ನು ಅವರ ಸಂಗೀತ ಪ್ರಸ್ತುತಿಯಲ್ಲಿ ಕನ್ನಡದ ವಚನ, ಕೀರ್ತನೆಗಳನ್ನು ಸೇರಿಸಿಕೊಳ್ಳಲು ಪ್ರೇರೇಪಿಸಿ ಯಶಸ್ವಿಯಾಗಿದ್ದರು. ಆದ್ದರಿಂದ ಈ ಚಳುವಳಿಯ ಉದ್ದೇಶಕ್ಕೆ ಕನ್ನಡ ನಾಡಿನ ಸಂಗೀತ ಕಲಾವಿದರ ಅವಕಾಶ ವಿಸ್ತರಣೆಯ ಉದ್ದೇಶವಿದೆ ಎಂದು ತೋರಿದರೂ ವಿಶಾಲಾರ್ಥದಲ್ಲಿ ಕನ್ನಡ ಕೇಂದ್ರಿತ ಸಂಗೀತ ಪರಂಪರೆಯೊಂದನ್ನು ರೂಪಿಸುವುದು ಮುಖ್ಯಗುರಿಯಾಗಿತ್ತು ಎಂದು ಗ್ರಹಿಸಬೇಕು. ಹೀಗೆ ಮಾಡುವ ಮೂಲಕ ಕನ್ನಡ ಭಾಷೆಯ ಸಂವೇದನೆಯ ಬಹುಳತೆಯನ್ನು ಮಂಡಿಸಲು ಸಾಧ್ಯವಾಗುವುದೆಂದು ಅನಕೃ ತಿಳಿದಂತೆ ತೋರುತ್ತದೆ.

ಅರವತ್ತರ ಸುಮಾರಿನ ಈ ಕನ್ನಡಪರ ಚಳುವಳಿಗಳು ಒಂದು ಕಡೆ ಕನ್ನಡಿಗರ ಅವಕಾಶಗಳನ್ನು ವಿಸ್ತರಿಸಬೇಕೆಂಬ, ಕಾಯ್ದುಕೊಳ್ಳಬೇಕೆಂಬ ಅಪೇಕ್ಷೆಯನ್ನು ಹೊಂದಿದ್ದವು. ಇನ್ನೊಂದೆಡೆ ಕನ್ನಡ ಪ್ರಜ್ಞೆಯನ್ನು ಜಾಗ್ರತಗೊಳಿಸುವ ಉದ್ದೇಶವನ್ನು ಹೊಂದಿದ್ದವು. ಕನ್ನಡ ಪ್ರಜ್ಞೆಯ ಬಗೆಗೆ ಜಾಗ್ರತಿ ಮೂಡಿಸಲು ಏಕೀಕರಣದ ಸಂದರ್ಭದಲ್ಲಿ ಅನುಸರಿಸಿದ ಚಾರಿತ್ರಿಕ ಮರುಗಳಿಕೆಯ ವಿಧಾನವನ್ನೇ ಈಗಲೂ ಮುಂದುವರೆಸಲಾಯಿತು. ಅಂದರೆ ಕರ್ನಾಟಕ ಪರಂಪರೆಯ ಸಾಧನೆಗಳನ್ನು ಗುರುತಿಸಿ ಅವುಗಳ ಬಗೆಗೆ ಅಭಿಮಾನವನ್ನು ಮೂಡಿಸುವ ಮೂಲಕ ಕನ್ನಡ ಪ್ರಜ್ಞೆಯನ್ನು ನೆಲೆಗೊಳಿಸಬಹುದು ಎಂಬ ನಂಬಿಕೆ ಇಲ್ಲಿದೆ. ವಾಸ್ತವವಾಗಿ ಕಳೆದ ಐವತ್ತು ವರ್ಷಗಳಲ್ಲಿ ಈ ನಂಬಿಕೆ ಸಂಪೂರ್ಣವಾಗಿ ಕಳೆದುಹೋಗಿಲ್ಲವಾದರೂ ತನ್ನ ಮೊನಚನ್ನು ಕಡಿಮೆ ಮಾಡಿಕೊಂಡಿದೆ. ಏಕೆಂದರೆ ಕನ್ನಡ ಪರಂಪರೆಯನ್ನು ಉತ್ಖನನ ಮಾಡಿದಾಗ ಅಥವಾ ಪುನಾರಚಿಸಿದಾಗ ಅದರಲ್ಲಿ ಸಮಕಾಲೀನ ಜೀವನ ಕ್ರಮದ ಅಸಮಾನತೆಯ ನೆಲೆಗಳಿಗೆ ಕಾರಣವಾದ ಸಂಗತಿಗಳು ಕೂಡಾ ಕಂಡು ಬಂದಿವೆ. ಹೀಗಿರುವಾಗ ಚಾರಿತ್ರಿಕ ಮರುಗಳಿಕೆಯನ್ನು ಸಾರಾಸಗಟಾಗಿ ಒಪ್ಪಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಎಂಟನೇ ದಶಕದ ನಂತರದ ಬಂಡಾಯ, ದಲಿತ ಮತ್ತು ಸ್ತ್ರೀವಾದಿ ಚಿಂತನೆಗಳು ಈ ಪ್ರಶ್ನೆಯನ್ನು ಮುಂಚೂಣಿಗೆ ತಂದಿವೆ. ಆದರೂ ಕನ್ನಡ ಚಳುವಳಿಯು ತನ್ನ ವಿವಿಧ ರೂಪಗಳಲ್ಲಿ ಕರ್ನಾಟಕ ಪರಂಪರೆಯ ಉಜ್ವಲ ಲಕ್ಷಣಗಳನ್ನು ವೈಭವೀಕರಿಸುವ ಪ್ರವೃತ್ತಿಯನ್ನು ಮುಂದುವರೆಸಿದೆ. ಆಳುವ ವರ್ಗದ ತಾತ್ವಿಕತೆಯೂ ಇದೇ ಆಗಿರುವುದರಿಂದ ಈಗ ಇಂತಹ ಚಳುವಳಿಗಳು ವ್ಯವಸ್ಥೆಯ ವಿರೋಧಿಗಳು ಆಗುವ ಬದಲು ಸಹಯಾತ್ರಿಕರಾಗಿಬಿಟ್ಟಿವೆ. ಕರ್ನಾಟಕ ರಾಜ್ಯಸಂಬಂಧದ ಯಾವುದೇ ಉತ್ಸವಗಳನ್ನು ಗಮನಿಸಿದರೆ ಈ ಸಹಯೋಗದ ನೆಲೆಗಳು ಸ್ಪಷ್ಟವಾಗಿ ಗೋಚರಿಸುತ್ತದೆ.

ಆರನೇ ದಶಕದ ಮತ್ತೊಂದು ಕನ್ನಡ ಚಳುವಳಿ ಎಂದರೆ ಹಿಂದೀ ವಿರೋಧಿ ನಿಲುವನ್ನು ಪ್ರತಿಪಾದಿಸುವ ಚಳುವಳಿ. ಈ ಹಿಂದೆಯೇ ಗುರುತಿಸಿದಂತೆ 1956ರ ವೇಳೆಗೆ ಇಂಗ್ಲಿಶ್ ಆಡಳಿತದ ವಲಯದಿಂದ ಹಿಂದೆ ಸರಿಯಬೇಕೆಂಬ ರಾಜ್ಯಾಂಗದ ನಮೂದನ್ನು ದಕ್ಷಿಣ ರಾಜ್ಯಗಳಲ್ಲಿ ವಿರೋಧಿಸಲಾಯಿತು. ಈ ಚಳುವಳಿಯ ತೀವ್ರತೆ ಒಂದೊಂದು ರಾಜ್ಯದಲ್ಲಿ ಒಂದೊಂದು ಬಗೆಯಲ್ಲಿ ಕಾಣಿಸಿಕೊಂಡಿತು. ಕರ್ನಾಟಕದ ವಿದ್ಯಾರ್ಥಿಗಳು ಮತ್ತು ಬುದ್ಧಿಜೀವಿಗಳು ಈ ಚಳುವಳಿಯ ಮುಂಚೂಣಿಯಲ್ಲಿದ್ದರು. ಹಿಂದೀ ವಿರೋಧವು ಕೆಲವರಿಗೆ ಭಾರತ ಒಕ್ಕೂಟದ ಬಂಧವನ್ನು ಒಡೆಯುವ ಹುನ್ನಾರವಾಗಿ ಕಂಡಿತ್ತು. ಆದರೆ ಈ ಚಳುವಳಿಯ ಒಳಗೇ ಅಂತರ್ಗತವಾಗಿದ್ದ ವೈರುಧ್ಯ ಈಗ ಸ್ಪಷ್ಟವಾಗಿ ಗೋಚರಿಸುತ್ತಿದೆ. ಹಿಂದಿಯನ್ನು ವಿರೋಧಿಸುವಾಗ ಯಾವುದರ ಪರವಾಗಿ ಇರಬೇಕು ಎಂಬ ಪ್ರಶ್ನೆ ಮುಖ್ಯ. ಹಿಂದಿಯ ಬದಲು ಕನ್ನಡ ಎನ್ನುವುದಕ್ಕಿಂತ ಹಿಂದಿಯ ಬದಲು ಇಂಗ್ಲಿಶ್ ಎಂಬುದು ಮುಖ್ಯವಾಗಿದೆ. ಹಾಗೆ ನೋಡಿದರೆ ಇದು ಕನ್ನಡಿಗರು ಇಂಗ್ಲಿಶ್ ವಿಸ್ತರಣೆಯ ಪರವಾಗಿ ಮಾಡಿದ ಚಳುವಳಿಯೆಂದು ತೋರುತ್ತದೆ.

ಹಿಂದಿಯನ್ನು ಶಿಕ್ಷಣ ಮತ್ತು ಆಡಳಿತ ವಲಯಗಳಲ್ಲಿ ಇಂಗ್ಲಿಶ್‌ನ ಬದಲಿಗೆ ಬಳಸುವುದು ಕರ್ನಾಟಕದಂತಹ ರಾಜ್ಯಗಳಿಗೆ ಅಪೇಕ್ಷಣೀಯವಾಗಿ ತೋರಲಿಲ್ಲ. ಹಾಗಾಗಿ ಹಿಂದಿಯ ಹೇರಿಕೆಯನ್ನು ವಿರೋಧಿಸಿದರು. ಆದರೆ ಶಿಕ್ಷಣದಲ್ಲಾಗಲೀ ಆಡಳಿತದಲ್ಲಾಗಲೀ ಕನ್ನಡವನ್ನು ಸಾರ್ವಭೌಮ ಭಾಷೆಯನ್ನಾಗಿ ಉಳಿಸಿಕೊಳ್ಳುವ ಯತ್ನಗಳು ನಡೆಯಲಿಲ್ಲ. 1965ಕ್ಕಿಂತ ಹಿಂದೆ ಇದ್ದ ಪರಿಸ್ಥಿತಿಯೇ ಮುಂದುವರಿಯಬೇಕೆಂಬ ಒತ್ತಾಯಕ್ಕೆ ಪ್ರಾಶಸ್ತ್ಯ ಸಿಕ್ಕಿತ್ತು. ಕನ್ನಡಕ್ಕಿದ್ದ ಅವಕಾಶ ಇದರಿಂದ ತಪ್ಪಿಹೋಯಿತು.

ಈ ಸುಮಾರಿನಲ್ಲಿ ರಾಷ್ಟ್ರ ಮತ್ತು ರಾಜಕಾರಣಗಳಲ್ಲಿ ಕಾಂಗ್ರೆಸ್ ವಿರೋಧೀ ಅಲೆಗಳು ಮೂಡತೊಡಗಿದ್ದವು. ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷದ ನಾಯಕತ್ವ ಇಲ್ಲದ ಆಡಳಿತಗಳು ಜಾರಿಗೆ ಬಂದಿದ್ದವು. ಕರ್ನಾಟಕದಲ್ಲಿ ಇಷ್ಟು ತೀವ್ರವಾದ ಬದಲಾವಣೆಗಳು ಆಗಿರಲಿಲ್ಲ. ಆದರೆ ಈ ರಾಜ್ಯದ ಬೌದ್ಧಿಕ ಚಿಂತನೆಗಳನ್ನು ನಿರ್ದೇಶಿಸುತ್ತಿದ್ದ ತಾತ್ವಿಕತೆ ಸಮಾಜವಾದವಾಗಿತ್ತು. ಅದರಲ್ಲೂ ಲೋಹಿಯಾ ಪ್ರಣೀತ ಮಾದರಿಯ ಸಾರ್ವಜನಿಕವಾದ ಸಿದ್ಧಾಂತಗಳು ಬಹು ಚರ್ಚಿತವಾಗುತ್ತಿದ್ದವು. ಲೋಹಿಯಾ ತಮ್ಮ ಪ್ರಖ್ಯಾತ ವ್ಯಾಖ್ಯೆಯೊಂದರಲ್ಲಿ ಭಾರತದ ಸಮಾಜದಲ್ಲಿ ಅಸಮಾನತೆಯು ಉಂಟಾಗಲು ಮತ್ತು ಮುಂದುವರೆಯಲು ಕಾರಣವಾದ ಮೂರು ಸಂಗತಿಗಳನ್ನು ಪಟ್ಟಿಮಾಡುತ್ತಾ ಅವು ಜಾತಿ, ಸಂಪತ್ತು ಮತ್ತು ಇಂಗ್ಲಿಶ್ ಎಂದು ಹೇಳಿದ್ದರು. ಆದ್ದರಿಂದ ಅಸಮಾನತೆಗೆ ಕಾರಣವಾಗುವ ಇಂಗ್ಲಿಶ್ ಭಾಷೆಯ ಪರವಾಗಿ ಇರುವುದು ಸಮಾಜವಾದಿಗಳಿಗೆ ತಾರ್ಕಿಕವಾಗಿ ಸಾಧ್ಯವಿರಲಿಲ್ಲ. ಆದರೆ ಹಿಂದೀ ಭಾಷೆಯನ್ನು, ಈ ಅಸಮಾನತೆಯನ್ನು ಪ್ರೇರೇಪಿಸುವ ತ್ರಿವಳಿಗಳ ಜೊತೆ ಎಲ್ಲಿ ಇರಿಸಬೇಕು ಎಂಬುದು ಅಸ್ಪಷ್ಟವಾಗಿತ್ತು. ಹೀಗಾಗಿ ಅವರು ಕನ್ನಡ ಮತ್ತು ಇಂಗ್ಲಿಶ್ ಇವುಗಳ ಸಂಬಂಧವನ್ನು ಪರಸ್ಪರ ವಿರೋಧಿ ನೆಲೆಯಲ್ಲಿ ಪರಿಗಣಿಸುವ ಬದಲು ಪೂರಕ ನೆಲೆಯಲ್ಲೇ ಮಂಡಿಸಿದರು. ಆಗ ಹಿಂದಿಯ ಪ್ರಶ್ನೆ ಮುಂಚೂಣಿಗೆ ಬರಲಿಲ್ಲ. ಆ

ಸರಿಸುಮಾರಿನಲ್ಲಿ ಯು.ಆರ್.ಅನಂತಮೂರ್ತಿಯವರು 'ಇಂಗ್ಲಿಶ್ ಬ್ರಾಹ್ಮಣ ಕನ್ನಡ ಶೂದ್ರ' ಎನ್ನುವ ಲೇಖನವನ್ನು ಬರೆದು ತಮ್ಮ ವಿಚಾರಗಳನ್ನು ಮಂಡಿಸಿದರು. ಆ ಸುಮಾರಿಗೆ ಅವರು ಇಂಗ್ಲೆಂಡ್‌ನಲ್ಲಿ ಅಧ್ಯಯನ ಮಾಡುತ್ತಿದ್ದರು. ಡಿ.ಎಚ್.ಲಾರೆನ್ಸ್, ಸಂವೇದನೆಯ ವಿಘಟನೆಗೆ ಕಲ್ಪಿಸಿಕೊಂಡ ದೇಹ ಮತ್ತು ಮನಸ್ಸುಗಳ ನೆಲೆಯನ್ನು ಇಂಗ್ಲಿಶ್ ಮತ್ತು ಕನ್ನಡಗಳ ಸಂಬಂಧಕ್ಕೆ ಅನಂತಮೂರ್ತಿಯವರು ಪರಿವರ್ತಿಸಿಕೊಂಡರು. ಇಂಗ್ಲಿಶ್ ವಿಚಾರಗಳ ಬೌದ್ಧಿಕತೆಯ, ಅಮೂರ್ತತೆಯ ನೆಲೆಯಲ್ಲಿರುವ ಭಾಷೆಯಾದರೆ ಕನ್ನಡ ಭಾವನೆಗಳ, ಸ್ವಾನುಭವದ ಮೂರ್ತತೆಯ ನೆಲೆಯ ಭಾಷೆಯೆಂದು ಅವರಿಗೆ ತೋರಿತು. ಬ್ರಾಹ್ಮಣ ಮತ್ತು ಶೂದ್ರ ಎಂಬ ಪದಗಳು ಜಾತಿವಾಚಿ ಆಗುವ ಬದಲು ಲೋಕಗ್ರಹಿಕೆಯ ಎರಡು ಮಾದರಿಗಳೆಂದು ಮಂಡಿಸಿದರು. ಆಗ ಈ ಎರಡು ನೆಲೆಗಳ ನಡುವೆ ಶತ್ರುತ್ವಕ್ಕಿಂತ ಒಂದು ಇನ್ನೊಂದನ್ನು ಬಿಟ್ಟಿರಲಾರದ ಪೂರಕತೆಯ ನೆಲೆ ಮುಖ್ಯವಾಯಿತು. ಹಿಂದಿ ವಿರೋಧ ಹಿಂದಕ್ಕೆ ಸರಿದು ಕನ್ನಡ ಪ್ರಜ್ಞೆಯಲ್ಲಿ ಇಂಗ್ಲಿಶಿನ ಅನಿವಾರ್ಯತೆಯನ್ನು ಬೇರೊಂದು ರೀತಿಯಿಂದ ನೆಟ್ಟ ಪರಿಯಿದು. ಈಗ ಇಂಗ್ಲಿಶ್ ಕನ್ನಡಕ್ಕಿಂತ ಬೇರೆ; ಅದರೆ ಕನ್ನಡ ವಿರೋಧಿಯಲ್ಲ. ಲೋಹಿಯಾ ಮಂಡಿಸಿದ ತ್ರಿವಳಿ ಕಲ್ಪನೆಯಲ್ಲಿ ಇಂಗ್ಲಿಶ್‌ಗೆ ಇದ್ದ ನಿರ್ಣಾಯಕ ಸ್ಥಾನವನ್ನು ನಿರಾಕರಿಸದೆಯೂ ಕನ್ನಡ ಬುದ್ಧಿ ಜೀವಿಗಳ ವರ್ಗ ಅದನ್ನು ಹೀಗೆ ಮರುವ್ಯಾಖ್ಯಾನಿಸಿ ಬಿಟ್ಟಿದೆ.

ಅನಂತಮೂರ್ತಿಯವರ ಈ ತರ್ಕ ಮಂಡನೆಯಾಗುವ ಸ್ವಲ್ಪ ಮೊದಲು, 1964ರಲ್ಲಿ, ಅಮೆರಿಕಾದ ಪ್ರೊ.ವಿಲಿಯಂ ಬ್ರೈಟ್ ಮೈಸೂರು ಕನ್ನಡದ ಜಾತಿ ಪ್ರಭೇದಗಳನ್ನು ಕುರಿತ ಒಂದು ಅಧ್ಯಯನ ಪ್ರಬಂಧವನ್ನು ಮಂಡಿಸಿದರು. ಆ ಲೇಖನ ಕನ್ನಡಕ್ಕೂ ಅನುವಾದಗೊಂಡು ಪ್ರಬುದ್ಧ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಈ ಲೇಖನದಲ್ಲಿ ಕನ್ನಡ ಬಳಕೆಯು ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ವರ್ಗಗಳಲ್ಲಿ ಯಾವ ಬಗೆಯ ವ್ಯತ್ಯಾಸಗಳನ್ನು ಹೊಂದಿದೆ ಎಂಬ ಅಂಶವನ್ನು ಗುರುತಿಸಲು ಉದ್ದೇಶಿತವಾಗಿತ್ತು. ಈ ಪತ್ರಿಕೆಯ ವಿವರಗಳ ಪರಿಶೀಲನೆಗೆ ಮೊದಲು ಇಂತಹ ವೈಚಾರಿಕ ಆಕೃತಿಯೊಂದು ತಲೆದೋರಿದ ಕ್ರಮವನ್ನು ಅರಿಯುವುದು ಮುಖ್ಯ. ಈ ವೈಚಾರಿಕ ನೆಲೆಯನ್ನು ಸಮಕಾಲೀನ ರಾಜಕೀಯ ಗ್ರಹಿಕೆಯಿಂದ ಪಡೆದಿದ್ದರೋ ಮಾನವಶಾಸ್ತ್ರಜ್ಞರ ಮತ್ತು ಸಮಾಜಶಾಸ್ತ್ರಜ್ಞರ ಚಿಂತನೆಗಳಿಂದ ಗ್ರಹಿಸಿದ್ದರೋ ಸ್ಪಷ್ಟವಾಗಿ ಹೇಳಲಾಗದು. ಆದರೆ ತಮಿಳುನಾಡಿನ ಸಾಮಾಜಿಕ ಚಿಂತನೆಗಳಿಂದ ಈ ಸಂಪ್ರಬಂಧಕ್ಕೆ ಬೇಕಾದ ವೈಚಾರಿಕ ಮಾದರಿಯನ್ನು ಪಡೆದುಕೊಂಡಿರುವ ಸಾಧ್ಯತೆಗಳಿವೆ. ಏಕೆಂದರೆ ಇದೇ ಬಗೆಯ ಅಧ್ಯಯನವನ್ನು ಅಲ್ಲಿನ ಭಾಷಾಪರಿಸ್ಥಿತಿಯ ಬಗೆಗೂ ಮಂಡಿಸಲಾಗಿದೆ. ಈ ಅಧ್ಯಯನ ಪ್ರಬಂಧದಲ್ಲಿ ಬ್ರಾಹ್ಮಣೇತರ ಎಂದು ವರ್ಗೀಕರಿಸುವಾಗ ಇಡೀ ಕನ್ನಡ ಸಮಾಜವನ್ನು ಎರಡು ಧ್ರುವಗಳನ್ನಾಗಿ ನೋಡಲಾಗಿದೆ. ಇದರಿಂದ ಈ ಸಮಾಜ ರಚನೆಯ ಎಷ್ಟೋ ಸೂಕ್ಷ್ಮಗಳು ಕೈಗೆ ಸಿಗುವಂತಾಗಿಲ್ಲ. ಆದ್ದರಿಂದ ಅಲ್ಲಿನ ಅಂತಿಮ ನಿರ್ಣಯಗಳು ಮತ್ತೆ ಪರಿಶೀಲನೆಗೆ ಒಳಗಾಗುವ ಅಗತ್ಯವಿದೆ. ಆ ಚರ್ಚೆ ಬೇರೊಂದೆಡೆಗೆ ಇದೆ. ಇಲ್ಲಿ ಮುಖ್ಯವಾದ ಸಂಗತಿ ಇಷ್ಟೇ: ಕನ್ನಡ ಪ್ರಜ್ಞೆಯನ್ನು ಎರಡು ಪರಸ್ಪರ ಪೂರಕ ನೆಲೆಗಳಲ್ಲಿ ವಿಭಜಿಸಿರುವುದು. ಈ ಎರಡೂ ನೆಲೆಗಳು ಅಪರಿಪೂರ್ಣ, ಮತ್ತು ಒಂದು ಇನ್ನೊಂದರ

ಅಸ್ತಿತ್ವವನ್ನು ಅಪೇಕ್ಷಿಸುವಂತಿವೆ. ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಈ ಎರಡು ಜಗತ್ತುಗಳಿಗೆ ಕ್ರಮವಾಗಿ ಬುದ್ಧಿ ಮತ್ತು ಭಾವಗಳ ಸಮೀಕರಣ ಮಾಡುವ ಮೂಲಕ ಒಂದು ವೈಚಾರಿಕ ಆಕೃತಿಯನ್ನು ನೆಲೆಗೊಳಿಸಲಾಯಿತು. ಹಿಂದೀ ವಿರೋಧಿ ಚಳುವಳಿಯು ರಾಜಕೀಯ ನೆಲೆಯಲ್ಲಿ ಏನೇ ಅಂತ್ಯ ಕಂಡಿರಲಿ, ಆದರೆ ಕನ್ನಡ ಪ್ರಜ್ಞೆಯನ್ನು ಹೀಗೆ ವ್ಯಾಖ್ಯಾನಿಸಲು ಆ ಸಂದರ್ಭ ಅನುವು ಮಾಡಿಕೊಟ್ಟಂತೆ ತೋರುತ್ತದೆ. ಈ ಪೂರಕ ನೆಲೆಯ ವಿಘಟನೆ ಮುಂದೆ ಕನ್ನಡ ಸಾಹಿತ್ಯದ ಪ್ರಮುಖ ಚಿಂತನಾಂಶವಾಗಿ ಪರಿಣಮಿಸಿತು.

ಅನಂತರದಲ್ಲಿ ನಡೆದ ಮತ್ತೊಂದು ಚಳುವಳಿ ಎಂದರೆ ಈಗಾಗಲೇ ಮಾಧ್ಯಮಗಳು ಹೆಸರಿಸಿರುವಂತೆ ಖ್ಯಾತವಾದ ಬೂಸಾ ಪ್ರಕರಣ. ಎಲ್ಲಾ ವಿವರಗಳಿಗೂ ಹೋಗದೆ ಸ್ಥೂಲವಾಗಿ ಆ ಪ್ರಕರಣದ ನೆಲೆಗಳನ್ನು ಮೊದಲು ಗಮನಿಸಬಹುದು. ಶ್ರೀ ದೇವರಾಜು ಅರಸು ಅವರ ಸಂಪುಟದಲ್ಲಿ ಸದಸ್ಯರಾಗಿದ್ದ ಶ್ರೀ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವೆಲ್ಲ ನಿರರ್ಥಕ ಅಂಶಗಳಿಂದ ಕೂಡಿದ ಬೂಸಾ ಎಂದು ಹೇಳಿದರೆಂಬ ವರದಿಯನ್ನು ಆಧರಿಸಿ ವ್ಯಾಪಕವಾದ ಪ್ರತಿಭಟನೆಯೊಂದು ನಡೆಯಿತು. ಇಲ್ಲಿ ಮುಂಚೂಣಿಗೆ ಬಂದ ವಾಗ್ವಾದಗಳು ಹೀಗಿವೆ. ಕನ್ನಡ ಭಾಷೆಯಲ್ಲಿ ರಚಿತವಾದ ಸಾಹಿತ್ಯವನ್ನು ಬೂಸಾ ಎಂದು ಹೆಸರಿಸುವ ಮೂಲಕ ನಮ್ಮ ಇಡೀ ಚರಿತ್ರೆಯನ್ನು ನಿರುಪಯುಕ್ತಗೊಳಿಸಲಾಗಿದೆ. ಹಾಗಾಗಿ ಇದು ಕನ್ನಡ ಪ್ರಜ್ಞೆಗೆ ಆದ ಆಘಾತ ಎಂದು ತಿಳಿಯಲಾಯಿತು. ಈ ಚಳುವಳಿಯ ಸಂದರ್ಭದಲ್ಲಿ ನಡೆದ ವಾಗ್ವಾದಗಳಲ್ಲಿ ಹಲವು ನೆಲೆಗಳಿವೆ. ಒಂದು: ಸಚಿವರು ಹೇಳಿದಂತೆ ಕನ್ನಡ ಸಾಹಿತ್ಯ ಬೂಸಾ ಅಲ್ಲ; ಅದರಲ್ಲಿ ಅತ್ಯುನ್ನತ ಮೌಲ್ಯಗಳ ಪ್ರತಿಪಾದನೆ ಇದೆ ಎನ್ನುವುದು. ಎರಡು: ಎಲ್ಲ ಸಾಹಿತ್ಯದಲ್ಲಿ ಇರುವಂತೆ ಇಲ್ಲಿಯೂ ನಿರರ್ಥಕವಾದುದು ಇರಬಹುದು; ಹಾಗಾಗಿ ಸಚಿವರ ಹೇಳಿಕೆ ಆಂಶಿಕ ಸಂಗತಿಗಳನ್ನೇ ಸಾಮಾನ್ಯೀಕರಿಸುತ್ತಿದೆ ಎನ್ನುವುದು. ಮೂರು: ಕನ್ನಡ ಸಾಹಿತ್ಯ ಬೂಸಾ ಎಂದು ಹೇಳುವ ಮೂಲಕ ಪರಂಪರೆಯನ್ನು ಕುರಿತ ಮರುಚಿಂತನೆಗೆ ಅವಕಾಶ ಸಿಕ್ಕಿದೆ; ಇದನ್ನು ಹೊಸ ವೈಚಾರಿಕ ಜಾಗ್ರತಿಗೆ ಬಳಸಿಕೊಳ್ಳಬೇಕು ಎನ್ನುವುದು. ನಾಲ್ಕು: ಕೊಂಚ ಕುಹಕದಲ್ಲಿ ವಾದ ಮಾಡುತ್ತಾ, ಬೂಸಾ ಕೂಡ ಪ್ರಾಣಿಗಳಿಗೆ ಪುಷ್ಟಿದಾಯಕವಾದ್ದರಿಂದ ಸಚಿವರ ಮಾತನ್ನು ಸರಿಯಾದ ಪರಿಪ್ರೇಕ್ಷ್ಯದಲ್ಲಿ ತೆಗೆದುಕೊಳ್ಳಬೇಕು ಎಂಬುದು.

ಈ ಚಳುವಳಿಯ ರಾಜಕೀಯ ಪರಿಣಾಮಗಳು ದೂರಗಾಮಿಯಾಗಿದ್ದವು. ಆದರೆ ಅದರ ಭಾಷಿಕನೆಲೆಯ ಪರಿಣಾಮಗಳು ಕೂಡ ಅಷ್ಟೇ ಮುಖ್ಯವಾಗಿವೆ. ಬಸವಲಿಂಗಪ್ಪನವರು ಈ ಹೇಳಿಕೆಯನ್ನು ನೀಡುವ ಸಂದರ್ಭದಲ್ಲಿ ಅತ್ಯಂತ ಕ್ರಾಂತಿಕಾರಕವಾದ ಹೆಜ್ಜೆಯೊಂದನ್ನು ಇರಿಸಿದ್ದರು. ಅದರಂತೆ ಕರ್ನಾಟಕದಲ್ಲಿ ಆವರೆಗೆ ಜಾರಿಯಲ್ಲಿದ್ದ ಅಮಾನವೀಯ ನೆಲೆಯ, ತಲೆಯ ಮೇಲೆ ಮಲಹೊರುವ ಪದ್ಧತಿಯನ್ನು ಕಾನೂನು ಬದ್ಧವಾಗಿ ನಿಷೇಧಿಸಲಾಗಿತ್ತು. ಇದೊಂದು ಸಾಮಾಜಿಕ ನೆಲೆಯ ಕಾರ್ಯಕ್ರಮವೆಂದು ವ್ಯಾಖ್ಯಾನಿಸಬಹುದಾದರೂ ಇದಕ್ಕೆ ವೈಚಾರಿಕ ನೆಲೆಯ ಹೊರಚಾಚುಗಳು ಇವೆ. ದಲಿತರಿಗೆ ಈವರೆಗೆ ಸಮಾಜ ಹೊರಿಸಿದ ಹೊಣೆಯೊಂದರಿಂದ ಬಿಡುಗಡೆ ಮಾಡುವ ಮೂಲಕ ಅವರು ಅದೇ

ಸಮಾಜದದಲ್ಲಿದ್ದ ತ್ಯಾಜ್ಯ ವೈಚಾರಿಕ ಪರಂಪರೆಗಳ ಹೊರೆಯನ್ನು ಹೊರಬೇಕಾಗಿಲ್ಲ ಎಂಬುದನ್ನೂ ಪರೋಕ್ಷವಾಗಿ ಸೂಚಿಸಿದಂತಾಯಿತು.

ಹಾಗೆ ನೋಡಿದರೆ ಈ ರಾಜಕೀಯ ನಿರ್ಧಾರ, ಮೊದಲು ಹೇಳಿದ ರೀತಿಯ ಚಾರಿತ್ರಿಕ ಮರುಗಳಿಕೆಯ ಯತ್ನಗಳಿಗೆ ಒಳಗಿನಿಂದಲೇ ಬಿದ್ದ ಮೊದಲ ಭಾರೀ ಪೆಟ್ಟು. ಈ ಒಳಗಿನ ಬಂಡಾಯ ಮುಂದಿನ ದಶಕಗಳಲ್ಲಿ ಬಲವಾಗಿ ಬೆಳೆದುದನ್ನು ನೋಡುತ್ತೇವೆ. ಈ ಚಳುವಳಿಯಲ್ಲಿ ಮುಖ್ಯವಾಗಿ ಕನ್ನಡ ಸಾಹಿತ್ಯ ಮತ್ತು ಅದರ ಮೌಲ್ಯವನ್ನು ಕುರಿತ ಮಾತುಗಳು ಮುಖ್ಯವೆಂದು ತೋರಿದರೂ ಅಂತಸ್ಥ ನೆಲೆಯಲ್ಲಿ ಕನ್ನಡ ಪ್ರಜ್ಞೆಯ ಒಳಸುಳಿಗಳನ್ನು ಶೋಧಿಸುವ ಪ್ರಯತ್ನಗಳು ಮೊದಲಾದವು. ಅದಲ್ಲದೆ ಇದೇ ಸುಮಾರಿನಲ್ಲಿ ಮತ್ತೆ ಅನಂತಮೂರ್ತಿಯವರೇ ಬರೆದ ಇನ್ನೊಂದು ಲೇಖನವನ್ನು ಇಲ್ಲಿ ಉಲ್ಲೇಖಿಸಬೇಕು. ಆ ಲೇಖನದಲ್ಲಿ ಅವರು ಮಲಹೊರುವ ಪದ್ಧತಿಯನ್ನು ಬಹಿಷ್ಕರಿಸುವ ಜೊತೆಗೆ ಊರುಗಳಲ್ಲಿ ಒಳಚರಂಡಿಯ ಮತ್ತು ತ್ಯಾಜ್ಯ ನಿರ್ವಹಣೆಯ ವ್ಯವಸ್ಥೆಯನ್ನು ನಿರ್ಮಿಸಬೇಕೆಂದು ಹೇಳಿದ್ದರು. ಅಂದರೆ ದಲಿತರಿಗೆ ಈವರೆಗಿನ ದತ್ತ ಪರಂಪರೆಯನ್ನು ನಿರಾಕರಿಸಲು ಹೇಳುವಾಗಲೇ, ಅದರಿಂದ ಉಂಟಾಗುವ ಶೂನ್ಯಸ್ಥಿತಿಯನ್ನು ತುಂಬಲು ಅವರು ಶಿಕ್ಷಿತರಾಗಬೇಕು ಎಂಬ ಆಶಯ ಆ ಲೇಖನದಲ್ಲಿತ್ತು. ಅಕ್ಷರಜ್ಞಾನ ಮಾತ್ರ ಅವರನ್ನು ಮುಖ್ಯ ಪ್ರವಾಹಕ್ಕೆ ತರಬಲ್ಲದು ಎಂಬ ಈ ಸದಾಶಯ ಕೂಡ ಚಾರಿತ್ರಿಕವಾಗಿ ಹಲವು ಆಯಾಮಗಳನ್ನು ಪಡೆದುಕೊಂಡಿದೆ.

ದಲಿತರು ಕೂಡಾ ಕನ್ನಡ ಭಾಷಾಪರಂಪರೆಯನ್ನು ಹೊಂದಿದವರೇ ಆಗಿದ್ದರೂ ಅವರನ್ನು ಅದೇ ಭಾಷೆಯ ಮತ್ತೊಂದು ಪ್ರಭೇದದ ಕೌಶಲಗಳಿಗೆ ಔಪಚಾರಿಕ ಶಿಕ್ಷಣದ ಮೂಲಕ ಸನ್ನದ್ಧಗೊಳಿಸಿ ಆಧುನೀಕರಿಸಬೇಕೆಂಬ ಚಿಂತನೆ ಕರ್ನಾಟಕದಲ್ಲಿ ಆ ಹೊತ್ತಿಗಾಗಲೇ ನೆಲೆಗೊಂಡಿತ್ತು. ಬೇರೆ ಬೇರೆ ರೀತಿಯಲ್ಲಿ ಜಾರಿಯಲ್ಲೂ ಇತ್ತು. ಹಳೆಯ ಮೈಸೂರಿನ ರಾಜರು ತೆರೆದ ಪಂಚಮರ ಶಾಲೆಗಳು, ಮುಂಬಯಿ ಪ್ರಾಂತ್ಯದ ಕನ್ನಡ ಪ್ರದೇಶಗಳಲ್ಲಿ ಅಲ್ಲಿನ ಸಾಮಾಜಿಕ ಸುಧಾರಣಾ ಚಳುವಳಿಗಳ ಪರಿಣಾಮವಾಗಿ ತೆರೆದ ಶಾಲೆಗಳು ದಲಿತರ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದ್ದವು. ಆದರೆ ಈಗ ಅಕ್ಷರಜ್ಞಾನದ ಅಗತ್ಯವನ್ನು ಮಂಡಿಸಿದ್ದು ಬೇರೆಯ ಕಾರಣದಿಂದ. ಮೊದಲು ಗಾಂಧೀವಾದದ ನೆರಳಲ್ಲಿ ಮುಖ್ಯಪ್ರವಾಹವನ್ನು ಸೇರಿಕೊಳ್ಳಲು ಅನುಕೂಲವಾಗುವಂತೆ ದಲಿತರು ಶಿಕ್ಷಿತರಾಗಬೇಕು ಎಂಬ ನೆಲೆ ಮುಖ್ಯವಾಗಿತ್ತು. ಆದರೆ ಈಗ ಹೀಗೆ ಶಿಕ್ಷಿತರಾಗುವ ಮೂಲಕ ಮುಖ್ಯಪ್ರವಾಹದ ಪರಿಕಲ್ಪನೆಯನ್ನೇ ಬುಡಮೇಲು ಮಾಡಬೇಕು ಎಂಬ ಉದ್ದೇಶ ಮುಖ್ಯವಾಯಿತು. ಈ ಕಾರಣದಿಂದ ಕನ್ನಡ ನಾಡಿನ ಕಳೆದ ಐವತ್ತು ವರ್ಷಗಳ ಚರಿತ್ರೆಯಲ್ಲಿ ಕನ್ನಡ ಭಾಷೆಯ ಅಕ್ಷರ ಜ್ಞಾನಕ್ಕೆ ಮತ್ತೊಮ್ಮೆ ಹೊಸ ಸಾಮಾಜಿಕ ಜವಾಬ್ದಾರಿಯನ್ನು, ಈ ಮೇಲೆ ಹೇಳಿದ ಚಳುವಳಿಯ ಪರಿಣಾಮವಾಗಿ ಕಲ್ಪಿಸಲಾಯಿತು.

ಇದೇ ಚಳುವಳಿಯ ಪರಿಣಾಮವಾಗಿ ಉದಯಿಸಿದ ಅಖಿಲ ಕರ್ನಾಟಕ ಬರೆಹಗಾರ ಕಲಾವಿದರ ಒಕ್ಕೂಟ ತನ್ನ ಅಧಿವೇಶನವನ್ನು ಮೈಸೂರಿನಲ್ಲಿ ನಡೆಸಿತ್ತು.

ಬೂಸಾ ಚಳುವಳಿಯ ನೆರಳಿನಲ್ಲಿ ಹುಟ್ಟಿಕೊಂಡ ವಾಗ್ವಾದವೊಂದು ತಮಿಳುನಾಡಿನ ಪೆರಿಯಾರ್ ಚಳುವಳಿಯ ಮಾದರಿಯಲ್ಲಿ ಬ್ರಾಹ್ಮಣ, ಬ್ರಾಹ್ಮಣೇತರ ಎಂಬ ವಿಭಜನೆಯನ್ನು ಬಲಗೊಳಿಸಲು ಯತ್ನಿಸುತ್ತಿತ್ತು. ಕರ್ನಾಟಕದ ಸಮಾಜವಾದಿಗಳು ಈ ತರ್ಕವನ್ನು ಬಗೆಬಗೆಯಲ್ಲಿ ಮಂಡಿಸುತ್ತ ಸಮರ್ಥಿಸುತ್ತಿದ್ದರು. ಈ ಒಕ್ಕೂಟದ ಮಹಾ ಅಧಿವೇಶನವನ್ನು ಉದ್ಘಾಟಿಸಿ ಕುವೆಂಪು ಮಾಡಿದ ಬಹು ಖ್ಯಾತ ಉಪನ್ಯಾಸ ಈ ಪ್ರಶ್ನೆಯನ್ನು ಮತ್ತೆ ಮುಂಚೂಣಿಗೆ ತಂದಿತ್ತು. ಕುವೆಂಪು ಈ ಉಪನ್ಯಾಸದಲ್ಲಿ ಪುರೋಹಿತಶಾಹಿಯನ್ನು ತುಂಬ ಕಟುವಾಗಿ ಟೀಕಿಸಿದರು. ವಾಸ್ತವವಾಗಿ ಕನ್ನಡ ಭಾಷೆಯ ಸಂದರ್ಭದಲ್ಲಿ ಸಂಸ್ಕೃತ ಭಾಷೆ ಈ ಪುರೋಹಿತಶಾಹಿ ನೆಲೆಯನ್ನು ಪ್ರತಿನಿಧಿಸುತ್ತಿತ್ತು. ಕುವೆಂಪು ಆ ಉಪನ್ಯಾಸದಲ್ಲಿ ಮತ್ತು ಅನಂತರ ನಡೆದ ವಿವಾದದಲ್ಲಿ ಸ್ಪಷ್ಟ ಮಾತುಗಳಿಂದ ಪುರೋಹಿತಶಾಹಿ ಮತ್ತು ಬ್ರಾಹ್ಮಣ ಎಂಬ ಸಮೀಕರಣವನ್ನು ನಿರಾಕರಿಸಿದರು. ಪುರೋಹಿತಶಾಹಿ ಅವರ ಪ್ರಕಾರ ಒಂದು ಅಮೂರ್ತ ಪರಿಕಲ್ಪನೆ. ಸಾಂಸ್ಕೃತಿಕ ಯಾಜಮಾನ್ಯವನ್ನು ಮೆರೆಯುವ ಪರಿಕಲ್ಪನೆ. ಆದರೂ ಅವರ ವಿಚಾರಗಳನ್ನು ಇತರರು ದುಂಡುಸುತ್ತಿ, ಪುರೋಹಿತಶಾಹಿ ಎಂದರೆ ಬ್ರಾಹ್ಮಣ ಎಂದು ಹೇಳಿದ್ದುಂಟು. ಕುವೆಂಪು ಅವರು ಮಂಡಿಸಿದ ವಿಚಾರ ಮತ್ತೊಂದು ನೆಲೆಯಲ್ಲಿ ಬಹು ಸಂಕೀರ್ಣವಾಗಿತ್ತು. ಅವರು ಅನುಪಯುಕ್ತವಾದುದನ್ನು ನಿರಾಕರಿಸುವಾಗ ಅದನ್ನು ಹೊಂದಿಸಿಕೊಳ್ಳುವ ಯತ್ನವನ್ನು ಮಾಡಬೇಕೇ ಹೊರತು ತ್ಯಜಿಸುವ ದಾರಿ ಹಿಡಿಯಬಾರದು ಎಂದರು. ಈ ಚಿಂತನೆಯನ್ನು ಸೂತ್ರರೂಪದಲ್ಲಿ ಹೇಳುವುದಾದರೆ ಕುವೆಂಪು ಚಾರಿತ್ರಿಕ ಮರುಗಳಿಕೆಯ ಬದಲಾಗಿ ಚಾರಿತ್ರಿಕ ಮರುವ್ಯಾಖ್ಯೆಯ ಮೂಲಕ ಮರುಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ಮಾದರಿಯನ್ನು ಮುಂದಿಟ್ಟರು ಎನ್ನಬೇಕು.

ಕುವೆಂಪು ಅವರು ಒಂದು ನಿದರ್ಶನವನ್ನು ಕೊಡುವ ಮೂಲಕ ತಮ್ಮ ವಿಚಾರವನ್ನು ಮಂಡಿಸುತ್ತಾರೆ. ಹಳೆಗಾಲದ ಬೆಲೆಬಾಳುವ ಚಿನ್ನದ ಆಭರಣಗಳನ್ನು ಈಗ ಇಂದಿನ ಬಳಕೆಗೆ ಯೋಗ್ಯವಿಲ್ಲವೆಂದು ಎಸೆಯಬಾರದು. ಅವುಗಳಲ್ಲಿರುವ ಚಿನ್ನ ಅಮೂಲ್ಯವಾದದ್ದು. ಆ ಚಿನ್ನವನ್ನು ಬಳಸಿ ಇಂದಿನ ಮಾದರಿಯ ಆಭರಣಗಳನ್ನು ಸಿದ್ಧಪಡಿಸಿ ಧರಿಸಬೇಕು. ಈ ಚಿತ್ರ ಕುವೆಂಪು ಅವರ ವೈಚಾರಿಕ ಆಕೃತಿಯ ದ್ವಂದ್ವವನ್ನು ಬಿಂಬಿಸುತ್ತದೆ. ಪರಂಪರೆಯನ್ನು ಮರುರೂಪಿಸಬೇಕು ಎಂದಾಗ ತಿರುಳಿನಲ್ಲಿ ಬದಲಾವಣೆ ಮಾಡಬೇಕೋ? ಅಥವಾ ರೂಪದಲ್ಲಿ ಪರಿವರ್ತನೆ ಬೇಕೋ? ಕುವೆಂಪು ಅವರು ಸ್ಪಷ್ಟವಾಗಿ ರೂಪ ಪರಿವರ್ತನೆಯನ್ನು ಪ್ರತಿಪಾದಿಸುತ್ತಿದ್ದಾರೆ. ಪರಂಪರೆಯ ಅಂತಸ್ಸತ್ವ ಎಂದಿನಂತೆ ವಿಚ್ಛೇದನಗೊಳ್ಳದೆ ಮುಂದುವರೆಯಬೇಕು ಎಂಬುದು ಅವರ ನಿಲುವು. ಕನ್ನಡ ಭಾಷೆ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಈ ನಿಲುವು ಯಾವ ಮಾದರಿಯನ್ನು ಮುಂದಿಡುತ್ತದೆ? ಈ ಉಪನ್ಯಾಸವನ್ನು ನೀಡುವ ಸಂದರ್ಭದಲ್ಲಿ ಕರ್ನಾಟಕವು ಎದುರಿಸುತ್ತಿದ್ದ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಗಮನಿಸಬೇಕು. ಸಮಾಜದ ತೋರಿಕೆಯ ಏಕತ್ವದಲ್ಲಿ ಹುದುಗಿದ್ದ ಬಿರುಕುಗಳನ್ನು ಈ ಬಿಕ್ಕಟ್ಟುಗಳು ತೋರಿಸಲು ಮೊದಲು ಮಾಡಿದ್ದವು. ದಲಿತರೇ ಮೊದಲಾಗಿ ಶೋಷಣೆಯ ನೆಲೆಯಲ್ಲಿ ಸಿಲುಕಿದವರು ತಮ್ಮ ಮೇಲೆ ಹೇರಲಾಗಿದ್ದ ಪರಂಪರೆಯ ಹೊರೆಯನ್ನು ಕಿತ್ತೆಸೆಯದೆ ತಮಗೆ

ಬಿಡುಗಡೆಯಿಲ್ಲ ಎಂಬ ಅರಿವನ್ನು ಪಡೆಯುತ್ತಿದ್ದರು. ಅಂತಹ ಸಂದರ್ಭದಲ್ಲಿ ಕುವೆಂಪು ಪ್ರತಿಪಾದಿಸಿದ ಈ ವಿಧಾನ ಪರಂಪರೆಯೊಡನೆ ಸಂಬಂಧಗಳನ್ನು ಹೊಸ ಬಗೆಯಲ್ಲಿ ಕಟ್ಟಿಕೊಳ್ಳಬೇಕೆಂದು ಸೂಚಿಸುತ್ತದೆ. ಮುಂದಿನ ಎರಡೂವರೆ ದಶಕಗಳಲ್ಲಿ ಕನ್ನಡ ಭಾಷಾಸಂಸ್ಕೃತಿಯ ಬಹುಮುಖ್ಯ ವಾಗ್ವಾದಗಳು ಈ ಘಟ್ಟದಲ್ಲಿ ಮೂಡತೊಡಗಿದ್ದವು.

ಬರೆಹಗಾರರ ಕಲಾವಿದರ ಒಕ್ಕೂಟ ಕರ್ನಾಟಕದಲ್ಲಿ ಬಂಡಾಯ ಮತ್ತು ದಲಿತ ಚಳುವಳಿಗಳಿಗೆ ದಾರಿ ಮಾಡಿಕೊಟ್ಟಿತ್ತು. ಇವೆರಡೂ ಚಳುವಳಿಗಳು ಕನ್ನಡ ಭಾಷೆಯ ಬಗೆಗೆ ತಳೆದ ನಿಲುವುಗಳು ಪರಿಶೀಲನೆಗೆ ತಕ್ಕುವಾಗಿವೆ. ಸಾಹಿತ್ಯ ಸಂಬಂಧೀ ಚರ್ಚೆಯಲ್ಲಿ ಈ ಅಂಶವನ್ನು ಪರಿಶೀಲಿಸಲಾಗುತ್ತದೆ. ಮುಖ್ಯವಾಗಿ ಇಲ್ಲಿ ಕನ್ನಡದ ಸಮಕಾಲೀನ ಪ್ರಭೇದಗಳಿಗೆ ಮನ್ನಣೆ ದೊರಕಲು ಸಾಧ್ಯವಾಯಿತು. ಕನ್ನಡ ಪರಂಪರೆಯಲ್ಲಿ ಮರೆಯಾಗಿದ್ದ ಅಂಶಗಳು ಮುಂಚೂಣಿಗೆ ಬಂದವು. ಹೊಸ ಪ್ರಶ್ನೆಗಳು ಮಂಡಿತವಾದವು. ಹೊಸ ವಿನ್ಯಾಸಗಳಲ್ಲಿ ಭಾಷಾಸಂಸ್ಕೃತಿಯ ವ್ಯಾಖ್ಯೆಗಳು ಮೊದಲಾದವು.

1982 ರಲ್ಲಿ ತೀರಾ ಸಣ್ಣ ಪ್ರಮಾಣದಲ್ಲಿ ಒಂದು ಚಳುವಳಿ ಮೊದಲಾಯಿತು. 'ಕನ್ನಡ ಉಳಿಸಿ ಕನ್ನಡ ಬಳಸಿ ಕನ್ನಡ ಬೆಳೆಸಿ' ಎಂಬ ಘೋಷಣೆ ಕಾರ್ಯಕ್ರಮಗಳೊಡನೆ ಚಳುವಳಿ ತಲೆ ಎತ್ತಿತು. ಸಾರ್ವಜನಿಕ ವಲಯಗಳಲ್ಲಿ ಕನ್ನಡದ ಬಳಕೆ ಕಡಿಮೆಯಾಗಿದ್ದು ಮಾತ್ರವಲ್ಲದೆ ಕನ್ನಡ ಬಳಕೆ ಅವಮಾನಕಾರಕ ಎಂಬ ಪರಿಸ್ಥಿತಿ ಮೂಡಿದೆ ಎನ್ನುವುದು ಈ ಚಳುವಳಿಯ ಹೇಳಿಕೆ. ಮುಖ್ಯವಾಗಿ ರಾಜಧಾನಿಯನ್ನು ಕೇಂದ್ರದಲ್ಲಿ ಇರಿಸಿಕೊಂಡ ಚಳುವಳಿ ಇದು. ಇಲ್ಲಿ ಇಂಗ್ಲಿಶ್, ಜನರ ವ್ಯವಹಾರದ ಭಾಷೆಯಾಗಿ ಬೆಳೆದು ಕನ್ನಡ ಅವಗಣನೆಗೆ ಒಳಗಾಗುತ್ತಿದೆ ಎಂಬ ಆತಂಕ ಮೂಡಿತು. ಸಾಹಿತಿಗಳು, ಕಲಾವಿದರು ಈ ಚಳುವಳಿಯನ್ನು ರೂಪಿಸಿದರು. ಅದೇ ವೇಳೆಗೆ ಕರ್ನಾಟಕ ಸರ್ಕಾರವು ವಿ.ಕೃ.ಗೋಕಾಕ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿತು. ಪ್ರೌಢಶಿಕ್ಷಣದ ಹಂತದಲ್ಲಿ ಕನ್ನಡ ಕಲಿಕೆಯನ್ನು ಕಡ್ಡಾಯ ಮಾಡುವುದು ಹೇಗೆ ಎಂಬ ಬಗೆಗೆ ಸಲಹೆ ನೀಡಲು ಈ ಸಮಿತಿ ರಚನೆಯಾಗಿತ್ತು. ಸಮಿತಿಯು ನೀಡಿದ ವರದಿಯಲ್ಲಿ ಕನ್ನಡ ಕಡ್ಡಾಯ ಪ್ರಥಮ ಭಾಷೆಯಾಗಬೇಕೆಂದೂ ಉಳಿದೆರಡು ಭಾಷೆಗಳು ವಿದ್ಯಾರ್ಥಿಯ ಅಥವಾ ಪಾಲಕರ ಅಥವಾ ಶಾಲೆಯ ಅಗತ್ಯಗಳಿಗೆ ಅನುಗುಣವಾಗಿ ಇರಬಹುದೆಂದೂ ಶಿಫಾರಸ್ಸು ಮಾಡಿತ್ತು. ಇವು ಸ್ಥೂಲ ವಿವರಗಳು. ಈ ವರದಿಯನ್ನು ಜಾರಿಗೆ ನೀಡಬೇಕೆಂದು ಒತ್ತಾಯಿಸಿ ದೊಡ್ಡ ಪ್ರಮಾಣದ ಚಳುವಳಿಯೊಂದು ಮೊದಲಾಯಿತು. ಸಾಹಿತಿ, ಕಲಾವಿದರ ಬಳಗದ ಕಾರ್ಯಸೂಚಿಯಲ್ಲಿ ಅದು ಸೇರಿಕೊಂಡಿತ್ತು. ಗೋಕಾಕ ಚಳುವಳಿ ಎಂದು ಮಾಧ್ಯಮಗಳು ಹೆಸರಿಸಿದ ಈ ಚಳುವಳಿ ರಾಜ್ಯವ್ಯಾಪಿ ನೆಲೆಯನ್ನು ಹೊಂದಿತ್ತು. ಕೊನೆಯ ಪಕ್ಷ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಪ್ರಾತಿನಿಧಿಕವಾಗಿಯಾದರೂ ಈ ಚಳುವಳಿಯನ್ನು ಪ್ರೋತ್ಸಾಹಿಸುವ ಘಟನೆಗಳು ನಡೆದವು. ಚಳುವಳಿ ಕಾನೂನು ಪಾಲನೆಯ ಸಮಸ್ಯೆಯನ್ನು ಉಂಟುಮಾಡಿತ್ತು. ಗೋಲಿಬಾರ್, ಲಾಠಿಚಾರ್ಜ್, ಸಾವುನೋವು ಎಲ್ಲಾ ಸಂಭವಿಸಿದವು. ಇದು ಚಳುವಳಿಯ ಮೇಲ್ಮೈಯಾದರೆ ಅದರ ಒಳಗಿದ್ದ ತರ್ಕಗಳನ್ನು ಮತ್ತು ಅದು ಹುಟ್ಟಿಸಿದ ವಾಗ್ವಾದಗಳನ್ನು ನಾವಿಲ್ಲಿ ಪರಿಶೀಲಿಸಬಹುದು.

ಗೋಕಾಕ್ ವರದಿ ಶಿಕ್ಷಣದಲ್ಲಿ ಕನ್ನಡಕ್ಕೆ ಅಚಲವಾದ ಸ್ಥಾನವನ್ನು ಕಲ್ಪಿಸಲು ಉದ್ದೇಶಿಸಿತ್ತು. ರಾಜ್ಯ ಸರ್ಕಾರದ ಭಾಷಾನೀತಿಯ ದೃಷ್ಟಿಯಿಂದ ಇದು ಯೋಗ್ಯ ನಿಲುವೇ ಸರಿ. ಎಂಟನೆಯ ತರಗತಿಯ ಅನಂತರ ವಿದ್ಯಾರ್ಥಿಗಳು ಕನ್ನಡದ ಬದಲು ಸಂಸ್ಕೃತವನ್ನು ಪ್ರಥಮ ಭಾಷೆಯನ್ನಾಗಿ ಆಯ್ಕೆ ಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದರು. ಇದರಿಂದ ಕನ್ನಡಕ್ಕೆ ಸಿಗಬೇಕಾದ ಮನ್ನಣೆ ಸಿಗುತ್ತಿಲ್ಲ ಎಂದು ಪರಿಗಣಿಸಿದ್ದು ಸರಿ. ಆದರೆ ಸಂಸ್ಕೃತವನ್ನು ಮೊದಲ ಭಾಷೆಯ ಸ್ಥಾನದಿಂದ ತೆಗೆದು ಹಾಕಿದಾಗ ಅದರ ಜಾಗದಲ್ಲಿ, ಅಂದರೆ ಪ್ರಥಮ ಭಾಷೆಯಾಗಿ ಈಗ ಜನ ಬಳಸುತ್ತಿರುವ ಭಾರತದ ಯಾವುದೇ ಒಂದು ಭಾಷೆ ಇರಬಹುದೆಂಬ ಪರ್ಯಾಯ ಚಿಂತನೆಯೊಂದು ಮೂಡತೊಡಗಿತ್ತು. ಈಗ ಭಾಷಾಪ್ರಶ್ನೆಯೊಂದು ಸಮಾಜದ ಒಳಗಿದ್ದ ವೈರುಧ್ಯಗಳನ್ನು ಹೊರಹಾಕತೊಡಗಿತ್ತು. ಸಂಸ್ಕೃತದ ಸ್ಥಾನ ಪಲ್ಲಟವಾಗಿ ಆ ಜಾಗದಲ್ಲಿ ಕನ್ನಡದ ಜೊತೆಗೆ ಉರ್ದು, ತಮಿಳು, ತೆಲುಗು, ಮರಾಠಿಗಳು ಉಳಿಯುವುದು ಹಲವಾರು ಮಠಾಧಿಪತಿಗಳಿಗೆ ಸಹ್ಯವಾಗದ ವಿಷಯವಾಯಿತು. ಅವರಲ್ಲಿ ಹಲವರು ನೇರವಾಗಿ, ಮತ್ತೆ ಕೆಲವರು ಪರೋಕ್ಷವಾಗಿ, ಈ ಚಳುವಳಿಯನ್ನು ಬೆಂಬಲಿಸಿದರು. ಅಂತಿಮವಾಗಿ ಕನ್ನಡ ಪರವಾದ ಚಳುವಳಿ ಸಂಸ್ಕೃತ ಮತ್ತು ಉರ್ದುಗಳ ನಡುವಣ ಮುಖಾಮುಖಿಯಾಗಿ ರೂಪುಗೊಂಡಿತ್ತು. ಗೋಕಾಕ ವರದಿಯನ್ನು ಸರ್ಕಾರ ಪರೀಕ್ಷಿಸಿ ಜಾರಿಗೆ ಕೊಟ್ಟದ್ದು, ಅನಂತರದ ನ್ಯಾಯಾಲಯ ಹೋರಾಟಗಳು, ರಾಜ್ಯ ಸರ್ಕಾರದ ಭಾಷಾನೀತಿಯ ಪಲ್ಲಟಗಳು ಇವೆಲ್ಲ ಆ ಮುಂದಿನ ಇಪ್ಪತ್ತೈದು ವರ್ಷಗಳ ಇತಿಹಾಸ. ಆದರೆ ಗೋಕಾಕ ಚಳುವಳಿಯು ರಾಜ್ಯವ್ಯಾಪಿಯಾಗಿ ಕನ್ನಡ ಪರ ಹೋರಾಡಲು ಸಿದ್ಧವಿದ್ದ ಜನರ ಸಮುದಾಯವೊಂದನ್ನು ಬೆಳಕಿಗೆ ತಂದಿತ್ತು. ಈ ಸಮುದಾಯ ತನ್ನ ಸಾಮಾಜಿಕ ರಚನೆಯಲ್ಲಿ ಅಂತಿಮವಾಗಿ ಪಾರಂಪರಿಕ ಮೌಲ್ಯಗಳ ಸಮರ್ಥನೆಗೆ ಸಿದ್ಧವಿತ್ತು. ಜೊತೆಗೆ ಸಾಮಾಜಿಕ ಅಸಹನೆಯನ್ನು ಯಾವ ಮುಜುಗರವೂ ಇಲ್ಲದೆ ವ್ಯಕ್ತಪಡಿಸಲು ಸಿದ್ಧವಿತ್ತು. ಸಂಸ್ಕೃತವನ್ನು ಸಮರ್ಥಿಸುವ, ಉರ್ದುವನ್ನು ವಿರೋಧಿಸುವ ನೆಲೆಗೆ ಈ ಚಳುವಳಿಯ ಹಂತ ಬಂದು ನಿಂತಿತ್ತು.

ಈ ಚಳುವಳಿ ಇನ್ನೊಂದು ದೃಷ್ಟಿಯಿಂದ ಗಮನಾರ್ಹ. ರಾಜ್ಯವ್ಯಾಪಿಯಾದ ಈ ಹೋರಾಟದಲ್ಲಿ ಚಳುವಳಿಯ ಗುರಿಗಳನ್ನು ಸಮರ್ಥಿಸುವವರು ಕನ್ನಡ ಪರವೆಂದೂ, ಉಳಿದವರು ಕನ್ನಡ ವಿರೋಧಿಗಳೆಂದೂ ವಿಭಜನೆಗೊಂಡರು. ಸಮರ್ಥನೆಗಾಗಲೀ ವಿರೋಧಕ್ಕಾಗಲೀ ಸಾಮಾಜಿಕ ಕಾರಣಗಳಿರುವಂತೆ ವೈಯಕ್ತಿಕ ಕಾರಣಗಳೂ ಇರುತ್ತವೆ. ಅದೇನೇ ಇರಲಿ. ಈ ಹೊತ್ತಿನಲ್ಲಿ ಕನ್ನಡ ಭಾಷಾ ಸಮುದಾಯದ ಒಳಗೆ ತಲೆ ಎತ್ತಿದ ಅಸಹನೆ ಆರೋಗ್ಯಕರವಲ್ಲವೆಂದು ವಾದಿಸುವವರು ಇದ್ದರು. ಈ ವಾದ ಅನುಸರಿಸಿದ ತರ್ಕ ಕೆಲವರಿಗೆ ಅಸಹನೀಯವೆನಿಸಿತ್ತು. ಕೊಂಚ ವಿಶ್ಲೇಷಿಸಿ ನೋಡಿದರೆ ಬಂಡಾಯ ದಲಿತ ಚಳುವಳಿಗಳೂ ಕನ್ನಡ ಸಮಾಜವನ್ನು ಕೆಲವೇ ವರ್ಷಗಳ ಹಿಂದೆ ಸಮಾನಾಂತರವಾಗಿ ವಿಭಜಿಸಿದ್ದವು. ಇದರಿಂದ ಪಟ್ಟಭದ್ರ ಹಿತಾಸಕ್ತಿಗಳಿಗೆ ತಮ್ಮ ಶೋಷಣೆಯ ಅಸ್ತ್ರಗಳು ಮೊಂಡಾಗಬಹುದು ಎಂಬ ಭಯ ಮೂಡಿದ್ದು ಸಹಜವಾಗಿದೆ.

ಆದ್ದರಿಂದ ಈ ಸಮಾನಾಂತರ ವಿಭಜನೆಯ ಪರಿಣಾಮವನ್ನು ಕಡಿಮೆಮಾಡಲು ಲಂಬಾಂತರ ವಿಭಜನೆಯ ಪ್ರಯತ್ನವೊಂದನ್ನು ಮಾಡುವುದು ಅವರಿಗೆ ಅಗತ್ಯವೆನಿಸಿತ್ತು. ಗೋಕಾಕ ಚಳುವಳಿ ಅಂತಹ ಒಂದು ಪ್ರಯತ್ನಕ್ಕೆ ಅನುವು ಮಾಡಿಕೊಟ್ಟಿತ್ತು. ಕನ್ನಡದ ಮರೆಯಲ್ಲಿ ಸಮಾಜದ ಎಲ್ಲ ಸ್ತರಗಳ ಜನರನ್ನು ಒಂದು ನೆಲೆಗೆ ತಂದು ಪರ ವಿರೋಧದ ನೆಲೆಗಳನ್ನು ಸ್ಥಾಪಿಸುವುದು ಮುಖ್ಯ ಉದ್ದೇಶವಾಗಿದೆ. ಈ ವ್ಯಾಖ್ಯೆಗೆ ಸಮರ್ಥನೆಯಾಗಿ ಈ ಚಳುವಳಿಯ ಹಿಂದಿದ್ದ ಸಾಂಪ್ರದಾಯಕ ಶಕ್ತಿಗಳ ಒತ್ತಾಸೆಯ ಅಂಶವನ್ನು ಕೂಡ ಗಮನಿಸಬೇಕು.

ಗೋಕಾಕ ಚಳುವಳಿಯ ಅನಂತರದಲ್ಲಿ ಕನ್ನಡ ಪರವಾದ ಯಾವುದೇ ಪ್ರಮುಖ ಚಳುವಳಿಯೂ ನಡೆಯಲಿಲ್ಲ. ಆದರೆ ಆಗಾಗ ನಡೆದ ಇತರ ವಿಷಯಗಳನ್ನು ಕುರಿತ ಚಳುವಳಿಗಳು ಕೂಡ ಮುಖ್ಯವಾಗಿವೆ. ಅಂತಹ ಒಂದೆರಡು ನಿದರ್ಶನಗಳನ್ನು ಮುಂದೆ ಗಮನಿಸಲಾಗಿದೆ. ಕಾವೇರಿ ನದಿ ನೀರಿನ ಹಂಚಿಕೆಯ ಪ್ರಶ್ನೆ ಕರ್ನಾಟಕದ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದು ಮಾಧ್ಯಮಗಳು ವಿವರಿಸಿದ ಕೂಡಲೇ, ಕರ್ನಾಟಕದ ದಕ್ಷಿಣ ಭಾಗದಲ್ಲಿ ಚಳುವಳಿಯೊಂದು ಆರಂಭವಾಯಿತು. ಈ ವಿವಾದದ ಕಾರಣ, ಪರಿಹಾರ ಇತ್ಯಾದಿಗಳು ಹಿಂದೆ ಸರಿದು ಚಳುವಳಿಕಾರರು ತಮಿಳು ಮಾತಾಡುವ ಜನರನ್ನು ತಮ್ಮ ಆಕ್ರಮಣಕ್ಕೆ ಗುರಿಮಾಡಿಕೊಂಡರು. ತಮಿಳರನ್ನು ತಮಿಳುನಾಡಿನ ವಲಸೆಗಾರರೆಂದೂ, ಕನ್ನಡದ ನೆರಳನ್ನು ಪಡೆಯುತ್ತಿರುವ ಜನರೆಂದೂ ಪರಿಗಣಿಸಿ ಅವರನ್ನು ಹಿಂಸಿಸುವ ಮೂಲಕ ತಮಿಳುನಾಡಿಗೆ ಬುದ್ಧಿ ಕಲಿಸುವ ಕಾರ್ಯಕ್ರಮ ಇದಾಗಿತ್ತು. ಜನಪ್ರಿಯ ಚಳುವಳಿಗಳ ಇಂತಹ ತರ್ಕಗಳು ಸ್ಪಷ್ಟವಾಗಿವೆ. ಸಾಮಾಜಿಕ ಅಸಹನೆಗಳು ಹೊರಬರಲು ಒಂದು ಪ್ರಚೋದಕ ಅಗತ್ಯ. ಅದು ದೊರಕಿದ ಕೂಡಲೇ ಈ ಅಸಹನೆ ಭುಗಿಲೇಳುತ್ತದೆ. ಕನ್ನಡ, ಕನ್ನಡಿಗ ಮತ್ತು ಕರ್ನಾಟಕ ಸಮೀಕರಣವನ್ನೇ ಅನ್ಯಭಾಷಿಕರಿಗೂ ವಿಸ್ತರಿಸಲಾಗುತ್ತದೆ.

ಬೆಂಗಳೂರು ದೂರದರ್ಶನವು ತನ್ನ ದಿನದ ಕಾರ್ಯಕ್ರಮಗಳಲ್ಲಿ ಕೆಲವು ನಿಮಿಷಗಳ ಕಾಲ ಉರ್ದು ಭಾಷೆಯ ವಾರ್ತಾಪ್ರಸಾರವನ್ನು ಮಾಡುವ ನಿರ್ಧಾರವನ್ನು ಪ್ರಕಟಿಸಿದ ಕೂಡಲೇ ಚಳುವಳಿ ಮೊದಲಾಯಿತು. ಈ ಚಳುವಳಿಯು ಉರ್ದು ಭಾಷೆಗೆ ದೊರೆತ ಅವಕಾಶವನ್ನು ವಿರೋಧಿಸುವ ಭರದಲ್ಲಿ ಆ ಭಾಷೆಯನ್ನಾಡುವ ಮುಸ್ಲಿಮರನ್ನು ಗುರಿಮಾಡಿಕೊಂಡಿತ್ತು. ಕರ್ನಾಟಕದ ಕೆಲವು ಭಾಗಗಳಲ್ಲಿ ಸಾಕಷ್ಟು ಹಿಂಸಾಪ್ರಸಂಗಗಳು ನಡೆದವು. ಉರ್ದು ವಾರ್ತಾಪ್ರಸಾರಕ್ಕೆ ಅಗತ್ಯವಾದ ತರ್ಕ ದೂರದರ್ಶನದ ಬಳಿ ಇತ್ತು. ಅಲ್ಲದೆ ಕರ್ನಾಟಕದ ಬೇರೆಬೇರೆ ಭಾಷೆಗಳ ಕಾರ್ಯಕ್ರಮಗಳನ್ನು ಅದು ಪ್ರಸಾರ ಮಾಡುತ್ತಿತ್ತು. ಆದರೆ ಈ ಸಂಗತಿ ಮುಖ್ಯವಾಗಲಿಲ್ಲ. ಉರ್ದು ಭಾಷೆಯ ವಾರ್ತಾಪ್ರಸಾರ ಆ ಭಾಷೆಗೆ, ಅಂದರೆ ಆ ಮೂಲಕ ಆ ಭಾಷೆಯನ್ನಾಡುವ ಜನರಿಗೆ ನೀಡಿದ ವಿಶೇಷ ಸವಲತ್ತು ಎಂದು ಪರಿಗಣಿಸಿ, ಅದಕ್ಕೆ ಅನುಗುಣವಾದ ವಿರೋಧದ ನೆಲೆಯನ್ನು ರೂಪಿಸಿದರು. ದೂರದರ್ಶನ ತನ್ನ ನಿಲುವನ್ನು ಬಿಟ್ಟುಕೊಟ್ಟಿತು. ಹೀಗೆ ಉಲ್ಲೇಖಿಸಿದ ಎರಡು ಘಟನೆಗಳು ಕರ್ನಾಟಕದಲ್ಲಿ ಬೇರು ಬಿಟ್ಟಿದ್ದ ಭಾಷಿಕ

ಅಸಹನೆಯನ್ನು ತೋರಿಸುತ್ತವೆ. ಒಂದು ಭಾಷೆಯ ಪರವಾಗಿ ಇರುವುದೆಂದರೆ ಇನ್ನೊಂದು ಭಾಷೆ ಅಥವಾ ಅದನ್ನಾಡುವವರ ಬಗೆಗೆ ಇರುವ ವಿರೋಧವೆಂಬ ತರ್ಕ ಆಗ ಪ್ರಚಲಿತವಾಯಿತು.

ಇಂತಹದೇ ಇನ್ನೊಂದು ಚಳುವಳಿಯ ಉಲ್ಲೇಖ ಇಲ್ಲಿ ಅಗತ್ಯ. ಇದು ಏಕೀಕರಣ ಆರಂಭದ ಘಟ್ಟದಲ್ಲೇ ಮೊದಲಾಯಿತಾದರೂ ಮತ್ತೆ ಮತ್ತೆ ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಮೈದೋರುತ್ತಲೇ ಬಂದಿದೆ. ಚಲನಚಿತ್ರಗಳಲ್ಲಿ ಡಬ್ಬಿಂಗ್ ವಿರೋಧವನ್ನು ಮಾಡುವ ಚಳುವಳಿ ಇದು. ದಕ್ಷಿಣ ಭಾರತದಲ್ಲಿ ಮೊದಲು ಚಲನಚಿತ್ರ ಚಟುವಟಿಕೆಗಳು ನೆಲೆಸಿದ್ದು ಅಂದಿನ ಮದ್ರಾಸಿನಲ್ಲಿ. ಮೈಸೂರು ಮುಂತಾದ ಕಡೆಗಳಲ್ಲಿ ನಡೆದ ಪ್ರಯತ್ನಗಳು ಹೆಚ್ಚು ವ್ಯಾಪಕವಾಗಿರಲಿಲ್ಲ. ಮದ್ರಾಸಿನಲ್ಲಿ ತಯಾರಿಸುತ್ತಿದ್ದ ಚಿತ್ರಗಳನ್ನು ತಂತ್ರಜ್ಞಾನದ ಸೌಲಭ್ಯವನ್ನು ಬಳಸಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಡಬ್ ಮಾಡುವ ಪ್ರವೃತ್ತಿ ಆಗ ಆರಂಭವಾಯಿತು. ಆದರೆ ಕನ್ನಡ ಚಿತ್ರರಂಗದಲ್ಲಿ ಇದಕ್ಕೆ ಬಲವಾದ ವಿರೋಧ ಉಂಟಾಯಿತು. ಅಂತಹ ಚಿತ್ರಗಳನ್ನು ಬಹಿಷ್ಕರಿಸುವ ಘಟನೆಗಳು ನಡೆದವು. ಹೀಗೆ ಡಬ್ ಮಾಡುವುದರಿಂದ ಕನ್ನಡ ಚಲನಚಿತ್ರಗಳು ಬೆಂಬಲವಿಲ್ಲದೆ ಸೊರಗುತ್ತವೆ ಎಂದೂ, ಹಾಗಾಗಿ ಚಲನಚಿತ್ರ ರಂಗದಲ್ಲಿ ತೊಡಗಿಕೊಂಡಿರುವ ಕಲಾವಿದರೂ ತಂತ್ರಜ್ಞರೂ ನಿರಾಶ್ರಿತರಾಗುತ್ತಾರೆ ಎಂದೂ ಕಾರಣವನ್ನು ಮುಂದೊಡ್ಡಲಾಯಿತು. ಈ ಪ್ರಯತ್ನದಿಂದ ಡಬ್ಬಿಂಗ್ ಚಿತ್ರಗಳು ಕನ್ನಡದಲ್ಲಿ ಬರಲಿಲ್ಲ. ಇಂತಹದೇ ಇನ್ನೊಂದು ಪ್ರಸಂಗ ಬಂದದ್ದು ಎಂಟನೆಯ ದಶಕದ ಕೊನೆಗೆ. ದೂರದರ್ಶನವು ಆಗ ಜನಪ್ರಿಯವಾಗಿದ್ದ ಧಾರಾವಾಹಿಯೊಂದನ್ನು ಹಿಂದಿ ಭಾಷೆಯಿಂದ ಭಾರತೀಯ ಭಾಷೆಗಳಿಗೆ ಡಬ್ ಮಾಡಲು ಯತ್ನಿಸಿತು. ಈಗಲೂ ಅದಕ್ಕೆ ಕರ್ನಾಟಕದಲ್ಲಿ ವ್ಯಾಪಕ ವಿರೋಧ ಉಂಟಾಯಿತು. ಆ ಧಾರಾವಾಹಿ ಕನ್ನಡಕ್ಕೆ ಬರಲಿಲ್ಲ. ಈ ವಿರೋಧದ ಹಿಂದಿನ ತರ್ಕ ಅಸ್ಪಷ್ಟವಾಗಿದೆ. ಏಕೆಂದರೆ ಚಲನಚಿತ್ರದ ತಂತ್ರಜ್ಞಾನವೇ ದೃಶ್ಯ ಮತ್ತು ಧ್ವನಿಗಳನ್ನು ವಿಘಟಿಸಿ ಬಿಟ್ಟಿದೆ. ಕನ್ನಡದ ಚಿತ್ರವೆಂದು ನಾವು ಗುರುತಿಸುವ ಕೃತಿಯಲ್ಲೂ ದೃಶ್ಯಗಳ ನಟನಟಿಯರ ಧ್ವನಿಗಳು ಮತ್ತು ನಾವು ಕೇಳಿಸಿಕೊಳ್ಳುವ ಧ್ವನಿಗಳೂ ಒಂದೇ ಆಗಿರಬೇಕಾಗಿಲ್ಲ. ಬಹುಪಾಲು ಸಂದರ್ಭದಲ್ಲಿ ಬೇರೆ ಯಾರೋ ನೀಡಿದ ಧ್ವನಿಗಳನ್ನು ನಾವು ಕೇಳುತ್ತೇವೆ. ಅಲ್ಲದೆ ದಿನದಿನದ ನೂರಾರು ಜಾಹೀರಾತುಗಳು ಕೂಡ ಹೀಗೆಯೇ ಡಬ್ ಆಗಿಯೇ ಬರುತ್ತವೆ. ಕನ್ನಡ ಚಿತ್ರರಂಗ ತಂತ್ರಜ್ಞಾನದ ಸೌಲಭ್ಯವನ್ನು ಬಳಸಿಕೊಳ್ಳುತ್ತಲೂ ಒಂದು ನಿಟ್ಟಿನಲ್ಲಿ ಅನ್ಯಭಾಷೆಯ ಚಿತ್ರವೊಂದನ್ನು ಕನ್ನಡಕ್ಕೆ ಭಾಷಾಂತರಿಸಲು ಅವಕಾಶ ಮಾಡಿಕೊಟ್ಟಿಲ್ಲ. ಇಲ್ಲಿ ಮೇಲ್ನೋಟಕ್ಕೆ ಭಾಷೆಯ ಪ್ರಶ್ನೆ ಮುಂಚೂಣಿಯಲ್ಲಿದೆ. ಭಾಷೆಯ ಪರವಾಗಿ ವಾದ ಮಾಡುವವರು ವಾಸ್ತವವಾಗಿ ಡಬ್ಬಿಂಗನ್ನು ಸಮರ್ಥಿಸಬೇಕು. ಏಕೆಂದರೆ ಅನ್ಯಭಾಷೆಯ ಚಲನಚಿತ್ರ ಒಂದನ್ನು ಕನ್ನಡಿಗರು ಈಗ ಆ ಅನ್ಯಭಾಷೆಯಲ್ಲಿಯೇ ನೋಡುತ್ತಿದ್ದಾರೆ. ಅಲ್ಲಿಯ ಮಾತುಗಳನ್ನು ಕನ್ನಡದಲ್ಲಿ ಕೇಳಿಸಿಕೊಳ್ಳುವ ಅವಕಾಶ ಅವರಿಗಿಲ್ಲ. ಡಬ್ಬಿಂಗ್ ನಡೆದರೆ ಅವರು ಬಹುಮಟ್ಟಿಗೆ ಚಲನಚಿತ್ರಗಳನ್ನು ಕನ್ನಡದ ಮೂಲಕವೇ ನೋಡುವ ಅವಕಾಶ ಪಡೆಯುತ್ತಾರೆ. ಇಂತಹ ಅವಕಾಶ ಸಿಗದಂತೆ ಮಾಡಿರುವ ಈ ಚಳುವಳಿ ಹೇಗೆ ಕನ್ನಡ ಪರ? ಹಾಗೆ

ನೋಡಿದರೆ ಕನ್ನಡಿಗರಿಗೆ ಭಾರತದ ಇತರ ಭಾಷೆಗಳ ಗ್ರಹಿಕೆಯ ಕೌಶಲಗಳು ಹೆಚ್ಚಾಗುತ್ತಿರುವುದಕ್ಕೆ ಆಯಾ ಭಾಷೆಯ ಚಲನಚಿತ್ರಗಳನ್ನು ಆಯಾ ಭಾಷೆಯ ಮೂಲಕವೇ ನೋಡುವ ಒತ್ತಾಯ ಇರುವುದೇ ಕಾರಣ. ಇದು ಸ್ವಾಗತಾರ್ಹ ಬೆಳವಣಿಗೆಯೋ ಅಥವಾ ಕನ್ನಡಿಗರಿಗೆ ಅನಿವಾರ್ಯವಾದ ಹೊರೆಯೋ ಎಂಬುದನ್ನು ನಾವಿನ್ನೂ ವಿವರವಾಗಿ ಚರ್ಚಿಸಬೇಕಾಗಿದೆ. ಅಲ್ಲದೆ ಡಬ್ಬಿಂಗ್ ವಿರೋಧಿಸುವ ಕನ್ನಡ ಚಲನಚಿತ್ರರಂಗ ಕನ್ನಡಿಗರ ಅವಕಾಶ ಲೋಪಗಳ ಕಾರಣ ಮುಂದೊಡ್ಡಿರುವುದು ಕೂಡ ಅಸ್ಪಷ್ಟವಾಗಿದೆ. ಅದನ್ನೆಲ್ಲಾ ಇಲ್ಲಿ ಚರ್ಚಿಸಲು ಅವಕಾಶವಿಲ್ಲ. ಒಟ್ಟಾರೆ ಇಂತಹ ಚಳುವಳಿಗಳು ಅಳವಡಿಸಿಕೊಳ್ಳುವ ತರ್ಕಗಳು ಎಷ್ಟೋ ವೇಳೆ ವಿರೋಧಾಭಾಸದಿಂದ ಕೂಡಿರುತ್ತವೆ. ತಾವು ವಿರೋಧಿಸುವ ಸಂಗತಿಗಳನ್ನೇ ತಾವೇ ಆಚರಿಸುತ್ತಿರುವ ವೈರುಧ್ಯಗಳು ಅವುಗಳಿಗೆ ಗೋಚರವಾಗುವುದೇ ಇಲ್ಲ.

ಕನ್ನಡ ಚಳುವಳಿಗಳು ಹೀಗೆ ಬಹುಮುಖಿಯಾಗಿ ನಡೆದಂತೆ ಕಂಡರೂ ಎಲ್ಲ ಕಡೆಯಲ್ಲೂ ಆತಂಕದ ಕಾರಣವೊಂದೇ ಮುಖ್ಯವಾಗಿದೆ. ಕನ್ನಡಕ್ಕೆ, ಕನ್ನಡಿಗರಿಗೆ ಹೊಸ ಅವಕಾಶಗಳು ರೂಪಗೊಳ್ಳಬೇಕು ಎಂಬ ಬೇಡಿಕೆಗಿಂತ, ಇರುವ ಅವಕಾಶ ಗಳಿಂದ ಅವರು ವಂಚಿತರಾಗುತ್ತಿದ್ದಾರೆ ಎಂಬ ಕಾಳಜಿಯೇ ಮುಖ್ಯವಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕನ್ನಡ ಸಮರ್ಥನೆಯ ನೆಪದಲ್ಲಿ ಸಾಮಾಜಿಕವಿನ್ಯಾಸದ ವೈರುಧ್ಯಗಳನ್ನು ಮುಂಚೂಣಿಗೆ ತರಲಾಗುತ್ತಿದೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಈ ಅಸಹನೆಯ ನೆಲೆ ಬಹಳ ತೀವ್ರವಾಗುತ್ತಿದೆ. ಹೀಗಾಗಲು ಇರುವ ಕಾರಣಗಳನ್ನು ಪ್ರತ್ಯೇಕ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ.

ಕನ್ನಡದ ಗುರುತುಗಳು

ಸಾಮಾನ್ಯವಾಗಿ ಭಾಷಾಸಂಸ್ಕೃತಿಯೊಂದು ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುವುದಕ್ಕಾಗಿ ಕೆಲವು ತಂತ್ರಗಳನ್ನು ಬೆಳೆಸುತ್ತದೆ. ಭಾಷಾಸಂಸ್ಕೃತಿಯೂ ಒಂದು ರಚನೆ. ಅದಕ್ಕೆ ಸಾಮಾಜಿಕವಿನ್ಯಾಸದಲ್ಲಿ ಒಂದು ಜೈವಿಕ ಮೂಲವಿಲ್ಲ. ಅದನ್ನು ನಿರ್ದಿಷ್ಟ ತಾತ್ತ್ವಿಕತೆಯೊಡನೆ ರೂಪಿಸಿ ಜನಸಮುದಾಯ ಅದನ್ನು ಒಪ್ಪುವಂತೆ ಮಾಡಬೇಕು. ಹಾಗೆ ಮಾಡಲು ನಿರಂತರ ಪ್ರಯತ್ನ ನಡೆಯುತ್ತಲೇ ಇರುತ್ತದೆ. ಹಲವು ನೆಲೆಗಳಲ್ಲಿ ಈ ಭಾಷಾಸಂಸ್ಕೃತಿಯ ದೃಢೀಕರಣವನ್ನು ಮಾಡುವ ಪ್ರಯತ್ನಗಳು ಕೆಲವೊಮ್ಮೆ ಪ್ರತ್ಯಕ್ಷವಾಗಿ ಮತ್ತೆ ಕೆಲವೊಮ್ಮೆ ಪರೋಕ್ಷವಾಗಿ ನಡೆಯುತ್ತಿರುತ್ತವೆ. ಕನ್ನಡ ಭಾಷೆಗೆ, ಈ ಅಧ್ಯಯನದಲ್ಲಿ ಬೇರೆಡೆಗೆ ಈಗಾಗಲೇ ಗಮನಿಸಿರುವಂತೆ, 'ಒಂದು ಭಾಷೆ' ಎಂಬ ಗುರುತಷ್ಟೇ ಸಾಲದು. ಏಕೆಂದರೆ ಅದು ಅಮೂರ್ತ. ಅಲ್ಲದೆ ಅದು ನಿರಾಕಾರ. ಕನ್ನಡ ಎಲ್ಲಿದೆ ಎಂಬ ಪ್ರಶ್ನೆಗೆ ಯಾರೂ ಉತ್ತರ ಕೊಡಲಾರರು. ಯಾವುದು ಹೀಗೆ ಅಮೂರ್ತ ಇಲ್ಲವೇ ನಿರಾಕಾರ ಆಗಿರುತ್ತದೋ ಅದನ್ನು ಒಂದು ಗುರುತಾಗಿ ಪರಿವರ್ತಿಸಲು ಬೇರೆ ಬೇರೆ ಹಾದಿಗಳನ್ನು ಹಿಡಿಯಲಾಗುತ್ತದೆ. ಅಂತಹ ಮೊದಲ ಹಾದಿ ಎಂದರೆ ಕನ್ನಡವನ್ನು ವ್ಯಕ್ತಿವಾಚಿಯನ್ನಾಗಿ ಪರಿವರ್ತಿಸುವುದು. ಕನ್ನಡ ಮಾತಾಡುವವರು ಕನ್ನಡಿಗರು. ಅಂದರೆ ಈ ಭಾಷೆ ನೆಲೆಗೊಂಡಿರುವ ವ್ಯಕ್ತಿಯನ್ನು ಒಂದು ಗುರುತಾಗಿ ಮಾಡಿಕೊಂಡು ಆ ವ್ಯಕ್ತಿಯ ಅಂತಸ್ಥ ಸಾಮರ್ಥ್ಯವನ್ನಾಗಿ ಕನ್ನಡವನ್ನು ಗುರುತು ಮಾಡಿಕೊಳ್ಳುವುದು. ಇದಲ್ಲದೆ ದೇಶವಾಚಿಯಾಗಿಯೂ ಕನ್ನಡ ಬಳಕೆಯಾಗುತ್ತಿದೆ. ನಾವೀಗಾಗಲೇ ಗುರುತಿಸಿರುವಂತೆ ಕನ್ನಡ ಮತ್ತು ಕರ್ನಾಟಕಗಳನ್ನು ಬಿಗಿದು ಕಟ್ಟುವ ನಿರ್ಧಾರ ರಾಜಕೀಯ ನೆಲೆಯದ್ದು. ಈ ಕಾರಣದಿಂದ ಕನ್ನಡ ಎಂಬುದು ಭಾಷಾವಾಚಿ; ಕನ್ನಡಿಗ ಎಂಬುದು ವ್ಯಕ್ತಿ ಇಲ್ಲವೇ ಸಮೂಹವಾಚಿ; ಮತ್ತು ಕರ್ನಾಟಕ ಎಂಬುದು ದೇಶವಾಚಿ. ಈ ಮೂರನ್ನು ಪರಸ್ಪರ ಸಂಬಂಧವುಳ್ಳ ಪರಿಕಲ್ಪನೆಗಳೆಂದೇ ಭಾವಿಸಲಾಗಿದೆ. ಅಂದರೆ ಒಂದನ್ನು ಇನ್ನೊಂದರ ಚಹರೆಯನ್ನಾಗಿ, ಗುರುತಾಗಿ ಪರಿಗಣಿಸಲಾಗುತ್ತದೆ.

ಕರ್ನಾಟಕದ ಚರಿತ್ರೆಯನ್ನು, ಅದರ ಸಾಂಸ್ಕೃತಿಕ ವೈವಿಧ್ಯವನ್ನು ಕನ್ನಡದ ಗುರುತುಗಳನ್ನಾಗಿ ಪರಿಗಣಿಸುವ ಇನ್ನೊಂದು ನೆಲೆ ಬೆಳೆದುಬಂದಿದೆ. ಬಹು ಹಿಂದಿನಿಂದಲೂ ನಮ್ಮ ಕವಿಗಳು ಹೀಗೆ ಭಾಷೆ, ಜನ ಮತ್ತು ದೇಶಗಳನ್ನು ಒಂದೇ ಉಸಿರಿನಲ್ಲಿ ಸಮೀಕರಿಸುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾರೆ. ಕಳೆದ ಐವತ್ತು ವರ್ಷಗಳಲ್ಲಿ ಹೀಗೆ ಈ

ಮೂರು ನೆಲೆಗಳನ್ನು ಬೆಸೆಯುತ್ತಿರುವಾಗಲೇ ಮತ್ತಷ್ಟು ಗುರುತುಗಳನ್ನು ಪೂರಕವಾಗಿ ರೂಪಿಸಿಕೊಡಲಾಗಿದೆ. ಅವುಗಳಲ್ಲಿ ಕೆಲವನ್ನು ಮುಂದೆ ಗಮನಿಸಲಿದ್ದೇವೆ.

ಕನ್ನಡ ತಾಯಿಯ ಪರಿಕಲ್ಪನೆ

ಕನ್ನಡ ಭಾಷೆಯನ್ನು ತಾಯಿಗೆ ಸಮೀಕರಿಸುವುದು ಹತ್ತೊಂಬತ್ತನೇ ಶತಮಾನದಿಂದೀಚೆಗೆ ಬೆಳೆದು ಬಂದ ಪ್ರಕ್ರಿಯೆ. ದೇಶವನ್ನು ಮತ್ತು ಭಾಷೆಯನ್ನು ತಾಯಿಗೆ ಸಮೀಕರಿಸಲಾಗುತ್ತಿದೆ. ಹೀಗೆ ಭಾಷೆ ಎಂಬ ತಾಯಿಯ ಪರಿಕಲ್ಪನೆ ಮೂಡಲು ನಿರ್ದಿಷ್ಟ ತಾತ್ತ್ವಿಕತೆಯೊಂದು ಕೆಲಸ ಮಾಡಿದೆ. ತಾಯಿಯ ಕಲ್ಪನೆಯೇ ಜೈವಿಕ ನೆಲೆಯದ್ದು. ಸಾಂಪ್ರದಾಯಿಕ ಲಾಲನೆ,ಪಾಲನೆ,ಪೋಷಣೆ ಇವು ಸಾಮಾಜಿಕ ಚಿಂತನೆಗಳಂತೆ ತಾಯಿಯ ಹೊಣೆಗಾರಿಕೆ. ಇಲ್ಲಿ ತಂದೆಯ ಪಾತ್ರ ನಗಣ್ಯ. ಕನ್ನಡವನ್ನು ಹೀಗೆ ತಾಯಿಯೆಂದು ಕಲ್ಪಿಸಿಕೊಳ್ಳುವ ಮೂಲಕ ಕನ್ನಡಿಗರ ನಡುವೆ ಒಂದು ಜೈವಿಕ ಬಂಧವನ್ನು ರೂಪಿಸಲಾಗುತ್ತಿದೆ. ತಾಯಿಯೇ ಮಕ್ಕಳ ನಡುವೆ ಇರುವ ಜೈವಿಕ ಬಂಧ; ತಂದೆ ಮತ್ತು ಮಕ್ಕಳ ನಡುವೆ ಇರುವ ಜೈವಿಕ ಬಂಧಕ್ಕಿಂತ ನಿಕಟವಾದದ್ದು. ಏನೇ ಇರಲಿ. ಇಪ್ಪತ್ತನೇ ಶತಮಾನದ ಮೊದಲರ್ಧದ ಕನ್ನಡ ಸಾಂಸ್ಕೃತಿಕ ವಲಯ ಈ ತಾಯಿಯ ಕಲ್ಪನೆಯನ್ನು ಎರಡು ರೀತಿಯಲ್ಲಿ ಬಳಸಿಕೊಂಡಿದೆ. ಒಂದು, ಪಾಲಕಿಯಾಗಿ. ಇನ್ನೊಂದು ರಕ್ಷಕಿಯಾಗಿ. ಕನ್ನಡ ತಾಯಿಯನ್ನು ಭುವನೇಶ್ವರಿಗೆ, ರಾಜರಾಜೇಶ್ವರಿಗೆ ಸಮೀಕರಿಸಿದ ಪ್ರಯತ್ನಗಳು ಗಮನಾರ್ಹ. ಏಕೆಂದರೆ ಇಲ್ಲಿ ತಾಯಿ ಕೇವಲ ಪಾಲಕಿಯಲ್ಲ, ರಕ್ಷಕಿ. ಅದಕ್ಕಾಗಿ ತನ್ನ ಉಗ್ರ ಅವತಾರವನ್ನು ತಳೆದು ನಿಲ್ಲಬಲ್ಲಳು. ಕನ್ನಡಕ್ಕೆ ಹೀಗೆ ಒಳಗಿನಿಂದಲೇ ಪೋಷಣೆ ಪಡೆಯುವ ಹೊತ್ತಿನಲ್ಲೇ ಹೊರಗಿನಿಂದ ಬರುವ ಆಕ್ರಮಣಕಾರಿ ಶಕ್ತಿಗಳಿಗೆ ಸಡ್ಡು ಹೊಡೆಯುವ ತಾಯಿಯ ರಕ್ಷೆಯೂ ಬೇಕು. ಹೀಗೆ ತಾಯಿಯನ್ನು ರಕ್ಷಕಿಯನ್ನಾಗಿ ಕಲ್ಪಿಸಿಕೊಂಡ ಕೂಡಲೇ ಕನ್ನಡಕ್ಕೆ ಎದುರಾಳಿಯಾದ ಇನ್ನೊಂದು ಭಾಷಾಸಂಸ್ಕೃತಿಯನ್ನು, ಅದರ ಅಸ್ತಿತ್ವವನ್ನು ಒಪ್ಪಿದಂತಾಯಿತು. ಏಕೀಕರಣದ ಅನಂತರದಲ್ಲಿ ಕನ್ನಡ ತಾಯಿಯ ಪರಿಕಲ್ಪನೆ ಬಲವಾಗಿ ಬೇರೂರಿದೆ. ಆಕೆಯನ್ನು ಸ್ಥಳೀಯ ಶ್ರದ್ಧಾದೈವ ಕೇಂದ್ರಗಳಾದ ಮಾತೃದೇವತೆಯೊಡನೆ ಸಮೀಕರಿಸುವ ಯತ್ನಗಳು ನಡೆದಿವೆ. ಕನ್ನಡವನ್ನು ತಾಯಿಯೆಂದು ಆರಾಧಿಸುವ ಈ ಪರಿಕಲ್ಪನೆ ಅದಕ್ಕೆ ಅನುಕೂಲಕರವಾದ ಇತರ ಪರಿವೇಶವನ್ನು ಸೃಷ್ಟಿಸಿದೆ. ಮಾತೃದೇವತೆಗಳ ಸಂಬಂಧದಲ್ಲಿ ಇರುವ ಜಾತ್ರೆಗಳಂತೆ ಕನ್ನಡದ ಜಾತ್ರೆಗಳನ್ನು ಹಲವು ರೀತಿಯಲ್ಲಿ ಆಯೋಜಿಸಲಾಗುತ್ತದೆ. ನವೆಂಬರ್ ೧ರ ರಾಜ್ಯೋತ್ಸವ, ನಾಡಹಬ್ಬದ ದಸರಾ ಮೆರವಣಿಗೆ, ಸಾಹಿತ್ಯ ಸಮ್ಮೇಳನಗಳು ಇವೆಲ್ಲಾ ಇಂಥಾ ಆಚರಣೆಗಳು. ಇಂತಹ ಕಡೆಗಳಲ್ಲೆಲ್ಲಾ ಬಿಡದೆ ಕನ್ನಡ ತಾಯಿಯನ್ನು ಆಹ್ವಾನಿಸಲಾಗುತ್ತದೆ; ಆರಾಧಿಸಲಾಗುತ್ತದೆ; ಪೂಜಿಸಲಾಗುತ್ತದೆ. ಜಾತ್ರೆಗಳಲ್ಲಿ ಹೇಗೆ ಒಂದು ಸಾಮುದಾಯಿಕ ಶಕ್ತಿ ಬಹಿರ್ ರೂಪವನ್ನು ತಾಳುತ್ತದೆಯೋ ಇಲ್ಲೂ ಅದೇ ರೀತಿ ಕನ್ನಡ ಭಾಷಾಪ್ರೇಮ ಹೊರ ರೂಪವನ್ನು ಪಡೆದುಕೊಳ್ಳುತ್ತದೆ.

ಇದಲ್ಲದೆ ಚಾಲ್ತಿಗೆ ಬಂದ ಇನ್ನೊಂದು ಕನ್ನಡದ ಕುರುಹು ಎಂದರೆ ಕನ್ನಡದ ಬಾವುಟ. ಏಕೀಕರಣ ಹೋರಾಟದ ಸಂದರ್ಭದಲ್ಲಿ ಇಂತಹ ಬಾವುಟವೊಂದನ್ನು

ಕಲ್ಪಿಸಿಕೊಳ್ಳಲಾಯಿತು. ಈಗದು ಅಧಿಕೃತವಾಗಿ ಕನ್ನಡದ ಗುರುತಾಗಿದೆ. ಹಳದಿ ಮತ್ತು ಕೆಂಪು ಬಣ್ಣಗಳ ಪಟ್ಟಿಗಳು, ನಡುವೆ ಕರ್ನಾಟಕದ ನಕ್ಷೆಯ ಚಿತ್ರ, ಇವು ಈ ಬಾವುಟದ ವಿವರಗಳು. ಹಳದಿ ಮತ್ತು ಕೆಂಪು ಸಾಂಪ್ರದಾಯಿಕವಾಗಿ ಐದೆತನದ ಬಣ್ಣಗಳು. ಒಂದು ಅರಸಿನವನ್ನು ಇನ್ನೊಂದು ಕುಂಕುಮವನ್ನು ಪ್ರತಿನಿಧಿಸುತ್ತದೆ. ನಮ್ಮ ಸಾಂಸ್ಕೃತಿಕ ವಿನ್ಯಾಸದಲ್ಲಿ ಅರಿಸಿನ ಮತ್ತು ಕುಂಕುಮ ಮಾತೃದೇವತೆಯ ಆರಾಧನೆಯ ಗುರುತುಗಳು, ಎಲ್ಲಮ್ಮನ ಭಂಡಾರದಲ್ಲಿ ಈ ಬಣ್ಣ ಇರುವುದನ್ನು ನೋಡಬಹುದು. ಕನ್ನಡ ಬಾವುಟಕ್ಕೆ ಈ ಎರಡು ಬಣ್ಣಗಳನ್ನು ಆಯ್ದುಕೊಳ್ಳುವ ಮೂಲಕ ಪರೋಕ್ಷವಾಗಿ ಕನ್ನಡದ ಮಾತೃದೇವತೆಯ ಪರಿಕಲ್ಪನೆಯನ್ನು ಮರು ದೃಢೀಕರಿಸಲಾಗಿದೆ. ಕಳೆದ ಕೆಲವು ದಶಕಗಳಿಂದ ಬಾವುಟದ ಈ ಎರಡು ಬಣ್ಣಗಳು ಬಾವುಟದಲ್ಲಿ ಮಾತ್ರವಲ್ಲದೆ ಎಲ್ಲ ಕಡೆಯೂ ಕನ್ನಡದ ಪ್ರತೀಕವಾಗಿ ಬಳಕೆಯಾಗುತ್ತಿವೆ. ಇದಕ್ಕೆ ಹತ್ತಾರು ಉದಾಹರಣೆಗಳನ್ನು ನೋಡಬಹುದು.

ಬಾವುಟದಂತೆ ಇನ್ನೊಂದು ಗುರುತನ್ನು ಕೂಡಾ ಕನ್ನಡಕ್ಕಾಗಿ ಕಲ್ಪಿಸಿಕೊಂಡಿದ್ದೇವೆ. ಅದೇ ನಾಡಗೀತೆ. ಏಕೀಕರಣದ ಸಂದರ್ಭದಲ್ಲಿ ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಎಂಬ ಗೀತೆಯನ್ನು ನಾಡಗೀತೆಯನ್ನಾಗಿ ಸ್ವೀಕರಿಸಲಾಗಿತ್ತು. ಏಕೀಕರಣದ ಅನಂತರ ಈ ಗೀತೆಯನ್ನು ಬಳಸಲು ಸಿದ್ಧರಿರಲಿಲ್ಲ. ಆಗ ನಡೆದ ಒಂದು ವಿವಾದದಲ್ಲಿ ಉದಯವಾಗಲಿ ಎಂಬ ಪದದ ಬಳಕೆಯನ್ನು ಪ್ರಶ್ನಿಸಲಾಯಿತು. ಈಗಾಗಲೇ ಕರ್ನಾಟಕ ರಾಜ್ಯ ನಿರ್ಮಾಣವಾಗಿರುವುದರಿಂದ 'ಉದಯವಾಗಲಿ' ಎಂದು ಹಾರೈಸುವುದು ಅನಗತ್ಯ ಎಂದು ಕೆಲವರು ವಾದಿಸಿದರೆ, ಮತ್ತೆ ಕೆಲವರು ಕರ್ನಾಟಕ ಉದಯಿಸಿದ ಕ್ರಿಯೆ ಪೂರ್ಣಗೊಂಡಿಲ್ಲ, ಅದು ನಿರಂತರವಾಗಿ ಉದಯಿಸುತ್ತಲೇ ಇರಬೇಕಾಗಿದೆ, ಪ್ರತಿದಿನದ ಸೂರ್ಯೋದಯದಂತೆ ಎಂದು ಹೇಳಿದರು. ಇಂತಹ ಸಮರ್ಥನೆ ದ.ರಾ.ಬೇಂದ್ರೆ ಅವರಂತಹ ಕವಿಗಳಿಂದ ಬಂದದ್ದು. ಏನೇ ಆಗಲಿ ಏಕೀಕರಣದ ಅನಂತರ ನಾಡಗೀತೆಯನ್ನಾಗಿ ಬೇರೊಂದು ರಚನೆಯನ್ನು ಆಯ್ದುಕೊಳ್ಳಬೇಕೆಂಬ ವಾದ ಬಲಪಡೆಯತೊಡಗಿತ್ತು. ಈ ನಾಡಗೀತೆಯ ಸ್ಥಾನಕ್ಕೆ ಬಹುದೀರ್ಘ ವಿವಾದಗಳ ಅನಂತರ ಕುವೆಂಪು ಅವರ 'ಜೈ ಭಾರತ ಜನನಿಯ ತನುಜಾತೆ' ಎಂದು ಆರಂಭವಾಗುವ ಗೀತೆಯನ್ನು ಆಯ್ಕೆ ಮಾಡಲಾಯಿತು. ಇದು ಕೂಡಾ ಒಂದು ರಾಜಕೀಯ ನಿರ್ಧಾರವೇ ಆಗಿದೆ. ಆದರೆ ಈ ಗೀತೆಗೆ ಅನೌಪಚಾರಿಕವಾಗಿ ನಾಡಗೀತೆಯ ಮನ್ನಣೆ ಆ ವೇಳೆಗಾಗಲೇ ದೊರಕಿತ್ತು. ೧೯೬೩-೬೪ರ ಚಲನಚಿತ್ರ 'ಮನಮೆಚ್ಚಿದ ಮಡದಿ'ಯಲ್ಲಿ ಈ ಗೀತೆಯನ್ನು ಬಳಸಲಾಗಿತ್ತು. ಹಲವು ಗಾಯಕರು ವಿವಿಧ ಬಗೆಗಳಲ್ಲಿ ಸಮೂಹಗೀತೆಯನ್ನಾಗಿ ಇದನ್ನು ಹೆಚ್ಚು ಬಳಕೆಗೆ ತಂದಿದ್ದರು.ಹೀಗೆ ಕನ್ನಡಿಗರ ಗುರುತಾಗಿ ಒಂದು ನಾಡಗೀತೆಯನ್ನು ಆಯ್ದುಕೊಳ್ಳುವಂತೆ ಸೂಚನೆ ನೀಡಲು ಬೇರೆ ಬೇರೆ ಪ್ರಯತ್ನಗಳು ನಡೆಯುತ್ತಲೇ ಇದ್ದವು. ಮುಖ್ಯವಾಗಿ ಚಲನಚಿತ್ರಗಳು ಇಂತಹ ಹಲವು ಸ್ವತಂತ್ರ ರಚನೆಗಳನ್ನು ಬಳಸಿ ಜನಪ್ರಿಯಗೊಳಿಸಿದವು. ಅಂತಹ ಗೀತೆಗಳಲ್ಲಿ ಸುಮಾರು ೧೦ ರಿಂದ ೧೫ ಇಂದಿಗೂ

ಜನಪ್ರಿಯವಾಗಿವೆ. ಕವಿಗಳ ರಚನೆಗಳು ಚಿತ್ರದಲ್ಲಿ ಬಳಕೆಯಾದ ಇನ್ನೊಂದು ನಿದರ್ಶನವೆಂದರೆ ಎಂ.ಗೋವಿಂದ ಪೈಯವರ 'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ' ಎಂಬ ಗೀತೆ. ಇದು ಅರವತ್ತರ ಸುಮಾರಿನ 'ಕುಲವಧು' ಚಿತ್ರದಲ್ಲಿ ಬಳಕೆಯಾಯಿತು. ಇಷ್ಟೆಲ್ಲಾ ವಿವಾದಗಳು ನಡೆದ ಮೇಲೆ ಕೊನೆಗೆ ಕುವೆಂಪು ಅವರ ಪೂರ್ವೋಕ್ತ ಕವಿತೆಯನ್ನು ನಾಡಗೀತೆ ಎಂದು ಆಯ್ಕೆ ಮಾಡಲಾಗಿದೆ. ಆದರೆ ವಿವಾದಗಳು ಮುಗಿದಿಲ್ಲ. ಆ ಗೀತೆಯ ಯಾವ ಚರಣಗಳು ನಾಡಗೀತೆಯೆಂದು ಪರಿಗಣಿತವಾಗಬೇಕು ಎಂಬುದು ಒಂದು ಪ್ರಶ್ನೆ. ಅದರ ಪಾಠಾಂತರಗಳ ಗೊಂದಲ ಇನ್ನೊಂದು ಪ್ರಶ್ನೆ. ಚರಣವೊಂದರಲ್ಲಿ ಬರುವ ಮಧ್ವಾಚಾರ್ಯರ ಹೆಸರನ್ನು ತೆಗೆದು ಅಲ್ಲಿ ಬಸವ ಎಂಬ ಪದವನ್ನು ಇರಿಸಿದ್ದು ಇನ್ನೊಂದು ವಿವಾದಕ್ಕೆ ಕಾರಣವಾಯಿತು. ಈಗ ಅದನ್ನು ಅಧಿಕೃತವಾಗಿ ಹಾಡುವ ಧಾಟಿ ಯಾವುದು ಎಂಬ ಪ್ರಶ್ನೆ ಮತ್ತೊಂದು ವಿವಾದಕ್ಕೆ ಕಾರಣವಾಗಿದೆ.

ಧ್ವಜದ ಗುರುತನ್ನು ಒಪ್ಪಿದಷ್ಟು ಸುಲಭವಾಗಿ ಗೀತೆಯನ್ನು ಒಪ್ಪದಿರಲು ಕಾರಣವೇನು? ಧ್ವಜ, ಅದರ ಬಣ್ಣಗಳು ಸಾಂಕೇತಿಕವಾದವು. ಅವುಗಳಿಗೆ ಮೂರ್ತ ಅರ್ಥಗಳು ಇರುವುದಿಲ್ಲ. ಸಾಂಸ್ಕೃತಿಕ ನೆನಪುಗಳು ಇದ್ದರೂ ಅದು ಮುಂಚೂಣಿಗೆ ಬರುವುದಿಲ್ಲ. ಆದರೆ ಗೀತೆಯ ಮಾತು ಹಾಗಲ್ಲ. ಅಲ್ಲಿ ಮೂರ್ತ ಅರ್ಥಗಳನ್ನು ನೀಡುವ ಪದಗಳಿರುತ್ತವೆ. ಈ ಮೂರ್ತ ಅರ್ಥದ ಜೊತೆಗೆ ಲಕ್ಷಣಾರ್ಥಗಳು ಕೂಡಾ ಇರುತ್ತವೆ. ಆದ್ದರಿಂದ ಭಾಷಾಸಮುದಾಯ ನಾಡಗೀತೆಯನ್ನು ತಾನು ಒಪ್ಪುವ ಸಾಂಸ್ಕೃತಿಕ ಪರಂಪರೆಯ ಪ್ರತೀಕವೆಂದು ನಂಬಬೇಕು. ಆದರೆ ಈ ನಾಡಗೀತೆಯನ್ನು ಆಯ್ಕೆ ಮಾಡಿದ ಹೊತ್ತಿಗೆ ಕನ್ನಡ ನಾಡಿನ ಸಮುದಾಯಗಳು ತಂತಮ್ಮ ಸಾಂಸ್ಕೃತಿಕ ಪರಂಪರೆಗಳು ಒಂದೇ ಅಲ್ಲ; ಅವುಗಳ ನಡುವೆ ಕೊಡುಕೊಳೆಯ ಸಂಬಂಧಗಳಿದ್ದರೂ ಪ್ರತಿಯೊಂದೂ ಅನನ್ಯವಾಗಿವೆಯೆಂದು ಸಮರ್ಥಿಸುತ್ತಿರುವ ಸಂದರ್ಭವಿದು. ಅಂದರೆ ಒಂದು ಸಾಂಸ್ಕೃತಿಕ ಪರಂಪರೆಗೆ, ಒಂದು ಸಾಂಸ್ಕೃತಿಕ ನೆನಪಿಗೆ, ಒಂದು ಚರಿತ್ರೆಗೆ, ಒಂದು ಸಾಮಾಜಿಕ, ರಾಜಕೀಯ ವಿನ್ಯಾಸಕ್ಕೆ ಎಲ್ಲರೂ ಬದ್ಧರಲ್ಲ ಎಂಬ ನಂಬಿಕೆ, ಆಚರಣೆಗಳು ಬಲಗೊಂಡಿರುವ ಈ ಸನ್ನಿವೇಶದಲ್ಲಿ ಸಹಜವಾಗಿಯೇ ಕನ್ನಡ ನಾಡಿನ ನಾಡಗೀತೆಯ ಬಗೆಗೆ ಒಂದು ವಿವಾದ ಸೃಷ್ಟಿಯಾಗಿದೆ.

ನಾಡಗೀತೆಯ ಇನ್ನೊಂದು ಸಮಸ್ಯೆ ಎಂದರೆ ಅದು ಕಾಲದೇಶಬದ್ಧ ಚರಿತ್ರೆಯೊಂದರ ಸ್ಮೃತಿಯನ್ನು ಅಳವಡಿಸಿಕೊಂಡಿರುತ್ತದೆ; ಆ ಸ್ಮೃತಿಗೆ ಭಾಷಿಕರೆಲ್ಲರೂ ಹಕ್ಕುದಾರರು ಎಂಬ ಪೂರ್ವನಿರ್ಧಾರಿತ ತರ್ಕವನ್ನು ಹೊಂದಿರುತ್ತದೆ. ಯಾವುದೇ ನಾಡಗೀತೆ ಕೇವಲ ಸಮಕಾಲೀನ ವಿನ್ಯಾಸಗಳನ್ನು ಮಾತ್ರ ತನ್ನ ಭಾಷಿಕ ಶರೀರದಲ್ಲಿ ಹೊಂದಿರುವುದಿಲ್ಲ. ಅದು ವಿವರಿಸುವ, ಮೆಚ್ಚುವ ಚರಿತ್ರೆ ಸಹಜವಾಗಿಯೇ ಕೆಲವು ಆಯ್ಕೆಗಳನ್ನು ಮತ್ತು ಕೆಲವು ನಿರಾಕರಣೆಗಳನ್ನು ಹೊಂದಿರುತ್ತದೆ. ಕುವೆಂಪು ಅವರ ನಾಡಗೀತೆಯನ್ನೇ ಗಮನಿಸೋಣ. ಅದರಲ್ಲಿ ಭಾರತದಲ್ಲಿ ಅಂತರ್ಗತವಾದ ಕರ್ನಾಟಕವನ್ನು ಕಲ್ಪಿಸಲಾಗಿದೆ. ಭಾರತ ಮತ್ತು ಕರ್ನಾಟಕಗಳ ನಡುವೆ ತಾಯಿಮಗಳ

ಸಂಬಂಧವನ್ನು ರೂಪಿಸಿದ್ದಾರೆ. ಧಾರ್ಮಿಕ ಮತ್ತು ರಾಜಕೀಯ ಚರಿತ್ರೆಗಳ ಒಂದು ಅಖಿಲ ಭಾರತ ಪರಂಪರೆಯೊಳಗೆ ಕರ್ನಾಟಕದ ಧಾರ್ಮಿಕ ಮತ್ತು ರಾಜಕೀಯ ಪರಂಪರೆಯನ್ನು ಸಂಯೋಜಿಸಲಾಗಿದೆ. ಇವೆರಡರ ಜೊತೆಗೆ ಕವಿಗಳ ಪರಂಪರೆಯೊಂದನ್ನು ನೆನಪಿಸಿಕೊಳ್ಳುತ್ತಿದೆ. ಕವಿಗಳ ಪರಂಪರೆಯನ್ನು ಕಾಲ,ದೇಶಮುಕ್ತ ಎಂದು ತಿಳಿದರೂ ರಾಜಕೀಯ ಚರಿತ್ರೆಗೆ ಈ ಮಾತನ್ನು ಅನ್ವಯಿಸಲು ಬರುವುದಿಲ್ಲ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವ ಈ ದಿನಗಳಲ್ಲಿ ಸಾಮಂತಶಾಹಿಯ ನೆನಪುಗಳನ್ನು ನಮ್ಮ ಪರಂಪರೆಯ ಹೆಮ್ಮೆ ಎಂದು ಹಾಡುವ ಗೀತೆ ಸಹಜವಾಗಿಯೇ ವಿವಾದಗಳಿಗೆ ಅನುವು ಮಾಡಿಕೊಡುತ್ತದೆ. ಆದರೆ ನಮ್ಮ ಸದ್ಯದ ಸಾಮಾಜಿಕ ಚಿಂತನೆಗಳು ಚರಿತ್ರೆಯ ಬಗೆಗೆ ಇಬ್ಬಂದಿತನವನ್ನು ಪ್ರದರ್ಶಿಸುತ್ತವೆ. ಒಂದೆಡೆ ಆ ಚರಿತ್ರೆಯ ಜನವಿರೋಧಿ ನೆನಪುಗಳಿಂದ ಹೊರಬರಲು ಇಂದಿನ ತಲೆಮಾರು ಯತ್ನಿಸುತ್ತಿರುವಾಗಲೇ, ಆ ನೆನಪುಗಳನ್ನು ನಮ್ಮ ಸಾಂಸ್ಕೃತಿಕ ಆಸ್ತಿ ಎಂಬಂತೆ ಇನ್ನೊಂದೆಡೆ ಬಿಂಬಿಸಲಾಗುತ್ತದೆ. ಹಾಗೆ ನೋಡಿದರೆ ಕನ್ನಡ ಸಮುದಾಯದ ಇಂತಹ ಗುರುತುಗಳನ್ನು ಕಲ್ಪಿಸುವ ಉದ್ದೇಶವೇ ಈ ರೀತಿಯದು. ಆ ಸಮುದಾಯವನ್ನು ಒಟ್ಟುಗೂಡಿಸಲು ಹೀಗೆ ಕಲ್ಪಿತ ಸಮಾನಾಂಶಗಳನ್ನು ಎದುರಿಗೆ ಇರಿಸಲಾಗುತ್ತದೆ. ಅವೆಲ್ಲವುಗಳ ರಕ್ಷಣೆಗೆ ಸಮುದಾಯ ಹೊಣೆ ಎನ್ನಲಾಗುತ್ತದೆ. ಅವುಗಳ ಹಕ್ಕುದಾರರು ಭಾಷಿಕರು ಎಂಬ ಚಿಂತನೆಯನ್ನು ಬೆಳೆಸಲಾಗುತ್ತದೆ.

ಕನ್ನಡ ಗುರುತುಗಳಲ್ಲಿ ಮೇಲೆ ಹೇಳಿದ ಬಾಹ್ಯ ಆಚರಣೆಯ ಕೆಲವು ಪ್ರತೀಕಗಳನ್ನು ಬಿಟ್ಟರೆ ಉಳಿದಂತೆ ಇನ್ನೂ ಹತ್ತಾರು ಸಂಗತಿಗಳನ್ನು ಪ್ರಾಸಂಗಿಕವಾಗಿ ಗುರುತುಗಳನ್ನಾಗಿ ಪರಿವರ್ತಿಸಲಾಗುತ್ತದೆ. ಅವುಗಳಲ್ಲಿ ರಾಜ್ಯದ ಭೌಗೋಳಿಕ ಗಡಿಗೆರೆಯೂ ಒಂದು. ಈ ಗಡಿಗೆರೆ ಒಂದು ರಾಜಕೀಯ ನಿರ್ಧಾರವೆಂದು ಗಮನಿಸಿದ್ದೇವೆ. ಭೂಪಟದಲ್ಲಿ ನಾವು ಕಾಣುವ ಆ ಗೆರೆಗಳಿಗೆ ಯಾವ ಜೀವಂತಿಕೆಯ ಮಿಡಿತವೂ ಇರುವುದಿಲ್ಲ. ಆದರೆ ಆ ಗೆರೆಗಳನ್ನು ನಮ್ಮ ಸಾಮುದಾಯಿಕ ಆಸ್ತಿ ಎಂದೂ, ಅದರ ಇಂಚಿಂಚನ್ನೂ ರಕ್ಷಿಸುವುದು ಎಲ್ಲ ಕನ್ನಡಿಗರ ಕರ್ತವ್ಯವೆಂದೂ ಹೇಳಲಾಗುತ್ತದೆ. ಕಾಲಕಾಲಕ್ಕೆ ಅಂತಹ ಉದ್ದೀಪಕ ಪ್ರಕ್ರಿಯೆಗಳನ್ನು ನಡೆಸಲಾಗುತ್ತದೆ. ಈ ಗಡಿಗೆರೆಗಳು ಜನಸಮುದಾಯಗಳ ನಡುವೆ ಹರಿಯುವ ಗೋಡೆಗಳು. ಈ ಗೋಡೆಗಳು ಕಲ್ಪಿತವಾದರೂ ಅವುಗಳಿಗೆ ಸಾಮಾಜಿಕ, ಆರ್ಥಿಕ ವಾಸ್ತವವಿರುತ್ತದೆ. ಅವುಗಳ ಆಸುಪಾಸಿನಲ್ಲಿ ಜೀವಿಸುವ ಜನರ ದೈನಿಕ ಲಯಗಳನ್ನು ಒಂದಲ್ಲ ಒಂದು ರೀತಿ ಇವು ಪ್ರಭಾವಿಸುತ್ತವೆ. ಆದರೆ ಒಟ್ಟು ಭಾಷಾಸಮುದಾಯ ಈ ಅನುಭವದ ವ್ಯಾಪ್ತಿಯಲ್ಲಿ ನಿಲುಕುವುದಿಲ್ಲ. ಆದರೂ ಭಾವನಾತ್ಮಕವಾಗಿ ಒಂದು ಸ್ವ ಮತ್ತು ಇನ್ನೊಂದು ಅನ್ಯ ಎಂಬ ಚೌಕಟ್ಟನ್ನು ರೂಪಿಸಲಾಗುತ್ತದೆ. ಈ ಸ್ವ-ಅನ್ಯದ ಪರಿಕಲ್ಪನೆ ಇಂತಹ ಸಂದರ್ಭಗಳಲ್ಲಿ ಆಳುವ ವ್ಯವಸ್ಥೆಗೆ ಅನುಕೂಲಕರ ಪರಿಕರವಾಗಿ ಮಾರ್ಪಡುತ್ತದೆ. ಕರ್ನಾಟಕದ ಸಂದರ್ಭದಲ್ಲಿ ಕರ್ನಾಟಕ-ಮಹಾರಾಷ್ಟ್ರ, ಕರ್ನಾಟಕ-ತಮಿಳುನಾಡು, ಕರ್ನಾಟಕ-ಆಂಧ್ರಪ್ರದೇಶ, ಕರ್ನಾಟಕ-ಕೇರಳ ಮತ್ತು ಕರ್ನಾಟಕ-ಗೋವಾ ಎಂಬ ಸ್ವ-ಅನ್ಯ ಚೌಕಟ್ಟುಗಳನ್ನು

ಕಳೆದ ಐದು ದಶಕಗಳಲ್ಲಿ ಮತ್ತೆ ಮತ್ತೆ ಬಳಸಿಕೊಳ್ಳಲಾಗಿದೆ. ಈ ಗಡಿಗೆರೆಗಳು ಭೌಗೋಳಿಕ ಚೌಕಟ್ಟನ್ನು ಒಂದೆಡೆಗೆ ರೂಪಿಸುತ್ತಿದ್ದರೆ ಇವುಗಳನ್ನು ಭೇದಿಸುವ ನೈಸರ್ಗಿಕ ಮತ್ತು ಮಾನವ ನಿರ್ಮಿತ ಸಂಗತಿಗಳು ಹಲವಿದೆ. ಉದಾ.ಗೆ ನದಿಗಳು. ನದಿಗಳು ರಾಜ್ಯಗಡಿಗೆರೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದ ನೈಸರ್ಗಿಕ ಸಂಗತಿಗಳು. ಅವು ಸಾವಿರಾರು ವರ್ಷಗಳಿಂದ ತಮ್ಮ ಪಾತ್ರವನ್ನು ತಾವು ರೂಪಿಸಿಕೊಂಡಿವೆ. ಅವು ಸಂಪನ್ಮೂಲಗಳು ಎಂಬ ಕಾರಣದಿಂದ ಈ ಸ್ವ–ಅನ್ಯ ಪರಿಕಲ್ಪನೆಯಲ್ಲಿ ಸಂಘರ್ಷದ ಬಿಂದುಗಳಾಗುತ್ತವೆ. ಹೀಗೆಯೇ ಮಾನವ ನಿರ್ಮಿತ ಭೇದಕಗಳೂ ಹಲವಿವೆ. ಉದಾ.ಗೆ ರಸ್ತೆಗಳು ಮತ್ತು ರೈಲು ಮಾರ್ಗಗಳು. ಕರ್ನಾಟಕವನ್ನು ಭಾಷಿಕ ನೆಲೆಯಲ್ಲಿ ರೂಪಿಸಿ ಅದಕ್ಕೊಂದು ಗಡಿಗೆರೆಯನ್ನು ಕೊರೆದರೂ ಅನಂತರದ ಪ್ರಗತಿಯ ನೆಲೆಗಳು ಬೇರೊಂದು ರೀತಿಯ ಸಂಪರ್ಕಜಾಲವನ್ನು ನಿರ್ಮಿಸಿವೆ. ಬೀದರ್ ಜಿಲ್ಲೆಯ ವ್ಯಕ್ತಿಗೆ ಬೆಂಗಳೂರು ಹದಿನೆಂಟರಿಂದ ಇಪ್ಪತ್ತು ಗಂಟೆಗಳಷ್ಟು ಪ್ರಯಾಣದ ದೂರದಲ್ಲಿದ್ದರೆ ಹೈದ್ರಾಬಾದ್ ಮೂರು ಗಂಟೆಗಳ ಪ್ರಯಾಣದ ಅಂತರದಲ್ಲಿದೆ. ಅರ್ಥವಿಷ್ಟೇ. ಜನರ ಬದುಕಿನ ವಿನ್ಯಾಸಗಳು ನಾವು ಗುರುತಾಗಿ ಕೊಡುವ ಗಡಿಗೆರೆಗಳನ್ನು ನಂಬಿ ಕೂರುವುದಿಲ್ಲ. ತನ್ನದೇ ಆದ ವಿಧಾನದಲ್ಲಿ ಅವರ ಬದುಕು ವಿನ್ಯಾಸಗಳನ್ನು ರೂಪಿಸಿಕೊಳ್ಳುತ್ತದೆ. ಹೀಗೆ ಸ್ವ–ಅನ್ಯ ಪರಿಕಲ್ಪನೆ ಕರಗಿಹೋಗುತ್ತದೆ ಎನ್ನುವ ಆತಂಕದಿಂದಲೇ ಮತ್ತೆ ಮತ್ತೆ ಈ ಗುರುತುಗಳನ್ನು ಮರುಸ್ಥಾಪಿಸುವ ಕೆಲಸವನ್ನು ಮಾಡಲಾಗುತ್ತದೆ.

ಹೊಸ ತಂತ್ರಜ್ಞಾನ ಈಗ ಭೌಗೋಳಿಕ ಗಡಿಗೆರೆಗಳನ್ನು ಮತ್ತಷ್ಟು ಹುಸಿಗೊಳಿಸಿದೆ. ಜಾಗತೀಕರಣದ ಮೂಲ ಉದ್ದೇಶವೇ ಗಡಿಗಳಿಲ್ಲದ ಲೋಕದ ಕಲ್ಪನೆ. ಅವುಗಳ ಸಂಪರ್ಕ ವಿಧಾನವೇ ನೆಲವನ್ನು ಬಿಟ್ಟಿರುತ್ತದೆ ಎಂಬ ಅಂಶವೇ ಒಂದು ಪ್ರತೀಕವೆಂದು ತೋರುತ್ತದೆ. ನಾವು ನೆಲದಲ್ಲಿ ಗೋಡೆಗಳನ್ನು ಕಟ್ಟುತ್ತಿದ್ದರೆ ಇಡೀ ಆಕಾಶವೇ ರಂಧ್ರಮಯವಾಗಿ ಆ ರಂಧ್ರಗಳ ಮೂಲಕ ಹೊರಜಗತ್ತು ಒಳಕ್ಕೆ, ಒಳಜಗತ್ತು ಹೊರಕ್ಕೆ ಚಲಿಸತೊಡಗುತ್ತದೆ. ಈ ಪ್ರಕ್ರಿಯೆಗೆ ಕರ್ನಾಟಕವೂ ಹೊರತಾಗಿಲ್ಲ. ಕಳೆದ ಒಂದೂವರೆ ದಶಕದ ನಮ್ಮ ಆರ್ಥಿಕ ಪ್ರಗತಿಯನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ದುಡಿಯುವವರು ಈ ರಾಜ್ಯದ ಚೌಕಟ್ಟಿನಲ್ಲಿ ಇದ್ದರೂ ಸಂಪರ್ಕ ಮಾತ್ರ ಜಾಗತಿಕವಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಕನ್ನಡದ ಮಣ್ಣು, ಕನ್ನಡದ ಗಾಳಿ, ಕನ್ನಡದ ನೀರು ಎಂಬ ಪರಿಕಲ್ಪನೆಗಳೇ ಭಾವುಕವಾಗಿ ಬಿಡುತ್ತವೆ, ಮತ್ತು ಅಷ್ಟೇ ನಿರರ್ಥಕವಾಗುತ್ತವೆ.

ಈ ಸಂದರ್ಭದಲ್ಲಿಯೇ ಕುವೆಂಪು ಕಲ್ಪಿಸಿದ ರಾಜ್ಯ ಕಲ್ಪನೆಯ ಚರ್ಚೆ ಅಗತ್ಯ. ಒಂದು ನಿರ್ದಿಷ್ಟ ಚಾರಿತ್ರಿಕ ಪ್ರಸಂಗವೊಂದರಲ್ಲಿ ಅವರು ಬರೆದ ಗೀತೆಯೊಂದು ಇಡೀ ಕರ್ನಾಟಕವನ್ನು ಕಾಲದೇಶಾತೀತವಾಗಿ ಕಲ್ಪಿಸಿಕೊಳ್ಳುತ್ತದೆ. ಅಲ್ಲಿಯ ಯಾವ ಮುಂದಾಳುಗಳೂ ಈ ಕಾಲದವರಲ್ಲ. ಯಾವದೋ ಗತದ ರಾಜರು, ಕವಿಗಳು, ಕಲಿಗಳು. ಅಖಂಡ ಕರ್ನಾಟಕವೆಂದು ಕುವೆಂಪು ಕರೆಯುವಾಗ ಅವರು ಈ ಕಾಲದ ಭೌಗೋಳಿಕ ಕರ್ನಾಟಕವನ್ನು ಕಲ್ಪಿಸುವುದಿಲ್ಲ. ಕಾಲಗತಿಯಲ್ಲಿ ಛಿದ್ರಗೊಳ್ಳದೇ ಅವಿರತವಾಗಿ

ಮುಂದುವರೆಯುತ್ತಿರುವ ಕರ್ನಾಟಕವನ್ನು ಕಲ್ಪಿಸುತ್ತಾರೆ. ಹಾಗಾಗಿ ಕಾಲದೇಶಬದ್ಧವಾದ ಅವರ ಮಾತಿನಲ್ಲೇ ಹೇಳುವುದಾದರೆ 'ಇಂದು ಬಂದು ನಾಳೆ ಹೋಹ ಮಂತ್ರಿ ಮಂಡಲಗಳು' ನಗಣ್ಯ. ಎಲ್ಲ ಕಾಲಕ್ಕೂ ಸಲ್ಲುವ ಒಂದು ಕರ್ನಾಟಕವನ್ನು ಅವರು ಮಂಡಿಸುತ್ತಾರೆ. ಇವರೇ ಮತ್ತೊಂದು ಭಾವಗೀತೆಯಲ್ಲಿ ಕರ್ನಾಟಕವನ್ನು ಭೌಗೋಳಿಕ ಗಡಿಗೆರೆಗಳನ್ನು ಮೀರಿದಂತೆ ರೂಪಿಸಿದ್ದಾರೆ. 'ನೀ ಮೆಟ್ಟುವ ನೆಲ ಅದೇ ಕರ್ನಾಟಕ ನೀ ಏರುವ ಮಲೆ ಸಹ್ಯಾದ್ರಿ ನೀ ಕುಡಿಯುವ ನೀರ್ ಕಾವೇರಿ' ಎಂಬೆಲ್ಲ ವರ್ಣನೆಗಳಿರುವ ಈ ಕವಿತೆ ಸ್ಪಷ್ಟವಾಗಿ ಕರ್ನಾಟಕದ ಕಾಲದೇಶಬದ್ಧ ಗಡಿಯನ್ನು ನಿರಾಕರಿಸುತ್ತದೆ. ಏಕೆಂದರೆ ಸಹ್ಯಾದ್ರಿ ಕರ್ನಾಟಕದ ಗಡಿಯೊಳಗಿರುವ ವಾಸ್ತವವಾದರೂ ಜಗತ್ತಿನ ಯಾವ ಬೆಟ್ಟವನ್ನಾದರೂ ಸಹ್ಯಾದ್ರಿ ಎಂದು ಪರಿಗಣಿಸಲು ಸೂಚಿಸುತ್ತಾರೆ. ಈ ಭೌಗೋಳಿಕ ಕರ್ನಾಟಕ ಮತ್ತು ಮಾನಸಿಕ ಕರ್ನಾಟಕಗಳನ್ನು ಮುಖಾಮುಖಿ ಮಾಡುವ ವಿಧಾನ ಸೂಕ್ಷ್ಮಗ್ರಹಿಕೆಗೆ ಹಲವು ಸಾಧ್ಯತೆಗಳನ್ನು ಮುಂದಿಡುತ್ತವೆ. ಮುಖ್ಯವಾಗಿ ನಾವು ಕಲ್ಪಿಸಿಕೊಳ್ಳುವ, ರೂಢಿಸಿಕೊಳ್ಳುವ ಗುರುತುಗಳು ಹೇಗಿರಬೇಕು ಎನ್ನುವುದನ್ನು ಇಲ್ಲಿ ಸೂಚಿಸಲಾಗಿದೆ. ಸಾಮಾನ್ಯವಾಗಿ ಇಂತಹ ಗುರುತುಗಳು ಸಮುದಾಯದ ಜನರನ್ನು ನಿಷ್ಕ್ರಿಯ ನೆಲೆಯಲ್ಲಿ ಪರಿಭಾವಿಸುತ್ತವೆ. ಅಂದರೆ ಗುರುತುಗಳು ಇವೆ. ನೀವು ಅದನ್ನು ಒಪ್ಪಿಕೊಳ್ಳಿ ಎಂಬ ನಿಲುವು ಮುಖ್ಯವಾಗುತ್ತವೆ. ಆದರೆ ನಾವೀಗ ಚರ್ಚಿಸಿದ ಕುವೆಂಪು ಅವರು ಮುಂದಿಟ್ಟ ಗುರುತು ಜನರನ್ನು ಕ್ರಿಯಾತ್ಮಕ ನೆಲೆಯಲ್ಲಿ ಪರಿಭಾವಿಸುತ್ತದೆ. ಏಕೆಂದರೆ ಅವರ ಮೇಲೆ ಏನನ್ನೂ ಒತ್ತಾಯದಿಂದ ಹೇರಿರುವುದಿಲ್ಲ. ಬದಲಿಗೆ ಅವರು ಕ್ರಿಯಾಶೀಲರಾಗಿ ಅದನ್ನು ಪರಿಭಾವಿಸಲು ಸಿದ್ಧರಿರಬೇಕು. ಅವರ ಜಾಗ್ರತ ನೆಲೆ ಅಲ್ಲಿ ಭಾಗಿಯಾಗುವುದು ಅತ್ಯಗತ್ಯ.

ಕನ್ನಡ ರಾಷ್ಟ್ರೀಯತೆ

ರಾಷ್ಟ್ರೀಯತೆಯ ಪರಿಕಲ್ಪನೆಯೇ ಹೊಸದು; ಅಥವಾ ನಾಡು, ದೇಶ ಇತ್ಯಾದಿಗಳನ್ನು ಹಿಂದೆ ವ್ಯಾಖ್ಯಾನಿಸುತ್ತಿದ್ದ ರೀತಿ ಈಗ ಬದಲಾಗಿದೆ. ರಾಷ್ಟ್ರವೆಂಬುದು ಒಂದು ರಾಜಕೀಯ ಸಾಂಸ್ಕೃತಿಕ ಸಂರಚನೆ. ಅದರಲ್ಲಿ ಅಮೂರ್ತವಾದ ನೆಲೆಗಳಿರುವಂತೆ ಮೂರ್ತವಾದ ಚಹರೆಗಳೂ ಇರುತ್ತವೆ. ಸಾಮಾನ್ಯವಾಗಿ ಒಪ್ಪಿಕೊಂಡ ವ್ಯಾಖ್ಯಾನದಲ್ಲಿ ರಾಷ್ಟ್ರಕಲ್ಪನೆಗೆ ಅಗತ್ಯವಾದ ಚಹರೆಗಳಲ್ಲಿ ಭಾಷೆಯೂ ಒಂದು. ಯುರೋಪಿನ ರಾಷ್ಟ್ರೀಯತೆಗೆ ಭಾಷೆ ಬಲವಾದ ಬೇರುಗಳನ್ನು ಒದಗಿಸಿದೆ. ಆದರೆ ಭಾರತದಂತಹ ಬಹುಭಾಷಿಕ ಮತ್ತು ಸಾಂಸ್ಕೃತಿಕ ವಿಭಿನ್ನತೆಯ ಭೂಪ್ರದೇಶಕ್ಕೆ ಒಂದು ಭಾಷೆಯನ್ನು ರಾಷ್ಟ್ರದ ಚಹರೆಯನ್ನಾಗಿ ಗುರುತಿಸುವುದು ಅಸಾಧ್ಯ. ಆದರೂ ಭಾವನಾತ್ಮಕ ನೆಲೆಯಲ್ಲಿ ಸಂಸ್ಕೃತವನ್ನು ಒಂದು ಚಹರೆಯನ್ನಾಗಿ ಗುರುತಿಸಲು ೧೯-೨೦ನೇ ಶತಮಾನದ ಮೊದಲ ಭಾಗಗಳಲ್ಲಿ ಪ್ರಯತ್ನಗಳು ನಡೆದವು. ಆದರೆ ಬಲು ಬೇಗನೆ ಆ ಪ್ರಯತ್ನ ವಿಫಲವಾಯಿತು. ಸಂಸ್ಕೃತದಷ್ಟೇ ದೃಢವಾದ ಭಿನ್ನ ಭಾಷಿಕ ಚಹರೆಗಳು ಸ್ವಾತಂತ್ರ್ಯ ಚಳುವಳಿಯ ಕಾಲದಿಂದಲೂ ಮುಂಚೂಣಿಗೆ ಬಂದವು. ಇದೆಲ್ಲ ಆಗಿಹೋದ ಚರಿತ್ರೆಯ ಭಾಗ. ಆದರೆ ಭಾಷೆಗಳನ್ನು ಆಧರಿಸಿ ರಾಜ್ಯ ವಿಂಗಡಣೆ ಮಾಡಿದ ಮೇಲೆ ಹೊಸ ಚಿಂತನಾ ಕ್ರಮಗಳು ಮೈದಳೆದವು.

ಕನ್ನಡನಾಡು ಎಂಬ ಪರಿಕಲ್ಪನೆ ಹಳೆಯದೇ. ದೇಶ–ಭಾಷೆ ಎರಡನ್ನೂ ಸೂಚಿಸುವ ಪದವಾಗಿ ಕನ್ನಡ ಬಳಕೆಯಾಗಿದೆ. ಏಕೀಕರಣದ ಅನಂತರದಲ್ಲಿ ಭಾರತದಲ್ಲಿ ಅಂತರ್ಗತವಾದ ಕರ್ನಾಟಕಕ್ಕೆ ಒಂದು ಉಪರಾಷ್ಟ್ರೀಯ ಚಹರೆ ಇದೆ ಎಂಬ ಚಿಂತನೆಗಳು ಮುಂಡಿತವಾದವು. ಉಪರಾಷ್ಟ್ರೀಯತೆ ಎನ್ನುವುದು ಅಧೀನತೆಯನ್ನು ಮತ್ತು ಸಾಮರಸ್ಯವನ್ನು ಪ್ರತಿಪಾದಿಸುತ್ತದೆ. ಭಾರತವೆಂಬ ಸಂರಚನೆಯಲ್ಲಿ ಸ್ವತಂತ್ರ ಅಸ್ತಿತ್ವ ಇದ್ದರೂ ತಾನು ಬೇರೆಯಾಗಿ ತೋರದ ಕರ್ನಾಟಕ ಎಂಬುದನ್ನು ಕಲ್ಪಿಸಲಾಯಿತು. ನೆಹರೂ ಯುಗದ 'ವಿವಿಧತೆಯಲ್ಲಿ ಏಕತೆ' ಎಂಬ ಪ್ರಸಿದ್ಧ ಹೇಳಿಕೆಯನ್ನು ಸಮರ್ಥಿಸುವಂತಹ ಚಿಂತನಾಕ್ರಮವಿದು.

ಆದರೆ ಎಂಟನೇ ದಶಕದ ಸುಮಾರಿನಲ್ಲಿ ಭಾರತದ ಹಲವು ಪ್ರದೇಶಗಳಲ್ಲಿ ಪ್ರತ್ಯೇಕ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ ಚಳುವಳಿಗಳು ಹುಟ್ಟಿಕೊಂಡವು. ಅಂತಹ ಚಳುವಳಿಗಳಲ್ಲಿ ಕೆಲವು ಸ್ವಾಯತ್ತತೆಯನ್ನು ಬಯಸಿದರೆ, ಮತ್ತೆ ಕೆಲವು ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಲು ಈ ಚಳುವಳಿಯ ನೆರವನ್ನು ಪಡೆದುಕೊಂಡವು. ಸ್ವಾಯತ್ತತೆಯ ಬೇಡಿಕೆಗೆ ಭಾಷೆ ಮುಖ್ಯ ಆಧಾರವಾಗಿರುವ ಪ್ರಸಂಗಗಳು ಕಡಿಮೆ. ಹಲವು ಪ್ರಮುಖ ಚಹರೆಗಳ ಜೊತೆಗೆ ಪೂರಕವಾಗಿ ಭಾಷೆಯನ್ನು ಗುರುತಿಸಿಕೊಳ್ಳಲಾಗಿದೆ. ಧಾರ್ಮಿಕ ನೆಲೆಗಟ್ಟಿನ ಸ್ವಾಯತ್ತ ಚಳುವಳಿಗಳು ಧಾರ್ಮಿಕ ಗ್ರಂಥಗಳ ಭಾಷೆಯನ್ನು ತಮ್ಮ ಗುರುತನ್ನಾಗಿ ಮಾಡಿಕೊಂಡಿವೆ.

ಇಂತಹ ಚಳುವಳಿಗಳ ಪ್ರಭಾವ ಕರ್ನಾಟಕದಲ್ಲೂ ಕಾಣಿಸಿಕೊಂಡಿದೆ. ಇದಕ್ಕೆ ಈ ರಾಜ್ಯದ ಸಾಮಾಜಿಕ ಬದಲಾವಣೆಗಳು ಮುಖ್ಯವಾದ ಭಿತ್ತಿಯನ್ನು ಒದಗಿಸಿವೆ. ಕರ್ನಾಟಕದಲ್ಲಿ ಕನ್ನಡ ರಾಷ್ಟ್ರೀಯತೆ ಎಂಬ ಪರಿಕಲ್ಪನೆ ಮೂಡಿದ್ದು ಭಾವನಾತ್ಮಕ ನೆಲೆಯಲ್ಲಿ ಮಾತ್ರವಲ್ಲ; ಪ್ರತ್ಯೇಕವಾಗಿ ಚಳುವಳಿಯ ಚಹರೆಗಳನ್ನು ಪಡೆದುಕೊಳ್ಳುತ್ತಾ ಬಂದ ಚಳುವಳಿಯಿದು. ಮುಖ್ಯವಾಗಿ ಸಾಮಾಜಿಕ, ಆರ್ಥಿಕ ನೆಲೆಗಳ ಕಾರಣ ಗಳನ್ನು ಮುಂದೊಡ್ಡಿ ಈ ಚಳುವಳಿಗಳನ್ನು ಕಟ್ಟಲಾಗಿದೆ. ಇಲ್ಲಿಯೂ ಕನ್ನಡ ಭಾಷೆ ಒಂದು ಪೂರಕ ನೆಲೆಯ ಗುರುತಾಗಿ ಮಾತ್ರವೇ ಕಾಣಿಸಿಕೊಂಡಿದೆ. ಅದನ್ನು ಪ್ರಧಾನ ನೆಲೆಗೆ ತರುವ ಯತ್ನಗಳು ಪ್ರಾಸಂಗಿಕವಾಗಿ ಕಂಡು ಬಂದರೂ ಅದೊಂದು ವ್ಯವಸ್ಥಿತ ಕ್ರಮವಾಗಿ ರೂಪುಗೊಂಡಿಲ್ಲ.

ಸಾಮಾಜಿಕ ವಿನ್ಯಾಸದಲ್ಲಿ ಆರ್ಥಿಕ ಏರುಪೇರುಗಳು ನಡೆದಿರುವುದು ಈಗಾಗಲೇ ಅಧ್ಯಯನಗಳಿಂದ ಹೊರಬಿದ್ದಿದೆ. ಕೆಲವೊಮ್ಮೆ ಈ ಏರುಪೇರಿಗೆ ಒಳಗಿನ ಕಾರಣಗಳಿಗಿಂತ ಹೊರಗಿನಿಂದ ಬಂದ ಅನ್ಯಭಾಷಿಕರೇ ಕಾರಣ ಎಂಬ ವಿವರಣೆಯನ್ನು ಮುಂದಿಡಲಾಗಿದೆ. ನೀರಾವರಿ ಪ್ರದೇಶದ ರೈತರ ಜಮೀನುಗಳನ್ನು ಅನ್ಯರಾಜ್ಯದವರು ಕೊಂಡು ಸ್ಥಳೀಯರನ್ನು ನಿರ್ಗತಿಕರನ್ನಾಗಿ ಮಾಡಿದ್ದು, ಕೈಗಾರಿಕೆಗಳ ಸ್ಥಾಪನೆಯಲ್ಲಿ ಇಲ್ಲಿನ ಸೌಲಭ್ಯಗಳನ್ನು ಪಡೆದು ಅನ್ಯಭಾಷಿಕ ಕಾರ್ಮಿಕರನ್ನು ದುಡಿಮೆಗೆ ತಂದು ಇಲ್ಲಿನ ಜನರ ಉದ್ಯೋಗವಕಾಶಗಳನ್ನು ಕಿತ್ತುಕೊಂಡದ್ದು, ವ್ಯಾಪಾರ ಮತ್ತು ವ್ಯವಹಾರ ಬಂಡವಾಳ ಹೂಡಿಕೆ ಇತ್ಯಾದಿ ವಲಯಗಳಲ್ಲಿ ಅನ್ಯಭಾಷಿಕ ಶ್ರೀಮಂತರು ಮೇಲುಗೈ ಸಾಧಿಸಿ

ಸ್ಥಳೀಯರನ್ನು ಹಿಂದೆ ಸರಿಸಿದ್ದು, ಪ್ರಾಕೃತಿಕ ಕಾರಣಗಳಿಂದ ದುಡಿಯಲು ಅನ್ಯಭಾಷೆಯ ಜನರು ಬಂದು ದುಡಿಮೆಗಾರರಾಗಿ ಸ್ಥಳೀಯರಿಗೆ ಕೆಲಸವಿಲ್ಲದಂತಾಗಿದ್ದು- ಹೀಗೆ ವಿಶ್ಲೇಷಣೆಗಳು ಮುಂದುವರೆಯುತ್ತವೆ. ಇಲ್ಲೆಲ್ಲ ಕನ್ನಡ ನಾಡಿನ ಸಂಪನ್ಮೂಲಗಳು ಕೇವಲ ಕನ್ನಡಿಗರಿಗೆ ದೊರಕಬೇಕು ಎಂಬ ಮಣ್ಣಿನ ಮಕ್ಕಳ ಸಿದ್ಧಾಂತ ಮುಂಚೂಣಿಗೆ ಬರುತ್ತದೆ. ಇಲ್ಲಿ ಕೂಡಾ ಸ್ಥಳೀಯರು ಮತ್ತು ಇಲ್ಲಿಯವರು ಎಂಬ ವ್ಯಾಖ್ಯೆಗೂ ಭಾಷೆಗೂ ಬಿಡಿಸಲಾರದ ನಂಟು ಕಾಣುವುದಿಲ್ಲ. ಆದರೂ ಉದ್ದೀಪ್ತ ವಾಗ್ವಾದಗಳಲ್ಲಿ ಮತ್ತೆ ಮತ್ತೆ ನಾಡಿನ ಗಾಳಿ, ನೀರು, ಮಣ್ಣು ಇವೆಲ್ಲವೂ ಕನ್ನಡಿಗರ ಸ್ವತ್ತು ಎಂಬ ಮಾತುಗಳು ಮಂಡನೆಯಾಗುತ್ತವೆ. ಈ ಭಾವನೆಗಳಿಗೆ ಪೂರಕವಾಗುವಂತೆ ನಾಡಿನ ಪರಂಪರೆಯ ಪುನಾರಚನೆಯನ್ನು ಮಾಡುವುದನ್ನು ಈ ಹಿಂದೆಯೇ ಗುರುತಿಸಿದ್ದೇವೆ.

ಇಂತಹ ವ್ಯಾಖ್ಯೆಗಳು ತೋರಿಕೆಗೆ ತರ್ಕಬದ್ಧವಾಗಿ ಕಂಡರೂ ಜನರಲ್ಲಿ ಸ್ವ-ಅನ್ಯ ಎಂಬ ಭಾವವನ್ನು ಹುಟ್ಟುಹಾಕುತ್ತವೆ. ಸ್ವ-ಎಂಬುದು ಯಾವಾಗಲೂ ಶೋಷಿತವಾದ, ಅನ್ಯಾಯಕ್ಕೊಳಗಾದ ನೆಲೆಯಾಗಿದ್ದು ಅನ್ಯ ಎಂಬುದು ಶೋಷಕ ಸ್ಥಾನದಲ್ಲಿ, ಸದಾ ಆಕ್ರಮಣಶೀಲ ನೆಲೆಯಲ್ಲಿ ಇರುವಂತೆ ಚಿತ್ರಿತವಾಗುತ್ತದೆ. ಇದೊಂದು ಭ್ರಮಾತ್ಮಕ ವಾಸ್ತವ. ಎಷ್ಟೋ ಸಂದರ್ಭಗಳಲ್ಲಿ ಜನಸಮುದಾಯವು ತನ್ನ ಸ್ಥಿತಿಗೆ ನಿಜ ಕಾರಣಗಳೇನು ಎಂಬುದನ್ನು ಗುರುತಿಸಲಾಗದಂತೆ ಈ ಭ್ರಮೆಯು ಕಣ್ಕಟ್ಟು ಮಾಡುತ್ತದೆ. ಆದ್ದರಿಂದ ಸ್ವ-ಅನ್ಯ ಸಮೀಕರಣಕ್ಕೆ ಕಾರಣವಾಗುವ ಭಾಷಿಕ ನೆಲೆಯ ವ್ಯಾಖ್ಯಾನದ ಬಗೆಗೆ ಜಾಗ್ರತರಾಗಿರುವುದು ಅಗತ್ಯವಾಗಿದೆ.

ಸಾಂಸ್ಕೃತಿಕ ನೆಲೆಯಲ್ಲಿ ಕನ್ನಡ ರಾಷ್ಟ್ರೀಯತೆಯನ್ನು ಕಟ್ಟುವ ಪ್ರಯತ್ನಗಳು ಹಲವು ರೀತಿಗಳಲ್ಲಿ ನಡೆದಿವೆ. ಏಳನೆಯ ದಶಕದ ಹೊತ್ತಿಗೆ ಒಂದು ವಿಶಿಷ್ಟ ಚಿಂತನೆ ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ತಲೆ ಎತ್ತಿತ್ತು. ಜನಪದ ಸಂಸ್ಕೃತಿಯನ್ನು ಇಪ್ಪತ್ತನೇ ಶತಮಾನದಲ್ಲಿ ಮಾನವೀಯ ಮತ್ತು ಧರ್ಮನಿರಪೇಕ್ಷ ನೆಲೆಗಳಿಗಾಗಿ ಪುನರುತ್ಥಾನ ಮಾಡುವ ಪ್ರಯತ್ನಗಳು ನಡೆದಿದ್ದವು. ಆದರೆ ಈಗ ಆ ಜನಪದ ಸಂಸ್ಕೃತಿಯ ಅವೈದಿಕ ನೆಲೆಗಟ್ಟನ್ನು ಪ್ರಧಾನ ಸ್ತರಕ್ಕೆ ತಂದು ಆ ಮೂಲಕ ಕನ್ನಡಕ್ಕೆ ಚಹರೆಯನ್ನು ಒದಗಿಸುವ ಪ್ರಯತ್ನಗಳು ಮೊದಲಾದವು. ಆದರೆ ಇಲ್ಲಿನ ದೊಡ್ಡ ಸಮಸ್ಯೆ ಎಂದರೆ ಕನ್ನಡದ್ದೇ ಎಂದು ತಿಳಿಯಲಾದ ಪ್ರಧಾನ ಪರಂಪರೆಯ ನೆಲೆಗಳನ್ನೇ ಈ ಜನಪದ ಸಂಸ್ಕೃತಿ ನಿರಾಕರಿಸಿದ್ದು. ಈ ತಾತ್ತ್ವಿಕ ಗೊಂದಲ ಇನ್ನೂ ಮುಂದುವರೆದಿದೆ. ಇದಕ್ಕೆ ಕಳೆದ ಶತಮಾನದ ಕೊನೆಯೆರಡು ದಶಕಗಳ ದಲಿತ ಬಂಡಾಯ ಚಳುವಳಿಗಳು ಹೊಸ ಪ್ರಶ್ನೆಗಳನ್ನು ಸೇರಿಸಿವೆ.

ಆದರೆ ಆಳುವ ವರ್ಗ ಮಾತ್ರ ಕನ್ನಡ ಜನಪದ ಸಂಸ್ಕೃತಿಯನ್ನು, ಅದರ ವಾಹಕರನ್ನು ತನ್ನ ಅಧಿಕೃತ ಚಹರೆಗಳನ್ನಾಗಿ ಬಳಸುತ್ತಿದೆ. ಸಾರ್ವಜನಿಕ ಸಮಾರಂಭಗಳಲ್ಲಿ ಅಚರಣೆಗಳಲ್ಲಿ ಹೀಗೆ ಜನಪದ ಕಲಾವಿದರ ಮೇಳಗಳ ಪ್ರದರ್ಶನ ಸರಣಿಗಳನ್ನು ಏರ್ಪಡಿಸುವ ಮೂಲಕ ತನ್ನ ಅಧಿಕಾರದ ಮುದ್ರೆಯನ್ನು ಒದಗಿಸಿದೆ.

ಈ ಎಲ್ಲ ಸಂಗತಿಗಳು ಕನ್ನಡ ರಾಷ್ಟ್ರೀಯತೆಯ ಪ್ರಶ್ನೆ ಎಷ್ಟು ಸಂಕೀರ್ಣವಾಗಿದೆ ಎಂಬುದನ್ನು ಸೂಚಿಸುತ್ತವೆ.

ಶಾಸ್ತ್ರೀಯಭಾಷೆ

ಕನ್ನಡವನ್ನು ಶಾಸ್ತ್ರೀಯಭಾಷೆಯಾಗಿ ಪರಿಗಣಿಸಿ ಅದಕ್ಕೆ ಮನ್ನಣೆ ನೀಡಬೇಕೆಂದು ಹಲವು ಜನರು ಮತ್ತು ಗುಂಪುಗಳು ಕೇಂದ್ರಸರ್ಕಾರವನ್ನು ಒತ್ತಾಯಿಸುತ್ತಿವೆ. ತಮಿಳಿಗೆ ಶಾಸ್ತ್ರೀಯಭಾಷೆಯ ಮನ್ನಣೆ ದೊರಕಿದ್ದನ್ನು ಗಮನಿಸಿ ಇಂತಹ ಬೇಡಿಕೆಯನ್ನು ಮುಂದಿಡಲಾಗಿದೆ. ಶಾಸ್ತ್ರೀಯಭಾಷೆ ಎಂದು ಪರಿಗಣಿಸಲು ಅಗತ್ಯವಾದ ಎಲ್ಲ ಶರತ್ತುಗಳನ್ನೂ ಪೂರೈಸಿದ್ದರ ದಾಖಲೆಗಳನ್ನು ಕೇಂದ್ರಸರ್ಕಾರಕ್ಕೆ ಒಪ್ಪಿಸಲಾಗಿದೆ. ಈ ಬೇಡಿಕೆಗೆ ಮುಖ್ಯ ಕಾರಣ ತಮಿಳನ್ನು ಶಾಸ್ತ್ರೀಯಭಾಷೆ ಎಂದು ಘೋಷಿಸಿದ್ದು. ಕರ್ನಾಟಕದಲ್ಲಿ ಈ ಚರ್ಚೆ ತೀವ್ರಗತಿಯಲ್ಲಿ ನಡೆದಿದೆ. ಕೆಲವರು ಶಾಸ್ತ್ರೀಯಭಾಷೆ ಎಂಬ ಪರಿಕಲ್ಪನೆಯೇ ನಿರುಪಯುಕ್ತವಾದುದು ಎನ್ನುತ್ತಾರೆ. 'ಶಾಸ್ತ್ರೀಯ' ಎಂದರೆ ಕ್ಲಾಸಿಕಲ್ ಭಾಷೆ. ಎಂದರೆ ಅದು ಈಗಾಗಲೇ ಹಲವಾರು ಶತಮಾನಗಳಿಂದ ಜನಭಾಷೆಯ ಸ್ಥಾನದಿಂದ ಮಾಯವಾಗಿ ಕೇವಲ ಬರೆವಣಿಗೆಯ ರೂಪದಲ್ಲಿ ಉಳಿದು ಕೊಂಡಿರುತ್ತದೆ. ಅಂತಹ ಭಾಷೆಯನ್ನು ಜನರು ಪ್ರತ್ಯೇಕ ಅಧ್ಯಯನದ ಮೂಲಕ ಕಲಿಯಬೇಕೇ ಹೊರತು ತಂತಾನೇ ಯಾರಿಗೂ ಅದು ಒದಗಿ ಬರುವುದಿಲ್ಲ. ಲಭ್ಯ ಬರೆವಣಿಗೆಯಲ್ಲಿ ಅಗಾಧ ಸಾಹಿತ್ಯ ಇರಬೇಕಾಗುತ್ತದೆ. ಅಲ್ಲದೇ ಜನೋಪಯೋಗಿಯಾದ ಮಾಹಿತಿ ಆ ಬರೆಹಗಳಲ್ಲಿ ಸಂಗ್ರಹಗೊಂಡಿರುತ್ತದೆ. ತಲೆಮಾರುಗಳ ಆ ಸಂಗ್ರಹಿತ ಜ್ಞಾನಕ್ಕಾಗಿ ಅದನ್ನು ಕಲಿಯುತ್ತಾರೆ. ಜ್ಞಾನಸಂಪತ್ತನ್ನು ಪಡೆದುಕೊಳ್ಳಲಾಗುತ್ತದೆ. ಆದರೆ ಈ ನಿಟ್ಟಿನಲ್ಲಿ ಕನ್ನಡವನ್ನಾಗಲೀ ಅಥವಾ ಇತರ ಆಧುನಿಕ ಭಾರತೀಯ ಭಾಷೆಗಳನ್ನಾಗಲೀ ಕ್ಲಾಸಿಕಲ್ ಎಂದು ಕರೆಯಲು ಸಾಧ್ಯವಾಗುವುದಿಲ್ಲ. ಅಲ್ಲದೆ ಈ ಅರ್ಹತೆಯುಳ್ಳ ಸಂಸ್ಕೃತ ಭಾಷೆಯನ್ನೇ ಈವರೆಗೆ ಶಾಸ್ತ್ರೀಯಭಾಷೆ ಎಂದು ಗುರುತಿಸಿರಲಿಲ್ಲ. ತಮಿಳನ್ನು ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ನೀಡಿ ಕ್ಲಾಸಿಕಲ್ ಭಾಷೆಯೆಂದು ಘೋಷಣೆ ನೀಡಿದ ಮೇಲೆ ಅದರಲ್ಲಿ ಸಂಸ್ಕೃತವನ್ನು ಈಗ ಸೇರಿಸಲಾಗಿದೆ. ಕೇಂದ್ರಸರ್ಕಾರದ ಈ ನಿರ್ಧಾರ ಜಾರಿಗೆ ಬಂದಮೇಲೆ ತಮಿಳು ಭಾಷೆಯ ವಿದ್ವಾಂಸರು ಸಾವಿರದ ಆರು ನೂರ ಐವತ್ತಕ್ಕಿಂತ ಹಿಂದಿನ ತಮಿಳನ್ನು ಮಾತ್ರ ಕ್ಲಾಸಿಕಲ್ ಎಂದು ಪರಿಗಣಿಸುತ್ತಿದ್ದಾರೆ. ಆ ಸುಮಾರಿನಲ್ಲಿ ತಮಿಳುನಾಡಿಗೆ ಅನ್ಯಭಾಷೆಯ ವರ್ತಕ ಸಮುದಾಯ ಯುರೋಪಿನಿಂದ ಪ್ರವೇಶ ಮಾಡಿತು. ಅದರ ಪರಿಣಾಮದಿಂದ ತಮಿಳು ಬದಲಾಯಿತೆಂದು ತಿಳಿಯುತ್ತಾರೆ. ಅಂದರೆ ಒಂದು ಭಾಷೆ ಕ್ಲಾಸಿಕಲ್ ಆಗಬೇಕಾದರೆ ಅದು ಅನ್ಯ ಭಾಷೆಯ ಪ್ರಭಾವದಿಂದ ಮುಕ್ತವಾಗಿರಬೇಕು ಎಂದು ತಿಳಿಯಲಾಗಿದೆ. ಈ ಶರತ್ತುಗಳ ಹಿನ್ನೆಲೆಯಲ್ಲಿ ಕನ್ನಡವನ್ನು ಕ್ಲಾಸಿಕಲ್ ಭಾಷೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಆದರೂ ಪ್ರಯತ್ನಗಳು ಮಾತ್ರ ಮುಂದುವರೆದಿವೆ.

ಕ್ಲಾಸಿಕಲ್ ಎಂದು ಕರೆಸಿಕೊಳ್ಳಲು ಹಪಾಹಪಿ ಏಕೆ, ಒಂದು ವೇಳೆ ಕನ್ನಡ ಕ್ಲಾಸಿಕಲ್ ಭಾಷೆ ಎಂದು ಘೋಷಿತವಾದರೆ ಅದರಿಂದ ದೊರಕುವ ಲಾಭಗಳೇನು

ಎಂಬ ಪ್ರಶ್ನೆಗಳು ಈಗ ನಮ್ಮ ಮುಂದಿವೆ. ಎರಡನೆಯ ಪ್ರಶ್ನೆ ಅಭಿಮಾನದ ಮಾತನ್ನು ಎತ್ತಿ ಹಿಡಿಯುತ್ತದೆ. ಇದು ಕನ್ನಡ ಬಲ್ಲವರಲ್ಲಿ ಒಂದು ಅಸ್ಮಿತೆಯನ್ನು ಬೆಳೆಸಲು ನೆರವಾಗುವುದರಿಂದ ನಾವು ಕ್ಲಾಸಿಕಲ್ ಭಾಷೆಯ ಪಟ್ಟಿಗೆ ಸೇರಬೇಕು ಎನ್ನುವ ವಾದ ಮಂಡನೆಯಾಗುತ್ತಿದೆ. ಕೇಂದ್ರಸರ್ಕಾರವು ಕ್ಲಾಸಿಕಲ್ ಭಾಷೆಗಳಿಗೆ, ಅವುಗಳ ಅಭಿವೃದ್ಧಿಗೆ ಧನ ಸಹಾಯ ಮಾಡುವುದರಿಂದ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರಿಯ ಮಟ್ಟದ ಅಧ್ಯಯನ ಪೀಠಗಳು ಸ್ಥಾಪನೆಯಾಗುವುದರಿಂದ ಕನ್ನಡಕ್ಕೆ ಲಾಭವಿದೆ ಎನ್ನುತ್ತಿದ್ದಾರೆ. ಇದು ನಮ್ಮ ಎಂದಿನ ಗೊಂದಲದ ಮುಂದುವರಿಕೆ. ಈಗಲೂ ಕನ್ನಡದ ಅಭಿವೃದ್ಧಿ ಮತ್ತು ಭಾಷಿಕರ ಅಭಿವೃದ್ಧಿ ಎರಡೂ ಒಂದೇ ಎನ್ನುವ ಭ್ರಮೆಯಲ್ಲಿಯೇ ನಾವಿದ್ದೇವೆ. ಕನ್ನಡವನ್ನು ಕ್ಲಾಸಿಕಲ್ ಎಂದು ಘೋಷಿಸಿದಾಗ ನಾವು ತಿಳಿದಂತೆ ದೇಶವಿದೇಶಗಳ ವಿದ್ವಾಂಸರು ಕನ್ನಡವನ್ನು ಅಧ್ಯಯನ ಮಾಡುತ್ತಾರೆ ಎಂದು ಒಪ್ಪಿದರೆ ಅದು ಕನ್ನಡಿಗರ ಉನ್ನತಿಗೆ ಕಾರಣವಾಗುವ ಸಂಗತಿಯಾಗಲಾರದು. ಅಸಂಖ್ಯಾತ ಜನರಿಗೆ ಗುರುತುಗಳ ಅಗತ್ಯವಿದೆ. ಆ ಗುರುತುಗಳು ಅವರ ನಿತ್ಯದ ಸಂಕಷ್ಟಗಳನ್ನು ಬಗೆಹರಿಸಲು ಸ್ವಲ್ಪವಾದರೂ ನೆರವಾಗಬೇಕು. ಇಲ್ಲವಾದರೆ ಅವು ಆಳುವ ಜನರ ಸಂಚುಗಳಾಗಿ ಮಾತ್ರ ಉಳಿಯುತ್ತವೆ. ಕನ್ನಡಿಗ ಜನರಿಗೆ ಸರ್ಕಾರ ಕೊಡುವ ಬಿ.ಪಿ.ಎಲ್ ಕಾರ್ಡುಗಳು ಉಪಯುಕ್ತ ಗುರುತುಗಳಾಗಬಹುದೇ ಹೊರತು ಅವರಾಡುವ ಭಾಷೆಗೆ ಕ್ಲಾಸಿಕಲ್ ಎಂಬ ಪಟ್ಟ ದೊರಕುವುದಲ್ಲ.

ಕ್ಲಾಸಿಕಲ್ ಭಾಷೆಗಳ ಬಗೆಗೆ ಭಾಷಾಶಾಸ್ತ್ರಜ್ಞರು ನೀಡಿದ ವ್ಯಾಖ್ಯೆಗಳನ್ನು ಮರೆತು ಈ ದೇಶಕ್ಕೆ ಅನುಕೂಲವಾಗುವ ವ್ಯಾಖ್ಯೆಯೊಂದನ್ನು ರೂಪಿಸಿಕೊಂಡಿದ್ದೇವೆ ಎನ್ನೋಣ. ಈಗಲೂ ಹಾಗೆ ಒಂದು ಭಾಷೆ ಕ್ಲಾಸಿಕಲ್ ಎಂದು ನಾಮಕರಣಗೊಂಡರೆ ಅದರಿಂದ ಇಪ್ಪತ್ತೊಂದನೆಯ ಶತಮಾನದಲ್ಲಿ ಇಕ್ಕಟ್ಟಿನಲ್ಲಿರುವ ಭಾಷೆಗಳಿಗೆ ನೆರವಾಗಲಾರದು. ನಾವೀಗಾಗಲೇ ಗಮನಿಸಿದಂತೆ ಔಪಚಾರಿಕ ಬಳಕೆಯ ವಲಯಗಳ ಕುಗ್ಗುವಿಕೆಯಂತಹ ಇಕ್ಕಟ್ಟುಗಳು ಕನ್ನಡವನ್ನು ಕಾಡುತ್ತಿವೆ. ತಮಿಳಿನ ಉದಾಹರಣೆಯನ್ನೇ ಗಮನಿಸಿದರೆ ಅಲ್ಲಿಯೂ ಆಧುನಿಕ ತಮಿಳಿನ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಿದರೆ ಅದು ಕ್ಲಾಸಿಕಲ್ ತಮಿಳಿನ ಅಧ್ಯಯನಗಳಾಗುವುದಿಲ್ಲ. ಹೀಗಿದ್ದ ಮೇಲೆ ಒಂದು ಭಾಷೆ ಕ್ಲಾಸಿಕಲ್ ಆಗುವುದು ಅದಕ್ಕೆ ಕಟ್ಟಿದ ಕಾಲಗುಂಡಾಗಬಹುದೇ ಹೊರತು ಬೇರೆ ಏನೂ ಅಲ್ಲ.

ಹಾಗಿದ್ದಲ್ಲಿ ಆಧುನಿಕ ಭಾರತೀಯ ಭಾಷೆಗಳಲ್ಲಿ ಈ ಕ್ಲಾಸಿಕಲ್ ಪಟ್ಟದ ಭ್ರಮೆ ಏಕೆ ಮೂಡಿದೆ? ಇದಕ್ಕೆ ರಾಜ್ಯ ಪುನರ್‌ವಿಂಗಡಣೆಯ ಅನಂತರದ ಭಾಷಾ ನೀತಿಗಳಲ್ಲಿ ಉತ್ತರವಿದೆ. ಕೇಂದ್ರಸರ್ಕಾರ ತನ್ನ ವ್ಯಾಪ್ತಿಯಲ್ಲಿ ಇಂಗ್ಲಿಶ್ ಮತ್ತು ಹಿಂದಿಗಳನ್ನು ಪೋಷಿಸುವ ಹೊಣೆಯನ್ನು ಹೊತ್ತಿದೆ. ರಾಜ್ಯಸರ್ಕಾರಗಳು ತಂತಮ್ಮ ಭಾಷೆಗಳ ಸಾರ್ವಭೌಮತ್ವವನ್ನು ಸಾರಾಸಗಟಾಗಿ ಒಪ್ಪಿಲ್ಲ. ಕಳೆದ ಐವತ್ತು ವರ್ಷದಲ್ಲಿ ಈ ಪರಿಸ್ಥಿತಿಯಿಂದ ದೇಶೀಯ ಭಾಷೆಗಳಲ್ಲಿ ತಾವು ನಿರ್ಲಕ್ಷ್ಯಕ್ಕೆ ಒಳಗಾಗಿದ್ದೇವೆ ಎಂಬ ಕುದಿತ ಮೂಡಿದ್ದರೆ ಅಚ್ಚರಿಯೇನಿಲ್ಲ.

ತಮಿಳು, ಕನ್ನಡದಂತಹ ಭಾಷೆಗಳು ಬಲು ದೀರ್ಘಕಾಲದ ಇತಿಹಾಸವನ್ನು ಹೊಂದಿವೆ. ಜಗತ್ತಿನ ಭಾಷೆಗಳನ್ನು ಅಧ್ಯಯನ ಮಾಡಿದಾಗ ಒಂದು ವಿಶಿಷ್ಟ ಸಂಗತಿ ನಮ್ಮ ಗಮನಕ್ಕೆ ಬರುತ್ತದೆ. ಮೊದಲ ಸಹಸ್ರಮಾನದ ಸಂದರ್ಭದಲ್ಲೂ ಜನ ಭಾಷೆಯಾಗಿದ್ದು, ಬರೆವಣಿಗೆಯ ಪರಂಪರೆಯನ್ನು ಹೊಂದಿದ್ದು, ಮೂರನೆಯ ಸಹಸ್ರಮಾನದಲ್ಲೂ ಅದೇ ಮನ್ನಣೆಯನ್ನು ಕಾಯ್ದುಕೊಂಡು ಬಂದಿರುವ ಭಾಷೆಗಳ ಸಂಖ್ಯೆ ಹೆಚ್ಚಾಗಿಲ್ಲ. ಅವು ಇಡೀ ಜಗತ್ತಿನಲ್ಲಿ ಎಂಟೋ ಹತ್ತೋ ಇರಬಹುದು. ಉಳಿದವು ಅನಂತರದಲ್ಲಿ ಮೈತಳೆದು ಚಲಾವಣೆಗೆ ಬಂದ ಭಾಷೆಗಳು. ಮೊದಲ ಸಹಸ್ರಮಾನದಲ್ಲಿ ಪ್ರಬಲವಾಗಿದ್ದ ಎಷ್ಟೋ ಭಾಷೆಗಳು ಈಗ ಜನರ ಆಡುಭಾಷೆಗಳಾಗಿ ಇಲ್ಲವೇ ಬರೆಹದ ಭಾಷೆಗಳಾಗಿ ಉಳಿದಿಲ್ಲ. ಈ ದೃಷ್ಟಿಯಿಂದ ಕನ್ನಡದಂತಹ ಭಾಷೆಗಳು ತಮ್ಮ ಹಿರಿಮೆಯನ್ನು ಒಂದು ಭಾವನಾತ್ಮಕ ನೆಲೆಯಲ್ಲಿ ಅನುಭವಿಸುತ್ತಿರಬಹುದು.

ಐವತ್ತು ವರ್ಷದ ಕೇಂದ್ರದ ಭಾಷಾನೀತಿಯ ಪ್ರಭಾವದಿಂದಾಗಿ ಭಾಷೆಗಳ ನಡುವಣ ತಾರತಮ್ಯ ಬೆಳೆಯುತ್ತಲೇ ಹೋಗಿದೆ. ಕೆಲವು ಭಾಷೆಗಳು ಹಿಂದೆ ಕೇಂದ್ರ ಸರ್ಕಾರದ ಮನ್ನಣೆಯನ್ನು ಹೊಂದಿರಲಿಲ್ಲ. ಆದರೆ ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಅಂತಹ ಕೆಲವು ಭಾಷೆಗಳು ಸಂವಿಧಾನದ ಎಂಟನೆಯ ಅನುಚ್ಛೇದಕ್ಕೆ ಸೇರ್ಪಡೆಯಾಗಿವೆ. ಕೊಂಕಣಿ, ಮೈಥಿಲಿ, ನೇಪಾಲಿ, ಬೋಡೋ, ಸಂತಾಲಿ, ಮತ್ತು ಡೋಗ್ರಿ ಈ ಭಾಷೆಗಳು ಹೀಗೆ ಮನ್ನಣೆಯನ್ನು ಪಡೆದುಕೊಂಡವು. ಇವುಗಳಲ್ಲಿ ಎಷ್ಟೋ ಭಾಷೆಗಳಿಗೆ ಬರೆವಣಿಗೆಯ ದೀರ್ಘಪರಂಪರೆಯೇ ಇಲ್ಲ. ಆದ್ದರಿಂದ ಈ ಪರಿಸ್ಥಿತಿಯು ಬಹು ಹಳೆಯ ಭಾಷೆಗಳಲ್ಲಿ ಒಂದು ಬಗೆಯ ಕಳೆದುಕೊಂಡ ಭಾವವನ್ನು ಮೂಡಿಸಿರಬೇಕು. ಹೊಸ ಸಹಚರ ಭಾಷೆಗಳ ಜೊತೆಯಲ್ಲಿ ಹಕ್ಕುಗಳಿಗೆ ಹೋರಾಡುವ ಬದಲು ತಮ್ಮ ಪಾರಂಪರಿಕ ಸಾಧನೆಗಳಿಂದ ಮನ್ನಣೆಯನ್ನು ಪಡೆದುಕೊಳ್ಳಬೇಕೆಂದು ಯೋಚಿಸಿದರೆ ಅದನ್ನು ನಿರಾಕರಿಸಲು ಬರುವುದಿಲ್ಲ. ಈ ದಿಕ್ಕಿನಲ್ಲಿ ನಾವು ನಮ್ಮ ಭಾಷೆಯು ಕ್ಲಾಸಿಕಲ್ ಭಾಷೆ ಆಗಬೇಕೆಂಬ ಬಯಕೆಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

ಶಾಸ್ತ್ರೀಯ ಎಂಬ ಪದ ನಿಯಮಬದ್ಧ ಎನ್ನುವ ಅರ್ಥವನ್ನು ಹೊಂದಿದೆ. ಹಾಗೆ ನೋಡಿದರೆ ಎಲ್ಲ ಭಾಷೆಗಳೂ ಶಾಸ್ತ್ರೀಯವೇ. ಆದ್ದರಿಂದ ಕೆಲವು ಭಾಷೆಗಳನ್ನು ಮಾತ್ರ ಶಾಸ್ತ್ರೀಯವೆಂದು ಕರೆದರೆ ಅದು ಉಳಿದ ಭಾಷೆಗಳ ಮಹತ್ವವನ್ನು ಅಲ್ಲಗಳೆದಂತಾಗುತ್ತದೆ. ಹಾಗಿದ್ದಲ್ಲಿ ಪರ್ಯಾಯವಾಗಿ ಯಾವ ಪದವನ್ನು ಬಳಸಬೇಕು. ಮೇಲೆ ಹೇಳಿದ ವಿವರಣೆಯ ಹಿನ್ನೆಲೆಯಲ್ಲಿ ಕನ್ನಡದಂತಹ ಭಾಷೆಗಳನ್ನು ಪರಂಪರೆಯ ಭಾಷೆಗಳೆಂದು ಕರೆಯುವುದು ಸೂಕ್ತ. ಪರಂಪರೆಯ ಭಾಷೆ ಎಂದಾಗ ಅಲ್ಲಿ ಕಾಲದ ನಿರಂತರತೆ ಮಾತ್ರ ಮುಖ್ಯವಾಗುತ್ತದೆ. ಅದು ಯಾವ ಕಾಲಘಟ್ಟದ್ದು ಎಂಬ ಪ್ರಶ್ನೆ ಹಿಂದೆ ಸರಿಯುತ್ತದೆ. ಬದಲಾಗುತ್ತಿರುವ ಜಾಗತಿಕ ಪರಿಸ್ಥಿತಿಯಲ್ಲಿ ಭಾಷೆಗಳು ಹೊಸ ವಿನ್ಯಾಸದಲ್ಲಿ ತಮ್ಮ ಸ್ಥಾನಗಳನ್ನು ನಿರ್ದೇಶಿಸಿಕೊಳ್ಳಬೇಕಾಗಿದೆ. ನಿರಂತರ ವಿಸ್ತರಣಾಶೀಲತೆಯನ್ನು ಹೊಂದಿರುವ ಇಂಗ್ಲಿಶ್ ಪ್ರಮಾಣಬದ್ಧವಾದರೆ, ಸೀಮಿತ

ನೆಲೆಯ ವಿಸ್ತರಣೆಯನ್ನು ಹೊಂದಿರುವ ಫ್ರೆಂಚ್, ಜರ್ಮನ್, ಜಪಾನೀಸ್ ಮುಂತಾದ ಭಾಷೆಗಳು ಒಂದೆಡೆಯಾದರೆ, ಸಹಸ್ರಮಾನಗಳ ಅವಧಿಯಲ್ಲಿ ಜನರ ಭಾಷೆಯಾಗಿದ್ದು ಅಗಾಧ ಪ್ರಮಾಣದ ನೆನಪುಗಳು ಸಂಚಯವಾಗಿರುವ ಭಾಷೆಗಳು ಇನ್ನೊಂದೆಡೆ. ಇವಲ್ಲದೆ ಹೊಸ ಲೋಕವ್ಯವಸ್ಥೆಗೆ ಹೊಂದಿಕೊಳ್ಳಲಾಗದೆ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಆದಿವಾಸಿ ಭಾಷೆಗಳು ಮತ್ತೊಂದೆಡೆ. ಈ ಇಕ್ಕಟ್ಟಿನಲ್ಲಿ ಕನ್ನಡ ತನ್ನ ಚಹರೆಯನ್ನು ಕಾಯ್ದುಕೊಳ್ಳಲು ಒಂದು ಮಾರ್ಗವನ್ನು ಹಿಡಿಯಬೇಕಾಗುತ್ತದೆ. ಆದ್ದರಿಂದ ಕನ್ನಡದಂತಹ ಭಾಷೆಗಳನ್ನು ಪರಂಪರೆಯ ಭಾಷೆಗಳು ಅಥವಾ ಪಾರಂಪರಿಕ ಭಾಷೆ ಎಂದು ಕರೆಯುವುದು ಸೂಕ್ತ.

ಈ ಭಾಷಾಸಮುದಾಯಗಳಿಂದ ಬೇರೆ ಬೇರೆ ಭೂಪ್ರದೇಶಗಳಿಗೆ ವಲಸೆ ಹೋದ ಜನರು ತಮ್ಮ ಭಾಷೆಗಳನ್ನು ಕಳೆದುಕೊಳ್ಳುವ ಪ್ರಕ್ರಿಯೆಯನ್ನು ಗುರುತಿಸಿದ್ದೆವು. ಅಂತಹ ಸಂದರ್ಭಗಳಲ್ಲೂ ಕೂಡಾ ಆ ಜನಸಮುದಾಯವು ಕನ್ನಡವನ್ನು ಮರುಗಳಿಸಿಕೊಳ್ಳಲು ಸಾಧ್ಯ. ಪರಂಪರೆಯ ಭಾಷೆಯನ್ನಾಗಿ ಅವರು ಈ ಭಾಷೆಯನ್ನು ಕಲಿಯುವ ಅವಕಾಶವಿರುತ್ತದೆ.

ಜಗತ್ತಿನ ಹಲವು ಭಾಷೆಗಳು ಹೀಗೆ ವಲಸೆಸಮುದಾಯಗಳಲ್ಲಿ ಹಂಚಿಹೋಗುತ್ತಿವೆ. ಜಾಗತೀಕರಣದ ಪ್ರಭಾವದಿಂದ ಭಾಷೆಗಳು ಭೌಗೋಳಿಕ ಗಡಿಯ ಮಿತಿಗಳನ್ನು ದಾಟಿ ಹರಡಿಹೋಗುತ್ತಿವೆ. ವಲಸೆಸಮುದಾಯಗಳ ಪ್ರಮಾಣ ಈಗ ಶೇಕಡಾ ಇಪ್ಪತ್ತಕ್ಕೆ ಏರಿದೆ. ಆದ್ದರಿಂದ ಭಾಷೆಗಳ ಉಳಿಕೆ ಎಂಬುದು ಕೇವಲ ಮೂಲ ನೆಲೆಗಳಿಗೆ ಮಾತ್ರ ಸೀಮಿತವಾಗುವುದಿಲ್ಲ. ಕನ್ನಡದಂತಹ ಭಾಷೆಗಳು ಈಗ ಇಂತಹ ವಲಸೆಸಮುದಾಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯತೊಡಗಿವೆ. ಅವರಲ್ಲಿ ಭಾಷೆಯು ಉಳಿದುಕೊಳ್ಳುವ ದೃಷ್ಟಿಯಿಂದ ಇದನ್ನು ಒಂದು ಪಾರಂಪರಿಕ ಭಾಷೆಯೆಂದು ಪರಿಗಣಿಸುವುದು ಸೂಕ್ತವಾಗುತ್ತದೆ.

ಕನ್ನಡ ಭಾಷಾಪರಂಪರೆಯ ಪುನಾರಚನೆ

ಏಕೀಕರಣಪೂರ್ವದಲ್ಲಿ ಕನ್ನಡದ ವಿದ್ವಾಂಸರು ಕನ್ನಡದ ಪ್ರಾಚೀನತೆಯನ್ನು ಶೋಧಿಸಲು ಯತ್ನಗಳನ್ನು ಮಾಡುತ್ತಿದ್ದರು. ಭಾಷೆಯ ಪ್ರಾಚೀನತೆಗೆ ಆಧಾರಗಳನ್ನು ಹುಡುಕುವ ಯತ್ನದ ಜೊತೆಗೆ ಭಾಷಿಕರ ಪ್ರಾಚೀನತೆ ಮತ್ತು ನಾಡಿನ ಪ್ರಾಚೀನತೆಗಳನ್ನೂ ಹುಡುಕುತ್ತಿದ್ದರು. ಈ ಮೂರೂ ಪ್ರಯತ್ನಗಳು ಪರಸ್ಪರ ಪೂರಕವಾಗಿವೆ ಎಂಬ ತಿಳುವಳಿಕೆ ಅವರಲ್ಲಿ ಇದ್ದಂತೆ ತೋರುತ್ತದೆ. ಈ ತಿಳುವಳಿಕೆಯ ಒಳಗೆ ಇರುವ ವಿರೋಧಗಳು ಇನ್ನೂ ಗೋಚರಿಸದಿರುವುದು ಆಶ್ಚರ್ಯದ ಸಂಗತಿ. ತೀರಾ ಈಚೆಗೆ ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಪ್ರಕಟವಾದ ಕನ್ನಡ ವಿಶ್ವವಿದ್ಯಾಲಯದ ಕರ್ನಾಟಕದ ಚರಿತ್ರೆ ಸಂಪುಟಗಳಲ್ಲಿ ಇತಿಹಾಸಪೂರ್ವಕಾಲದ ಕರ್ನಾಟಕ ಎಂಬ ಪರಿಕಲ್ಪನೆ ಇದೆ. ಒಂದು ಸಂಪುಟ ಅದಕ್ಕಾಗಿಯೇ ಮೀಸಲಾಗಿದೆ. ಅಲ್ಲಿನ ಬರವಣಿಗೆಯ

ಅಧಿಕೃತತೆಯನ್ನು ಬದಿಗಿಟ್ಟು ಕೆಲವು ಪ್ರಶ್ನೆಗಳನ್ನು ಮುಂದಿಡಬೇಕು. ಇತಿಹಾಸಪೂರ್ವ ಕರ್ನಾಟಕ ಎಂದರೇನು? ಕರ್ನಾಟಕವೆಂಬ ದೇಶ ಇತಿಹಾಸಪೂರ್ವಕಾಲದಲ್ಲಿ ಇತ್ತು ಎಂತಲೇ? ಅಥವಾ ಆ ಕಾಲದ ಆ ಪ್ರದೇಶದಲ್ಲಿ ಜನರು ಮಾತನಾಡುತ್ತಿದ್ದ ಭಾಷೆ ಕನ್ನಡವಾಗಿತ್ತು ಎಂತಲೇ? ಇವೆರಡೂ ಪರಿಶೀಲನೆಯ ಅನಂತರ ಬಿದ್ದು ಹೋಗುವ ಪ್ರಕ್ರಿಯೆಗಳು. ವಾಸ್ತವವಾಗಿ ಈಗ ನಾವು ಕರ್ನಾಟಕವೆಂದು ಗುರುತಿಸುತ್ತಿರುವ ಭೂಭಾಗದಲ್ಲಿ ಇತಿಹಾಸಪೂರ್ವಕಾಲದಲ್ಲಿ ಏನು ನಡೆಯಿತು ಎಂಬುದಷ್ಟೇ ಅಲ್ಲಿನ ವಿದ್ವಾಂಸರ ಪರಿಗಣನೆಗೆ ಬಂದಿರುವ ಸಂಗತಿ. ಇದರಿಂದ ನಾವು ಇಂದಿನ ಕರ್ನಾಟಕದ ಗಡಿಗೆರೆಗಳನ್ನು ಕಾಲ್ಪನಿಕವಾಗಿ ಯಾವುದೋ ಕಾಲಕ್ಕೆ ಪ್ರಕ್ಷೇಪಿಸುತ್ತಿದ್ದೇವೆ. ಇಂತಹ ಪ್ರಯತ್ನಗಳು ಭಾಷೆಯ ಪ್ರಾಚೀನತೆಯನ್ನು ಭಾಷಿಕರಿಗೂ ಮತ್ತು ದೇಶಕ್ಕೂ ರವಾನಿಸುತ್ತವೆ. ಆದರೆ ನಮ್ಮ ಶೋಧಗಳು ಕನ್ನಡ ಭಾಷೆಯೂ ರಚನೆಗೊಂಡ ಬಗೆಗೆ, ಮತ್ತು ಅದು ಮೂಲದ್ರಾವಿಡದಿಂದ ಬೇರ್ಪಟ್ಟ ಕಾಲದ ಬಗೆಗೆ ಇನ್ನೂ ಖಚಿತವಾಗಿ ಹೇಳಲು ಸಾಧ್ಯವಾಗಿಲ್ಲ. ಈ ಭಾಷೆ ನಿರ್ಮಾಣವಾಗುವ ಹೊತ್ತಿನಲ್ಲಿ ಈ ನಾಡಿನ ಮೂಲವಾಸಿಗಳು ಯಾರ್ು, ಅವರ ಜೀವನ ನಿರ್ವಹಣೆಯ ವಿಧಾನ ಏನಾಗಿತ್ತು, ಅವರೊಡನೆ ಸಂಪರ್ಕಕ್ಕೆ ಬಂದ ಭಾಷಿಕರು ಯಾರು, ಅವರ ವೃತ್ತಿ ಏನಾಗಿತ್ತು ಇವೆಲ್ಲವೂ ಬಿಡಿಸಬೇಕಾದ ಸಮಸ್ಯೆಗಳು. ಆದರೆ ಭಾಷೆಯ ಪ್ರಾಚೀನತೆಯು ದೇಶ ಮತ್ತು ಜನಗಳ ಜೊತೆಗೆ ಸಂಪೂರ್ಣವಾಗಿ ಹೊಂದಿಕೊಳ್ಳುವುದಿಲ್ಲ. ಏಕೀಕರಣದ ಅನಂತರ ಈ ಪ್ರಶ್ನೆಗಳು ಮುಖ್ಯವಾಗಿ ತೋರದಿದ್ದುದು ಒಂದು ಗಮನಾರ್ಹ ಸಂಗತಿ. ಸಾಮಾನ್ಯವಾಗಿ ಅಧ್ಯಯನಾಸಕ್ತಿಯ ಕೊರತೆಯಿಂದ ಹೀಗಾಯಿತು ಎನ್ನುವುದುಂಟು. ಆದರೆ ಈ ಪ್ರಶ್ನೆಗಳೇ ನಮಗೆ ಮುಖ್ಯ ಅನಿಸದೆಯೂ ಇರಬಹುದು. ಅಲ್ಲದೆ ಏಕೀಕರಣದ ಅನಂತರದ ಮೊದಲ ಎರಡು ದಶಕಗಳಲ್ಲಿ ಎದುರಾದ ಸಮಸ್ಯೆಗಳು ಬೇರೆಯ ರೀತಿಯವು. ಕನ್ನಡಿಗರು ಒಂದು ಆಡಳಿತದ ವ್ಯವಸ್ಥೆಗೆ ಬಂದಮೇಲೆ ಅವರನ್ನು ಭಾವನಾತ್ಮಕವಾಗಿ ಒಗ್ಗೂಡಿಸಬೇಕೆಂಬುದು ಮುಖ್ಯ ಕಾಳಜಿಯಾಗಿತ್ತು. ವಾಸ್ತವವಾಗಿ ಇದು ಅಖಿಲ ಭಾರತ ನೆಲೆಯ ಕಾಳಜಿ. ಏಕೆಂದರೆ ನೆಹರೂ ಆಳ್ವಿಕೆಯ ಸಂದರ್ಭದಲ್ಲಿ ಕೇಳಿ ಬರುತ್ತಿದ್ದ ಮಾತು ಭಾವೈಕ್ಯದ್ದು. ಅದರ ಸಾಧನೆಗೆ ಅಖಿಲ ಭಾರತ ಮಟ್ಟದ ಪರಿಕರಗಳನ್ನು ವ್ಯವಸ್ಥೆಯು ಶೋಧಿಸುತ್ತಿತ್ತು. ಇಂತಹದೇ ಪ್ರಯತ್ನ ರಾಜ್ಯಮಟ್ಟದಲ್ಲೂ ಬೇರೆ ಬೇರೆ ಪರಿಕರಗಳೊಡನೆ ನಡೆದುದಕ್ಕೆ ಆಧಾರಗಳಿವೆ.

ಆದರೆ ಎರಡು ದಶಕಗಳ ಅನಂತರ ಕಂಡುಕೊಂಡ ಸಂಗತಿ ಎಂದರೆ ಈ ಕನ್ನಡ ಕನ್ನಡಿಗರು ಕರ್ನಾಟಕ ಎಂಬ ತ್ರಿವಳಿಯಲ್ಲಿ ಐಕ್ಯದಲ್ಲಿ ಒಗ್ಗೂಡಿಸುವ ಸಮಾನ ಅಂಶಗಳಿಗಿಂತ ಭಿನ್ನಾಂಶಗಳು ಹೆಚ್ಚಿವೆ ಎಂಬುದು. ಇದಕ್ಕೆ ಕಾರಣಗಳು ಹಲವು. ಈ ಭಿನ್ನತೆಗಳು ಮೊದಲೇ ಇದ್ದು ಈಗ ಪ್ರಕಟವಾದವೋ, ಅಥವಾ ಏಕೀಕರಣದ ಅನಂತರದ ರಾಜ್ಯಾಡಳಿತವು ಆಯ್ದುಕೊಂಡು ಜಾರಿಗೆ ತಂದ ಅಭಿವೃದ್ಧಿಯ ಮಾದರಿಯಿಂದ ಉಂಟಾದುದೋ? ಈ ಪ್ರಶ್ನೆ ಕೂಡಾ ಮುಖ್ಯ. ವಾಸ್ತವವಾಗಿ ಎರಡೂ ನೆಲೆಗಳಲ್ಲಿ ಈ ಪ್ರಶ್ನೆಗಳಿಗೆ ಉತ್ತರಗಳಿರಬಹುದು. ಸಮಾಜ ರಚನೆಯಲ್ಲಿ ಅಂತಸ್ಥವಾಗಿದ್ದ ಎಷ್ಟೋ ಸಂಗತಿಗಳು ಈಗ ಹೊರಗೆ ತಲೆ ಎತ್ತಿ ಕಾಣತೊಡಗಿರಬಹುದು. ಮತ್ತು ಕೆಲವು,

ಎರಡು ದಶಕಗಳ ರಾಜಕಾರಣದ ವೈರುಧ್ಯಗಳಿಂದ ಸೃಷ್ಟಿಯಾಗಿರಬಹುದು. ಆರ್ಥಿಕ ಸಾಮಾಜಿಕ ಅಸಮಾನತೆಗಳು ಮೊದಲಿನ ಮಾದರಿಗಳು. ಪ್ರಾದೇಶಿಕ ಅಸಮಾನತೆಗಳು, ಬೆಳವಣಿಗೆಯ ಏರುಪೇರುಗಳು ಎರಡನೇ ಮಾದರಿಗಳು. ಈ ಅವಧಿಯಲ್ಲೇ ಎರಡು ಹೊಸ ಪರಿಕಲ್ಪನೆಗಳು ಹುಟ್ಟಿಕೊಂಡವು. ಇವು ಗಡಿನಾಡ ಕನ್ನಡಿಗರು ಮತ್ತು ಹೊರನಾಡ ಕನ್ನಡಿಗರು ಎಂಬ ಪರಿಕಲ್ಪನೆಗಳು. ಅನಂತರ ಇವು ರಾಜಕೀಯವಾಗಿಯೂ ಸಮರ್ಥನೆಯನ್ನು ಪಡೆದುಕೊಂಡವು.

ಏಕೀಕರಣದ ಅನಂತರದ ಎರಡು ದಶಕಗಳ ಪ್ರಯತ್ನಗಳ ಅನಂತರವೂ ಕನ್ನಡ ನಾಡು, ನುಡಿ ಮತ್ತು ನಾಡಿಗರು ಎಂಬ ತ್ರಿವಳಿಬಂಧ ಗಟ್ಟಿಗೊಳ್ಳಲಿಲ್ಲ. ಈ ಸಂದರ್ಭದಲ್ಲೇ ಬೇರೆಯ ಪ್ರಯತ್ನಗಳು ಮೊದಲಾದಂತೆ ತೋರುತ್ತಿದೆ. ಈ ಪ್ರಯತ್ನಗಳಲ್ಲಿ ಕೆಲವು ಕನ್ನಡ ಭಾಷೆ, ಕನ್ನಡ ನಾಡು ಮತ್ತು ಕನ್ನಡಿಗರನ್ನು ಒಂದು ವ್ಯಾಪಕ ಚೌಕಟ್ಟಿನಲ್ಲಿ ವ್ಯಾಖ್ಯಾನಿಸಲು ಆಸಕ್ತವಾದವು. ಎಂಟನೇ ದಶಕದ ಗೋಕಾಕ ವರದಿ ಕುರಿತ ಚಳುವಳಿಯ ಅನಂತರ ಕರ್ನಾಟಕದಲ್ಲಿ ವಿಶ್ವಕನ್ನಡ ಸಮ್ಮೇಳನ ನಡೆಯಬೇಕೆಂಬ ಮಾತು ಕೇಳತೊಡಗಿದ್ದು ಆಕಸ್ಮಿಕವಲ್ಲ. ತಮಿಳು ಭಾಷಿಕರು, ತೆಲುಗು ಭಾಷಿಕರು ಅಂತಹ ಸಮ್ಮೇಳನಗಳನ್ನು ಮಾಡಿದರು ಎಂಬುದು ಒಂದು ಕಾರಣವಾದರೆ, ಕನ್ನಡ ಭಾಷಿಕರಲ್ಲೇ ಒಳಗೆ ತಲೆ ಎತ್ತಿದ ಭಿನ್ನಾಂಶಗಳ ಜಾಗ್ರತಿಯೂ ಇನ್ನೊಂದು ಮುಖ್ಯ ಕಾರಣ. ಏಳನೇ ದಶಕದ ರಾಜಕಾರಣ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳು ಕನ್ನಡಿಗರು ಎಂಬ ಪರಿಕಲ್ಪನೆಯನ್ನೇ ಛಿದ್ರಗೊಳಿಸಿದ್ದವು. ಇದನ್ನು ಹತ್ತಿಕ್ಕಲು ಇಂಥಾ ಸಮ್ಮೇಳನಗಳ ಭಾವನಾತ್ಮಕ ಲೇಪನ ಅಗತ್ಯವಾಗಿತ್ತು. ಆ ಹೊತ್ತಿನಲ್ಲಿ ನಡೆದ ವಿವಾದಗಳು ಗಮನಾರ್ಹ. ಇಂತಹ ಸಮ್ಮೇಳನಗಳ ಉಪಯುಕ್ತತೆಯ ಮಾತು ಒಂದು ಕಡೆಯಾದರೆ, ಜನರ ನೂರೆಂಟು ಸಮಸ್ಯೆಗಳ ಪರಿಗಣನೆ ಮಾಡದೆ ಈ ಅದ್ದೂರಿ ಸಮಾರಂಭಗಳಿಗೆ ವೆಚ್ಚ ಮಾಡುವ ಔಚಿತ್ಯವನ್ನು ಕೆಲವರು ಪ್ರಶ್ನಿಸಿದರು. ಈ ವಿವಾದವೇ ವಸ್ತು ಸ್ಥಿತಿಯನ್ನು ಬಯಲಿಗಿಡುತ್ತದೆ. ವಿಶ್ವಕನ್ನಡ ಎನ್ನುವ ಕಲ್ಪನೆಯ ಭ್ರಾಮಕತೆ ಅರಿವಿಗೆ ಬರುವುದು ತಡವಾಗಲಿಲ್ಲ. ಏಕೆಂದರೆ ಮತ್ತೆ ಅಂತಹ ಸಮ್ಮೇಳನ ನಡೆಯಲಿಲ್ಲ.

ಇದಲ್ಲದೆ ಕನ್ನಡ ಮಾತಾಡುವವರ ಸಮಾನಾಂಶಗಳನ್ನು ಗುರುತಿಸಲು ಮತ್ತೆ ಕೆಲವು ಪ್ರಯತ್ನಗಳು ನಡೆದವು. ತಮಿಳುನಾಡಿಗರು ಅವೈದಿಕ ಪರಂಪರೆಯೊಂದನ್ನು ಕಲ್ಪಿಸಿಕೊಂಡು ತಮ್ಮ ಅಸ್ಮಿತೆಯನ್ನು ಕಟ್ಟಿಕೊಂಡಂತೆ, ಇಲ್ಲಿಯೂ ಅಂತಹ ಪ್ರಯತ್ನಗಳನ್ನು ನಡೆಸುವ ಸಾಧ್ಯತೆಯನ್ನು ಪರೀಕ್ಷಿಸಿರುವುದುಂಟು. ಏಳನೆಯ ದಶಕದಲ್ಲಿ ಪೆರಿಯಾರ್ ರಾಮಸ್ವಾಮಿ ನಾಯಕರ್, ಮತ್ತು ಪವಾಡಗಳ ನಿರಾಕರಣೆ ಮಾಡುತ್ತಿದ್ದ ನಾಸ್ತಿಕವಾದಿ ಕೋವೂರ್ ನೆರವಿನಿಂದ ಕರ್ನಾಟಕದಲ್ಲಿಯೂ ಅಂತಹ ಚಳುವಳಿಯನ್ನು ರೂಪಿಸಲು ಯತ್ನಗಳು ನಡೆದವು. ಆದರೆ ಅವೈದಿಕ ಪರಂಪರೆಯ ನೆಲೆಗಟ್ಟನ್ನು ಕರ್ನಾಟಕದಲ್ಲಿ ಸ್ಥಾಪಿಸಲು ನಡೆಸಿದ ಯತ್ನಗಳು ಬೇರೆಯೇ ದಿಕ್ಕಿನಲ್ಲಿ ಹರಿದಂತೆ ತೋರುತ್ತದೆ. ಹಾಗೆಯೇ ನಾಸ್ತಿಕವಾದದ ನೆಲೆಗಳು ವೈಜ್ಞಾನಿಕತೆ ಮತ್ತು ವೈಚಾರಿಕತೆಗಳ ದಿಕ್ಕಿನಲ್ಲಿ ಹರಿದು ಭಾರತ ಜ್ಞಾನ ವಿಜ್ಞಾನ ಚಳುವಳಿಗೆ ಕಾರಣವಾದವು.

ವಾಸ್ತವವಾಗಿ ಕನ್ನಡ ಸಂಸ್ಕೃತಿಯ ನೆಲೆಗಳನ್ನು ಜನಪದ ಸಂಸ್ಕೃತಿಯೊಡನೆ ಸಮೀಕರಿಸುವ ಪ್ರಯತ್ನಗಳು ಏಕೀಕರಣಪೂರ್ವದಲ್ಲೇ ಆರಂಭಗೊಂಡವು. ಆದರೆ ಆಗ ಜನಪದ ಸಂಸ್ಕೃತಿಯನ್ನು ವ್ಯಾಖ್ಯಾನಿಸಿದ ಬಗೆಯೇ ಭಿನ್ನವಾಗಿತ್ತು. ಅದು ಮಾನವೀಯ ಮೌಲ್ಯಗಳ ಮತ್ತು ಪಾರಂಪರಿಕತೆಯ ಆಕರವಾಗಿ ಕಂಡಿತ್ತು. ಆದರೆ ಏಕೀಕರಣದ ಅನಂತರದಲ್ಲಿ ಜನಪದ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಬಗೆಯಲ್ಲಿ ಮೂಲಭೂತ ಬದಲಾವಣೆಗಳಾದವು. ಅಖಿಲ ಭಾರತ ನೆಲೆಯ ಪರಂಪರೆಗಿಂತ ಭಿನ್ನವಾದ ಮತ್ತು ಸ್ವತಂತ್ರವಾದ ಪರಂಪರೆಗಳನ್ನು ಶೋಧಿಸುವ ಯತ್ನಗಳು ಮುಖ್ಯವಾದವು. ಮೊದಮೊದಲು ಕಲಾಪ್ರಕಾರಗಳಿಗೆ ಸೀಮಿತವಾಗಿದ್ದ ಈ ಪ್ರಯತ್ನಗಳು ಅನಂತರ ವ್ಯಾಪಕ ನೆಲೆಯನ್ನು ಕಂಡುಕೊಂಡವು. ಮುಖ್ಯವಾಗಿ ಈ ಅಧ್ಯಯನಗಳು ಅವೈದಿಕ ನೆಲೆಯನ್ನು ಕನ್ನಡ ಜನಪದ ಸಂಸ್ಕೃತಿಯ ಮೂಲಶೋಧವನ್ನಾಗಿ ಗುರುತಿಸಲು ಯತ್ನಿಸುತ್ತವೆ. ಇಂತಹ ಯತ್ನಗಳು ಮೊದಲ ಹಂತದಲ್ಲಿ ವೈದಿಕ ಪರಂಪರೆಯೊಡನೆ ವೈರುಧ್ಯವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರಲಿಲ್ಲ. ಅದಕ್ಕಿಂತ ಭಿನ್ನವಾದ ಒಂದು ನೆಲೆಯನ್ನು ಮಾತ್ರ ಕಾಣಲು ಯತ್ನಿಸುತ್ತಿದ್ದವು. ಆದರೆ ಎಂಟನೇ ದಶಕದ ನಂತರ ಈ ನೆಲೆಗಳು ಭಿನ್ನವಾದವು. ಇದಕ್ಕೆ ಕಾರಣಗಳು ಹಲವಾರಿವೆ. ಮುಖ್ಯವಾಗಿ ಅವೈದಿಕ ಎಂದು ಗ್ರಹಿಸಿದ ನೆಲೆಯೊಳಗೆ ಹಲವು ಎಳೆಗಳು ಸೇರಿಕೊಂಡದ್ದು ಗೋಚರವಾಗತೊಡಗಿತ್ತು. ಕೃಷಿಮೂಲ ಎಂದು ತಿಳಿಯಲಾಗಿದ್ದ ಜನಪದ ಸಂಸ್ಕೃತಿಯ ಎಷ್ಟೋ ಬೇರುಗಳು ಕೆಳಜಾತಿಯ ಸಮುದಾಯಗಳ ಜೊತೆಗೆ ಹೆಣೆದುಕೊಂಡದ್ದು ಸ್ಪಷ್ಟವಾಗತೊಡಗಿತ್ತು.

ಈಗ ಜನಪದದ ತಾತ್ತ್ವಿಕ ನೆಲೆಗಟ್ಟನ್ನು ಕನ್ನಡದ ಅಸ್ಮಿತೆಯ ಗುರುತನ್ನಾಗಿ ಪರಿಗಣಿಸುವ ಯತ್ನವನ್ನು ಹಿಂದಕ್ಕೆ ತಳ್ಳಿ, ಅದರ ಬದಲು ಅದರ ಬಾಹ್ಯರೂಪ ಗಳನ್ನು ಮಾತ್ರ ಗುರುತುಗಳನ್ನಾಗಿ ಉಳಿಸಿಕೊಳ್ಳುವ ಪ್ರಯತ್ನಗಳು ಮೊದಲಾದವು. ವಿವಿಧ ಸಮಾರಂಭಗಳಲ್ಲಿ, ನಾಡಹಬ್ಬಗಳಲ್ಲಿ, ರಾಜ್ಯೋತ್ಸವದಲ್ಲಿ, ಕರ್ನಾಟಕವನ್ನು ಬೇರೆ ಕಡೆ ಪ್ರತಿನಿಧಿಸಬೇಕಾದ ಕಡೆಗಳಲ್ಲಿ ಜನಪದ ಕಲೆಗಳನ್ನು ಪ್ರದರ್ಶಿಸುವ ಪರಿಪಾಠ ಬೆಳೆಯಿತು. ಅಂದರೆ ಅವು ಕನ್ನಡಿಗರ ಗುರುತಾಗಿಬಿಟ್ಟವು. ಯಕ್ಷಗಾನ, ಡೊಳ್ಳು ಕುಣಿತ, ನಂದಿಕುಣಿತ, ಪಟದ ಕುಣಿತ, ಸುಗ್ಗಿ ಕುಣಿತ ಹೀಗೆ ಹಲವು ಹತ್ತು. ಇವುಗಳಲ್ಲಿ ಎಷ್ಟೋ ಕಲೆಗಳಲ್ಲಿ ಕನ್ನಡಿಗರು ಭಾಗಿಗಳಾಗುವುದಿರಲಿ, ಅವುಗಳನ್ನು ನಿಜಸ್ಥಿತಿಯಲ್ಲಿ ಆಚರಣೆಯ ಭಾಗವಾಗಿ ನೋಡಿಯೂ ಇರುವುದಿಲ್ಲ. ಆದರೆ ಅವೆಲ್ಲವೂ ಈಗ ಕನ್ನಡಿಗರ ಪ್ರತಿನಿಧಿಗಳಾಗಿ ಬಿಟ್ಟಿವೆ.

ಕನ್ನಡದ ಹೆಮ್ಮೆಯನ್ನು ಮರಳಿ ಸ್ಥಾಪಿಸುವ ಪ್ರಯತ್ನ ಸಾಮುದಾಯಿಕವಾಗಿ ನಡೆಯದಿದ್ದರೂ ವ್ಯಕ್ತಿಗತ ಶೋಧಗಳಲ್ಲಿ, ಶೈಕ್ಷಣಿಕ ನೆಲೆಗಳಲ್ಲಿ ಮುಂದುವರೆದವು. ತಮ್ಮ ಹಲವು ವರ್ಷಗಳ ಸಂಶೋಧನೆಯ ಫಲವಾಗಿ ಡಾ.ಎಂ.ಚಿದಾನಂದ ಮೂರ್ತಿಯವರು ಈ ಶತಮಾನದಲ್ಲಿ ಪ್ರಕಟಿಸಿದ 'ಭಾಷಿಕ ಬೃಹತ್ ಕರ್ನಾಟಕ' ಎಂಬ ಗ್ರಂಥವನ್ನು ಈ ದೃಷ್ಟಿಯಿಂದ ಪರಿಶೀಲಿಸಬೇಕು. ಇಂತಹ ಪ್ರಯತ್ನಗಳು ಕೆಲವೊಮ್ಮೆ ಆಕಸ್ಮಿಕ, ಮತ್ತೆ ಕೆಲವೊಮ್ಮೆ ವಿಕ್ಷಿಪ್ತ ಎನ್ನಿಸಿದರೂ ಇದರ ಹಿಂದಿನ ತಾತ್ತ್ವಿಕ

ಒತ್ತಡಗಳನ್ನು ಅವಗಣಿಸುವುದು ಸಾಧ್ಯವಿಲ್ಲ. ಈ ಮೊದಲು ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಕರ್ನಾಟಕದ ಅರ್ಥಾತ್ ಕನ್ನಡಿಗರ ಉತ್ತರದ ಗಡಿಗೆರೆ ನರ್ಮದೆಯವರೆಗೂ ಇತ್ತೆಂದು ಡಾ.ಶಂಬಾ ಜೋಶಿ, ನಾ. ಶ್ರೀ. ರಾಜಪುರೋಹಿತ ಮುಂತಾದವರು ಪ್ರಸ್ತುತಪಡಿಸಿದರು. ಮರೆಯಾಗಿ ಹೋದ ಕನ್ನಡ ಪ್ರದೇಶಗಳ ಶೋಧ ನಿಧಾನವಾಗಿ ನಡೆಯುತ್ತಿತ್ತಾದರೂ ಅನಂತರದ ದಶಕಗಳಲ್ಲಿ ನಿಂತು ಹೋಗಿತ್ತು. ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರಗಳ ಕನ್ನಡ ಶಾಸನಗಳನ್ನು ಶೋಧಿಸಿದ್ದು ಒಂದು ಬಗೆಯ ವಿಸ್ತರಣೆಯ ಆಕಾಂಕ್ಷೆಯನ್ನು ತೋರಿಸುತ್ತಿದ್ದವು. ಎಂಟನೇ ದಶಕದಲ್ಲಿ ಪಂಪನ ವೇಮುಲವಾಡ, ಧರ್ಮಪುರ ಮುಂತಾದವುಗಳನ್ನು ಗುರುತಿಸುವ ಪ್ರಯತ್ನಗಳು ನಡೆದವು. ಈ ಪ್ರಯತ್ನಗಳನ್ನು ಕನ್ನಡ ಮನಸ್ಸು ಕೇವಲ ಶೈಕ್ಷಣಿಕ ಆಸಕ್ತಿ ಎಂದಷ್ಟೇ ಪರಿಗಣಿಸಿದೆ. ಅದನ್ನು ವೈಭವೀಕರಿಸುವ ಪ್ರಯತ್ನಗಳು ನಡೆಯಲಿಲ್ಲ. ಆದರೆ ಚಿದಾನಂದಮೂರ್ತಿಯವರ 'ಭಾಷಿಕ ಬೃಹತ್ ಕರ್ನಾಟಕ'ವು ಕೇವಲ ಶೈಕ್ಷಣಿಕ ಆಸಕ್ತಿಯನ್ನಷ್ಟೇ ಹೊಂದಿಲ್ಲ. ನೇಪಾಳದ ಪಶುಪತಿ ದೇವಾಲಯದ ಅರ್ಚಕರ ಮೂಲದ ಶೋಧ, ಮಹಾರಾಷ್ಟ್ರದ ಹಲವು ಸ್ಥಳನಾಮಗಳ ಮರುವ್ಯಾಖ್ಯೆ, ಮಿಥಿಲಾ ಮತ್ತು ಅವಧ ಪ್ರದೇಶದ ಮಧ್ಯಕಾಲೀನ ಚರಿತ್ರೆಯ ಮರು ಅವಲೋಕನ ಇವೆಲ್ಲವೂ ಕನ್ನಡಿಗರ ಹಳೆಯ ವಿಜಯಗಳನ್ನು, ಸಾಧನೆಗಳನ್ನು ನೆನಪಿಸುವ ಪ್ರಯತ್ನಗಳು. ಈ ಮರುಖನನ ಪ್ರಯತ್ನದಿಂದ ನಿರ್ಮಾಣಗೊಂಡ ಕನ್ನಡ ಚರಿತ್ರೆಗೆ ಯಾರು ಹಕ್ಕುದಾರರು, ಯಾರು ಆ ಚರಿತ್ರೆಯ ಬಗೆಗೆ ಅಭಿಮಾನ ಪಡುವವರು ಎಂಬ ಪ್ರಶ್ನೆ ಇಪ್ಪತ್ತೊಂದನೆಯ ಶತಮಾನದಲ್ಲಿ ಮುಖ್ಯವಾಗುತ್ತದೆ.

ಚರಿತ್ರೆಯ ಬಗೆಗೆ ಇರುವ ಪ್ರಸಿದ್ಧ ಹೇಳಿಕೆಯೊಂದು ಹೀಗಿದೆ: 'ಚರಿತ್ರೆಯನ್ನು ಮರೆತವರು ಅದನ್ನು ಪುನರಾವರ್ತಿಸುತ್ತಾರೆ'. ಈ ಹೇಳಿಕೆಯ ಉದ್ದೇಶ ಏನೇ ಇದ್ದರೂ ಚರಿತ್ರೆಯು ನೆನಪಿನ ಭಾಗವಾಗಬೇಕು ಎಂಬುದು ಇಲ್ಲಿ ಮುಖ್ಯ ಅಪೇಕ್ಷೆ ಆದಂತಿದೆ. ಆದರೆ ಇಪ್ಪತ್ತನೇ ಶತಮಾನದ ಗತಿಶೀಲತೆಯ ಅಭ್ಯಾಸ ಮಾಡಿದ ವಿದ್ವಾಂಸರು ಈ ಮೇಲಿನ ಹೇಳಿಕೆಗೆ ಒಂದು ತಿದ್ದುಪಡಿ ಮಾಡುತ್ತಾರೆ: 'ಚರಿತ್ರೆಯನ್ನು ನೆನಪಿಟ್ಟುಕೊಂಡವರು ಅದನ್ನು ಪುನರಾವರ್ತಿಸುತ್ತಾರೆ'. ಚರಿತ್ರೆಯು ಮರೆಯಲೆಂದು ಇದೆಯೋ ಅಥವಾ ನೆನಪು ಮಾಡಿಕೊಳ್ಳಲೆಂದು ಇದೆಯೋ? ಈ ಪ್ರಶ್ನೆಗೆ ಉತ್ತರ ಹೇಳುವುದು ಇಲ್ಲಿನ ಉದ್ದೇಶವಲ್ಲ. ನೆನಪುಗಳಿಂದ ಚರಿತ್ರೆಯನ್ನು ಮರುಸ್ಥಾಪಿಸುವ ಯತ್ನ ಕನ್ನಡಿಗರ ಮಟ್ಟಿಗೆ ಎಷ್ಟು ಉಪಯುಕ್ತ ಅಥವಾ ಅಗತ್ಯ ಎಂಬ ಪ್ರಶ್ನೆಯಷ್ಟೇ ನಮಗೆ ಮುಖ್ಯ.

ಎಂಟನೇ ದಶಕದ ಅನಂತರದ ಬೆಳವಣಿಗೆಗಳು ಕರ್ನಾಟಕದ ಮಟ್ಟಿಗೆ ಮಾತ್ರವಲ್ಲದೇ ಇಡೀ ಜಗತ್ತಿನ ಎಷ್ಟೋ ಪ್ರದೇಶಗಳ ಭೂಪಟಗಳನ್ನು ಬದಲಾಯಿಸಿ ಬಿಟ್ಟವು. ಶೀತಲಸಮರ ಎಂಬ ಪರಿಕಲ್ಪನೆಯೇ ಮಾಯವಾಯಿತು. ಜಾಗತೀಕರಣವು ತನ್ನ ಹೊಸ ಬಗೆಗಳೊಂದಿಗೆ ಕಾಣತೊಡಗಿತ್ತು. ಕರ್ನಾಟಕವೂ ಇದರಿಂದ ಹೊರಗುಳಿಯುವ ಸಾಧ್ಯತೆ ಇರಲಿಲ್ಲ. ೧೯೯೧ರಲ್ಲಿ ಭಾರತವನ್ನು ಆಳುತ್ತಿದ್ದ ಸರ್ಕಾರ ಮುಕ್ತಮಾರುಕಟ್ಟೆಗೆ ಅವಕಾಶ ನೀಡುವ ಉದಾರೀಕರಣ ನೀತಿಯನ್ನು ಜಾರಿಗೆ ತಂದಿತ್ತು.

ಅದೇ ವರ್ಷ ಕರ್ನಾಟಕದಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಮೇಲುನೋಟಕ್ಕೆ ಸಂಬಂಧವಿಲ್ಲದ ಘಟನೆಗಳಿವು. ಆದರೆ ಚಾರಿತ್ರಿಕ ವಿನ್ಯಾಸದಲ್ಲಿ ಇವುಗಳಿಗೆ ಸಂಬಂಧವಿದೆ.

ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕೆಂಬ ಬೇಡಿಕೆ ಹಳೆಯದೇ. ತಮಿಳು ಮತ್ತು ತೆಲುಗು ವಿಶ್ವವಿದ್ಯಾಲಯಗಳ ಮಾದರಿಯನ್ನು ಕರ್ನಾಟಕವು ಅನುಸರಿಸ ಬೇಕೆಂಬ ಒತ್ತಾಯ ವಿಶ್ವಕನ್ನಡ ಸಮ್ಮೇಳನದ ನಡಾವಳಿಗಳಲ್ಲಿ ಕಾಣಿಸಿಕೊಂಡಿತ್ತು. ಅನಂತರ ಹಲವು ವರ್ಷಗಳ ಮತ್ತು ಹಲವರ ಪ್ರಯತ್ನಗಳ ಫಲವಾಗಿ ಈ ವಿಶ್ವವಿದ್ಯಾಲಯ ನೆಲೆಯೂರಿತ್ತು. ಇದು ಕನ್ನಡಿಗರ ನೆನಪಿನ ಮರುಖನನದ ಭಾಗವಾಗಬೇಕೆಂಬ ಬಯಕೆ ಈ ಸಂಸ್ಥೆಯ ಸ್ಥಾಪನೆಯ ಕನಸು ಕಂಡವರಲ್ಲಿ ಇದ್ದಿತು. ಆ ಕಾರಣದಿಂದಲೇ ಕನ್ನಡಿಗರ ನೆನಪಿನ ಮತ್ತು ಹೆಮ್ಮೆಯ ಭಾಗವೆಂದು ಭಾವಿಸಲಾದ ವಿಜಯನಗರ ಸಾಮ್ರಾಜ್ಯದ ಕೇಂದ್ರಸ್ಥಾನ ಹಂಪಿಯಲ್ಲಿ ಇದನ್ನು ಸ್ಥಾಪಿಸಿದರು.

ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯ ಹಿಂದೆ ಇದ್ದ ತಾತ್ತ್ವಿಕತೆ ಪ್ರಾಚೀನ ಕರ್ನಾಟಕದ ಪರಂಪರೆಯನ್ನು ಪುನಾರಚಿಸುವುದು, ಮತ್ತು ಕನ್ನಡ ಭಾಷೆಯನ್ನು ಆಧುನಿಕ ಸಂದರ್ಭದ ಎಲ್ಲಾ ಸವಾಲುಗಳಿಗೂ ಸಿದ್ಧವಾಗುವಂತೆ ಮಾಡುವುದು. ಈ ಉದ್ದೇಶ ನಾವೀಗಾಗಲೇ ಗುರುತಿಸಿದಂತೆ ಕರ್ನಾಟಕ ರಾಜ್ಯದೊಳಗೆ ಸೃಷ್ಟಿಯಾದ ಆಂತರಿಕ ಬಿಕ್ಕಟ್ಟಿನಿಂದ ಪ್ರೇರಣೆ ಪಡೆದಿತ್ತು. ಅದರ ಜೊತೆಗೆ ಜಾಗತಿಕವಾಗಿ ಬೆಳೆಯುತ್ತಿದ್ದ ಇಂಗ್ಲಿಶ್ ಮತ್ತು ಅದರ ಮೂಲಕ ಆದ ಪಾಶ್ಚಾತ್ಯ ಪ್ರಭಾವವು ದೇಶಿಯ ಭಾಷಾಸಂಸ್ಕೃತಿಗಳ ಅವಕಾಶಗಳನ್ನು ಸಂಕುಚಿತಗೊಳಿಸತೊಡಗಿತ್ತು. ಈ ಎರಡೂ ಕಾರಣಗಳು ಒಟ್ಟಾಗಿ ಈ ವಿಶ್ವವಿದ್ಯಾಲಯ ಸ್ಥಾಪನೆಗೆ ಕಾರಣವಾದವು.

ಕನ್ನಡ ವಿಶ್ವವಿದ್ಯಾಲಯ ಕಳೆದ ಒಂದೂವರೆ ದಶಕದಲ್ಲಿ ಭಾಷಾಸಂಸ್ಕೃತಿಯ ಶೋಧಗಳನ್ನು ಮುಂದುವರೆಸಿದೆ. ಭೂತಕಾಲದ, ವರ್ತಮಾನದ, ಮತ್ತು ಭವಿಷ್ಯದ ಕರ್ನಾಟಕದ ಬಗೆಗೆ ಹಲವು ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಪೂರೈಸಿದೆ. ಪರಂಪರೆಯ ಪುನಾರಚನೆ ಮಾಡುವ ಅಧ್ಯಯನ ವಿಧಾನಗಳನ್ನು ಪೂರ್ಣವಾಗಿ ನಿರಾಕರಿಸಿದೆ. ಆ ಪರಂಪರೆಗೂ, ಸಮಕಾಲೀನ ಬದುಕಿಗೂ ಇರುವ ಸಂಬಂಧಗಳನ್ನು ವಿಶ್ಲೇಷಿಸುವ ನೆಲೆಗಳಿಗೂ ಈ ಯೋಜನೆಗಳು ವ್ಯಾಪ್ತಿಯನ್ನು ಹೊಂದಿವೆ. ಇಷ್ಟಾದರೂ ಇದರ ಸ್ಥಾಪನೆಯ ಹಿಂದೆ ಇದ್ದ ಮುಖ್ಯ ಉದ್ದೇಶವಾದ ಕನ್ನಡಿಗರ ಗುರುತಾಗಿ ಈ ಸಂಸ್ಥೆ ಬೆಳೆಯಬೇಕೆಂಬುದು ನೆರವೇರಿದೆ ಎನ್ನುವಂತಿಲ್ಲ. ಇದು ಋಣಾತ್ಮಕ ನೆಲೆಯ ಮಾತಲ್ಲ. ಏಕೆಂದರೆ ಒಂದು ಸಂಸ್ಥೆ ಚಹರೆಯಾಗಿ, ಗುರುತಾಗಿ ಮಾರ್ಪಡುವುದು ಸಂಸ್ಕೃತಿಯ ದೃಷ್ಟಿಯಿಂದ ಅಪೇಕ್ಷಣೀಯವಾದರೂ, ಸಂಸ್ಥೆಯ ಬೆಳವಣಿಗೆ ಮತ್ತು ಭವಿಷ್ಯದ ದೃಷ್ಟಿಯಿಂದ ಅಷ್ಟೇನೂ ಹಿತಕರವಾದ ಸಂಗತಿಯಲ್ಲ.

ಎಂಟನೇ ದಶಕದಿಂದ ಈಚೆಗೆ ಕನ್ನಡ ಮತ್ತು ಸಮಾಜದ ನಡುವೆ ಅಗತ್ಯವಿದ್ದಷ್ಟು ನಂಟು ಬೆಳೆದಿಲ್ಲ ಎನ್ನುವ ಸಂಗತಿ ಅರಿವಿಗೆ ಬಂತಷ್ಟೇ. ಇದರ ಪರಿಣಾಮವಾಗಿ

ನಡೆದ ಮುಖ್ಯ ಬದಲಾವಣೆಗಳಲ್ಲಿ ಕರ್ನಾಟಕ ಸರ್ಕಾರವು ಕನ್ನಡ ಭಾಷಾಭಿವೃದ್ಧಿ ಮತ್ತು ಗಡಿನಾಡಿನ ಸಮಸ್ಯೆಗಳ ಬಗೆಗೆ ಸಲಹೆ ನೀಡಲು ಒಂದು ವೇದಿಕೆಯನ್ನು ರಚಿಸಿತ್ತು. ಅನಂತರ ಈ ವೇದಿಕೆಯೇ ಕನ್ನಡ ಕಾವಲು ಸಮಿತಿ ಎಂಬ ಹೆಸರು ಪಡೆದಿದೆ. ಕನ್ನಡಕ್ಕೆ ವಿವಿಧ ಸಾಮಾಜಿಕ ವಲಯಗಳಲ್ಲಿ ದೊರೆಯಬೇಕಾಗಿರುವ ಸ್ಥಾನಮಾನಗಳು ದೊರೆತಿವೆಯೇ ಎಂಬುದನ್ನು ಪರಿಶೀಲಿಸಲು ಮತ್ತು ಅನುಷ್ಠಾನಕ್ಕೆ ಅರ್ಹವಾದ ಸಲಹೆಗಳನ್ನು ನೀಡಲು ಈ ಕಾವಲು ಸಮಿತಿಯ ಕಾರ್ಯ ನಿಗದಿಯಾಗಿತ್ತು. ಈ ಉಸ್ತುವಾರಿ ಕೆಲಸದ ನಡುವೆಯೂ ಇದ್ದ ಉದ್ದೇಶಗಳಲ್ಲಿ ಕನ್ನಡ ಬಲ್ಲವರಿಗೆ ಉದ್ಯೋಗ ಕಾಯ್ದಿರಿಸುವ ವ್ಯವಸ್ಥೆಯೊಂದನ್ನು ರೂಪಿಸಬೇಕೆಂಬುದು ಮುಖ್ಯ ಬೇಡಿಕೆಯಾಗಿದ್ದ ಕಾಲವದು. ಆಗ ಸರೋಜಿನಿ ಮಹಿಷಿಯವರ ನೇತೃತ್ವದಲ್ಲಿ ಸಮಿತಿಯೊಂದು ರಚನೆಯಾಯಿತು. ಆ ಸಮಿತಿಯು ಕನ್ನಡಿಗರೆಂದರೆ ಯಾರು ಎಂಬ ಪ್ರಶ್ನೆಯನ್ನು ಬಿಡಿಸಬೇಕಾಗಿ ಬಂತು. ಕನ್ನಡವು ಮಾತಾಡುವ ಯಾರಾದರೂ ಕನ್ನಡಿಗರೇ. ಅಲ್ಲದೆ ಹೀಗೆ ಮಾತನಾಡುವ ಕನ್ನಡವು ವ್ಯಕ್ತಿಯ ಮೊದಲ ಭಾಷೆಯೋ ಅಥವಾ ಎರಡನೇ ಭಾಷೆಯೋ ಎಂಬುದು ಮುಖ್ಯವಲ್ಲ. ಆದರೆ ಇನ್ನೊಂದು ಸಮಸ್ಯೆ ಎದುರಾಯಿತು. ಬಹುದೀರ್ಘಕಾಲದಿಂದ ಕರ್ನಾಟಕದಲ್ಲಿ ನೆಲೆಸಿ ಕರ್ನಾಟಕದ ಭಾಷೆಯನ್ನು ಬಳಸದವರನ್ನು ಕನ್ನಡಿಗರೆಂದು ಕರೆಯಬೇಕೆ? ಯಾವ ಮಾನದಂಡಗಳನ್ನು ಅನುಸರಿಸಬೇಕು? ಕನ್ನಡಿಗರಿಗೆ ಸಿಗುವ ಸವಲತ್ತುಗಳು ಕರ್ನಾಟಕದ ವಾಸಿಯಾಗಿದ್ದು, ಈಗ ಇನ್ನೊಂದು ರಾಜ್ಯ ಅಥವಾ ರಾಷ್ಟ್ರದಲ್ಲಿ ವಾಸಿಸುತ್ತಿರುವವರಿಗೆ ದೊರೆಯಬೇಕೇ ಬೇಡವೇ? ಈ ಪ್ರಶ್ನೆಗಳು ನಿರ್ವಿವಾದವಾಗಿ ಉತ್ತರಗಳನ್ನು ಪಡೆಯಬಹುದು ಎಂದು ಹೇಳುವುದು ಕಷ್ಟ. ಆದರೂ ಸರೋಜಿನಿ ಮಹಿಷಿ ಸಮಿತಿಯು ನೀಡಿದ ವರದಿಯಂತೆ ಯಾವುದೇ ವ್ಯಕ್ತಿ ೧೫ ವರ್ಷಗಳ ಕಾಲ ಕರ್ನಾಟಕದಲ್ಲಿ ನೆಲೆಸಿದರೆ ಆ ವ್ಯಕ್ತಿಗಳನ್ನು ಕರ್ನಾಟಕದ ಪ್ರಜೆ ಹಾಗೂ ಕನ್ನಡಿಗ ಎಂದು ಗುರುತಿಸಲು ಸಾಧ್ಯ. ಈ ನಿರ್ಣಯ ಬೇರೊಂದು ರೀತಿಯಲ್ಲಿ ಉಪಯುಕ್ತವಾದರೂ ಕನ್ನಡಿಗರನ್ನು ವ್ಯಾಖ್ಯಾನಿಸುವಾಗ ಭಾಷೆಯ ಪ್ರಶ್ನೆ ಹಿಂದೆ ಸರಿಯಿತು. ೧೫ ವರ್ಷ ಕಾಲಾವಧಿ ಮತ್ತು ಕರ್ನಾಟಕದಲ್ಲಿ ವಾಸ ಇವೆರಡೂ ಮುಖ್ಯ ನೆಲೆಗಳಾಗಿ ಭಾಷೆಯ ಪ್ರಶ್ನೆ ಹಿಂದಕ್ಕೆ ಸರಿಯಿತು. ಕನ್ನಡಿಗ ಪದದಲ್ಲಿ ಕನ್ನಡ ಮಾತಾಡುವ ವ್ಯಕ್ತಿಗಳು ಎಂಬ ಅರ್ಥವಿದ್ದರೂ ಇಡೀ ವ್ಯಾಖ್ಯೆ ಭಾಷೆಯನ್ನು ಬಿಟ್ಟು ದೇಶ ಮತ್ತು ವ್ಯಕ್ತಿಗಳಿಗೆ ಸೀಮಿತವಾಯಿತು. ಈ ಸಮಿತಿಯ ವರದಿ ಕೂಡಾ ಯಥಾವತ್ತಾಗಿ ಜಾರಿಗೆ ಬಂದಿಲ್ಲ. ಆ ಸಮಿತಿಯ ಸಂದರ್ಭದಲ್ಲಿ ಇದ್ದ ಪರಿಸ್ಥಿತಿ ಈಗ ಮತ್ತಷ್ಟು ಬಿಗಡಾಯಿಸಿದೆ.

ಕನ್ನಡ ಕಾವಲು ಸಮಿತಿಯನ್ನು ಅನಂತರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಂದು ಮರುನಾಮಕರಣ ಮಾಡಲಾಯಿತು. ಅನಂತರವೂ ಈ ವೇದಿಕೆಗೆ ಕನ್ನಡ ಬಳಕೆಯ ಬಗೆಗೆ ಯಾವಾಗಲೂ ಎಚ್ಚರಿಕೆ ವಹಿಸುವ ಅಧಿಕಾರ ಮತ್ತು ಕಾರ್ಯವ್ಯಾಪ್ತಿಗಳು ಮೊದಲಿನಂತೆಯೇ ಮುಂದುವರೆದವು. ಭಾಷಾಭಿವೃದ್ಧಿಗಾಗಿ ಬೇರೆ ಬೇರೆ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಜಾಗೃತಿಯನ್ನು ಮೂಡಿಸುವ

ಕೆಲಸವನ್ನು ಈ ಪ್ರಾಧಿಕಾರ ಮಾಡುತ್ತಿದೆ. ಉದಾ.ಗೆ ಇಂಗ್ಲಿಶ್ ನಾಮಫಲಕಗಳನ್ನು ಬಳಸುವವರ ವಿರುದ್ಧ ಟಿಪ್ಪಣಿಗಳನ್ನು ರವಾನಿಸುವುದು. ತಿದ್ದಿಕೊಳ್ಳಲು ಕಾಲಾವಕಾಶ ಕೊಟ್ಟು ಅನಂತರ ತಾವೇ ಆ ನಾಮಫಲಕಗಳನ್ನು ವಿರೂಪಗೊಳಿಸುವುದು ಇತ್ಯಾದಿ ಕಾರ್ಯಕ್ರಮಗಳು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕನ್ನಡದ ಬಳಕೆಗೆ ಅನುಕೂಲಕರವಾದ ಪರಿಸರವನ್ನು ನಿರ್ಮಾಣ ಮಾಡಬೇಕಾಗಿದೆ. ಈ ಅಪೇಕ್ಷೆಯನ್ನು ಪೂರೈಸುವುದು ಕಷ್ಟ ಏಕೆಂದರೆ ಈ ಅಗತ್ಯಗಳಿಗೆ ಅನುಕೂಲಕರವಾದ ಪರಿಕರ ಸಿದ್ಧತೆಗಳು ನಡೆಯಬೇಕಾದಷ್ಟು ಪ್ರಮಾಣದಲ್ಲಿ ನಡೆಯದಿರುವುದು. ಇದರಿಂದ ಇಚ್ಛಾಶಕ್ತಿ ಇದ್ದರೂ ಕಾರ್ಯಕ್ರಮವನ್ನು ಜಾರಿಗೆ ಕೊಡಲು ತೊಡಕುಗಳು ಹಲವಾರಿವೆ. ಆದ್ದರಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕರ್ನಾಟಕ ಸರ್ಕಾರದ ಒಂದು ಇಲಾಖೆಯಂತೆ ಕೆಲಸ ನಡೆಸುತ್ತದೆಯೇ ಹೊರತು ಸ್ವಾಯತ್ತ ಸಂಸ್ಥೆಯಾಗಲ್ಲ. ಭಾಷಾಭಿವೃದ್ಧಿಗೆ ಅಗತ್ಯವಾದ ಯೋಜನೆಗಳು, ಮುಂಗಾಣ್ಕೆಗಳು ಈ ಪ್ರಾಧಿಕಾರಕ್ಕೆ ದೊರಕಿಲ್ಲ. ಆದರೆ ಸರ್ಕಾರದ ಅಂಗ ಎಂಬ ಭಾವನೆ ಇರುವುದರಿಂದ ಕನ್ನಡ ಅನುಷ್ಠಾನದಲ್ಲಿ ಕೊರತೆ ಕಂಡ ಸಂದರ್ಭದಲ್ಲೆಲ್ಲ ಪ್ರಾಧಿಕಾರವು ನೀಡುವ ನೋಟೀಸುಗಳು ಸಂಬಂಧ ಪಟ್ಟವರನ್ನು ಎಚ್ಚರಿಸಿವೆ. ಕನ್ನಡಿಗರು ಈ ಪ್ರಾಧಿಕಾರವನ್ನು ಒಂದು ಗುರುತನ್ನಾಗಿ ಚಹರೆಯನ್ನಾಗಿ ಒಪ್ಪಿಕೊಂಡಂತೆ ತೋರುತ್ತದೆ.


ಭಾಷಾಂತರ : ಸಾಮಾನ್ಯ ಮತ್ತು ವಿಶಿಷ್ಟ ಸಮಸ್ಯೆಗಳು

ಭಾಗ – 1 (ಹಿನ್ನೆಲೆ)

ಕಾರ್ಖಾನೆಗಳಲ್ಲಿ ಕನ್ನಡದ ಬಳಕೆ: ಕನ್ನಡವನ್ನು ಬಳಸುವುದು ಎಂದರೇನು?

ಈ ಬಗ್ಗೆ ಕೆಲವು ಭ್ರಮೆಗಳಿವೆ. ಕನ್ನಡವನ್ನು ಬಳಸುವ ನಿರ್ಧಾರ ಮತ್ತು ಬಯಕೆ ಎರಡೂ ಸೇರಿದರೆ ಬಳಸುವುದು ಸಾಧ್ಯ. ಪ್ರತ್ಯೇಕ ಸಿದ್ಧತೆ ಅತ್ಯವಶ್ಯವಲ್ಲವೆಂಬ ನಂಬಿಕೆ ಇದೆ. ಇದಲ್ಲದೆ ಭಾಷಾಂತರ ಮಾಡಬಲ್ಲವರ ನೇಮಕಾತಿಯ ಮೂಲಕ ಕನ್ನಡ ಬಳಕೆಗೆ ಸಂಬಂಧಿಸಿದ ಸದ್ಯದ ಮತ್ತು ಎಲ್ಲ ಕಾಲದ ಸಮಸ್ಯೆಗಳೂ ಪರಿಹಾರವಾಗುತ್ತವೆ ಎನ್ನುವ ವಿಚಾರವಿದೆ. ಈ ಎರಡೂ ವಿಚಾರಗಳು ಉತ್ಸುಕತೆಗೆ ಕಾರಣವಾದರೂ, ಸಮಸ್ಯೆಯನ್ನು ಪೂರ್ಣಪ್ರಮಾಣದಲ್ಲಿ ಗ್ರಹಿಸಿಲ್ಲ.

ಕನ್ನಡವನ್ನು ಈಗಿರುವ ಇಂಗ್ಲಿಶ್‌ನ ಜೊತೆಯಲ್ಲಿ ಬಳಸುವುದು ಅಥವಾ ಇಂಗ್ಲಿಶ್‌ಗೆ ಬದಲಾಗಿ ಬಳಸುವುದು ಎಂಬ ಎರಡು ನಿರ್ಧಾರಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು. ಅಥವಾ ಎರಡೂ ನಿರ್ಧಾರಗಳನ್ನು ಬೇರೆ ಬೇರೆ ನೆಲೆಗಳಲ್ಲಿ ಜಾರಿಗೆ ತರಬಹುದು. ಎರಡೂ ಭಾಷೆಗಳನ್ನು ಬಳಸುವಾಗ ಸಾಮಾನ್ಯವಾಗಿ ಇಂಗ್ಲಿಶ್ ರೂಪವನ್ನು ಅಧಿಕೃತವೆಂದು ಭಾವಿಸುವ ವಾಡಿಕೆ ಇದೆ. ಮಧ್ಯಂತರದಲ್ಲಿ ಇದು ಅನಿವಾರ್ಯವಾದರೂ ಕೊನೆಗೆ ಕನ್ನಡ ರೂಪವೇ ಅಧಿಕೃತವೆಂಬ ನೆಲೆಯನ್ನು ತಲುಪಬೇಕು. ಈಗ ಇಂಗ್ಲಿಶ್‌ನಿಂದ ಕನ್ನಡಕ್ಕೆ ಭಾಷಾಂತರಿಸುವ ಕೆಲಸ ನಡೆದರೆ ಅಂತಿಮವಾಗಿ ಕನ್ನಡದಿಂದ ಇಂಗ್ಲಿಶ್‌ಗೆ ಭಾಷಾಂತರಿಸುವ (ಅಥವಾ ಮತ್ತೆ ಯಾವುದೇ ಭಾಷೆಗೆ) ಕೆಲಸ ನಡೆಯುವಂತಾಗುತ್ತದೆ.




ಈ ಬೇರೆ ಬೇರೆ ನೆಲೆಗಳು ಕನ್ನಡ ಬಳಕೆಯಲ್ಲಿ ಬೇರೆಬೇರೆ ಸ್ವರೂಪವನ್ನು ತಂದೊಡ್ಡುತ್ತವೆ. ಕೆಲವು ಕಡೆ ಕನ್ನಡವನ್ನು ಬಳಸುವುದು ಅನಿವಾರ್ಯ ಹಾಗೂ ಬಳಸದೇ ಇರುವುದು ಅಪರಾಧ ಎನಿಸುತ್ತದೆ. ಮತ್ತೆ ಕೆಲವು ಕಡೆ ಕನ್ನಡವನ್ನು ಬಳಸಿದರೂ ಅದು ಅಧಿಕೃತತೆಯ ಮನ್ನಣೆ ಪಡೆಯಲಾರದು. ಉದಾ: ಜಾಹಿರಾತು, ಸಾರ್ವಜನಿಕ ಸಂಪರ್ಕ ಅನ್ಯ ಭಾಷಾ ಪ್ರದೇಶಗಳಲ್ಲಿ ಕೂಡ ನಡೆಯುವುದು ಅವಶ್ಯ ಅಲ್ಲದೆ ಈಗಿರುವಂತೆ ಜಾಹಿರಾತು ವ್ಯವಸ್ಥೆ ದೇಶೀಯ ಭಾಷೆಗಳಿಗೆ ಪ್ರಾಧಾನ್ಯವನ್ನು ನೀಡಲಾರವು. ಇದರಿಂದ ಖಚಿತವಾಗುವುದಿಷ್ಟು. ಕನ್ನಡ ಬಳಕೆಯ ನಿರ್ಧಾರ ಮತ್ತು ಅನುಷ್ಠಾನ ಕೇವಲ ಕಾರ್ಖಾನೆಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ.

ಈಗ ಇರುವಂತೆ ಈ ಎಲ್ಲ ನೆಲೆಗಳಲ್ಲೂ ಭಾಷಾಂತರದ ಅವಶ್ಯಕತೆ ಇದೆ. ಅಲ್ಲದೆ ಪ್ರತಿಯೆಡೆಯಲ್ಲೂ ಸಮಸ್ಯೆಯ ವಿನ್ಯಾಸಗಳು ಭಿನ್ನವಾಗುತ್ತವೆ. ಇದನ್ನು ಗಮನಿಸದೇ ಹೋದರೆ ಕನ್ನಡವನ್ನು ಬಳಸುವಲ್ಲಿ ಅನವಶ್ಯಕವಾದ ತೊಡರುಗಳು ಬರುತ್ತವೆ. ಹೀಗೆಂದಾಗ ಈಗ ಇಂಗ್ಲಿಶ್ ಬಳಸುವಾಗ ಇಂತಹ ತೊಡರುಗಳು ಇಲ್ಲವೆಂದಲ್ಲ. ಉದಾ: ಬೋನಸ್, ಎಂದರೆ 'ತಡೆಹಿಡಿಯಲಾದ ಸಂಬಳ' ಎನ್ನಬೇಕೋ ಅಥವಾ 'ಹೆಚ್ಚುವರಿ ಕೊಡುಗೆ (ದಾನ) ಎನ್ನಬೇಕೋ ಎಂಬ ಚರ್ಚೆಯನ್ನು ಗಮನಿಸಬಹುದು. ತ್ರಿಪಕ್ಷೀಯ ನಿರ್ಧಾರಗಳಲ್ಲಿ ಬಳಸುವ ಇಂಗ್ಲಿಶ್ ಭಾಷೆ ಕಾರ್ಮಿಕರಿಗೆ ಸಾಕಷ್ಟು ತೊಡಕುಗಳನ್ನು ತಂದೊಡ್ಡುತ್ತದೆ. ಹೀಗಾಗಿ ಕನ್ನಡ ಬಳಕೆಯ ಸಮಸ್ಯೆಗಳನ್ನಾದರೂ ಎದುರಿಸಬಹುದು. ಯಥಾಸ್ಥಿತಿಯ ಮುಂದುವರಿಕೆ ಸಲ್ಲದು.

ಭಾಗ – 2

ಭಾಷಾಂತರವನ್ನು ಕುರಿತು ಕೆಲವು ಮಾತುಗಳು : ಬಹುಭಾಷಿಕತೆ ಭಾರತೀಯರ ಸಾಮಾನ್ಯ ಲಕ್ಷಣ. ಹೀಗಾಗಿ ಭಾಷಾಂತರ ಸ್ಥೂಲ ಅರ್ಥದಲ್ಲಿ ಎಲ್ಲರ ದೈನಂದಿನ ವ್ಯವಹಾರದಲ್ಲೂ ನಡೆಯುವ ಚಟುವಟಿಕೆ. ಕನ್ನಡಿಗರೊಬ್ಬರು ಹಿಂದಿಯವರ ಮಾತುಗಳನ್ನು ಕೇಳಿಸಿಕೊಂಡು ಅರ್ಥ ಮಾಡಿಕೊಂಡರೆಂದರೆ ಅಲ್ಲಿ ಹಿಂದಿಯಿಂದ ಕನ್ನಡಕ್ಕೆ ಭಾಷಾಂತರ ನಡೆದಿದೆ ಎನ್ನಬೇಕು.



ಒಂದು ನಿರ್ದಿಷ್ಟ ಧ್ವನಿ–ಸಾತತ್ಯಕ್ಕೂ ಅದರಿಂದ ನಮಗೆ ತಿಳಿಯುವ ಅರ್ಥಕ್ಕೂ ಇರುವ ಸಂಬಂಧ ಕೇವಲ ಪರಸ್ಪರ ಒಪ್ಪಿಗೆಯನ್ನು ಅವಲಂಬಿಸಿದೆ. ಈ ಸಂಬಂಧ ನಿಯತವಲ್ಲ. ಇನ್ನೊಂದು ಭಾಷೆಯಲ್ಲಿ ಇದೇ ಅರ್ಥವನ್ನು ಹೇಳಲು ಬೇರೊಂದು ಧ್ವನಿಸಾತತ್ಯವನ್ನು ಬಳಸಬಹುದು. ಇಲ್ಲಿ ಭಾಷಾಂತರಕ್ಕೆ ಒಂದು ಸರಳವಾದ ವಿವರಣೆ ಲಭಿಸುತ್ತದೆ. ಒಂದು ಭಾಷೆಯಲ್ಲಿ ಒಂದು ನಿರ್ದಿಷ್ಟ ಅರ್ಥವನ್ನು (ಕ) ಹೇಳಲು ಒಂದು ನಿರ್ದಿಷ್ಟ ಧ್ವನಿಸಾತತ್ಯ (ಎ) ಯನ್ನು ಬಳಸಿದರೆ ಹಾಗೂ ಇನ್ನೊಂದು ಭಾಷೆಯಲ್ಲಿ ಅದೇ ಅರ್ಥ (ಕ)ವನ್ನು ಹೇಳಲು ಇನ್ನೊಂದು ನಿರ್ದಿಷ್ಟ ಧ್ವನಿಸಾತತ್ಯವನ್ನು (ಬಿ) ಬಳಸಿದರೆ ಆಗ 'ಎ' ಬದಲು 'ಬಿ' ಯನ್ನು ಬಳಸುವುದೇ ಭಾಷಾಂತರ ಎನಿಸಿಕೊಳ್ಳುತ್ತದೆ. ವಿವರಣೆಯಲ್ಲಿರುವಷ್ಟು ಸುಲಭವಾಗುವ ಕ್ರಿಯೆಯಲ್ಲ ಭಾಷಾಂತರ.

ಸಮಸ್ಯೆ : (1) ಸಾಂಸ್ಕೃತಿಕವಾದುದು. ಭಾಷೆಗೂ ಅದನ್ನು ಬಳಸುವ ಜನರ ಸಂಸ್ಕೃತಿಗೂ ನಿಕಟವಾದ ಸಂಬಂಧ ಇರುತ್ತದೆ. ಒಂದು ಸಂಸ್ಕೃತಿಯು ತನ್ನ ಜನರಿಗೆ ಒದಗಿಸುವ ಗ್ರಹಿಕೆಯ ವಿಧಾನಗಳಿಗೆ ಅನುಗುಣವಾಗಿ ಆ ಜನರ ಭಾಷೆ ರೂಪುಗೊಂಡಿರುತ್ತದೆ. ಈ ಗ್ರಹಿಕೆಯ ವಿಧಾನ ಇನ್ನೊಂದು ಸಂಸ್ಕೃತಿಯಲ್ಲಿ ಬೇರೆಯೇ ಆಗಿರುತ್ತದೆ. ಹೀಗಾಗಿ ಭಾಷಾಂತರ ಹಲವು ವೇಳೆ ಅಸಾಧ್ಯ ಎನಿಸುವುದು.

ಉದಾ : ಸಂಸ್ಕೃತಿ (1) ರಲ್ಲಿ ಎ ಎಂಬ ಪದವಿದ್ದು ಅದಕ್ಕೆ, 'ಪಿ' ಎಂಬ ಅರ್ಥವಿದೆ ಎಂದುಕೊಳ್ಳೋಣ. ಆದರೆ ಸಂಸ್ಕೃತಿ (2) ರಲ್ಲಿ 'ಪಿ' ಎನ್ನುವ ಅರ್ಥವನ್ನೇ ಗ್ರಹಿಸಲು ಸಾಧ್ಯವಿಲ್ಲದೇ ಹೋದಾಗ ಆ ಅರ್ಥವನ್ನು ಸೂಚಿಸುವ ಧ್ವನಿಸಾತತ್ಯ ಇರುವುದಿಲ್ಲ. ಹಾಗಾಗಿ 'ಎ' ಪದದ ಬದಲು ಏನನ್ನು ಬಳಸುವುದು ಎಂಬ ಸಮಸ್ಯೆ ಉಳಿಯುತ್ತದೆ. ಸಂಸ್ಕೃತಿಗೆ ವಿಶಿಷ್ಟವಾದ ಇಂಥ ನೂರಾರು ಸಂದರ್ಭಗಳು ನಮಗೆ ದೊರಕುತ್ತವೆ.

ಈ ಸಮಸ್ಯೆ ಕಾರ್ಖಾನೆಗಳ ಸಂದರ್ಭದಲ್ಲಿ ಬಹಳ ಗಾಢವಾದುದು. ಏಕೆಂದರೆ 'ಕಾರ್ಖಾನೆ' ಎಂಬುದು ಒಂದು ಹೊಸ ಸಾಮಾಜಿಕ ಸಂಸ್ಥೆ ಹಾಗೂ ವ್ಯವಸ್ಥೆ. ಮೂಲಭೂತವಾಗಿ ಈ ದೃಷ್ಟಿಯಲ್ಲಿ ಇಡಿಯಾಗಿ ಅದನ್ನು ನಾವು ಮತ್ತೊಂದು ಸಮಾಜದಿಂದ ಸ್ವೀಕರಿಸಿದ್ದೇವೆ. ಯಾವುದೇ ಒಂದು ಸಾಮಾಜಿಕ ಸಂಸ್ಥೆ ನಮ್ಮ ಸಮಾಜದ ಸೃಷ್ಟಿಯಾಗಿದ್ದಾಗ ಮಾತ್ರ ಆ ಸಂಸ್ಥೆಗೆ ಸಂಬಂಧಿಸಿದ ಪದಕೋಶ ನಮ್ಮ ಭಾಷೆಯಲ್ಲೇ ರೂಪುಗೊಂಡಿರುತ್ತದೆ. ಕೃಷಿಯನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು. ಹಾಗೆಯೇ ಇನ್ನಿತರ ಕುಶಲ ಕರ್ಮಗಳೂ ಕೂಡ. ಇವುಗಳಿಗೆ ಸಂಬಂಧಿಸಿದ ಪದಕೋಶ ನಮಗೆ ಕನ್ನಡದಲ್ಲೇ ದೊರಕುತ್ತದೆ. ಆದರೆ ಕಾರ್ಖಾನೆಯ ವಿಷಯ ಹಾಗಲ್ಲ. ಅದರ ಸಾಮಾಜಿಕ ಸ್ವರೂಪ, ತಾಂತ್ರಿಕ ನೆಲೆಗಟ್ಟು, ಆಡಳಿತದ ವಿಧಾನ ಇವೆಲ್ಲವೂ ಕನ್ನಡ (ಹಾಗೆ ನೋಡಿದರೆ ಯಾವುದೇ ಭಾರತೀಯ ಭಾಷೆ)ದಲ್ಲಿ ತಕ್ಕ ಮಾದರಿಗಳನ್ನು ಹೊಂದಿಲ್ಲ. ಹಾಗಾಗಿ ಇಲ್ಲಿ ಭಾಷಾಂತರ ಎಂಬ ಮಾತು ಯಥಾವತ್ತಾಗಿ ಅನ್ವಯವಾಗುವುದಿಲ್ಲ. ಏಕೆಂದರೆ ಕನ್ನಡ ಮೊದಲ ಹಂತದಲ್ಲಿ 'ಕಾರ್ಖಾನೆ'ಯ ವಿವಿಧ ಅಂಗಗಳನ್ನು ಹೇಳಲು ತಕ್ಕ ಪದಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಹೊಸ ನುಡಿಗಟ್ಟುಗಳು, ಪದಗಳು ಚಲಾವಣೆಗೆ ಬರಬೇಕಾಗುವುದು. ಅಥವಾ ಇರುವ ಪದಗಳನ್ನು ಹೊಸ ಅರ್ಥದೊಂದಿಗೆ ಬಳಸಬೇಕಾಗುವುದು. ಇದು ಅತ್ಯಂತ ಎಚ್ಚರಿಕೆಯಿಂದ ಆದರೆ ಅಷ್ಟೇ ದೃಢತೆಯಿಂದ ನಡೆಯಬೇಕಾದ ಕೆಲಸ.

ಸಮಸ್ಯೆ –2 : ವ್ಯಾಕರಣದ ತೊಡಕುಗಳು: ಒಂದು ವಾಕ್ಯವನ್ನು ನೋಡೋಣ. ಅದರಲ್ಲಿ ನಾಲ್ಕು ಪದಗಳಿವೆ ಎಂದುಕೊಂಡರೆ ಆ ನಾಲ್ಕು ಪದಗಳಿಗೂ ನಿಘಂಟಿನಲ್ಲಿ ಪ್ರತ್ಯೇಕವಾಗಿ ಅರ್ಥ ದೊರಕುವುದು. ಇಡೀ ವಾಕ್ಯದ ಅರ್ಥವೆಂದರೆ ಆ ನಾಲ್ಕು ಅರ್ಥಗಳ ಮೊತ್ತ ಮಾತ್ರವಲ್ಲ. ಅದಕ್ಕಿಂತ ಹೆಚ್ಚಿನ ಮಹತ್ವ ಆ ವಾಕ್ಯದಲ್ಲಿ ಸಿದ್ಧಗೊಂಡಿರುತ್ತದೆ. ಇದಕ್ಕೆ ಕಾರಣ ಆಯಾ ವಾಕ್ಯದಲ್ಲಿ ಪದಗಳು ಪರಸ್ಪರ ಸಂಬಂಧವನ್ನು ವಿಶೇಷವಾಗಿ ರೂಢಿಸಿಕೊಂಡಿರುತ್ತವೆ. ಉದಾ: ಅವನು ನಿನ್ನೆ ದೆಹಲಿಯಿಂದ ಬಂದನು. ಈ ವಾಕ್ಯದ ಮೊದಲ ಪದ ಅವನು ಬದಲು ಅವಳು, ಅವರು, ನೀನು, ನೀವು, ನಾನು, ನಾವು ಎಂಬ ಯಾವುದೇ ಪದ ಹಾಕಿದರೂ ಕೂಡಲೇ 'ಬಂದನು' ಎಂಬ ಪದ ತನ್ನ ರೂಪವನ್ನು ಬದಲಾಯಿಸುತ್ತದೆ. ಹಾಗೆ 'ನಿನ್ನೆ' ಬದಲು 'ನಾಳೆ' ಹಾಕಿದಾಗಲೂ ಕೂಡ. 'ದೆಹಲಿಯಿಂದ' ಬದಲು 'ದೆಹಲಿಗೆ' ಹಾಕಿದಾಗ ಯಾವುದೇ ರೂಪ ಬದಲಾಗದಿದ್ದರೂ ಅರ್ಥ ಬದಲಾಗುತ್ತದೆ. ಎಂದರೆ ವಾಕ್ಯ ಒಂದು ಕಟ್ಟುನಿಟ್ಟಾದ ರಚನೆ. ಪದಗಳ ನಡುವೆ ರೂಪಗೊಳ್ಳುವ ವಿಶೇಷ ಸಂಬಂಧವನ್ನು ವಾಕ್ಯಾತ್ಮಕ ಸಂಬಂಧ ಎನ್ನುತ್ತೇವೆ. ಈ ಸಂಬಂಧದ ನಿಯಮಗಳೂ ಕೂಡ ಭಾಷೆಗೆ ವಿಶಿಷ್ಟವಾದವು. ಕನ್ನಡ ಹಾಗೂ ಇಂಗ್ಲಿಶ್‌ಗೆ ಸಂಬಂಧಿಸಿದಂತೆ ಅಂಥ ಕೆಲವು ಸಂದರ್ಭಗಳನ್ನು ನೋಡೋಣ.


(ಅ) ಕನ್ನಡದಲ್ಲಿ ಅಧಿಕ ಪ್ರಮಾಣದಲ್ಲಿ ಸಮವಾಕ್ಯ ಬಳಕೆಯಾಗುತ್ತವೆ. ಈ ವಾಕ್ಯಗಳಲ್ಲಿ ಎರಡು ನಾಮಪದಗಳನ್ನು, ನಾಮಪದರೂಪಿ ರಚನೆಗಳನ್ನು ಸುಮ್ಮನೆ ಅಕ್ಕಪಕ್ಕದಲ್ಲಿ ಇರಿಸಿ ವಾಕ್ಯ ರಚಿಸುತ್ತೇವೆ. ಕ್ರಿಯಾಪದ ಎಂಬುದು ಇಂಥ ವಾಕ್ಯಗಳಲ್ಲಿ

ಇರುವುದಿಲ್ಲ ಇದ್ದರೂ ಗೋಚರಿಸದು.. ಅದು ನಾಯಿ, ಅದು ಮಾವಿನ ಮರ, ರಂಗ ಒಳ್ಳೆಯ ಹುಡುಗ ಇತ್ಯಾದಿ. ಇಂಥ ವಿವರಣಾತ್ಮಕ ವಾಕ್ಯಗಳನ್ನು ನಾವು ನಿತ್ಯವೂ ಬಳಸುತ್ತೇವೆ. ಇಂಗ್ಲಿಶ್‌ನಲ್ಲಿ ಇಂಥ ರಚನೆಗಳು ಅಸಾಧ್ಯ. ಹೀಗಾಗಿ ಎಷ್ಟೋ ವೇಳೆ 'ಹಿ ಇಸ್ ಮೈ ಲೀಡರ್' ಎಂಬ ವಾಕ್ಯವನ್ನು ಕನ್ನಡದಲ್ಲಿ ಅವನು(ರು) ನನ್ನ ನಾಯಕನಾಗಿದ್ದಾನೆ ಎಂದು ಭಾಷಾಂತರಿಸುವುದುಂಟು. ಇದು ಕನ್ನಡಕ್ಕೆ ಅಸಹಜ ರಚನೆ.

(ಆ) ಕನ್ನಡದ ವಾಕ್ಯರಚನೆ SOV ಮಾದರಿಯದು (ಸಬ್ಜೆಕ್ಟ್, ಅಬ್ಜೆಕ್ಟ್, ವರ್ಬ್) ಇಲ್ಲಿ 'ಒ' ಇರಬಹುದು ಅಥವಾ ಇಲ್ಲದಿರಬಹುದು. ವಾಕ್ಯದ ಇನ್ನಿತರ ಎಲ್ಲ ಬದಲಾವಣೆಗಳೂ ರೂಪಾಂತರಗಳೂ 'ಎಸ್' ಮತ್ತು 'ವಿ'ಗಳ ನಡುವೆಯೇ ನಡೆಯುವುದು. ಆದರೆ ಇಂಗ್ಲಿಶ್ ಮುಖ್ಯವಾಗಿ 'SOV' ಮಾದರಿಯ ವಾಕ್ಯಗಳನ್ನು ರೂಪಿಸುತ್ತದೆ. ಹೀಗಾಗಿ 'ವಿ' ಆದಮೇಲೂ ವಾಕ್ಯದಲ್ಲಿ ಬದಲಾವಣೆ, ರೂಪಾಂತರಗಳು ಸಾಧ್ಯ. ವಾಕ್ಯ ಸಮುಚ್ಚಯವು ಹೀಗೆ ಕ್ರಿಯಾಪದದ ಅನಂತರವೇ ಬರುವುದನ್ನು ನಾವು ನೋಡುತ್ತೇವೆ. 1.ಹಿ ವಾಕ್ಸ್ ಸ್ಲೋಲಿ 2. ಹಿ ಸ್ಲೋಲಿ ವಾಕ್ಸ್ ಎಂಬ ಎರಡು ರಚನೆಗಳನ್ನು ನೋಡಿ. ಇದು ವಿವೃತ ರಚನೆ. ಅದಿನ್ನೂ ಪೂರ್ಣಗೊಂಡಿಲ್ಲ, ಮುಂದೆ ಏನೋ ಇದೆ ಎಂಬ ಅನಿಸಿಕೆ ಮೂಡುತ್ತದೆ ಹೀಗಿದ್ದರೂ ಸಾಮಾನ್ಯವಾಗಿ ಈ ಎರಡೂ ರಚನೆಗಳನ್ನು ಕನ್ನಡದಲ್ಲಿ 'ಅವನು ನಿಧಾನವಾಗಿ ನಡೆಯುತ್ತಾನೆ' ಎಂದೇ ಭಾಷಾಂತರಿಸುತ್ತೇವೆ. ಇಂತಹ ಸಮಸ್ಯೆಗಳು ದೀರ್ಘವಾದ ವಾಕ್ಯಗಳ ಸಂದರ್ಭದಲ್ಲಿ ಇನ್ನೂ ಗಾಢವಾಗುತ್ತದೆ.

ವಾಕ್ಯ ರಚನೆಯ ನಿಯಮಗಳ ಇಕ್ಕಟ್ಟು ಕೂಡ ಪೂರ್ಣಪ್ರಮಾಣದ ಭಾಷಾಂತರಕ್ಕೆ ಅವಕಾಶ ನೀಡುವುದಿಲ್ಲ. ಹಾಗೂ ಭಾಷೆಯಿಂದ ಭಾಷೆಗೆ ಈ ಸಮಸ್ಯೆಯ ಪ್ರಮಾಣ ವ್ಯತ್ಯಾಸವಾಗುತ್ತದೆ. ಉದಾ: ತಮಿಳು, ತೆಲುಗುಗಳಿಂದ ಕನ್ನಡಕ್ಕೆ ಭಾಷಾಂತರಿಸುವುದು ಸರಳ. ಹಾಗೇ ಕನ್ನಡದ ವಾಕ್ಯರಚನೆಯನ್ನೇ ಬಹುಮಟ್ಟಿಗೆ ಹೋಲುವ ಜಪಾನಿ ಭಾಷೆಯಿಂದ ಭಾಷಾಂತರ ಸುಲಭವಾದೀತು. ಭಾಷಾಂತರ ಎನ್ನುವ ಕ್ರಿಯೆಯಿಂದ ಕನ್ನಡದ ಜಾಯಮಾನವನ್ನು ಹಾಳುಮಾಡುವುದಕ್ಕಿಂತ ಮೂಲದ ಅರ್ಥವನ್ನು ಪ್ರತಿನಿಧಿಸುವ ವಾಕ್ಯಗಳನ್ನು ರಚಿಸುವುದು ಒಳ್ಳೆಯದು.

ಭಾಷೆಯಲ್ಲಿ ಸಾಮರ್ಥ್ಯ ಹಾಗೂ ಅವಿಷ್ಕಾರ ಎಂಬ ಎರಡು ಸ್ತರಗಳಿರುತ್ತವೆ. ವಾಕ್ಯವೊಂದನ್ನು ಈ ನಿಟ್ಟಿನಲ್ಲಿ ನೋಡಿದಾಗ ಕೆಲವು ಮುಖ್ಯ ವಿಚಾರಗಳು ಗೋಚರಿಸುತ್ತವೆ.




ಎಂದರೆ ಒಂದೇ ಅರ್ಥವನ್ನು ಪ್ರತಿನಿಧಿಸುವ ಎರಡು ವಾಕ್ಯಗಳನ್ನು ನಾವು ರೂಪಿಸುವುದು ಸಾಧ್ಯ. ಈ ಎರಡೂ ವಾಕ್ಯಗಳು ಒಂದೇ ಸಾಮರ್ಥ್ಯದ ಎರಡು ಬೇರೆ ಬೇರೆ ಅವಿಷ್ಕಾರಗಳು ಮಾತ್ರ. ಹೀಗಾಗಿ ಭಾಷಾಂತರಿಸುವಾಗ ನಮ್ಮ ಆಸಕ್ತಿಯು ಅವಿಷ್ಕಾರಗಳ ಕಡೆಗೆ ಇರುವ ಬದಲು ಅವುಗಳ ಹಿನ್ನೆಲೆಗೆ ಇರುವ ಸಾಮರ್ಥ್ಯದ ಕಡೆಗೆ ಇರಬೇಕು. ಆಗ ಹೊರರಚನೆಯನ್ನು ಯಥಾವತ್ತಾಗಿ ಭಾಷಾಂತರಿಸುವ ಇಕ್ಕಟ್ಟನ್ನು ತಪ್ಪಿಸಬಹುದು.

ಹೀಗಾಗಿ ಭಾಷಾಂತರ, ಒಂದು ಯಾಂತ್ರಿಕ ಕ್ರಿಯೆಯಲ್ಲ. (ಎ) ಕನ್ನಡದಲ್ಲಿ ಯುಕ್ತ ನುಡಿಗಟ್ಟುಗಳನ್ನು ರೂಪಿಸುವ ಕೆಲಸ (ಬಿ) ಹೊಸ ಸಾಮಾಜಿಕ ಸಂದರ್ಭಕ್ಕೆ ಭಾಷೆಯನ್ನು ಸರಿಹೊಂದಿಸುವ ಕೆಲಸ. (ಸಿ) ಭಾಷೆಯ ಮೂಲಭೂತ ಲಕ್ಷಣಕ್ಕೆ ಅನುಗುಣವಾಗಿ ಇನ್ನೊಂದು ಭಾಷಾ ಸಂದರ್ಭದ ರಚನೆಗಳನ್ನು ಅಳವಡಿಸುವ ಕೆಲಸ. ಈ ಕಾರಣಗಳಿಂದ ಭಾಷಾಂತರ ಸಾಂಸ್ಕೃತಿಕವಾಗಿ ಅತ್ಯಂತ ಜವಾಬ್ದಾರಿಯ ಕೆಲಸ.

ಭಾಗ – 3

ಕಾರ್ಖಾನೆಯನ್ನು ಹೊಸ ಸಾಮಾಜಿಕ ಸಂಸ್ಥೆ ಹಾಗೂ ವ್ಯವಸ್ಥೆ ಎಂದೆವು. ಇದನ್ನು ಒಂದು ಮುಖ್ಯ ಸಂಗತಿಯನ್ನಾಗಿ ಪರಿಗಣಿಸಬೇಕು. ಇಲ್ಲದಿದ್ದರೆ ಭಾಷೆಯ ಬಳಕೆಗೆ ಸಂಬಂಧಿಸಿದ ಇನ್ನೊಂದು ಭ್ರಮೆಗೆ ನಾವು ಒಳಗಾಗುತ್ತೇವೆ. ಭಾಷೆಯು ನೀರು ಎಂದೂ ಬೇರೆಬೇರೆ ಸಾಮಾಜಿಕ ಸಂದರ್ಭಗಳು ಪಾತ್ರೆಗಳೂ ಎಂದು ತಿಳಿಯಲಾಗಿದೆ. ನೀರನ್ನು ಯಾವ ಪಾತ್ರೆಗಾದರೂ ತುಂಬಿಡಬಹುದಾದಂತೆ ಭಾಷೆಯನ್ನು ಯಾವ ಸಂದರ್ಭದಲ್ಲಿ ಬೇಕಾದರೂ ನಮಗೆ ಬೇಕೆನಿಸಿದಾಗ ಬಳಸಬಹುದೆಂದು ಹೇಳಲಾಗಿದೆ. ಆದರೆ ಇದು ಭ್ರಮೆ. ಭಾಷೆ ಇಷ್ಟು ನಮನಶೀಲವಲ್ಲ. ಅದರಲ್ಲಿ ಹಲವಾರು ಭೌಗೋಳಿಕ, ಸಾಮಾಜಿಕ ಪ್ರಭೇದಗಳಿವೆ. ಹಾಗೆಯೇ ಒಂದೊಂದು ವೃತ್ತಿ ಸಂದರ್ಭಕ್ಕೂ ಅದರದೇ ಆದ ವೃತ್ತಿಭಾಷೆ ಇರುತ್ತದೆ. ಈ ವೃತ್ತಿಭಾಷೆಯನ್ನು ರಿಜಿಸ್ಟರ್ ಎಂದು ಭಾಷಾವಿಜ್ಞಾನಿಗಳು ಕರೆಯುತ್ತಾರೆ. ಈ ವೃತ್ತಿಭಾಷೆಯ ವೈಶಿಷ್ಟ್ಯ ಮುಖ್ಯವಾಗಿ ವಿಶೇಷ ಪದಕೋಶದಲ್ಲಿ ಹಾಗೂ ಆ ಪದಗಳನ್ನು ಬಳಸುವ ಕ್ರಮದಲ್ಲಿ ಮೈತಳೆಯುತ್ತದೆ. ಒಂದೇ ಪದ ಭಿನ್ನ ಪರಿಸರಗಳಲ್ಲಿ ಬೇರೆಬೇರೆ ಅರ್ಥ ಸಾಹಚರ್ಯವನ್ನು ಪಡೆದುಕೊಳ್ಳಬಹುದು. ಸೆಲ್ ಎಂಬ ಪದ ಜೀವವಿಜ್ಞಾನ, ಭೌತವಿಜ್ಞಾನ, ರಾಜಕೀಯಶಾಸ್ತ್ರ ಹಾಗೂ ಬಂಧೀಖಾನೆಗಳ ಆಡಳಿತ ಹೀಗೆ ಭಿನ್ನ ಸಂದರ್ಭಗಳಲ್ಲಿ ಬೇರೆಬೇರೆ ಅರ್ಥಗಳನ್ನು ನೀಡುತ್ತದೆ. ನಾವು ಹಾರ್ಟ್ ಫೇಲ್ಯೂರ್ ಎಂದರೆ ವೈದ್ಯರು ಕಾರ್ಡಿಯಾಕ್ ಅರೆಸ್ಟ್ ಎನ್ನುತ್ತಾರೆ. ಹೀಗೆ ಕಣ್ಣಿಗೆ ಕಾಣುವ ಅಥವಾ ಇಂದ್ರಿಯಗಳ ಮೂಲಕ ಗ್ರಹಿಸಬಹುದಾದ ವಸ್ತು ಜಗತ್ತಿಗೆ ಸಂಬಂಧಿಸಿದ ಪದಗಳು ಒಂದೊಂದು ವೃತ್ತಿಗೂ ಬೇರೆಬೇರೆಯಾಗಿರುತ್ತವೆ. ಇದಲ್ಲದೆ ಎಷ್ಟೋ ಪ್ರಕ್ರಿಯೆಗಳೂ ಒಂದೊಂದು ವೃತ್ತಿಗೆ ವಿಶಿಷ್ಟವಾಗಿದ್ದಲ್ಲಿ ಅವುಗಳನ್ನು ಆಯಾ ವೃತ್ತಿಯ ನೆಲೆಯಲ್ಲಿಯೇ ಗ್ರಹಿಸಬೇಕು.

ಕಾರ್ಖಾನೆ ಇಡಿಯಾಗಿ-ಆಡಳಿತ ಹಾಗೂ ತಾಂತ್ರಿಕತೆ-ಅನ್ಯಭಾಷಾ ಪರಿಸರದಿಂದ ಪಡೆದದ್ದು. ಹೀಗಾಗಿ ಇಲ್ಲಿನ ಪ್ರತಿಯೊಂದು ಸಂಗತಿಗೂ ಕನ್ನಡದ ವಿಶಿಷ್ಟ ವೃತ್ತಿಭಾಷೆಯನ್ನು ರೂಪಿಸಬೇಕಾಗಿದೆ. ಇದಕ್ಕಾಗಿ ಪದಕೋಶವನ್ನು ನಿರ್ಮಿಸಬೇಕು.



ಕನ್ನಡದಲ್ಲಿ ಸಾಕಷ್ಟು ಬಲವಾದ ಅನ್ಯದೇಶ್ಯ ಪದಕೋಶವಿದೆ. ಈ ಪದಕೋಶದ ನೆರವಿನಿಂದ ಹೊಸ ಸಾಮಾಜಿಕ ಸಂಸ್ಥೆಗಳಿಗೆ ಸಂಬಂಧಿಸಿದ ವೃತ್ತಿಭಾಷೆಯನ್ನು ನಿರ್ಮಿಸಲು ಸಾಧ್ಯವಿದೆ. ಇಲ್ಲಿ ಮೂರು ಮುಖ್ಯ ವಿಧಾನಗಳಿವೆ.

1. ವಸ್ತುವನ್ನು ಅದರ ವಿವಿಧ ಭಾಗಗಳನ್ನು ನಾವು ಸ್ವೀಕರಿಸಿರುವಂತೆ ಅದರ ಹೆಸರುಗಳನ್ನು ಕನ್ನಡ ಪದಕೋಶದೊಳಕ್ಕೆ ಸೇರಿಸಿಕೊಳ್ಳುವುದು. ಇದು ಅತ್ಯಂತ ಸುಲಭದ ಮಾರ್ಗ. ಆದರೆ ಕೆಲವು ತೊಡಕುಗಳಿವೆ. ಸುಲಭದ ಹಾದಿ ಏಕೆಂದರೆ ಪದನಿರ್ಮಿತಿಯ ಗೋಜಲು ಇರುವುದಿಲ್ಲ. ಕನ್ನಡದ ಉಚ್ಚಾರಣೆಗೆ ಅನುಗುಣವಾದ ಕೆಲವು ಧ್ವನ್ಯತ್ಯಾಸಗಳು ನಡೆದ ಮೇಲೆ ಅದು ವ್ಯಾಕರಣದ ದೃಷ್ಟಿಯಿಂದ ಕನ್ನಡದ ಪದದ ರೀತಿಯಲ್ಲೇ ವರ್ತಿಸಲು ತೊಡಗುತ್ತದೆ.

ಎರಡು ಉದಾಹರಣೆಗಳು : ನಟ್ ಮತ್ತು ವಾಲ್ವ್ ಎಂಬ ಪದಗಳನ್ನು ತೆಗೆದುಕೊಳ್ಳೋಣ. ಇವೆರಡೂ ಕನ್ನಡಕ್ಕೆ ಬಂದಾಗ 'ನಟ್ಟು' ಹಾಗೂ 'ವಾಲ್ವು' ಎಂದಾಗುತ್ತದೆ. ಆಗಿರುವ ಬದಲಾವಣೆ ಎಂದರೆ ಮೂಲ ಪದದ ಕೊನೆಯಲ್ಲಿ ವ್ಯಂಜನವಿದೆ. ಕನ್ನಡದಲ್ಲಿ ವ್ಯಂಜನಗಳಿಂದ ಪದಗಳು ಕೊನೆಯಾಗುವುದಿಲ್ಲ. ಅದನ್ನು 'ಉ' ಎಂಬ ಸ್ವರದೊಡನೆ ಕೊನೆಗೊಳಿಸುತ್ತೇವೆ. ಕೊನೆಯ ವ್ಯಂಜನದ ಹಿಂದಿನ ಸ್ವರ ಹ್ರಸ್ವವಾಗಿದ್ದರೆ, ಆ ವ್ಯಂಜನವು ಮೊದಲು ದ್ವಿತ್ವವಾಗಿ ಅನಂತರ ಉ ಕಾರ ಸೇರುತ್ತದೆ. ಹಿಂದಿನ ಸ್ವರ ದೀರ್ಘವಾಗಿದ್ದರೆ ವ್ಯಂಜನಕ್ಕೆ ಇದು ಇರುವಂತೆಯೇ ಉ ಕಾರ ಸೇರುತ್ತದೆ. ಇದು ಸಾಮಾನ್ಯ ನಿಯಮ. ಈಗ ಈ ಎರಡೂ ಪದಗಳು 'ಉ' ಕಾರದಿಂದ ಕೊನೆಗೊಳ್ಳುವ ಕನ್ನಡದ ಇನ್ನಿತರ ನಾಮಪದಗಳಂತೆಯೇ (ಊರು, ಬೇರು, ಹಾಡು, ಕಾಡು) ವರ್ತಿಸುತ್ತವೆ.

ತೊಡಕು ಏಕೆಂದರೆ ಒಂದು ಪದವನ್ನು ಹಾಗೇ ಪಡೆದುಕೊಂಡಾಗ, ಆ ಪದದಿಂದ ಮೂಲಭಾಷೆಯಲ್ಲಿ ಉತ್ಪನ್ನವಾಗುವ ಇನ್ನಿತರ ಪದಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಕನ್ನಡದ ವ್ಯಾಕರಣದಲ್ಲಿ ಹಲವಾರು ತೊಂದರೆಗಳಿಗೆ ಕಾರಣವಾಗುತ್ತದೆ.

ಉದಾ : ಮ್ಯಾನೇಜ್ ಎಂಬ ಪದವನ್ನು ಗಮನಿಸಿ. ಇದಕ್ಕೆ ಸಂಬಂಧಿಸಿದಂತೆ ಮ್ಯಾನೇಜರ್, ಮ್ಯಾನೇಜ್‌ಮೆಂಟ್, ಮ್ಯಾನೇಜೀರಿಯಲ್, ಮಿಡಲ್ ಮ್ಯಾನೇಜ್‌ಮೆಂಟ್, ಮ್ಯಾನೇಜಿಂಗ್, ಮ್ಯಾನೇಜಬಲ್ ಇತ್ಯಾದಿ ಹಲವಾರು ಪದಗಳನ್ನು ನಾವು ಇಂಗ್ಲಿಶ್‌ನಲ್ಲಿ ಕಾಣುತ್ತೇವೆ. ಕನ್ನಡಕ್ಕೆ ಭಾಷಾಂತರಿಸುವಾಗ ಮ್ಯಾನೇಜ್ ಎಂಬ ಪದವನ್ನು ಹಾಗೆಯೇ ತೆಗೆದುಕೊಂಡರೆ ಆಗ ಇನ್ನಿತರ ಪದಗಳನ್ನು ಹಾಗೆಯೇ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಕನ್ನಡದ ಪ್ರತ್ಯಯವನ್ನು ಹಚ್ಚಿಕೊಂಡು ಮುಂದುವರಿಯುವ ಪ್ರಸಂಗಗಳು ಬರುತ್ತವೆ. ಉದಾ: ಮ್ಯಾನೇಜಿಂಗ್ ಎನ್ನುವಾಗ 'ಮ್ಯಾನೇಜ್ ಮಾಡಿಕೊಂಡು' ಎಂದು ಭಾಷಾಂತರಿಸಬೇಕಾಗುತ್ತದೆ.

ಉದಾ ; ನನಗೆ ಡ್ರೈವಿಂಗ್ ಬರುತ್ತೆ, ನನಗೆ ಡ್ರೈವ್ ಮಾಡೋಕೆ ಬರುತ್ತೆ. (ಕೆಲವರು ನನಗೆ ಡ್ರೈವಿಂಗ್ ಮಾಡೋಕೆ ಬರುತ್ತೆ ಎಂಬ ವಾಕ್ಯವನ್ನು ಸೃಷ್ಟಿಸುವುದುಂಟು)

2. ಎರಡನೇ ಮಾರ್ಗ : ಕನ್ನಡದಲ್ಲಿ ಹೊಸಪದಗಳನ್ನು ಸೃಷ್ಟಿಸುವುದು. ಸೃಷ್ಟಿಸುವುದು ಎಂದಾಗ ಇಲ್ಲದಿರುವ ಪದಗಳನ್ನು ಯೋಚಿಸುವುದು ಎಂದು ತಿಳಿಯಬಾರದು. ಇರುವ ಪದಗಳನ್ನೇ ಹೊಸ ಬಗೆಯಲ್ಲಿ ಸಂಯೋಜಿಸಿ ಹೊಸ ಅರ್ಥಗಳನ್ನು ರೂಢಿಗೆ ತರುವುದು ಎಂದರ್ಥ. ಇದು ಎಚ್ಚರಿಕೆಯಿಂದ ನಡೆಯಬೇಕಾದ ಕೆಲಸ. ಬಹುಮಟ್ಟಿಗೆ ಈಗಿರುವಂತೆ ಇಂತಹ ಪದಗಳು ವಿವರಣೆಯನ್ನು ನೀಡುವ ಬಗೆಯಲ್ಲಿ ರೂಪುತಳೆಯುತ್ತವೆ. 'ತಿರುಪುಮೊಳೆ' 'ಹಲ್ಲುಚಕ್ರ' 'ಗುಂಡುಸೂಜಿ', ಸೀಮೆಎಣ್ಣೆ' ಇತ್ಯಾದಿ ಪದಗಳು ಹೀಗೆ ಸೃಷ್ಟಿಯಾಗಿವೆ. ಹೀಗೆ ವಿವರಣೆ ನೀಡುವುದು ಸರಳವಾದ ಸಂದರ್ಭಗಳಲ್ಲಿ – ಎಂದರೆ ಆ ವಸ್ತುವಿನ ಲಕ್ಷಣಗಳು ಸರಳವಾಗಿದ್ದಾಗ– ಅಷ್ಟೇನೂ ತೊಡಕುಗಳನ್ನು ಒಡ್ಡುವುದಿಲ್ಲ. ಆದರೆ ವಸ್ತುವಿನ ರಚನೆ ಸಂಕೀರ್ಣವಾಗಿದ್ದಾಗ–ಹಲವಾರು ನಿಯೋಗಗಳಿದ್ದಾಗ–ಹೀಗೆ ವಿವರಣೆ ನೀಡುವ ಪದಗಳು ಕೆಲವೊಮ್ಮೆ ಯಾವುದಾದರೂ ಒಂದು ನಿಯೋಗವನ್ನು ಮಾತ್ರ ಸೂಚಿಸಿ ಉಳಿದವುಗಳನ್ನು ಪ್ರತಿನಿಧಿಸದೇ ಉಳಿಯಬಹುದು. ಎಲೆಕ್ಟ್ರಾನ್ ಎಂಬುದಕ್ಕೆ 'ಋಣ ವಿದ್ಯುತ್ಕಣ' ಎಂದು ವಿವರಿಸುವ ಪದವನ್ನು ಸೃಷ್ಟಿಸಬಹುದು. ತೊಡಕು ಬರುವುದು 'ಎಲೆಕ್ಟ್ರಾನಿಕ್ಸ್'ಗೆ ಬಂದಾಗ ಇಲ್ಲಿ ನಮ್ಮ ಭಾಷಾಂತರ ಪದವನ್ನು ಅವಲಂಬಿಸಿ ಇನ್ನೊಂದು ಪದವನ್ನು ರೂಪಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ ಎಷ್ಟೋ ವೇಳೆಗಳಲ್ಲಿ ಈ ಹೊಸಪದಗಳು ಮೂಲ ವಸ್ತುವಿನ ನಿಜವಾದ ಸ್ವರೂಪವನ್ನು–ತಾಂತ್ರಿಕವಾಗಿ ನಮಗೆ ತಿಳಿಸುವುದಿಲ್ಲ. ಇದಕ್ಕೆ ಕಾರಣ ನಾವು ರೂಪಿಸಿದ ಪದಗಳ ಮಿತಿ ಒಂದಾದರೆ, ಹೀಗೆ ರೂಪಿಸಲು ಬಳಸಿದ ಪದಗಳು ಕನ್ನಡದಲ್ಲಿ ಹೆಚ್ಚು ಬಳಕೆಯಲ್ಲಿಲ್ಲದಂಥವು ಆಗಿರುವುದು ಇನ್ನೊಂದು.

ಏರೋಪ್ಲೇನ್ ಎಂಬುದಕ್ಕೆ 'ವಿಮಾನ' ಎಂಬ ಪದ ರೂಪಿಸಿದೆವು. ತಂತ್ರಜ್ಞಾನದ ಬೆಳವಣಿಗೆಯಲ್ಲಿ ಹಿಂದಿನ ಏರೋಪ್ಲೇನ್‌ಗಳ ಜಾಗದಲ್ಲಿ ಜೆಟ್ ಪ್ಲೇನ್‌ಗಳು ಬಂದವು.

ನಾವು 'ಜೆಟ್ ವಿಮಾನ' ಎಂದು ಹೇಳಿಬಿಟ್ಟು ಇದು ಏರೋಪ್ಲೇನ್‌ನ ಒಂದು ಬಗೆ ಎಂಬಂತೆ ಸೂಚಿಸಿದ್ದೇವೆ. ಇದು, ಈ ಎರಡೂ ಬೇರೆಬೇರೆ ತಂತ್ರಜ್ಞಾನವನ್ನು ಅವಲಂಬಿಸಿವೆ ಎಂಬುದನ್ನು ಸೂಚಿಸುವುದಿಲ್ಲ.

ಹೀಗೆ ವಿವರಣಾತ್ಮಕ ಪದಗಳನ್ನು ರೂಪಿಸುವಾಗ ಹೆಚ್ಚು ಸಂಸ್ಕೃತಕ್ಕೆ ಮೊರೆ ಹೋಗುತ್ತಿದ್ದೇವೆ. (ಡಾ. ಡಿ. ಎಸ್. ಶಿವಪ್ಪನವರು ಹೆಚ್ಚು ಕನ್ನಡದ ಪದಗಳ ಮೂಲಕವೇ ವೈದ್ಯಕೀಯ ವೃತ್ತಿಭಾಷೆಯ ಪದಕೋಶವೊಂದನ್ನು ರಚಿಸಿದ್ದಾರೆ) ಈ ಸಂಸ್ಕೃತದ ಪದಗಳು ಸಾಕಷ್ಟು ಕ್ಲೇಶವನ್ನು ಉಂಟು ಮಾಡುತ್ತವೆ. 'ಇಂಜಿನಿಯರ್' ಅನ್ನು 'ಅಭಿಯಂತ' ನೆಂದು, 'ಸರ್ಕಲ್ ಇನ್ಸ್‌ಪೆಕ್ಟರ್' ಅನ್ನು 'ವೃತ್ತ ನಿರೀಕ್ಷಕ' ನೆಂದು ಭಾಷಾಂತರಿಸುವ ಬಗೆ ಇಂಥದು. ಹದಿನೆಂಟನೆಯ ಶತಮಾನದಲ್ಲಿ ಫ್ಯಾಕ್ಟರಿ ಎಂಬ ಪದಕ್ಕೆ ಇಂಗ್ಲಿಶ್‌ನಲ್ಲಿ ಇದ್ದ ಅರ್ಥವನ್ನು ಮರೆತು (ಮಳಿಗೆ ಎಂಬ ಅರ್ಥವಿತ್ತು) ಅದನ್ನು 'ಕಾರ್ಖಾನೆ' ಎಂದು ಭಾಷಾಂತರಿಸಿದರೆ ಗೊಂದಲಗಳೇ ಉಂಟಾಗಬಹುದು. ಸರ್ಕಲ್ ಎಂಬುದನ್ನು ವೃತ್ತವೆಂದು ಭಾಷಾಂತರಿಸುವುದೂ ಇಂಥದೇ ಹೊಣೆಗೇಡಿತನ.

3. ಮೂರನೆಯ ಮಾರ್ಗ : ಕನ್ನಡದಲ್ಲಿ ಬಳಕೆಯಲ್ಲಿರುವ ಅಥವಾ ಬಳಕೆಯಿಂದ ತಪ್ಪಿಹೋದ ಪದಗಳನ್ನು ಹೊಸ ಪದಗಳ ಅರ್ಥವನ್ನು ಸೂಚಿಸುವ ಹೊಣೆಯೊಡನೆ ಬಳಸುವುದು. ಕನ್ನಡದ ಪದಕೋಶವನ್ನು ಬುಡದಿಂದ ತುದಿವರೆಗೆ ಅರಿಯುವ ಮೂಲಕ ಇಂಥ ಪ್ರಯತ್ನಗಳು ಸಾಧ್ಯ. ಜನಪದರ ಭಾಶೆ ಆಳವಾದ ಪರಿಚಯದಿಂದ ಈ ಬಗೆಯ ಪದಗಳು ಹುಟ್ಟಬಲ್ಲವು. ಕನ್ನಡದಲ್ಲಿ ಈ ಬಗೆಯ ಪದರಚನೆ ವೃತ್ತಿಭಾಷೆಗೆ ಸಂಬಂಧಿಸಿದಂತೆ ಸಾಕಷ್ಟು ಪ್ರಮಾಣದಲ್ಲಿ ನಡೆದಿಲ್ಲ.

ವೃತ್ತಿಭಾಷೆಯು ಮುಖ್ಯವಾಗಿ ಪದಕೋಶಕ್ಕೆ ಸಂಬಂಧಿಸಿದೆ. ಒಂದು ಪದವನ್ನು ಒಂದು ವೃತ್ತಿಗೆ ಸಂಬಂಧಿಸಿದಂತೆ ರೂಪಿಸಿದರೆ ಅದೇ ಪದವನ್ನು ಇನ್ನೊಂದು ವೃತ್ತಿಯಲ್ಲೂ ಬಳಸಲು ಬರುತ್ತದೆ ಎನ್ನಲಾಗದು. ಎಲ್ಲ ವೃತ್ತಿಗಳಿಗೂ ಸಂಬಂಧಿಸಿದ ಕೆಲವು ಸಂದರ್ಭಗಳಲ್ಲಿ ಮಾತ್ರ ಸಮಾನಪದವನ್ನು ಬಳಸಲು ಬರುತ್ತದೆ. ಇಂಥ ಪದಗಳನ್ನು ಸಪ್ರಮಾಣಗೊಳಿಸುವ ಅವಶ್ಯಕತೆ ಇರುತ್ತದೆ. ಉದಾ: ವೇತನ, ಸಂಬಳ, ಕೂಲಿ, ಮಜೂರಿ ಮುಂತಾದ ಪದಗಳನ್ನು ಸ್ಯಾಲರಿ, ಫೇ, ರಿಮ್ಯೂನರೇಷನ್, ವೇಜ್ ಇತ್ಯಾದಿ ಪದಗಳಲ್ಲಿ ಯಾವುದಕ್ಕೆ ಸಮಾನವಾಗಿ ಬಳಸುತ್ತೇವೆ ಎಂಬುದು ಖಚಿತಗೊಳ್ಳಬೇಕು. ಹಾಗೂ ಅದನ್ನೇ ಆಯಾ ಸಂದರ್ಭದಲ್ಲಿ ಬಳಸಬೇಕು. ಮೂಲಪದವೊಂದು ಭಿನ್ನ ಅರ್ಥಸಾಹಚರ್ಯಗಳನ್ನು ಹೊಂದಿರುವ ಸಾಧ್ಯತೆಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. 'ಪೇ' ಅನ್ನು 'ವೇತನ' ಎಂದುಕೊಂಡರೆ ಪೇಮೆಂಟ್, ಪೇಯರ್, ಪೇಯಿ ಮುಂತಾದ ಪದಗಳು 'ವೇತನ' ದಿಂದ ಹುಟ್ಟಲಾರವು.

ಭಾಗ – 4

ಕಾರ್ಖಾನೆಯ ವೃತ್ತಿಪದಕೋಶವನ್ನು ನಿರ್ಮಿಸಿಕೊಂಡ ಮಾತ್ರದಿಂದ ಭಾಷಾಂತರದ ಸಮಸ್ಯೆಗಳು ಪರಿಹಾರವಾಗಲಾರವು. ಇಲ್ಲಿ ಬಳಸುವ ಭಾಷೆಗೆ ಕೆಲವು ಸಮಸ್ಯೆಗಳಿವೆ. ಆಡಳಿತದ ನೆಲೆಯಲ್ಲಿ ಜನಸಂಪರ್ಕವಿರುವುದರಿಂದ–ಸಂವಾದದ ಸಾಧ್ಯತೆಗಳಿರುತ್ತವೆ. ಆ

ಮೂಲಕ ಬಳಸಲಾಗುವ ಭಾಷೆಯು ಖಚಿತತೆಯನ್ನು ನಿಧಾನವಾಗಿ ಪಡೆಯಲು ಸಾಧ್ಯ ಅಲ್ಲದೆ ಆಡಳಿತದ ಹೊಸ ಬಗೆಗಳು ಹೊಸ ಸಮಸ್ಯೆಗಳನ್ನು ತರುತ್ತಲೇ ಇರುವಾಗ ಯಾವುದೇ ಭಾಷೆಯನ್ನು ಬಳಸಿದರೂ ಸಮಸ್ಯೆಗಳು ಇದ್ದೇ ಇರುತ್ತವೆ. ನೂರು ವರ್ಷಗಳ ಹಿಂದೆಯೇ ಕನ್ನಡವನ್ನು ಆಡಳಿತದಲ್ಲಿ ಬಳಸಲಾಗಿತ್ತು. ಎಂದು ವಾದಿಸುವವರು ಮರೆಯುವ ಮಾತೆಂದರೆ ಆಡಳಿತದ ಸ್ವರೂಪದಲ್ಲೇ ಬದಲಾವಣೆಗಳಾಗಿವೆ ಎಂಬುದನ್ನು. ಇಂಗ್ಲಿಶ್ ಕೂಡ ಈ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಇಲ್ಲಿ ಜನರೊಡನೆ ವಿವಿಧ ಹಂತದ ಸಂವಾದ ಸಾಧ್ಯವಿದೆಯಾಗಿ ಬಳಸುವ ಮಾತುಗಳಿಗೆ ಇರುವ ಕೊರತೆಗಳನ್ನು ಸರಿಪಡಿಸಲು ಸಾಧ್ಯವಿದೆ.

ತಾಂತ್ರಿಕ ಮಾಹಿತಿಯನ್ನು 1. ಕಾರ್ಮಿಕರಿಗಾಗಿ 2. ಗ್ರಾಹಕರಿಗಾಗಿ ಸಿದ್ಧಪಡಿಸುವಾಗ ಈ ಮೇಲಿನ ಸೌಲಭ್ಯವಿರುವುದಿಲ್ಲ. ಉತ್ಪಾದನೆ ಹಾಗೂ ವಿತರಣೆಯನ್ನು ನಿಯಂತ್ರಿಸುವ ನೆಲೆಗಳು ಇವು. ಇಲ್ಲಿ ಭಾಷೆ ಅತ್ಯಂತ ಖಚಿತವಾಗಿರಬೇಕಾದ್ದು ಕೇವಲ ಅನಿವಾರ್ಯ. ಈ ಭಾಷೆ ಏಕಪಕ್ಷೀಯವಾದುದು. ಎಂದರೆ ಇಲ್ಲಿ ಸಂದೇಶ ಮಾತ್ರ ಇರುತ್ತದೆ. ಸಂದೇಶದ ಪ್ರೇಷಕ ಹಾಗೂ ಸಂದೇಶದ ಗ್ರಾಹಕ ಇವರಿಬ್ಬರ ನಡುವೆ ಸಂವಾದ ಇರುವುದಿಲ್ಲ. ಆದ್ದರಿಂದ ಸಂದೇಶದಲ್ಲಿ ಕಿಂಚಿತ್ತು ಸಂದೇಹವಿದ್ದರೂ ಅದರ ಪರಿಣಾಮಗಳು ತಕ್ಷಣವೇ ಗೋಚರಿಸುತ್ತವೆ.

ಕಾರ್ಖಾನೆಯ ಭಾಷೆ : ಗ್ರಾಹಕ <________ ಸಂದೇಶ <________ ಪ್ರೇಷಕ

ನಿತ್ಯದ ಭಾಷೆ : ಪ್ರೇಷಕ <________> ಗ್ರಾಹಕ

ನಿತ್ಯದ ಭಾಷೆಯ ಸಂಬಂಧದಲ್ಲಿ ಇವರಿಬ್ಬರೂ ತಮ್ಮ ಪಾತ್ರಗಳನ್ನು ಬದಲಾಯಿಸಿಕೊಳ್ಳಬಲ್ಲರು. ಅಲ್ಲದೆ ಅವರಿಬ್ಬರ ನಡುವಣ ಅಲಿಖಿತ ಒಪ್ಪಂದದಿಂದಾಗಿ ಎಷ್ಟೋ ಬಾರಿ ಸಂದೇಶಗಳು ಅನಿರ್ದಿಷ್ಟ (ಇತರರ ಪಾಲಿಗೆ)ವಾಗಿರುತ್ತವೆ. ಅಲ್ಲದೆ ಸಾಂದರ್ಭಿಕವಾಗಿರುತ್ತವೆ. ಆದರೆ ಕಾರ್ಖಾನೆಯ ಸಂದರ್ಭದ ತಾಂತ್ರಿಕ ಮಾಹಿತಿ ನೀಡುವ ಭಾಷೆ ಹೀಗಿರಲಾರದು.

1. ಅದು ಸ್ವಯಂಪೂರ್ಣವಾಗಿರಬೇಕು.
2. ನಿರುಪಯುಕ್ತವೆನಿಸುವ ಅಂಶಗಳು ಇರಬಾರದು.

ಹೀಗೆ ರೂಪುಗೊಂಡ ಭಾಷೆ ಅತ್ಯಂತ ಖಚಿತವಾಗಿದ್ದು ಸಹಜಭಾಷೆಯ ಲಕ್ಷಣಗಳನ್ನು ಒಳಗೊಳ್ಳುತ್ತದೆ. ಈ ಹೊತ್ತಿನ ಕಂಪ್ಯೂಟರ್ ಬಳಸುವ ಭಾಷೆ ಕೂಡ ಇದೇ ಮಾದರಿಯದು. ನಮ್ಮ ನಿತ್ಯದ ಭಾಷೆಯಲ್ಲಿ ನಿರುಪಯುಕ್ತವೆನಿಸುವ ಅಂಶ (ಭಾಷಿಕ, ಭಾಷೇತರ) ಬಹಳ ಪ್ರಮಾಣದಲ್ಲಿ ಇರುತ್ತದೆ. ಆದರೆ ತಾಂತ್ರಿಕ ಮಾಹಿತಿಯು ಹೀಗೆ ಇರಲಾರದು. ಭಾಷಾಂತರದ ನೆಲೆಗಳಲ್ಲಿ ಈ ಅಂಶವನ್ನು ಗಮನಿಸಬೇಕಾಗುತ್ತದೆ.

ಭಾಷಾಂತರದ ಭಾಷೆಯಾಗಿ ಕನ್ನಡ

1992ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎ.ಕೆ. ರಾಮಾನುಜನ್ ಅವರು ಬಂದಿದ್ದರು. ಕನ್ನಡ ಭಾಷೆಯ ಆಯ್ದ ಸಾಹಿತ್ಯ ಕೃತಿಗಳನ್ನು ಇಂಗ್ಲಿಶ್ ಭಾಷೆಗೆ ಅನುವಾದ ಮಾಡುವುದಕ್ಕೊಂದು ಪೂರ್ವಯೋಜನಾ ಶಿಬಿರವನ್ನು ವಿಶ್ವವಿದ್ಯಾಲಯ ಅಯೋಜಿಸಿತ್ತು. ಅಲ್ಲಿ ಚರ್ಚೆಗಳು ನಡೆಯುತ್ತಿದ್ದಾಗ ಹಿಂದೆ ಕುಳಿತಿದ್ದ ರಾಮಾನುಜನ್ ಪಿಸುಮಾತಿನಲ್ಲಿ ಒಂದು ಮಾತು ಹೇಳಿದರು. ಭಾಷಾಂತರದ ಸಿದ್ಧಾಂತಗಳ ಬಗೆಗೆ ಮಾತಾಡುವುದು ಮತ್ತು ಫಿಲಾಸಫಿ ಆಫ್ ಕಾರ್ಪೆಂಟರಿ ಬಗೆಗೆ ಮಾತಾಡುವುದು ಎರಡೂ ಒಂದೇ ಎಂದವರ ಮಾತು. ಅವರ ಆ ಮಾತು ಆಗ ನನಗೆ ಅಚ್ಚರಿ ತಂದಿತ್ತು. ಆಮೇಲೆ ಆ ಕುರಿತು ಅವರೇ ವಿವರಣೆ ಕೊಟ್ಟರು. ಈ ದಿನ ಆ ಮಾತು ನನ್ನ ನೆನಪಿಗೆ ಬರುತ್ತಿದೆ. ಬೆಳಗಿನಿಂದ ನಡೆದ ಚರ್ಚೆಗಳನ್ನು ಕೇಳಿದಾಗ ಅವರ ಮಾತಿನ ಅರ್ಥ ಮತ್ತಷ್ಟು ವಿಸ್ತರಿಸಿತು.

ಭಾಷಾಂತರ ಅನ್ನುವ ಸಾಂಸ್ಕೃತಿಕ ಚಟುವಟಿಕೆ ಏಕೆ ಸಂಭವಿಸುತ್ತದೆ, ಅದರ ಹಿಂದಿನ ಒತ್ತಡಗಳೇನು ಎಂದು ಚರ್ಚಿಸುವುದು ಒಂದು ನೆಲೆ. ಆದರೆ ಭಾಷಾಂತರ ತನಗೆ ತಾನೇ ನಡೆಯುತ್ತಿರುವ ಪ್ರಕ್ರಿಯೆ. ನಮ್ಮ ಚರ್ಚೆಗಳೆಲ್ಲ ಒಂದು ಬಗೆಯ ಮೆಟಾ ಅಕ್ಟಿವಿಟಿ. ಇಲ್ಲಿ ಕಾರಣಮೀಮಾಂಸೆಯನ್ನು ಮಾಡುತ್ತೇವೆ, ಪರಿಣಾಮ ಮೀಮಾಂಸೆಯನ್ನು ಮಾಡುತ್ತೇವೆ. ಮೂಲಚಟುವಟಿಕೆಯನ್ನು ಆಧರಿಸಿಯೇ ಈ ಚರ್ಚೆಗಳು ನಡೆಯುತ್ತಿವೆ ಎನ್ನುವಂತಿಲ್ಲ. ಹಲವಾರು ಸಾಂಸ್ಕೃತಿಕ ಸಂಗತಿಗಳನ್ನು ತಾತ್ತ್ವಿಕ ನೆಲೆಗಳನ್ನು ಅವಲಂಬಿಸಿ ಈ ಮೀಮಾಂಸೆಗಳು ನಡೆಯುತ್ತವೆ. ಇವೆರಡೂ ಒಂದು ಇನ್ನೊಂದನ್ನು ನಿರ್ದೇಶಿಸುವ, ನಿಯಂತ್ರಿಸುವ ಸಾಮರ್ಥ್ಯವನ್ನು ಪಡೆದಿದೆ ಎಂದು ತಿಳಿಯಲು ಕಾರಣಗಳಿಲ್ಲ. ಜಗತ್ತಿನಾದ್ಯಂತ ಭಾಷಾಂತರವೆಂಬ ಚಟುವಟಿಕೆ ತನ್ನ ಪಾಡಿಗೆ ತಾನು ನಡೆಯುತ್ತಾ ಹೋಗುತ್ತಿರುವಂತೆ ಭಾಷಾಂತರ ಸಿದ್ಧಾಂತಗಳನ್ನು ರೂಪಿಸುವ ಕೆಲಸಗಳೂ ತಮ್ಮ ಪಾಡಿಗೆ ತಾವು ನಡೆಯುತ್ತಲೇ ಇರುತ್ತವೆ. ಇವೆರಡೂ ಆಗಾಗ ಡಿಕ್ಕಿ ಹೊಡೆಯಲೂ ಬಹುದು. ಆದರೆ ಒಂದು ಇನ್ನೊಂದನ್ನು ಅನುಸರಿಸುವ ಸಂಭವ ಕಡಿಮೆ.

ಡಾ. ರಾಮಚಂದ್ರನ್ ಬೆಳಗಿನ ಗೋಷ್ಠಿಯಲ್ಲಿ ಭಾಷಾಂತರ ಏಕೆ ಬೇಕಾಗುತ್ತದೆ ಎನ್ನುವುದನ್ನು ಕುರಿತು ಕೆಲವು ಮಾತು ಹೇಳಿದರು. ನಮಗೆ ಅಪರಿಚಿತವಾದುದು ಯಾವುದೋ ಒಂದು ಇರುತ್ತದೆ. ಆ ಕೊರತೆ ನಮ್ಮ ಸಾಹಿತ್ಯ ಸಂಸ್ಕೃತಿಯ

ಕೊರತೆಯಾಗಿರುತ್ತದೆ. ಈ ಕೊರತೆಯನ್ನು ತುಂಬಿಸಿಕೊಳ್ಳಲು ನಾವು ಅನ್ಯ ಸಾಹಿತ್ಯ ಸಂಸ್ಕೃತಿಗಳಿಂದ ಪಡೆದುಕೊಳ್ಳುತ್ತೇವೆ. ಈ ಪಡೆದುಕೊಳ್ಳುವ ಕೆಲಸವೇ ಭಾಷಾಂತರ. ಇದು ಒಂದು ಬಗೆಯ ವಿವರಣೆ.

ಭಾಷಾಶಾಸ್ತ್ರವನ್ನು ಬಲ್ಲವರಿಗೆ ಇನ್ನೊಂದು ಸಂಗತಿ ಗೊತ್ತಿರುತ್ತದೆ. ಭಾಷಾ ಸಂಪರ್ಕದಲ್ಲಿ ಸ್ವೀಕರಣ (ಇದನ್ನು ಎರವಲು ಎಂದೂ ಕರೆಯುವುದುಂಟು. ಆದರೆ ಎರವಲು ಪಡೆದದ್ದನ್ನು ಹಿಂತಿರುಗಿಸಬೇಕಾಗುತ್ತದೆ. ಭಾಷೆಗಳಲ್ಲಿ ನಡೆಯುವ ಸ್ವೀಕರಣದಲ್ಲಿ ಹಿಂದಿರುಗಿಸುವ ಮಾತು ಬರುವುದಿಲ್ಲ) ಎಂಬ ಕ್ರಿಯೆ ನಡೆಯುವುದೇಕೆ? ಪಡೆಯುವ ಭಾಷೆಯಲ್ಲಿ ಇರುವ ಕೊರತೆಗಳನ್ನು ತುಂಬಿಕೊಳ್ಳುವುದಕ್ಕಾಗಿ ಇನ್ನೊಂದು ಭಾಷೆಯಿಂದ ಪಡೆಯಲಾಗುತ್ತದೆ ಎಂದು ಹೇಳುವುದುಂಟು. ಇದು ಸಾಧುವಾದ ಕಾರಣ. ಆದರೆ ಸ್ವೀಕರಣಕ್ಕೆ ಯಾವಾಗಲೂ ಇದೇ ಕಾರಣವಾಗಿರುವುದಿಲ್ಲ. ಪಡೆಯುವ ಭಾಷೆಯಲ್ಲಿ ತಕ್ಕ ಪದ ಇರುವಾಗಲೂ ಇನ್ನೊಂದು ಭಾಷೆಯಿಂದ ಬೇರೆ ಒಂದು ಪದವನ್ನು ಪಡೆಯುವುದುಂಟು. ಹೀಗಾದಾಗ ಮೂಲಪದದ ಅರ್ಥವನ್ನು ಸೀಮಿತಗೊಳಿಸಿ, ಅಥವಾ ಅಧೀನಗೊಳಿಸಿ ಪಡೆದ ಪದವನ್ನು ಹೆಚ್ಚು ವ್ಯಾಪಕಗೊಳಿಸುವುದು ಸಾಮಾನ್ಯವಾಗಿ ಸಂಭವಿಸುವ ಸಂಗತಿಯಾಗಿದೆ. ಸ್ವೀಕರಣದ ಅನಂತರ ಪಡೆಯುವ ಭಾಷೆಯಲ್ಲಿ ಎರಡು ಪದಗಳಿರುತ್ತವೆ. ಅವೆರಡರ ನಡುವೆ ಒಂದು ವಿಚಿತ್ರ ಸಂಬಂಧ ಏರ್ಪಡುತ್ತದೆ. ಕನ್ನಡದಲ್ಲಿರುವ ಮದುವೆ, ವಿವಾಹ ಮತ್ತು ಮೇರೇಜು(ಕಾಗುಣಿತ ಉದ್ದೇಶಿತ) ಎಂಬ ಪದಗಳನ್ನು ಗಮನಿಸಿದರೆ ಸ್ವೀಕರಣದ ಪರಿಣಾಮ ಗೊತ್ತಾಗುತ್ತದೆ. ಪರಿಣಾಮದ ಮಾತು ಬದಿಗಿಟ್ಟು ಕಾರಣಗಳನ್ನು ಹುಡುಕಲು ಹೊರಡಬಹುದು. ಭಾಷಾಸಂಪರ್ಕ ನಡೆಯುವ ಭಾಷೆಗಳ ನಡುವೆ ಅಸಮ ಸಂಬಂಧ ಇದ್ದಾಗ ನಾವು ವಿವರಿಸಿದ ಬಗೆಯ ಪರಿಣಾಮ ಸ್ವೀಕರಣದಿಂದಾಗಿ ನಡೆಯುತ್ತದೆ.

ಈ ಮೇಲಿನ ಮಾತನ್ನು ಗಮನದಲ್ಲಿಟ್ಟರೆ ಭಾಷಾಂತರದ ನೆಲೆಯಲ್ಲೂ ಇಂಥದೇ ಪ್ರಕ್ರಿಯೆಯೊಂದು ನಡೆಯುತ್ತಿರುವ ಸಾಧ್ಯತೆ ಗೊತ್ತಾಗುತ್ತದೆ. ನಮ್ಮ ಭಾಷಾಸಾಹಿತ್ಯದಲ್ಲಿ ಇಲ್ಲದ ಅನುಭವ ಲೋಕವೊಂದನ್ನು ಪಡೆದುಕೊಳ್ಳುವ ಉದ್ದೇಶ ಮಾತ್ರ ಭಾಷಾಂತರಕ್ಕೆ ಕಾರಣವಾಗಲಾರದೆಂದು ತಿಳಿಯಬಹುದು. ಪಡೆಯುವ ಭಾಷಾಸಾಹಿತ್ಯದಲ್ಲಿ ಮಂಡಿತವಾದ ಅನುಭವವೇ ಭಾಷಾಂತರದ ಕೃತಿಗಳ ಮೂಲಕ ಮರಳಿ ತನ್ನ ಸ್ಥಾನ ನಿರ್ದೇಶನಕ್ಕಾಗಿ ತಹತಹ ಪಡಬೇಕಾಗುತ್ತದೆ. ಅಂದರೆ ಎರಡು ಸಾಹಿತ್ಯ ಸಂಸ್ಕೃತಿಗಳ ನಡುವೆ ಅಸಮ ಸಂಬಂಧವಿದ್ದರೆ ಅಧಿಕಾರದ ಭಾಷೆಯಿಂದ ಅನುವಾದಗೊಳ್ಳುವ ಕೃತಿಗಳು ಅಧೀನ ಭಾಷೆಯ ಸಾಹಿತ್ಯ ಕೃತಿಗಳ ಅನುಭವ ಲೋಕವನ್ನು ಮರಳಿ ಕಲಸಿ ಜೋಡಿಸುತ್ತವೆ. ಅಧೀನ ಭಾಷೆಯಿಂದ ಕೃತಿಯೊಂದು ಅಧಿಕಾರದ ಭಾಷೆಗೆ ಅನುವಾದವಾದರೆ ಆ ಕೃತಿಗೆ ಅಧಿಕೃತತೆಯನ್ನು ನೀಡುವ ಧೋರಣೆಯನ್ನು ಅಧಿಕಾರದ ಭಾಷೆ ತೋರಿಸುತ್ತದೆ.

ಡಾ. ರಾಮಚಂದ್ರನ್ ಅವರು ತಮ್ಮ ಭಾಷಣದಲ್ಲಿ ಅಸಮ ಸಂಬಂಧದ ಒಂದು ನಿದರ್ಶನವನ್ನು ನೀಡಿದರು. ಉಮರನ ರುಬಾಯತ್‌ಗಳನ್ನು ಇಂಗ್ಲಿಶ್ ಭಾಷೆಗೆ 'ತಂದ' ಫಿಟ್ಜೆರಾಲ್ಡ್ ತಾನು ಇಂಗ್ಲಿಶಿಗೆ ಅನುವಾದ ಮಾಡುವ ಮೂಲಕವೇ ಪರ್ಶಿಯನ್

ಮೂಲಕ್ಕೆ ಮತ್ತು ಕಿವಿಗೆ ಮಹತ್ವವನ್ನು ತಂದು ಕೊಡುತ್ತಿದ್ದೇನೆಂದು ಭಾವಿಸಿದ್ದನು. ಆ ಕಾರಣಕ್ಕಾಗಿಯೇ ಮೂಲಕ್ಕೆ ನಿಷ್ಠನಾಗುವ ಪ್ರಮೇಯ ತನಗೆ ಇಲ್ಲವೆಂದೇ ತಿಳಿದನು. ಇಂಗ್ಲಿಶ್ ಭಾಷೆಗೆ ಇದ್ದ ಅಥವಾ ಆ ಭಾಷೆಗೆ ರಾಜಕೀಯವಾಗಿ ದೊರಕಿದ್ದ ಮನ್ನಣೆಯಿಂದಾಗಿ ಆ ಅನುವಾದಕನಿಗೆ ಒಂದು ಬಗೆಯ ಪೊಗರು (ರಾಮಚಂದ್ರನ್ ಅವರು ಬಳಸಿದ ಪದ ಆರೊಗೆನ್ಸ್)ತಂದುಕೊಟ್ಟಿದೆ. ಇದೇ ಬಗೆಯ ಕೆಲಸವನ್ನು ಅಧೀನ ಭಾಷೆಯ ಅನುವಾದಕ ಮಾಡಿದರೆ ಅದು ಬಹಳ ಟೀಕೆಗೆ ಒಳಗಾಗುತ್ತದೆ. ಅಂದರೆ ಯಾವ ಸೌಲಭ್ಯ ಅಧಿಕಾರದ ಭಾಷೆಯ ಅನುವಾದಕರಿಗೆ ಇರುತ್ತದೋ ಅದು ಅಧೀನ ಭಾಷೆಯ ಅನುವಾದಕರಿಗೆ ಇರುವುದಿಲ್ಲ.

ಈ ಮಾತನ್ನು ನಾನು ಮೊದಲು ಎತ್ತಿದ ಪ್ರಶ್ನೆಯ ಜೊತೆಗೆ ಗಮನಿಸಬೇಕೆಂದು ಕೋರುತ್ತೇನೆ. ಇನ್ನೊಂದು ಭಾಷೆಯಿಂದ ಭಾಷಾಂತರ ಮಾಡಲು ಕೃತಿಯೊಂದನ್ನು ಆಯ್ಕೆ ಮಾಡಿಕೊಳ್ಳಲು ಕಾರಣಗಳು ಯಾವುವು ಎಂಬ ಪ್ರಶ್ನೆಯನ್ನು ನಾವು ಮೊದಲಲ್ಲಿ ಕೇಳಿಕೊಂಡೆವು. ನಮ್ಮ ಭಾಷೆಯ ಸಾಹಿತ್ಯದಲ್ಲಿ ಇಲ್ಲದ ಅನುಭವಕ್ಕಾಗಿಯೇ ಭಾಷಾಂತರದ ಆಯ್ಕೆ ಇರುವುದಿಲ್ಲ ಎನ್ನುವುದನ್ನು ಈಗಾಗಲೇ ಹೇಳಲಾಗಿದೆ. ಲಭ್ಯ ಅನುಭವ ಲೋಕವನ್ನೇ ಅನುವಾದದ ಮೂಲಕ ಮರುಪರಿಶೀಲನೆಗೆ ಒಳಪಡಿಸುತ್ತೇವೆ. ಅನುವಾದದ ಈ ಪರಿಣಾಮ ದಟ್ಟವಾಗಿ ಕಾಣುವುದು ಅಧಿಕಾರದ ಭಾಷೆಯಿಂದ ಅನುವಾದ ಮಾಡಿಕೊಂಡಾಗ. ಅಧಿಕಾರದ ಭಾಷೆಯಿಂದ ಬಂದ ಅನುಭವಲೋಕವೇ ಅಧಿಕೃತವಾಗಿ ನಮ್ಮ ಕೃತಿಗಳ ಲೋಕ ಊನವಾಗಿ ಅಥವಾ ಸೀಮಿತವಾಗಿ ಕಾಣತೊಡಗುತ್ತದೆ. ನಾವು ಅನುವಾದಿತ ಕೃತಿಯ ನೆರವಿನಿಂದ ನಮ್ಮ ಕೃತಿಗಳ ಮೌಲ್ಯಮಾಪನ ಮಾಡತೊಡಗುತ್ತೇವೆ. ಎಂದರೆ ಭಾಷಾಂತರ ಕೇವಲ ಕೃತಿಗಳ ಭಾಷಾವರಣದಲ್ಲಿ ಆಗುವ ಪಲ್ಲಟ ಮಾತ್ರವಲ್ಲ. ಒಂದು ಭಾಷಾಸಾಹಿತ್ಯ ಪರಂಪರೆಯಲ್ಲಿ ಆಗುವ ಮುಖ್ಯ ಪಲ್ಲಟ. ಈ ಅನುಭವ ಅಸಮ ಸಂಬಂಧವಿರುವ ಭಾಷೆಗಳಲ್ಲಿ ಅಧೀನ ಭಾಷೆಗೆ ನಿಜ. ಆದರೆ ಅಧಿಕಾರದ ಭಾಷೆಗೆ ಈ ಮಾತು ನಿಜವಲ್ಲ. ಆದ್ದರಿಂದಲೇ ಫಿಟ್ಜೆರಾಲ್ಡ್ ತನ್ನ ಅನುವಾದದ ಬಗ್ಗೆ ಆ ಬಗೆಯ ಮಾತುಗಳನ್ನು ಹೇಳಲು ಸಾಧ್ಯವಾಯಿತು. ಈಗಲೂ ಪರಿಸ್ಥಿತಿ ತುಂಬಾ ಬದಲಾಗಿಲ್ಲ. ಇಂಗ್ಲಿಶಿಗೆ ಅದೇ ಅಧಿಕಾರವಿದೆ. ಆ ಭಾಷೆ ಇನ್ನೊಂದು ಭಾಷೆಯ ಕೃತಿಯನ್ನು ತನ್ನ ಬಯಕೆಗೆ ಅನುಗುಣವಾಗಿ ತಿರುಚಬಹುದು. ಮತ್ತು ಹಾಗೆ ತಿರುಚಿಯೂ ತನ್ನ ಕ್ರಮ ಸರಿ ಎಂದು ಸಮರ್ಥಿಸಿಕೊಳ್ಳಲೂಬಹುದು. ಆದರೆ ಅದೇ ಕೆಲಸವನ್ನು ಅಧೀನ ಭಾಷೆ ಮಾಡಲು ಸಾಧ್ಯವೇ?

ವಾಸ್ತವವಾಗಿ ನಾನು ಭಾಷಾಂತರದ ಭಾಷೆಯಾಗಿ ಕನ್ನಡ ಯಾವ ನಿಲುವನ್ನು ಈವರೆಗೆ ತಳೆದಿದೆ ಎಂಬುದನ್ನು ವಿವರಿಸಲು ಈ ಪೀಠಿಕೆಯನ್ನು ಹಾಕಬೇಕಾಯಿತು. ಲಾಗಾಯ್ತಿನಿಂದ ಕನ್ನಡ ಕವಿಗಳು ಅನುವಾದದ ಪ್ರಕ್ರಿಯೆಯಲ್ಲಿ ಇರುವವರೇ ಆಗಿದ್ದಾರೆ. ಆದರೆ ಈ ಅನುವಾದವು ನಾವು ಈಗ ತಿಳಿದಿರುವ ಅನುವಾದದ ಮಾದರಿಯದ್ದಲ್ಲ. ಅವರ ಎದುರು ಇದ್ದ ಅಧಿಕಾರದ ಭಾಷೆ: ಸಂಸ್ಕೃತ. ಆ ಭಾಷೆಯ ಸಾಹಿತ್ಯ ಕೃತಿಗಳನ್ನು

ತಮ್ಮ ಭಾಷೆಗೆ ತರುವಾಗ ಕನ್ನಡ ಮತ್ತು ಸಂಸ್ಕೃತಗಳ ನಡುವೆ ಇರುವ ಅಸಮ ಸಂಬಂಧದ ಗೊಡವೆ ಅವರಿಗೆ ಇದ್ದಂತಿಲ್ಲ. ಸುಮ್ಮನೆ ಎರಡು ಮಾದರಿಗಳನ್ನು ನಿಮ್ಮ ಮುಂದೆ ಇಡುತ್ತೇನೆ. ಪಂಪನು ಮಹಾಭಾರತದ ಕಥೆಯನ್ನು ಹೇಳಲು ಹೊರಟಾಗ 'ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿ'ಯನ್ನು ಈಜುವೆನೆಂಬ ಹಮ್ಮು ತನಗೆ ಇಲ್ಲವೆಂದು ಹೇಳುತ್ತಾನೆ. ಇದು ವಿನಯದ ಮಾತೆಂದು ಎಲ್ಲರೂ ಗುರುತಿಸುತ್ತಾರೆ. ಇದ್ದೀತು. ಆದರೆ ಪಂಪನ ವಿಧಾನವೇ ಮೂಲವನ್ನು ತನ್ನ ಕಾಲದೇಶಗಳಿಗೆ ಒಗ್ಗಿಸುವುದು ಅಥವಾ ತನ್ನ ಕಾಲದೇಶಗಳ ನಿಟ್ಟಿನಲ್ಲಿ ಆ ಕೃತಿಯನ್ನು ಅರಿಯಲು ಯತ್ನಿಸುವುದು. ಇನ್ನೊಬ್ಬ ಕವಿ ಪೊನ್ನ ತನ್ನನ್ನು ಕಾಳಿದಾಸನಿಗಿಂತ ನೂರುಮಡಿ ಮಹತ್ವದ ಕೃತಿ ರಚಕನೆಂದು ಹೇಳುತ್ತಾನೆ. ಅವನ ಕೃತಿ ಹಾಗೆ ನೂರುಪಟ್ಟು ಮಹತ್ವ ಕೃತಿಯಾಗಿದೆಯೋ ಇಲ್ಲವೋ ಎನ್ನುವುದು ನಮಗೆ ಮುಖ್ಯವಲ್ಲ. ಪಂಪ ತಾನು ಮೂಲಕ್ಕೆ ವಿನೀತನಾಗಿದ್ದೇನೆ ಎನ್ನುತ್ತಲೇ ಅದನ್ನು ತನ್ನ ಚೌಕಟ್ಟಿಗೆ ಬಾಗಿಸುತ್ತಾನೆ. ಪೊನ್ನ ತನ್ನ ಪ್ರತಿಭೆ ಮೂಲಕೃತಿಕಾರನ (ಅಥವಾ ಅಧಿಕಾರದ ಭಾಷೆಯಾದ ಸಂಸ್ಕೃತದ ಕವಿಯ) ಪ್ರತಿಭೆಗಿಂತ ಕಡಿಮೆಯದ್ದಲ್ಲವೆನ್ನುತ್ತಾನೆ. ಇವೆರಡೂ ಮಾದರಿಗಳೂ ನಮಗೆ ಒಂದೇ ಸೂಚನೆಯನ್ನು ನೀಡುತ್ತಿವೆಯೆಂದು ನಾನು ಭಾವಿಸುತ್ತೇನೆ. ಕನ್ನಡದ ಕವಿಗಳು ಅಧಿಕಾರದ ಭಾಷೆಯ ಎದುರು ತಮ್ಮ ಸಾಮರ್ಥ್ಯವನ್ನು ಒತ್ತೆ ಇಟ್ಟಂತೆ ವರ್ತಿಸಲಿಲ್ಲ. ಅವರು ಮೂಲ ಪಠ್ಯದಲ್ಲಿ ತಮಗೆ ಬೇಕಾದ ಅರ್ಥಗಳನ್ನು ಪಡೆಯಲು ಹಿಂಜರಿಯಲಿಲ್ಲ. ಅಂದರೆ ಯಾವುದು ಅಧಿಕಾರದ ಭಾಷೆಗೆ ಸಹಜವಾಗಿ ಲಭಿಸಿತ್ತೋ ಆ ಬಿಡುಗಡೆಯನ್ನು ಅಧೀನ ಭಾಷೆಯಲ್ಲಿ ಬರೆಯುತ್ತಿದ್ದೂ ಪಡೆದುಕೊಂಡರು. ಇದೊಂದು ಬಗೆಯ ಸಾಂಸ್ಕೃತಿಕ ರಾಜಕಾರಣ. ಪಡೆಯುವ ಭಾಷೆ ಈ ಬಗೆಯ ಬಿಡುಗಡೆಯನ್ನು ಕಂಡುಕೊಳ್ಳದಿದ್ದರೆ ಆ ಭಾಷೆಗೆ ಉಳಿಗಾಲವೇ ಇರುವುದಿಲ್ಲ.

ಭಾಷೆಯಲ್ಲಿ ನಡೆಯುವ ಸ್ವೀಕರಣ ಕ್ರಿಯೆಯನ್ನು ಗಮನಿಸಿದರೂ ಇದು ಗೊತ್ತಾಗುತ್ತದೆ. ಕನ್ನಡ ಕಾವ್ಯಪರಂಪರೆಯಲ್ಲಿ ಮೇಲಿಂದ ಮೇಲೆ ಒಂದು ಪ್ರಶ್ನೆಯನ್ನು ಮುಂದಿಡುವುದು ನಮ್ಮ ಗಮನಕ್ಕೆ ಬರುತ್ತದೆ. 'ಕವಿರಾಜ ಮಾರ್ಗ'ದ ಕಾಲದಿಂದ ಮೊದಲಾಗಿ ಮುದ್ದಣನವರೆಗೆ (ಅಲ್ಲಿಂದ ಮುಂದೆಯೂ ಬೇರೆ ರೂಪದಲ್ಲಿ) ಕನ್ನಡ ಕಾವ್ಯಭಾಷೆಯಲ್ಲಿ ಕನ್ನಡ ಮತ್ತು ಸಂಸ್ಕೃತಗಳ ಸಂಬಂಧ ಹೇಗಿರಬೇಕೆಂಬುದೇ ಆ ಪ್ರಶ್ನೆ. ಕನ್ನಡದೊಳಗೆ ಸಂಸ್ಕೃತ ಬೆರೆಯುವಾಗ ಕನ್ನಡದ ಸಹಜ ಗುಣಗಳನ್ನು ಹತ್ತಿಕ್ಕುವಂತೆ ಇರಬಾರದು ಎನ್ನುವುದೇ ಅವರೆಲ್ಲರ ಮುಖ್ಯ ಅಭಿಪ್ರಾಯವಾಗಿತ್ತು. ಹಾಗೆ ಸಂಸ್ಕೃತವು ತನ್ನ ಅಧಿಕಾರದ ಛಾಪನ್ನು ಉಳಿಸಬಹುದೆಂಬ ಆತಂಕದಿಂದ ಅಂಡಯ್ಯನಂಥವರು ಸಕ್ಕದವನ್ನು ಬದಿಗಿರಿಸಿ ಕನ್ನಡದಲ್ಲೇ ಇಡಿಯಾಗಿ ಬರೆಯುವ ಛಲವನ್ನು ತೋರಿದರು. ಅಂಡಯ್ಯ ಕನ್ನಡ ಕಾವ್ಯಭಾಷೆಯ ಮುಖ್ಯ ಪರಂಪರೆಯನ್ನು ರೂಪಿಸಲಿಲ್ಲ. ಬಹುಪಾಲು ಕವಿಗಳು ಸಂಸ್ಕೃತವನ್ನು ಬದಿಗಿರಿಸುವುದಕ್ಕಿಂತ ಅದರೊಡನೆ ಗುದ್ದಾಡುವುದೇ ಲೇಸು ಎಂದು ತಿಳಿದರು. ಅವರ ಈ ಆಯ್ಕೆಯ ಬಗೆಗೆ ನಾವು ಹೆಮ್ಮೆ ಪಡಬೇಕಾಗಿದೆ. ಏಕೆಂದರೆ ಹಾಗೆ ಮಾಡಿದ್ದರಿಂದಲೇ ಕನ್ನಡ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುವ

ವಿಧಾನಗಳನ್ನು ಹುಡುಕಿಕೊಳ್ಳುವುದು ಸಾಧ್ಯವಾಯಿತು. ನಮ್ಮ ಈ ಕವಿಗಳು ಅನುಸರಿಸಿದ ಎಲ್ಲ ತಂತ್ರಗಳನ್ನೂ ವಿವರಿಸಲು ಇಲ್ಲಿ ಅವಕಾಶಗಳಿಲ್ಲ. ಆದರೆ ಅವರ ದೃಷ್ಟಿಕೋನದ ಸ್ವರೂಪವನ್ನು ಗುರುತಿಸುತ್ತಾ ಈ ಮಾತು ಹೇಳುವುದು ಅವಶ್ಯವಾಯಿತು.

ಪಂಪನಿಂದಲೇ ಒಂದು ನಿದರ್ಶನವನ್ನು ತೆಗೆದುಕೊಂಡು ನಮ್ಮ ಚರ್ಚೆಯನ್ನು ಬೆಳೆಸಲು ಇಷ್ಟಪಡುತ್ತೇನೆ. ಅವನ 'ಆದಿಪುರಾಣ'ದಲ್ಲಿ ಬರುವ ಬಹಳ ಪ್ರಸಿದ್ಧವಾದ ವೃತ್ತವೊಂದರ ಸಾಲು ಹೀಗಿದೆ. 'ನೆಲಸುಗೆ ನಿನ್ನ ವೃಕ್ಷದೊಳ್ ನಿಶ್ಚಳಮೀ ಭಟಖಡ್ಗಮಂಡಲೋತ್ಪಲವನ ವಿಭ್ರಮ ಭ್ರಮರಿಯಪ್ಪ ಚಲಾಚಲ(ಅಥವಾ ಮನೋಹರಿ) ರಾಜ್ಯಲಕ್ಷ್ಮೀ....' ಪದ್ಯ ಹೀಗೆ ಮುಂದುವರೆಯುತ್ತದೆ. ಇದು ಕನ್ನಡದ ರಚನೆಯಾದರೂ ಸಂಸ್ಕೃತದ ಪದಗಳು, ಪದ ರಚನೆಗಳು ಇಲ್ಲಿ ನಿರಾಯಾಸವಾಗಿ ಬೆರೆತಿವೆ. ಇಂದಿನ ಭಾಷಾಶಾಸ್ತ್ರದ ಪರಿಭಾಷೆಯಲ್ಲಿ ಇದು ನುಡಿಬೆರಕೆ. ಪಂಪನು ಸಂಸ್ಕೃತದ ನುಡಿಗಳನ್ನೇನು, ಸಂಸ್ಕೃತದ ಕವಿಯೊಬ್ಬನ ಸಮಾಸ ರಚನೆಯನ್ನೇ ಅನಾಮತ್ತಾಗಿ ತನ್ನ ರಚನೆಯೊಳಗೆ ಇರಿಸಿಕೊಂಡಿದ್ದಾನೆ. ಭಟಖಡ್ಗಮಂಡಲೋತ್ಪಲವನ ವಿಭ್ರಮ ಭ್ರಮರಿ ಎಂಬುದು ಬಾಣನ ಕೃತಿಯಲ್ಲಿ ಬರುವ ಸಮಾಸ. ಅದನ್ನು ತನ್ನ ರಚನೆಯೊಳಗೆ ಒಂದು ಉಲ್ಲೇಖವೆಂದು ತಂದಿಲ್ಲ. (ಇಂದಿನ ವಿಮರ್ಶೆಯ ಪರಿಭಾಷೆಯಲ್ಲಿ ಹೇಳುವ ಅಲ್ಲೂಶನ್ ಅಲ್ಲ ಇದು) ಹೀಗೆ ಮಾಡುವಾಗ ಪಂಪ ಆ ಉಕ್ತಿಗೆ ಕನ್ನಡದ ಸಂದರ್ಭದ ಅರ್ಥವಲಯವನ್ನು ಒದಗಿಸಿದ್ದಾನೆ. ನಿಶ್ಚಲ ಮತ್ತು ಭ್ರಮರ ಎಂಬ ಪದಗಳ ನಡುವೆ ಇರುವ ವೈರುಧ್ಯವನ್ನು ಇಲ್ಲಿ ನಮ್ಮ ಗಮನಕ್ಕೆ ತಂದಿದ್ದಾನೆ. ಹೀಗೆ ಸಂಸ್ಕೃತದಿಂದ ಒದಗಿದ ಸಾಮಗ್ರಿಯನ್ನು ಕನ್ನಡಕ್ಕೆ ಹೊಂದಿಸಿಕೊಂಡು ಬಳಸುವುದು ಕನ್ನಡ ಕವಿಗಳ ವಿಧಾನ.

ಭಾಷೆಯ ನೆಲೆಯಲ್ಲಿ ಯಾವ ವಿಧಾನವನ್ನು ಅನುಸರಿಸಲಾಗಿದೆಯೋ ಅದೇ ಮಾದರಿ ಕೃತಿಗಳ ಅಳವಡಿಕೆಯಲ್ಲೂ ಕಂಡುಬರುತ್ತದೆ. ಅಧಿಕಾರದ ಭಾಷೆಯನ್ನು ಎದುರಿಸುವಾಗ ಕನ್ನಡದ ಕವಿಗಳು ತಮ್ಮ ಭಾಷೆಯ ಅವಶ್ಯಕತೆಗಳನ್ನು ಮರೆಯಲಿಲ್ಲ. ವಸ್ತುವಿರಲಿ, ಪಾತ್ರವಿರಲಿ, ವರ್ಣನೆಯಿರಲಿ, ಭಾಷಾಶೈಲಿ ಇರಲಿ ಕನ್ನಡದ ನೆಲೆಗಳಿಗೆ ಅವೆಲ್ಲವನ್ನೂ ರವಾನಿಸುವ ಬಗೆ ಕನ್ನಡ ಕವಿಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಕಂಡುಬರುತ್ತದೆ. ದೊಡ್ಡಯ್ಯನೆಂಬ ಕವಿ ಜೈನ ರಾಮಾಯಣ ಪರಂಪರೆಯಲ್ಲಿ ಒಂದು ಸಾಂಗತ್ಯ ಕೃತಿಯನ್ನು ಕನ್ನಡದಲ್ಲಿ ಬರೆದಿದ್ದಾನೆ. ಅವನ ಅಯೋಧ್ಯೆಯ ವರ್ಣನೆಯಲ್ಲಿ ಆ ನಗರದ ಸುತ್ತಲೂ ಅಡಕೆ ಮರಗಳಿದ್ದವಂತೆ. ಈ ದೊಡ್ಡಯ್ಯ ಇದ್ದುದು ಮೈಸೂರು ಜಿಲ್ಲೆಯ ಒಂದು ಸಣ್ಣ ಹಳ್ಳಿಯಲ್ಲಿ. ಅವನು ಕಂಡಿದ್ದ ಕೋಟೆ ಅವನ ಊರಿಗೆ ಸಮೀಪವಿದ್ದ ಪಿರಿಯಾಪಟ್ಟಣವೆಂಬ ಊರಿನಲ್ಲಿದ್ದುದು ಆ ಕೋಟೆಯ ಸುತ್ತಲೂ ಇದ್ದ ಅಡಕೆ ಮರಗಳು ಅವನ ಕಾವ್ಯದಲ್ಲಿ ಅಯೋಧ್ಯೆಯ ಆವರಣಕ್ಕೆ ರವಾನೆಗೊಳ್ಳುತ್ತವೆ. ಇದೊಂದು ಸರಳ ಉದಾಹರಣೆ. ಪಂಪ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾದ ಕವಿಗಳಿಂದಲೂ ಇಂಥ ನಿದರ್ಶನಗಳನ್ನು ನೀಡಬಹುದು.

ತಾತ್ಪರ್ಯವಿಷ್ಟೆ: ಈ ಎಲ್ಲವೂ ಕವಿಗಳ ಅಸಾಮರ್ಥ್ಯವೆಂದೋ ಮೂಲ ಕೃತಿಯೊಳಗೆ ಅನವಶ್ಯಕವಾಗಿ ತಲೆ ತೂರಿಸುವ ಅಧಿಕ ಪ್ರಸಂಗತನವೆಂದೋ ತೋರಬಹುದು. ಏಕೆಂದರೆ ಈಗ ಯಾರಾದರೂ ಈ ಮಾದರಿಯನ್ನು ಅನುಸರಿಸಿದರೆ ಅವರ ಪ್ರಯತ್ನವನ್ನು ವಿವರಿಸುವ ಕ್ರಮ ಹೀಗೆಯೇ ಇರುತ್ತದೆ.

ಇನ್ನೂ ಒಂದು ಮುಖ್ಯ ಸಂಗತಿಯ ಕಡೆಗೆ ತಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಕನ್ನಡ ಕವಿಗಳು ಕಥಾನಕವನ್ನು ಯಾವ ಮೂಲದಿಂದಲೇ ತೆಗೆದುಕೊಂಡಿರಲಿ ಅದನ್ನು ಹೇಳುವ ಕ್ರಮದಲ್ಲಿ, ಅದಕ್ಕೊಂದು ಸಂಕಥನವನ್ನು ರೂಪಿಸುವಲ್ಲಿ ಮಾತ್ರ ಕನ್ನಡದ್ದೇ ಆದ ಬಗೆಯೊಂದನ್ನು ರೂಪಿಸಿಕೊಳ್ಳುತ್ತಿದ್ದರು. ನಮ್ಮ ಆಧುನಿಕ ಪೂರ್ವದ ಕವಿಗಳಲ್ಲೆಲ್ಲಾ ಇದೇ ವಿಧಾನ ಕಂಡುಬರುತ್ತದೆ. ನಿರೂಪಣೆಯಲ್ಲಿ ಕನ್ನಡದ ಆಂಗಿಕಗಳನ್ನು ಕಥನದ ಭಾಗವನ್ನಾಗಿ ಮಾಡುವುದು ಈ ವಿಧಾನದ ಒಂದು ಮುಖ್ಯ ಲಕ್ಷಣ. ಈ ಬಗೆಗೆ ಕೊಂಚ ವಿವರಣೆ ಅವಶ್ಯವೆಂದು ತೋರುತ್ತದೆ.

ಕೆಲವು ವರ್ಷಗಳ ಹಿಂದೆ ತಯಾರಾಗಿ ಬಿಡುಗಡೆಗೊಂಡ ಗಾಂಧಿ ಚಲನಚಿತ್ರದಿಂದ ಆಯ್ದುಕೊಂಡ ನಿದರ್ಶನದ ಮೂಲಕ ಈ ವಿವರಣೆಯನ್ನು ಮೊದಲು ಮಾಡುತ್ತೇನೆ. ಈ ಚಿತ್ರವನ್ನು ಎರಡು ಭಾಷೆಗಳಲ್ಲಿ ತಯಾರಿಸಲಾಯಿತು. ಇಂಗ್ಲಿಶ್ ಮತ್ತು ಹಿಂದಿ. ಚಿತ್ರವನ್ನು ತೆಗೆಯುವಾಗ ಬಳಸಿದ ಭಾಷೆ ಇಂಗ್ಲಿಶ್. ಅಂದರೆ ನಟರು ಅಭಿನಯಿಸುವಾಗ ಆಡಿದ ಮಾತು ಇಂಗ್ಲಿಶ್ ಭಾಷೆಯಲ್ಲಿತ್ತು. ಅನಂತರ ಮಾತುಗಳನ್ನು ಹಿಂದಿ ಭಾಷೆಗೆ ಡಬ್ ಮಾಡಲಾಗಿದೆ. ನನಗೆ ಮೊದಲು ಹಿಂದಿ ಆವೃತ್ತಿಯನ್ನು ನೋಡುವ ಅವಕಾಶ ಉಂಟಾಯಿತು. ಆಗ ಗಾಂಧಿ ಪಾತ್ರಧಾರಿಯ ಮಾತುಗಳಿಗೂ ಆಂಗಿಕಗಳಿಗೂ ಹೊಂದಿಕೆಯಾಗುತ್ತಿಲ್ಲವೆಂದು ಅನ್ನಿಸ ತೊಡಗಿತ್ತು. ಗಾಂಧಿ ಪಾತ್ರಧಾರಿಯ ಮಾತುಗಳನ್ನು ಹಿಂದಿ ಹೇಳುತ್ತಿದ್ದ ನಟನ ಧ್ವನಿಯಲ್ಲಿ, ಅಂದರೆ ವಾಚಿಕದಲ್ಲಿ ತೊಂದರೆ ಇದೆಯೆಂದು ಅನ್ನಿಸಲಿಲ್ಲ. ಮತ್ತೆ ಚಿತ್ರದ ಇಂಗ್ಲಿಶ್ ಆವೃತ್ತಿಯನ್ನು ನೋಡಿದಾಗ ಸಮಸ್ಯೆ ಎಲ್ಲಿದೆ ಎಂಬುದು ಗೋಚರವಾಗತೊಡಗಿತು. ಆ ನಟ ತನ್ನ ಸಂಭಾಷಣೆಗಳನ್ನು ಹೇಳುವಾಗ ಆಡಿದ ಭಾಷೆ ಇಂಗ್ಲಿಶ್. ಆ ಭಾಷೆಗೆ ಸಹಜವಾದ ಅಂಗಿಕಗಳನ್ನು ತನ್ನ ನಟನೆಯಲ್ಲಿ ಬಳಸಿದ್ದಾನೆ. ಆ ಅಂಗಿಕಗಳು ಹಿಂದಿ ಭಾಷೆಯವಲ್ಲ. ಎರಡೂ ಭಾಷೆಯ ಆಂಗಿಕಗಳಲ್ಲಿ ಇದ್ದ ವ್ಯತ್ಯಾಸಗಳು ಚಿತ್ರದಲ್ಲಿ ಗೊತ್ತಾಗುವಂತಿತ್ತು.

ಈ ನಿದರ್ಶನವನ್ನು ನೀಡಿದ ಉದ್ದೇಶವಿಷ್ಟು, ಒಂದು ಭಾಷೆಯ ಮಾತನ್ನು ಇನ್ನೊಂದು ಭಾಷೆಗೆ ತರುವಾಗ ಮೂಲಭಾಷೆಗೆ ಸಹಜವಾದ ಅಂಗಿಕಗಳನ್ನು ಅನುವಾದಗೊಳ್ಳುವ ಭಾಷೆಯ ಆಂಗಿಕಗಳಿಗೆ ಬದಲಾಯಿಸುವುದು ಅವಶ್ಯ. ಕನ್ನಡದ ಕವಿಗಳು ಈ ವಿಧಾನವನ್ನು ತಮ್ಮ ಕಾವ್ಯಭಾಷೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಒಂದು ನಿದರ್ಶನವನ್ನು ನೋಡೋಣ. ಇದೂ ಪಂಪನ ಉದಾಹರಣೆಯೇ. ಅವನ 'ವಿಕ್ರಮಾರ್ಜುನ ವಿಜಯ'ದ ಮೊದಲ ವೃತ್ತದಲ್ಲಿ ಬರುವ ಮಾತಿದು. ನಾರಾಯಣನನ್ನು

ಮತ್ತು ತನ್ನ ಆಶ್ರಯದಾತ ಅರಿಕೇಸರಿಯನ್ನು ಸಮನ್ವಯಗೊಳಿಸುವ ಉದ್ದೇಶ ಅವನಿಗೆ ಇರುವುದಷ್ಟೆ. ಮೊದಲ ಪದ್ಯದಲ್ಲೇ ಈ ಕೆಲಸ ಆರಂಭಿಸುತ್ತಾನೆ. ನಾರಾಯಣನು ಸಮುದ್ರಮಥನ ಕಾಲದಲ್ಲಿ ಲಕ್ಷ್ಮಿಯನ್ನು ಪಡೆದವನು. ಅರಿಕೇಸರಿಯಾದರೆ ಶ್ರೀಯನ್ನು ಅರಾತಿ ಸಾಧನ ಪಯೋನಿಧಿಯಲ್ಲಿ ಪಡೆಯುತ್ತಾನೆ. ನಾರಾಯಣ ಮತ್ತೊಮ್ಮೆ ಭೂಮಿಯನ್ನು ಬೇಡಿ ಪಡೆದವನು. ವಾಮನವಾಗಿ ಬಲಿಯಿಂದ ದಾನವಾಗಿ ಸ್ವೀಕರಿಸಿದನು. ಆದರೆ ಅರಿಕೇಸರಿ ಭೂಮಿಯನ್ನು 'ಜೀಯನೆ' ಬೇಡಿ ಪಡೆಯಲಿಲ್ಲ. ಈ ಬಗೆಯ ವ್ಯತ್ಯಾಸಗಳನ್ನು ಕವಿ ಹೇಳುತ್ತಾ ಮುಂದುವರಿಯುತ್ತಾನೆ. ನಮಗಿಲ್ಲಿ ಮುಖ್ಯವಾದುದು ಕವಿ ಬಳಸಿದ ಜೀಯನೆ ಎಂಬ ಪ್ರಯೋಗದ ಹಿಂದಿರುವ ಆಂಗಿಕ. ಕಥನದಲ್ಲಿ ಭಾಷಿಕವಾಗಿ ಈ ಆಂಗಿಕಗಳು ಮೂಲದಲ್ಲಿ, ಸಂಸ್ಕೃತದಲ್ಲಿ ಇಲ್ಲದಿರುವಂತವು. ಈ ವಿವರಣೆಗೂ ಭಾಷಾಂತರ ಭಾಷೆಯಾಗಿ ಕನ್ನಡದ ಲಕ್ಷಣಕ್ಕೂ ಏನು ಸಂಬಂಧವೆಂಬ ಪ್ರಶ್ನೆ ಏಳುವುದು ಸಹಜ. ಕನ್ನಡ ಕಾವ್ಯಭಾಷೆಯ ಲಕ್ಷಣವೇ ಪರೋಕ್ಷವಾಗಿ ಭಾಷಾಂತರ ಭಾಷೆಯಾಗಿ ಕನ್ನಡದ ಲಕ್ಷಣವೂ ಆಗಿದೆ. ಏಕೆಂದರೆ ಪ್ರಬಲ ಸಾಹಿತ್ಯ ಸಂಸ್ಕೃತಿಯ ಎದುರಿನಲ್ಲಿ ತನ್ನ ಲಕ್ಷಣಗಳನ್ನು ನಿರ್ವಚಿಸಿಕೊಳ್ಳುವ ಜವಾಬುದಾರಿ ಕನ್ನಡಕ್ಕೆ ಇದ್ದಿತು. ಹಾಗಾಗಿ ಭಾಷೆಯ ನೆಲೆಯಲ್ಲಿಯೇ ನಾವು ಪ್ರಶ್ನೆಯನ್ನು ಉತ್ತರಿಸುವುದು ಅವಶ್ಯಕ.

ನನ್ನ ಮಾತಿಗೆ ಸಮರ್ಥನೆಯಾಗಿ ಇನ್ನೊಂದು ಕಡೆಯಿಂದ ವಿಷಯವನ್ನು ಪರಿಶೀಲಿಸಲು ಯತ್ನಿಸುತ್ತೇನೆ. ಈಗ ಕನ್ನಡದಲ್ಲಿ ನಡೆಯುತ್ತಿರುವ ಭಾಷಾಂತರ ಚಟುವಟಿಕೆಯಲ್ಲಿ ಇಂಗ್ಲಿಶ್ ಆಕರ ಭಾಷೆಯಾಗಿ ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಂಡಿದೆ. ಹಲವಾರು ಐರೋಪ್ಯ ಭಾಷೆಗಳ ಸಾಹಿತ್ಯ ಕೃತಿಗಳು ಕನ್ನಡಕ್ಕೆ ಬರುತ್ತಿರುವುದು ಇಂಗ್ಲಿಶ್ ಮೂಲಕವೇ. ಈ ಪರಿಸ್ಥಿತಿ ಕಳೆದ ಶತಮಾನದಲ್ಲೇ ಮೊದಲಾಯಿತು. ಕನ್ನಡಕ್ಕೆ ಇಂಗ್ಲಿಶ್ ಕಿಟಕಿಯಾಯಿತು. ಈಗ ಜಗತ್ತಿನ ಹಲವು ಭಾಷೆಗಳ ಸಾಹಿತ್ಯ ಕೃತಿಗಳು ಇಂಗ್ಲಿಶ್ ಅನುವಾದಗಳ ಮೂಲಕವೇ ಕನ್ನಡಕ್ಕೆ ಅನುವಾದವಾಗುತ್ತಿವೆ. ಭಾರತೀಯ ಭಾಷೆಗಳ ವಿಷಯದಲ್ಲೂ ಇದು ನಿಜ. ಬಂಗಾಳಿ ಇಲ್ಲವೇ ಅಸಾಮಿ ಭಾಷೆಯ ಸಾಹಿತ್ಯ ಕೃತಿಗಳು ಮೊದಲು ಇಂಗ್ಲಿಶಿಗೆ ಅನುವಾದಗೊಂಡು ಅನಂತರ ಕನ್ನಡಕ್ಕೆ ಬರುತ್ತಿವೆ. ನಿಜವಾಗಿ ಜಗತ್ತಿನ ಅನುವಾದ ಭಾಷೆಯ ಅಗ್ರ ಪಟ್ಟ ಇಂಗ್ಲಿಶಿಗೇ ದೊರೆಯಬೇಕು. ಆದರೆ ಇಂಗ್ಲಿಶ್ ಈ ಪರಿಸ್ಥಿತಿಯನ್ನು ತನ್ನ ಮೂಗಿನ ನೇರಕ್ಕೇ ಬಳಸಿಕೊಂಡಿದೆ. ಇದಕ್ಕೆ ಎರಡು ನೆಲೆಗಳಿವೆ. ಮೊದಲನೆಯದು: ಇಂಗ್ಲಿಶ್‌ಗೆ ಇಷ್ಟು ಪ್ರಮಾಣದಲ್ಲಿ ಅನುವಾದ ನಡೆಯುತ್ತಿದ್ದರೂ ಅದು ಆ ಭಾಷೆಯ ಕೊರತೆಯನ್ನು ತುಂಬಿಕೊಳ್ಳುವುದಕ್ಕೆಂದು ಸಂಭವಿಸುತ್ತಿರುವ ಕ್ರಿಯೆಯೆಂದು ಯಾರೂ ಹೇಳುತ್ತಿಲ್ಲ. ಎರಡು: ಹೀಗೆ ತನ್ನ ಮೂಲಕ ಜಗತ್ತಿನ ಬಹು ಭಾಷೆಗಳ ಸಾಹಿತ್ಯ ಕೃತಿಗಳಿಗೆಲ್ಲ ಅಧಿಕೃತತೆಯನ್ನು ನೀಡುವ ಅಧಿಕಾರದ ಕೆಲಸವನ್ನು ಇಂಗ್ಲಿಶ್ ಸೂಕ್ಷ್ಮವಾಗಿ ಮಾಡುತ್ತಿದೆ. ಈ ಅಧಿಕೃತತೆಯನ್ನು ನೀಡುವ ಕೆಲಸ ಹಲವು ಸ್ತರಗಳಲ್ಲಿ ನಡೆಯುತ್ತಿರಬಹುದು. ಭಾಷೆಯ ನೆಲೆ ಕೂಡ ಅವುಗಳಲ್ಲಿ ಒಂದು. ಯಾವ ಭಾಷೆಯಿಂದಲೇ ಅನುವಾದವಾಗುತ್ತಿರಲಿ, ಆ ಎಲ್ಲ ಭಾಷೆಗಳ ಸಹಜ ಗುಣಗಳನ್ನು ತನ್ನ ಚೌಕಟ್ಟಿಗೆ ಸರಿಯಾಗುವಂತೆ ಪರಿವರ್ತಿಸಿಕೊಳ್ಳುತ್ತದೆ. ನಾವು ಮಾರ್ಕ್ವೆಜ್ ಅನ್ನು ಓದಲಿ, ಅಕ್ಮತೊವಾಳನ್ನು ಓದಲಿ, ಬ್ರೆಕ್ಟ್ ಅನ್ನು ಓದಲಿ, ರಿಲ್ಕ್

ಅನ್ನು ಓದಲಿ ಇಂಗ್ಲಿಶಿನ ಲಯಗಳಲ್ಲಿ ಓದುತ್ತೇವೆ. ನಮ್ಮ ವಿಶೇಷ ಪ್ರಯತ್ನಗಳ ಮೂಲಕ ಮಾತ್ರವೇ ಮೂಲ ಸ್ಪ್ಯಾನಿಶ್ ಅಥವಾ ರಶ್ಯನ್ ಅಥವಾ ಜರ್ಮನ್ ಲಯಗಳನ್ನು ಕೇಳಿಸಿಕೊಳ್ಳಬೇಕು. ಅಲ್ಲದಿದ್ದರೆ ನಮಗೆ ದೊರಕುವುದು ಇಂಗ್ಲಿಶ್ ಲಯಗಳು ಮಾತ್ರ. ಇಂಗ್ಲಿಶ್ ಓದುಗರಿಗಾಗಿ ಇದು ಸರಿಯಾದ ವಿಧಾನವೇ ಇರಬಹುದು. ಆದರೆ ಈ ಇಂಗ್ಲಿಶ್ ಅನುವಾದಗಳು ಜಗತ್ತಿನ ಬೇರೆ ಬೇರೆ ಭಾಷೆಗಳಿಗೆ ಅನುವಾದವಾಗಲು ಆಕರಗಳಾಗುವುದರಿಂದ ಆ ಭಾಷೆಗಳಿಗೆ ತಲುಪುವುದು ಇಂಗ್ಲಿಶ್ ಏನು ಕೊಡುವುದೋ ಅದು ಮಾತ್ರ. ಆ ಸಂದರ್ಭಕ್ಕೆ ಹಲವು ಆಯಾಮಗಳಿವೆ. ಕನ್ನಡಕ್ಕೆ ಸಂಬಂಧಿಸಿದಂತೆ ಒಂದೆರಡು ಸಂಗತಿಗಳನ್ನು ಮಾತ್ರ ನಾವೀಗ ಗಮನಿಸುವುದು ಸಾಧ್ಯ.

ಕನ್ನಡವೀಗ ನಿಜವಾಗಿ ತನ್ನ ಭಾಷಿಕ ಸಾಮರ್ಥ್ಯಗಳನ್ನು ಹೊರಹಾಕುವ ಅವಕಾಶಗಳನ್ನು ಕಳೆದುಕೊಂಡಿದೆ. ಇಂಗ್ಲಿಶ್ ಏನನ್ನು ದತ್ತವಾಗಿ ದಯಪಾಲಿಸುತ್ತದೋ ಅದನ್ನು ಮಾತ್ರ ಹಿಡಿದಿಟ್ಟುಕೊಳ್ಳಬೇಕಾದ ಸ್ಥಿತಿ ಈಗ ಇದೆ. ಈ ಪರಿಸ್ಥಿತಿಯಿಂದ ಹೊರಗೆ ಬರುವುದು ಹೇಗೆ ಎಂಬುದನ್ನು ಚರ್ಚಿಸಲು ಇಲ್ಲಿ ಅವಕಾಶಗಳಿಲ್ಲ. ಆದರೆ ಸಾವಿರ ವರ್ಷಗಳ ಕಾಲ ಅನುಭವಿಸಿದ ಬಿಡುಗಡೆಯ ಭಾವ ಈಗ ಇಲ್ಲವಾಗುತ್ತಿದೆ. ಮತ್ತೆ ಆಂಗಿಕಗಳ ನೆಲೆಗೆ ಹೋಗಿ ಚರ್ಚೆ ಮುಂದುವರೆಸುವುದಾದರೆ ಈಗ ನಮಗೆ ದೊರೆಯುತ್ತಿರುವ ಆಕರವೇ ಅಂಥ ಅವಕಾಶಗಳನ್ನು ಕನ್ನಡದಿಂದ ಕಸಿದುಕೊಂಡಿದೆ. ಅಥವಾ ಕನ್ನಡವು ಮಾಡಿಕೊಂಡ ಒಂದು ಸಾಂಸ್ಕೃತಿಕ ಆಯ್ಕೆಯಿಂದ ತನಗಿದ್ದ ಬಿಡುಗಡೆಯ ಅವಕಾಶಗಳನ್ನು ತಾನೇ ಕಳೆದುಕೊಂಡಿದೆ.

ಕನ್ನಡವು ಮಾಡಿಕೊಂಡ ಆ ಆಯ್ಕೆ ಯಾವುದು? ಸ್ವಲ್ಪ ಕಳೆದ ಶತಮಾನದ ಕೊನೆಯ ಭಾಗದ ಕೆಲವು ಚಟುವಟಿಕೆಗಳನ್ನು ಗಮನಿಸಿದರೆ ಒಂದು ಮುಖ್ಯ ಸಂಗತಿ ಗೊತ್ತಾಗುತ್ತದೆ. ಬಸವಪ್ಪ ಶಾಸ್ತ್ರಿಗಳು ಮೈಸೂರು ಅರಸರ ಆಸ್ಥಾನದಲ್ಲಿ ಕಾಳಿದಾಸನನ್ನು ಅನುವಾದಿಸುವ ಜೊತೆಗೆ ಶೇಕ್ಸ್ಪಿಯರ್ ಅನ್ನು ಕೂಡ ಅನುವಾದಿಸುತ್ತಿದ್ದರು. ಕಾಳಿದಾಸನ 'ಶಾಕುಂತಲ'ಕ್ಕೆ ಅವರಲ್ಲಿ ಎರಡು ಆವೃತ್ತಿಗಳಿದ್ದವು. ಒಂದು ಬಹುಮಟ್ಟಿಗೆ ಓದಿನ ಆವೃತ್ತಿಯಾದರೆ, ಇನ್ನೊಂದು ರಂಗದ ಆವೃತ್ತಿ(ಅದರಲ್ಲೂ ಕಂಪನಿ ನಾಟಕಗಳ ಮಾದರಿಗೆ ಹೊಂದುವಂಥದು) ಇವೆರಡರಲ್ಲಿ ಈಗ ನಾವು ನಮ್ಮ ಸಾಹಿತ್ಯ ಚರ್ಚೆಯ ಭಾಗವಾಗಿ ಓದು ಆವೃತ್ತಿಯನ್ನು ಉಳಿಸಿಕೊಂಡಿದ್ದೇವೆ. ರಂಗಪಠ್ಯ ಈಗ ಇಲ್ಲ. ಬಸವಪ್ಪ ಶಾಸ್ತ್ರಿಗಳಿಗೆ ಇಂಗ್ಲಿಶ್ ಬರುತ್ತಿರಲಿಲ್ಲ. ಇಂಗ್ಲಿಶ್ ಬಲ್ಲ ವಿದ್ವಾಂಸರಿಂದ 'ಒಥೆಲೊ' ನಾಟಕವನ್ನು ಓದಿಸಿ ಕೇಳಿಸಿಕೊಂಡು ಅದನ್ನು 'ಶೂರಸೇನ ಚರಿತ್ರೆ' ಎಂದು ಕನ್ನಡಕ್ಕೆ ತಂದರು. ತಂದರೆನ್ನುವ ಮಾತನ್ನು ಏಕೆ ಬಳಸಿದ್ದೇನೆಂಬುದು ಸ್ಪಷ್ಟವಾಗಿದೆ. ಈ ಅವತರಣಿಕೆಯನ್ನು ಕನ್ನಡ ಸಾಹಿತ್ಯ ಸಂಸ್ಕೃತಿ ದೂರೀಕರಿಸಿತು. ಈ ಎರಡು ಆಯ್ಕೆಗಳೇ ಕೆಲವು ಸೂಚನೆಗಳನ್ನು ನಮಗೆ ನೀಡುತ್ತವೆ. ಇಂಥದೇ ಇನ್ನೊಂದು ಸಂದರ್ಭವನ್ನು ಉಲ್ಲೇಖಿಸಬೇಕಾಗಿದೆ. ಹಟ್ಟಿಯಂಗಡಿ ನಾರಾಯಣ ರಾಯರು ಆಂಗ್ಲ ಪದ್ಯಗಳನ್ನು ಕನ್ನಡಕ್ಕೆ ತಂದುಕೊಟ್ಟರು. ಅವರ ಕ್ರಮದಲ್ಲಿ ಕನ್ನಡಕ್ಕೆ ಹೊಂದಿಸುವ ಯತ್ನಗಳು ಛಂದಸ್ಸಿನ ಆಯ್ಕೆಯಿಂದ ಹಿಡಿದು ಹಲವು ನೆಲೆಗಳಲ್ಲಿ ಸಂಭವಿಸುತ್ತವೆ. ಕನ್ನಡದ ಕವಿಯೊಬ್ಬನಿಗೆ ಸಹಜವಾಗಿ ಇರುವ ಅವಕಾಶಗಳನ್ನು ಅವರು ಬಳಸಿಕೊಂಡಿದ್ದಾರೆ. ಬಿ.ಎಂ. ಶ್ರೀಯವರ 'ಇಂಗ್ಲಿಶ್

ಗೀತೆಗಳ'ಲ್ಲೂ ಹೊಂದಿಸುವ ಯತ್ನವಿದೆ. ಆದರೆ ಮೂಲವನ್ನು ಮೀರುವ ಅವಕಾಶಗಳನ್ನು ಶ್ರೀಯವರು ಬಳಸಿಕೊಳ್ಳುವ ಬಗೆಯೇ ಬೇರೆ. ನಮ್ಮ ಸಾಹಿತ್ಯ ಸಂಸ್ಕೃತಿ ಬಿ.ಎಂ.ಶ್ರೀಯರ ಆಯ್ಕೆಗಳಿಂದ ನಿರ್ಧಾರವಾಗಿದೆ. ಈಗ ನಾವು ಮೂಲ ಮತ್ತು ಅನುವಾದಗಳ ಸಂಬಂಧವನ್ನು ಅಸಲು ನಕಲುಗಳ ಮಾದರಿಯಲ್ಲಿ ನೋಡುತ್ತಿದ್ದೇವೆ. ಆದರೆ ಕನ್ನಡ ಸೃಜನಪ್ರತಿಭೆ ಈ ಆಯ್ಕೆಗೆ ಪೂರ್ಣವಾಗಿ ಕಟ್ಟುಬಿದ್ದಿದೆ ಎಂದು ಹೇಳುವಂತಿಲ್ಲ. ಕನ್ನಡದಲ್ಲಿ ನಡೆಯುತ್ತಿರುವ ಅನುವಾದ ಕುರಿತ ತಾತ್ತ್ವಿಕ ಚರ್ಚೆಯನ್ನು ಮಾತ್ರ ಮೇಲೆ ಹೇಳಿದ ಆಯ್ಕೆಗಳು ನಿಯಂತ್ರಿಸುತ್ತಿವೆ.

ಈಗ ಮತ್ತೊಮ್ಮೆ ಇದೆಲ್ಲವನ್ನೂ ನಾವು ಚಿಂತನೆಗೆ ಗುರಿಪಡಿಸಬೇಕಾದ ಕಾಲಬಂದಿದೆ. ಕನ್ನಡದಲ್ಲಿ ಅನುವಾದಕ್ಕಾಗಿ ಬಳಸಲಾಗುತ್ತಿರುವ ಪ್ರಮಾಣಭಾಷೆಯ ಕಟ್ಟುಗಳನ್ನು ನಾವೀಗ ಮೀರಬೇಕಾಗಿದೆ. ದೇವನೂರರ 'ಒಡನಾಳ'ವನ್ನು ತಮಿಳಿಗೆ ಅನುವಾದಿಸಲು ಹೊರಟ ನನ್ನ ಗೆಳೆಯರೊಬ್ಬರು ತಮಿಳಿನ ಯಾವ ಉಪಭಾಷೆಗೆ ಅದನ್ನು ಅನುವಾದಿಸಬೇಕೆಂದು ಗಹನವಾಗಿ ಯೋಚಿಸುತ್ತಿದ್ದಾರೆ. ಕನ್ನಡದಲ್ಲಿ ನಾಟಕಗಳನ್ನು ಅನುವಾದಿಸಿಕೊಳ್ಳುವಾಗ ಮಾತ್ರ ಹೀಗೆ ಉಪಭಾಷೆಗಳ ಮೊರೆಹೋಗುವುದು ಕಂಡುಬರುತ್ತಿದೆ. ಕವಿತೆ, ಕತೆ ಕಾದಂಬರಿಗಳ ಅನುವಾದಕ್ಕೆ ಪ್ರಮಾಣಭಾಷೆಯೇ ಗತಿಯಾಗಿದೆ. ಬಿಹಾರಿನ ಆಂಚಲಿಕ ಭಾಷೆಯಲ್ಲಿ ಬರೆದ ಫಣೇಶ್ವರನಾಥ ರೇಣು ಅವರ 'ಮೈಲಾ ಆಂಚಲ್' ಕನ್ನಡದ ಶಿಷ್ಟ ಭಾಷೆಯಲ್ಲಿ ಅವತಾರ ಪಡೆದಿದೆ. ಅಂದರೆ ಕನ್ನಡದ ಅನುವಾದ ಭಾಷೆಗೆ ನಾವು ಹಾಕಿಕೊಂಡಿರುವ ಕಟ್ಟುಗಳನ್ನು ಈಗ ಮುರಿಯಬೇಕು. ಆಗಲೇ ಮತ್ತೊಮ್ಮೆ ಕನ್ನಡ ತನ್ನ ಅಸ್ಮಿತೆಯನ್ನು ಕಾಯ್ದುಕೊಳ್ಳುವುದು ಸಾಧ್ಯ. ಉಪಭಾಷೆಗಳ ಆಯ್ಕೆ ಇದಕ್ಕೆ ಒಂದು ವಿಧಾನ. ಇದಲ್ಲದೆ ಕನ್ನಡ ಬಳಕೆಯ ಸ್ವರೂಪದಿಂದಾಗಿ ಕಳೆದುಕೊಳ್ಳುತ್ತಿರುವ ತನ್ನ ಹಲವಾರು ವೈವಿಧ್ಯಗಳ ಮರುಗಳಿಕೆಯೂ ಅವಶ್ಯವಾಗಿದೆ. ಹರಿಹರ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ ಇವರೆಲ್ಲರೂ ತಂತಮ್ಮ ಕಾಲಗಳಲ್ಲಿ ಈ ಹೊಣೆಯನ್ನು ಹೊತ್ತವರೇ ಆಗಿದ್ದಾರೆ. ಭಾಷಾಂತರ ಭಾಷೆಯಾಗಿ ಕನ್ನಡ ಕಂಡುಕೊಂಡ ಬಿಡುಗಡೆಯ ಮಾರ್ಗಗಳನ್ನು ನಾವೀಗ ಗಂಭೀರವಾಗಿ ಅಧ್ಯಯನ ಮಾಡುವುದು ಅವಶ್ಯ. ಜೊತೆಗೆ ಆ ಮಾರ್ಗಗಳ ಅನುಸರಣೆ ಕೂಡ ಬೇಕಾಗಿದೆ. ಅನುವಾದದ ಸಿದ್ಧಾಂತಗಳು ಸಾಂಸ್ಕೃತಿಕ ರಾಜಕಾರಣದ ಭಾಗವಾಗಿರುತ್ತವೆ ಎನ್ನುವುದನ್ನು ಕಂಡುಕೊಂಡು ನಾವೀಗ ಅದೇ ಬಗೆಯ ರಾಜಕಾರಣ ಆಯ್ಕೆಗಳನ್ನು ಮಾಡಿಕೊಳ್ಳಬೇಕು.

ಭಾಷಾಂತರ: ಸಾಂಸ್ಕೃತಿಕ ನೆಲೆಗಳು

ಒಂದು ಸಾಹಿತ್ಯ ಕೃತಿಯ ಭಾಷಾಂತರ ಏಕೆ ಆಗಬೇಕು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವಲ್ಲಿಯೇ ಭಾಷಾಂತರದ ಸಾಂಸ್ಕೃತಿಕ ನೆಲೆಯೂ ಗೋಚರವಾಗುತ್ತದೆ. ಜಾಗತಿಕ ಸಾಹಿತ್ಯ ಪರಂಪರೆಗಳಲ್ಲಿ ಭಾಷಾಂತರ ಒಂದು ಅನಿವಾರ್ಯ ಸಾಹಿತ್ಯ ಚಟುವಟಿಕೆಯೆಂಬಂತೆ ನಡೆಯುತ್ತ ಬಂದಿದೆ. ಒಂದು ಭಾಷಾಸಾಹಿತ್ಯ ಪರಂಪರೆ ಇನ್ನೊಂದು ಭಾಷಾಸಾಹಿತ್ಯ ಪರಂಪರೆಗೆ ಪ್ರತಿಕ್ರಿಯಿಸುವ, ಅದರೊಡನೆ ಸಂವಾದ ಬೆಳೆಸುವ, ಸಂಪರ್ಕ ಸಾಧಿಸುವ ಪ್ರಕ್ರಿಯೆಯ ಒಂದು ಫಲಿತವನ್ನು ಭಾಷಾಂತರವೆನ್ನಬಹುದು.

ರೋಮನರು ಗ್ರೀಕ್‌ನೊಂದಿಗೆ, ಅರೇಬಿಯನ್ನರು ಗ್ರೀಕ್ ಹಾಗೂ ಲ್ಯಾಟಿನ್‌ನೊಂದಿಗೆ, ಯುರೋಪಿನ ವಿವಿಧ ಭಾಷೆಗಳು ಲ್ಯಾಟಿನ್‌ನೊಂದಿಗೆ ಸಂಪರ್ಕ ಸಾಧಿಸುವ ಮೂಲಕ ಪಾಶ್ಚಾತ್ಯ ಸಾಹಿತ್ಯದ ಭಾಷಾಂತರ ಪರಂಪರೆ ಬೆಳೆಯುತ್ತ ಬಂದರೆ ಪೌರಸ್ತ್ಯದೇಶಗಳಲ್ಲಿ ಅದಿನ್ನೂ ಸಂಕೀರ್ಣ ರೂಪದಲ್ಲಿ ಬೆಳೆಯಿತು. ಭಾರತದಲ್ಲೇ ಸಂಸ್ಕೃತ, ಪಾಲಿ, ಪ್ರಾಕೃತ ಹಾಗೂ ಇತರ ಹತ್ತಾರು ಭಾರತೀಯ ಭಾಷೆಗಳ ಸಾಹಿತ್ಯಪರಂಪರೆಗಳು ಇಂಥ ಸಂವಾದಗಳ ಮೂಲಕವೇ ಬೆಳೆದಿವೆ.

ಆಧುನಿಕ ವ್ಯಾಖ್ಯೆಗಳನ್ನೇ ನೆಮ್ಮಿ ನಿಂತರೆ ಒಂದು ಸಾಹಿತ್ಯ ಕೃತಿಯು ಭಾಷಾಂತರವೆಂಬ ಚಟುವಟಿಕೆಗೆ ಬಹು ದೊಡ್ಡ ಇತಿಹಾಸವಿಲ್ಲ. ನಾಗವರ್ಮ ಬಾಣನನ್ನು ಭಾಷಾಂತರಿಸಿದನೇ? ವಾದಿರಾಜನ ಕೃತಿಯ ಭಾಷಾಂತರ ಜನ್ನನ ಯಶೋಧರ ಚರಿತವೆನ್ನಬಹುದೇ? ನಮ್ಮ ಇಂದಿನ ಅರ್ಥದಲ್ಲಿ ಅಲ್ಲ. ಏಕೆಂದರೆ ನಾವು ಅಧಿಕೃತ ಪಾಠಕ್ಕೆ ಕಟ್ಟುಬಿದ್ದವರು. ಮೂಲ ಮತ್ತು ಭಾಷಾಂತರಗಳನ್ನು ಶ್ರೇಣೀಕರಣ ಮಾಡುವವರು. ಈ ಮಾತನ್ನು ವಿವರಿಸುತ್ತೇನೆ. ಎ ಕೃತಿಗೆ ಬಿ ಭಾಷಾಂತರ ರೂಪವೆನ್ನೋಣ, ಆಗ ನಮ್ಮ ಶರತ್ತುಗಳು ಹೀಗಿರುತ್ತವೆ.

1. ಬಿ ಎಷ್ಟರಮಟ್ಟಿಗೆ ಎ ಪಾಠವನ್ನು ಅನುಸರಿಸಿದೆ?
2. ಬಿ ಎಷ್ಟರಮಟ್ಟಿಗೆ ಎ ನೀಡುವ ಅನುಭವವನ್ನು ತಾನೇ ನೀಡಬಲ್ಲದು?
3. ಬಿ ಪಾಠದಲ್ಲಿ ಮಾರ್ಗಾಂತರಗಳಿದ್ದರೆ ಅದಕ್ಕೆ ಕಾರಣಗಳೇನು? ಅವು ಸಮರ್ಥನೀಯವೇ?

4. ಬಿ ನೀಡುವ ಅನುಭವ ಎ ಯ ಅನುಭವಕ್ಕಿಂತ ಭಿನ್ನವಾದರೆ ಅದಕ್ಕೆ ಕಾರಣಗಳೇನು?

ಈ ಶರತ್ತುಗಳ ಪಟ್ಟಿ ಇನ್ನೂ ದೊಡ್ಡದಿದೆ. ಆದರೆ ತಿರುಳು ಮಾತ್ರ ಒಂದೇ. ಬಿ ಕೃತಿಗೆ ಕಾರಣವಾದ ಭಾಷಾಂತರ ಚಟುವಟಿಕೆ ಏನಿದ್ದರೂ ಎ ನೀಡುವ ಅವಕಾಶದೊಳಗೇ ಕೆಲಸಮಾಡಬೇಕು ಹಾಗೂ ಅವಕಾಶಗಳನ್ನು ಮೀರಿದರೆ ಅದಕ್ಕೆ 'ಸಾಂಸ್ಕೃತಿಕ' ನೆಲೆಗಳ ಒತ್ತಾಸೆ ಇರಬೇಕು. ಎಂದರೆ ಸಾಂಸ್ಕೃತಿಕ ನೆಲೆಗಳು ಭಾಷಾಂತರಗಳ ಸಮರ್ಥನೆಗಾಗಿ ಬಳಕೆಯಾಗುವ ತಂತ್ರಗಳಂತೆ ತೋರುತ್ತವೆ. ಭಾಷಾಂತರಗಳು ಏಕೆ ನಡೆಯುತ್ತವೆ ಎಂಬ ಪ್ರಶ್ನೆಗಿಂತ ನಡೆದ ಭಾಷಾಂತರಗಳು ಏಕೆ ಹಾಗಿರುತ್ತವೆ ಎಂಬ ಪ್ರಶ್ನೆ ಮುಖ್ಯವಾಗಿ ಬಿಡುತ್ತದೆ. ಹಾಗೆ ನೋಡಿದರೆ ಇವೆರಡೂ ಮುಖ್ಯ ಪ್ರಶ್ನೆಗಳೇ. ಆದರೆ ಬೇರೆ ಬೇರೆ ಸಮಸ್ಯೆಗಳಿಂದ ಉದ್ಭವಗೊಂಡವು ಎಂಬುದನ್ನು ಮರೆಯಬಾರದು.

ಏಕೆ ಭಾಷಾಂತರ? ಈ ಪ್ರಶ್ನೆಗೆ ಎಲ್ಲ ಕಾಲಕ್ಕೂ ಸಲ್ಲುವ ಉತ್ತರಗಳಿಲ್ಲ. ಅಲ್ಲದೆ ವ್ಯಕ್ತಿಗತ ನೆಲೆಗಳಿಂದ ಈ ಪ್ರಶ್ನೆಗೆ ಉತ್ತರವನ್ನು ಹುಡುಕುವಂತಿದ್ದರೆ ಅದರ ಉಪಯುಕ್ತತೆ ನಮಗೆ ಕಡಿಮೆ. ಏಕೆಂದರೆ ಆಗ ನಮ್ಮ ಮುಖ್ಯ ಉದ್ದೇಶದಿಂದ ದೂರ ಸರಿದಂತಾಗುತ್ತದೆ. ಭಾಷಾಂತರಕ್ಕೆ ವೈಯಕ್ತಿಕ ತುರ್ತು ಇರುವುದಿಲ್ಲವೆಂದಲ್ಲ, ಆದರೆ ಅದು ನಮಗೆ ಸದ್ಯ ಮುಖ್ಯವಲ್ಲವೆಂದಷ್ಟೇ ತಿಳಿಯೋಣ. ಸಾಹಿತ್ಯ ಸಂದರ್ಭಗಳ ಮೂಲಕ ಮೇಲೆ ಹೇಳಿದ ಪ್ರಶ್ನೆಗೆ ಉತ್ತರ ಹುಡುಕುವುದೆಂದರೆ, ಈ ಸಂದರ್ಭಗಳು ಬದಲಾದಂತೆ ಉತ್ತರಗಳ ಸ್ವರೂಪಗಳೂ ಬದಲಾಗುತ್ತಿರುತ್ತವೆ.

ಭಾಷಾಂತರವನ್ನು ಒಂದು ಸಾಂಸ್ಕೃತಿಕ ಪ್ರಕ್ರಿಯೆಯ ಫಲಿತವೆನ್ನುವುದಾದರೆ ಆಗ ನಮ್ಮ ಚರ್ಚೆಯ ಆರಂಭಕ್ಕೆ ಒಂದು ಬಿಂದು ದೊರಕಿದಂತಾಗುತ್ತದೆ. ಒಂದು ಭಾಷಾಪರಂಪರೆ ತನ್ನ ಕೃತಿಸಮುದಾಯಕ್ಕೆ ಇನ್ನೊಂದು ಭಾಷೆಯ ಕೃತಿಯನ್ನು ತಂದುಕೊಳ್ಳುವ ಮೂಲಕ ಒಂದು ಪ್ರಕ್ರಿಯಾ ಸರಣಿಯನ್ನು ಮೊದಲು ಮಾಡಿರುತ್ತದೆ. ಸಾಮಾನ್ಯವಾಗಿ ನಾವು ತಿಳಿಯುವಂತೆ ಒಂದು ಭಾಷಾಸಾಹಿತ್ಯ ತನ್ನ ಕೊರತೆಗಳನ್ನು ತುಂಬಿಕೊಳ್ಳಲು ಇನ್ನೊಂದು ಭಾಷೆಯಿಂದ ಆಕೃತಿಗಳನ್ನು ಭಾಷಾಂತರಿಸಿಕೊಳ್ಳುತ್ತದೆಂದು ತಿಳಿಯುವುದು ತೀರ ಸರಳಗೊಳಿಸಿದ ವ್ಯಾಖ್ಯೆ. ಇಂಥ ಕಾರಣಗಳು ಇರುವುದಿಲ್ಲವೆಂದಲ್ಲ, ಇದ್ದರೂ ಗೌಣವಾಗಿರುತ್ತವೆ.

ಕನ್ನಡದ ಸಂದರ್ಭದಿಂದ ಕೆಲವು ನಿದರ್ಶನಗಳನ್ನು ಗಮನಿಸಿ ಮೇಲೆ ಹೇಳಿದ ಪ್ರಕ್ರಿಯಾ ಸರಣಿಯ ಸ್ವರೂಪವನ್ನು ತಿಳಿಯಲು ಯತ್ನಿಸಬಹುದು.

1. ಪಂಪ 'ಆದಿಪುರಾಣ'ವನ್ನು ಜಿನಸೇನರ 'ಪೂರ್ವಪುರಾಣ'ದ ಆಧಾರದಿಂದ ರಚಿಸಿದ. ಈ ಸಂದರ್ಭವನ್ನು ಇಂದಿನ ಅರ್ಥದಲ್ಲಿ ಭಾಷಾಂತರವೆನ್ನಲು ಬರುವುದಿಲ್ಲ. ಆದರೆ ಪಂಪ ಜಿನಸೇನನ ಪಠ್ಯವನ್ನು ತನ್ನ ಕೃತಿಯುದ್ದಕ್ಕೂ ಗಮನಿಸಿದ್ದಾನೆ. ಜಿನಸೇನನ ಪೂರ್ವಪುರಾಣ ಹಾಗೂ ಗುಣಭದ್ರನ ಉತ್ತರ ಪುರಾಣಗಳೆರಡೂ ಸೇರಿದ ಮಹಾಪುರಾಣ ಎಲ್ಲ ತೀರ್ಥಂಕರರ ಕಥೆಯನ್ನು ಹೇಳಿದರೆ, ಪಂಪ ಆದಿಜಿನ ಹಾಗೂ ಅವನ ಇಬ್ಬರು ಮಕ್ಕಳ ಕಥೆಗೆ ಸೀಮಿತಗೊಳ್ಳುತ್ತಾನೆ. ಈ ಆಯ್ಕೆಯ ಸೀಮಿತತೆಯೇ ಪಂಪನ ಒಂದು ಪ್ರಕ್ರಿಯೆಯಾಗಿದೆ.

ಪುರಾಣವನ್ನು ಕಾವ್ಯಾವಾಗಿಸುವುದರಲ್ಲಿ ಹಾಗೂ ಕನ್ನಡಕಾವ್ಯವನ್ನಾಗಿಸುವಲ್ಲಿ ಮತ್ತೊಂದು ಪ್ರಕ್ರಿಯೆ ಮೊದಲಾಗುತ್ತದೆ. ಮೂಲದ ಶ್ಲೋಕಬಂಧವನ್ನು ಚಂಪೂರೂಪಕ್ಕೆ ತಂದು, ಚಂಪೂವಿನ ಗದ್ಯಪದ್ಯಗಳ ವಿಂಗಡಣೆಯ ತರ್ಕವನ್ನು ಕಥನದ ವಿಭಿನ್ನ ನೆಲೆಗಳಿಗೆ ಸಂಯೋಜಿಸುವ ಮೂಲಕ ಪಂಪ ಕನ್ನಡ ಸಾಹಿತ್ಯ ಪರಂಪರೆಯ ಅತಿ ಮುಖ್ಯ ಸೃಜನೆಯನ್ನು ರೂಪಿಸಿದ್ದಾನೆ. ಭಾಷಾಂತರವೆಂಬುದು ಪಂಪನಲ್ಲಿ ಒಂದು ಅನುಸರಣೆಯ ನೆಲೆಯ ಕ್ರಿಯೆಯಾಗುವುದಿಲ್ಲ. ಕನ್ನಡ ಸಾಹಿತ್ಯ ಪರಂಪರೆಯ ಲಕ್ಷಣಗಳನ್ನು ನಿರ್ವಚಿಸಲು ಒಂದು ಮಾಧ್ಯಮವಾಗುತ್ತದೆ; ಆ ಮೂಲಕ ಪಂಪ ಭಾಷಾಂತರದ ಸಾಧ್ಯತೆಗಳನ್ನು ವಿಸ್ತರಿಸುತ್ತಿದ್ದಾನೆ.

2. ಎರಡನೆಯ ನಿದರ್ಶನ: 'ಪಂಪರಾಮಾಯಣ'. ವಿಮಲಸೂರಿಯ ಪ್ರಾಕೃತ ಮೂಲದಿಂದ ನಾಗಚಂದ್ರ ತನ್ನ ಕೃತಿಯನ್ನು ರಚಿಸಲು ಅವಶ್ಯವಾದ ಕಥನ ಭಿತ್ತಿಯನ್ನು ಪಡೆಯುತ್ತಾನೆ. ಕಥನದ ಅನುಕ್ರಮದಲ್ಲಿ ಮುಖ್ಯ ಬದಲಾವಣೆ ಇದೆ. ಮೂಲ ಕಥಾನಕ ರಾವಣನಿಂದ ಆರಂಭಗೊಂಡರೆ, ಪಂಪ ರಾಮಾಯಣ ವಿಶ್ರುತ ನಾಯಕನಾದ, ಅನನ್ಯನಾದ ರಾಮನನ್ನು ಕೇಂದ್ರಕ್ಕೆ ತರುತ್ತದೆ. ಹಾಗೆ ನೋಡಿದರೆ ಹೀಗೆ ರಾಮಚಂದ್ರ ಚರಿತೆಯನ್ನಾಗಿ ಪರಿವರ್ತಿಸಲು ನಾಗಚಂದ್ರನಿಗೆ ಮೂಲದಲ್ಲಿ ಏನೂ ಚೋದನೆ ಸಿಗದು. ಎಂದರೆ ಕನ್ನಡಕ್ಕೆ ಮೂಲವನ್ನು ಭಾಷಾಂತರಿಸುವಾಗ ಒಂದು ಸಾಂಸ್ಕೃತಿಕ ವ್ಯಾಖ್ಯೆಗಾಗಿ ಮುಖ್ಯಪಲ್ಲಟವನ್ನು ಮಾಡಿದ್ದಾನೆ. ಈ ಪಲ್ಲಟ ಯಾದೃಚ್ಛಿಕವಲ್ಲ. ಗಂಭೀರ ವ್ಯಾಖ್ಯೆಯನ್ನು ಬಯಸುವಂಥದು.

3. ಶೇಕ್ಸ್‌ಪಿಯರನ ಕೃತಿಗಳನ್ನು ಕನ್ನಡ ಸಾಹಿತ್ಯ ಪರಂಪರೆ ಒಳಗೊಂಡ ಕ್ರಮವನ್ನು ಮುಂದಿನ ನಿದರ್ಶನವನ್ನಾಗಿ ನೋಡೋಣ. ಇಂಗ್ಲಿಶನ್ನು ಓದಲೂ ಅರಿಯದ ಬಸವಪ್ಪಶಾಸ್ತ್ರಿಗಳು 'ಒಥೆಲೋ'ವನ್ನು 'ಭಾಷಾಂತರಿಸಿದ' ಕ್ರಿಯೆ, ನಮ್ಮ ಇಂದಿನ ಭಾಷಾಂತರದ ಹಿಂದಿನ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ನಗೆಗೆ, ಕನಿಕರಕ್ಕೆ ಕಾರಣವಾಗುತ್ತದೆ. ಆದರೆ ವಾಸ್ತವದಲ್ಲಿ ಹಾಗಾಗಬೇಕಿಲ್ಲ. ಸಂಚುಗಳ ಹಿನ್ನೆಲೆಯ ಒಥೆಲೋ, ಅರಮನೆಯ ಹಿನ್ನೆಲೆಯಲ್ಲಿ ಭಾಷಾಂತರಗೊಳ್ಳುವುದೂ, ಕಂಪನಿ ನಾಟಕಗಳಿಗಾಗಿ ರೋಮಿಯೋ ಜೂಲಿಯಟ್ ರಾಮವರ್ಮ ಲೀಲಾವತಿ ಯಾಗುವುದೂ ತೀರ ಆಕಸ್ಮಿಕವೇನಲ್ಲ. ಶೇಕ್ಸ್‌ಪಿಯರನ್ನು ನಮ್ಮ ಸಂಸ್ಕೃತಿ ಹೇಗೆ 'ಓದಲು' ಬಯಸುತ್ತಿತ್ತೆಂಬುದನ್ನು ಭಾಷಾಂತರಕ್ಕಾಗಿ ಆಯ್ದುಕೊಂಡ ಕೃತಿಯ ಹಾಗೂ ಭಾಷಾಂತರಗಳ ಸ್ವರೂಪದಿಂದಲೇ ತಿಳಿಯಲು ಹೊರಡಬೇಕು. ಶೇಕ್ಸ್‌ಪಿಯರ್ ತನ್ನ ಸುತ್ತಮುತ್ತಣ ಹಲವು ನಾಟಕ ಕಥೆಗಳನ್ನು ಹೀಗೆ ಎಲಿಜಬೆಥನ್ ಕಾಲಕ್ಕೆ ಹೊಂದಿಸಿ ಹೇಗೆ ತನ್ನ ನಾಟಕಗಳನ್ನಾಗಿಸಿದನೋ, ಹಾಗೆಯೇ ಕನ್ನಡ ಕೂಡ ಶೇಕ್ಸ್‌ಪಿಯರ್ ಅನ್ನು ಹೊಂದಿಸಿಕೊಳ್ಳುತ್ತಿತ್ತು. ಈ ಹೋಲಿಕೆ ಗುಣಾತ್ಮಕ ನೆಲೆಯಿಂದ ಹೊರಟಿಲ್ಲ. ಕೇವಲ ಪ್ರಕ್ರಿಯಾ ಸಾಮ್ಯವನ್ನು ಗುರುತಿಸುವ ಆಸಕ್ತಿಯನ್ನು ಹೊಂದಿದೆ. ಹೀಗೆ ಹಲವು ನಿದರ್ಶನಗಳು ಸಾಧ್ಯ.

ಭಾಷಾಂತರವೆಂಬ ಇಡೀ ಕ್ರಿಯೆ ವಿಸ್ತೃತ ಅರ್ಥದಲ್ಲಿ ಒಂದು ಸಾಂಸ್ಕೃತಿಕ ರಾಜಕಾರಣದ ಭಾಗ. ಇದು ಎಲ್ಲ ಕಾಲದಲ್ಲೂ ಎಲ್ಲ ದೇಶದಲ್ಲೂ ಒಂದಿಲ್ಲೊಂದು

ರೀತಿಯಿಂದ ಜಾರಿಯಲ್ಲಿರುತ್ತದೆ. ಸಂಸ್ಕೃತ_ಕನ್ನಡಗಳ ನಡುವೆ, ಇಂಗ್ಲಿಶ್–ಕನ್ನಡಗಳ ನಡುವೆ ನಡೆದಿರುವ ಏಕಮುಖೀಯ ಭಾಷಾಂತರಗಳನ್ನು ಗಮನಿಸುವುದು ಅಗತ್ಯ. ಕನ್ನಡಕ್ಕೆ ಇಂಗ್ಲಿಶ್ ಕೊಡುವ ಭಾಷೆ. ಭಾಷಾಂತರಕಾರು ಕನ್ನಡಿಗರು. ಕನ್ನಡ ಕೃತಿಗಳು ಇಂಗ್ಲಿಶ್‌ಗೆ ಅನುವಾದವಾಗುವ ಪ್ರಕ್ರಿಯೆ ಇದ್ದರೂ ಅದು ಇಂಗ್ಲಿಶಿನ ಅವಶ್ಯಕತೆಯೆಂಬಂತೆ ಮಂಡಿತವಾಗಿಲ್ಲ. ಕನ್ನಡವೇ ತನಗೆ ಅಧಿಕೃತತೆ ದೊರೆಯಲು ಇಂಗ್ಲಿಶ್ ರೂಪವನ್ನು ಪಡೆಯಲು ಹವಣಿಸುವಂತಿದೆ. ಇಲ್ಲಿಯೂ ಅನುವಾದಕರು ಬಹುಮಟ್ಟಿಗೆ ಕನ್ನಡಿಗರೇ ಆಗಿರುತ್ತಾರೆ. ಎರಡೂ ಸಮಾನಸ್ತರದ ಚಟುವಟಿಕೆಗಳಲ್ಲ. ಇಂಗ್ಲಿಶ್‌ನಿಂದ ಕನ್ನಡಕ್ಕೆ ಭಾಷಾಂತರಗೊಳ್ಳುವ ಕ್ರಿಯೆಯಲ್ಲಿ ಕನ್ನಡದ ಅನುಭವಲೋಕವನ್ನು ವಿಸ್ತರಿಸುವ ಅಪೇಕ್ಷೆಯನ್ನು ಮುಂದಿಡಲಾಗುತ್ತದೆ. ಆದರೆ ಇಂಗ್ಲಿಶಿಗೆ ಕನ್ನಡದಿಂದ ಅನುವಾದವಾಗುವುದು ಕನ್ನಡದ ಸೀಮಿತತೆಯನ್ನು ಮುರಿಯುವ ಹುನ್ನಾರವೆಂಬ ಅಪೇಕ್ಷೆಯನ್ನು ಮುಂದಿಡಲಾಗುತ್ತದೆ. ಏಕೆಂದರೆ ಆ ಮೂಲಕ ಕನ್ನಡ ಕೃತಿ ಬಹುಸಂಖ್ಯಾತ ಓದುಗರಿಗೆ ಲಭ್ಯವಾಗುತ್ತದೆ. ಜಗತ್ತಿನ ಹಲವು ಭಾಷೆಗಳ ಸಂದರ್ಭದಲ್ಲಿ ಇಂಗ್ಲಿಶ್ ಈಗ ಮೇಲೆ ಹೇಳಿದ ಪಾತ್ರವನ್ನು ವಹಿಸುತ್ತಿದೆ. ನಮ್ಮ ಸುತ್ತ ನಡೆಯುತ್ತಿರುವ ಸಾಹಿತ್ಯಕೃತಿಗಳ ಭಾಷಾಂತರಗಳು ಹೀಗೆ ಇಮ್ಮುಖ ಪ್ರಕ್ರಿಯೆಗೆ ಒಳಗಾಗುತ್ತಿವೆ. ಒಂದೆಡೆ ನಮ್ಮ ಸಾಧ್ಯತೆಗಳ ವಿಸ್ತರಣೆಯೆಂಬಂತೆ ತೋರಿದರೆ, ಇನ್ನೊಂದೆಡೆ ವಿಸ್ತಾರಗೊಳ್ಳುವ ಹಂಬಲದಂತೆ ತೋರುತ್ತದೆ. ಭಾಷಾಂತರ ತತ್ತ್ವಗಳನ್ನು ಕುರಿತು ನಮ್ಮ ಎಲ್ಲ ಸಾಂಪ್ರದಾಯಿಕ ತಿಳುವಳಿಕೆಗೆ ಈ ಪರಿಸ್ಥಿತಿ ಸವಾಲುಗಳನ್ನು ಒಡ್ಡುತ್ತದೆ.

ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಕೃತಿಗಳು ಭಾಷಾಂತರಗೊಳ್ಳುವ ಮೂಲಕ ಚಾಲನೆಗೆ ಬರುತ್ತವೆಂದು ಈ ಮೊದಲು ಹೇಳಲಾದ ಸಾಹಿತ್ಯಿಕ ಪ್ರಕ್ರಿಯೆ, ಈಗ ಮೊದಲೇ ತನ್ನ ಚಹರೆಗಳನ್ನು ಪಡೆದುಕೊಂಡಿದ್ದು ಅದರ ಅವಶ್ಯಕತೆಗಳ ಪೂರೈಕೆಗಾಗಿ ಭಾಷಾಂತರ ನಡೆಯುತ್ತದೆ. ಎಂದರೆ ಇದು ತಲೆಕೆಳಗಾದ ಸ್ಥಿತಿ. ಭಾರತೀಯ ಭಾಷೆಗಳ ಪರಿಸ್ಥಿತಿಯನ್ನೇ ಗಮನಿಸಿ ಕೆಲವು ವಿವರಗಳನ್ನು ಅರಿಯಬಹುದಾಗಿದೆ. ತೌಲನಿಕ ಸಾಹಿತ್ಯದ ವಿದ್ವಾಂಸರು ಇಂಗ್ಲಿಶ್ ಭಾಷಾಸಾಹಿತ್ಯವನ್ನು 'ಒಂದೇ ಭಾಷೆಯಲ್ಲಿ ಅಭಿವ್ಯಕ್ತಿ ಪಡೆದ ಹಲವು ಸಾಹಿತ್ಯ'ಗಳೆನ್ನುತ್ತಾರೆ. ಆಫ್ರಿಕನ್, ಅಮೆರಿಕನ್, ಕೆನೆಡಿಯನ್, ಆಸ್ಟ್ರೇಲಿಯನ್ ಹೀಗೆ ಹಲವು ಸಾಹಿತ್ಯಗಳು ಇಂಗ್ಲಿಶನ್ನು ಸಮಾನ ಭಾಷೆಯನ್ನಾಗಿ ಬಳಸುತ್ತವೆ. ಆದರೆ ಅವು ತಮಗೆ ತಾವೇ ಸ್ವತಂತ್ರ ಸಾಹಿತ್ಯಗಳು. ಭಾರತೀಯ ಭಾಷಾಸಾಹಿತ್ಯದ ಬಗ್ಗೆ ಮಾತಾಡುವಾಗ 'ಹಲವು ಭಾಷೆಗಳಲ್ಲಿ ಅಭಿವ್ಯಕ್ತವಾಗುವ ಒಂದೇ ಸಾಹಿತ್ಯ'ವೆಂಬ ಮಾತನ್ನು ಹೇಳಲಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಧ್ಯೇಯವಾಕ್ಯದಂತಿರುವ ಈ ಮಾತು ಭಾರತೀಯ ಸಾಹಿತ್ಯದ ವೈವಿಧ್ಯವನ್ನು ಕೇವಲ ಭಾಷಿಕ ವ್ಯತ್ಯಾಸಕ್ಕೆ ಮಿತಗೊಳಿಸಲು ಸಿದ್ಧ. ಈ ತರ್ಕವನ್ನು ಒಪ್ಪುವುದಾದರೆ ಭಾರತೀಯ ಭಾಷಾಸಾಹಿತ್ಯಕೃತಿಗಳ ನಡುವೆ ಭಾಷಾಂತರವೆಂಬುದು ಅಷ್ಟೇನೂ ಉಪಯುಕ್ತವಾದ ಚಟುವಟಿಕೆ ಎನಿಸದು. ಕನ್ನಡದಲ್ಲಿದ್ದರೇನು ಮರಾಠಿಯಲ್ಲಿದ್ದರೇನು ಅವೆರಡೂ ಒಂದೇ ಎಂದು ತಿಳಿಯುವುದಾದರೆ, ಆ ಎರಡೂ ಭಾಷೆಗಳ ನಡುವೆ ನಡೆಯುವ ಭಾಷಾಂತರಗಳಿಗೆ ಹೆಚ್ಚಿನ ಮಹತ್ವ, ಉಪಯುಕ್ತತೆಗಳಿರಲಾರದು. ಅದರಿಂದ ಎರಡೂ ಭಾಷೆಗಳ ಸಾಹಿತ್ಯಗಳಲ್ಲಿ

ಯಾವುದೇ ಗಮನಾರ್ಹ ಪ್ರಕ್ರಿಯೆಗಳು ಆರಂಭಗೊಳ್ಳಲಾಗದು. ಆದರೆ ಆಧುನಿಕ ಸಾಹಿತ್ಯದ ಆರಂಭಕಾಲದ ಚಿತ್ರ ಇದಕ್ಕೆ ಭಿನ್ನವಾಗಿದೆ. ಬಂಗಾಳಿ, ಮರಾಠಿ ಕಥಾಸಾಹಿತ್ಯದ ಭಾಷಾಂತರಗಳು ಕನ್ನಡದಲ್ಲಿ ಒಂದು ವಿಶಿಷ್ಟ ಸಾಹಿತ್ಯಪ್ರಕ್ರಿಯೆಗೆ ಕಾರಣವಾದುದನ್ನು ಈಗಾಗಲೇ ಗುರುತಿಸಲಾಗಿದೆ. ಆದರೂ ಸದ್ಯ ಭಾರತೀಯ ಭಾಷಾಸಾಹಿತ್ಯಗಳ ನಡುವಣ ಪರಸ್ಪರ ಭಾಷಾಂತರಗಳು ಕೇವಲ ಸೌಲಭ್ಯಗಳ ದೃಷ್ಟಿಯಿಂದ ಪ್ರೇರಿತವಾಗುತ್ತಿವೆ.

ಹಲವು ಸಾಹಿತ್ಯಗಳು ಇಂಗ್ಲಿಶ್ ಭಾಷೆಯಲ್ಲಿ ರಚನೆಯಾಗುತ್ತಿವೆಯೆಂಬ ಇನ್ನೊಂದು ನೆಲೆಯ ವಾದ ಪರಿಣಾಮದಲ್ಲಿ ಭಾಷಾಂತರವನ್ನು ಒಂದು ಬಹಿರಂಗ ಚಟುವಟಿಕೆಯೆಂಬುದನ್ನು ಒಪ್ಪಲಾರದು. ತಮ್ಮ ದೇಶಮೂಲದ ಭಾಷೆ ಯಾವುದೇ ಇರಲಿ ಉದಾಹರಣೆಗೆ, ಆಫ್ರಿಕನ್ ಲೇಖಕರು, ಇಂಗ್ಲಿಶಿನಲ್ಲಿ ಬರೆದರೆ ಆಗ ಅವರ ಸಾಹಿತ್ಯ ಇಂಗ್ಲಿಶ್ ಸಾಹಿತ್ಯವೆಂದೇ ಪರಿಗಣಿತವಾಗುತ್ತದೆ. ಅವರಲ್ಲೇ ನಡೆದಿರಬಹುದಾದ ಸಾಂಸ್ಕೃತಿಕ ಭಾಷಾಂತರ ನಗಣ್ಯವಾಗಿಬಿಟ್ಟಿರುತ್ತದೆ. ಈ ಬೃಹತ್ ಜಾಗತಿಕ ಸಮ್ಮೇಳನದ ಭಾಗವಾಗಲು ಎಲ್ಲ ಭಾಷಾಸಾಹಿತ್ಯಗಳೂ ಹಾತೊರೆಯತೊಡಗುವುದು ಸಹಜ. ಇಂಗ್ಲಿಶಿನಲ್ಲಿ ಆಕಾರ ತಳೆಯುವ ಮೂಲಕ ಮಾತ್ರ ಇದು ಸಾಧ್ಯ. ಆಫ್ರಿಕನ್ ಸಂದರ್ಭದಲ್ಲಿ ದೇಶಮೂಲದ ಲೇಖಕರು ತಾವೇ ಇಂಗ್ಲಿಶಿನಲ್ಲಿ ಬರೆದರೆ ಭಾರತೀಯ ಭಾಷಾಸಾಹಿತ್ಯಗಳ ಸಂದರ್ಭದಲ್ಲಿ ಇಂಗ್ಲಿಶಿಗೆ ಅನುವಾದಿಸುವ ದೇಶಮೂಲದ ಮಧ್ಯವರ್ತಿಯೊಬ್ಬರು ಅವಶ್ಯವಾಗುತ್ತಾರೆ.

ಈ ಮೇಲಿನ ಸ್ಥಿತಿಯನ್ನು ಮೀರಿ ನೇರವಾಗಿ ಇಂಗ್ಲಿಶ್‌ನಲ್ಲೇ ಬರೆದು ಭಾರತೀಯ–ಆಂಗ್ಲ ಸಾಹಿತ್ಯವೆಂಬ ಮಾದರಿಯನ್ನು ಬೆಳೆಸುವ ಪ್ರವೃತ್ತಿ ಈಗ ಅಂತಾರಾಷ್ಟ್ರೀಯ ನೆಲೆಯಲ್ಲಿ ಬಲವಾಗತೊಡಗಿದೆ. ಅಷ್ಟಿಷ್ಟು ಇದ್ದ ಭಾಷಾಂತರ ಚಟುವಟಿಕೆಯನ್ನೂ ನಿರಾಕರಿಸುವ ಸ್ಥಿತಿಯಿದು. ಹೊಸ ತಲೆಮಾರಿನ ಹತ್ತಾರು ಇಂಥ ಲೇಖಕರು ಚಲಾವಣೆಯ ನಾಣ್ಯಗಳಾಗಿದ್ದಾರೆ. ಭಾರತೀಯ ಭಾಷೆಗಳ ಸಾಹಿತ್ಯಕೃತಿಗಳು ಅನ್ಯ ಭಾರತೀಯ ಭಾಷೆಗಳಿಗಿಂತ ಇಂಗ್ಲಿಶಿಗೆ ಭಾಷಾಂತರವಾಗುವ ಪ್ರಕ್ರಿಯೆಗೆ ಮೇಲೆ ಹೇಳಿದ ಕಾರಣಗಳಿಂದ ಸಹಜವಾಗಿಯೇ ಮಹತ್ವ ಪ್ರಾಪ್ತವಾಗುತ್ತದೆ. ಈ ಪರಿಸ್ಥಿತಿಯ ಪರಿಣಾಮಗಳನ್ನು ಚರ್ಚಿಸಲು ಇಲ್ಲಿ ಅವಕಾಶಗಳಿಲ್ಲ. ಆದರೆ ಸಾಂಸ್ಕೃತಿಕ ರಾಜಕಾರಣದ ಫಲಿತವಾದ ಭಾಷಾಂತರ ಈಗ ಪ್ರಮಾಣೀಕರಣದ ಮಾಧ್ಯಮವಾಗಿದೆ. ಸಾಂಸ್ಕೃತಿಕ ಅನ್ವೇಷಣೆಯ ನೆಲೆಯಲ್ಲಿ ಅದಕ್ಕಿದ್ದ ಹೊಣೆಗಾರಿಕೆ ಈಗ ಕನಿಷ್ಠ ಪ್ರಮಾಣಕ್ಕೆ ಇಳಿದಿದೆ. ಕನ್ನಡದಲ್ಲೇ ಈ ಶತಮಾನದ ಆರಂಭದಲ್ಲಿ ಇಂಗ್ಲಿಶ್ ಅಲ್ಲದೆ ಹಲವು ಭಾರತೀಯ ಭಾಷೆಗಳಿಂದ, ಕೆಲವಾದರೂ ಯುರೋಪಿಯನ್ ಭಾಷೆಗಳಿಂದ ನೇರವಾಗಿ ಭಾಷಾಂತರ ಕ್ರಿಯೆ ನಡೆಯುತ್ತಿತ್ತು. ಈಗ ಹಾಗಿಲ್ಲ. ಭಾಷಾಂತರದ ಅವಶ್ಯಕತೆ ಹಾಗೂ ಹೊಣೆಗಾರಿಕೆಗಳು ಈಗ ಬೇರೆಯಾಗಿವೆ. ಇಂಥ ಸಂದರ್ಭದಲ್ಲಿ ಭಾಷಾಂತರವು ಉತ್ಸುಕತೆಗಿಂತ ಯಜಮಾನಿಕೆಯ ಭಾವವನ್ನು ಪ್ರಕಟಿಸುವ ಕ್ರಿಯೆಯಾಗುತ್ತದೆ. ಹಾಗೂ ಸೂಕ್ಷ್ಮತೆಗಳಿಗೆ ಎರವಾಗುವುದು ಸಾಧ್ಯ. ಇಂಥ ಏಕಪಕ್ಷೀಯ ಒತ್ತಡಗಳು ದೇಶೀಯ ಭಾಷಾಸಾಹಿತ್ಯದ ಸ್ವರೂಪದ ಮೇಲೆ ಅಷ್ಟೇನೂ ಸ್ವಾಗತಾರ್ಹವಲ್ಲದ ಪರಿಣಾಮಗಳನ್ನು ಬೀರುತ್ತವೆ. ಇಂಗ್ಲಿಶಿನಿಂದ ನಮ್ಮ ಭಾಷೆಗಳಿಗೆ

ಭಾಷಾಂತರಗೊಳ್ಳುವುದನ್ನು ಕರ್ತವ್ಯವೆಂಬಂತೆ, ಇಂಗ್ಲಿಶಿಗೆ ನಮ್ಮ ಭಾಷೆಗಳಿಂದ ಭಾಷಾಂತರವಾಗುವುದು ವಿಶಿಷ್ಟ ಸೌಲಭ್ಯವೆಂಬಂತೆ, ಇಂಗ್ಲಿಶಿನ ಮೂಲಕ ಅನ್ಯಭಾಷೆಗಳಿಂದ ಅನುವಾದವಾಗುವುದು ಅನಿವಾರ್ಯ ಸಂದರ್ಭವೆಂಬಂತೆ ನಾವೀಗ ತಿಳಿಯುತ್ತಿದ್ದೇವೆ. ಭಾಷಾಂತರವೆಂಬ ಚಟುವಟಿಕೆಯ ಈ ವಿಶಿಷ್ಟ ಸ್ಥಿತಿಯ ಮುಂದಿನ ಬೆಳವಣಿಗೆ ಏನಾದೀತೆಂಬುದನ್ನು ಕಾಯ್ದುನೋಡಬೇಕಾಗಿದೆ.

ಕನ್ನಡ : ಆತಂಕಗಳು

ಕಳೆದ ನಾಲ್ಕೈದು ವರ್ಷಗಳಿಂದ ಕನ್ನಡವನ್ನು ಕಳೆದು ಹೋಗುತ್ತಿರುವ ಭಾಷೆ, ಅಪಾಯ ಎದುರಿಸುತ್ತಿರುವ ಭಾಷೆ ಎಂದು ಗುರುತಿಸುವ ಆತಂಕದ ಮಾತುಗಳು ಕೇಳಿ ಬರುತ್ತಿವೆ. ಹಲವು ವೇದಿಕೆಗಳಲ್ಲಿ ಈ ಕುರಿತು ಚರ್ಚೆಗಳು ನಡೆದಿವೆ. ವಿನಾಶದ ಅಂಚಿನಲ್ಲಿರುವ ಭಾಷೆಗಳ ಪಟ್ಟಿಯಲ್ಲಿ ಕನ್ನಡವೂ ಇದೆ ಎಂಬ ಭಯಹುಟ್ಟಿಸುವ ಮಾತುಗಳು ಕೇಳಿಸುತ್ತಿವೆ. ಈ ಹಿನ್ನೆಲೆಯಲ್ಲಿ ಭಾಷಾನಾಶವನ್ನು ಕುರಿತು ಕೆಲವು ಮೂಲಭೂತ ಸಂಗತಿಗಳನ್ನು ತಿಳಿದುಕೊಳ್ಳುವ ಅಗತ್ಯವಿದೆ. ಭಾಷಾನಾಶವೆಂದರೆ ಒಂದು ಭಾಷೆಯನ್ನು ಬಳಸುವ ಜನಸಮುದಾಯ ತನ್ನ ಭಾಷೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುವುದು. ಇನ್ನೊಂದು ಭಾಷೆಯ ಮಡಿಲನ್ನು ಸೇರಿ ಆ ಭಾಷೆಯ ಭಾಷಿಕರಾಗುವುದು. ಇದು ಉಂಟಾಗುವುದು ಯಾವಾಗ? ಒಂದು: ಭಾಷೆಯನ್ನಾಡುವ ಜನರು ಸಂಖ್ಯೆಯಲ್ಲಿ ಕಡಿಮೆಯಾಗುತ್ತ ಕೊನೆಗೆ ಒಬ್ಬಿಬ್ಬರು ಉಳಿದು ಅನಂತರ ಅವರೂ ಮಾಯವಾಗಿ ಬಿಡುವುದು. ಎರಡು: ಒಂದು ಭಾಷಾಸಮುದಾಯ ಸಾಮಾಜಿಕ ಒತ್ತಡಗಳಿಂದಾಗಿ ತನ್ನ ಭಾಷೆಯನ್ನು ಬಿಟ್ಟುಕೊಟ್ಟು ಇನ್ನೊಂದು ಅಧಿಕಾರದ ಭಾಷೆಯನ್ನು ಬಳಸಲು ತೊಡಗುವುದು. ಇಂತಹ ಸಂದರ್ಭಗಳಲ್ಲಿ ದ್ವಿಭಾಷಿಕ ಸನ್ನಿವೇಶಗಳು ಉಂಟಾಗುವ ಸಂದರ್ಭಗಳಿರುತ್ತವೆ. ಅನಂತರದಲ್ಲಿ ಈ ದ್ವಿಭಾಷಿಕರು ತಮ್ಮ ಮೂಲಭಾಷೆಯನ್ನು ಬಿಟ್ಟುಕೊಟ್ಟು ಅನ್ಯಭಾಷಿಕರಾಗಿ ಬಿಡುವುದು ಸಾಧ್ಯ. ಮೂರು: ಒಂದು ಭಾಷೆಯನ್ನಾಡುವ ಜನರು ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಯದೆ ಇನ್ನೊಂದು ಭಾಷಾಸಮುದಾಯದೊಡನೆ ವ್ಯವಹರಿಸಬೇಕಾಗಿ ಬಂದಾಗ ನಡೆಯುವ ಬದಲಾವಣೆಗಳಿಂದ ಪಿಜಿನ್ ಎಂಬ ಭಾಷಾಪ್ರಭೇದ ಸಿದ್ಧಗೊಳ್ಳುತ್ತದೆ. ಈ ಭಾಷಿಕರ ಮಕ್ಕಳು ತಮ್ಮ ಪಾಲಕರ ಭಾಷೆಯನ್ನು ಬಿಟ್ಟು ಈ ಪಿಜಿನ್ ಅನ್ನೇ ತಮ್ಮ ಮೊದಲ ಭಾಷೆಯನ್ನಾಗಿ ಆಯ್ಕೆಮಾಡಿಕೊಳ್ಳುತ್ತಾರೆ. ಕ್ರಿಯೊಲ್ ಎಂದು ಕರೆಯಲಾಗುವ ಈ ಭಾಷೆಯಲ್ಲಿ ಮೂಲಭಾಷೆಯ ವ್ಯಾಕರಣ ಮತ್ತು ಇನ್ನೊಂದು ಭಾಷೆಯ ಪದಕೋಶ ಇವೆರಡೂ ಸೇರಿಕೊಳ್ಳುತ್ತವೆ. ಈ ಸಂದರ್ಭದಲ್ಲಿ ಭಾಷಾನಾಶ ಸಂಭವಿಸಬಹುದು. ಕನ್ನಡವು ನಾಶವಾಗುತ್ತಿರುವ ಭಾಷೆ ಎಂದು ತಿಳಿಯಲು ಈ ಮೇಲಿನ ಮೂರು ಸಂದರ್ಭಗಳಲ್ಲಿ ಯಾವುದು ಈಗ ಒದಗಿಬಂದಿದೆ ಎಂಬುದನ್ನು ಗಮನಿಸಿದರೆ ಅಂತಹ ಯಾವುದೇ ಸಂದರ್ಭಗಳೂ ಇಲ್ಲಿ ಒದಗಿವೆ ಎನ್ನಿಸುವುದಿಲ್ಲ.

ಅಲ್ಲದೆ ಜಗತ್ತಿನಾದ್ಯಂತ ಭಾಷೆಗಳು ಕಳೆದುಹೋಗುತ್ತಿರುವ, ನಾಶವಾಗುತ್ತಿರುವ ಪ್ರಮಾಣ ಹಿಂದೆಂದಿಗಿಂತ ಈಗ ಹೆಚ್ಚಾಗಿದೆ. ಆದರೆ ಹೀಗೆ ಕಳೆದುಹೋಗುತ್ತಿರುವ ಭಾಷೆಗಳು ಸಾಮಾನ್ಯವಾಗಿ ಅನ್ಯಭಾಷೆ ಸಂಸರ್ಗವಿಲ್ಲದೆ ಬದುಕುತ್ತಿರುವ ಆದಿವಾಸಿಗಳ ಭಾಷೆಗಳು. ಈ ಭಾಷೆಗಳ ಸಂಖ್ಯೆಯು ಸಾಕಷ್ಟು ದೊಡ್ಡದು. ಆದರೆ ಕನ್ನಡವು ಹೀಗೆ ಅನ್ಯಭಾಷೆಯ ಸಂಸರ್ಗವಿಲ್ಲದ ಭಾಷೆಯಲ್ಲ. ಇದೊಂದು ಪೌರಸಮಾಜದ ಭಾಷೆ. ಆದ್ದರಿಂದ ಈ ಕಾರಣದಿಂದಲೂ ಕನ್ನಡವು ನಾಶವಾಗುವ ಭಾಷೆ ಎನ್ನುವಂತಿಲ್ಲ. ಎತ್ನೋಲಾಗ್ ಸಂಸ್ಥೆಯ ವಿಭಾಗವೊಂದು ಅಳಿವಿನ ಅಂಚಿನಲ್ಲಿರುವ ಜಗತ್ತಿನ ಭಾಷೆಗಳ ಒಂದು ಮಾಹಿತಿಕೋಶವನ್ನು ತಯಾರಿಸುತ್ತಿದೆ. ಇದಲ್ಲದೆ ಟೆರ್ರಾ ಲಿಂಗ್ವಾ ಮತ್ತು ಲಿಂಗ್ವಿಸ್ಟಿಯರ್ ಎಂಬ ಸ್ವಾಯತ್ತ ವೇದಿಕೆಗಳು ಅಳಿವಿನ ಅಂಚಿನಲ್ಲಿರುವ ಭಾಷೆಗಳ ಬಗೆಗೆ ಮಾಹಿತಿ ಸಂಗ್ರಹಿಸಿವೆ. ಈ ಮಾಹಿತಿಕೋಶವು ಕೂಡಾ ಕನ್ನಡವನ್ನು ತನ್ನ ಪಟ್ಟಿಯಲ್ಲಿ ಸೇರಿಸಿಕೊಂಡಿಲ್ಲ.

ಹೀಗೆ ತಾರ್ಕಿಕ ಕಾರಣಗಳನ್ನು ಮುಂದಿಟ್ಟು ಕನ್ನಡ ಅಪಾಯದ ಅಂಚಿನಲ್ಲಿಲ್ಲ ಎಂದು ನಿರಾಳವಾಗಬೇಕೆಂದು ಹೇಳುತ್ತಿಲ್ಲ. ಕನ್ನಡಕ್ಕೇನೋ ಅಪಾಯವಿದೆ ಎಂಬ ಭಾವನೆ ಬರಲು ಕಾರಣಗಳೇನು? ಈ ಆತಂಕ ಮಂಡಿಸುವ ಜನರು ಹೇಳುವುದಿಷ್ಟು. ಒಂದು: ಕನ್ನಡದ ಬಳಕೆ ಕಡಿಮೆಯಾಗುತ್ತಾ ಹೋಗುತ್ತಿದೆ. ಎರಡು: ಕನ್ನಡದ ಜಾಗವನ್ನು ಇತರ ಭಾಷೆಗಳು, ಮುಖ್ಯವಾಗಿ ಇಂಗ್ಲಿಶ್ ಆಕ್ರಮಿಸಿಕೊಳ್ಳುತ್ತಿದೆ. ಮೂರು: ನಾವು ಬಳಸುತ್ತಿರುವ ಕನ್ನಡ ಕೂಡಾ ಶುದ್ಧವಾಗಿಲ್ಲ; ಅದರಲ್ಲಿ ಅಶುದ್ಧತೆಯ ಅಂಶಗಳು ಹೆಚ್ಚಾಗುತ್ತಿವೆ; ಇದು ಅವನತಿಯ ಸೂಚಕ. ಈ ಮೂರು ಆತಂಕಗಳನ್ನು ಒಂದೊಂದಾಗಿ ವಿಶ್ಲೇಷಣೆ ಮಾಡೋಣ. ಕನ್ನಡದ ಬಳಕೆಯ ವಲಯಗಳು ಕಡಿಮೆಯಾಗುತ್ತಿವೆ ಎನ್ನುವುದು ನಿಜ. ಇದಕ್ಕೆ ಸಾಮಾಜಿಕವಾದ ಮತ್ತು ಸಾಂಸ್ಕೃತಿಕವಾದ ಕಾರಣಗಳು ಹಲವಾರಿವೆ. ಅಲ್ಲದೆ ಹೀಗೆ ಬಳಕೆಯ ವಲಯಗಳು ಕುಗ್ಗುವುದಕ್ಕೆ ಹೊರಗಿನ ಒತ್ತಡಗಳು ಕಾರಣವಾಗಿರುವಂತೆ ಕನ್ನಡಿಗರ ಆಯ್ಕೆಗಳು ಕೂಡಾ ಪ್ರೇರಣೆ ನೀಡುತ್ತಿವೆ. ಒಂದು ಸಾಮಾನ್ಯ ನಿದರ್ಶನ ಗಮನಿಸಿ. ಕಳೆದ ನಾಲ್ಕೈದು ದಶಕಗಳಲ್ಲಿ ಜನರು, ಬಂಧುಗಳು, ಆಪ್ತರು, ಪರಸ್ಪರ ಸಂಪರ್ಕ ಬೆಳೆಸಲು ಭೇಟಿಯಾಗುತ್ತಿದ್ದರು. ಇಲ್ಲವೇ ಮಧ್ಯವರ್ತಿ ಜನರ ಮೂಲಕ ಸಂದೇಶ ಕಳಿಸುತ್ತಿದ್ದರು. ಆದರೆ ಅಂಚೆವ್ಯವಸ್ಥೆ ವ್ಯಾಪಕಗೊಂಡಂತೆ ಊರಿಂದೂರಿಗೆ ಪತ್ರಗಳನ್ನು ಬರೆಯುವ ಬಳಕೆ ಹೆಚ್ಚತೊಡಗಿತ್ತು. ವ್ಯಾವಹಾರಿಕವಾದ ಪತ್ರಗಳು, ಸಮಾಚಾರದ ಪತ್ರಗಳು, ಮಾಹಿತಿ ನೀಡುವ ಪತ್ರಗಳು, ಆಪ್ತ ಪತ್ರಗಳು ಹೀಗೆ ಹಲವು ಹತ್ತು ಬಗೆಯ ಪತ್ರಗಳು ಜನರ ನಡುವೆ ಸಂಪರ್ಕ ಸೇತುಗಳಾಗಿದ್ದವು. ಪತ್ರಗಳು ಎಂದರೆ ಭಾಷೆಯ ಬಳಕೆಯ ಒಂದು ಬಗೆ ತಾನೇ?. ಎಷ್ಟೋ ವೇಳೆಗಳಲ್ಲಿ ಅನಕ್ಷರಸ್ಥರು ಬರೆಯಬಲ್ಲವರ ಮೂಲಕ ಈ ಪತ್ರ ಸಂಪರ್ಕವನ್ನು ಬಳಸುತ್ತಿದ್ದರು. ಸಂಪರ್ಕ ಸಾಧನಗಳ, ತಂತ್ರಜ್ಞಾನದ ಪಲ್ಲಟ ನಡೆಯುತ್ತಿದ್ದಂತೆ ಜನರು ಫೋನ್ ಮಾಧ್ಯಮಕ್ಕೆ ಬದಲಾದರು. ಬರೆಹ ಮಾಧ್ಯಮದ ಪತ್ರದ ಜಾಗದಲ್ಲಿ ಟೆಲಿಫೋನ್, ಸೆಲ್‌ಫೋನ್‌ಗಳು ಬಂದು ಕುಳಿತವು. ಅಂದರೆ ಪತ್ರವ್ಯವಹಾರದ ವಲಯ ಈಗ ತೀವ್ರ

ಪ್ರಮಾಣದಲ್ಲಿ ಕುಗ್ಗಿ ಹೋಗಿದೆ. ಅತ್ಯಂತ ಅಧಿಕೃತ ದಾಖಲೆಗಳನ್ನು ಬಯಸುವ ಕಡೆಗಳಲ್ಲೂ ಇ-ಮೇಲ್‌ಗೆ, ವಾಯ್ಸ್-ಮೇಲ್‌ಗೆ ಮನ್ನಣೆ ದೊರಕಿದೆ. ಇಂಥಾ ನಿದರ್ಶನಗಳನ್ನು ಬೆಳೆಸುತ್ತಾ ಹೋಗಬಹುದು.

ಹಾಗೆ ನೋಡಿದರೆ ತಂತ್ರಜ್ಞಾನವು ಬಳಕೆಯ ವಲಯಗಳನ್ನು ಯಾವಾಗಲೂ ಕುಗ್ಗಿಸುತ್ತದೆ ಎಂದು ಆರೋಪಿಸುವಂತಿಲ್ಲ. ಅದನ್ನು ಹೆಚ್ಚಿಸಲೂಬಹುದು ಬಹುದೂರದ ಊರುಗಳಲ್ಲಿ ವಾಸಿಸುತ್ತಿರುವ ಆಪ್ತರು ಸಂಪರ್ಕಕ್ಕಾಗಿ ಪತ್ರ ಮತ್ತು ಫೋನ್‌ಗಳನ್ನು ಬಳಸುತ್ತಿದ್ದರು. ಪತ್ರಸಂಪರ್ಕ ಹೆಚ್ಚು ಸಮಯವನ್ನು ಬಯಸಿದರೆ, ಫೋನ್‌ಸಂಪರ್ಕ ಹೆಚ್ಚು ಹಣವನ್ನು ಬಯುಸುತ್ತಿತ್ತು. ಎರಡು ಬಗೆಗಳಿಂದಲೂ ಜನರು ತಮ್ಮ ಮಿತಿಗನುಗುಣವಾಗಿ ಸಂಪರ್ಕವನ್ನು ನಿಗದಿ ಮಾಡಿಕೊಳ್ಳುತ್ತಿದ್ದರು. ಆದರೆ ತಂತ್ರಜ್ಞಾನದ ನೆರವಿನಿಂದ ದೊರೆತ ಇ-ಮೇಲ್ ಎಂಬ ಅತಿಶೀಘ್ರದ ಮತ್ತು ಕನಿಷ್ಠ ಖರ್ಚಿನ ಸಂಪರ್ಕ ಒಂದು ಹೊಸ ಸೌಲಭ್ಯವನ್ನು ದೊರಕಿಸಿದೆ. ಸಂಪರ್ಕದ ಪ್ರಮಾಣಕ್ಕೆ ಈಗ ಮಿತಿಯೇ ಇಲ್ಲ.

ಇಂತಹ ನಿದರ್ಶನಗಳನ್ನು ಗಮನಿಸಿದಾಗ ಕನ್ನಡದ ಬಳಕೆಯ ವಲಯಗಳು ಕುಗ್ಗುತ್ತಿವೆ ಮತ್ತು ಅದಕ್ಕೆ ತಂತ್ರಜ್ಞಾನವೇ ಕಾರಣ ಎಂದು ಆರೋಪಿಸುವುದನ್ನು ಮರುಪರಿಶೀಲನೆ ಮಾಡಬೇಕಾಗುತ್ತದೆ. ಕನ್ನಡ ಬಳಕೆಯ ವಲಯಗಳನ್ನು ಔಪಚಾರಿಕ ಮತ್ತು ಅನೌಪಚಾರಿಕ ಎಂದು ವಿಭಜಿಸಿಕೊಂಡರೆ ಒಂದು ಸಂಗತಿ ಗೋಚರಿಸುತ್ತದೆ. ಬದಲಾಗುತ್ತಿರುವ ಸಂದರ್ಭದಲ್ಲಿ ಅನೌಪಚಾರಿಕ ವಲಯದಲ್ಲಿ ಕನ್ನಡದ ಬಳಕೆ ಹೆಚ್ಚಾಗುತ್ತಾ ಹೋದರೆ ಔಪಚಾರಿಕ ವಲಯಗಳಲ್ಲಿ ಮಿತಗೊಳ್ಳುತ್ತಾ ಹೋಗುತ್ತಿದೆ. ಅಷ್ಟಿಷ್ಟು ಬದಲಾವಣೆಗಳನ್ನು ಒಪ್ಪುವುದಾದರೆ, ಕನ್ನಡದ ಮಾತಿನ ವಲಯಗಳು ಹೆಚ್ಚುತ್ತಾ ಹೋಗುತ್ತಿದ್ದರೆ ಬರೆಹದ ವಲಯಗಳು ಕಡಿಮೆಯಾಗುತ್ತಿವೆ ಎನ್ನಬಹುದು.

ಎರಡನೇ ಆತಂಕ ಕನ್ನಡ ಜಾಗವನ್ನು ಬೇರೊಂದು ಭಾಷೆ ಆಕ್ರಮಿಸುತ್ತಿದೆ ಎನ್ನುವುದು. ಈ ಆತಂಕ ಕೇವಲ ಕನ್ನಡಕ್ಕೆ ಮಾತ್ರ ಸೀಮಿತವಾಗಿಲ್ಲ. ಜಗತ್ತಿನ ಹಲವು ಭಾಷೆಗಳು ಇಂತಹ ಆರೋಪಗಳನ್ನು ಮಾಡುತ್ತಿವೆ. ಜಗತ್ತಿನ ಅಲ್ಪಸಂಖ್ಯಾತ ಭಾಷೆಗಳ ಮತ್ತು ಅಲ್ಪಸಂಖ್ಯಾತರ ಭಾಷೆಗಳ ಬಗೆಗೆ ಅಧ್ಯಯನ ನಡೆಸುವ ವಿದ್ವಾಂಸರು ಭಾಷಾಹತ್ಯೆ ಎಂಬ ಪರಿಕಲ್ಪನೆಯನ್ನು ಬಳಸುತ್ತಿದ್ದಾರೆ. 'ಲಿಂಗ್ವಿಸೈಡ್' ಎಂಬುದಕ್ಕೆ ಸಂವಾದಿಯಾದ ಪದ 'ಭಾಷಾಹತ್ಯೆ'. ಭಾಷಾನಾಶ ಮತ್ತು ಭಾಷಾಹತ್ಯೆ ಪರಿಣಾಮದಲ್ಲಿ ಒಂದೇ ಆಗಿ ಕಂಡರೂ ವಿಧಾನಗಳು ಬೇರೆ ಬೇರೆ. ಭಾಷಾನಾಶ ಯಾರ ಆಯ್ಕೆಯೂ ಆಗಿರುವುದಿಲ್ಲ. ನಾವೀಗಾಗಲೇ ಗುರುತಿಸಿದಂತೆ ಎಷ್ಟೋ ಕಾರಣಗಳಿಂದ ಅದು ಸಂಭವಿಸುತ್ತದೆ. ಭಾಷಾಹತ್ಯೆ ಹಾಗಲ್ಲ. ಇದು ಇಚ್ಛಿತ ಕ್ರಿಯೆ. ಸೂಸೈಡ್, ಹೊಮಿಸೈಡ್, ಪಾಟ್ರಿಸೈಡ್, ಮುಂತಾದ ಪದಗಳಂತೆ, ಲಿಂಗ್ವಿಸೈಡ್ ಪದಕೂಡಾ. ಹತ್ಯೆ ಎಂಬ ಪದವೇ ಒಬ್ಬ ನಿಯೋಗಿಯನ್ನು ಗುರುತಿಸುತ್ತದೆ. ಭಾಷಾಹತ್ಯೆಯು ಒಂದು ಯೋಜಿತಕ್ರಿಯೆ. ಜಗತ್ತಿನಾದ್ಯಂತ ಹೀಗೆ ಅಲ್ಪಸಂಖ್ಯಾತ ದುರ್ಬಲ ಭಾಷೆಗಳನ್ನು ಕೊಲ್ಲುವ ಯತ್ನ ಯೋಜಿತವಾಗಿ ಮತ್ತು ಅವ್ಯಾಹತವಾಗಿ ನಡೆಯುತ್ತಿದೆ ಎಂದು ಕೆಲವು ವಿದ್ವಾಂಸರು

ವಾದಿಸುತ್ತಾರೆ. ಇಂತಹ ಹತ್ಯೆಗಳಿಗೆ ಕಾರಣವಾಗುವ ಭಾಷೆಯನ್ನಾಗಿ ಇಂಗ್ಲಿಶನ್ನು ಬೆರಳು ಮಾಡಿ ತೋರಿಸುತ್ತಾರೆ. ಈ ವಾದವನ್ನು ನಿರಾಕರಿಸುವವರೂ ಇದ್ದಾರೆ. ಆದರೆ ಇಂಗ್ಲಿಶ್ ಭಾಷೆ ತಂತಾನೇ ಒಂದು ಭಾಷೆಯನ್ನು ಹತ್ಯೆ ಮಾಡಲಾರದು. ಅಧಿಕಾರ ಸಂಬಂಧದಲ್ಲಿ ಇಂಗ್ಲಿಶ್ ಭಾಷೆಯನ್ನು ಬಳಸಿ ಒಂದು ಜನಾಂಗವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಬೇಕೆಂದು ಬಯಸುತ್ತಿರಬಹುದು. ಚಾರಿತ್ರಿಕವಾಗಿ ಇಂಗ್ಲಿಶ್ ಭಾಷೆಯನ್ನು ಹೀಗೆ ಹಿಡಿತದ ಸಾಧನವನ್ನಾಗಿ ಬಳಸಿದ್ದು ಪರಿಚಿತ ವಿಧಾನವೇ ಆಗಿದೆ. ಭಾರತದಲ್ಲೂ ಇಂಗ್ಲಿಶರು ಇಲ್ಲಿನ ಜನತೆಗೆ ಇಂಗ್ಲಿಶ್ ಶಿಕ್ಷಣವನ್ನು ನೀಡಲು ಬಯಸಿದ್ದು ಎರಡು ಕಾರಣಗಳಿಂದ. ಒಂದು: ಆಡಳಿತ ನಡೆಸಲು ತಮಗೆ ನೆರವಾಗುವ ಇಂಗ್ಲಿಶ್ ಬಲ್ಲ ಜನವರ್ಗವನ್ನು ಇಲ್ಲಿ ರೂಪಿಸುವುದು. ಎರಡು: ಇಂಗ್ಲಿಶ್ ಭಾಷೆಯನ್ನು ಈ ಜನರಿಗೆ ಅರಿವಿನ ಕಿಟಕಿಯನ್ನಾಗಿ ಮಾಡುವುದು. ಎರಡು ಉದ್ದೇಶಗಳೂ ಬೇರೆ ಬೇರೆ ರೀತಿ ನೆರವೇರಿದವು. ಆದರೆ ಜನತೆಯನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಬಳಸಲಾದ ಈ ಇಂಗ್ಲಿಶ್ ಎಂಬ ಅಸ್ತ್ರ. ಇಲ್ಲಿ ಕಲಿತವರ ಕೈಯಲ್ಲೇ ಒಂದು ಅಸ್ತ್ರವಾಗಿ ಬದಲಾಯಿತು ಎಂಬುದನ್ನು ಗಮನಿಸಬೇಕು. ಇದಕ್ಕೆ ಸಮಾಂತರವಾದ ಒಂದು ಪ್ರಸಂಗ ಷೇಕ್ಸ್‌ಪಿಯರ್‌ನ 'ದ ಟೆಂಪೆಸ್ಟ್' ನಾಟಕದಲ್ಲಿ ಬರುತ್ತದೆ. ಪ್ರಾಸ್ಪರೋ ತನ್ನ ರಾಜ್ಯದಿಂದ ಪರಿತ್ಯಕ್ತನಾಗಿ ಮಗಳೊಡನೆ ಜನರಿಲ್ಲದ ದ್ವೀಪದಲ್ಲಿ ವಾಸಿಸುವಾಗ ಅಲ್ಲಿನ ಮೂಲನಿವಾಸಿ ಕ್ಯಾಲಿಬನ್ ಅನ್ನು ತನ್ನ ಸೇವಕನನ್ನಾಗಿ ಮಾಡಿಕೊಳ್ಳುತ್ತಾನೆ. ಸೇವಕನನ್ನು ತನ್ನ ಅಧೀನದಲ್ಲಿ ಇರಿಸಿಕೊಳ್ಳಲು ಅವನಿಗೆ ತನ್ನ ಭಾಷೆಯನ್ನು ಕಲಿಸುತ್ತಾನೆ. ಘಟನೆಗಳ ವಿಪರ್ಯಾಸವೆಂಬಂತೆ ಕ್ಯಾಲಿಬನ್ ತನ್ನ ಒಡೆಯ ಪ್ರಾಸ್ಪರೋ ವಿರುದ್ಧ ತಿರುಗಿ ಬೀಳುತ್ತಾನೆ. ಆಗ ಅವನೇ ಕಲಿಸಿದ ಭಾಷೆಯನ್ನು ತನ್ನ ಬಂಡಾಯದ ಭಾಷೆಯನ್ನಾಗಿ ಪರಿವರ್ತಿಸಿಕೊಳ್ಳುತ್ತಾನೆ. ಅಂದರೆ ಯಾವ ಉದ್ದೇಶದಿಂದ ಒಂದು ಭಾಷೆಯನ್ನು ಹೇರಲಾಗುತ್ತದೋ ಅದಕ್ಕೆ ವಿರುದ್ಧವಾದ ಉದ್ದೇಶಕ್ಕಾಗಿ ಆ ಭಾಷೆ ಬಳಕೆಯಾಗಬಹುದು ಎಂಬುದನ್ನು ಈ ನಿದರ್ಶನಗಳು ಸೂಚಿಸುತ್ತವೆ. ಆದರೆ ವಾಸ್ತವವಾಗಿ ಇದು ಬಹಳ ಸಂಕೀರ್ಣವಾದ ಪ್ರಕ್ರಿಯೆ. ಇಂಗ್ಲಿಶ್ ಭಾಷೆ ತನ್ನ ಆಧಿಪತ್ಯವನ್ನು ಏಕಪಕ್ಷೀಯವಾಗಿ ಸಾಧಿಸುತ್ತದೆ ಎನ್ನುವ ಮಾತು ಅಷ್ಟು ಸರಳವಲ್ಲ, ಏಕೆಂದರೆ ಮಾರುಕಟ್ಟೆಯ ಶಕ್ತಿಗಳು ಇಂಗ್ಲಿಶನ್ನು ಅಸ್ತ್ರವಾಗಿ ಬಳಸುತ್ತಿವೆ ಎಂಬುದು ನಿಜ. ಆದರೆ ಕೊಳ್ಳುವ ಜನರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಮಾರುಕಟ್ಟೆಯ ಶಕ್ತಿಗಳ ಮುಖ್ಯ ಗುರಿಯೇ ಹೊರತು ಇಂಗ್ಲಿಶನ್ನು ಬಳಸುವುದಲ್ಲ. ಒಂದು ವೇಳೆ ಕೊಳ್ಳುವವರನ್ನು ಓಲೈಸಲು ಅವರ ಭಾಷೆಯನ್ನು ಬಳಸಬೇಕು ಎಂಬ ಪ್ರಸಂಗ ಒದಗಿದರೆ ಆಗ ಇಂಗ್ಲಿಶಿನ ಜೊತೆಗೆ ಈ ಭಾಷೆಯನ್ನೂ ಬಳಸಲು ಹಿಂಜರಿಯುವುದಿಲ್ಲ. ಜಾಗತೀಕರಣ ಪ್ರಕ್ರಿಯೆಯಲ್ಲಿ ಈ ಅಂಶ ಈಗ ಬಹಿರಂಗಗೊಳ್ಳುತ್ತಿದೆ. ಮಾಹಿತಿತಂತ್ರಜ್ಞಾನ ವಲಯದ ದೈತ್ಯಕಂಪನಿ ಮೈಕ್ರೋಸಾಫ್ಟ್ ಏಕಪಕ್ಷೀಯವಾಗಿ ಇಂಗ್ಲಿಶನ್ನು ಹೇರುತ್ತಿತ್ತು. ಆದರೆ ಈಗ ತಂತಾನೇ ಕನ್ನಡವೂ ಸೇರಿದಂತೆ ಜಗತ್ತಿನ ನೂರಾರು ಭಾಷೆಗಳನ್ನು ತನ್ನ ಕಾರ್ಯವಾಹಿಯಲ್ಲಿ ಭಾಗಿಯಾಗುವ ಅವಕಾಶ ಕಲ್ಪಿಸಿದೆ. ಈ ವಿವರಣೆಯಿಂದ ಇಂಗ್ಲಿಶನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸುವುದು ಸುಲಭವಾದರೂ, ಅದನ್ನು ಅಪರಾಧಿ ಎಂದು ಸಾಬೀತು ಮಾಡುವುದು ಕಷ್ಟವೆಂದು ಗೊತ್ತಾಗುತ್ತದೆ.

ಕನ್ನಡದ ಆತಂಕಗಳಿಗೆ ಇಂಗ್ಲಿಶ್ ಕಾರಣವೆಂಬುದು ಜಾಗತಿಕಶಕ್ತಿಯಾಗಿ ಇಂಗ್ಲಿಶನ್ನು ಪರಿಗಣಿಸಿದಾಗ ಅಷ್ಟು ನಿಜವಲ್ಲ ಎನ್ನಿಸುತ್ತದೆ. ಆದರೆ ದೇಶೀಯ ನೆಲೆಯಲ್ಲೇ ಚಾರಿತ್ರಿಕವಾಗಿ ಇಂಗ್ಲಿಶ್ ಪಡೆದುಕೊಂಡಿರುವ ಸಾಮರ್ಥ್ಯದಿಂದಾಗಿ ಅದು ದೇಶೀಯ ಭಾಷೆಗಳಿಗೆ ಎದುರಾಳಿ ಆಗಿರಬಹುದು. ಹಳೆಯ ಮಾದರಿಯನ್ನು ಗಮನಿಸುವುದಾದರೆ ಇಂಗ್ಲಿಶ್ ಈಗ ಸಂಸ್ಕೃತದ ಜಾಗದಲ್ಲಿ ಕುಳಿತಿದೆ. ಆಳುವ ವರ್ಗದ ಒತ್ತಾಸೆ ಆ ಭಾಷೆಗೆ ಇರುವುದು ಇದಕ್ಕೆ ಮುಖ್ಯ ಕಾರಣ. ಇದರಿಂದ ಸ್ಪಷ್ಟವಾಗುವ ಇನ್ನೊಂದು ಸಂಗತಿ ಎಂದರೆ ಆಳುವ ವರ್ಗದ ಗುಣಲಕ್ಷಣಗಳು ಬದಲಾದರೆ ಸಹಜವಾಗಿಯೇ ಇಂಗ್ಲಿಶಿನ ಸ್ಥಾನ ಕುಸಿಯುತ್ತದೆ. ಸದ್ಯದ ಸಂಭವನೀಯ ಪ್ರವೃತ್ತಿಯನ್ನು ಕಂಡರೆ ಇಂಗ್ಲಿಶಿನ ಜಾಗವನ್ನು ತುಂಬಲು ಸಿದ್ಧವಾಗಿ ನಿಂತಿರುವ ಭಾಷೆ ಎಂದರೆ ಹಿಂದಿ. ಕನ್ನಡ ಈ ಪ್ರಸಂಗವನ್ನು ಹೇಗೆ ಎದುರಿಸುತ್ತದೆ ಎಂಬುದನ್ನು ಮುಂದಿನ ದಶಕಗಳು ತೋರಿಸಿಕೊಡಲಿವೆ.

ಮೂರನೆಯ ಆತಂಕವೆಂದರೆ ಕನ್ನಡ ಭಾಷೆ ಅಶುದ್ಧವಾಗುತ್ತಿದೆ; ತನ್ನ ಲಕ್ಷಣಗಳನ್ನು ಕಳೆದುಕೊಳ್ಳುತ್ತಿದೆ; ಇದರಿಂದಾಗಿ ಭಾಷೆ ನಾಶವಾಗುತ್ತದೆ ಎಂಬುದು. ಇದೊಂದು ಸರಳವಾದ ಗ್ರಹಿಕೆ. ಭಾಷೆಯ ಬಳಕೆಯ ಪ್ರಕ್ರಿಯೆಗಳನ್ನು ಅರಿಯದೆಯೇ ತೀರಾ ನೈತಿಕ ನೆಲೆಗಳಲ್ಲಿ ಸಂಗತಿಗಳನ್ನು ಗ್ರಹಿಸುವವರು ಆಡುವ ಮಾತು. ಭಾಷೆ ಅಶುದ್ಧವಾಗುವುದು ಎಂದರೇನು? ನಮಗೆ ಗೊತ್ತಿರುವ ಭಾಷೆಯ ತಾತ್ತ್ವಿಕತೆಯ ನೆಲೆಗಳು ಈ ಬಗೆಗೆ ಏನು ಹೇಳುತ್ತವೆ ನೋಡೋಣ.

ಭಾಷೆ ಎಂಬುದು ಒಂದು ಅಂತಸ್ಥ ಸಾಮರ್ಥ್ಯ. ಅದನ್ನು ನಾವು ಹೇಗೆ ಗಳಿಸಿಕೊಳ್ಳುತ್ತೇವೆ ಎಂಬ ಬಗೆಗೆ ಈಗ ಖಚಿತವಾದ ತಿಳುವಳಿಕೆ ಲಭಿಸಿದೆ. ಈ ಅಂತಸ್ಥ ಸಾಮರ್ಥ್ಯ ಒಮ್ಮೆ ಗಳಿಸಿದರೆ ಅದು ಕುಗ್ಗುವುದೂ ಇಲ್ಲ ವಿಸ್ತರಿಸುವುದೂ ಇಲ್ಲ. ಅದರ ನೆರವಿನಿಂದ ಸೀಮಿತ ಪರಿಕರಗಳನ್ನು ಉದಾ.ಗೆ ಧ್ವನಿ, ಪದ ಇವುಗಳನ್ನು ಬಳಸಿ ನಾವು ಜೀವನದುದ್ದಕ್ಕೂ ಅಪರಿಮಿತ ವಾಕ್ಯಗಳನ್ನು ಸೃಷ್ಟಿಸುತ್ತೇವೆ. ಇತರರು ಸೃಷ್ಟಿಸಿದ ವಾಕ್ಯಗಳನ್ನು ಅರ್ಥ ಮಾಡಿಕೊಳ್ಳುತ್ತೇವೆ. ಈ ವಾಕ್ಯಗಳು ಮೊದಲೇ ನಮ್ಮಲ್ಲಿ ಇರುವುದಿಲ್ಲ. ಅಂದರೆ ಅಂತಸ್ಥ ಸಾಮರ್ಥ್ಯ ಕೇವಲ ಒಂದು ಉತ್ಪಾದಕ ನೆಲೆಯ ಯಂತ್ರ. ಆವಿಷ್ಕಾರಗೊಂಡ ವಾಕ್ಯ ಈ ಉತ್ಪಾದಕ ಯಂತ್ರದ ಒಂದು ಸಾಧ್ಯತೆ. ಹೀಗಿರುವಾಗ ನಾವು ಅಶುದ್ಧ ಎಂದು ಗುರುತಿಸುವುದು ಈ ಅವಿಷ್ಕಾರದ ನೆಲೆಯ ವಾಕ್ಯಗಳನ್ನು ಮಾತ್ರ. ಅದಕ್ಕೆ ಕಾರಣವಾದ ಉತ್ಪಾದಕ ಯಂತ್ರವೇ ಅಶುದ್ಧವಾಗಿರುವುದು, ಅಥವಾ ಅದು ಕೇವಲ ಅಶುದ್ಧ ವಾಕ್ಯಗಳನ್ನು ಸೃಷ್ಟಿಸುವುದು ಸಾಧ್ಯವಿಲ್ಲ. ಒಂದು ಚಿಕ್ಕ ಪರೀಕ್ಷೆಯನ್ನು ಮಾಡಬಹುದು. ಒಂದು ವಾಕ್ಯ ಅಶುದ್ಧ ಎಂದು ನಮಗೆ ಗೊತ್ತಾಗುವುದು ಹೇಗೆ? ಅದರ ಶುದ್ಧ ರೂಪ ಎಂಬುದೊಂದಿದ್ದರೆ ಅದನ್ನು ನಮ್ಮ ಅಂತಸ್ಥ ಭಾಷಾಸಾಮರ್ಥ್ಯ ನಮಗೆ ತೋರಿಸಿಕೊಟ್ಟಿದೆ ಎಂದರ್ಥ. ಈ ಅಂತಸ್ಥ ಸಾಮರ್ಥ್ಯ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಲ್ಲ. ಎಲ್ಲರಿಗೂ ಸಮಾನವಾದುದು. ಆದ್ದರಿಂದ ತಾರ್ಕಿಕವಾಗಿ ಅಶುದ್ಧತೆಯ ಕಲ್ಪನೆಗೂ ಭಾಷಾಸಾಮರ್ಥ್ಯಕ್ಕೂ ಸಂಬಂಧ ಕಲ್ಪಿಸುವುದು ಸರಿಯಲ್ಲ.

ಆದರೆ ಅಂತಸ್ಥ ಸಾಮರ್ಥ್ಯಕ್ಕೂ ಬಳಕೆಯ ಸಾಮರ್ಥ್ಯಕ್ಕೂ ವ್ಯತ್ಯಾಸಗಳಿವೆ ಎಂಬುದನ್ನು ಈ ಅಧ್ಯಯನದಲ್ಲಿ ಬೇರೊಂದೆಡೆ ವಿವರಿಸಲಾಗಿದೆ ಈ ಬಳಕೆಯ ಸಾಮರ್ಥ್ಯವನ್ನು ವ್ಯಕ್ತಿಯು ನಿರಂತರವಾಗಿ ಬದಲಾಯಿಸಿಕೊಳ್ಳಬಹುದು, ವಿಸ್ತರಿಸಬಹುದು. ಬಳಸದೆಯೂ ಇರಬಹುದು. ಇದರಿಂದ ಅಂತಸ್ಥ ಸಾಮರ್ಥ್ಯಕ್ಕೆ ಯಾವ ಕುಂದೂ ಇರುವುದಿಲ್ಲ. ಮೊದಲೇ ಕನ್ನಡ ಬಲ್ಲ ಒಬ್ಬ ವ್ಯಕ್ತಿ, ಕನ್ನಡ ಮಾತಾಡದೆ ಕೇಳಿಸಿಕೊಳ್ಳದೆ ಹತ್ತು ವರ್ಷ ಅಜ್ಞಾತವಾಗಿ ಜೀವಿಸಿದ್ದಾರೆ ಎಂದುಕೊಳ್ಳಿ. ಆಗ ಅವರು ತಮ್ಮ ಬಳಕೆಯ ಸಾಮರ್ಥ್ಯವನ್ನು ನಿಷ್ಕ್ರಿಯಗೊಳಿಸಿಕೊಂಡಿದ್ದಾರೆ ಎಂದರ್ಥ. ಆದರೆ ಹತ್ತು ವರ್ಷದ ನಂತರವೂ ಅವರ ಅಂತಸ್ಥ ಕನ್ನಡ ಸಾಮರ್ಥ್ಯಕ್ಕೆ ಯಾವ ಊನವೂ ಆಗಿರುವುದಿಲ್ಲ.

ಈ ವಿವರಣೆಯಿಂದ ಒಂದು ಪ್ರಶ್ನೆ ನಮ್ಮ ಎದುರು ಬರುತ್ತದೆ. ಕನ್ನಡ ಅಶುದ್ಧವಾಗುವುದರಿಂದ ಅದು ನಾಶವಾಗುತ್ತದೆ ಎಂದು ಹೇಳುವುದು ಸರಿಯೇ? ಅಶುದ್ಧವಾದುದನ್ನು ಸದ್ಯಕ್ಕೆ ಅಶುದ್ಧವೆಂದು ಒಪ್ಪಿದರೂ ಅದು ಬಳಕೆಗೆ ಸಂಬಂಧಿಸಿದ ಸಮಸ್ಯೆ. ಅಂತಸ್ಥ ಸಾಮರ್ಥ್ಯಕ್ಕೆ ಸಂಬಂಧಿಸಿದ್ದಲ್ಲ. ಹೀಗಿರುವಾಗ ಅಶುದ್ಧತೆಯ ಪ್ರಮಾಣ ಹೆಚ್ಚಿದ ಮಾತ್ರಕ್ಕೆ ಕನ್ನಡಿಗರ ತಲೆಮಾರುಗಳ ಅಂತಸ್ಥ ಸಾಮರ್ಥ್ಯಕ್ಕೆ ಕುಂದಾಗುವುದು ಸಾಧ್ಯವಿಲ್ಲ. ಅಂದರೆ ತಾರ್ಕಿಕವಾಗಿ ಕನ್ನಡ ಬಲ್ಲ ಎಲ್ಲ ವ್ಯಕ್ತಿಗಳೂ ಪೂರ್ಣವಾಗಿ ನಾಶವಾದ ಹೊರತು ಕನ್ನಡ ನಾಶವಾಯಿತು ಎಂದು ಹೇಳಲು ಬರುವುದಿಲ್ಲ. ಹಾಗಿದ್ದಲ್ಲಿ ಈ ಅಶುದ್ಧತೆಯು ಪ್ರಭಾವ ಏನೂ ಇಲ್ಲವೇ, ನಮ್ಮಲ್ಲಿ ಅದು ಆತಂಕಕ್ಕೆ ಕಾರಣವಾಗಬಾರದೇ ಎಂಬ ಪ್ರಶ್ನೆ ಮುಂಚೂಣಿಗೆ ಬರುತ್ತದೆ. ಇದನ್ನು ಪರಿಹರಿಸಬೇಕಾದರೆ ಅಶುದ್ಧತೆ ಎಂದರೇನು ಎಂಬ ಪ್ರಶ್ನೆಯನ್ನು ಬಿಡಿಸಲು ಹೊರಡಬೇಕು.

ಅಶುದ್ಧತೆ ಎನ್ನುವುದು ಒಂದು ಸಾಮಾಜಿಕ ನೆಲೆಯ ಗ್ರಹಿಕೆ. ನಮ್ಮ ಸಮಾಜದ ರಚನೆಯಲ್ಲಿ ಇರುವ ಬಿರುಕುಗಳು ಹೊರಬರಲು ಹಲವು ರೀತಿಗಳಲ್ಲಿ ಯತ್ನಿಸುತ್ತವೆ. ಸಾಮಾಜಿಕವಾಗಿ ಮನ್ನಣೆ ಪಡೆದ ಜನವರ್ಗ ಹಾಗೆ ಮನ್ನಣೆ ಪಡೆಯದ ಜನವರ್ಗವನ್ನು ಗುರುತಿಸಲು ಈ ಅಶುದ್ಧತೆಯ ಸೂಚಕವನ್ನು ಬಳಸುತ್ತದೆ. ಹಿಂದೆ ಶಿಕ್ಷಿತರು, ಅಶಿಕ್ಷಿತರು ಎಂಬ ಭೇದವನ್ನು ಗುರುತಿಸಲು ಗ್ರಾಮ್ಯ ಎಂಬ ಪರಿಕಲ್ಪನೆಯನ್ನು ಬಳಸಲಾಗುತ್ತಿತ್ತು. ಈಗ ಸಾಮಾಜಿಕವಾಗಿ ಕೆಳಸ್ತರದ ಜನರನ್ನು ಗುರುತಿಸಲು ಈ ಅಶುದ್ಧತೆಯ ಸೂಚಕವನ್ನು ರೂಪಿಸಿಕೊಳ್ಳಲಾಗಿದೆ. ಈ ಪರಿಕಲ್ಪನೆಯಲ್ಲಿ ಮಾತಿಗೆ ಸಂಬಂಧಿಸಿದಂತೆ ಉಚ್ಚಾರಣೆಯ ನೆಲೆಯೂ, ಬರೆಹಕ್ಕೆ ಸಂಬಂಧಿಸಿದಂತೆ ಕಾಗುಣಿತದ ದೋಷಗಳೂ ಪರಿಗಣನೆಗೆ ಬರುತ್ತಿವೆ. ಉಚ್ಚಾರಣೆಯ ನೆಲೆಯಲ್ಲಿ ಪದಾದಿಯ 'ಹ' ಕಾರ ಲೋಪ, ಮಹಾಪ್ರಾಣಗಳ ಉಚ್ಚಾರಣೆಯ ಲೋಪ ಮತ್ತು ಸ,ಶ,ಷ ಗಳನ್ನು 'ಸ'ಕಾರವನ್ನಾಗಿ ಉಚ್ಚರಿಸುವುದು ಈ ಮೂರು ಅಂಶಗಳನ್ನು ಗುರುತಿಸಿಕೊಳ್ಳಲಾಗಿದೆ. ಕಾಗುಣಿತ ದೋಷಗಳು ಎರಡು ಬಗೆಯವು. ಒಂದು: ವ್ಯಕ್ತಿಗತ ಹಂತದ ದೋಷಗಳು. ಎರಡು: ವ್ಯಾಪಕವಾಗಿ ಬಹುಜನರು ನಿಯತವಾಗಿ ಮಾಡುವ ತಪ್ಪುಗಳು. ಮೊದಲನೆಯ ಬಗೆ ನಮಗೆ ಮುಖ್ಯವಲ್ಲ. ಎರಡನೆಯ ಬಗೆಯನ್ನು ಎಚ್ಚರಿಕೆಯಿಂದ ವಿಶ್ಲೇಷಿಸಬೇಕು. ಒಂದೇ ಬಗೆಯ ತಪ್ಪುಗಳನ್ನು ಒಂದೇ ಕಾಲದಲ್ಲಿ ಹಲವು ಜನರು ಮಾಡುತ್ತಿದ್ದರೆ ಅದಕ್ಕೆ ಬೇರೆ ಕಾರಣಗಳು ಇರಬೇಕು.

ಈ ಕಾರಣಗಳು ಎರಡು ರೀತಿಯಲ್ಲಿ ಇರಲು ಸಾಧ್ಯ. ಒಂದು: ಕನ್ನಡದ ಧ್ವನಿರಚನೆಯಲ್ಲಿ ಯಾವುದೋ ಒಂದು ಮುಖ್ಯ ಬದಲಾವಣೆ ನಡೆಯುತ್ತಿದ್ದು, ಆ ಬದಲಾವಣೆಯ ಪ್ರತೀಕವಾಗಿ ಈ ತಪ್ಪುಗಳು ನಡೆಯುತ್ತಿರಬಹುದು. ಎರಡು: ಕನ್ನಡ ಬರೆಯುವ ಎಷ್ಟೋ ಜನ ತಾವು ಬರೆಯುತ್ತಿರುವ ಪದಗಳ ಲಿಖಿತ ರೂಪವನ್ನು ಓದಿನಲ್ಲಿ ಕಣ್ಣಿನ ಮೂಲಕ ಗ್ರಹಿಸಿರುವುದಿಲ್ಲ. ಆದ್ದರಿಂದ ಲಿಖಿತ ರೂಪದ ಪರಿಚಯ ಇಲ್ಲದೆ ಅದನ್ನು ತಮ್ಮ ಉಚ್ಚಾರಣೆಯ ನೆಲೆಯಲ್ಲಿ ಬರೆಯಲು ಹೊರಟಾಗ ಹೊಸರೂಪವೊಂದು ಕಾಣಿಸಿಕೊಳ್ಳಬಹುದು. ಮೇಲುನೋಟಕ್ಕೆ ಇದು ಕಾಗುಣಿತದ ದೋಷವಾಗಿ ತೋರುತ್ತದೆ. ಆದರೆ ಅದರ ಕಾರಣಗಳು ಬೇರೆ. ಇದಲ್ಲದೆ ನಾವು ಅಶುದ್ಧವೆಂದು ಗುರುತಿಸುವ ಇತರ ಬಗೆಗಳೂ ಇಂಥವೇ ಕೆಲವು ಗೊಂದಲಗಳಿಂದ ಹುಟ್ಟಿಕೊಂಡಂಥವು. ಕನ್ನಡ ಬರೆವಣಿಗೆಯು ಪರ್ಯಾಯ ರೂಪಗಳನ್ನು ಒಪ್ಪಿಕೊಂಡು ಬಂದಿದೆ. ಒಂದೇ ಪದವನ್ನು ಒಂದಕ್ಕಿಂತ ಹೆಚ್ಚು ರೀತಿ ಬರೆಯುವ ಹಲವು ನಿದರ್ಶನಗಳಿವೆ. ಉದಾ.ಗೆ ನಂತರ, ಅನಂತರ; ಆದ್ದರಿಂದ, ಆದುದರಿಂದ; ಸದ್ಯ, ಸಧ್ಯ; ಇಂತಹ, ಇಂಥ ಹೀಗೆ ನೂರಾರು ಉದಾಹರಣೆಗಳನ್ನು ಪಟ್ಟಿಮಾಡಬಹುದು. ಬರೆವಣಿಗೆಯ ನೆಲೆಯಲ್ಲಿ ಅಶುದ್ಧತೆಯ ಕಲ್ಪನೆ ಒಂದು ರೀತಿಯಲ್ಲಿ ಕಾಣಿಸಿಕೊಂಡರೆ, ಮಾತಿನ ನೆಲೆಯಲ್ಲಿ 'ಅಚ್ಚ ಕನ್ನಡ' ಪದಗಳನ್ನು ಬೆರೆಸಿ ಮಾತನಾಡಿದರೆ ಕನ್ನಡದ ಕೊಲೆಯಾಯಿತು ಎಂದು ಉದ್ಗಾರ ತೆಗೆಯುತ್ತಾರೆ. ಆದರೆ ಶುದ್ಧಕನ್ನಡ ಎಂದು ಹೇಳಿ ಸಂಸ್ಕೃತಮಯವಾಗಿ ಮಾತನಾಡಿದರೆ ಅದು ಚಂದವೆಂದು ಒಪ್ಪಿಗೆ ಪಡೆಯುತ್ತದೆ. ಇವೆಲ್ಲವೂ ನಮ್ಮ ಅಶುದ್ಧತೆಯ ಕಲ್ಪನೆ. ಇದು ಸಾಮಾಜಿಕ ಪೂರ್ವಾಗ್ರಹಗಳಿಗೆ ಅನುಗುಣವಾಗಿ ರೂಪುಗೊಂಡಿರುವುದನ್ನು ತೋರಿಸುತ್ತದೆ.

ಕನ್ನಡ ನಾಶವಾಗುತ್ತಿದೆ ಎಂಬ ಆತಂಕ ವ್ಯಕ್ತಪಡಿಸುವವರು ಮಂಡಿಸಿದ ವಾದದ ತರ್ಕವನ್ನು ಗಮನಿಸಿದರೆ ಈ ಆತಂಕಕ್ಕೆ ಕಾರಣವಿಲ್ಲ ಎಂದು ತಿಳಿದಿದ್ದೇವೆ. ಹಾಗಿದ್ದರೆ ಕನ್ನಡ ನಿರಾತಂಕವಾಗಿದೆಯೇ? ಈ ಪ್ರಶ್ನೆ ಜಟಿಲವಾದುದು. ಚರಿತ್ರೆಯಲ್ಲಿ ದುರ್ಬಲ ಭಾಷಾಸಮುದಾಯಗಳು ಪ್ರಬಲ ಭಾಷೆಯೊಂದರಿಂದ ಸುತ್ತುವರೆದಿದ್ದಾಗ ಹಲವು ರೀತಿಯಲ್ಲಿ ದಾಳಿಯನ್ನು ಎದುರಿಸಿರುವುದನ್ನು ಕಾಣುತ್ತೇವೆ. ಈಗಲೂ ಇಂತಹ ಹೋರಾಟಗಳು ಎಡೆಬಿಡದೆ ನಡೆಯುತ್ತಲೇ ಇವೆ. ದುರ್ಬಲ ಭಾಷೆಗಳವರು ಪ್ರಬಲ ಭಾಷೆಯ ಜೊತೆ ವ್ಯವಹರಿಸುತ್ತಾ ನಿಧಾನವಾಗಿ ತಮ್ಮ ಭಾಷೆಯ ಬದಲು ಪ್ರಬಲ ಭಾಷೆಯ ಆಡುಗರಾಗಿ ಬದಲಾಗುವುದು ಸಾಧ್ಯ. ಸಾಮಾನ್ಯವಾಗಿ ವಲಸೆಗಾರರಲ್ಲಿ ಈ ಪ್ರವೃತ್ತಿ ಕಾಣುತ್ತದೆ. ವಲಸೆ ಹೋದವರು ತಮ್ಮ ಭಾಷೆಯನ್ನು ಕಳೆದುಕೊಂಡರೂ ಮೂಲ ಭೂಪ್ರದೇಶದಲ್ಲಿ ಆ ಭಾಷೆಯ ಆಡುಗರು ಇದ್ದೇ ಇರುತ್ತಾರೆ. ವಲಸೆಯ ಸಂದರ್ಭಗಳೆಲ್ಲ ಭಾಷಾನಾಶಕ್ಕೆ ಕಾರಣವಾಗಬೇಕಿಲ್ಲ. ಮೂಲಭಾಷೆಯ ಒಂದು ಉಪಭಾಷೆಯಾಗಿ ಬದಲಾಗುವ ಸಾಧ್ಯತೆಯೂ ಇದೆ. ತಮಿಳುನಾಡಿನ ಮಧುರೈಯಲ್ಲಿ ನೆಲೆಸಿದ ಕನ್ನಡ ಭಾಷಾಸಮುದಾಯವೊಂದು ಎಂಟು ಶತಮಾನಗಳಿಂದ ತನ್ನ ಭಾಷೆಯನ್ನು ಕಾಯ್ದುಕೊಂಡಿದೆ. ಆದರೆ ಆ ಕನ್ನಡ ಗುರುತಿಸಲಾಗದಷ್ಟು ಬೇರೆಯಾಗಿ ಹೋಗಿದೆ. ಇಂತಹುದೇ ನಿದರ್ಶನಗಳು ಹಲವಾರಿವೆ. ವಲಸೆ ಹೋದ ಹಿಂದಿ

ಮಾತೃಭಾಷಿಕರು ಫಿಜಿ, ಮಾರಿಷಸ್, ದಕ್ಷಿಣ ಆಫ್ರಿಕಾ ಮುಂತಾದ ಪ್ರದೇಶಗಳಲ್ಲಿ ಹಲವು ಶತಮಾನಗಳಿಂದ ಭಾಷೆಯನ್ನು ಕಾಯ್ದುಕೊಂಡಿದ್ದಾರೆ. ಅಂದರೆ ಅಲ್ಲಿ ಹಿಂದಿಯ ಉಪಭಾಷೆಗಳು ಸೃಷ್ಟಿಯಾಗಿವೆ.

ಹೀಗಲ್ಲದೆ ಭಾಷೆಯು ನಿರಂತರ ಪರಿವರ್ತನೆಯನ್ನು ಹೊಂದುವುದರಿಂದ ತಟ್ಟನೆ ಅದರಲ್ಲಾಗುವ ಬದಲಾವಣೆಗಳು ಗೋಚರಿಸದಿದ್ದರೂ ಎಷ್ಟೋ ಶತಮಾನಗಳ ನಂತರ ಮೂಲಭಾಷೆಯ ಲಕ್ಷಣಗಳಿಗಿಂತ ಸಂಪೂರ್ಣ ಬೇರೆ ಎಂಬಂತೆ ಆಗಿಬಿಡು ತ್ತವೆ. ಇಂತಹ ಪ್ರಸಂಗಗಳನ್ನು ಯಾರೂ ಭಾಷಾನಾಶ ಎನ್ನುವುದಿಲ್ಲ. ಕನ್ನಡವೂ ಹೀಗೆ ನಿರಂತರವಾಗಿ ಬದಲಾಗುತ್ತಿದೆ. ಆ ಬದಲಾವಣೆಯ ಪರಿಣಾಮವಾಗಿ ಮುಂದೆಯೂ ಕನ್ನಡ ಇದ್ದೇ ಇರುತ್ತದೆ. ಮೊದಲೇ ಹೇಳಿದಂತೆ ಅದು ಗುರುತು ಹಿಡಿಯಲು ಸಾಧ್ಯವಾಗದಷ್ಟು ಬೇರೆಯ ಆಕಾರವನ್ನು ಪಡೆಯಬಹುದು. ಹೀಗೆ ಮೂಲ ಆಕಾರ ಕಳೆದುಹೋಗುವುದಷ್ಟಕ್ಕೆ ಆತಂಕ ವ್ಯಕ್ತಪಡುವುದು ಅಷ್ಟೇನೂ ಸರಿಯಾದ ಪ್ರತಿಕ್ರಿಯೆಯಲ್ಲ. ಏಕೆಂದರೆ ಒಂದು ಭಾಷೆ ಹೀಗೆ ಬೇರೆ ಬೇರೆ ಆಕಾರಗಳನ್ನು ಪಡೆಯುವುದು ಅದರ ಜೈವಿಕತೆಯ ಲಕ್ಷಣವಾಗಿದೆ.

ಇಂದಿನ ಕನ್ನಡ: ರಚನೆ ಮತ್ತು ಬಳಕೆ

ಕನ್ನಡ ಭಾಷೆಯ ಅಧ್ಯಯನ ಈಗ ಎರಡು ದಿಕ್ಕಿನಿಂದ ನಡೆಯುವುದು ಅವಶ್ಯವಾಗಿದೆ. ಆಧುನಿಕ ಹಾಗೂ ಪ್ರಸ್ತುತ ಚೌಕಟ್ಟಿನಲ್ಲಿ ಕನ್ನಡವನ್ನು (ಕನ್ನಡಗಳನ್ನು) ಇರಿಸಿ ನೋಡುವುದು, ವಿವರಿಸುವುದು ಒಂದು ನಿಟ್ಟಿನ ಕೆಲಸ. ಇಂಥ ವಿವರಣೆಗಳನ್ನು ಬಳಸಿ ಜಗತ್ತಿನ ಭಾಷಿಕ ರಚನೆಗಳನ್ನು ಅರಿಯುವುದು ಇನ್ನೊಂದು ನಿಟ್ಟಿನ ಕೆಲಸ. ಆಧುನಿಕ ಭಾಷಾಶಾಸ್ತ್ರದ ಸಿದ್ಧಾಂತಗಳಿಗೆ ದೊರಕುತ್ತಿರುವ ಭಾಷೆ ಹಾಗೂ ಭಾಷಿಕ ಸಂದರ್ಭಗಳು ಸೀಮಿತವಾಗಿವೆ. ಇಂಗ್ಲಿಶ್ ಇಲ್ಲವೇ ಯುರೋಪಿಯನ್ ಭಾಷೆಗಳಷ್ಟೇ ಮಾದರಿಗಳಷ್ಟನ್ನೇ ಒದಗಿಸುತ್ತಿದ್ದ ಸಂದರ್ಭಗಳು ಭಾಷಾಶಾಸ್ತ್ರದ ತಾತ್ತ್ವಿಕ ನೆಲೆಗಳನ್ನು ಸೀಮಿತಗೊಳಿಸುತ್ತಿದ್ದುದನ್ನು ಅರಿತ ಮೇಲೆ ದಕ್ಷಿಣ ಏಷಿಯಾದ ಭಾಷೆಗಳ ಬಗೆಗೆ ವಿಶೇಷ ಕುತೂಹಲ ಬೆಳೆಯಲು ಪ್ರಾರಂಭವಾಯಿತು. ಕನ್ನಡ ನಮಗೆಲ್ಲಾ ತಿಳಿದಂತೆ ಜಗತ್ತಿನ ಅತಿ ಪ್ರಾಚೀನ ಭಾಷೆಗಳಲ್ಲಿ ಒಂದು. ಅದರ ಚಾರಿತ್ರಿಕ ಬೆಳವಣಿಗೆಗಳೂ ದಾಖಲೆಗಳಲ್ಲಿ ಲಭ್ಯ. ಈ ಕಾರಣದಿಂದ ಕನ್ನಡದ ನಿದರ್ಶನಗಳು ಭಾಷಾಶಾಸ್ತ್ರಜ್ಞರಿಗೆ ಕುತೂಹಲಕಾರಿಯಾಗಿ ಕಂಡಿವೆ.

ಡಾ.ಎಸ್.ಎನ್. ಶ್ರೀಧರ್ ಅವರ ಸಂಪ್ರಬಂಧಗಳು ಈ ಎರಡೂ ನಿಟ್ಟಿನಲ್ಲಿ ಅಧ್ಯಯನಶೀಲವಾಗಿವೆ. ಇಂದಿನ ಕನ್ನಡವನ್ನು ಅದರ ನಾಡಿಮಿಡಿತವನ್ನು ಹಿಡಿಯಲು ಯತ್ನಿಸುತ್ತಿರುವ ಭಾಷಾಶಾಸ್ತ್ರಜ್ಞರಿವರು. ಜೊತೆಗೆ ಕನ್ನಡದ ನಿದರ್ಶನಗಳಿಂದ ಪ್ರಚಲಿತ ಭಾಷಾಶಾಸ್ತ್ರದ ವಾಗ್ವಾದಗಳಿಗೆ ಅವರು ಹೊಸ ನೆಲೆಗಳನ್ನು ಸೇರಿಸಿದ್ದಾರೆ. ಈ ಸಂಕಲನದಲ್ಲಿ ಸೇರಿದ ಅವರ ಲೇಖನದಿಂದಲೇ ಈ ಪ್ರಯತ್ನ ಪ್ರಾರಂಭವಾಗಿದೆ. ಸಂಪ್ರದಾನ ವಿಭಕ್ತಿ ಪ್ರತ್ಯಯವುಳ್ಳ ನಾಮಪದಗಳು (ಸಾಮಾನ್ಯವಾಗಿ ಚತುರ್ಥಿ ವಿಭಕ್ತಿ ಎನ್ನುತ್ತೇವೆ) ಕನ್ನಡದಲ್ಲಿ ವಾಕ್ಯದ ವಿಷಯಗಳಾಗಬಲ್ಲ ಸಾಧ್ಯತೆಗಳ ಬಗ್ಗೆ ಅವರು ಎತ್ತಿದ ಚರ್ಚೆ ಮುಖ್ಯವಾದುದು. ಅಂಥ ಸಾಧ್ಯತೆ ದಕ್ಷಿಣ ಏಷಿಯಾದ ಭಾಷೆಗಳಲ್ಲಿ ಕಾಣಸಿಗುವ ಲಕ್ಷಣವೆಂಬುದು ಅನಂತರದಲ್ಲಿ ಒಪ್ಪಿತವಾಯಿತು. ಇಂಥ ಇನ್ನೊಂದು ಅಧ್ಯಯನ ಈ ಸಂಕಲನದ ಕೊನೆಯ ಎರಡು ಲೇಖನಗಳಲ್ಲಿವೆ. ಧ್ವನಿರಚನೆ ಹಾಗೂ ವಾಕ್ಯರಚನೆಗಳ ನಡುವೆ ಪದರಚನೆಯೆಂಬ ವಿಶ್ಲೇಷಣಾ ಘಟ್ಟ ಅವಶ್ಯವೇ ಎಂಬ ಬಗ್ಗೆ ಚರ್ಚೆ ಭಾಷಾಶಾಸ್ತ್ರದಲ್ಲಿದೆ. ರೂಪಾಂತರ-ಸೃಜನಶೀಲ ವ್ಯಾಕರಣ (TG)ದ ಪ್ರವರ್ತಕರು. ಪದರಚನೆಯ ಹಂತದ ಉಪಯುಕ್ತತೆಯನ್ನು ಹಲವು ವಿಧದಲ್ಲಿ ಪ್ರಶ್ನಿಸಿದ್ದಾರೆ. ಆದರೆ ಕನ್ನಡದ ಲಭ್ಯ ಸಾಮಗ್ರಿ

ಭಾಷೆಯ ವಿವರಣೆಗೆ ಈ ನಡುವಣ ಹಂತ ಅತ್ಯವಶ್ಯವೆಂಬ ವಾದವನ್ನು ಬಲಗೊಳಿಸುತ್ತದೆ; ಅಥವಾ ಅದಕ್ಕೆ ಅವಶ್ಯ ಪುರಾವೆಗಳನ್ನು ಒದಗಿಸುತ್ತದೆ. ಇಂಥ ಸಾಮಗ್ರಿಯನ್ನು ಬಳಸಿಯೇ ಈ ಹೊತ್ತು ಭಾಷಾಶಾಸ್ತ್ರಜ್ಞರು ವ್ಯಾಕರಣದ ವಿವಿಧ ಸಾಧ್ಯತೆಗಳನ್ನು ಪರೀಕ್ಷಿಸುವುದು ಸಾಧ್ಯವಾಗಿದೆ.

ಇಂಥದೇ ಇನ್ನೊಂದು ಸಂಪ್ರಬಂಧ 'ಕನ್ನಡದಲ್ಲಿ ಉಪಸರ್ಗಗಳು.' ಚರ್ಚಾರ್ಹ ನಿಲುವನ್ನು ತಳೆದ ಸಂಪ್ರಬಂಧವಿದು. ದ್ರಾವಿಡ ವರ್ಗದ ಭಾಷೆಗಳಲ್ಲಿ ಪೂರ್ವಪ್ರತ್ಯಯಗಳಿಲ್ಲವೆಂಬುವುದು ನಾವು ತಿಳಿದದ್ದೇ. ಆದರೆ ಕನ್ನಡ ಪದರಚನೆಯ ನಿಯಮಗಳು ಇಂಥ ಪೂರ್ವಪ್ರತ್ಯಯಗಳ ಒಂದು ಚಿಕ್ಕವರ್ಗವನ್ನು ರೂಪಿಸುತ್ತಿದೆಯೆಂದು ಸಾಧಾರಣವಾಗಿ ಶ್ರೀಧರ್ ವಾದಿಸಿದ್ದಾರೆ. ಸಮಾಸ ರಚನೆಗೆ ಪರ್ಯಾಯವಾಗಿ ಬಳಕೆಯಾಗುವ ಈ ಪೂರ್ವಪ್ರತ್ಯಯೀಕರಣ ಪ್ರಕ್ರಿಯೆಯನ್ನು ಗುರುತಿಸುವ ಮೂಲಕ ಶ್ರೀಧರ್ ಮತ್ತೆ ಪದರಚನೆಯ ನೆಲೆಯ ಅಭ್ಯಾಸಕ್ಕೆ ಸಮರ್ಥನೆಯನ್ನು ಹುಡುಕುತ್ತಿದ್ದಾರೆ.

ಇನ್ನು ಇಂದಿನ ಕನ್ನಡದ ವಿವರಣೆಯ ಸಂಪ್ರಬಂಧಗಳು ನಮ್ಮ ನಡುವೆ ನಮ್ಮ ಮೂಲಕ ನಡೆಯುತ್ತಿರುವ ಬದಲಾವಣೆಗಳನ್ನು ಮಂಡಿಸುತ್ತವೆ. ಆಧುನೀಕರಣ, ಭಾಷಾಮಿಶ್ರಣ, ಭಾಷಾಅಭಿಸರಣ, ಭಾಷಾವ್ಯತ್ಯಯ, ಪ್ರಮಾಣೀಕರಣ, ದ್ವಿಭಾಷಿಕತೆ ಇವೇ ಮುಂತಾದ ಪರಿಕಲ್ಪನೆಗಳ ಮೂಲಕ ನಡೆಯುವ ಈ ಅಧ್ಯಯನಗಳು ಕನ್ನಡದ ಇಂದಿನ ನೆಲೆಗಳನ್ನು ಸಮರ್ಥವಾಗಿ ವಿವರಿಸುತ್ತವೆ. ಸ್ವೀಕರಣ ಪ್ರಕ್ರಿಯೆಯ ನಿಟ್ಟಿನಲ್ಲಿ ಸಂಸ್ಕೃತ ಮತ್ತು ಕನ್ನಡ, ಹಾಗೂ ಕನ್ನಡ ಮತ್ತು ಇಂಗ್ಲಿಶ್‌ಗಳ ಸಂಬಂಧವನ್ನು ವಿವರಿಸುತ್ತಿದ್ದ ಈವರೆಗಿನ ವಿಧಾನಗಳಿಂದ ಶ್ರೀಧರ್ ಹೊರಬರುತ್ತಾರೆ. ಸ್ವೀಕರಣವನ್ನು ಏಕಭಾಷಿಕರಿಗೆ ಸೀಮಿತಗೊಳಿಸಿ ದ್ವಿಭಾಷಿಕರಲ್ಲಿ ನಡೆಯುವ ನುಡಿಬೆರಕೆ ಹಾಗೂ ನುಡಿಪಲ್ಲಟಗಳನ್ನು ಭಾಷಾಸಾಮರ್ಥ್ಯದ ಒಂದು ಅಂಗವನ್ನಾಗಿ ಪರಿಗಣಿಸಲು ಸೂಚಿಸುತ್ತಾರೆ.

ಭಾಷಾಶಾಸ್ತ್ರಜ್ಞರಲ್ಲಿ ದ್ವಿಭಾಷಿಕತೆ ಹಾಗೂ ಬಹುಭಾಷಿಕತೆಯ ಬಗ್ಗೆ ಬಹು ದೊಡ್ಡ ಚರ್ಚೆ ಈಗ ನಡೆಯುತ್ತಿದೆ. ಸಾಮಾಜಿಕ ಹಾಗೂ ಮಾನಸಿಕ ಬೆಳವಣಿಗೆಯ ನೆಲೆಗಳಲ್ಲಿ ಈ ಚರ್ಚೆಗಳು ಮುಂದುವರೆದಿವೆ. ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಸಹಜವಾಗಿ ಪಡೆದುಕೊಳ್ಳುವ ಭಾಷಾಸಮುದಾಯಗಳ ಅಧ್ಯಯನ ಆಳವಾಗಿ ನಡೆದಂತೆಲ್ಲ ಈ ಚರ್ಚೆಗಳು ಹೊಸದಿಕ್ಕುಗಳತ್ತ ಸಾಗುತ್ತವೆ. ಶ್ರೀಧರ್ ಈ ಸಂಪ್ರಬಂಧಗಳಲ್ಲಿ ಒದಗಿಸಿರುವ ಮಾಹಿತಿ ಹಾಗೂ ವಿಶ್ಲೇಷಣೆ ಕೇವಲ ಕನ್ನಡದ ಮಟ್ಟಿಗೆ ಮಾತ್ರವಲ್ಲದೆ, ಒಟ್ಟಾರೆ ಭಾಷಾಶಾಸ್ತ್ರದ ಅಧ್ಯಯನಕ್ಕೂ ಮುಖ್ಯ ಕೊಡುಗೆಗಳಾಗಿವೆ.

ಆಧುನೀಕರಣದಂಥ ಭಾಷಿಕ ಪ್ರಕ್ರಿಯೆಯ ಪರಿಣಾಮಗಳನ್ನು ಕನ್ನಡದ ಮಟ್ಟಿಗೆ ಇನ್ನಷ್ಟು ಪ್ರಮಾಣದಲ್ಲಿ ವಿವರಿಸಿರುವುದು ಶ್ರೀಧರ್ ಅವರ ಅಧ್ಯಯನಗಳ ಮಹತ್ವವಾಗಿದೆ. ಧ್ವನಿ ಹಾಗೂ ಪದರಚನೆಗಳ ನೆಲೆಯಲ್ಲಿ ಅಷ್ಟಿಷ್ಟು ವಿವರಗಳು ಈವರೆಗೆ ಲಭ್ಯವಿದ್ದರೂ

ವಾಕ್ಯರಚನೆಯ ನೆಲೆಯಲ್ಲಿ ಆಧುನೀಕರಣದ ಪ್ರಭಾವಗಳನ್ನು ನಿಧಾನವಾಗಿ ತೆರೆದುತೋರಿಸಿದ ಈ ಅಧ್ಯಯನಗಳ ದಿಕ್ಕನ್ನು ಹಿಡಿದು ಮುಂದುವರಿಯುವ ಅವಶ್ಯಕತೆ ಹೆಚ್ಚಿದೆ.

ವಿಪರ್ಯಾಸದ ಸಂಗತಿಯೆಂದರೆ ಒಂದನ್ನು ಬಿಟ್ಟರೆ ಈ ಯಾವ ಲೇಖನಗಳನ್ನೂ ಶ್ರೀಧರ್ ಕನ್ನಡದಲ್ಲಿ ಬರೆದಿಲ್ಲ. ಇವೆಲ್ಲವೂ ಇಂಗ್ಲಿಶ್‌ನಿಂದ ಅನುವಾದಿತವಾಗಿದೆ. ಕನ್ನಡದ ಬಗ್ಗೆ ಆಧುನಿಕ ಅಧ್ಯಯನಗಳು, ಹೀಗೆ ಕರ್ನಾಟಕದ ಹೊರಗೆ ಇಂಗ್ಲಿಶ್ ಭಾಷೆಯ ಮೂಲಕ ಮಂಡಿತವಾಗುತ್ತಿವೆ. ವಿಲಿಯಂ ಬ್ರೈಟ್, ಜಾನ್ ಗಂಫರ್ಜ್, ಮಾರ್ಕ್ ಆರೋನಾಫ್, ಹೆರಾಲ್ಡ್ ಶಿಫ್‌ಮನ್ ಮುಂತಾದವರು ಕನ್ನಡ ಮಾಹಿತಿಯನ್ನು ವಿಶ್ಲೇಷಿಸಿದ್ದಾರೆ. ಕನ್ನಡ ಬಲ್ಲ ವಿದ್ವಾಂಸರು ಎಂ.ವಿ.ನಾಡಕರ್ಣಿ, ಅಮೃತವಲ್ಲಿ. ಕೆ.ಎಸ್.ಯದುರಾಜ್, ಕೆ.ವಿ.ತಿರುಮಲೇಶ್, ಡಿ.ಎನ್.ಶಂಕರಭಟ್ಟ, (ಈ ಟಿಪ್ಪಣಿ ಬರೆದ ಮೇಲಿನ ಅವಧಿಯಲ್ಲಿ ಶಂಕರಭಟ್ಟರು ಕನ್ನಡದಲ್ಲಿ ಬರೆದಿರುವುದೇ ಹೆಚ್ಚು) ಚಂದ್ರಶೇಖರ್ ಮುಂತಾದವರೂ ತಮ್ಮ ವಿಶ್ಲೇಷಣೆಗಳನ್ನು ಇಗ್ಲಿಶಿನಲ್ಲೇ ಮಂಡಿಸುತ್ತಿದ್ದಾರೆ. ಕನ್ನಡದಲ್ಲಿ ಭಾಷಾಶಾಸ್ತ್ರ ಸಾಹಿತ್ಯ ಬೆಳವಣಿಗೆಯಾಗಲು ಇಂಥವರು ಕನ್ನಡದಲ್ಲಿ ಬರೆಯಬೇಕೆಂಬ ಅಪೇಕ್ಷೆಯನ್ನು ಮುಂದಿಡಬಹುದು. ಹಾಗೆಯೇ ಇಂಥವರು ಬರೆದದ್ದನ್ನು ಓದಿ ಚರ್ಚಿಸಲು ನಮ್ಮಲ್ಲಿ ಉತ್ಸುಕತೆ ಮೂಡಬೇಕಾಗಿದೆ. ಅಂಥ ವಾತಾವರಣ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಮೂಡಬೇಕಾಗಿದೆ. ಈ ದಿಕ್ಕಿನಲ್ಲಿ ಈ ಪುಸ್ತಕ ಪ್ರಕಟಣೆ ಒಂದು ಹೆಜ್ಜೆ.

ಇಂಥ ಪ್ರಯುತ್ನಗಳು ನಡೆದಾಗ ಪರಿಭಾಷೆ, ಪಾರಿಭಾಷಿಕ ಪದಗಳು ಎಡರೊಡ್ಡುವುದು ಸಹಜ. ಶ್ರೀಧರ್ ಸಂಪ್ರಬಂಧಗಳನ್ನು ಅನುವಾದಿಸಿದವರು ಬೇರೆಬೇರೆಯವರಾದರೂ ಸಾಮಾನ್ಯ ರೂಪ ನೀಡುವಲ್ಲಿ ಅವರೂ ಕೈಗೂಡಿಸಿದ್ದಾರೆ. ಕನ್ನಡದಲ್ಲಿ ಭಾಷಾಶಾಸ್ತ್ರದ ಬರೆವಣಿಗೆ ರೂಢಿಗೊಳ್ಳಲು ಈ ಪ್ರಯತ್ನ ನೆರವಾಗುವುದೆಂದು ನಮ್ಮ ತಿಳುವಳಿಕೆ.

ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ

ಹಿರಿಯರೆ ಮತ್ತು ಸ್ನೇಹಿತರೆ, ಕಿರಿಯ ಸ್ನೇಹಿತರಾದ ರಂಗನಾಥ್ ಕಂಟನಕುಂಟೆಯವರ ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ ಅನ್ನುವ ಈ ಪಿಎಚ್.ಡಿ ನಿಬಂಧದ ಮುದ್ರಿತ ರೂಪವನ್ನು ಬಿಡುಗಡೆ ಮಾಡುವ ಅವಕಾಶವನ್ನು ನನಗೆ ಕಲ್ಪಿಸಿಕೊಟ್ಟಿದ್ದಕ್ಕಾಗಿ, ಇದರ ಪ್ರಕಾಶಕರಾದ ಎಂ. ಬೈರೇಗೌಡ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪುಸ್ತಕವನ್ನು ಕೆಲವು ವಾರಗಳ ಹಿಂದೆ ರಂಗನಾಥ ಅವರು ಕೊಟ್ಟು ಓದಲಿಕ್ಕೆ ಹೇಳಿದರು; ಕೊಟ್ಟರು ಓದಲಿಕ್ಕೆ ಹೇಳಲಿಲ್ಲ. ಕೊಟ್ಟ ಮೇಲೆ ಓದುವುದು ನನ್ನ ಜವಾಬ್ದಾರಿ ಎಂದು ತಿಳಿದುಕೊಂಡಿದ್ದೇನೆ. ಮೊದಲನೆಯದಾಗಿ ಇಂತಹದೊಂದು, ಬಹಳ ಒಳ್ಳೆಯ ಮತ್ತು ಇತ್ತೀಚಿನ ದಿನಗಳಲ್ಲಿ ದುರ್ಲಭವಾಗಿರುವ ಅಧ್ಯಯನ ಪ್ರಬಂಧವನ್ನು ರಚನೆ ಮಾಡಿದ್ದಕ್ಕೋಸ್ಕರ ರಂಗನಾಥ ಕಂಟನಕುಂಟೆ ಅವರನ್ನು ಹೃತ್ಪೂರ್ವಕವಾಗಿ, ಮನದುಂಬಿ ಅಭಿನಂದಿಸುತ್ತೇನೆ. ಅವರಿಗೆ ಮಾರ್ಗದರ್ಶನವನ್ನು ನೀಡಿ ಇಂತಹ ಪ್ರಬಂಧ ರಚನೆಗೆ ಕಾರಣರಾದ, ನನ್ನ ಮಿತ್ರರಾದ ಕಿ. ರಂ. ನಾಗರಾಜ ಅವರಿಗೂ ಕೂಡ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಇಂತಹ ಅಧ್ಯಯನಗಳಿಗೆ, ಹಲವು ಅಧ್ಯಯನಗಳಿಗೆ ಕಾರಣವಾದ ನನ್ನ ಮಾತೃಸಂಸ್ಥೆಗಳಲ್ಲಿ ಒಂದಾದ ಕನ್ನಡ ವಿಶ್ವವಿದ್ಯಾಲಯಕ್ಕೂ ಕೂಡ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಯಾಕೆಂದರೆ ಇತ್ತೀಚಿನ ದಿನಗಳಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಹೊರಬಂದ ಹಲವು ಒಳ್ಳೆಯ ಪ್ರಬಂಧಗಳಲ್ಲಿ ಇದೂ ಕೂಡ ಒಂದು ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಈ ಕೃತಿಯನ್ನು ಪ್ರಕಟಿಸಿ ಜನರ ಅಥವಾ ಓದುಗರಿಗೆ ಇದರ ಬಗೆಗೆ ಚಿಂತನೆಯನ್ನು ಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾಕ್ಕಾಗಿ ಪ್ರಕಾಶಕರಾದ ಡಾ. ಎಂ. ಬೈರೇಗೌಡರನ್ನೂ ಕೂಡ ಅಭಿನಂದಿಸುತ್ತೇನೆ.

ಇಂತಹ ಪುಸ್ತಕಗಳು ಪ್ರಕಟ ಆದ ಮೇಲೆ ಅವುಗಳು ಒಂದು ಹಂತವನ್ನು ತಲುಪಿದ ಹಾಗಾಯ್ತು. ಅಂದರೆ ಓದುವುದಕ್ಕೆ ಲಭ್ಯವಾಯ್ತು. ತುಂಬಾ ಸಂದರ್ಭದಲ್ಲಿ ಪಿಎಚ್.ಡಿ. ಪ್ರಬಂಧಗಳ ಬಗೆಗೆ ಇರುವ ನಿರ್ಣಯಾತ್ಮಕ ಹೇಳಿಕೆ ಏನು ಅಂದ್ರೆ ಅವು ಪರೀಕ್ಷೆಗಾಗಿ ಬರೆದ ಪ್ರಬಂಧಗಳು, ಎಲ್ಲೋ ಒಂದುಕಡೆಗೆ ಇಟ್ಟು ಅವುಗಳನ್ನು ಪ್ರಬಂಧಕಾರರೇ ಮತ್ತೆ ಓದುವುದಿಲ್ಲ ಅನ್ನುವ ಟೀಕೆಗಳನ್ನು ಮಾಡುವುದನ್ನು ಗಮನಿಸಬಹುದು. ಆದರೆ ಹಾಗೆ ತಾವು ಯಾವ ಪ್ರಬಂಧವನ್ನು ಬರೆದು ಪದವಿ ಪಡೆದಿದ್ದಾರೋ ಆ ಪ್ರಬಂಧವನ್ನು ಮತ್ತೊಮ್ಮೆ ಓದುಗರ ಪರೀಕ್ಷೆಗೆ ಒಳಗು ಮಾಡುವ ಹೊಣೆಯನ್ನು ಲೇಖಕರು ಅಥವಾ ಪದವಿ ಪಡೆದವರು ಒಪ್ಪಿಕೊಳ್ಳುವುದನ್ನು ಮೆಚ್ಚಬೇಕು.

ಆದರೆ ತುಂಬಾ ಸಂದರ್ಭದಲ್ಲಿ ಹಾಗೆ ಬಂದ ಪುಸ್ತಕಗಳು ಚರ್ಚೆಗೆ ಒಳಗಾಗೋದಿಲ್ಲ. ಕೇವಲ ಪಿಎಚ್. ಡಿ ಪ್ರಬಂಧಗಳಿಗೆ ಮಾತ್ರವಲ್ಲ. ಕನ್ನಡದ ಚಿಂತನೆಯಲ್ಲಿಯೇ ಒಂದು ದೊಡ್ಡ ಕೊರತೆ ನನಗೆ ಕಾಣಿಸುತ್ತಿದೆ. ಏನಂದ್ರೆ ಹೊಸ ವಿಚಾರಗಳ ಬಗೆಗೆ ಚರ್ಚೆಗಳನ್ನು ಮಾಡೋದಕ್ಕೆ ಒಂದು ಬಗೆಯ ಹಿಂಜರಿಕೆ ಇದೆ. ಯಾವುದು ಹಳೆಯ ವಿಚಾರದಲ್ಲೇನೇ ಸ್ವಲ್ಪ ಮಟ್ಟಿಗೆ ಏರುಪೇರು ಕಾಣಿಸುತ್ತ ಇರುತ್ತವೋ ಅವುಗಳ ಬಗೆಗೆ ವಾದ ವಿವಾದಗಳನ್ನು ಹುಟ್ಟಿ ಹಾಕೋದರ ಬಗೆಗೆ ಇರುವ ಆಸಕ್ತಿ, ಮತ್ತು ಈ ಮುಖ್ಯಧಾರೆಯಿಂದ ಹೊರಗಡೆಯಿದ್ದು ಹೊಸ ಬಗೆಯ ಚಿಂತನಾ ಕ್ರಮಗಳನ್ನು ಮಂಡಿಸುತ್ತಾ ಇರೋದನ್ನು ಚರ್ಚೆ ಮಾಡಿ ಅದನ್ನು ಒಂದು ಶೈಕ್ಷಣಿಕ ಚೌಕಟ್ಟಿನ ಒಳಗೆ ತಕ್ಕೊಂಡು ಬರುವ ಪ್ರಯತ್ನಗಳು ನಡೆಯುವುದೇ ಇಲ್ಲ. ಹಾಗೆ ನೋಡಿದರೆ ಇಂತಹ ಗ್ರಂಥಗಳು ಹೆಚ್ಚು ಚರ್ಚೆಗೆ ಒಳಗಾಗಬೇಕಾಗುತ್ತದೆ; ನಮ್ಮ ಸ್ನಾತಕೋತ್ತರ ಕೇಂದ್ರಗಳಲ್ಲಿ, ಅಲ್ಲಿನ ವಿದ್ಯಾರ್ಥಿಗಳು ಇವುಗಳನ್ನು ಓದಬೇಕಾಗುತ್ತದೆ; ಓದಿ ಚರ್ಚೆಯನ್ನು ಮಾಡಬೇಕಾಗಿ ಬರುತ್ತದೆ. ಚರ್ಚೆ ಮಾಡಿ ಅದನ್ನು ಹೇಗೆ ಕನ್ನಡದ ಓದಿನ ಚೌಕಟ್ಟಿನ ಒಳಗೆ ತಕ್ಕೊಂಡು ಬರಬೇಕು ಅನ್ನೋದನ್ನು ಕೂಡ ಯೋಚನೆ ಮಾಡಬೇಕಾಗಿ ಬರ್ತದೆ. ಇಂತಹ ಪ್ರಕ್ರಿಯೆ ಕನ್ನಡದಲ್ಲಿ ನಡೆಯೋದು ಕಡಿಮೆ. ಇದು ಕೇವಲ ಪಿಎಚ್.ಡಿ., ಪ್ರಬಂಧಗಳ ಮಟ್ಟಿಗೆ ಅಷ್ಟೇ ಅಲ್ಲ. ಇಂತಹ ಹೊಸ ವಿಚಾರಗಳನ್ನು ಮಂಡಿಸಿದ ತುಂಬಾ ಚಿಂತನೆಗಳಿಗೆ ಹೀಗೆಯೇ ಆಗಿರುವ ಹಲವು ಉದಾಹರಣೆಗಳಿವೆ. ಎಸ್. ಶೆಟ್ಟರ್ ಅವರ 'ಶಂಗಂ ತಮಿಳಗಂ' ಸಾಹಿತ್ಯವನ್ನು ಹಾಗೂ ಕನ್ನಡ ನಾಡಿಗೂ ಮತ್ತು ದ್ರಾವಿಡ ನುಡಿಗೂ ನಾಡಿಗೂ ಇರುವ ಸಂಬಂಧಗಳನ್ನು ಕುರಿತು ಬರೆದಿರುವ ಅಧ್ಯಯನಶೀಲ ಕೃತಿಯ ಬಗೆಗೂ ಕೂಡ ಹೀಗೆಯೇ ಆಗಿದೆ. ನಮ್ಮಲ್ಲಿ ಚರ್ಚೆ ನಡೆಯುತ್ತದೆ. ಆ ಚರ್ಚೆಗಳನ್ನು ಒಂದು ಶೈಕ್ಷಣಿಕ ಮುಂದುವರಿಕೆಯಾಗಿ ತೆಗೆದುಕೊಂಡು ಹೋಗುವುದಿಲ್ಲ. ಅಂದ್ರೆ ಅದು ನಮ್ಮ ಎಂ.ಎ. ಓದುವ ವಿದ್ಯಾರ್ಥಿಗಳಲ್ಲಿ ಕರ್ನಾಟಕ ಚರಿತ್ರೆಯನ್ನು ಓದುವವರ ಪಠ್ಯಕ್ರಮದಲ್ಲಿ ಸೇರ್ಪಡೆಯಾಗುವುದಿಲ್ಲ. ಅವುಗಳು ಕೇವಲ ಪರಿಶಿಷ್ಟವಾಗಿ ಸೇರಿಕೊಳ್ಳುತ್ತವೆಯೇ ಹೊರತು ಅವುಗಳನ್ನು ಮುಂದುವರೆಸುವ ಪ್ರಯತ್ನಗಳನ್ನು ನಾವು ಮಾಡೋದಿಲ್ಲ. ಅದರಿಂದ ಆ ಪ್ರಯತ್ನಗಳು ಈಗ ಹೆಚ್ಚು ಆಗಬೇಕು; ಪರೀಕ್ಷೆಗೆ ಗುರಿಪಡಿಸಬೇಕು. ಅವುಗಳಲ್ಲಿ ಒಪ್ಪಿಕೊಳ್ಳಬಹುದಾದ ಅಂಶಗಳೇನು? ಮುಂದುವರೆಸಬಹುದಾದ ಅಂಶಗಳೇನು? ನಿರಾಕರಿಸಬಹುದಾದ ಅಂಶಗಳೇನು? ಇವೆಲ್ಲವನ್ನೂ ಚರ್ಚೆ ಮಾಡಬೇಕಾಗಿ ಬರ್ತದೆ. ಅದನ್ನು ಚಿಕ್ಕವರು ಬರೆದಿದ್ದಾರೆ, ದೊಡ್ಡವರು ಬರೆದಿದ್ದಾರೆ ಅನ್ನೋದು ಮುಖ್ಯವಲ್ಲ. ಯಾವ ವಿಚಾರ ಮಂಡನೆಯಾಗಿದೆ ಆ ವಿಚಾರದ ಬಗೆಗೆ ಒಂದು ಗಂಭೀರವಾದ ವೇದಿಕೆಯಲ್ಲಿ ಚರ್ಚೆಗಳಿಗೆ ಗುರಿಪಡಿಸಬೇಕಾದ ಪ್ರಯತ್ನ ಮಾಡಬೇಕಾಗಿ ಬರ್ತದೆ. ಇದು ನನ್ನ ಆತಂಕ ಮತ್ತು ಆತಂಕವನ್ನು ನಿಮ್ಮ ಜತೆಗೆ ಹಂಚಿಕೊಂಡಿದ್ದೇನೆ.

ಈ ಪುಸ್ತಕದ ವಿಷಯ ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ. ಇದು ಸುಮಾರು ಒಂದೂವರೆ ಸಾವಿರ ವರ್ಷಗಳ ಕರ್ನಾಟಕದ ಚರಿತ್ರೆಯ ಭಾಗ. ಜನಭಾಷೆ ಮತ್ತು ಪ್ರಭುತ್ವದ ಭಾಷೆಗಳ ನಡುವೆ ಇರುವ ತಿಕ್ಕಾಟದ ಕಥೆ ಇದೆಯಲ್ಲ.

ಈ ಕಥನಕ್ಕೆ ಬಹಳ ದೊಡ್ಡ ಇತಿಹಾಸವಿದೆ. ಇದು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ನೆಲೆಗಳಲ್ಲಿ ಮಂಡನೆಯಾಗುತ್ತ ಬಂದಿದೆ. ಎಲ್ಲ ಕಾಲದಲ್ಲಿಯೂ ಅದು ತಿಕ್ಕಾಟದ ರೂಪದಲ್ಲೇ ಇದ್ದಿತೋ ಹೊಂದಾಣಿಕೆಯ ರೂಪದಲ್ಲಿ ಇದ್ದಿತೋ, ಯಜಮಾನಿಕೆ ಮತ್ತು ಅಧೀನತೆಯ ಅಡಿಯಾಳಿನ ಸಂಬಂಧದಲ್ಲಿಇದ್ದಿತೋ, ಅಥವಾ ಆ ಸಂಬಂಧವು ಬೇರೊಂದು ರೀತಿಯಲ್ಲಿ ಇದ್ದಿತೋ ಎಂಬುದನ್ನು ನೋಡುವ ಪ್ರಯತ್ನ ನಡೆದಿವೆ.ಇವೆಲ್ಲವೂ ಕೂಡ ಆ ಒಂದೂವರೆ ಸಾವಿರ ವರ್ಷದ ಚರಿತ್ರೆಯನ್ನು ನಾವು ನೋಡಿದರೆ ಗೊತ್ತಾಗುತ್ತದೆ. ಕರ್ನಾಟಕದ ಪ್ರಭುತ್ವದಲ್ಲಿ. ಪ್ರಭುತ್ವ ಅನ್ನೋದನ್ನೇ ಸ್ವಲ್ಪ ಮಟ್ಟಿಗೆ ಪಾಸಿಟಿವ್ ಮತ್ತು ನೆಗೆಟಿವ್ ಎರಡೂ ನೆಲೆಗಳಲ್ಲಿ ನೋಡಬೇಕಾಗಿ ಬರ್ತದೆ. ಯಾಕೆಂದರೆ ಉತ್ತರದ ಆಳ್ವಿಕೆಯಿಂದ ಬೇರೆಯಾಗಿ ಕರ್ನಾಟಕಕ್ಕೆ ಒಂದು ಆಧಿಪತ್ಯವನ್ನು ಒಂದು ಚಕ್ರಾಧಿಪತ್ಯವನ್ನು ರೂಪಿಸುವಾಗ ಅದಕ್ಕಾಗಿ ಬಳಸಿಕೊಂಡ ಹಲವು ಉಪಕರಣಗಳಲ್ಲಿ ಕನ್ನಡ ನುಡಿ ಕೂಡ ಒಂದಾಗಿತ್ತು. ಅಂದರೆ ಕನ್ನಡವನ್ನು ಸಂಸ್ಕೃತದ ಎದುರಿಗೆ ಒಂದು ಪ್ರಭುತ್ವದ ಭಾಷೆಯನ್ನಾಗಿ ತೆಗದುಕೊಳ್ಳಬೇಕು ಅನ್ನುವ ಪ್ರಯತ್ನವನ್ನು ಮಾಡಿದರು. ಶ್ರೀವಿಜಯ ಕವಿರಾಜಮಾರ್ಗವನ್ನು ಬರೆದಾಗ ಕನ್ನಡಕ್ಕೆ ಪ್ರಭುತ್ವ ಭಾಷೆಯ ನೆಲೆಯನ್ನು ತಂದುಕೊಡುವ ಪ್ರಯತ್ನ ಮಾಡಿದ. ಪ್ರಭುತ್ವದ ಭಾಷೆಯ ಸ್ಥಾನವನ್ನು ಕಲ್ಪಿಸುವ ಪ್ರಯತ್ನವನ್ನು ಮಾಡಿದ. ಜನಭಾಷೆಯಾಗಿದ್ದದ್ದನ್ನು ಸಂಸ್ಕೃತದ ವಿರುದ್ಧ. ಅಲ್ಲಿವರೆಗೂ ಪ್ರಾಕೃತ ಮತ್ತು ಸಂಸ್ಕೃತಗಳು, ಕರ್ನಾಟಕದ ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಭುತ್ವದ ಭಾಷೆಗಳಾಗಿ ಕೆಲಸ ಮಾಡುತ್ತಿದ್ದವು. ಆದರೆ ಕರ್ನಾಟಕದ ಸಾಮ್ರಾಜ್ಯ ಶಕ್ತಿಗಳು, ಅದನ್ನು ನಾನು ಮೊದಲೇ ಹೇಳಿದ ಹಾಗೆ, ಮೊದಲನೆಯದಾಗಿ ರಾಷ್ಟ್ರಕೂಟರು, ಕನ್ನಡವನ್ನು ತಮ್ಮ ಸಾಮ್ರಾಜ್ಯದ ಭಾಷೆಯನ್ನಾಗಿ ಮಾಡುವ ಪ್ರಯತ್ನ ಮಾಡಿದರು. ಈ ಪ್ರಯತ್ನವನ್ನು ಸ್ವಲ್ಪಮಟ್ಟಿಗೆ ದಕ್ಷಿಣದಲ್ಲಿ, ಬಹುಮಟ್ಟಿಗೆ ಗಂಗರು ಮಾಡಿರಬಹುದು. ನಾವಿನ್ನೂ ಅದನ್ನು ಪರೀಕ್ಷೆ ಮಾಡಿನೋಡಿಲ್ಲ. ಆದರೆ ಅವರು ಸಂಸ್ಕೃತದ ವಿರುದ್ಧವಾಗಿ ಈ ಪ್ರಯತ್ನ ಮಾಡಿದರೋ ಅಥವಾ ದಕ್ಷಿಣದಲ್ಲಿ ಮೂರುಜನ ಚಕ್ರಾಧಿಪತಿಗಳ–ಚೋಳರು, ಚೇರರು ಮತ್ತು ಪಾಂಡ್ಯರು–ಆಧಿಪತ್ಯದಲ್ಲಿ ತಮಿಳಿಗೆ ಮನ್ನಣೆ ಇತ್ತಲ್ಲ ಅದರ ಎದುರಿಗೆ, ತಮಿಳಿನ ಎದುರಿಗೆ, ಕನ್ನಡಕ್ಕೆ ಸ್ಥಾನ ಕಲ್ಪಿಸುವ ಪ್ರಯತ್ನ ಮಾಡಿದರೋ? ಇನ್ನೂ ಕೂಡ ಇದನ್ನು ನಾವು ಪರೀಕ್ಷಿಸಿ ನೋಡಿಲ್ಲ. ಅಂದರೆ ಕನ್ನಡ ಒಂದರ್ಥದಲ್ಲಿ ಸಂಸ್ಕೃತದ ಜತೆಗೆ, ಇನ್ನೊಂದು ನೆಲೆಯಲ್ಲಿ ತಮಿಳಿನ ಜತೆಗೆ, ಮುಖಾಮುಖಿಯಾಗಿದೆ ಎನ್ನಬಹುದೇ? ಇದು ಬಹಳ ವಿಚಿತ್ರವಾಗಿದೆ, ತಮಿಳಿನ ಜತೆಗೆ ಗಂಗರ ಸಂಬಂಧದಲ್ಲಿ ಪ್ರಭುತ್ವ ಮತ್ತು ಅಧೀನತೆಯ ನೆಲೆ ಇದ್ದಿತೇ ಎಂಬುದನ್ನು ಸ್ವಲ್ಪ ಯೋಚಿಸಬೇಕಾಗಿದೆ.

ಶಂಗಂ ತಮಿಳಗಂ ಬಗೆಗೆ ಶೆಟ್ಟರ್ ಅವರು ಮಾಡಿರುವ ಅಧ್ಯಯನವನ್ನು ನೋಡಿದರೆ ಅದು ನಜ ಅಂತ ಅನ್ನಿಸ್ತಿದೆ. ಯಾಕೆಂದರೆ ಕನ್ನಡ ನಾಡಿನಿಂದ ಹೋದ ಕವಿಗಳು ತಮ್ಮ ಭಾಷೆಯಲ್ಲಿ ಕಾವ್ಯರಚನೆ ಮಾಡದೇ ಯಾಕೆ ತಮಿಳಿನ್ನು ಕಲಿತು ತಮಿಳಿನಲ್ಲಿ ಕೃತಿ ರಚನೆ ಮಾಡಿದರು? ತಮಿಳಿನ ರಾಜರ ಪರವಾಗಿ ರಚನೆಗಳನ್ನು ಯಾಕೆ ಮಾಡಿದರು? ತಮಿಳಿನಲ್ಲಿ ಕೃತಿ ರಚನೆ ಮಾಡಿದ ಹಾಗೆ ಕನ್ನಡದಲ್ಲಿ ಮಾಡಲಿಲ್ಲ ಯಾಕೆ? ಅಥವಾ ಆ ಕನ್ನಡ ಕೃತಿಗಳು ನಮಗೆ ದೊರಕಿಲ್ಲವೇ? ಈ

ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾಗಿದೆ. ಆಗ ಪ್ರಭುತ್ವದ ಭಾಷೆಯ ಸ್ಥಾನ ತಮಿಳಿಗೆ ಬರುತ್ತದೆ; ಅಧೀನತೆಯ, ಜನಭಾಷೆಯ ಸ್ಥಾನ ಕನ್ನಡಕ್ಕೆ ಬರುತ್ತದೆ. ಗಂಗರು ಈ ಸಂಬಂಧವನ್ನು ತಲೆಕೆಳಗು ಮಾಡಿದಂತೆ ಕಾಣಿಸುತ್ತಿದೆ. ನಾನು ಇದನ್ನು ಒಂದು ಪ್ರಮೇಯವಾಗಿ ಮಂಡಿಸುತ್ತಿದ್ದೇನೆ. ಯಾಕೆ ಈ ಪ್ರಮೇಯದ ರೂಪದಲ್ಲಿ ಇಡುತ್ತಿದ್ದೇನೆ ಅಂದರೆ ನಮ್ಮ ಇವತ್ತಿನವರೆಗಿನ ಚಿಂತನೆಗಳು ಗಂಗರನ್ನು ಆ ರೀತಿ ನೋಡುವುದಕ್ಕೆ ಹೋಗಿಲ್ಲವಾದ್ದರಿಂದ ಈ ನಿಟ್ಟಿನಲ್ಲಿ ಏನನ್ನೂ ಖಚಿತವಾಗಿ ಹೇಳುವುದಕ್ಕೆ ಆಗುತ್ತಿಲ್ಲ. ಇವತ್ತೂ ಕೂಡ ನಾವು ಕರ್ನಾಟಕದ ಶಾಸನಗಳಲ್ಲಿ ಮೊದಲನೆಯ ಶಾಸನ ಅಂತ ಹೇಳಿ ಹಲ್ಮಿಡಿ ಶಾಸನವನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಅದಕ್ಕಿಂತ ಹಿಂದೆ ಕನ್ನಡದ ಶಾಸನಗಳು ಇದ್ದಿರಬಹುದು, ಕನ್ನಡ ಭಾಷೆಯಲ್ಲಿ ರಚನೆಯಾದ ಶಾಸನಗಳು ಇದ್ದಿರಬಹುದು. ಮತ್ತು ರಾಜರು, ಕರ್ನಾಟಕವನ್ನು ಆಳುತ್ತಿದ್ದ ರಾಜರು; ಆ ಶಾಸನಗಳನ್ನು ಹಾಕಿರಬಹುದು ಅಂತ ಒಪ್ಪಕೊಳ್ಳಲು ನಮ್ಮ ಹಳೆಯ ತಲೆಮಾರಿನ ವಿದ್ವಾಂಸರು ಇವತ್ತೂ ಕೂಡ ಸಿದ್ದರಿಲ್ಲ. ತಲವನ ಪುರ-ಇವತ್ತಿನ ತಲಕಾಡಿನಲ್ಲಿ ಸಿಕ್ಕಿದ ಎರಡು ಶಾಸನಗಳು, ಆ ಎರಡು ಶಾಸನಗಳು ಹಲ್ಮಿಡಿ ಶಾಸನಕ್ಕಿಂತ ಅಂದರೆ ಕ್ರಿ. ಶ. 450ಕ್ಕಿಂತ ನೂರು ವರ್ಷ ಹಿಂದಿನವು ಇರಬಹುದು. ಗೋವಿಂದ ಪೈಗಳು ಅದಕ್ಕಿಂತ ಹಿಂದಿನ ಒಂದು ಶಾಸನ ನಂಜನಗೂಡಿನಲ್ಲಿ ಇರಬಹುದು ಅಂತ ಗುರುತಿಸುತ್ತಾರೆ. ಆದರೆ ನಮ್ಮ ಮೈಸೂರು ವಿಶ್ವವಿದ್ಯಾಲಯದ ಚೌಕಟ್ಟಿನಲ್ಲಿದ್ದ ವಿದ್ವಾಂಸರಿಗೆ ತಾವು ಹೇಳಿದ್ದಕ್ಕಿಂತ ಭಿನ್ನವಾದ ವಿಚಾರವನ್ನು ಹೇಳಿದ್ದನ್ನು ಒಪ್ಪುವ ಮನೋಭಾವವೇ ಇರಲಿಲ್ಲ. ಈಗಲೂ ಇಲ್ಲಿ ಮೈಸೂರಿನವರಿಗಷ್ಟೇ ಅಲ್ಲ, ಅಂತಹ ಪಂಡಿತ ಪರಂಪರೆಯೊಂದು ಕರ್ನಾಟಕದಲ್ಲಿದೆ. ಅವರಿಗೆ ತಾವು ಹೇಳಿದ್ದನ್ನು ಬಿಟ್ಟು ಬೇರೆ ಯಾರಾದರೂ ಹೇಳಿದರೆ ಅದನ್ನು ಹೇಗಾದರೂ ಮಾಡಿ ಕಸದಬುಟ್ಟಿಗೆ ಹಾಕಿಬಿಡಬೇಕು ಅನ್ನುವ ಪ್ರಯತ್ನವನ್ನು ಮಾಡುತ್ತಾ ಇರುತ್ತಾರೆ. ಇದು ಬಹಳ ಮುಖ್ಯವಾದ ಪ್ರಯತ್ನ, ಜನಭಾಷೆಯಾಗಿ ಇದ್ದದ್ದು ಯಾವಾಗಲೂ ಪ್ರಭುತ್ವದ ಭಾಷೆಯೊಡನೆ ಸಂಬಂಧವನ್ನು, ಸಂಘರ್ಷವನ್ನು ಒಪ್ಪಂದವನ್ನು, ಹೊಂದಾಣಿಕೆಯನ್ನು, ಮಾಡಿಕೊಳ್ತ ಇರ್ತಾವೆ ಅಂತ ಅಲ್ಲ. ತಾನೂ ಕೂಡ ಪ್ರಭುತ್ವದ ನೆಲೆಗೆ ಬರುವ ಪ್ರಯತ್ನಗಳನ್ನು ಮಾಡುತ್ತ ಇರುತ್ತವೆ ಅನ್ನುವುದಕ್ಕೆ ಒಂದು ಸಣ್ಣ ಉದಾಹರಣೆಯನ್ನಷ್ಟೇ ಕೊಡುತ್ತೇನೆ. ಇದು ಕರ್ನಾಟಕದಲ್ಲಿ ಬಹಳ ಸಂದರ್ಭದಲ್ಲಿ ಬೇರೆ ಬೇರೆಯಾಗಿ ನಡೆದುಕೊಂಡು ಬಂದಿರಬಹುದು. ಆದರೆ ರಂಗನಾಥ ಅವರು ಚರಿತ್ರೆಯನ್ನೆಲ್ಲ ಗಮನಿಸುತ್ತಾರೆ. ತಮ್ಮ ಅಧ್ಯಯನದಲ್ಲಿ, ನಮ್ಮ ಇವತ್ತಿನ ಪರಿಸ್ಥಿತಿಯಲ್ಲಿ, ಇವತ್ತಿನ ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ನಡುವಿನ ಸಂಬಂಧದ ಸ್ವರೂಪವನ್ನು, ಕೇವಲ ಭಾಷೆಯ ನೆಲೆಯಲ್ಲಿ ಅಷ್ಟೇ ಅಲ್ಲ, ರಾಜಕೀಯ, ಸಾಮಾಜಿಕ ಆರ್ಥಿಕ ನೆಲೆಗಳಲ್ಲಿಯೂ ಕೂಡ ಈ ಸಂಬಂಧಗಳನ್ನು ವಿಶ್ಲೇಷಣೆ ಮಾಡುವ ಪ್ರಯತ್ನವನ್ನು ಮಾಡಿದ್ದಾರೆ. ಜನಭಾಷೆಗಳ ನಡುವಣ ಸಂಬಂಧ ಕೇವಲ ಭಾಷೆಗಳ ನಡುವಣ ಸಂಬಂಧ ಆಗಿರುವುದಿಲ್ಲ. ಭಾಷಿಕರ ನಡುವಣ ಸಂಬಂಧ ಆಗಿರುತ್ತದೆ. ಮತ್ತು ಆ ಭಾಷಿಕರ ನಡುವೆ ಸಾಮಾಜಿಕವಾದ, ಆರ್ಥಿಕವಾದ, ರಾಜಕೀಯ ಸಂಬಂಧಗಳು ಯಾವ ತರಹ ಇರುತ್ತವೆ ಅನ್ನುವ ನೆಲೆಗಳನ್ನು ಅವಲಂಬಿಸಿರುತ್ತವೆ.

ಆದರೆ ಕನ್ನಡಕ್ಕೆ ಇವತ್ತಿನ ಪ್ರಭುತ್ವ ಭಾಷೆಗಳು ಅಂತ ಕರೆದುಕೊಳ್ಳುತ್ತಿರುವ ಎರಡು ಭಾಷೆಗಳು ಇಂಗ್ಲಿಶ್ ಮತ್ತು ಸಂಸ್ಕೃತ, ಇವೆರಡೂ ಕೂಡ ಭಾಷಿಕರ ನೆಲೆಯಿಂದ ಕನ್ನಡದ ಮೇಲೆ ಪ್ರಭುತ್ವ ನಡೆಸುತ್ತಿಲ್ಲ.ಅಂದರೆ ಆ ಭಾಷೆಗಳನ್ನಾಡುವ ಜನಸಮುದಾಯ ಕನ್ನಡ ನಾಡನ್ನು ಆಳುತ್ತಿಲ್ಲ. ಬೇರೆ ಉದಾಹರಣೆ ನೋಡೋಣ. ತಮಿಳು ಮತ್ತು ಕನ್ನಡದ ಸಂಬಂಧಗಳ ನೆಲೆಗೆ ಬಂದರೆ, ತಮಿಳು ಮಾತನಾಡುವ ಒಂದು ಭಾಷಿಕ ಸಮುದಾಯ ಇದೆ. ಕನ್ನಡ ಮಾತನಾಡುವ ಒಂದು ಭಾಷಿಕ ಸಮುದಾಯ ಇದೆ. ತಮಿಳು ಮತ್ತು ಕನ್ನಡದ ಸಂಬಂಧವನ್ನು ಯೋಚನೆ ಮಾಡುತ್ತ ಇರೋವಾಗ ಕೇವಲ ಎರಡು ಭಾಷೆಗಳ ಸಂಬಂಧ ಬರೋದಿಲ್ಲ. ಭಾಷಾಸಮುದಾಯಗಳ ಸಂಬಂಧವೂ ಇರುತ್ತದೆ.

ಆದರೆ ಕನ್ನಡ–ಇಂಗ್ಲಿಶ್, ಕನ್ನಡ–ಸಂಸ್ಕೃತಗಳ ವಿಚಾರಕ್ಕೆ ಬಂದರೆ ಕನ್ನಡದ ಪರವಾಗಿ ಮಾತಾಡುವವರೂ ಮತ್ತು ಸಂಸ್ಕೃತ ಹಾಗೂ ಇಂಗ್ಲಿಶ್ ಪರವಾಗಿ ಮಾತಾಡುವವರೂ ಕನ್ನಡಿಗರೇ ಆಗಿರುತ್ತಾರೆ. ಇಂಗ್ಲೆಂಡಿನಲ್ಲಿರುವವರು ಕರ್ನಾಟಕದಲ್ಲಿ ಇಂಗ್ಲಿಶ್ ಪರವಾಗಿ ಮಾತಾಡ್ತಾ ಇರುವುದಿಲ್ಲ. ಸಂಸ್ಕೃತದ ಪರವಾಗಿ ಮಾತಾಡುವವರು ಬೇರೆ ಎಲ್ಲಿಂದಲೋ ಬಂದಿರುವುದಿಲ್ಲ; ಕರ್ನಾಟಕದಲ್ಲೇ ಇರ್ತಾರೆ. ಅಂದರೆ ಕನ್ನಡ ಜನ್‌ಸಮುದಾಯದಲ್ಲೇ ಈ ವಿವಾದಗಳು ಹುಟ್ಟಿಕೊಳ್ಳುತ್ತಿವೆ. ಸಂಸ್ಕೃತದ ಪರವಾದ ವಾದ ಮಂಡಿಸುವವರು ಇರಬಹುದು. ಕನ್ನಡದ ಪರವಾಗಿ ವಾದ ಮಂಡಿಸುವವರು ಇರಬಹುದು. ಇಂಗ್ಲಿಶ್ ಪರವಾಗಿ ವಾದ ಮಂಡಿಸುವವರು ಇರಬಹುದು. ಮೂರು ಭಾಷೆಗಳ ನಡುವಣದ ಸಂಬಂಧದ ಯಾವುದೇ ಪಕ್ಷ ವಹಿಸಿ ಮಾತನಾಡುವವರು ಇರಬಹುದು. ಅವರು ಕನ್ನಡ ಭಾಷಿಕ ಸಮುದಾಯದ ಒಳಗಡೆಯೇ ಇರುತ್ತಾರೆ ಅನ್ನುವುದು ಬಹಳ ಕುತೂಹಲಕಾರಿ ಸಂಗತಿ. ಇನ್ನೂ ಕೆಲವು ಜನಭಾಷೆಗಳಿವೆ. ಅವುಗಳ ಬಗೆಗೆ ಪ್ರಾಸಂಗಿಕವಾಗಿ ಚರ್ಚೆಗಳು ಬಂದಿದೆ. ಕರ್ನಾಟಕ ಎಂದು ನಾವು ತಡೆಯುವ ಭೌಗೋಳಿಕ ಪ್ರದೇಶದ ಒಳಗಡೆಯೇ ಇರಬಹುದಾದ ಇನ್ನು ಕೆಲವು ಭಾಷಿಕ ಸಮುದಾಯಗಳಿವೆ. ಅವು ಉರ್ದು, ಲಂಬಾಣಿ, ತುಳು, ಕೊಡವ, ಕೊಂಕಣಿ ಇರಬಹುದು. ಅವುಗಳಿಗೆ ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ವ್ಯಾಖ್ಯಾನ ಸ್ವಲ್ಪ ಬೇರೆ ತರ. ಸದ್ಯಕ್ಕೆ ನಾನು ಆ ಚರ್ಚೆಯನ್ನು ಬದಿಗಿಡುತ್ತೇನೆ. ಆದರೆ ಇವತ್ತು ಬಹಳ ದೊಡ್ಡ ಚರ್ಚೆ ನಡೆಯುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತು, ಕನ್ನಡ–ಇಂಗ್ಲಿಶ್ ಮತ್ತು ಕನ್ನಡ–ಸಂಸ್ಕೃತ ಕುರಿತ ಸಂಬಂಧದ್ದು. ಎರಡು ವರ್ಷಗಳ ಹಿಂದೆ, ಕನ್ನಡ–ಇಂಗ್ಲಿಶ್‌ಗಳ ನಡುವೆ, ಕದನ ನಡೆದಿತ್ತು, ಆದರೆ ಇವತ್ತು ಅದು ಜಾಡು ಬದಲಿಯಾಗಿ ಕನ್ನಡ–ಸಂಸ್ಕೃತಗಳ ಮಟ್ಟಿಗೆ ಬಂದು ನಂತಿದೆ. ಆದರೆ ಈ ಚರ್ಚೆ ಮಾಡುತ್ತ ಇರೋವಾಗ, ನಾನು ಆಗಲೇ ಹೇಳಿದ ಹಾಗೆ ಸಂಸ್ಕೃತದ ಪರವಾಗಿ ಮಾತಾಡುವ ಒಂದು ಭಾಷಿಕ ಸಮುದಾಯ, ಕನ್ನಡ ಮಾತಾಡದ ಒಂದು ಭಾಷಿಕ ಸಮುದಾಯವೂ, ಕನ್ನಡ ಮಾತಾಡದ ಒಂದು ಭಾಷಿಕ ಸಮುದಾಯ ಹೀಗೆ ಇರೋದಿಲ್ಲ. ಅವರೆಲ್ಲರು ಕನ್ನಡ ಮಾತಾಡುವವರೇ ಆಗಿರ್ತಾರೆ. ಆದರೆ ಅವರಲ್ಲಿ ಕೆಲವರು ಸಂಸ್ಕೃತದ ಪರವಾಗಿ ಮಾತಾಡುತ್ತಾರೆ. ಇಲ್ಲಿ ಸಂಘರ್ಷ ಇರುವುದು ಯಾರಲ್ಲಿ? ಈ ಸಮುದಾಯದ

ಒಳಗಡೆಯೇ ಸಂಘರ್ಷ ಇರುತ್ತದೇನು? ಸಮಯುದಾಯದ ಒಳಗಡೆಯಿರುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ನೆಲೆಗಳಲ್ಲಿರುವ ಸಂಕೀರ್ಣ ರಚನೆ- ಅಂದರೆ ಅದು ಬೇರೆ ಬೇರೆ ರೀತಿಯಲ್ಲಿ ಒಡೆದು ಹೋಗಿರುವ ಕ್ರಮ- ಅವುಗಳು ಕಾರಣ ಆಗಿರುತ್ತವೋ? ಅಥವಾ ಚರಿತ್ರೆಯ ಭಾರಗಳನ್ನು ಹೊತ್ತುಕೊಂಡು ಹೋಗಬೇಕು ಅನ್ನುವ ಹೊಣೆಯನ್ನು ಕೆಲವರು ತಮ್ಮ ಮೇಲೆ ತಾವೇ ಹಾಕಿಕೊಂಡು ಬಿಟ್ಟಿದ್ದಾರೆ. ನೀವು ಹೊತ್ತು ತಿರುಗುತ್ತಿರುವುದು ಬಹಳ ಬೆಲೆ ಬಾಳುವ ವಸ್ತುವಲ್ಲ; ಅದನ್ನು ಯಾವತ್ತು ಬೇಕಾದರೂ ತೆಗೆದು ಬಿಸಾಕಬಹುದಾದದ್ದು ಎಂದು ಹೇಳಿದರೂ ಕೂಡ ಅದನ್ನು ಹೊತ್ತುಕೊಂಡೇ ತಿರುಗುತ್ತಿರುತ್ತಾರೆ. ಇದು ನಮ್ಮ ಜವಾಬ್ದಾರಿ ಎಂದು ತಿಳಿದು ಕನ್ನಡ ಜನಸಮುದಾಯದ ಒಂದು ಭಾಗ ತಿಳಿದುಬಿಟ್ಟಿದೆ. ನಾನು ಈ ಮಾತನ್ನು ಹೇಳುತ್ತಿರುವಾಗ ನನ್ನ ಮಾತಿನ ಹಿಂದೆ ಯಾವ ಸಂಗತಿ ಇದೆ ಅನ್ನುವ ವಿಚಾರ ಸ್ಪಷ್ಟ ಆಗುತ್ತಿರಬಹುದು.

ಯಾಕೆಂದರೆ ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷದ ಚೌಕಟ್ಟಿಗೆ ಬಂದಾಗ ಈವತ್ತಿನ ಈ ಕ್ಷಣದಲ್ಲಿಯೂ ಕರ್ನಾಟಕದಲ್ಲಿ ನಡೆಯುತ್ತಿರುವ ಚರ್ಚೆ ಸಂಸ್ಕೃತದ ಪರವಾಗಿ ಇಲ್ಲವೇ ಕನ್ನಡದ ಪರವಾಗಿ ಇರುತ್ತದೆ. "ಕನ್ನಡ ಸಂಸ್ಕೃತಕ್ಕೆ ಸದಾಕಾಲ ಋಣಿಯಾಗಿರಬೇಕು. ಸಂಸ್ಕೃತ ಇಲ್ಲದೆ ಹೋಗಿದ್ದರೆ ಕನ್ನಡ ಒಂದು ಬಡಕಲು ಭಾಷೆಯಾಗಿರುತ್ತಿತ್ತು. ಮತ್ತು ಕನ್ನಡ ಬೆಳೆಯುತ್ತಾ ಇರುವುದೇ ಸಂಸ್ಕೃತದಿಂದ. ಏಕೆಂದರೆ ಸಂಸ್ಕೃತದಲ್ಲಿ ಅಗಾಧವಾದ ತಿಳುವಳಿಕೆ ಇದೆ. ಕನ್ನಡಿಗರೆಲ್ಲರೂ ಅದನ್ನು ಪಡೆದುಕೊಳ್ಳಬೇಕು. ಕನ್ನಡಿಗರೆಲ್ಲರೂ ಸಂಸ್ಕೃತ ಭಾಷೆಯನ್ನು ಕಲಿಯಬೇಕು. ಕಲಿತರೆ ತಿಳುವಳಿಕೆ ನಮ್ಮದಾಗುತ್ತದೆ" ಎನ್ನುವವರೂ ಇದ್ದಾರಷ್ಟೆ. ಬಹಳ ವಿಚಿತ್ರ, ಒಂದು ಭಾಷೆಯನ್ನು ಕಲಿತರೆ ಆ ಭಾಷೆಯಲ್ಲಿರುವ ತಿಳುವಳಿಕೆ ನಮ್ಮದಾಗುತ್ತದೆ ಅಂತ ಅನ್ನುವ ನಂಬಿಕೆಯೇ ಬಹಳ ವಿಚಿತ್ರ. ಯಾಕೆಂದರೆ ಒಂದು ಭಾಷೆಯಲ್ಲಿರುವ ತಿಳುವಳಿಕೆ ಆ ಭಾಷೆಯಲ್ಲಿದ್ದಲ್ಲಿ ಅದು ಆ ಭಾಷೆಯನ್ನಾಡುವವರ ತಿಳುವಳಿಕೆಯೇ ಹೊರತು ಆ ಭಾಷೆಯದ್ದಲ್ಲ. ತಿಳುವಳಿಕೆ ಭಾಷೆಯಲ್ಲಿ ಇರುವುದಿಲ್ಲ. ತಿಳುವಳಿಕೆ ಭಾಷೆಯ ಸ್ವತ್ತಲ್ಲ, ಅದು ಜನರ ಸ್ವತ್ತು.

ಯಾವುದೇ ತಿಳುವಳಿಕೆಯನ್ನು ಹೇಳುವುದಕ್ಕೆ ಒಂದು ಭಾಷೆ ಬೇಕಾಗುತ್ತದೆ ಅಷ್ಟೇ. ಸಂಸ್ಕೃತದಲ್ಲಿ ಅಗಾಧವಾದ ತಿಳುವಳಿಕೆ ಇದೆ ಅಂದರೆ ಸಂಸ್ಕೃತದಲ್ಲಿ ಅಗಾಧವಾದ ತಿಳುವಳಿಕೆಯನ್ನು ಒಂದು ಸಾರಿ ಬರೆದಿಡಲಾಗಿದೆ. ಬರೆದಿಟ್ಟಿರುವ ತಿಳುವಳಿಕೆ ಜನರದ್ದು. ಜನರಲ್ಲಿ ಆ ತಿಳುವಳಿಕೆ ಇವತ್ತಿಗೂ ಜೀವಂತವಾಗಿದ್ದರೆ ಅದು ಯಾವ ಭಾಷೆಯಲ್ಲಾದರೂ ಲಭ್ಯವಾಗಲೇ ಬೇಕು. ಅದು ತನ್ನ ಚಲನಶೀಲತೆಯನ್ನು ಕಳೆದುಕೊಂಡಿದ್ದರೆ ನಾನು ಆಗಲೇ ಹೇಳಿದಂತೆ ಅದು ಹೆಣಭಾರ. ಅದನ್ನು ನಾನು ಹೊತ್ತುಕೊಂಡು ಯಾಕೆ ತಿರುಗಬೇಕು? ಇವೆಲ್ಲ ಪ್ರಶ್ನೆಗಳನ್ನು ಹಾಕಿಕೊಳ್ಳದೇ ಹೋದರೆ ಕೆಲವು ಭ್ರಮೆಗಳಿಗೆ ಒಳಗಾಗುತ್ತಲೇ ಇರುತ್ತೇವೆ. ಅದರಿಂದ ಕನ್ನಡಕ್ಕೆ ಅನಗತ್ಯವಾದ ಒಂದು ಹೋರಾಡುವ ಜವಾಬ್ದಾರಿಯನ್ನು ಹೊರಿಸಲಾಗುತ್ತದೆ. ಅದು ಅನಗತ್ಯವಾದದ್ದು. ಕನ್ನಡ ಸಂಸ್ಕೃತದೊಡನೆ

ಆ ಬಗೆಯ ಹೋರಾಟವನ್ನು ಯಾಕೆ ಮಾಡಬೇಕು? ಇದೆಲ್ಲ ನಾವೇ ಹುಟ್ಟು ಹಾಕಿರುವುದು. ಸಂಸ್ಕೃತ ತನ್ನ ಪಾಡಿಗೆ ತಾನು ಇರಬಹುದು. ಆ ತಿಳುವಳಿಕೆಯನ್ನು ಜಗತ್ತಿನ ಎಲ್ಲ ಭಾಷೆಗಳಿಗೂ ಅನುವಾದ ಮಾಡ್ತಾ ಇದಾರೆ. ಜರ್ಮನ್‌ಗೆ, ಇಂಗ್ಲಿಶ್‌ಗೆ, ಫ್ರೆಂಚ್, ಇಟಾಲಿಯನ್, ಭಾರತದ ಹಲವು ಭಾಷೆಗಳಿಗೆ ಅನುವಾದ ಮಾಡುತ್ತ ಇದ್ದಾರೆ. ಕನ್ನಡಕ್ಕೂ ಅನುವಾದ ಮಾಡುತ್ತ ಇದ್ದಾರೆ. ಕನ್ನಡ ಭಾಷೆಗೆ ಬಂದ ತಕ್ಷಣ ನನಗೆ ಕನ್ನಡ ಭಾಷೆ ಗೊತ್ತಿದ್ದಷ್ಟಕ್ಕೆ ತಿಳುವಳಿಕೆ ನನ್ನದಾಗುವುದಿಲ್ಲ. ಒಂದು ಉದಾಹರಣೆ ಕೊಡ್ತೀನಿ. ಮೈಸೂರು ಅರಮನೆಯಲ್ಲಿ ಹಿಂದೆ ಒಂದು ಬಹಳ ದೊಡ್ಡ ಯೋಜನೆ ಮಾಡಿದರು. ಏನದು ಅಂತ ಅಂದ್ರೆ ವೇದಗಳಿವೆಯಲ್ಲ. ಆ ವೇದಗಳೆಲ್ಲವನ್ನು, ಬಾಯ್ದೆರೆಯಲ್ಲಿದ್ದುದನ್ನು, ಲಿಪೀಕರಣಗೊಳಿಸಿ, ಕನ್ನಡ ಲಿಪಿಯಲ್ಲಿ ಬರೆದು, ಆಮೇಲೆ ಅದರ ಕನ್ನಡ ಅನುವಾದ ಕೊಡುವ ಒಂದು ಪ್ರಯತ್ನ ಮಾಡಿ ಹಲವು ಸಂಪುಟಗಳನ್ನು ತಂದರು. ಎಷ್ಟು? 64. 18 ಪುರಾಣಗಳನ್ನು ಸೇರಿಸಿದರೆ ಬಹಳ ದೊಡ್ಡ ಪ್ರಮಾಣ. ಇವತ್ತಿನವರೆಗೂ ಕೂಡ ಯಾವುದೇ ಗ್ರಂಥಾಲಯಕ್ಕೆ ಹೋಗಿ ನೋಡಿದರೆ ಅವುಗಳನ್ನು ತೆರೆದು ನೋಡಿರುವವರ ಸಂಖ್ಯೆ ಬೆರಳೆಣಿಕೆಯಷ್ಟು ಇರ್ತದೆ. ಎಷ್ಟೋ ಜನ ಅವುಗಳನ್ನು ಕಡಿಮೆ ಬೆಲೆಗೆ ಕೊಟ್ಟರೂ ಅಂತ ಹೇಳಿ ಚೀಲಗಳಲ್ಲಿ ತುಂಬಿಕೊಂಡು ಬಂದು, ಆ ಚೀಲಗಳ ಕಟ್ಟು ಕೂಡ ಬಿಚ್ಚಲಿಲ್ಲ. ಅವರು ಸ್ವಲ್ಪ ಹಿರಿಯರಾದ ಮೇಲೆ ಅವರ ಮಕ್ಕಳು ಅವನ್ನು ಏನು ಮಾಡಬೇಕು ಅಂತ ಗೊತ್ತಾಗದೆ ತಲೆ ಚಚ್ಚಿಕೊಂಡದ್ದನ್ನು ಕಂಡಿದ್ದೇನೆ.ಅದನ್ನೆಲ್ಲ ಹಳೆ ಪುಸ್ತಕದೋರು ತಗೊಳ್ಳೋದಿಲ್ಲ. ನಾನು ಹೇಳುತ್ತಿರುವುದು ತಿಳುವಳಿಕೆ ಮಹತ್ವದ್ದೋ ಅಲ್ಲವೋ ಅನ್ನೋದಲ್ಲ. ಆ ತಿಳುವಳಿಕೆ ನಮಗೆ ಬೇಕಾಗಿದೆಯೋ ಇಲ್ಲವೋ ಅನ್ನೋದು ಬಹಳ ಮುಖ್ಯ. ತಿಳುವಳಿಕೆ ಬೇಕಾಗಿದೆ ಅಂತ ಆದರೆ ಅದನ್ನು ಪಡೆದುಕೊಳ್ಳಲು ಏನುಬೇಕಾದರೂ ಮಾಡೋಣ. ಯಾವ ತಿಳುವಳಿಕೆಗೆ ನಡೆಯಿಲ್ಲ, ಯಾವ ತಿಳುವಳಿಕೆಗೆ ಗತಿಶೀಲತೆಯಿಲ್ಲ, ಆ ತಿಳುವಳಿಕೆ ಹೆಣಭಾರ. ಅದು ಯಾವ ಭಾಷೆಯಲ್ಲಾದರೂ ಇರಲಿ, ಇಂಗ್ಲಿಶಿನಲ್ಲಾದರೂ ಇರಲಿ. ಫ್ರೆಂಚಲ್ಲಾದರು ಇರಲಿ. ಇಟಲಿಯನ್, ಸಂಸ್ಕೃತ, ಲ್ಯಾಟಿನ್‌ನಲ್ಲಿರಲಿ.ಅದೆಲ್ಲ ಕೆಲಸಕ್ಕೆ ಬರುವುದಲ್ಲ.

ಯಾವುದೇ ತಿಳುವಳಿಕೆ ಅದು ಕನ್ನಡದಲ್ಲೇ ಇದ್ದರೂ ನನಗೆ ಇವತ್ತು ಅದು ಪ್ರಯೋಜನಕ್ಕೆ ಬರಬೇಕು. ಇಲ್ಲದಿದ್ದರೆ ಅದು ಕಸವೇ ಸರಿ. ವಿದ್ವಾಂಸರಲ್ಲಿ ಕೆಲವರು ಇತ್ತೀಚೆಗೆ ದಿನ ಬೆಳಗಾದರೆ ಗೋಳೋ ಅಂತ ಅಳ್ತಾ ಇದಾರೆ. ಏನು ಈಗಿನ ಕಾಲದ ಹುಡುಗರಿಗೆ ಹಳಗನ್ನಡದ ಪದ್ಯ ಓದೋದಕ್ಕೆ ಬರೋದಿಲ್ಲ. ಹಳಗನ್ನಡದ ಒಂದು ಪದ ಕೊಟ್ಟರೆ ಅದಕ್ಕೆ ಅರ್ಥ ಹೇಳೋದಕ್ಕೆ ಬರೋದಿಲ್ಲ ಅಂತ ಹೇಳುತ್ತ ಇದಾರೆ. ಏನನ್ನಾದರೂ ಓದಿದರೆ,ಅದು ಹಳಗನ್ನಡವಾಗಲೀ,ನಡುಗನ್ನಡವಾಗಲೀ ಆ ಕನ್ನಡ ನನಗೆ ಇವತ್ತಿಗೆ ಪ್ರಯೋಜನಕ್ಕೆ ಬರಬೇಕು. ಹಾಗೆ ಬರುವುದಾದರೆ ಮಾತ್ರ ಕನ್ನಡ ನನಗೆ ಜೀವಂತ. ಅದು ಪಂಪ ಬರೆದಿದ್ದಾನೆ, ನಡುಗನ್ನಡದಲ್ಲಿ ಕುಮಾರವ್ಯಾಸ ಬರೆದಿದ್ದಾನೆ, ಅಥವಾ ಪೊನ್ನ ಬರೆದಿದ್ದಾನೆ, ರನ್ನ ಬರೆದಿದ್ದಾನೆ, ಅನ್ನೋ ಕಾರಣಕ್ಕೋಸ್ಕರವೇ ಅದಕ್ಕೆ ಹೆಚ್ಚಿನ ಬೆಲೆ ಬರೋದಿಲ್ಲ ಸ್ವಲ್ಪ ನನ್ನ ವಿಚಾರವನ್ನು ಹೊರಗಡೆಗೆ ತೆಗೆದುಕೊಂಡು ಹೋಗುತ್ತ ಇದ್ದೇನೆ ಅಂತ ಅನ್ನಿಸಬಹುದು. ಆದರೂ

ಇವತ್ತು ಭಾಷೆಯ ಸಂದರ್ಭದಲ್ಲಿ ಪ್ರಭುತ್ವದ ಭಾಷೆ ಮತ್ತು ಜನಭಾಷೆಯ ನಡುವಿನ ಸಂಘರ್ಷಗಳು ಸೃಷ್ಟಿಯಾಗುವಾಗ ಅದಕ್ಕಿರುವ ಬೇರೆ ಬೇರೆ ನೆಲೆಗಳನ್ನು ನಾನು ನಿಮ್ಮೆದುರಿಗೆ ಇಡಲು ಪ್ರಯತ್ನಿಸುತ್ತಿದ್ದೇನೆ. ಅದರಿಂದ ಈ ಸಂಸ್ಕೃತ ಅಥವಾ ಕನ್ನಡ, ಇಂಗ್ಲಿಶ್ ಅಥವಾ ಕನ್ನಡ, ಇವುಗಳನ್ನು ಪರಸ್ಪರ ಮುಖಾಮುಖಿಯಾಗಿಸಿರುವ ಕನ್ನಡ ಜನಸಮುದಾಯದ ಒಳಗಡೆಯಿರುವ ವೈಸಾದೃಶ್ಯಗಳನ್ನು ಗಮನಿಸಬೇಕಾಗಿದೆ. ಚರಿತ್ರೆಯ ವಿವಿಧ ಘಟ್ಟಗಳಲ್ಲಿ ವೈಸಾದೃಶ್ಯಗಳ ನಡುವೆ ಶತ್ರುತ್ವ ಬರುತ್ತದೆ. ಮಿತ್ರತ್ವ ಬರುತ್ತದೆ. ಇನ್ನು ಕೆಲವು ಸಂದರ್ಭದಲ್ಲಿ ವೈಸಾದೃಶ್ಯ ಇಲ್ಲವೇ ಇಲ್ವೇನೋ ಎನ್ನುವ ಭ್ರಮೆ ಉಂಟಾಗುತ್ತದೆ. ವೈಸಾದೃಶ್ಯಗಳ ನಡುವೆ ಶತ್ರುತ್ವ ಇದ್ದರೂ ಅವು ಪರಸ್ಪರ ಶತ್ರುಗಳಾಗಿ ಇರುವುದಿಲ್ಲ. ಈ ತರಹದ ಸಂದರ್ಭಗಳು ಉಂಟಾಗ್ತಾ ಇರ್ತವೆ, ಇಲ್ಲಿ ಆಧುನಿಕ ಕಾಲದಲ್ಲಿ ಕನ್ನಡ ಜನತೆಗೆ ಬೇಡದೆ ಇರುವ ಒಂದು ಯುದ್ಧವನ್ನು ಹುಟ್ಟುಹಾಕಿ, ನೀವು ಇದನ್ನು ಎದುರಿಸಬೇಕಾಗಿದೆ ಎಂಬ ವಿಚಿತ್ರವಾದ ಪರಿಸ್ಥಿತಿಯನ್ನು ಸೃಷ್ಟಿ ಮಾಡಲಾಗ್ತ ಇದೆ. ಅದು ಇಂಗ್ಲಿಶ್ ವಿಚಾರಕ್ಕೂ ನಿಜ, ಸಂಸ್ಕೃತದ ವಿಚಾರಕ್ಕೂ ನಿಜ. ಈ ಎರಡೂ ಪಕ್ಷಗಳವರು ಸಂಸ್ಕೃತ ಮತ್ತು ಇಂಗ್ಲಿಶ್ ಪರವಾಗಿ ಮಾತಾಡುವವರು ಇಬ್ಬರೂ ಕೂಡಾ ಕನ್ನಡವನ್ನು ಅಧೀನತೆಯ ನೆಲೆಯಲ್ಲಿ ಇಡ್ತಾರೆ ಎನ್ನುವುದನ್ನು ಗಮನಿಸಬೇಕು. ತಮ್ಮ ನುಡಿಯನ್ನು, ಜನರ ನುಡಿಯನ್ನೇ, ಅಧೀನತೆಯ ನೆಲೆಯಲ್ಲಿ ಇಡುತ್ತಿದ್ದಾರೆ. ಆ ಅಧೀನತೆಯ ನೆಲೆಯಲ್ಲಿಟ್ಟು ಈ ಎರಡು ಭಾಷೆಗಳಿಗೆ ಜೋತು ಬೀಳದೆ ಹೋದರೆ, ನಾವು ಬದುಕುವುದಕ್ಕೆ ಸಾಧ್ಯವಿಲ್ಲ ಅನ್ನೋ ಒಂದು ಹುಸಿ ಭ್ರಮೆಯನ್ನು– ಭ್ರಮೆ ಎಂದರೆ ಸಾಕು, ಅದು ಹುಸಿ ಭ್ರಮೆಯಲ್ಲ; ಹುಸಿಯಾದ ಚಿಂತನೆಯನ್ನು –ನಮ್ಮ ಮೇಲೆ ಮಂಡಿಸುತ್ತಿದ್ದಾರೆ. ಮತ್ತು ಹಾಗಂದರೆ ಇಂಗ್ಲಿಶ್ ಮತ್ತು ಸಂಸ್ಕೃತಗಳ ನಡುವೆ ಕನ್ನಡ ರಕ್ಷಿಸಿಕೊಳ್ಳಬೇಕಾದ ಸ್ವರೂಪ ಏನು? ಅದು ವೈಸಾದೃಶ್ಯವೇನು? ಆದರೂ ಅದು ಶತ್ರುತ್ವ ಉಳ್ಳ ವೈಸಾದೃಶ್ಯವೇ? ಅಥವಾ ಶತ್ರುತ್ವ ಇಲ್ಲದೆ ಇರುವ ವೈಸಾದೃಶ್ಯವೇ? ಇವೆಲ್ಲವೂ ಚರಿತ್ರೆಯ ಈ ಕಾಲದಲ್ಲಿ ನಾವು ಮಾಡಲೇಬೇಕಾಗಿರುವ ಚರ್ಚೆ. ಇದನ್ನು ಬಿಟ್ಟು ನಮ್ಮ ಇಡೀ ಚರ್ಚೆಯನ್ನು ಬೇರೆ ಒಂದು ಕಡೆಗೆ ಎಳೆದುಕೊಂಡು ಹೋಗುತ್ತಿದೆ. ಇವರು ಥೀಸಿಸ್‌ನಲ್ಲಿ ಸಂಘರ್ಷ ಅನ್ನುವ ಮಾತನ್ನು ಬಳಸಿದ್ದಾರೆ. ಬಹಳ ವಿಚಿತ್ರ ಅಂದರೆ ಎರಡು ಭಾಷಿಕ ಸಮುದಾಯಗಳ ನಡುವೆ ಸಹಬಾಳ್ವೆ ಬಂದಾಗ ಆ ಭಾಷೆಗಳ ನಡುವೆ ಬಂದ ಸಂಬಂಧವನ್ನು ಸಂಘರ್ಷ ಅಂತ ಕರೆಯಬಹುದು.

ಆದರೆ ಕನ್ನಡ–ಇಂಗ್ಲಿಶ್ ಕನ್ನಡ–ಸಂಸ್ಕೃತಗಳ ನಡುವಿನ ಸಂಬಂಧವನ್ನು ಸಂಘರ್ಷ ಅಂತ ಕರೆಯೋದಿಕ್ಕೆ ಆಗೋಲ್ಲ. ಯಾಕೆಂದರೆ, ಆ ಪದಕ್ಕೆ ಯಾವುದೇ ಅರ್ಥ ಕೊಟ್ಟರೂ, ಸಂಘರ್ಷ ಅಂತ ಕರೆಯೋದು ಸ್ವಲ್ಪ ಕಷ್ಟ. ಯಾಕೆಂದರೆ ಸಂಘರ್ಷದಲ್ಲಿ ಇಬ್ಬರಿಗೂ ಆಯ್ಕೆಗಳು ಇರ್ತವೆ. ಜಗಳ ಆಡುತ್ತ ಇರಬೇಕಾದರೆ ಒಬ್ಬರು ಮಾತ್ರ ಬೈಯುತ್ತ ಇರುವುದಕ್ಕೆ ಆಗುವುದಿಲ್ಲ, ಎದುರಿಗೆ ಇರುವವರು ಬೈದರೆ ಮಾತ್ರ ನಾವು ಇನ್ನು ಸ್ವಲ್ಪ ಜೋರಾಗಿ ಬೈಯ್ಯಬಹುದು. ಅವರು ನಾಲ್ಕು ಹೊಡೆದರೆ ನಾವು ನಾಲ್ಕು ಹೊಡೆಯುತ್ತೇವೆ. ಸಂಘರ್ಷ ಅಂದರೆ ಅದು. ಪರಸ್ಪರ ಜಗಳ ಆಡುತ್ತಾರೆ.

ಇಲ್ಲೇನಾಗುತ್ತಿದೆ? ಸಂಸ್ಕೃತ ಮತ್ತು ಇಂಗ್ಲಿಶ್‌ಗಳನ್ನು ಯಾವ ಥರ ನಿಲ್ಲಿಸಲಾಗಿದೆ ಎಂದರೆ ನೀವು ಏನಾದರೂ ಮಾಡಿಕೊಳ್ಳಿ; ನಮ್ಮ ಯಜಮಾನಿಕೆಯನ್ನು ಅಳ್ಳಾಡಿಸಲಿಕ್ಕೆ ಆಗುವುದಿಲ್ಲ; ಕನ್ನಡ ಏನಿದ್ದರೂ ಅದರ ಜತೆಗೆ ಹೊಂದಾಣಿಕೆ ಮಾಡಿಕೊಂಡು ಬದುಕಬೇಕಾಗುತ್ತದೆ ಅನ್ನುವ ರೀತಿಯ ವ್ಯಾಖ್ಯಾನಗಳನ್ನು ನಮ್ಮೆದುರಿಗೆ ಮಂಡಿಸಲಾಗುತ್ತ ಇದೆ. ಅಂದರೆ ಕನ್ನಡಕ್ಕೆ ಹೇಗಾದರೂ ಹಪಾಹಪಿ ಮಾಡಿ ಒಂದು ಜಾಗವನ್ನು ಕಂಡುಕೊಂಡು ಬಿಡುವುದು. ಉಳಿದೆರಡು ನುಡಿಗಳೂ ಗಟ್ಟಿಯಾಗಿ ಜಾಗವನ್ನು ಆಕ್ರಮಿಸುತ್ತ ಇವೆ. ಕನ್ನಡ ತನ್ನ ಜಾಗಕ್ಕೋಸ್ಕರ ಪ್ರಯತ್ನ ಪಡಬೇಕು. ಬಹುಶಃ ಒಂದೂವರೆ ಸಾವಿರ ವರ್ಷದ ಇತಿಹಾಸದಲ್ಲಿ ಈ ಬಗೆಯ ಪರಿಸ್ಥಿತಿಯನ್ನು ಕನ್ನಡಕ್ಕೆ ನಾವು ಕಾಣಲೇ ಇಲ್ಲ. ಅಥವಾ ಹಾಗೆ ಕಂಡಿದ್ದರೂ ಅದರ ಪ್ರಮಾಣ ಈಗಿರುವ ಪ್ರಮಾಣದಲ್ಲಿಲ್ಲ. ಮೊದಲನೆಯ ಸಹಸ್ರಮಾನದ ಕರ್ನಾಟಕದ ಚರಿತ್ರೆಯ ಬಗೆಗೆ, ಕ್ರಿಸ್ತಶಕದ ಆದಿಯಿಂದ ಹಿಡಿದು ಒಂದು ಸಾವಿರ ವರ್ಷಗಳ ಕಾಲದ ಕರ್ನಾಟಕದ ಸಂಸ್ಕೃತಿಯ ಚರಿತ್ರೆಯ ಬಗೆಗೆ ಇರುವ ಗಂಭೀರವಾದ ತಿಳುವಳಿಕೆ ಬಹಳ ಕಡಿಮೆ. ಆದರೆ ಬಹುಮಟ್ಟಿಗೆ ಎರಡನೆ ಸಹಸ್ರಮಾನದಲ್ಲಿ ಕರ್ನಾಟಕದ ಬಗೆಗೆ ನಮ್ಮ ತಿಳುವಳಿಕೆ ಸಾಕಷ್ಟಿದೆ. ಸಂಶೋಧನೆಗಳಿಂದ ಅಧ್ಯಯನಗಳಿಂದ, ನಮಗೆ ಸಾಕಷ್ಟು ತಿಳುವಳಿಕೆ ಬಂದಿದೆ. ಆ ತಿಳುವಳಿಕೆಯ ಹಿನ್ನೆಲೆಯಲ್ಲಿ ನೋಡೋದಾದರೆ ಈ ರೀತಿ ಕನ್ನಡಕ್ಕೆ ಒಂದು ದೀನ ಸ್ಥಿತಿಯನ್ನು ಒಂದು ಸಾವಿರ ವರ್ಷದಲ್ಲಿ ನಾವು ನೋಡಲೇ ಇಲ್ಲ. ಮೂರನೆಯ ಸಹಸ್ರಮಾನಕ್ಕೆ ಬಂದಾಗ ಇಂತಹ ಪರಿಸ್ಥಿತಿಯನ್ನು ಸೃಷ್ಟಿ ಮಾಡಲಾಗಿದೆ. ಇದು ಬಹಳ ಆತಂಕದ ಸಂಗತಿ. ಹಾಗಂತ ಹೇಳಿದ ತಕ್ಷಣ ಕನ್ನಡಕ್ಕೆ ಏನೋ ಆಗಿಹೋಗಿಬಿಡುತ್ತದೆ; ಅದು ನಾಶ ಆಗಿಬಿಡುತ್ತದೆ; ಅದು ತನ್ನ ಸ್ಥಾನಮಾನಗಳನ್ನು ಕಳೆದುಕೊಂಡು ಬಿಡುತ್ತದೆ ಎಂದು ನಾನು ಹೇಳುತ್ತ ಇಲ್ಲ. ನಾನು ಮೇಲಿಂದ ಮೇಲೆ ಹೇಳುತ್ತ ಇದ್ದೇನೆ. ಜಗತ್ತಿನಲ್ಲಿ ಎರಡು ಸಹಸ್ರಮಾನಗಳ ಕಾಲ ಜನಭಾಷೆಯೂ ಆಗಿದ್ದು, ಬರೆಹದ ಭಾಷೆಯೂ ಆಗಿದ್ದು ಮೂರನೆಯ ಸಹಸ್ರಮಾನದಲ್ಲಿಯೂ ಬಳಕೆಯಲ್ಲಿ ಇರುವ ಭಾಷೆಗಳ ಸಂಖ್ಯೆ ಅಬ್ಬಬ್ಬ ಅಂದರೆ ಒಂದು ಹತ್ತು ಇರಬಹುದು ಅಷ್ಟೇ. ಅದರಲ್ಲಿ ಎರಡು ಭಾಷೆ ದಕ್ಷಿಣ ಭಾರತದಲ್ಲೇ ಇವೆ. ಒಂದು ತಮಿಳು, ಇನ್ನೊಂದು ಕನ್ನಡ. ಅದರಿಂದ ಕನ್ನಡಕ್ಕೆ ಒಂದು ಒಳಗಡೆಯ ಕಸುವು ಇದೆ. ಕನ್ನಡಕ್ಕಿದೆ ಎಂದರೆ ಕನ್ನಡ ಜನತೆಗೆ ಇದೆ. ಕನ್ನಡಕ್ಕೆ ಅಂತಾ ಅಲ್ಲ ಅದು. ಕನ್ನಡಕ್ಕೆ ತನಗೆ ತಾನೇ ಇರೋದಿಲ್ಲ. ಕನ್ನಡ ಜನತೆಗೆ ಇರುತ್ತದೆ. ಆ ಜನರು ಇದನ್ನು ಕಾಯ್ದುಕೊಳ್ಳಬಲ್ಲರು, ಒಂದಲ್ಲ ಒಂದು ರೀತಿಯಲ್ಲಿ ಇದನ್ನು ಮುಂದುವರೆಸಿಕೊಂಡು ಹೋಗಬಲ್ಲರು ಅಂತ ನನಗೆ ಅನ್ನಿಸುತ್ತದೆ. ಇನ್ನು ಕೆಲವು ಸಂದರ್ಭದಲ್ಲಿ ಒಂದು ಪ್ರಿಯವಾದ ವಾದವನ್ನು ಮಂಡಿಸಲಾಗ್ತಾ ಇದೆ. ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷದ ನೆಲೆಗಳಲ್ಲಿ ಮಾತಾಡ್ತಾ ಇರುವಾಗ ಕನ್ನಡದ ತಾಳಿಕೆಯ ಗುಣದ ಬಗೆಗೆ ಮಾತಾಡುತ್ತ ಅದು ಏನನ್ನು ಬೇಕಾದರೂ ತನ್ನೊಳಗೆ ಅರಗಿಸಿಕೊಳ್ಳಬಲ್ಲದು ಅಂತ ಹೇಳುವುದುಂಟು. ಅನಂತಮೂರ್ತಿಯವರು ಜೀರ್ಣಾಗ್ನಿ ಎನ್ನುವ ಕಲ್ಪನೆಯೊಳಗೆ

ಮಂಡಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಅವರು ಬೇರೆ ಸಂದರ್ಭದಲ್ಲಿ ಹೇಳಿರುವುದನ್ನು ನಾನು ಭಾಷೆಯ ಸಂದರ್ಭಕ್ಕೆ ತೆಗೆದುಕೊಂಡು ಮಾತಾಡುತ್ತ ಇದ್ದೇನೆ. ಈ ಪ್ರಭಾವಗಳನ್ನು ಈ ಒತ್ತಡಗಳನ್ನು ಅರಗಿಸಿಕೊಂಡು, ತಾನು ಹೊಸದಾಗುತ್ತ ಅದು ಬೆಳೆದು ಬರಬಲ್ಲದು ಅನ್ನುವ ವಾದವನ್ನು ಅವರು ಮಂಡಿಸುತ್ತಾರೆ. ಆದರೆ ನನಗನ್ನಸುತ್ತೆ, ಅರಗಿಸಿಕೊಳ್ಳಬೇಕಾದ ಒತ್ತಾಯ ನಮಗೆ ಯಾಕೆ ಬರ್ತದೆ? ನಮ್ಮ ಒಳಗಿರುವ ಕಸುವನ್ನೇ ಹೊರತರುವ ಪ್ರಯತ್ನವನ್ನು ಯಾಕೆ ಮಾಡಬಾರದು? ಕನ್ನಡ ಒಳಗಡೆಯೇ ಇರುವ ಕಸುವನ್ನು ಮುಂಚೂಣಿಗೆ ತರಲು ನಮ್ಮ ಹಳೆಯ ಕವಿಗಳು, ಹಳೆಯ ಚಿಂತಕರು– ಹಳೆಯ ಚಿಂತಕರು ಅಂದಾಗ ವಚನಕಾರರು, ಹರಿದಾಸರು, ತತ್ತ್ವಪದಕಾರರನ್ನು ಕುರಿತು ಮಾತಾಡುತ್ತಿದ್ದೇನೆ– ಅವರೆಲ್ಲರೂ ಕೂಡ ಪ್ರಯತ್ನ ಮಾಡಿದ್ದಾರೆ. ಅವರದೇ ಆದ ರೀತಿಯಲ್ಲಿ ಮಾಡಿದ್ದಾರೆ. ಅವರಿಂದ ಕಲಿಯ ಬೇಕಾದ ಪಾಠ ದೊಡ್ಡದು ಅಂತ ತಿಳಿದಿದ್ದೇನೆ. ಅದರಿಂದ ಇದು ರಾಜಕೀಯ ನೆಲೆಯಲ್ಲಿ, ನಿರ್ಧಾರಗಳಲ್ಲಿ ಆಗುವ ಕೆಲಸಗಳಲ್ಲ ಇದು, ಈ ಸಂಘರ್ಷದಲ್ಲಿ, ಕನ್ನಡದ ಪಾತ್ರ ಏನಿದೆ? ಈ ಪಾತ್ರ ಯಾವಾಗಲೂ ಕೂಡ ತೆಗೆದುಕೊಳ್ಳುವವರ ಸ್ಥಿತಿಯಿದೆ, ಇಂತಹ ದೀನ ಸ್ಥಿತಿಯಿಂದ ಹೊರಗಡೆಗೆ ಬರುವ ಪ್ರಯತ್ನವನ್ನು ಮಾಡಬೇಕು. ಆ ಪ್ರಯತ್ನ ನಡೆಯಬೇಕಾದರೆ, ಆ ಬಗೆಯ ಚಿಂತನೆಗಳು ಹೆಚ್ಚು ನಡೆಯಬೇಕಾಗುತ್ತದೆ, ಅಂತಹ ಚಿಂತನೆಗಳಿಗೆ ಇಂತಹ ಅಧ್ಯಯನಗಳು, ಉಪಯುಕ್ತವಾದ ಚೌಕಟ್ಟನ್ನು ಕಲ್ಪಿಸಬಲ್ಲವು ಅಂತ ಭಾವಿಸುತ್ತೇನೆ. ನಾನು ಈ ಪುಸ್ತಕದ ಬಗೆಗೆ ಬಹಳ ಹೆಚ್ಚು ಮಾತಾಡಲಿಲ್ಲ. ಆದರೆ ಯಾವ ಚರ್ಚೆಯನ್ನು ಹುಟ್ಟುಹಾಕಬಲ್ಲದು ಅಂತ ಅನ್ನುವುದರ ಬಗೆಗೆ ನನ್ನ ಹಲವಾರು ವಿಚಾರಗಳನ್ನಷ್ಟೇ ಹೇಳಿದ್ದೇನೆ. ಇವತ್ತಿಗೆ ಅದನ್ನು ಲಿಂಕ್ ಮಾಡಿಕೊಳ್ಳಬೇಕು ಅನ್ನುವ ಪ್ರಯತ್ನದಿಂದ ಕೆಲವು ಮಾತುಗಳನ್ನು ಆಡಿದ್ದೇನೆ. ನನಗೆ ಬಹಳ ಸಂತೋಷ ಆಗುವ ಸಂಗತಿ ಏನೆಂದರೆ ಕನ್ನಡದ ಇವತ್ತಿನ ಸಂದರ್ಭದಲ್ಲಿ ನಾನು ಎರಡು ಬಗೆಯ ಜನರನ್ನು ನೋಡಿದ್ದೇನೆ. ಒಂದು ಅದರ ಪ್ರಾಚೀನತೆಯಲ್ಲಿ, ಪರಂಪರೆಯಲ್ಲಿ ಪರಂಪರೆ ಅನ್ನೋದಕ್ಕಿಂತ ನಿಂತುಹೋಗಿರುವ, ಸ್ಥಗಿತವಾಗಿರುವ ಚಲನೆಯಿಲ್ಲದ, ನಡೆಯಿಲ್ಲದ, ಅದರ ಹಳೆಯತನ ಏನಿದೆ ಇದನ್ನು ಹೆಮ್ಮೆಪಡುತ್ತ ಎರಡು ಕೋಡುಗಳಿವೆ ಅಂತ ತಿಳಿದುಕೊಂಡಿರುವ ಒಂದು ಗುಂಪಿದೆ. ಇನ್ನೊಂದು ಗುಂಪಿದೆ. ಅಲ್ಲಿ ಕನ್ನಡವನ್ನು ಇಪ್ಪತ್ತೊಂದನೆಯ ಶತಮಾನದಲ್ಲಿ ಹೇಗೆ ಕಟ್ಟಬೇಕು, ಬೆಳೆಸಬೇಕು ಎಂದು ಆಲೋಚನೆ ಮಾಡುವ ಜನರಿದ್ದಾರೆ, ವಯೋಮಾನದಲ್ಲಿ ಮೊದಲನೆಯದರಲ್ಲಿ ವಯಸ್ಸಾದವರಿದ್ದಾರೆ. ಎರಡನೆಯದಲ್ಲಿ ಚಿಕ್ಕವರಿದ್ದಾರೆ. ನನಗೆ ಯಾವಾಗಲೂ ಕೂಡ ಚಿಕ್ಕವರಲ್ಲಿರುವ ಎಳೆಯ ಮನಸ್ಸುಗಳಲ್ಲಿರುವ ಮುಂದೆ ನೋಡುವ, ಇವತ್ತು ಮತ್ತು ನಾಳೆ, ಇವತ್ತು ಮತ್ತು ನೆನ್ನೆಯಲ್ಲ. ಇವತ್ತು ಮತ್ತು ನಾಳೆಗಳ ಬಗೆಗೆ ಆಲೋಚಿಸುವ, ಇಂತಹ ಅಧ್ಯಯನಗಳನ್ನು ಮಾಡುತ್ತ ಇರುವ ಚಿಕ್ಕವರ ಬಗೆಗೆ ನನಗೆ ಅಗಾಧವಾದ ಮಮತೆಯಿದೆ, ಪ್ರೀತಿಯಿದೆ ವಿಶ್ವಾಸವಿದೆ. ಅಂತಹವರ ಸಂತತಿ ನೂರಾಗಿ ಬೆಳೆಯಲಿ, ಇಂತಹ ಅಧ್ಯಯನಗಳು ಹೆಚ್ಚಾಗಿ ನಡೆಯಲ್ಲ ಮತ್ತು ನಾನು ಮೊದಲೇ ಹೇಳಿದ ಹಾಗೆ ಅವರ ತಲೆಮಾರಿನವರೆ, ಅವರ ವಯಸ್ಸಿನವರೆ, ನಾವು ಇನ್ನೊಂದು ತಲೆಮಾರಿಗೆ ಸೇರಿ

ಹೋಗಿದ್ದೇವೆ. ಅಂತಹವರು ನಾನು ಆಗಲೇ ಏನು ಹೇಳಿದೆ (ಅಂತಹವರು) ಈ ಬ್ಯಾಕ್‌ಲಾಗ್ ಏನದೆ, ಹಳೆಯ ಚಿಂತನೆ ಏನಿದೆ ಹಳೆಯ ಸಿಂದಾಬಾದ್‌ನ ಕತೆಯಲ್ಲಿ ಒಬ್ಬ ಮುದುಕನನ್ನು ಹೊತ್ತುಕೊಂಡು ಸಿಂದಾಬಾದ್ ತಿರುಗುತ್ತ ಇರುತ್ತಾನಲ್ಲ, ಆ ಸಿಂದಾಬಾದ್‌ನ ಹೆಗಲಿನಲ್ಲಿರುವ ಮುದುಕನನ್ನು ಕಿತ್ತು ಎಸೆಯಬೇಕಾಗುತ್ತದೆ. ನಿರ್ಭಿಡೆಯಿಂದ ಮುನ್ನುಗ್ಗಬೇಕು. ಬಿಡುಗಡೆಯಿಂದ ಆ ರೀತಿಯ ಚಿಂತನಾಕ್ರಮವನ್ನು ರೂಪಿಸಿಕೊಳ್ಳುವ ಕಸುವು ಚಿಕ್ಕವರಲ್ಲಿ ಇದೆ ಅನ್ನೋದನ್ನು ನಾನು ಕಂಡುಕೊಂಡಿದ್ದೇನೆ.

ನಮ್ಮಮಾತು

ಕನ್ನಡದಲ್ಲಿ ಭಾಷಾಧ್ಯಯನ ಕ್ಷೇತ್ರವನ್ನು ಮರು ನಿರ್ವಚಿಸಬೇಕಾದ ಅಗತ್ಯ ಈಗ ಎಂದಿಗಿಂತಲೂ ಹೆಚ್ಚಾಗಿದೆ. ಭಾಷೆಯ ಅಧ್ಯಯನವೆಂಬುದು ಭಾಷೆಯ ರಚನೆಯ ಅಧ್ಯಯನಕ್ಕೆ, ಅದರ ಪ್ರಮಾಣರೂಪದ ನಿರ್ವಚನಕ್ಕೆ ಸೀಮಿತವಾಗಿದ್ದ ನೆಲೆಯಿಂದ ಹೆಚ್ಚು ವಿಸ್ತಾರವಾದ ವಲಯಗಳಿಗೆ ದಾಟಬೇಕಾಗಿದೆ. ಏಕೆಂದರೆ ಭಾಷೆಯೆಂಬುದು ತಂತಾನೇ ಪೂರ್ಣವಾದ ಒಂದು ರಚನೆಯಾಗಿರುವಂತೆ ಉಳಿದ ಸಾಮಾಜಿಕ ರಚನೆಗಳೊಡನೆ ವಿಶಿಷ್ಟವಾದ ಸಂಬಂಧಗಳನ್ನು ರಚಿಸಿಕೊಂಡಿರುವ ವ್ಯವಸ್ಥೆಯಾಗಿದೆ. ಈ ಅನ್ಯ ವ್ಯವಸ್ಥೆಗಳೊಂದಿಗಿನ ಸಂಬಂಧವನ್ನು ನಾವೀಗ ಹೆಚ್ಚು ವ್ಯಾಪಕವಾಗಿ ಅಧ್ಯಯನ ಮಾಡಬೇಕು. ಅಂದರೆ ಭಾಷೆಗೂ ಸಮಾಜಕ್ಕೂ ಇರುವ ಸಂಬಂಧ, ಭಾಷೆಯನ್ನು ಬಳಸುವ ವಿವಿಧ ವಲಯಗಳಲ್ಲಿ ಆಗುತ್ತಿರುವ ಪಲ್ಲಟಗಳು ಇವೇ ಮುಂತಾದ ಸಂಗತಿಗಳು ಈಗ ಆಸಕ್ತಿಯ ಕ್ಷೇತ್ರಗಳಾಗತೊಡಗಿವೆ.

ನನ್ನ ಮಿತ್ರರಾದ ಡಾ. ಪಾಂಡುರಂಗಬಾಬು ಅವರು ಹೀಗೆ ಭಾಷೆಯ ಅಧ್ಯಯನದ ಹೊಸ ಸಾಧ್ಯತೆಗಳನ್ನು ಹುಡುಕುತ್ತಿರುವುದು ಈ ಸಂಕಲನಗಳ ಲೇಖನಗಳಲ್ಲಿ ಗಮನಕ್ಕೆ ಬರುವ ಸಂಗತಿಯಾಗಿದೆ. ಅವರು ಅಭ್ಯಾಸಕ್ಕಾಗಿ ಆಯ್ಕೆ ಮಾಡಿಕೊಂಡ ವಲಯಗಳನ್ನು ಗಮನಿಸಿದರೆ ಭಾಷೆಯ ಸಾಮಾಜಿಕ ಅಯಾಮಗಳ ಬಗ್ಗೆ ಅವರು ನೀಡುತ್ತಿರುವ ಅವಧಾರಣೆಯ ಸ್ವರೂಪ ಗೊತ್ತಾಗುವಂತಿದೆ. ಕನ್ನಡದಲ್ಲಿ ಭಾಷಾಧ್ಯಯನ ಸಾಗಿ ಬಂದಿರುವ ಹಾದಿಯನ್ನು ಗಮನಿಸಿದರೆ ಅಲ್ಲಿ ಭಾಷೆಯನ್ನು ಒಂದು ಏಕಘನಾಕೃತಿಯೆಂದು ತಿಳಿದಿರುವ ಸಂದರ್ಭಗಳೇ ಅಧಿಕವಾಗಿವೆ. ನಮ್ಮ ಸಮಾಜದ ರಚನೆಯಲ್ಲಿರುವ ಏರುಪೇರುಗಳು ಹೇಗೆ ಭಾಷೆಯ ಬಳಕೆಯ ರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆ ಎಂಬುದನ್ನು ಕ್ವಚಿತ್ತಾಗಿ ಗಮನಿಸಲಾಗುತ್ತಿತ್ತು. ಎಷ್ಟೋ ವೇಳೆ ಈ ಸಾಮಾಜಿಕ ವ್ಯತ್ಯಯಜನ್ಯ ಭಾಷಾ ಮಾದರಿಗಳನ್ನು ಗ್ರಾಮ್ಯ ಅಥವಾ ಅಶುದ್ಧ ಎಂದು ಪರಿಗಣಿಸಿ ಅದನ್ನು ಪಕ್ಕಕ್ಕೆ ಇರಿಸುವ ಪ್ರವೃತ್ತಿಯೇ ಹೆಚ್ಚಾಗಿತ್ತು. ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆಗಳನ್ನು ಅಧ್ಯಯನ ಮಾಡುವವರೂ ಕೂಡ ಆಯಾ ಉಪಭಾಷೆಗಳಲ್ಲಿ ಕಂಡುಬರುವ ವಿಕಲ್ಪಗಳನ್ನು ಕೇವಲ ಗುರುತಿಸುತ್ತಿದ್ದರು. ಜೊತೆಗೆ ಪ್ರಮಾಣ ಅಥವಾ ಶಿಷ್ಟಭಾಷಾ ಪ್ರಭೇದಕ್ಕೂ ಈ ರೂಪಗಳಿಗೂ ಇರುವ ವ್ಯತ್ಯಾಸಗಳನ್ನು ಪಟ್ಟಿ ಮಾಡುತ್ತಿದ್ದರು. 1958ರ ಸುಮಾರಿನಲ್ಲಿ ಅಮೆರಿಕದ ವಿದ್ವಾಂಸ ವಿಲಿಯಂ ಬ್ರೈಟ್ ಕನ್ನಡದ ಶಿಷ್ಟ ಮತ್ತು ಪ್ರಾದೇಶಿಕ ಭಾಷೆಗಳನ್ನು ಜೊತೆಗಿಟ್ಟು ನೋಡುವ ಅಧ್ಯಯನವನ್ನು ಮಾಡಿದರು.

ಅಲ್ಲಿಯೂ ಅವರು ಆಡುಮಾತಿನ ರೂಪಗಳನ್ನು ಶಿಷ್ಟರೂಪದಿಂದ ಪಡೆದುಕೊಳ್ಳುವ ನಿಯಮಗಳನ್ನು ರೂಪಿಸಿದ್ದಾರೆಂಬುದು ಗಮನಾರ್ಹ. ಅಂದರೆ ಶಿಷ್ಟರೂಪವು ಸಾರ್ವತ್ರಿಕ, ಮತ್ತು ಪ್ರಾದೇಶಿಕ ರೂಪವು ವಿಶಿಷ್ಟ ಎಂಬ ನಿಯಮವನ್ನೇ ಅವರು ಪಾಲಿಸಿದ್ದರು. ಅವರು ಮತ್ತು ಎ.ಕೆ. ರಾಮಾನುಜನ್ ಅವರು ಬ್ರಾಹ್ಮಣ ಮತ್ತು ಅಬ್ರಾಹ್ಮಣ ಪ್ರಬೇಧಗಳನ್ನು ಹೋಲಿಸಿ ನಡೆಸಿದ ಅಧ್ಯಯನದಲ್ಲಿ ಮಾತ್ರ ಎರಡು ಪ್ರಭೇದಗಳನ್ನು ಸಮಾನ ನೆಲೆಯಲ್ಲಿ ಇರಿಸುವ ಮೊದಲ ಯತ್ನ ಕಾಣುತ್ತದೆ. ಆದರೆ ಕನ್ನಡದಲ್ಲಿ ಇಂತಹ ಪ್ರಯತ್ನಗಳು ದೊಡ್ಡ ಪ್ರಮಾಣದಲ್ಲಿ ನಡೆಯಲಿಲ್ಲ. 1978ರಲ್ಲಿ ಪ್ರಕಟವಾದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಉಪಭಾಷೆಗಳ ಜಿಲ್ಲಾವಾರು ಪರಿಚಯವೂ ಕೂಡ ಮಾಹಿತಿಯಿಂದ ಅಪೂರ್ವವಾಗಿತ್ತಾದರೂ ಪ್ರಭೇದಗಳನ್ನು ಕುರಿತು ಒಂದು ತಾತ್ತ್ವಿಕ ದೃಷ್ಟಿಕೋನವನ್ನು ತಳೆಯಲಿಲ್ಲ. ಹಾಗೆ ನೋಡಿದರೆ ಕಳೆದ ಶತಮಾನದ ಕೊನೆಯ ದಶಕದಲ್ಲಿ ಮೈತಳೆದ ಸಾಂಸ್ಕೃತಿಕ ರಾಜಕಾರಣದ ಫಲವೆಂಬಂತೆ ಕನ್ನಡ ಭಾಷಾ ಅಧ್ಯಯನದಲ್ಲಿ ಹೊಸ ನೆಲೆಗಳು ಆಕಾರ ಪಡೆಯತೊಡಗಿವೆ. ಈ ನಿಟ್ಟಿನಲ್ಲಿ ಎಲ್ಲ ಪ್ರಭೇದಗಳನ್ನೂ ಸಮಾನವೆಂಬಂತೆ ನೋಡುವ ಒತ್ತಾಯ ಹೆಚ್ಚಾಗುತ್ತಿದೆ.

ಡಾ.ಬಾಬು ಅವರು ತಮ್ಮ ಅಧ್ಯಯನಗಳಿಗಾಗಿ ಆಯ್ಕೆ ಮಾಡಿಕೊಳ್ಳುವ ವಲಯಗಳು ಗಮನಾರ್ಹವಾಗಿವೆ. ಭಾಷೆ ಎಂಬುದು ಸಂವಹನಕ್ಕಾಗಿ ಇರುವ ಸಾಧನವೆಂಬ ಸಾಮಾನ್ಯ ತಿಳುವಳಿಕೆಯನ್ನು ನಾವು ಇನ್ನು ಕೈಬಿಡಬೇಕಾಗಿದೆ. ಹತ್ತಾರು ವಲಯಗಳಲ್ಲಿ ಭಾಷಾಸಾಮಗ್ರಿ, ಭಾಷಾಂಶಗಳು ಬಳಕೆಯಾಗುತ್ತವೆ. ಅಲ್ಲಿ ಸಂವಹನವೊಂದೇ ಮುಖ್ಯ ಉದ್ದೇಶವಾಗಿರುವುದಿಲ್ಲ. ಸಾಮಾಜಿಕವಾದ ಬೇರೆ ಯಾವುದೋ ಒಂದು ಸಂಗತಿ ಅಲ್ಲಿ ಸೂಚಿತವಾಗುತ್ತಿರುವ ಸಾಧ್ಯತೆ ಇರುತ್ತದೆ. ಉದಾಹರಣೆಗೆ ಊರಿನ ವ್ಯಕ್ತಿಯ ಹೆಸರುಗಳು. ಇದಕ್ಕಾಗಿ ನಾವು ನಾಮಪದಗಳನ್ನು ಬಳಸುತ್ತೇವೆ. ರಚನೆಯ ದೃಷ್ಟಿಯಿಂದ ವೈಯಾಕರಣಿಗಳಿಗೆ ಈ ಹೆಸರುಗಳಲ್ಲಿ ಕುತೂಹಲದ ಅಂಶವೇನೂ ಇರಲಾರದು. ಆದರೆ ಸಾಮಾಜಿಕ ನೆಲೆಯ ವಿಶ್ಲೇಷಣೆಯನ್ನು ಕೈಗೆತ್ತಿಕೊಳ್ಳುವವರಿಗೆ ಇಲ್ಲಿ ಅಪೂರ್ವ ಸಾಮಗ್ರಿ ಅಡಕವಾಗಿರುವುದು ಗೊತ್ತಾಗುತ್ತದೆ. ಇದು ಕೇವಲ ಚಾರಿತ್ರಿಕಾಧ್ಯಯನಕ್ಕಾಗಿ ಮಾತ್ರವಾಗಿರದೇ ಪ್ರಚಲಿತವಾಗಿರುವ ಎಷ್ಟೋ ಸಂಗತಿಗಳು ಗೋಚರವಾಗುವಂತಿರುತ್ತವೆ. ಇದೇ ನಿಲುವನ್ನು ಆಟಗಳಿಗೆ ಸಂಬಂಧಿಸಿಯೂ ಹೇಳಬಹುದು. ಆಟಗಳಲ್ಲಿ ಬಳಸುವ ಪದಗಳು ಒಂದು ಸಾಂಕೇತಿಕವಾದ ಜಗತ್ತನ್ನು ಅಡಕಗೊಳಿಸಿಕೊಂಡಿರುವ ಸಾಧ್ಯತೆಯನ್ನು ಈ ಹಿಂದೆ ಕೆಲವು ಅಧ್ಯಯನಗಳಲ್ಲಿ ಸೂಚಿಸಲಾಗಿದೆಯಾದರೂ ಆ ಪದಗಳಲ್ಲಿ ಇರುವ ಸಾಮಾಜಿಕ ನೆಲೆಗಳ ವಿನ್ಯಾಸಗಳನ್ನು ಇನ್ನೂವರೆಗೆ ನಾವು ಹುಡುಕಿ ತೆಗೆಯಲು ಸಾಧ್ಯವಾಗಿರಲಿಲ್ಲ. ಡಾ.ಬಾಬು ಇಲ್ಲಿಗೆ ಪ್ರವೇಶ ಮಾಡಿದ್ದಾರೆ. ಇನ್ನೂ ಬಹು ದೂರದ ಪ್ರಯಾಣವಿದೆ. ಏಕೆಂದರೆ ಆಟಗಳೂ ಹಲವಾರಿವೆ. ಅವುಗಳಲ್ಲಿ ಅಂತಸ್ಥವಾಗಿರುವ ಸಾಮಾಜಿಕ ವಿನ್ಯಾಸಗಳೂ ಹತ್ತಾರಿವೆ. ಚನ್ನೆಮಣೆಯಂತಹ ಆಟಗಳನ್ನು ಜಾನಪದೀಯವಾಗಿ ಅಧ್ಯಯನ ಮಾಡಿರುವ ಪೀಟರ್ ಕ್ಲಾಸ್ ಅವರ ಅಧ್ಯಯನಕ್ಕೆ ಪೂರಕವಾಗಿ ಇಂತಹ ಭಾಷಾಧ್ಯಯನಗಳು ಮತ್ತಷ್ಟು ಹೊಸ ಸಂಗತಿಗಳನ್ನು ಅನಾವರಣಗೊಳಿಸಲು ಶಕ್ತವಾಗಿವೆ. ಅದರಲ್ಲೂ ಕರ್ನಾಟಕದ

ಪ್ರಾದೇಶಿಕ ಮತ್ತು ಪಾರಂಪರಿಕ ಆಟಗಳನ್ನು ದ್ರಾವಿಡ ಭಾಷಾವರ್ಗದ ಜನರ ಆಟಗಳೊಡನೆ, ಹಾಗೇ ಮುಂದುವರೆದು ಭಾರತದ ಹಲವಾರು ಸಮುದಾಯದ ಸಾಮಗ್ರಿಗಳೊಡನೆ ಜತೆಯಾಗಿರಿಸಿ ನೋಡುವ ಅಗತ್ಯವಿದೆ. ಇದರಿಂದ ಭಾರತವನ್ನು ಒಂದು ಭಾಷಿಕ ಪ್ರದೇಶ ಎಂದು ಗುರುತಿಸಲು ಯತ್ನಿಸಿದ ಮರ್ರೆ ಬಿ.ಎಮಿನೋ ಅವರ ಅಧ್ಯಯನಕ್ಕೆ ಪೂರಕವಾದ ನೆಲೆಗಳು ಲಭ್ಯವಾಗಲೂಬಹುದು.

ಚಲನಚಿತ್ರಗಳ ಭಾಷೆಯ ಬಗ್ಗೆ ಡಾ.ಬಾಬು ಇವರು ನಡೆಸಿರುವ ಪ್ರವೇಶರೂಪಿಯಾದ ಅಧ್ಯಯನ ಈ ಬಗೆಯ ಅಧ್ಯಯನಗಳಿಗೆ ಒಂದು ವಿಧಾನವನ್ನು ಕಂಡುಕೊಳ್ಳಲು ನಡೆಸಿದ ಯತ್ನದಂತಿದೆ. ಮಾತಿನ ಸಂಕಥನಗಳ ಆಧುನಿಕ ನಿರೂಪಣೆಗಳನ್ನಾಗಿ ನಾವು ಚಲನಚಿತ್ರಗಳನ್ನು ನೋಡಬೇಕಾಗಿದೆ. ಏಕೆಂದರೆ ಆ ಬಗೆಯ ಭಾಷಾಆಚರಣೆಗಳು ಅಷ್ಟು ದೀರ್ಘಾವಧಿಯ, ವೈವಿಧ್ಯಮಯವಾದ ಭಾಷಾಸಾಮಗ್ರಿ ಸ್ರೋತಗಳು ಬೇರೆ ಕಡೆ ನಮಗೆ ಸಿಗುವುದಿಲ್ಲ. ಹಾಗಾಗಿ ಇಲ್ಲಿ ಹುಡುಕುವವರಿಗೆ ಅಮೂಲ್ಯವಾದ ಸಾಮಗ್ರಿ ಇದೆ. ಡಾ.ಬಾಬು ಯುಕ್ತವಾದ ನೆಲೆಯಲ್ಲಿ ತಮ್ಮ ಹೆಜ್ಜೆಯನ್ನಿರಿಸಿದ್ದಾರೆ ಎಂಬುದಕ್ಕೆ ಇದು ಒಂದು ಸೂಚನೆಯಾಗಿದೆ.

ಹೀಗಿದ್ದರೂ ಈ ಅಧ್ಯಯನಗಳು ಆಯ್ದುಕೊಂಡ ವಲಯಗಳ ನೆಲೆಯಿಂದ, ಮಂಡಿಸುವ ಭಾಷಾಸಾಮಗ್ರಿಗಳ ನಿಟ್ಟಿನಿಂದ ಹೊಸ ನೆಲೆಯನ್ನು ತುಳಿದಿದ್ದರೂ ಅನುಸರಿಸುವ ಅಧ್ಯಯನ ವಿಧಾನದ ಮಟ್ಟಿಗೆ ಇನ್ನೂ ಶೋಧನೆಯ ದಾರಿಯಲ್ಲಿಯೇ ಇವೆ ಎನ್ನಬೇಕು. ಅಂದರೆ ಈ ಬಗೆಯ ಭಾಷಾಸಾಮಗ್ರಿಗಳನ್ನು ಹೇಗೆ ಸಂಗ್ರಹಿಸಬೇಕು, ಅವುಗಳನ್ನು ಹೇಗೆ ಅಧ್ಯಯನಕ್ಕೆ ಅಳವಡಿಸಿಕೊಳ್ಳಬೇಕು, ಅವುಗಳನ್ನು ವಿಶ್ಲೇಷಣೆಗೆ ಹೇಗೆ ಗುರಿ ಪಡಿಸಬೇಕು, ವಿಶ್ಲೇಷಣೆಯ ಅನಂತರ ಅದರಿಂದ ತಾತ್ತ್ವಿಕ ನೆಲೆಗಳನ್ನು ಪಡೆದುಕೊಳ್ಳುವುದು ಹೇಗೆ ಎಂಬ ಎಲ್ಲಾ ನೆಲೆಗಳನ್ನು ಇನ್ನಷ್ಟು ಖಚಿತ ಮಾಡಿಕೊಳ್ಳುವ ಅಗತ್ಯವಿದೆ. ಅದನ್ನು ಸಾಧಿಸಿಕೊಂಡರೆ ಕನ್ನಡ ಭಾಷಾಅಧ್ಯಯನಕ್ಕೆ ಹೊಸ ಹೆದ್ದಾರಿಯನ್ನು ಡಾ. ಪಾಂಡುರಂಗಬಾಬು ರೂಪಿಸಿಕೊಡಬಲ್ಲರು ಎಂಬ ದೃಢವಾದ ನಂಬಿಕೆ ನನಗಿದೆ.

ಕಳೆದ ಹದಿಮೂರು ವರ್ಷಗಳಿಂದ ಸಹೋದ್ಯೋಗಿ ಗೆಳೆಯರನ್ನಾಗಿ ನಾನು ಬಲ್ಲ ಪಾಂಡುರಂಗ ಬಾಬು ತಾವು ನಂಬಿದ ಮೌಲ್ಯಗಳನ್ನು ಭದ್ರಗೊಳಿಸಲು ಹೇಗೆ ಯತ್ನಿಸುತ್ತಾರೆ ಎಂಬುದನ್ನು ಎಚ್ಚರದಿಂದ, ಕುತೂಹಲದಿಂದ ನೋಡುತ್ತಾ ಬಂದಿದ್ದೇನೆ. ನಮ್ಮ ಅಧ್ಯಯನಗಳು ನಮ್ಮ ಬದುಕಿನ ಒಳದಾರಿಗಳೇ ಆಗಿರಬೇಕಲ್ಲವೇ? ಇಲ್ಲದಿದ್ದರೆ ಅವು ನಮಗೇಕೆ ಬೇಕು?. ಈ ನಿಟ್ಟಿನಲ್ಲಿ ಅವರನ್ನು ನಾನು ಗೌರವಿಸುತ್ತಲೇ ಬಂದಿದ್ದೇನೆ. ಚಿಕ್ಕವರಿಂದಲೂ ಕಲಿಯುವುದು ಇದೆ ಎಂಬುದನ್ನು ನಂಬುವ ನನಗೆ ಈ ಒಡನಾಟ ಸಂತಸವನ್ನೇ ತಂದಿದೆ ಎನ್ನಲು ಯಾವ ಹಿಂಜರಿಕೆಯೂ ಇಲ್ಲ. ಈ ಮಾತುಗಳನ್ನು ಬರೆಯಲು ಅನುವು ಮಾಡಿಕೊಟ್ಟ ಡಾ. ಬಾಬು ಅವರಿಗೆ ನಾನು ಆಭಾರಿ.

ಕನ್ನಡ ಬಳಕೆಯ ಸಾಮಾಜಿಕ ವಿನ್ಯಾಸ

ಕನ್ನಡ ಭಾಷೆಯನ್ನು ಕುರಿತ ಅಧ್ಯಯನಗಳು ಬೇರೆ ಬೇರೆ ನೆಲೆಗಳಲ್ಲಿ ನಡೆಯಬೇಕಾದ ಅಗತ್ಯ ಈಗ ಎಂದಿಗಿಂತ ಹೆಚ್ಚಾಗಿದೆ. ಕನ್ನಡ ರಚನೆಯನ್ನು ವಿವರಿಸುವ ಯತ್ನಗಳು ಬಹು ಹಿಂದಿನಿಂದಲೂ ನಡೆದಿವೆ. ಆದರೂ ಹೊಸ ಸಾಧ್ಯತೆಗಳನ್ನು ಅನುಸರಿಸಿ ಈ ಅಧ್ಯಯನಗಳು ಸಾಗಿರುವುದು ಇಲ್ಲವೆನ್ನುವಷ್ಟು ಕಡಿಮೆ. ಇನ್ನು ಕನ್ನಡದ ಬಳಕೆಯನ್ನು ಆಧರಿಸಿದ ಅಧ್ಯಯನಗಳಲ್ಲಿ ಬೀಸು ಹೇಳಿಕೆಗಳಿರುತ್ತವೆ; ಇಲ್ಲವೇ ಉದ್ವೇಗದ ಮಾತುಗಳಿರುತ್ತವೆ. ಕನ್ನಡದ ಶುದ್ಧತೆಯ ಬಗೆಗೆ ಕೇಳಿ ಬರುವ ಮಾತುಗಳನ್ನೇ ಇದಕ್ಕೆ ನಿದರ್ಶನವಾಗಿ ನೋಡಬಹುದು.

ಇಂತಹ ವೇಳೆಯಲ್ಲಿ ಕಿರಿಯ ಗೆಳೆಯ ಡಾ.ಪಿ.ಮಹಾದೇವಯ್ಯನವರ ಈ ಅಧ್ಯಯನ ಪ್ರಬಂಧಗಳ ಸಂಕಲನ ಪ್ರಕಟವಾಗುತ್ತಿರುವುದು ಸೂಕ್ತವಾಗಿದೆ. ಇಲ್ಲಿ ಕನ್ನಡದ ಬಳಕೆಯ ವಿವಿಧ ನೆಲೆಗಳನ್ನು ಗಮನಿಸಿ ನಡೆಸಿದ ಅಧ್ಯಯನಗಳಿವೆ. ಅದರಲ್ಲೂ ಈವರೆಗೆ ಗಮನ ಹರಿಸದ ಕೆಲವು ವಲಯದ ಬಳಕೆಗಳನ್ನು ಡಾ. ಪಿ.ಮಹಾದೇವಯ್ಯ ತಮ್ಮ ಆಸಕ್ತಿಯ ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದಾರೆ. ಜೊತೆಗೆ ಕೆಲವು ವಲಯಗಳಲ್ಲಿ ಈವರೆಗೆ ನಡೆದಿದ್ದ ಅಧ್ಯಯನಗಳನ್ನು ಹೊಸ ಮಾಹಿತಿ ಮತ್ತು ವಿಶ್ಲೇಷಣಾ ಪರಿಕರಗಳಿಂದ ಮುಂದುವರಿಸಿದ್ದಾರೆ.

ಕನ್ನಡವನ್ನು ಅಧ್ಯಯನ ಮಾಡುವವರಲ್ಲಿ ಕನ್ನಡ ಕಲಿಕೆಯ ವಲಯದ ಬಗ್ಗೆ ಹೆಚ್ಚು ಆಸಕ್ತಿ ಇಲ್ಲ. ಕನ್ನಡವನ್ನು ಶಾಲೆಗಳಲ್ಲಿ ಔಪಚಾರಿಕವಾಗಿ ಕಲಿಸುವವರೂ ಕೂಡ ಸಿದ್ಧ ಮಾದರಿಗಳನ್ನು ಪರಿಪೂರ್ಣವೆಂದು ನಂಬಿಬಿಟ್ಟಿದ್ದಾರೆ. ಬದಲಾವಣೆಗಳಿಗೆ ಸಿದ್ಧರಿಲ್ಲ. ಶಾಲೆಗಳಿಗೆ ಬರುವ ವಿದ್ಯಾರ್ಥಿಗಳು ಕನ್ನಡದ ಬಳಕೆಯ ಸಾಮರ್ಥ್ಯವನ್ನು ಈಗಾಗಲೇ ಪಡೆದುಕೊಂಡಿರುತ್ತಾರೆನ್ನುವ ಅಂಶ ಮುಖ್ಯ. ಈ ಬಳಕೆಯ ಸಾಮರ್ಥ್ಯಗಳಲ್ಲಿ ಇರುವ ಸಾಮಾಜಿಕ ಮತ್ತು ಪ್ರಾದೇಶಿಕ ವ್ಯತ್ಯಾಸಗಳು ನಮ್ಮ ತರಗತಿಗಳಲ್ಲಿ ಪರಿಗಣನೆಗೆ ಒಳಗಾಗುವುದೇ ಇಲ್ಲ. ಈ ವ್ಯತ್ಯಾಸಗಳು ಕಲಿಕೆಯಲ್ಲಿ ನಿರ್ಧಾರಕ ಪರಿಣಾಮಗಳನ್ನು ಬೀರುತ್ತವೆ. ಆದ್ದರಿಂದ ನಮ್ಮ ಶಾಲಾಪಠ್ಯಕ್ರಮ, ಪಠ್ಯಸಾಮಗ್ರಿ ಮತ್ತು ಬೋಧನಾ ವಿಧಾನಗಳನ್ನು ತಕ್ಕಂತೆ ಬದಲಾಯಿಸಬೇಕಾದ ಅಗತ್ಯವಿದೆ. ಆದರೆ ಈ ದಿಕ್ಕಿನಲ್ಲಿ ಚಿಂತನೆಗಳು ನಡೆದಿಲ್ಲವಾಗಿ ಪ್ರಯತ್ನಗಳು ತುಂಬಾ ಕಡಿಮೆಯಾಗಿವೆ. ಈ ಸಂಕಲನದ ಹಲವು ಪ್ರಬಂಧಗಳು ಕನ್ನಡದ ವಿವಿಧ ಪ್ರಭೇದಗಳ ಸ್ವರೂಪವನ್ನು ಮುಂದಿಡುತ್ತವೆ.

ಈ ಪ್ರಭೇದ ಭಿನ್ನತೆಗಳು ಚಲನಶೀಲವಾಗಿದ್ದು ತರಗತಿಗಳಲ್ಲಿ ಕ್ರಿಯಾಶೀಲವಾಗುತ್ತವೆ. ಈ ಅಂಶ ಡಾ. ಮಹಾದೇವಯ್ಯನವರ ಗಮನದಲ್ಲಿದೆ. ಏಕೆಂದರೆ ಅವರು ಅಲ್ಲಿ ಕೇವಲ ಪರಿಸ್ಥಿತಿಯನ್ನು ವರ್ಣಿಸುತ್ತಿಲ್ಲ. ಬದಲಿಗೆ ಆ ಪರಿಸ್ಥಿತಿಯ ಪರಿಣಾಮಗಳ ಬಗೆಗೆ ಜಾಗ್ರತರಾಗಿದ್ದಾರೆ. ಏಕೆಂದರೆ ಶಿಕ್ಷಣವೀಗ ಕೇವಲ ವ್ಯಕ್ತಿವಿಕಾಸದ ನೆಲೆಯ ಪ್ರಕ್ರಿಯೆಯಾಗಿ ಉಳಿದಿಲ್ಲ; ಸಾಮಾಜಿಕ ಅಸಮಾನತೆಯ ಪ್ರಶ್ನೆಯೂ ಅದರೊಡನೆ ಹೆಣೆದುಕೊಂಡಿದೆ. ಆದ್ದರಿಂದ ಈ ಅಧ್ಯಯನಗಳು ತಮ್ಮ ಆಸಕ್ತಿವಲಯವನ್ನು ವಿಸ್ತರಿಸಿ ಎಚ್ಚರದ ಕ್ರಮಗಳನ್ನು ಕೈಗೊಳ್ಳಲು ಪರೋಕ್ಷವಾಗಿ ಒತ್ತಾಯಿಸುತ್ತವೆ.

ಡಾ. ಮಹಾದೇವಯ್ಯನವರು ತಮ್ಮ ಅಧ್ಯಯನ ಪರಿಕರ ಮತ್ತು ವಿಧಾನಗಳನ್ನು ಇನ್ನು ಮುಂದೆ ವಿಸ್ತರಿಸಿಕೊಳ್ಳುವ ಅಗತ್ಯವಿದೆ. ಸಮಸ್ಯೆಯ ವಲಯ ಮತ್ತು ಅದರ ಸ್ವರೂಪಗಳು ಈಗ ಸ್ಪಷ್ಟವಾಗಿವೆ. ಆದ್ದರಿಂದ ನಿರ್ದಿಷ್ಟ ಪ್ರಶ್ನೆಯೊಂದನ್ನು ಆಯ್ಕೆ ಮಾಡಿ ತಮ್ಮ ಅಧ್ಯಯನವನ್ನು ಮುಂದುವರಿಸುವ ಅಗತ್ಯವಿದೆ. ಅದಕ್ಕಾಗಿ ಸಮಾನಾಂತರ ನೆಲೆಯ ಪ್ರಸಂಗಗಳು ಭಾರತದಲ್ಲಿ ಮತ್ತು ಜಾಗತಿಕವಾಗಿ ಇರುವುದಾದರೆ ಆ ಬಗ್ಗೆ ನಡೆದಿರುವ ಅಧ್ಯಯನಗಳನ್ನು, ಆ ಅಧ್ಯಯನ ವಿಧಾನಗಳನ್ನು ಪರಿಶೀಲಿಸಿ ಅಳವಡಿಸಿಕೊಳ್ಳಬೇಕಾಗುತ್ತದೆ. ಈ ದಿಕ್ಕಿನಲ್ಲಿ ಮುಂದಿನ ದಿನಗಳಲ್ಲಿ ಸಾಗಿದರೆ ಶ್ರೀಯುತರು ಕನ್ನಡಕ್ಕೆ ನೀಡುವ ಕೊಡುಗೆಗೆ ವಿಸ್ತಾರ ಮತ್ತು ಗಹನತೆಗಳು ಬರುತ್ತವೆ; ಅಂತಹುದೊಂದು ಸಾಂಸ್ಕೃತಿಕ ಹೊಣೆಗಾರಿಕೆ ಕೂಡ ಅವರ ಮೇಲಿದೆ. ಅವರು ಈ ಹೊಣೆಯನ್ನು ನಿರ್ವಹಿಸಬಲ್ಲರೆಂಬ ನಂಬುಗೆ ನನ್ನಲ್ಲಿದೆ. ಈ ಸಂಕಲನ ಪ್ರಕಟಣೆಯ ಸಂದರ್ಭದಲ್ಲಿ ಅವರನ್ನು ಅಭಿನಂದಿಸುತ್ತಾ ಈ ಕೆಲವು ಮಾತು ಬರೆಯಲು ಅವಕಾಶ ನೀಡಿದ್ದಕ್ಕೆ ವಂದಿಸುತ್ತೇನೆ.

ದ್ವಿಭಾಷಿಕರು

ಕನ್ನಡ ಭಾಷಾಧ್ಯಯನ ಕ್ಷೇತ್ರದಲ್ಲಿ ಎರಡು ಮುಖ್ಯ ಸಮಸ್ಯೆಗಳಿವೆ. ಭಾಷಾಧ್ಯಯನಕ್ಕೆ ಲಭ್ಯವಿರುವ ಹೊಸಹೊಸ ತಾತ್ತ್ವಿಕ ಚೌಕಟ್ಟು, ಪರಿಕರಗಳನ್ನು ಬಳಸಿಕೊಳ್ಳಲು ಹಿಂದೇಟು ಹಾಕುವುದು ಮೊದಲನೆಯ ಸಮಸ್ಯೆ. ಇದರಿಂದಾಗಿ ಕಳೆದ ಐವತ್ತು ವರ್ಷಗಳಲ್ಲಿ ಕನ್ನಡ ಭಾಷಾಧ್ಯಯನವೆಂಬುದು, ಈಗ ಅಷ್ಟೇನೂ ಉಪಯುಕ್ತವೆನಿಸದ ರಾಚನಿಕ ವಿಶ್ಲೇಷಣೆಯ ಮಾದರಿಗೆ ಗಂಟು ಬಿದ್ದಿದೆ. ಸಾಂಪ್ರದಾಯಿಕ ವೈಯಾಕರಣರು ರೂಪಿಸಿದ ಮಾದರಿಗಳನ್ನು ಈ ರಾಚನಿಕ ನೆಲೆಗೆ ಒಯ್ಯುವ ಪ್ರಯತ್ನಗಳೇ ಹೆಚ್ಚಿನ ಪ್ರಮಾಣದಲ್ಲಿ ಕಾಣಸಿಗುತ್ತದೆ. ಇದರಿಂದಾಗಿ ಭಾಷಾಕಲಿಕೆಯಂತಹ ವಲಯಗಳಲ್ಲಿ ನಮ್ಮ ತಿಳುವಳಿಕೆ ಇನ್ನೂ ಹಳೆಯ ಮಾದರಿಗಳಿಗೆ ಕಟ್ಟುಬಿದ್ದಿದೆ.

ಭಾಷಾಧ್ಯಯನ ಕ್ಷೇತ್ರ ಏನೆಲ್ಲ ವಲಯಗಳನ್ನು ಒಳಗೊಳ್ಳಬಹುದೋ ಅಲ್ಲೆಲ್ಲಾ ನಮ್ಮ ಅಧ್ಯಯನಗಳು ವ್ಯಾಪಕವಾಗಿ ನಡೆಯದಿರುವುದು ಎರಡನೆಯ ಸಮಸ್ಯೆ. ಉದಾಹರಣೆಗೆ ದ್ವಿಭಾಷಿಕತೆ ಮತ್ತು ಬಹುಭಾಷಿಕತೆ. ಕರ್ನಾಟಕದಲ್ಲಿ ಈ ಬಗೆಯ ಅಧ್ಯಯನಗಳಿಗೆ ಅಪಾರ ಅವಕಾಶಗಳಿವೆ. ದ್ವಿಭಾಷಿಕತೆಯ ಸ್ವರೂಪ ವೈವಿಧ್ಯಗಳನ್ನು ಅವಲಂಬಿಸಿ, ಅದರ ಸಾಮಾಜಿಕ ಪರಿಣಾಮಗಳ ನೆಲೆಯಲ್ಲಿ ಹತ್ತಾರು ಬಗೆಯ ಅಧ್ಯಯನಗಳು ಆಗಬೇಕಿದೆ. ಆದರೆ ಇಲ್ಲಿ ನಮ್ಮ ಯತ್ನಗಳು ತೀರಾ ಕಡಿಮೆ.

ಭಾಷಾಧ್ಯಯನ ಕ್ಷೇತ್ರದ ಈ ಕೊರತೆಗಳು ಆ ಕ್ಷೇತ್ರದ ಬೆಳವಣಿಗೆಗೆ ಕುಂಠಿತವಾಗುವ ಕಾರಣವಾಗಿರುವ ಜತೆಗೆ ಇನ್ನೂ ಕೆಲವು ದೂರಗಾಮಿ ಪರಿಣಾಮಗಳೂ ಆಗಿವೆ. ಮುಖ್ಯವಾಗಿ ನಮ್ಮ ಭಾಷಾಯೋಜನೆಯ ಕ್ಷೇತ್ರದೊಡನೆ ಭಾಷಾಧ್ಯಯನಗಳು ಸಂವಾದವನ್ನು ಬೆಳೆಸುವ ಸ್ಥಿತಿಯಲ್ಲಿ ಇಲ್ಲವೇ ಇಲ್ಲ. ಕನ್ನಡವನ್ನು ಶಾಲಾಹಂತದಲ್ಲಿ ಕಲಿಸುವುದು, ಅನ್ಯಭಾಷೆಗಳನ್ನು ಕಲಿಸುವುದು ಇವೇ ಮೊದಲಾದ ಭಾಷಾಯೋಜನೆಯ ನೆಲೆಗಳಲ್ಲಿ ಅತಿ ಸಾಂಪ್ರದಾಯಿಕ ಮತ್ತು ಅವೈಜ್ಞಾನಿಕ ವಿಧಾನಗಳೇ ಇಂದೂ ಬಳಕೆಯಲ್ಲಿವೆ. ಇದಕ್ಕಾಗಿ ಭಾಷಾಯೋಜಕರನ್ನು ಮಾತ್ರ ನಿಂದಿಸಿದರೆ ಪ್ರಯೋಜನವಿಲ್ಲ. ಭಾಷಾಧ್ಯಯನಕಾರರು ತಮ್ಮ ಅಧ್ಯಯನಗಳ ಮೂಲಕ ಈ ಯೋಜಕರಿಗೆ ಅನುಕೂಲವೆನಿಸುವ ಪರಿಕರಗಳನ್ನು ಸಿದ್ಧಪಡಿಸಿಕೊಟ್ಟಿಲ್ಲ. ಹಾಗಾಗಿ ಭಾಷಾಯೋಜನೆ ಎಂಬುದು ಒಂದು ಅಣಕುವಲಯವಾಗಿ ಬಿಟ್ಟಿದೆ.

ಈ ಪರಿಸ್ಥಿತಿಯಲ್ಲಿ ಡಾ. ಭಾಗ್ಯಲಕ್ಷ್ಮಿಯವರ ಈ ಅಧ್ಯಯನವನ್ನು ಇರಿಸಿ ನೋಡಬೇಕಾಗಿದೆ. ದ್ವಿಭಾಷಿಕತೆ ಎಂಬುದು ಚಾರಿತ್ರಿಕ ನೆಲೆಯುಳ್ಳ ಸಾಮಾಜಿಕ ಸಂಭವ. ಅದರ ಸ್ವರೂಪವನ್ನು ಅರಿಯಲು ಈಗ ಜಾಗತಿಕ ನೆಲೆಯಲ್ಲಿ ಹಲವು ಮಾದರಿಗಳು ಲಭ್ಯವಿದೆ. ಆ ಮಾದರಿಗಳ ಹಿಂದಿರುವ ತಾತ್ತ್ವಿಕ ಚೌಕಟ್ಟುಗಳು ಸರ್ವಮಾನ್ಯ ಎಂದೇನಲ್ಲ. ಆದರೆ ಆ ಚೌಕಟ್ಟುಗಳ ಸಿಂಧುತ್ವವನ್ನು ಪರಿಶೀಲಿಸಲು ಅಪಾರವಾದ ಅವಕಾಶಗಳು ಭಾರತದಂತಹ ದೇಶದಲ್ಲಿವೆ. ದ್ವಿಭಾಷಿಕತೆ ಮತ್ತು ಬಹುಭಾಷಿಕತೆಯ ಹಲವು ಮಾದರಿಗಳು ನಮಗಿಲ್ಲಿ ಲಭ್ಯವಿದೆ.

ಈ ಅಧ್ಯಯನದಲ್ಲಿ ಪರಿಗಣನೆಗೆ ತೆಗೆದುಕೊಂಡಿರುವ ಕನ್ನಡ ತೆಲುಗು ದ್ವಿಭಾಷಿಕತೆಯ ಸಂದರ್ಭವನ್ನೇ ನೋಡಿ. ಕರ್ನಾಟಕದ ಪೂರ್ವಭಾಗದ ಗಡಿನೆಲೆಯ ಬಹುಭಾಗ ಈ ದ್ವಿಭಾಷಿಕತೆಯ ಪ್ರದೇಶವಾಗಿದೆ. ಆದರೆ ಉದ್ದಕ್ಕೂ ನಮಗೆ ದೊರೆಯುವುದು ಒಂದೇ ಮಾದರಿಯಲ್ಲ; ಹಲವು ಮಾದರಿಗಳು. ಬಳ್ಳಾರಿಯ ಪ್ರದೇಶದಲ್ಲಿನ ಈ ಎರಡು ಭಾಷೆಗಳ ದ್ವಿಭಾಷಿಕತೆ ಕೋಲಾರ ಜಿಲ್ಲೆಯ ದ್ವಿಭಾಷಿಕತೆಗಿಂತ ಭಿನ್ನವಾಗಿದೆ. ಈ ಭಿನ್ನತೆ ಕೇವಲ ಚಾರಿತ್ರಿಕ ಕಾರಣಗಳಿಂದ ಉಂಟಾದುದಲ್ಲ. ಅಥವಾ ಕೇವಲ ಪ್ರಮಾಣಾತ್ಮಕವಾದುದೂ ಅಲ್ಲ. ಆದ್ದರಿಂದ ಒಂದು ಪ್ರದೇಶದ ದ್ವಿಭಾಷಿಕತೆಯನ್ನು ಅಧ್ಯಯನ ಮಾಡಿ ಅದರಿಂದ ದೊರೆತ ತೀರ್ಮಾನಗಳನ್ನು ಮತ್ತೊಂದು ಪ್ರದೇಶದ ದ್ವಿಭಾಷಿಕ ಸಂಧರ್ಭಕ್ಕೂ ವರ್ಗಾಯಿಸುವುದು ತಪ್ಪಾಗುತ್ತದೆ. ಈ ಎಲ್ಲ ಕಾರಣಗಳಿಂದ ಡಾ. ಭಾಗ್ಯಲಕ್ಷ್ಮಿಯವರು ಆಯ್ದುಕೊಂಡ ಅಧ್ಯಯನ ವಲಯದಲ್ಲಿ ಈ ಬಗೆಯ ಶೋಧಗಳ ಅಗತ್ಯವಿದೆ.

ಈ ಅಧ್ಯಯನವು ಸಾಮಾಜಿಕ ಭಾಷಾಶಾಸ್ತ್ರದ ತಳಹದಿಯನ್ನು ಹೊಂದಿದೆ. ಕನ್ನಡ-ತೆಲುಗು ದ್ವಿಭಾಷಿಕ ಭಾಷಾಸ್ವರೂಪವನ್ನು ವಿವಿಧ ಭಾಷಾಂಶಗಳ ಹಂತದಲ್ಲಿ ವಿವರಿಸುವುದಷ್ಟೇ ಇಲ್ಲಿ ಮುಖ್ಯವಾಗಿಲ್ಲ. ದ್ವಿಭಾಷಿಕತೆ ರೂಪುಗೊಳ್ಳಲು ಇರುವ ಕಾರಣಗಳು, ದ್ವಿಭಾಷಿಕರ ಮೇಲೆ ಇರುವ ಒತ್ತಡಗಳು, ದ್ವಿಭಾಷಿಕತೆಯ ನಿರ್ವಹಣೆಯ ತಂತ್ರಗಳು, ಭಾಷಾಕಲಿಕೆಯಲ್ಲಿ ದ್ವಿಭಾಷಿಕತೆಯ ಪ್ರಭಾವಗಳು ಇವೇ ಮೊದಲಾದ ಸಂಗತಿಗಳನ್ನು ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ. ಅಧ್ಯಯನದ ಫಲಿತಗಳನ್ನು ಇಲ್ಲಿ ಪಟ್ಟಿ ಮಾಡುವ ಅಗತ್ಯವಿಲ್ಲ. ಆದರೆ ಅಧ್ಯಯನ ವಿಧಾನ ಮಾತ್ರ ಈವರೆಗೆ ಈ ಬಗೆಯ ಅಧ್ಯಯನಗಳಲ್ಲಿ ಅನುಸರಿಸಿದ ಮಾದರಿಗಳಿಗಿಂತ ಭಿನ್ನವಾದುದು ಎಂಬ ಸಂಗತಿಯನ್ನು ಗಮನಿಸುವ ಅಗತ್ಯವಿದೆ.

ಭಾರತದಲ್ಲಿ ಭಾಷಾಯೋಜನೆಯ ಸುಪ್ತ ಕಾರ್ಯವಾಹಿಯು ದ್ವಿಭಾಷಿಕತೆಯ ಸ್ವರೂಪವನ್ನು ಬದಲಿಸಲು ಸನ್ನದ್ಧವಾಗಿದೆ. ಇಂಗ್ಲಿಶ್ ಮತ್ತು ದೇಶಭಾಷೆಗಳ ದ್ವಿಭಾಷಿಕತೆಯ ಸನ್ನಿವೇಶಕ್ಕೆ ಸಮ್ಮತಿ ದೊರೆಯುತ್ತಿದೆ. ದೇಶಭಾಷೆಗಳ ನಡುವಣ ದ್ವಿಭಾಷಿಕ ಸನ್ನಿವೇಶಗಳಲ್ಲಿ ಏಕಭಾಷಿಕ ನೆಲೆಯ ಕಡೆಗೆ ತುಯ್ತಗಳು ಸೃಷ್ಟಿಯಾಗುತ್ತಿವೆ. ಆದಿವಾಸಿ ಭಾಷಿಕರು ಈ ಪ್ರಕ್ರಿಯೆಗೆ ತೀವ್ರ ಪ್ರಮಾಣದಲ್ಲಿ ಒಳಗಾಗಿದ್ದಾರೆ. ರಾಜ್ಯಾಂಗದ ಎಂಟನೇ ಅನುಚ್ಛೇದದಲ್ಲಿ ಮನ್ನಣೆ ಪಡೆದ ಭಾಷೆಗಳ ನಡುವಣ ದ್ವಿಭಾಷಿಕ ಸಂದರ್ಭಗಳೂ ಇದಕ್ಕೆ ಹೊರತಾಗಿಲ್ಲ.

ದ್ವಿಭಾಷಿಕರು ತಾವು ಸಮರ್ಥರಾಗಿರುವ ಎರಡು ಭಾಷೆಗಳ ನಿರ್ವಹಣೆಯ ವಲಯಗಳನ್ನು ತೀವ್ರ ಪ್ರಮಾಣದಲ್ಲಿ ಕುಗ್ಗಿಸಿಕೊಳ್ಳಬೇಕಾದ ಒತ್ತಡಗಳು ರಾಜಕೀಯವಾಗಿ ನಿರ್ಮಾಣವಾಗುತ್ತಿವೆ. ಇದರಿಂದ ಸಾಮಾಜಿಕವಾಗಿ ಉಂಟಾಗುವ ಪರಿಣಾಮಗಳನ್ನು ನಾವಿನ್ನೂ ತಿಳಿದುಕೊಳ್ಳಬೇಕಾಗಿದೆ. ಡಾ. ಭಾಗ್ಯಲಕ್ಷ್ಮಿಯವರ ಈ ಅಧ್ಯಯನದ ಹಲವು ಫಲಿತಗಳು ಮೇಲೆ ಹೇಳಿದ ಸಮಸ್ಯೆಗಳ ಸುಳಿವುಗಳನ್ನು ಒದಗಿಸುತ್ತವೆ. ಆರ್ಥಿಕವಾಗಿ ಪ್ರಬಲವಾದ ಜಾತಿಗಳಲ್ಲಿ ತಲೆಮಾರುಗಳು ಕಳೆದಂತೆ ಕನ್ನಡ-ತೆಲುಗು ದ್ವಿಭಾಷಿಕ ಸಂದರ್ಭದ ಕುಗ್ಗುವಿಕೆ ಮತ್ತು ಕನ್ನಡ-ಇಂಗ್ಲಿಶ್ ದ್ವಿಭಾಷಿಕ ಸಂದರ್ಭದ ಹಿಗ್ಗುವಿಕೆಯನ್ನು ಅವರು ಗುರುತಿಸಿದ್ದಾರೆ. ಈ ಚಲನಶೀಲತೆಯ ಸೌಲಭ್ಯಗಳು ಮಧ್ಯಜಾತಿಗಳಿಗೆ ಮತ್ತು ಕೆಳಜಾತಿಗಳಿಗೆ ಲಭ್ಯವಿಲ್ಲದಿರುವುದರಿಂದ ಅವರಲ್ಲಿನ ದ್ವಿಭಾಷಿಕ ಸಂದರ್ಭದ ನಿರ್ವಹಣೆಯ ವಿಧಾನದಲ್ಲಿ ಆಗುತ್ತಿರುವ ಬದಲಾವಣೆಗಳ ಸೂಚನೆಗಳು ದೊರಕುತ್ತಿವೆ.

ದ್ವಿಭಾಷಿಕ ಸಂದರ್ಭದಲ್ಲಿ ಆಗುತ್ತಿರುವ ಈ ಬದಲಾವಣೆಗಳು ಅಭಿವೃದ್ಧಿ ಪಥದಲ್ಲಿ ಅನಿವಾರ್ಯವಾದ ರಾಚನಿಕ ಹೊಂದಾಣಿಕೆಗಳೆಂದು ಸಮಾಜಶಾಸ್ತ್ರಜ್ಞರು ಮತ್ತು ರಾಜಕೀಯ ನಿಪುಣರು ಹೇಳುತ್ತಾರೆ. ಆದರೆ ದ್ವಿಭಾಷಿಕ ಸಮುದಾಯಗಳು ಈ ಒತ್ತಡ ನಿರ್ವಹಣೆಗಾಗಿ ರೂಪಿಸಿಕೊಳ್ಳುವ ಹುನ್ನಾರಗಳು ಮತ್ತು ಅನುಸರಿಸುವ ತಾಕಲಾಟಗಳು ಕೂಡ ಚರಿತ್ರೆಯ ಭಾಗವೇ ಆಗಿವೆ. ಇವೆಲ್ಲವನ್ನೂ ಪರಿಗಣಿಸುವ, ಅರಿತುಕೊಳ್ಳುವ ಅಗತ್ಯ ಈಗ ಎಂದಿಗಿಂತಲೂ ಹೆಚ್ಚಾಗಿದೆ. ಈ ಅಧ್ಯಯನ ಈ ದಿಕ್ಕಿನಲ್ಲಿ ಸಾಗಿದೆ ಎಂಬ ಬಗ್ಗೆ ಸಂದೇಹಗಳಿಲ್ಲ. ಭಾಗ್ಯಲಕ್ಷ್ಮಿಯವರ ಈ ಅಧ್ಯಯನವನ್ನು ಉತ್ತಮಗೊಳಿಸಲು ಸಲಹೆ ನೀಡಬಹುದೇ ಹೊರತು ಇಲ್ಲಿನ ವಿಧಾನ, ಶ್ರಮ ಮತ್ತು ಸಾಧನೆಗಳನ್ನು ಮಾತ್ರ ನಿರಾಕರಿಸಲು ಬರುವುದಿಲ್ಲವೆಂಬುದು ನನ್ನ ನಮ್ರ ತಿಳುವಳಿಕೆಯಾಗಿದೆ.

ಬಳ್ಳಾರಿ ಜಿಲ್ಲೆಯ ಬಿರುಬಿಸಿಲಿನಲ್ಲಿ ದ್ವಿಭಾಷಿಕತೆಯ ಶ್ರುತಿಗೆ ಕಿವಿಗಳನ್ನು ಹೊಂದಿಸಿಕೊಳ್ಳುವುದನ್ನು ಕಲಿತು, ಸದಾ ಜಾಗ್ರತರಾಗಿ ತಮ್ಮ ಅಧ್ಯಯನಕ್ಕೆ ಯುಕ್ತ ಮಾಹಿತಿಯನ್ನು ಸಂಗ್ರಹಿಸುತ್ತ ಈ ನಿಬಂಧವನ್ನು ರೂಪಿಸಿದ ಡಾ. ಭಾಗ್ಯಲಕ್ಷ್ಮಿಯವರು ಕನ್ನಡ ಭಾಷಾಧ್ಯಯನ ಕ್ಷೇತ್ರದ ಸಾಧ್ಯತೆಗಳನ್ನು ವಿಸ್ತರಿಸುವ ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿ ಅವರು ನಮ್ಮೆಲ್ಲರ ಅಭಿನಂದನೆಗಳಿಗೆ ಅರ್ಹರಾಗಿದ್ದಾರೆ.

ಕೆವಿಎನ್ ಮೇಷ್ಟ್ರ ಬಗ್ಗೆ ನನಗೆ ಇರುವುದು ಕೃತಜ್ಞತೆ, ಗೌರವಕ್ಕಿಂತ ಅದೊಂದು ಸಾಧಿಸಬೇಕಾದ ಗುರಿ ಮತ್ತು ಜವಾಬ್ದಾರಿ. ನನ್ನ ಮಟ್ಟಿಗೆ ಕೆವಿಎನ್ ಒಂದು ಅಚ್ಚರಿ. ಯಾಕೆಂದರೆ ಅವರು ಒಬ್ಬ ಆದರ್ಶ ಶಿಕ್ಷಕರಾಗಿ ಮಾತ್ರವಲ್ಲ ಒಂದು ಜೀವನಕ್ರಮವಾಗಿ ನಮ್ಮ ಮುಂದೆ ಇದ್ದಾರೆ. ಆ ಕಾರಣದಿಂದಲೇ ಅವರ ಬರಹಗಳು ನಮಗೆ ಎಂದೂ ಅಪ್ರಮಾಣಿಕ ಅನ್ನಿಸಿಲ್ಲ. ಕೆವಿಎನ್ ಎಂದೂ ನಮಗೆ ಕಲಿಸುವ ಮೇಷ್ಟ್ರು ಅಗಿರಲಿಲ್ಲ. ಕಲಿಸಬೇಕು ಎನ್ನುವ ಹಠವನ್ನು ಅವರಲ್ಲಿ ನಾನು ಕಂಡಿಲ್ಲ. ಬದಲಿಗೆ ವಿದ್ಯಾರ್ಥಿ, ಸ್ವತಃ ಕಲಿಯಲು ಅನುವು ಮಾಡಿಕೊಡುವ ಮೇಷ್ಟ್ರು ಆಗಿದ್ದಾರೆ. ಕಲಿಯುವ ಅನುಭವ ಕಲಿಯುವವನಿಗೆ ದಕ್ಕುವ ಹಾಗೆ ಮಾಡಿದ್ದಾರೆ. ನಿಜದ ಅರ್ಥದಲ್ಲಿ ಪ್ರಜಾಪ್ರಭುತ್ವವಾದಿ ಅಧ್ಯಾಪಕರೆಂದರೆ ಕೆವಿಎನ್ ಎಂದು, ಮೇಷ್ಟ್ರಾಗಿ ಎರಡು ದಶಕಗಳನ್ನು ಕಳೆದ ಮೇಲೆ ನನಗೆ ಅರ್ಥವಾಗುತ್ತಿದೆ. ಕೆವಿಎನ್ ವಿಮರ್ಶಾ ವಿಧಾನವು ಕಾಡಿನ ಕಾಲುದಾರಿಯ ಮಾದರಿಯದು. ತಾವೆ ನಡೆದು ನಿರ್ಮಿಸಿಕೊಂಡ ಹಾದಿ. ಹಾಗಾಗಿ ಮೇಷ್ಟ್ರು ಕಂಡದ್ದು ಮತ್ತು ಕಾಣಿಸಿದ್ದು ಕೂಡ ಕನ್ನಡ ಚಿಂತನೆಗೆ ಹೊಚ್ಚ ಹೊಸದು. ಸಂಸ್ಕೃತಿ ಮತ್ತು ಭಾಷಾ ವ್ಯಾಪಾರಗಳಲ್ಲಿ ಕಾಲದ ತುರ್ತುಗಳಿಂದ ಮಿಂಚುತಿದ್ದ ವಿಮರ್ಶಾ ಮಾದರಿ ಮತ್ತು ವಿಧಾನಗಳನ್ನು ಪ್ರಜ್ಞಾಪೂರ್ವಕವಾಗಿ ತಮ್ಮ ಚಿಂತನೆಯಿಂದ ಅವರು ಹೊರಗೆ ಇಟ್ಟಿದ್ದರು. ಮಾತ್ರವಲ್ಲ ಅಂಚಿಗೆ ಸರಿಸಲ್ಪಟ್ಟ ಹಾಗೂ ನಿರ್ಲಕ್ಷಿತ ಜಗತ್ತುಗಳನ್ನು ಅರಿಯುವ ವಿಮರ್ಶಾ ವಿಧಾನವನ್ನಾಗಿ ರೂಪಿಸಿಕೊಟ್ಟರು. ನಮ್ಮ ನೆಲದ ತಿಳಿವನ್ನು, ಜಗತ್ತಿಗೆ ನೀಡುವ ಭಾಷೆಯಾಗಿ ‘ಕನ್ನಡವನ್ನು ಮೇಷ್ಟ್ರು ವಿವರಿಸುತ್ತಿರುವ ಕ್ರಮದಲ್ಲಿ ನಮ್ಮ ನಾಳೆಗಳು ಹುದುಗಿವೆ ಎಂದು ನನಗೆ ಅನ್ನಿಸುತ್ತಿದೆ.

■ ಕೆ.ವೈ. ನಾರಾಯಣಸ್ವಾಮಿ

181

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು

ISBN 938144193-6
9 789381 441930